ಆಧುನಿಕ ಕನ್ನಡ ಸಾಹಿತ್ಯ ರೂಪಗಳು

ವಿವಿಧ ಲೇಖಕರು

'ಕರ್ನಾಟಕ ಭಾರತಿ' ಬೆಳ್ಳಿಹಬ್ಬ ಸಂಪುಟ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಆಧುನಿಕ ಕನ್ನಡ ಸಾಹಿತ್ಯ ರೂಪಗಳು

[" ಕರ್ನಾಟಕ ಭಾರತಿ" ಬೆಳ್ಳಿಹಬ್ಬ ಸಂಯುಕ್ತ ಸಂಚಿಕೆ]

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೯೬

Adhunika Kannada Sahitya Roopagalu
Karnatak Bharati Silver Jubilee Commemoration Volume, (Vol 26, No. I-4, August 93 - July 1994) Published by Prof. H. V. Nagesh, Director, Prasaranga, Karnatak University, Dharwad

© Prasaranga,Karnatak University, Dharwad, 1996

" ಕರ್ನಾಟಕ ಭಾರತಿ" ಸಂಪುಟ ೨೬ : ಸಂಚಿಕೆ ೧-೪
ಅಗಸ್ಟ ೧೯೯೩ - ಜುಲೈ ೧೯೯೪

ಬೆಲೆ : ರೂ.೧೦೦/-
(' ಕರ್ನಾಟಕ ಭಾರತಿ' ಚಂದಾದಾರರಿಗೆ ಮಾತ್ರ ರೂ. ೮೦/-)

೪.೮.೯೭

ಗೌರವ ಸಂಪಾದಕರು :
ಡಾ. ಎಸ್. ರಾಮೇಗೌಡ
ಕುಲಪತಿಗಳು

ಸಂಪಾದಕರು :
ಡಾ. ವೀರಣ್ಣ ರಾಜೂರ
ಡಾ. ಬಿ. ಆರ್. ಹಿರೇಮಠ

ಸಲಹಾ ಮಂಡಳಿ :
ಡಾ. ಎಂ. ಎಂ. ಕಲಬುರ್ಗಿ,
ಡಾ. ಕೆ. ನಟರಾಜ , ಡಾ. ಸಿ. ಆರ್. ಯರವಿನತೆಲಿಮಠ,
ಪ್ರೊ. ಎಸ್. ಕೆ. ಕಲ್ಲೋಳಕರ, ಪ್ರೊ. ಎಚ್. ವಿ. ನಾಗೇಶ

ಮುದ್ರಕರು :
ಎನ್. ಎಸ್. ಮಾಲಿಪಾಟೀಲ, ಎಂ.ಕಾಂ.
ನಿರ್ದೇಶಕರು,
ಕ. ವಿ. ಮುದ್ರಣಾಲಯ, ಧಾರವಾಡ - ೩

ಮುನ್ನುಡಿ

ಕರ್ನಾಟಕ ಭಾರತಿ ' ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ವಿದ್ವನ್ ಪತ್ರಿಕೆ. ಅದಕ್ಕೀಗ ಇಪ್ಪತ್ತೈದು ವರ್ಷ ತುಂಬಿ ಕೆಲವು ತಿಂಗಳುಗಳೇ ಆಗಿದೆ. ಪತ್ರಿಕೆಯ ಬೆಳ್ಳಿಹಬ್ಬವನ್ನು ಆಚರಿಸಬೇಕೆಂದೂ ಅದರ ನೆನಪಿಗಾಗಿ ಒಂದು ವಿಶೇಷ ಸಂಪುಟವನ್ನು ತರಬೇಕೆಂದೂ ಪತ್ರಿಕೆಯ ಸಂಪಾದಕ ಮಂಡಳಿಯವರು ನಿರ್ಧರಿಸಿ, ಅದಕ್ಕೆ ಅನುಮತಿ ಕೇಳಲು ನನ್ನ ಹತ್ತಿರ ಬಂದರು. ಇದು ತುಂಬಾ ಸಂತೋಷದ ಮತ್ತು ಹೆಮ್ಮೆಯ ಕೆಲಸ, ಅಗತ್ಯವಾಗಿ ಮಾಡಿರಿ ಎಂದು ನಾನು ಅವರನ್ನು ಹುರಿದುಂಬಿಸಿ ಕಳಿಸಿದೆ. ಈಗ ಆ ವಿಶೇಷ ಸಂಪುಟ ಹೊರಬರುತ್ತಿರುವುದನ್ನು ನೋಡಿ ನನಗೆ ಅತೀವ ಸಂತೋಷವಾಗಿದೆ.

ಈ ಬೆಳ್ಳಿಹಬ್ಬದ ನೆನಪಿನ ಸಂಚಿಕೆಗೆ ಆಧುನಿಕ ಕನ್ನಡ ಸಾಹಿತ್ಯರೂಪಗಳು ಎಂಬುದನ್ನು ಕೇಂದ್ರವಸ್ತುವನ್ನಾಗಿಟ್ಟುಕೊಂಡಿದ್ದು ಔಚಿತ್ಯಪೂರ್ಣವಾಗಿದೆ. ಹಳೆಯ ಸಾಹಿತ್ಯ ರೂಪಗಳು ಮಾಸಿಹೋಗುವುದು ಅಥವಾ ನಶಿಸಿ ಹೋಗುವುದು, ಕಾಲಕಾಲಕ್ಕೆ ಹೊಸರೂಪಗಳು ಹುಟ್ಟಿಕೊಳ್ಳುವುದು, ಉಪರೂಪಗಳು ಕಾಣಿಸಿಕೊಳ್ಳುವುದು ಇವೆಲ್ಲ ಸಾಹಿತ್ಯದ ಬೆಳವಣಿಗೆಯ ಪ್ರಕ್ರಿಯೆಯಲ್ಲೆಲ್ಲ ಸತತವಾಗಿ ಕಂಡುಬರುವ ಬೆಳವಣಿಗೆಗಳು. ಇವುಗಳನ್ನು ಕಾಲಕಾಲಕ್ಕೆ ಸಮೀಕ್ಷಿಸುವುದು ಅಗತ್ಯವಾಗಿ ಆಗಬೇಕಾದ ಕೆಲಸ. ಈ ಸಂಚಿಕೆ ತನ್ನ ಉದ್ದೇಶವನ್ನು ಸಾಧಿಸಿಕೊಳ್ಳುವುದರಲ್ಲಿ ಸಫಲವಾಗಿದೆಯೆಂದು ನನ್ನ ಅನಿಸಿಕೆ. ಸಂಪಾದಕರಿಗೆ ಮತ್ತು ಸಲಹಾ ಮಂಡಳಿಯ ಸದಸ್ಯರಿಗೆ ಅಭಿನಂದನೆಗಳು.

ಡಾ. ಎಸ್. ರಾಮೇಗೌಡ
ಕುಲಪತಿಗಳು

ಸಂಪಾದಕೀಯ

` ಕರ್ನಾಟಕ ಭಾರತಿ ' ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಸಾಹಿತ್ಯಿಕ ಪತ್ರಿಕೆ. ಇದಕ್ಕೀಗ ಇಪ್ಪತ್ತೈದರ ತುಂಬು ಹರೆಯ. ವಿಶ್ವವಿದ್ಯಾಲಯದ ಘನತೆ, ಗೌರವ, ವಿದ್ವತ್ ಪರಂಪರೆಗೆ ತಕ್ಕಂತೆ ಉನ್ನತ ಮೌಲಿಕ ಲೇಖನಗಳನ್ನು ಪ್ರಕಟಿಸುತ್ತ, ತನ್ನ ಶೈಕ್ಷಣಿಕ ಮಟ್ಟವನ್ನು ಕಾಯ್ದುಕೊಂಡು, ಕಾಲಕಾಲಕ್ಕೆ ಹೊಸ ಹೊಸ ಉಪಕ್ರಮಗಳನ್ನು ಅನಾವರಣಗೊಳಿಸುತ್ತ, ನೂತನ ಆಯಾಮಗಳನ್ನು ಆವಿಷ್ಕಾರ ಗೊಳಿಸುತ್ತ ನಿರಂತರವಾಗಿ ನಡೆದುಬಂದಿರುವುದು ಹೆಮ್ಮೆಯ ಸಂಗತಿ. ಇದು ವಿದ್ವತ್ ಪತ್ರಿಕೆಯೊಂದರ ಬದುಕಿನ ಸಫಲತೆಯ ಪ್ರತೀಕವೆನಿಸಿದೆ.

ಇಪ್ಪತ್ತೈದು ವರ್ಷ ಈ ಪತ್ರಿಕೆ ಇಡುತ್ತ ಬಂದ ಹೆಜ್ಜೆ ಗುರುತುಗಳನ್ನು ಅವಲೋಕಿಸಿದಾಗ ಅನೇಕ ಮೈಲುಗಲ್ಲುಗಳನ್ನು ನೆಟ್ಟುದು ಕಂಡುಬರುತ್ತದೆ.

ಮೊದಲು ವರ್ಷಕ್ಕೆ ಎರಡರಂತೆ ಮತ್ತೆ ಮುಂದೆ ನಾಲ್ಕರಂತೆ ಒಟ್ಟು ಸು. ೮೫ ಸಂಚಿಕೆಗಳಲ್ಲಿ ಸು. ರಾ. ೧೬೦೦೦ ಪುಟಗಳಷ್ಟು ಮೌಲಿಕ ಸಾಹಿತ್ಯವನ್ನು ಪ್ರಕಟಿಸಿದ್ದು.

ವಿಶ್ವವಿದ್ಯಾಲಯದ ರಜತೋತ್ಸವ ಸಂದರ್ಭದಲ್ಲಿ ` ಕನ್ನಡ ಉಪಭಾಷೆ ' ಗಳಿಗೆ ಸಂಬಂಧಿಸಿದ ಲೇಖನಗಳನ್ನೊಳಗೊಂಡ ೫೧೫ ಪುಟದ ಬೆಳ್ಳಿ ಸಂಚಿಕೆಯನ್ನು ಹೊರತಂದುದು.

ಡಾ. ಫ. ಗು.ಹಳಕಟ್ಟಿ, ಡಾ. ಗೋವಿಂದ ಪೈ, ಡಾ.ಅಂಬೇಡ್ಕರ್, ಡಾ. ಮಾಸ್ತಿ, ಡಾ. ಕುವೆಂಪು, ಡಾ. ವಿ. ಕೃ. ಗೋಕಾಕ, ಡಾ.ಗುಬ್ಬಿ ವೀರಣ್ಣ ಅವರ ಹೆಸರಿನಲ್ಲಿ ವಿಶೇಷ ಸಂಚಿಕೆಗಳನ್ನು ಪ್ರಕಟಿಸಿದ್ದು.

ಸಾಹಿತ್ಯ, ಸಂಶೋಧನೆ, ಭಾಷೆ , ಜಾನಪದ, ವಿಮರ್ಶೆ, ಸಂಸ್ಕೃತಿಗಳಿಗೆ ಸಂಬಂಧಿಸಿದ ಹೊಸ ಶೋಧಗಳನ್ನೊಳಗೊಂಡ ಉತ್ತಮ ಲೇಖನಗಳನ್ನು ಪ್ರಕಟಿಸಿ, ನಾಡಿನ ಸಾಹಿತಿ, ಸಂಶೋಧಕರಿಗೆ ಅಪೂರ್ವ ಆಕರ ಸಾಹಿತ್ಯವನ್ನು ಒದಗಿಸಿದುದು.

ಅಖಂಡ ಇಪ್ಪತ್ತೈದು ವರ್ಷ, ಸಮಯಕ್ಕೆ ಸರಿಯಾಗಿ ನಿಯತವಾಗಿ - ನಿರಂತರವಾಗಿ ನಿಲ್ಲದೆ ನಡೆದು ಬಂದುದು.

ಇಂದು ತನ್ನ ಇಪ್ಪತ್ತೈದು ವರ್ಷದ ಸಾಧನೆಯ ಸವಿನೆನಪಿಗಾಗಿ ` ಆಧುನಿಕ ಕನ್ನಡ ಸಾಹಿತ್ಯ ರೂಪಗಳು' ಎಂಬ ವಿಷಯದ ಮೇಲಿನ ಲೇಖನಗಳನ್ನೊಳಗೊಂಡ ಸು. ೩೦೦ ಪುಟಗಳ ಬೆಳ್ಳಿಹಬ್ಬದ ` ರಜತ ಸಂಪುಟ ' ವನ್ನು ಹೊರತರುತ್ತಿರುವುದು.

` ಕರ್ನಾಟಕ ಭಾರತಿ ' ಗೆ ೨೫ ವರ್ಷ ತುಂಬುತ್ತಿರುವ ಸಂದರ್ಭದಲ್ಲಿ ಅದರ ಬೆಳ್ಳಿಹಬ್ಬವನ್ನು ವಿಶೇಷ ಸಂಪುಟ ಹೊರತರುವ ಮೂಲಕ ಅರ್ಥಪೂರ್ಣವಾಗಿ ಆಚರಿಸಬೇಕೆಂದು ಸಂಪಾದಕ ಮಂಡಳಿ ಹಾಗೂ ಸಲಹಾಮಂಡಳಿ ನಿರ್ಧರಿಸಿ, ಗೌರವಸಂಪಾದಕರಾದ ಮಾನ್ಯ ಕುಲಪತಿಗಳ ಮುಂದೆ ಈ ವಿಷಯವನ್ನು ಪ್ರಸ್ತಾಪಿಸಿದಾಗ ಅವರು ತುಂಬ ಸಂತೋಷದಿಂದ ಇದು ಅವಶ್ಯ ಆಗಲೇಬೇಕಾದ ಕಾರ್ಯ, ತೀವ್ರ ಕಾರ್ಯಪ್ರವೃತ್ತರಾಗಿರಿ ಎಂದು ಪ್ರೋತ್ಸಾಹಿಸಿದರು. ಅವರ ಆ ಪ್ರೋತ್ಸಾಹದ ಫಲವಾಗಿ ಸಿದ್ಧವಾದ ವಿಶೇಷ ಸಂಪುಟ ` ಆಧುನಿಕ ಕನ್ನಡ ಸಾಹಿತ್ಯರೂಪಗಳು ' ಎಂಬ ಈ ರಜತ ಸಂಪುಟ.

ಕನ್ನಡ ಸಾಹಿತ್ಯ ಕಾಲದಿಂದ ಕಾಲಕ್ಕೆ ತೋರುತ್ತ ಬಂದ ಹೊಸ ಹೊಸ ಅನ್ವೇಷಣೆ, ಆವಿಷ್ಕಾರಗಳಲ್ಲಿ ಆಧುನಿಕಯುಗದ ಕೊಡುಗೆ ಗಮನಾರ್ಹ. ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ದೇಶೀ ಮೂಲದ ಜೀವದ್ರವ್ಯದ ಜೊತೆ ಬೆರೆತು ನೂತನ ಸತ್ವಪೂರ್ಣ ಸಾಹಿತ್ಯ ಸೃಷ್ಟಿ ಈ ಯುಗದಲ್ಲಿ ಸಾಧ್ಯವಾಗಿದೆ. ಅದರ ವಸ್ತುವೈವಿಧ್ಯ, ರೂಪವೈವಿಧ್ಯ ಬೆರಗುಗೊಳಿಸುವಂತಿದೆ. ಪ್ರಾಚೀನ ಸಾಹಿತ್ಯ ಕೇವಲ ಕಾವ್ಯರೂಪಕ್ಕೆ ಮಾತ್ರ ಸೀಮಿತವಾಗಿದ್ದರೆ, ಈ ಯುಗದ ಸಾಹಿತ್ಯ ಭಾವಗೀತೆ, ನವ್ಯಕಾವ್ಯ, ಕಥೆ, ಕಾದಂಬರಿ, ಪ್ರಬಂಧ, ನಾಟಕ, ವಿಮರ್ಶೆ, ಚುಟುಕು ಸಾಹಿತ್ಯ, ಪತ್ರಿಕಾ ಸಾಹಿತ್ಯ, ಅಂಕಣಸಾಹಿತ್ಯ, ಅಭಿನಂದನಾ ಸಾಹಿತ್ಯ, ಪತ್ರಸಾಹಿತ್ಯ ಹೀಗೆ ಅನಂತ ಮುಖವಾಗಿ ಬೆಳೆದಿದೆ. ಇಂಥ ೨೫ ಪ್ರಕಾರಗಳನ್ನು ಕುರಿತ ಲೇಖನಗಳನ್ನೊಳಗೊಂಡಿದೆ ಪ್ರಸ್ತುತ ರಜತ ಸಂಪುಟ.

ಖ್ಯಾತ ವಿಮರ್ಶಕಾರ ಪ್ರೊ. ಕೀರ್ತಿನಾಥ ಕುರ್ತಕೋಟಿ, ಡಾ. ಜಿ. ಎಸ್. ಆಮೂರ, ಎನ್ಕೆ, ಡಾ. ಗುರುಲಿಂಗ ಕಾಪ್ಸೆ, ಪ್ರೊ. ಸದಾನಂದ ಕನವಳ್ಳಿ ಮೊದಲಾದ ಹಿರಿಯ ಬರಹಗಾರರ ಜೊತೆ ಆಯಾ ಕ್ಷೇತ್ರದಲ್ಲಿ ತಮ್ಮನ್ನು ಗಂಭೀರವಾಗಿ ತೊಡಗಿಸಿಕೊಂಡು ಶ್ರದ್ಧೆಯಿಂದ ಬರವಣಿಗೆ ಕೃಷಿ ಮಾಡುತ್ತಿರುವ ಯುವ ಬರಹಗಾರರ ಲೇಖನಗಳೂ ಇದರಲ್ಲಿ ಎಡೆ ಪಡೆದಿವೆ. ಇಲ್ಲಿನ ಬರಹಗಳು ಆಯಾ ಲೇಖಕರ ಅಧ್ಯಯನದ ವ್ಯಾಪ್ತಿ, ದೃಷ್ಟಿಕೋನ, ಬರವಣಿಗೆಯ ರೀತಿಗನುಗುಣವಾಗಿ ಮೂಡಿಬಂದಿವೆಯಾದರೂ ಆಧುನಿಕ ಕನ್ನಡ ಸಾಹಿತ್ಯದ ಇಪ್ಪತ್ತೈದು ರೂಪಗಳ ಸ್ವರೂಪ -ಲಕ್ಷಣ- ಪರಂಪರೆಯನ್ನು ಸ್ಥೂಲವಾಗಿ ಮತ್ತು ವಸ್ತುನಿಷ್ಠವಾಗಿ ವಿವೇಚಿಸುವುದರಿಂದ ಈ ಕ್ಷೇತ್ರಕ್ಕೆ ಇದೊಂದು ನೂತನ ಕೊಡುಗೆಯಾಗಿದೆ ಎಂದು ಹೇಳಬಹುದು.

ಬೆಳ್ಳಿಸಂಪುಟವನ್ನು ಹೊರತರಲು ಒಪ್ಪಿಗೆ ಸೂಚಿಸಿ, ಪ್ರೀತಿಯ ಪ್ರೋತ್ಸಾಹ ನೀಡಿದ ಮಾನ್ಯ ಕುಲಪತಿಗಳಾದ ಡಾ. ಎಸ್. ರಾಮೇಗೌಡ ಅವರಿಗೆ ಅನಂತ ಕೃತಜ್ಞತೆಗಳು.

ಈ ಸಂಪುಟದ ಯೋಜನೆಯನ್ನು ಕಲ್ಪಿಸಿ, ರೂಪಿಸಿ, ಅದು ಕಾರ್ಯರೂಪಕ್ಕೆ ಬರುವಲ್ಲಿ ಸೂಕ್ತ ಸಲಹೆ ಸೂಚನೆಗಳನ್ನು ಕೊಟ್ಟ ಡಾ. ಎಂ. ಎಂ. ಕಲಬುರ್ಗಿ ಅವರಿಗೆ ಹಾಗೂ ಸಲಹಾ ಸಮಿತಿಯ ಎಲ್ಲ ಸದಸ್ಯರಿಗೆ ಅನಂತ ವಂದನೆಗಳು.

ತಮ್ಮ ಎಡೆಬಿಡದ ಕಾರ್ಯದಲ್ಲಿಯೂ ವಿಶ್ವವಿದ್ಯಾಲಯದ ಮೇಲಿನ ಅಭಿಮಾನ ವಿದ್ವತ್ತಿನ ಮೇಲಿನ ಪ್ರೀತಿಯಿಂದ ನಮ್ಮ ಮನವಿಯನ್ನು ಮನ್ನಿಸಿ ಅಭ್ಯಾಸಪೂರ್ಣ ಲೇಖನಗಳನ್ನು ಬರೆದುಕೊಟ್ಟ ಎಲ್ಲ ವಿದ್ವಾಂಸರಿಗೆ ಆತ್ಮೀಯ ಅಭಿನಂದನೆಗಳು.

ಈ ಸಂಪುಟದ ಯೋಜನೆಯನ್ನು ರೂಪಿಸುವುದರಿಂದ ಹಿಡಿದು ಲೇಖಕರನ್ನು ಅಯ್ಕೆ ಮಾಡುವ, ಲೇಖನ ಬರೆಯಿಸುವ, ಹತ್ತಾರುಬಾರಿ ನೆನಪಿನೋಲೆ, ದೂರವಾಣಿಯ ಮೂಲಕ ನೆನಪಿಸಿ ಒತ್ತಾಯಿಸಿ ಲೇಖನಗಳನ್ನು ತರಿಸುವ, ಅಚ್ಚಿನ ಮನೆಗೆ ಕಳಿಸುವ, ಕರಡಚ್ಚು ತಿದ್ದಿಸುವ -ತಿದ್ದುವ ಎಲ್ಲ ಕಾರ್ಯಗಳಲ್ಲಿ ವಿಶೇಷ ಮುತುವರ್ಜಿವಹಿಸಿ ಈ ಸಂಪುಟದ ಕನಸು ನನಸಾಗುವಂತೆ ಮಾಡಿದ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಎಚ್. ವಿ. ನಾಗೇಶ ಅವರ ಸಹಾಯ, ಸಹಕಾರವನ್ನು ನೆನೆಯಲು ಶಬ್ದಗಳು ಸೋಲುತ್ತವೆ.

ಕನ್ನಡ ಸಾರಸ್ವತಲೋಕ ಎಂದಿನಂತೆ ಈ ರಜತ ಸಂಪುಟವನ್ನೂ ಪ್ರೀತಿಯಿಂದ ಸ್ವಾಗತಿಸುತ್ತದೆ ಎಂದು ನಂಬಿದ್ದೇವೆ.

ಸಂಪಾದಕರು

ಪರಿವಿಡಿ

		ಪುಟ
೧.	ಭಾವಗೀತದ ಸ್ವರೂಪ - ಕೀರ್ತಿನಾಥ ಕುರ್ತಕೋಟಿ	೧
೨.	ನವ್ಯಕಾವ್ಯ : ಹೊಸಧೋರಣೆ - ಬುದ್ಧಣ್ಣ ಹಿಂಗಮಿರೆ	೭
೩.	ಸರಳ ರಗಳೆ - ಚೆನ್ನಕ್ಕ ಪಾವಟೆ	೧೪
೪.	ಆಧುನಿಕ ಕನ್ನಡ ಮಹಾಕಾವ್ಯ - ಜಿ. ಎಸ್. ಆಮೂರ	೨೫
೫.	ಚುಟುಕು ಸಾಹಿತ್ಯ - ಶ್ರೀಪಾದ ಶೆಟ್ಟಿ	೪೦
೬.	ಆಧುನಿಕ ವಚನ ಸಾಹಿತ್ಯ - ಪ್ರೀತಿ ಶುಭಚಂದ್ರ	೫೦
೭.	ಕಾದಂಬರಿ - ಗುರುಪಾದ ಮರಿಗುದ್ದಿ	೬೦
೮.	ಸಣ್ಣಕತೆ - ಮಲ್ಲಿಕಾ ಘಂಟಿ	೭೦
೯.	ಪ್ರಬಂಧ ಸಾಹಿತ್ಯ - ವೀರೇಂದ್ರ ಸಿಂಪಿ	೭೯
೧೦.	ಕಂಪನಿ ನಾಟಕ - ರಾಮಕೃಷ್ಣ ಮರಾಠೆ	೯೦
೧೧.	ಹವ್ಯಾಸಿ ನಾಟಕ - ಶಾಲಿನಿ ರಘುನಾಥ	೧೦೬
೧೨.	ಬೀದಿ ನಾಟಕ - ಶಿವಾನಂದ ಶೆಟ್ಟರ	೧೧೮

		ಪುಟ
೧೩.	ರೇಡಿಯೊ ನಾಟಕ - ಎನ್ಕೆ	೧೩೪
೧೪.	ಗೀತನಾಟಕ - ಬಸವರಾಜ ಮಲಶೆಟ್ಟಿ	೧೪೪
೧೫.	ಪ್ರವಾಸ ಸಾಹಿತ್ಯ - ಜಿ. ಎಸ್. ಕಾಪಸೆ	೧೫೮
೧೬.	ಆತ್ಮಚರಿತ್ರೆಗಳು - ಬಿ. ವ್ಹಿ. ಶಿರೂರ	೧೭೦
೧೭.	ಅಂಕಣ ಸಾಹಿತ್ಯ - ಸದಾನಂದ ಕನವಳ್ಳಿ	೧೮೩
೧೮.	ಪತ್ರಿಕಾ ಸಾಹಿತ್ಯ - ಸುರೇಂದ್ರ ದಾನಿ	೧೯೧
೧೯.	ಸಾಹಿತ್ಯ ವಿಮರ್ಶೆ - ಜಿ. ಎಂ. ಹೆಗಡೆ	೨೦೦
೨೦.	ಸಂಶೋಧನ ಸಾಹಿತ್ಯ - ಬಿ. ಆರ್. ಹಿರೇಮಠ	೨೧೨
೨೧.	ಮಕ್ಕಳ ಸಾಹಿತ್ಯ - ಜಯವಂತ ಕಾಡದೇವರ	೨೨೬
೨೨.	ಪತ್ರ ಸಾಹಿತ್ಯ - ಗುರುಪಾದ ಮರಿಗುದ್ದಿ	೨೩೬
೨೩	ಅಭಿನಂದನ ಸಾಹಿತ್ಯ - ಜಿ. ಎಂ. ಹೆಗಡೆ	೨೪೭
೨೪.	ಬಂಡಾಯ ಸಾಹಿತ್ಯ : ಒಂದು ಅವಲೋಕನ - ಬಸವರಾಜ ಸಬರದ	೨೫೫
೨೫.	ರೂಪ ಜಿಜ್ಞಾಸೆ : ಕೆಲವು ಟಿಪ್ಪಣಿಗಳು - ಎಚ್. ವಿ. ನಾಗೇಶ	೨೬೨

ಭಾವಗೀತದ ಸ್ವರೂಪ

- ಕೀರ್ತಿನಾಥ ಕುರ್ತಕೋಟಿ

ಇಂಗ್ಲೀಷಿನಲ್ಲಿಯ Lyric ಶಬ್ದಕ್ಕೆ ಪ್ರತಿಯಾಗಿ ಕನ್ನಡದಲ್ಲಿ ಭಾವಗೀತ ಎಂಬ ಶಬ್ದವನ್ನು ನಾವೀಗ ಉಪಯೋಗಿಸುತ್ತಿದ್ದೇವೆ. ಶ್ರೀಯವರು ಇಂಗ್ಲಿಷ್ ಕವಿತೆಗಳನ್ನು ಭಾಷಾಂತರಿಸಿದಾಗ ಅವುಗಳನ್ನು `ಇಂಗ್ಲಿಷ್ ಗೀತಗಳು ' ಎಂದು ಕರೆದರು. `ಭಾವಗೀತ 'ಎಂಬ ಶಬ್ದ ನಮ್ಮಲ್ಲಿ ಮರಾಠಿಯಿಂದ ಬಂದಿರಬೇಕು. ಅದೇನೇ ಇದ್ದರೂ ಭಾವಗೀತದ ಮೂಲಸ್ವರೂಪ ಹಾಡಿನದೇ. ಹಾಡುಗಳು ನಮ್ಮಲ್ಲಿ ಮೊದಲಿನಿಂಡಲೂ ಇದ್ದವು. ಆದರೆ ಆಗೆಲ್ಲ ಕಾವ್ಯ ಹಾಡಿಗಿಂತ ಭಿನ್ನವಾಗಿ ತನ್ನ ಅರ್ಥಸಂಪತ್ತನ್ನು ಬೆಳೆಸಿಕೊಂಡಿತು. ಅಭಿಜಾತ ಕಾವ್ಯಗಳ ಛಂದೋಗತಿ ಹಾಡುಗಳ ಲಯ ವಿನ್ಯಾಸಕ್ಕಿಂತ ತೀರ ಭಿನ್ನವಾಗಿರುವದು ಈ ಮಾತಿಗೆ ಸಾಕ್ಷಿಯಾಗಿದೆ. ರಾಮಾಯಣ ಮತ್ತು ಮಹಾಭಾರತಗಳಂಥ ಹಳೆಯ ಕಾವ್ಯಗಳನ್ನು ಹಾಡುತ್ತಿದ್ದರೆಂಬುದು ನಿಜವಾಗಿದ್ದರೂ ಅಲ್ಲಿ ಕಾವ್ಯ ಸಂಗೀತದ ನೆರವನ್ನು ಪಡೆಯುತ್ತಿದ್ದಿತೆಂಬ ಮಾತು ಸ್ಪಷ್ಟವಾಗಿದೆ. ಹಾಡಲಿ ಬಿಡಲಿ, ಕಾವ್ಯ ಕತೆಯನ್ನು ಆಶ್ರಯಿಸಿ ಬೆಳೆದು ಬರುತ್ತಿತ್ತು.

ಕನ್ನಡದ ಸಂದರ್ಭವನ್ನಷ್ಟೇ ಪರಿಶೀಲಿಸುವದಾದರೆ ಹರಿದಾಸರ ಹಾಡುಗಳು ಮತ್ತು ಶಿವಶರಣರ ವಚನಗಳನ್ನು ಹೊರತು ಪಡಿಸಿದರೆ ಕಾವ್ಯವೆಲ್ಲ ಕಥನಕಾವ್ಯವೇ ಆಗಿತ್ತು. ಕಥನದ ನಿಯಮಗಳನ್ನು ನಮ್ಮ ಕವಿಗಳು ತಮಗೆ ಅರಿವಾಗದಂತೆ ರೂಢಿಸಿಕೊಂಡಿದ್ದರು. ಸಾಹಿತ್ಯದ ಅನೇಕ ಸಂರಚನೆಗಳಲ್ಲಿ ಕಥನಕಾವ್ಯವೂ ಒಂದಾಗಿದೆ. ಕಾವ್ಯಾರ್ಥ ಒಂದಾದ ಮೇಲೊಂದರಂತೆ ಹರಿಯುವ ವಾಕ್ಯಗಳ ಗುಂಟ ಹರಡುತ್ತ ಕೊನೆಯಲ್ಲಿ ಸ್ಫೋಟವಾಗುವಂಥದು. ಪ್ರಾರಂಭದಲ್ಲಿಯ ದೇವತಾ ಸ್ತುತಿ, ಕೊನೆಯಲ್ಲಿಯ `ಮಂಗಳ ಪದ್ಯ' ನಾಟಕದಲ್ಲಿಯ ನಾಂದಿ ಮತ್ತು ಭರತವಾಕ್ಯಗಳಂತೆ ಕಾವ್ಯಕೃತಿಗೆ ಅಂಚುಕಟ್ಟುತ್ತವೆ. ಇದಿಷ್ಟು ಸ್ಥೂಲವಾಗಿ ಹಳೆಯ ಕಾವ್ಯಗಳ ಶಿಲ್ಪವಾಗಿದೆ. ಈ ಪರಿಮಿತಿಯೊಳಗೆ ಕಾವ್ಯಾರ್ಥ ತನಗೆ ಬೇಕಾದ ಆಕಾರವನ್ನು ತಾಳಲು ಅವಕಾಶವಿದೆ.

ಕಥನಕಾವ್ಯಗಳ ಸಂರಚನೆಯ ಇನ್ನೊಂದು ಅನುಕೂಲವೆಂದರೆ ಅದು ಗದ್ಯಪದ್ಯಗಳೆರಡರ ತಾಂತ್ರಿಕತೆಯನ್ನು ಒಳಗೊಂಡದ್ದಾಗಿದೆ. ಕನ್ನಡ ಕಾವ್ಯದಲ್ಲಂತೂ ನಿಸ್ಸಂಕೋಚವಾದ ಗದ್ಯದ ಉಪಯೋಗ ಕಾಣುತ್ತದೆ. ಚಂಪೂಕಾವ್ಯದಲ್ಲಿ ಗದ್ಯ ಕೂಡ ಪದ್ಯದ ಇನ್ನೊಂದು ರೂಪವಾಗಿಯೇ ಕಾಣಿಸಿಕೊಳ್ಳುತ್ತದೆ. ವರ್ಣನೆಯ ಪ್ರಸಂಗಗಳಲ್ಲಿ ನೂರಾರು ವಸ್ತುಗಳನ್ನು ಕಲೆಹಾಕಲು ಗದ್ಯದ ಬೀಸಾದ ಬರವಣಿಗೆ ಅನುಕೂಲವಾಗುತ್ತದೆ. ತಾತ್ವಿಕವಾಗಿ ಗದ್ಯಕ್ಕೆ ಮುಗಿತಾಯವೆಂಬುದಿಲ್ಲ. ಹರಿಹರನ ರಗಳೆಗಳಲ್ಲಿ ಗದ್ಯ ಗದ್ಯವಾಗಿಯೇ ಕೆಲಸ ಮಾಡುತ್ತಿದ್ದರೆ ಷಟ್ಪದಿ ಕಾವ್ಯಗಳಲ್ಲಿ ಗದ್ಯ ಪದ್ಯದ ವೇಷವನ್ನು ತೊಟ್ಟು ವ್ಯವಹರಿಸುತ್ತದೆ. ಹಳೆಯ ಕಾವ್ಯಗಳಲ್ಲಿ ಎಷ್ಟೋ ಕಡೆಗೆ ಗದ್ಯ ಪದ್ಯಗಳು ಬೇರ್ಪಡಿಸಲು ಬಾರದಂತೆ ಕೂಡಿ ಹೋಗಿರುತ್ತವೆ. ಕಾವ್ಯ ಪ್ರದೇಶದ ನಿಮ್ನೋನ್ನತಗಳು ಗದ್ಯ ಪದ್ಯಗಳ ಬೆರಕೆಯಿಂದಲೇ ಉಂಟಾಗುತ್ತವೆ.

ಆಧುನಿಕ ಭಾವಗೀತಕ್ಕೆ ಕತೆ ಮತ್ತು ಗದ್ಯ ಇವೆರಡರ ಹಂಗೂ ಇಲ್ಲ. ಪ್ರಾಚೀನ ಕಾವ್ಯದಲ್ಲಿ ಗೀತ ಸ್ವತಂತ್ರವಾಗಿ ತನ್ನ ಶಿಲ್ಪವನ್ನು ಕಟ್ಟಿಕೊಂಡಿದ್ದರೂ ಅದರ ಹರಹು ಚಿಕ್ಕದಾದ್ದರಿಂದ ಸಮಗ್ರವಾದ ಕಾವ್ಯವ್ಯಾಪಾರ ಅದರಿಂದ ಸಾಧ್ಯವಾಗುವದಿಲ್ಲ. ಹೊಸ ಕವಿತೆ ಹಳೆಯ ಗೀತಕ್ಕಿಂತ ಹೆಚ್ಚು ಸ್ವತಂತ್ರವಾದದ್ದು ಪಲ್ಲವಿ ಮತ್ತು ಅನುಪಲ್ಲವಿಗಳ ಬಂಧನವಿಲ್ಲದೆ ಅದು ಹೆಚ್ಚು ಮುಕ್ತವಾದದ್ದು. ಹೊಸ ಕವಿತೆ ಆಕಾರದಲ್ಲಿ ಚಿಕ್ಕದಾಗಿದ್ದರೂ ಈ ಮುಕ್ತತೆಯಿಂದಾಗಿ ಅದಕ್ಕೆ ಬೆಳವಣಿಗೆಯ ಅವಕಾಶವಿದೆ. ಅಂದರೆ ಹೊಸ ಭಾವಗೀತದ ಮೂಲಸ್ವರೂಪ ಗೀತವೆಂದು ತಪ್ಪು ತಿಳಿದುಕೊಂಡಿರುವದರಿಂದ ಈ ಗೊಂದಲಕ್ಕೆ ಅವಕಾಶ ಕೊಟ್ಟಂತಾಗಿದೆ. ಹಳೆಯ ಕಾವ್ಯ ರೂಪಾಂತರವನ್ನು ಪಡೆದು ಚಿಕ್ಕದಾಗಿದೆಯಾದ್ದರಿಂದ ಅದು ಕಳೆದುಕೊಂಡಿದ್ದೇನು ಮತ್ತು ಹೊಸದಾಗಿ ಪಡೆದು ಕೊಂಡಿದ್ದೇನು ಎನ್ನುವದರ ಲೆಕ್ಕಾಚಾರ ಇನ್ನೂ ಸರಿಯಾಗುತ್ತಿಲ್ಲ. ಇದರ ಅರ್ಥ ಹೊಸ ಕವಿತೆಯಲ್ಲಿ ಹಾಡಿನ ಅಂಶವಿಲ್ಲವೆಂದಲ್ಲ ಹೊಸ ಕವಿಗಳಲ್ಲಿ ಅನೇಕರು ಸುಂದರವಾದ ಗೀತೆಗಳನ್ನು ಬರೆದಿದ್ದಾರೆ, ಆದರೆ ಮುಖ್ಯವಾಗಿ ಕಾವ್ಯ ಕಳೆದುಕೊಂಡದ್ದೇನು ಮತ್ತು ಹೊಸದಾಗಿ ಪಡೆದು ಕೊಂಡದ್ದೇನು ಎಂಬುದರ ಬಗ್ಗೆ ಚರ್ಚೆಯಾಗಬೇಕು.

ಶ್ರೀಯವರ ``ಇಂಗ್ಲಿಷ್ ಗೀತೆಗಳು ' ಪ್ರಕಟವಾದ ಮೇಲೆ ಕನ್ನಡದಲ್ಲಿ ಹೊಸ ಕವಿತೆ ಜನ್ಮತಾಳಿತು ಎನ್ನುವದು ಒಂದು ಐತಿಹಾಸಿಕ ಸಂಗತಿ ಎನ್ನುವದು ನಿಜವಾದರೂ ಈ ಪರಿಸ್ಥಿತಿಯನ್ನು ವಿಶದವಾಗಿ ಆಲೋಚಿಸುವ ಅವಶ್ಯಕತೆ ಇದೆ. ನಿಜವಾಗಿ ಹೇಳಬೇಕೆಂದರೆ ಹೊಸ ಕವಿತೆಯ ಹುಡುಕಾಟ ಪ್ರಾರಂಭವಾಯಿತೆಂದು ಹೇಳುವದು ಸತ್ಯಕ್ಕೆ ಹೆಚ್ಚು ಸಮೀಪವಾಗಬಹುದು. ಇಂಗ್ಲಿಷ್ ಸಾಹಿತ್ಯದಲ್ಲಿ ಕೂಡ ವರ್ಡ್ಸ್‌ವರ್ಥನಿಗಿಂತ ಮೊದಲೇ ಭಾವಗೀತ ಪ್ರಚಲಿತವಾಗಿತ್ತು. ಆದರೆ ವರ್ಡ್ಸ್‌ವರ್ಥನಿಗಿಂತ ಮೊದಲು ಕವಿತೆ ದೀರ್ಘವಾಗಿರಲಿ ಚಿಕ್ಕದಾಗಿರಲಿ ಅದು ಒಪ್ಪಿದ್ದ ಕಾವ್ಯಶಾಸ್ತ್ರ ಮಹಾಕಾವ್ಯದ ಮೇಲೆ ಆಧರಿಸಿದ್ದ ಕಾವ್ಯಶಾಸ್ತ್ರ ವಾಗಿತ್ತು. ಭಾವಗೀತವನ್ನು ಆಧರಿಸಿದ್ದ ಕಾವ್ಯಶಾಸ್ತ್ರ ಕೊಲರಿಜನಿಂದ ಪ್ರಾರಂಭವಾಯಿತು. ಕೊಲರಿಜನಿಗೆ ಆಧಾರವಾಗಿದ್ದ ಕಾವ್ಯ ವರ್ಡ್ಸ್ ವರ್ಥನ ಕವಿತೆಗಳಲ್ಲಿತ್ತು. `ಪ್ರತಿಭೆ ' ಶಬ್ದಕ್ಕೆ ಸಂವಾದಿಯಾಗಬಹುದಾದ Imagination ಎಂಬ ಶಕ್ತಿಯನ್ನು ಗುರುತಿಸಿ ಅದೇ ಕಾವ್ಯಕ್ಕೆ ಮೂಲಸೆಲೆ ಎಂದು ಕೊಲರಿಜ್ ಹೇಳಿದ್ದು ಹೊಸ ಕವಿತೆಗಳ ಆಧಾರದ ಮೇಲೆ. ಕೊಲರಿಜ್ ತನ್ನ ತತ್ವವನ್ನು ತಿಳಿಯಪಡಿಸಲು ಶೇಕ್ಸಪಿಯರನಂಥ ಹಳೆಯ ಕವಿಗಳ ಕಾವ್ಯಪಂಕ್ತಿಯನ್ನು ಉದಾಹರಿಸುತ್ತಾನೆ. ತನ್ನ ಸಿದ್ಧಾಂತದ ಪ್ರಕಾರ ಯಾವದು ಕಾವ್ಯವೋ ಅದನ್ನು ಹಳೆಯ ಕವಿಗಳಲ್ಲಿಯೂ ಹುಡುಕಬೇಕಾಗುತ್ತದೆ. ಶ್ರೀಯವರು ಪಂಪನ ಬನವಾಸಿಯ ವರ್ಣನೆಯ ನಾಲ್ಕು ಪದ್ಯಗಳನ್ನು ಕಾವ್ಯದ ಜೀವಾಳವೆಂಬಂತೆ ತೆಗೆದು ತೋರಿಸಿದರು. ಹಾಗೆ ನೋಡಿದರೆ ಹೊಸ ಕಾವ್ಯದ ಅನ್ವೇಷಣೆ ಇನ್ನೂ ಮುಗಿದಿಲ್ಲವೆಂದೇ ಹೇಳಬೇಕು.

ವರ್ಡ್ಸ್‌ವರ್ಥನ ಕಾವ್ಯಶಾಸ್ತ್ರದಲ್ಲಿ emotion ಮತ್ತು feeling ಎಂಬ ಶಬ್ದಗಳಿಗೆ ಪ್ರಾಶಸ್ತ್ಯವಿದೆ. ಬಹುಶಃ ನಮ್ಮಲ್ಲಿ `ಭಾವ' ಶಬ್ದ ಈ ಇಂಗ್ಲಿಷ್ ಪದಗಳನ್ನು ಕನ್ನಡಿಸಲಿಕ್ಕೆಂದು ಬಂದಿರಬೇಕು. ಬೇಂದ್ರೆಯವರು ತಮ್ಮದೊಂದು ಹೇಳಿಕೆಯಲ್ಲಿ ಹಳೆಯ ಕಾವ್ಯ ಅರ್ಥಪ್ರಧಾನವಾಗಿದ್ದರೆ ಹೊಸ ಕವಿತೆ ಭಾವಪ್ರಧಾನವಾಗಿದೆಯೆಂಬ ಮಾತನ್ನು ಹೇಳಿದ್ದಾರೆ. ಜೀವನದಲ್ಲಿ ಕೆಲವು ಸನ್ನಿವೇಶಗಳು ಕೆಲವು ಭಾವಗಳನ್ನು ಹುಟ್ಟಿಸುತ್ತವೆಂಬ ಮಾತನ್ನು ವರ್ಡ್ಸ್‌ವರ್ಥ ಹೇಳುತ್ತ ಕವಿತೆಗೆ ಆ ಸನ್ನಿವೇಶಕ್ಕಿಂತ ಆ ಭಾವ ಮುಖ್ಯ ಎಂಬ ಮಾತನ್ನು ಆಡುತ್ತಾನೆ. ಬಹುಶಃ ಇಲನೆಯ ಶತಮಾನದ ಕೊನೆಯ ಭಾಗದಲ್ಲಿ ಫ್ರೆಂಚ್ ರಾಜ್ಯಕ್ರಾಂತಿಯ ನಂತರ ವ್ಯಕ್ತಿ ತನ್ನ ಸಮಾಜದಿಂದ ತಾನು ಭಿನ್ನ

ಎಂಬ ಅರಿವು ಮೂಡಿದಂದಿನಿಂದ ಈ ಪ್ರಕ್ರಿಯೆ ಪ್ರಾರಂಭವಾಗಿರಬೇಕು. ವ್ಯಕ್ತಿ ಸಮಾಜದ ಒಂದು ಜೀವಂತ ಅಂಗವಾಗಿದ್ದಾಗ ವ್ಯಕ್ತಿಯ ಸಂವೇದನೆ ತನ್ನ ಸಮಾಜದ ಸಂವೇದನೆಯಿಂದ ಭಿನ್ನವಾಗಿರಲಿಲ್ಲ. ತಂದೆ ತಾಯಿಗಳಿಂದ ದೈಹಿಕವಾಗಿ, ಮಾನಸಿಕವಾಗಿ ದೂರವಾಗುತ್ತ ಮಗು ತನ್ನ ವೈಯಕ್ತಿಕತೆಯನ್ನು ಪಡೆಯುವಂತೆ ವ್ಯಕ್ತಿ ತನ್ನ ಸಮಾಜದ ರಕ್ಷಣೆ ಪೋಷಣೆಗಳಿಂದ, ಅದು ಹೇರುವ ನಿರ್ಬಂಧನಗಳಿಂದ, ನೀತಿ ನಿಯಮಗಳಿಂದ, ಧಾರ್ಮಿಕತೆಯಿಂದ ಬಿಡಿಸಿಕೊಂಡು ಸ್ವತಂತ್ರ ವಾದ ವೈಯಕ್ತಿಕತೆಯನ್ನು ಪಡೆದುದ್ದು ಇತಿಹಾಸದಲ್ಲಿ ತೀರ ಇತ್ತೀಚಿನ ಘಟನೆಯಾಗಿದೆ.

ಇಂಥ ಪರಿಸ್ಥಿತಿಯಲ್ಲಿ ಭಾವ ತನ್ನ ಸನ್ನಿವೇಶದಿಂದ ವಿಚ್ಛೇದವನ್ನು ಪಡೆಯುತ್ತದೆ. ಹೀಗೆ ವಿಚ್ಛೇದವನ್ನು ಪಡೆದ ಭಾವ ಅಭಿವ್ಯಕ್ತಿಯನ್ನು ಪಡೆಯುವದು ಹೇಗೆ ? ಕಾವ್ಯಕ್ಕೆ ವಕ್ರೋಕ್ತಿ ಹೆಚ್ಚು ಪ್ರಿಯವಾದದ್ದು, ಪ್ರತ್ಯಕ್ಷಕ್ಕಿಂತ ಪರೋಕ್ಷ ಹೆಚ್ಚು ಪ್ರೀತಿಯದು. ಕಥನ ಕಾವ್ಯದಲ್ಲಿ ಕಾವ್ಯಕಥೆಯ ಮೂಲಕವಾಗಿ ಪ್ರಕಟವಾಗುತ್ತದೆ. ಕಾವ್ಯದ ಸಂಗತಿಯಲ್ಲಿ ಕಥೆಯು ಕಾವ್ಯ ವಾಗುತ್ತದೆಂಬ ಮಾತು ಬೇರೆ. ಆದರೆ ಸನ್ನಿವೇಶದಿಂದ ವಿಚ್ಛೇದವನ್ನು ಪಡೆದ ಭಾವ ಸನ್ನಿವೇಶ ಗಳಿಂದ ತುಂಬಿದ ಕಥೆಯಲ್ಲಿ ಪ್ರವೇಶಿಸುವದು ಹೇಗೆ ? ಬಹುಶಃ ಇದಕ್ಕಾಗಿಯೇ ಕಾವ್ಯವೆಂದರೆ ಉಪಮಾನದ ಬಗ್ಗೆ ಇರುವ ಅದಮ್ಯವಾದ ಹಂಬಲ ಎಂದು ಒಬ್ಬ ಅಮೇರಿಕನ್ ಕವಿ ಹೇಳಿರ ಬೇಕು. ಕಾವ್ಯ ತನಗಿಂತ ಭಿನ್ನವಾದದ್ದನ್ನು ಭಿನ್ನವಾಗಿದ್ದರೂ, ಸಮಾನಧರ್ಮವುಳ್ಳ ಉಪಮಾನ ವನ್ನು ಜಗತ್ತಿನಲ್ಲಿ ಹುಡುಕುತ್ತಿರಬೇಕು. " ಉಪಮಾನಿಷ್ಠಾಃ ಕವಯಃ " ಎಂದು ನಮ್ಮ ಅಲಂಕಾರಿಕರೂ ಹೇಳಿದ್ದಾರೆ. ಉಪಮೆಯಂತೆ ಕಾವ್ಯ ವಿರೋಧವನ್ನೂ ಹುಡುಕುತ್ತಿರುತ್ತದೆ. ಎರಡು ಭಿನ್ನವಸ್ತುಗಳಲ್ಲಿಯ ಸಮಾನಧರ್ಮ ಉಪಮೆಯಾದರೆ ಎರಡು ಸಮಾನವಾದ ವಸ್ತುಗಳ ನಡುವಿನ ಭಿನ್ನತೆಯನ್ನೂ ಕಾವ್ಯ ಆಶ್ರಯಿಸಬಹುದು. ಕಾವ್ಯದ ವಕ್ರಗತಿ ಉಪಮೇಯ ಮತ್ತು ವಿರೋಧ ಗಳನ್ನು ಆಶ್ರಯಿಸಿ ಪ್ರಕಟವಾಗಬಹುದು. ಕಥೆ ಕಳೆದು ಹೋಗಿರುವದರಿಂದ ಈಗ ಉಳಿದಿರುವದು ಕವಿಯ ವೈಯಕ್ತಿಕತೆ ಮಾತ್ರ. ಹಿಂದಿನ ಭಕ್ತಕವಿಗಳಲ್ಲೂ ವೈಯಕ್ತಿಕತೆ ಇತ್ತು. ಆದರೆ ದೇವರಿಗೆ ಅರ್ಪಿತವಾಗುವ ವೈಯಕ್ತಿಕತೆ ತನ್ನ ಮಾನಸಿಕ ತುಮುಲವನ್ನು ಕಳೆದುಕೊಂಡು ದೇವರಿಗೆ ಮೊರೆ ಹೋಗುತ್ತಿತ್ತು. ಆಧುನಿಕ ಕಾವ್ಯದಲ್ಲಿ ಅಭಿವ್ಯಕ್ತವಾಗುವ ವೈಯಕ್ತಿಕತೆ ಬೇರೆ ಬಗೆಯದು. ವ್ಯಕ್ತಿಯ ಆತ್ಮನಿಷ್ಠತೆ ಜಗತ್ತಿನ ವಸ್ತುನಿಷ್ಠತೆಯೊಂದಿಗೆ ಸಂವಾದವನ್ನೋ ಸಂಘರ್ಷವನ್ನೋ ಬೆಳೆಸುತ್ತ ಸಂಬಂಧ ಕಟ್ಟಿಕೊಳ್ಳಬೇಕು. ಈ ಸಂಬಂಧವನ್ನು ಭಾಷೆಯ ಮೂಲಕ, ಭಾಷೆಯಲ್ಲಿ ರೂಪುಗೊಳ್ಳುವ ಕವಿತೆಯ ಮೂಲಕ ಕಟ್ಟಿಕೊಳ್ಳುವುದು ಅನಿವಾರ್ಯವಾಗುತ್ತದೆ. ಕವಿತೆಯಿಂದ ಕವಿತೆಗೆ ಭಾಷೆ ಯಲ್ಲಿಯ ಕುಶಲಕರ್ಮ ಬದಲಾಗುತ್ತದೆ.

`ಭಾವ ' ಎಂಬ ಶಬ್ದವನ್ನು ಯಾವ ಅರ್ಥದಲ್ಲಿ ಇಲ್ಲಿ ಬಳಸಲಾಗುತ್ತಿದೆ ? ಈ ಪ್ರಶ್ನೆ ಬಹಳ ಮುಖ್ಯವಾದದ್ದು. ರಸದಲ್ಲಿ ಪರಿವರ್ತನೆಗೊಳ್ಳುವ ಸ್ಥಾಯಿ ಸಂಚಾರಿ ಭಾವಗಳೇ ? ಅಥವಾ ಇಂಗ್ಲಿಷ್ feeling ಅಥವಾ emotion ಗೆ ಪ್ರತಿಯಾಗಿರುವ ಸರಳವಾದ ಭಾವವೇ? ಬೇಂದ್ರೆ ಯವರಿಗೆ `ಭಾವ ' ಎಂದರೆ ಕವಿಯ ಮಾನಸ ಭೂಮಿಯಲ್ಲಿ ಮೂಡಿದ ಸತ್ಯದ ಪ್ರತಿಮೆ, ಅಸ್ತಿತ್ವದ ಅರಿವಿನ ಅನುಭವವೇದ್ಯವಾದ ರೂಪ. `ಭಾವ' ಎಂಬ ಶಬ್ದ ಹೊಸ ಕವಿಗಳಿಗೆ ಬೇರೆ ಬೇರೆ ಅರ್ಥಗಳನ್ನು ಸ್ಫುರಿಸಿದ್ದು ಮಹತ್ವದ ಮಾತಾಗಿದೆ. ಈ ಹೊಸ ಯುಗದಲ್ಲಿ ಕಣ್ಣು ಬಿಟ್ಟ ಕವಿಗಳಿಗೆ ಸುತ್ತಲಿನ ಜಗತ್ತು ಹೊಸದಾಗಿ ಕಂಡಿತು. ಕವಿತೆಯ ವಸ್ತು ಹಳೆಯ ಕಥೆಯೇ ಆಗಬೇಕಿಲ್ಲ ಎಂಬ ಮಾತು ಮನದಟ್ಟಾದ ಮೇಲೆ ಬಿಡುಗಡೆಯ ಸಂಭ್ರಮದಲ್ಲಿ ಅವರು ತಮಗೆ ಸರಿ

ತೋರಿದಂತೆ ಪ್ರಯೋಗನಿರತರಾದರು. ಕುವೆಂಪು ಹೀರೆಯ ಹೂವಿನ ಬಗ್ಗೆ ಕವಿತೆ ಬರೆದರು. ಅದು ಕೇವಲ ವರ್ಣನಾತ್ಮಕವಾದ ಕವಿತೆಯಲ್ಲ, ಬಂಡುಗಾರಿಕೆಯ ಸಂಕೇತವೂ ಆಗಿದೆ. ಹೀರೆಯ ಹೂವಿನ ಬಗ್ಗೆ ಕವಿತೆ ಬರೆದದ್ದರಿಂದ ಕಾವ್ಯ ಇಲ್ಲಿಯವರೆಗೆ ನೋಡದಿದ್ದ ಜಗತ್ತಿನ ಒಂದು ಭಾಗದ ಮೇಲೆ ಬೆಳಕು ಬಿದ್ದಂತಾಯಿತು. ಬೇಂದ್ರೆಯವರ ಒಂದು ಕವಿತೆಯಲ್ಲಿಯ ಈ ನುಡಿಯನ್ನು ನೋಡಬಹುದು.

ಹಾಳು ಬೀಳು ಪಡವು ಬಂಜೆ
ಹಕ್ಕಲೊಕ್ಕಲೆಲ್ಲವೂ
ವ್ಯಾಪ್ತವಾಯ್ತು ಹೂವ ಹೂವ
ರಾಸಲೀಲೆಗೆಲ್ಲವೂ. (ಶ್ರಾವಣದ ವೈಭವ)

ಮೊದಲಿನ ಎರಡು ಸಾಲುಗಳಲ್ಲಿ `ಹಾಳು' ಎಂಬ ಶಬ್ದವನ್ನು ಬಿಟ್ಟರೆ ಉಳಿದೆಲ್ಲ ಶಬ್ದಗಳೂ ಹೊಸವು. ಪ್ರತಿಯೊಂದು ಶಬ್ದ ಊಷರ ಭೂಮಿಯ ಅನೇಕ ಪ್ರಕಾರಗಳನ್ನು ಗುರುತಿಸಿ ಹೇಳುತ್ತವೆ. ಇಲ್ಲಿ ನಿರೂಪಿತವಾಗಿರುವ ವಸ್ತುವೆಂದರೆ ಊಷರವಿದ್ದದ್ದು ಉರ್ವರವಾಗುವದು. ಪಡಬಿದ್ದ ನೆಲದಲ್ಲಿ ಶ್ರಾವಣದ ಮಳೆಯ ಮಾಂತ್ರಿಕ ಸ್ಪರ್ಶದಿಂದ ಹುಲ್ಲು ಹುಟ್ಟಿ ಹೂವಾಗುವದು. ಇದು ಕೇವಲ ಶ್ರಾವಣದ ಒಂದು ವಾಸ್ತವ ವರ್ಣನೆಯೆಂದು ತೋರುವದಿಲ್ಲ. ಸೃಜನಶಕ್ತಿಯ ಸ್ವಭಾವ ಮತ್ತು ಸ್ವರೂಪಗಳನ್ನು ಕುರಿತು ಈ ಕವಿತೆ ಚಿಂತಿಸುತ್ತದೆ. ಶ್ರಾವಣದ ಮಳೆ ನೆಲವನ್ನು ಫಲವತ್ತಾಗಿ ಮಾಡುತ್ತದೆ. ಈ ಪ್ರಕ್ರಿಯೆಯ ವಿವರಗಳು ಕಣ್ಣಿಗೆ ಕಾಣುವದಿಲ್ಲ. ಬೇಸಿಗೆಯ ಬಿಸಿಲಿನಲ್ಲಿ ಸುಟ್ಟು ಹೋಗಿದ್ದ ಬಂಜೆ ನೆಲದಲ್ಲಿ ಶ್ರಾವಣದ ಮಳೆಯಿಂದಾಗಿ ಹೂವುಗಳ ರಾಸಲೀಲೆ ನಡೆಯುತ್ತದೆ. ಈ ಸಂಗತಿಯ ದೃಶ್ಯ ವಿವರಗಳ ಹಿಂದೆ ಅದೃಶ್ಯ ಶಕ್ತಿಯೊಂದು ಕೆಲಸ ಮಾಡುತ್ತಿದೆ. ಬೀಳು, ಪಡ, ಹಕ್ಕಲು ಮೊದಲಾದ ಶಬ್ದಗಳು ಹೀಗೆಯೇ ಕಾವ್ಯದಲ್ಲಿ ಪ್ರವೇಶ ಮಾಡಿ ತಮ್ಮ ರಾಸಲೀಲೆಯನ್ನು ನಡೆಸುತ್ತವೆ. ಶ್ರಾವಣ ಕಳೆದ ಮೇಲೆ ಈ ಹೂವುಗಳು ಏನಾಗುತ್ತವೆ ? ಅದರ ಗೊಡವೆ ಈ ಕವಿತೆಗೆ ಇಲ್ಲ. ಪ್ರಾಕೃತಿಕ ಸೃಷ್ಟಿಯಲ್ಲಿಯಂತೆ ಸಾಹಿತ್ಯದಲ್ಲಿ ಕಂಡು ಮರೆಯಾಗುವ ಅನೇಕ ಸಂಗತಿಗಳಿವೆ. ಉಳಿಯಬೇಕಾದದ್ದು ಉಳಿಯುತ್ತದೆ, ಉಳಿದದ್ದು ಅಳಿದುಹೋಗುತ್ತದೆ. ಶ್ರಾವಣದ ಮಂತ್ರಶಕ್ತಿಯನ್ನು ವಶಪಡಿಸಿಕೊಳ್ಳುವದು ಮುಖ್ಯವಾಗಿದೆ.

ಸೃಜನಶಕ್ತಿಯನ್ನು ಗುರುತಿಸಿದ ಮೇಲೆ ಅದರ ಪ್ರಭಾವ ನಮ್ಮ ಕವಿಗಳ ಮೇಲೆ ಎಷ್ಟು ಆಯಿತೆಂದರೆ ಕಾವ್ಯದ ನೈಪುಣ್ಯ ಅಷ್ಟೊಂದಾಗಿ ಕಣ್ಣಿಗೆ ಕಾಣಲಿಲ್ಲ. ಶ್ರಾವಣದ ಮಳೆಯಿಂದ ನೆಲ ಫಲವತ್ತಾಗುವ ಪ್ರಕಿಯೆಗೆ ಯಾವ ನೈಪುಣ್ಯವೂ ಬೇಕಾಗಿಲ್ಲ. ಬೇಂದ್ರೆಯವರ ಒಂದು ಕವಿತೆಯಲ್ಲಿಯ ಈ ಸಾಲುಗಳು ಈ ದೃಷ್ಟಿಯಿಂದ ಮನನೀಯವಾಗಿವೆ. `ಬಿತ್ತಿದರೆ ಬಿತ್ತುವದು ಮುಕ್ಕು ಚಿಕ್ಕೆಯ ಕಾಳು । ಮುತ್ತು ರತುನವ ಬಿತ್ತಿ ಮಾಡದಿರು ಹೊಲ ಹಾಳು. ಚುಕ್ಕೆಗಳ ಕಾಳನ್ನು ಬಿತ್ತ ಬೇಕೇ ಹೊರತು ಮುತ್ತುರತ್ನಗಳನ್ನಲ್ಲ. ಚಿಕ್ಕೆಗಳ ಕಾಳನ್ನು ಬಿತ್ತುವದೆಂದರೇನು ? ಕಾವ್ಯ ಕೃಷಿ ಸಾಮಾನ್ಯವಾದದ್ದಲ್ಲ. ಸಾಮಾನ್ಯವಾದ ಭಾಷೆಯಲ್ಲಿ ಅಸಾಮಾನ್ಯವಾದ ಅರ್ಥವನ್ನು ಒಡಮೂಡಿಸುವದು ಹೊಸ ಕವಿತೆಯ ಆಕಾಂಕ್ಷೆಯಾಗಿತ್ತು. ಅನುಭಾವದ ಅಭಿವ್ಯಕ್ತಿ ನವೋದಯ ಕಾವ್ಯದ ಒಂದು ಅದಮ್ಯವಾದ ಹಂಬಲವಾಗಿತ್ತು. ಭಾವಗೀತದ ಸ್ವರೂಪ ಅನುಭಾವದ ಅಭಿವ್ಯಕ್ತಿಗಾಗಿ ಇಂಬು ಕೊಡುವ ಸ್ವರೂಪವಾಗಿದೆ. ಸೃಜನಶಕ್ತಿಯ ಸ್ವರೂಪ ಕೂಡ ಅನುಭಾವದಂತೆ ಆಧ್ಯಾತ್ಮಿಕವಾಗಿತ್ತು. ಆದ್ದರಿಂದ ಅನುಭಾವದ ಕಾವ್ಯವನ್ನು ಮತ್ತು ಕಾವ್ಯದ ಅನುಭಾವವನ್ನು ಕೂಡಿಯೇ ನವೋದಯ ಕಾಲದ ಭಾವಗೀತ ಸೂರೆ ಮಾಡತೊಡಗಿತು. ಈ ಕಾಲದ ಅರವಿಂದರು

ಮತ್ತು ರವೀಂದ್ರನಾಥರ ಪ್ರಭಾವ ನಮ್ಮ ಕವಿಗಳ ಮೇಲೆ ಬಿದ್ದದ್ದರ ರಹಸ್ಯ ಕೂಡ ಈ ಸಂಗತಿಯಿಂದ ಗೊತ್ತಾಗುತ್ತದೆ.

ಹೊಸ ಭಾವಗೀತಗಳಲ್ಲಿ ಬಹಳಷ್ಟು ನಿಸರ್ಗದ ಚಲುವನ್ನು ಕುರಿತು ಬರೆದವುಗಳಾಗಿವೆ. ಹಳೆಯ ಕಾವ್ಯಗಳಲ್ಲಿ ಕೂಡ ಪ್ರಕೃತಿ ವರ್ಣನೆ ಬೇಕಾದಷ್ಟಿತ್ತು. ಆದರೆ ಪ್ರಕೃತಿಯ ಚಲುವು ಹಳೆಯ ಕಾವ್ಯಗಳಲ್ಲಿ ಉದ್ದೀಪನವಾಗಿ ಬರುತ್ತಿತ್ತೇ ಹೊರತು ಆಲಂಬನವಾಗಿ ಅಲ್ಲ. ಹಳೆಯ ಕಾವ್ಯಗಳಲ್ಲಿಯ ಋತುವರ್ಣನೆ ಮನುಷ್ಯರ ಜೀವನಕ್ಕೆ ಹಿನ್ನೆಲೆಯಾಗಿ ಮಾತ್ರ ಬರುತ್ತಿತ್ತು. ಕಾಳಿದಾಸನ `ಮೇಘ ಸಂದೇಶ' ದಲ್ಲಿಯ ಪ್ರಕೃತಿ ವರ್ಣನೆಯ ವಿವರಗಳು ಇಂದಿಗೂ ಹೊಸದಾಗಿವೆ. ಆದರೆ ಪ್ರಕೃತಿಗೆ ಒಂದು ವ್ಯಕ್ತಿತ್ವ ಬಂದದ್ದು ಹೊಸ ಕವಿತೆಯಲ್ಲಿಯೇ. ಕುವೆಂಪುರವರ `ತೇನೆ ಹಕ್ಕಿ' ಅಥವಾ ಬೇಂದ್ರೆಯವರ `ಬೆಳಗು' ಇಂಥ ಕವಿತೆಗಳಿಗೆ ಸಂದರ್ಭವೆಂದರೆ ಆ ಕವಿತೆಗಳ ವಸ್ತುವೇ. ತೇನೆ ಹಕ್ಕಿಯ ಬಗ್ಗೆ ಆ ಕವಿತೆ ತಿಳುವಳಿಕೆಯನ್ನು ನೀಡುವದಿಲ್ಲ, ಬದಲಾಗಿ ಓದುಗನಲ್ಲಿಯ ತೇನೆ ಹಕ್ಕಿಯ ಬಗೆಗಿನ ತಿಳುವಳಿಕೆ ಆ ಕವಿತೆಯನ್ನು ತಿಳಿದುಕೊಳ್ಳಲು ಸಹಾಯಮಾಡುತ್ತದೆ. ಕವಿತೆಯಲ್ಲಿಯ ತೇನೆ ಹಕ್ಕಿಯೂ ಹೌದು, ಕವಿತೆ ಉಪಯೋಗಿಸುವ ರೂಪಕವೂ ಹೌದು. ಅದು ಕೇವಲ ರೂಪಕವಾದರೆ ಕವಿತೆಗೆ ಒಂದು ಒಗಟಿನ ಸ್ವರೂಪ ಬರುತ್ತದೆ. ತೇನೆ ಹಕ್ಕಿಯ ಜೊತೆಗೆ ಕವಿಗೆ ಇರುವ ಆತ್ಮೀಯತೆ ಕಾವ್ಯ ಸಂವೇದನೆಯ ಇತಿಹಾಸದ ಬೇರೊಂದು ಕತೆಯನ್ನು ಹೇಳುತ್ತದೆ.

`ತೇನೆ ಹಕ್ಕಿ' ಎಂಬ ಕವಿತೆ ಸಂಬೋಧನೆಯ ರೂಪದಲ್ಲಿದೆ. ತನ್ನ ಮಾತು ಹಕ್ಕಿಗೆ ತಿಳಿದಿದೆಯೋ ಇಲ್ಲವೋ ಎಂಬುದನ್ನು ಲೆಕ್ಕಿಸದೆ ಕವಿತೆ ಹಕ್ಕಿಯ ಜೊತೆಗೆ ಮಾತಾಡುತ್ತದೆ. ಹಕ್ಕಿಯ ಚೇಷ್ಟೆಗಳು ಕವಿಗೆ ಒಂದು ತಾತ್ವಿಕ ದೃಷ್ಟಿಯನ್ನು ಕಲಿಸಬೇಕೆಂಬ ನಿರೀಕ್ಷೆ ಕವಿತೆಯಲ್ಲಿದೆ. `ಬಿಸಿಲು ತಂಪುಗಳನು ಮೀರಿ । ಸಮತೆಯಿಂದ ನಡೆವುದಂ ಕಲಿಸು ನನಗೆ ಮೊದಲು ಕೊನೆಗೆ । ನೆಲ ಬಾನ್ಗಳ ಪಡೆವುದಂ ।' ಪ್ರವೃತ್ತಿ ಮತ್ತು ನಿವೃತ್ತಿ ಮಾರ್ಗಗಳ ಅಪೂರ್ಣತೆಯನ್ನು ಕಂಡು ಪ್ರವೃತ್ತಿಯನ್ನೇ ನಿವೃತ್ತಿಯನ್ನಾಗಿ ಮಾರ್ಪಡಿಸುವ ಒಂದು ಹೊಸ ಉಪಾಯದ ವರ್ಣನೆ ಇಲ್ಲಿದೆ. ತೇನೆ ಹಕ್ಕಿಗೂ ಇಂಥ ತಾತ್ವಿಕತೆಗೂ ಇರುವ ಸಂಬಂಧ ಉಪಮಾನ ಮತ್ತು ಉಪಮೇಯಗಳ ಸಂಬಂಧ. ಪ್ರತೀಕಾತ್ಮಕತೆಯಲ್ಲಿಯ ಸಂಬಂಧ ಕೂಡ ಮೂಲತಃ ಇದೇ ಸಂಬಂಧವಾಗಿದೆ. ಕವಿತೆಯ ಪ್ರಯತ್ನ ವೆಂದರೆ ಹಕ್ಕಿ ಪ್ರತೀಕವಾಗುವ ಹೊಂಚಿನಲ್ಲಿದ್ದಾಗಲೂ ತನ್ನ ವಾಸ್ತವ ರೂಪವನ್ನು ಕಳೆದುಕೊಳ್ಳ ಬಾರದು. ಈ ತಾತ್ವಿಕತೆಯನ್ನು ಮೀರಿ ಕೂಡ ತೇನೆ ಹಕ್ಕಿ ಹಾಡಬೇಕು. ಆಗ ಮಾತ್ರ ಅದು ಕವಿತೆಯಲ್ಲಿ ಉದ್ದೀಪನವಾಗದೆ ಆಲಂಬನವಾಗುತ್ತದೆ. ಆಲಂಬನವಾಗುವದರಿಂದ ಅದು ತಾನೇ ಅರ್ಥವಾಹಕವೂ ಆಗುತ್ತದೆ. ಹೊಸ ಕವಿತೆಯ ಸೃಜನಶಕ್ತಿ ಪ್ರಕೃತಿಯನ್ನು ಅರ್ಥ ವಾಹಕವನ್ನಾಗಿ ಮಾಡಿಕೊಂಡು ಕವಿತೆಯ ಮೂಲಕವಾಗಿ ತನ್ನ ಕಾರ್ಯವನ್ನು ನಿರ್ವಹಿಸುತ್ತದೆ. ಪ್ರಕೃತಿಯ ಬಗ್ಗೆ ಹೊಸದಾದ ಕಾವ್ಯಮಯವಾದ ತಿಳುವಳಿಕೆಯನ್ನು ನೀಡುತ್ತದೆ.

ನವೋದಯ ಕವಿಗಳ ಪ್ರಕೃತಿಪ್ರೇಮ ಇಂಗ್ಲೀಷ ರೊಮ್ಯಾಂಟಿಕ್ ಕಾವ್ಯದಿಂದ ನಮಗೆ ಬಂದದ್ದು ಎನ್ನುವದರಲ್ಲಿ ಸಂಶಯವಿಲ್ಲ. ನಮ್ಮ ದೇಶದ ಕವಿಗಳ ಮೇಲೆ ವರ್ಡ್ಸ್‌ವರ್ಥ್‌ನ ಪ್ರಭಾವ ಉಳಿದ ಕವಿಗಳಿಗಿಂತ ಹೆಚ್ಚಾಗಿರುವದು ಸುಳ್ಳಲ್ಲ. ಆದರೂ ಇಲ್ಲಿ ಒಂದು ಮಾತನ್ನು ಹೇಳಬೇಕು. ಇಂಗ್ಲೀಷ ರೊಮ್ಯಾಂಟಿಕ್ ಕಾವ್ಯದಲ್ಲಿಯಂತೆ ಪ್ರಕೃತಿಯನ್ನು ಒಂದು ಪುಸ್ತಕವನ್ನಾಗಿ ನಮ್ಮ ಕವಿಗಳು ಮಾರ್ಪಡಿಸಲಿಲ್ಲ. ಪುಸ್ತಕವನ್ನೋದಿದಂತೆ ಪ್ರಕೃತಿಯನ್ನು ಓದಲು ನಮ್ಮ ಕವಿಗಳು ಮನಸ್ಸು ಮಾಡಲಿಲ್ಲ. ಹುಡುಕಿದರೆ ' ದೇವರು ರುಜು ಮಾಡಿದನು ' `` ಕವಿ ರಸವಶನಾಗುತೆ ಅದ ನೋಡಿದನು'

ಎಂಬಂಥ ಕಾವ್ಯದ ಪಂಕ್ತಿಗಳು ದೊರೆಯಬಹುದಾದರೂ ಪ್ರಕೃತಿಯೆಂದರೆ ತಿಳುವಳಿಕೆಯನ್ನು ನೀಡುವ ಪುಸ್ತಕವೆಂದು ಕವಿಗಳು ನಂಬಿದಂತಿಲ್ಲ. ಪ್ರಕೃತಿಯೆಂದರೆ ಚಲುವಿನ ಪ್ರತಿಮೆಗಳ ಆಗರ ಅಷ್ಟೇ. ಕುವೆಂಪು ಅವರಂಥವರು ಪ್ರಕೃತಿಯ ಪ್ರತಿಮೆಗಳಾದ ಮಳೆಬಿಲ್ಲು, ಕೋಗಿಲೆ, ಮೋಡಗಳಿಂದ ನೀತಿಪಾಠಗಳನ್ನು ವ್ಯಂಜಿಸುವಂತೆ ಮಾಡಿದರೂ ಅದು ಅಷ್ಟೊಂದು ಆಳವಾಗಿ, ಜೀವನದ ದೃಷ್ಟಿಕೋನದಲ್ಲಿ ಆಮೂಲಾಗ್ರವಾಗಿ ಬದಲಾವಣೆ ಮಾಡಿದಂತಿಲ್ಲ.

ಭಾವಗೀತದ ಪ್ರಕಾರ ರೂಢವಾದಂದಿನಿಂದ ನಿಜವಾದ ಕಾವ್ಯವೆಂದರೇನೆಂಬ ಪ್ರಶ್ನೆ ಹುಟ್ಟಿಕೊಂಡಿತು. ಕವಿತೆಯ ಬಾಹ್ಯರೂಪ ಬದಲಾದ ಮೇಲೆ ಇಂಥ ಪ್ರಶ್ನೆಗಳು ಏಳುವದು ಸಹಜವಾಗಿದೆ. ತಾಳ್ಮೆಯಿಂದ ಈ ಪ್ರಶ್ನೆಗೆ ಉತ್ತರವನ್ನು ಹೇಳಬಹುದು. ಆದರೆ ಕಾವ್ಯವೇ ಕಾವ್ಯದ ಅನ್ವೇಷಣೆಯಲ್ಲಿ ತೊಡಗಿರುವದು ಹೊಸ ಕಾವ್ಯದ ಒಂದು ಹವ್ಯಾಸವಾಗಿದೆ. ಹಳೆಯ ಕಾವ್ಯದಿಂದ ಹೊಸ ಕಾವ್ಯ ಭಿನ್ನವಾಗಿರುವ ಸಂಗತಿ, ಕಾವ್ಯದ ಸ್ವಪ್ರಜ್ಞೆಯಲ್ಲಿ ಇಳಿದಂತಾಗಿದೆ. ಅಲ್ಲದೆ ಕವಿ ಮತ್ತು ಕಾವ್ಯ ಇವರ ನಡುವಿನ ಸಂಬಂಧ, ಸಮಕಾಲೀನ ಜಗತ್ತಿನಲ್ಲಿ ಕಾವ್ಯದ ಪ್ರಯೋಜನ, ಕಾವ್ಯದ ಸ್ವರೂಪ, ಕಾವ್ಯಭಾಷೆ ಮೊದಲಾದವುಗಳ ಬಗ್ಗೆ ಕಾವ್ಯ ಮತ್ತು ವಿಮರ್ಶೆ ಕೂಡಿಕೊಂಡು ಹೊಸದಾಗಿ ಚರ್ಚಿಸಲು ಪ್ರಾರಂಭಿಸಿದವು. ವಿಮರ್ಶೆಯಲ್ಲಿ ಇಂಥ ಪ್ರಶ್ನೆಗಳನ್ನು ಕೇಳಿ ಅವುಗಳಿಗೆ ತಮಗೆ ಸೂಕ್ತವಾಗಿ ಕಾಣುವ ಪರಿಹಾರವನ್ನು ಸೂಚಿಸುವದು ಸಾಮಾನ್ಯವಾಗಿದೆ. ಕಾಲಕಾಲಕ್ಕೆ ಕಾವ್ಯಶಾಸ್ತ್ರ ಹೊಸಹೊಸದಾಗಿ ನಿರ್ಮಾಣವಾಗಲೇಬೇಕು. ಆದರೆ ಹೊಸಕವಿತೆಯಲ್ಲಿಯ ಒಂದು ವಿದ್ಯಮಾನವೆಂದರೆ ಕಾವ್ಯವೇ ಕಾವ್ಯದ ವಸ್ತುವಾಗುವದು. ಬೇಂದ್ರೆಯವರ ಎಷ್ಟೋ ಕವಿತೆಗಳು ಕಾವ್ಯದ ಹುಟ್ಟು, ಬೆಳವಣಿಗೆಯ ಬಗ್ಗೆ, ಕಾವ್ಯ ಪ್ರಯೋಜನದ ಬಗ್ಗೆ, ಕಾವ್ಯದ ಶಕ್ತಿಯ ಬಗ್ಗೆ ಇವೆ. ನವ್ಯ ಕವಿಗಳು ಕಾವ್ಯದ ಸ್ವರೂಪ ಬದಲಾದದ್ದರ ಬಗ್ಗೆ, ಹಳೆಯ ಕಾವ್ಯದ ಪ್ರಭಾವ ಕುಗ್ಗಿದ್ದರ ಬಗ್ಗೆ, ಕಾವ್ಯದ ಧ್ಯೇಯ ಧೋರಣೆಗಳು ಭಿನ್ನವಾದದ್ದರ ಬಗ್ಗೆ ಬರೆದರು.

`ಇದು ಮಂತ್ರ ' ಅರ್ಥಕೊಗ್ಗದ ಶಬ್ದಗಳ ಪವಣಿಸುವ ತಂತ್ರ, ' ಬೇಂದ್ರೆಯವರ `ಗಾರುಡಿಗ' ಎಂಬ ಕವಿತೆಯ ಮೊದಲ ಸಾಲು ಇದಾಗಿದೆ. ಕವಿತೆ ಎಂದರೆ ಏನು ಎಂದು ಕೇಳಿದ ಪ್ರಶ್ನೆಗೆ ಉತ್ತರ ಇಲ್ಲಿ ಇದೆ. ಕವಿತೆ ಏನು ಹೇಳುತ್ತಿದೆ ಎನ್ನುವದಕ್ಕಿಂತ ಹೇಗೆ ಹೇಳುತ್ತಿದೆ ಎಂಬ ಕವಿತೆಯ ಧೋರಣೆ ಮಹತ್ವದ್ದಾಗಿದೆ. ಈ ಪ್ರಶ್ನೆಯನ್ನು ಯಾರಾದರೂ ಕೇಳಿದ್ದರೆ ಕವಿ ಅದಕ್ಕೆ ಉತ್ತರವೀಯುತ್ತಿದ್ದರೆ ಅದು ಒಂದು ನಿರ್ದಿಷ್ಟ ಪ್ರಶ್ನೆಗೆ ನಿರ್ದಿಷ್ಟವಾದ ಉತ್ತರವಾಗುತ್ತದೆ. ಇದು ಅಂಥ ಉತ್ತರವಲ್ಲ. ಕೇಳಿದ ಪ್ರಶ್ನೆ ನಿರಾಕಾರವಾಗಿ ಆಕ್ರಮಿಸಲು ಬಂದಾಗ ತನ್ನ ಅಸ್ತಿತ್ವವನ್ನು ದೃಢಪಡಿಸಲು ಹೇಳಿದಂತಿದೆ. ಸಾವು ಬದುಕಿಗೆ ಕೇಳಿದಂತಿರುವ ಪ್ರಶ್ನೆ ಇದಾಗಿದೆ. ಅದಕ್ಕಾಗಿ ಕವಿತೆ ತನ್ನ ಇರವನ್ನು ತೋರ್ಪಡಿಸಲು ಸದ್ದುಮಾಡಬೇಕು, ತನ್ನ ಪ್ರಯೋಜನವನ್ನು ಕೂಗಿ ಹೇಳಬೇಕು. `ಅರ್ಥಕೊಗ್ಗದ ಶಬ್ದಗಳ ಪವಣಿಸುವ ತಂತ್ರ' ಈ ತಾಂತ್ರಿಕತೆ ಕಾವ್ಯದಲ್ಲಿ ಅರ್ಥದ ಸ್ಥಾನವನ್ನು ಸೂಚಿಸುತ್ತದೇನೋ ನಿಜ. ಆದರೆ ಅದಕ್ಕಿಂತ ಹೆಚ್ಚಾಗಿ ಶಬ್ದಾರ್ಥಗಳ ನಡುವಿನ ಸಂಬಂಧದ ಇಂದಿನ ಪರಿಸ್ಥಿತಿಯನ್ನೂ ಸೂಚಿಸುತ್ತಿದೆ. ಪ್ರತಿಯೊಬ್ಬ ಕವಿಯೂ ಈ ಪರಿಸ್ಥಿತಿಯ ಆಹ್ವಾನವನ್ನು ಸ್ವೀಕರಿಸದೆ ವಿಧಿಯಿಲ್ಲ.

ಭಾವಗೀತ ಚಿಕ್ಕದಾದರೂ ಇಂಥ ಮಹತ್ವದ ಪ್ರಶ್ನೆಗಳನ್ನು ಎದುರಿಸಲು ಸಿದ್ಧವಾಗಿದೆ.

●

ನವ್ಯಕಾವ್ಯ : ಹೊಸ ಧೋರಣೆ

- ಬುದ್ದಣ್ಣ ಹಿಂಗಮಿರೆ

೧೯೫೦ ರಷ್ಟು ಹಿಂದೆಯೆ ಡಾ. ಗೋಕಾಕ್ ಮುಂಬಯಿ ಸಾಹಿತ್ಯ ಸಮ್ಮೇಳನ ಭಾಷಣದಲ್ಲಿ ನವೋದಯಕಾವ್ಯ ಬದಲಾಗಬೇಕೆಂದು, ನವ್ಯಕಾವ್ಯಮಾರ್ಗದ ಅಗತ್ಯವಿದೆಯೆಂದು ಒತ್ತಿ ಹೇಳಿದ್ದರು. ಇಂಗ್ಲಿಷನಲ್ಲಿಯ ಹಾಪಕಿನ್ಸ್, ಎಲಿಯಟ್, ಏಟ್ಸ್, ಡಿಲನ್ ಥಾಮಸ್ ಅವರ ನವ್ಯಕಾವ್ಯ ಪ್ರಯೋಗಗಳನ್ನು ಗಮನದಲ್ಲಿಟ್ಟುಕೊಂಡು ಕೆಲವು ಪದ್ಯಗಳನ್ನು ಮಾದರಿಯಾಗಿ ಅನುವಾದಿಸಿದರು. ನವೋದಯ ಕಾವ್ಯವನ್ನು ಬಹುವಾಗಿ ಮೆಚ್ಚಿಕೊಂಡಿದ್ದ ಅವರು ಸ್ವತಃ ನವ್ಯದ ದಿಕ್ಕಿನಲ್ಲಿ ಕಾವ್ಯರಚನೆಯನ್ನು ಆರಂಭಿಸಿದರು. ನವ್ಯತೆಯ ಕುರಿತು ಪಾಶ್ಚಾತ್ಯ ವಿಚಾರಧಾರೆಯನ್ನು ಕ್ರೋಡೀಕರಿಸಿ ಲೇಖನಗಳ ಮುಖಾಂತರ ನವ್ಯಕಾವ್ಯದ ಅಗತ್ಯತೆಯನ್ನು ಎತ್ತಿ ತೋರಿ ಕಾವ್ಯ ಬರೆಯುವವರಲ್ಲಿ ನವ್ಯಾಭಿರುಚಿಯನ್ನು ಕುದುರಿಸಿದರು. ರೂಪ, ವಿಧಾನ, ಛಂದೋಬಂಧದಲ್ಲಿ ಅಷ್ಟೆ ಅಲ್ಲದೆ ಧೋರಣೆಯಲ್ಲಿಯೂ ಕಾವ್ಯ ಭಿನ್ನರೂಪವನ್ನು ಪಡೆಯುವುದು ಅಗತ್ಯವೆಂದು ಹೇಳಿದರು. ನವೋದಯ ಕಾವ್ಯ ಒಂದು ಹಂತವನ್ನು ತಲ್ಪಿದ್ದನ್ನು ಗಮನಿಸಿ `ಒಂದು ಪರಂಪರೆಯು ಪೂರ್ಣವಾದಾಗ ಇನ್ನೊಂದು ಹೊಳಹನ್ನು ಹಾಕದೆ ಉಕ್ತಿಗೆ ಸಮಗ್ರತೆಯೂ ಕಾಂತಿಯೂ ಬರುವುದು ಕಠಿಣ ' ಎನ್ನುವ ಅವರ ಮಾತು ಅರ್ಥಪೂರ್ಣವಾಗಿದ್ದು, ನವ್ಯವನ್ನು ಆಹ್ವಾನಿಸುವ ಮುಕ್ತ ಮನೋಧರ್ಮವಿರುವುದನ್ನು ಗುರುತಿಸಬಹುದು, ಎನ್ನುವುದನ್ನು ಗುರ್ತಿಸಬಹುದು.

`ಸಮುದ್ರಗೀತಗಳು ' ವಿನಾಯಕರ ಬದಲಾದ ದೃಷ್ಟಿಯನ್ನು ಸೂಚಿಸುವುದರೊಂದಿಗೆ, ಅದೊಂದು ನವೀನ ಅನುಭವವಾಗಿ ಕಾವ್ಯದ ತಂತ್ರ, ವಿಧಾನ, ಧೋರಣೆಯಲ್ಲಿಯೂ ಬದಲಾವಣೆ ಕಾಣಿಸಿಕೊಂಡಿದ್ದು ಗಮನಾರ್ಹ. ಸಮುದ್ರಗೀತಗಳಿಂದ ಮುಂದಿನವರಿಗೆ ಒಂದು ಮುಕ್ತಮಾರ್ಗ ತೆರೆದಂತಾಯಿತು. ಪದ್ಯ ತನ್ನ ಹಳೆ ಹೆಜ್ಜೆಗಳನ್ನು ಬಿಟ್ಟು ಗದ್ಯದತ್ತ ವಾಲುತ್ತ ಸ್ವಚ್ಛಂದ ಹಾಗೂ ಸಂಕೀರ್ಣವಾಗುತ್ತ, ಸಮಕಾಲೀನ ಬದುಕಿನ ರೂಪಕ, ಸಂಕೇತ, ಪ್ರತಿಮೆಗಳಿಂದಾಗಿ ಕಾವ್ಯದ ಬಣ್ಣ ಬದಲಾಗಿ ಮಣ್ಣಿನ ಸತ್ವಕ್ಕೆ ಹೆಚ್ಚಿನ ಮಹತ್ವ ಪ್ರಾಪ್ತವಾಯಿತು. ಮಣ್ಣಿನ ಕುರಿತು ಬರೆಯ ಬೇಕೆಂದು ಬಾಯಿಬಿಟ್ಟುಹೇಳಲಿಲ್ಲವಾದರೂ ಅವರ ದೃಷ್ಟಿ ಸಮಕಾಲೀನ ಬದುಕಿನ ಅನುಭವಕ್ಕೆ ತಕ್ಕಷ್ಟು ಪ್ರಾಶಸ್ತ್ಯವಿತ್ತಿತ್ತು. ಪದ್ಯರಚನೆಯ ಮುಕ್ತವಾತಾವರಣ ಸೃಷ್ಟಿಗೆ ಸಂಬಂಧಿಸಿದ ಹಾಗೆ ಹಲವು ಹೊಸ ಅಂಶಗಳು ಬೆಳಕಿಗೆ ಬಂದವು. ಹಲವು ವರ್ಷಗಳಿಂದ ನವೋದಯ ಮಾರ್ಗದಲ್ಲಿ ಕೃಷಿ ಮಾಡುತ್ತ ಬಂದ ಕವಿಗಳು ನವ್ಯದ ಅರ್ಥಪೂರ್ಣತೆಯನ್ನು ಮನಗಂಡು, ಹೊಸ ಆಹ್ವಾನ ವನ್ನು ಸ್ವೀಕರಿಸಲು ಹಿಂದುಮುಂದು ನೋಡಲಿಲ್ಲ. ಕಣವಿ, ಶಿವರುದ್ರಪ್ಪ, ಎಕ್ಕುಂಡಿ ಮುಂತಾದವರು ಇದೇ ಮಾರ್ಗದಲ್ಲಿ ನಡೆದು, ಕಾವ್ಯಕೃಷಿಗೆ ತೊಡಗಿದರು. ಒಮ್ಮೆ ನವೋದಯ ಇನ್ನೊಮ್ಮೆ ನವ್ಯ ಹೀಗೆ ಎರಡೂ

ಮಾದರಿಯ ರಚನೆಗಳನ್ನು ಪ್ರಕಟಿಸುತ್ತ ಬಂದರು. ವಿನಾಯಕರಂತೆ ಗೋಪಾಲಕೃಷ್ಣ ಅಡಿಗರು `ನಡೆದು ಬಂದ ದಾರಿ' ಕಡೆಗೆ ಹೊರಳಿ ನೋಡಬಾರದೆಂದು ನಿರ್ಧರಿಸಿ ನವೋದಯ ಮಾರ್ಗದಿಂದ ಭಿನ್ನವೆನಿಸುವ, ಅದರಿಂದ ಪ್ರತ್ಯೇಕಿಸಿಕೊಳ್ಳಬೇಕೆನ್ನಿಸುವ ಕಾವ್ಯ ರಚಿಸತೊಡಗಿದರು.

ರೊಮ್ಯಾಂಟಿಕ್ ಕಾವ್ಯದ ಸ್ವರೂಪ ಬದಲಾಗಿ ನವ್ಯ ಕಾಲಿಟ್ಟಿತು. ಗೋಕಾಕರು ರೊಮ್ಯಾಂಟಿಕ್ ಕಾವ್ಯದಂತೆ ನವ್ಯದ ಬಗ್ಗೆಯೂ ತುಂಬ ಕಾಳಜಿಯನ್ನು ವಹಿಸಿದ್ದರು. ಭಾರತೀಯ ಸಂಸ್ಕೃತಿಯನ್ನೊಳಗೊಂಡು ಕಾವ್ಯ ಬರೆಯಬೇಕೆಂಬುದು ಅವರ ಇಚ್ಛೆಯಾಗಿತ್ತು. ಅವರು ನವ್ಯಕಾವ್ಯದ ಕುರಿತು ಮಾತನಾಡುತ್ತ ಬಂದದ್ದು ಅರ್ಥಪೂರ್ಣವಾಗಿವೆ. ನವ್ಯಕಾವ್ಯದ ಆವಿಷ್ಕಾರಕ್ಕೆ ಸಂಬಂಧಿಸಿದಂತೆ ಕೆಲವು ಮುಖ್ಯ ಅಂಶಗಳನ್ನು ಹೀಗೆ ಪಟ್ಟಿ ಮಾಡಬಹುದು.

(೧) ಸಮಕಾಲೀನ ಸಂದರ್ಭದ ಪ್ರಜ್ಞೆ ಹಾಗೂ ಕಾಳಜಿ.

(೨) ವೈಯಕ್ತಿಕ ಅನುಭವ ಸಂವೇದನೆ ಹಾಗೂ ಅಭಿವ್ಯಕ್ತಿ.

(೩) ಭಾಷೆಯೊಂದಿಗಿನ ಹೋರಾಟ, ಪ್ರಾಮಾಣಿಕ ಅನಿಸಿಕೆ.

(೪) ಸ್ವತಂತ್ರ, ಮುಕ್ತ ಅಭಿವ್ಯಕ್ತಿಗೆ ಸೂಕ್ತ ಲಯವನ್ನು ಗುರುತಿಸಿಕೊಳ್ಳುವುದು. ಅದನ್ನೇ ಆಡುಮಾತಿನ ಲಯವೆಂದು ಹೇಳಬಹುದು.

(೫) ಕಾವ್ಯಕ್ಕೆ ಮಣ್ಣಿನ ವಾಸನೆ ಹೊಡೆಯುವದು, ಎಂದರೆ ಆಕಾಶದ, ಪರಂಧಾಮದ ವಿಷಯಗಳನ್ನು ಬಿಟ್ಟುಕೊಟ್ಟು ನೆಲದ ಬದುಕನ್ನು ಯಥಾವತ್ತಾಗಿ ಅವರವರ ಭಾಷೆಯಲ್ಲಿಯೇ ಹೇಳುವುದು. ಅದರಿಂದ ಅವರವರ ಸಂಸ್ಕೃತಿ ವ್ಯಕ್ತವಾಗುವುದು.

(೬) ಪರಂಪರಾಗತ ಹಾಗೂ ಆಕರ್ಷಕ ಸಂದರ್ಭಗಳಿಂದ ಮುಕ್ತಗೊಂಡು ಬರೆಯುವುದು. ಪ್ರಗತಿಶೀಲ ಕಾವ್ಯದಂತೆ ಪ್ರಾಮಾಣಿಕ ಅಭಿವ್ಯಕ್ತಿಯನ್ನು ಸಾಧಿಸುವುದು. ವರ್ತಮಾನ ಬದುಕಿಗೆ ತಕ್ಕಂತೆ ಹೊಸ ಮೌಲ್ಯಗಳನ್ನು ಹುಡುಕುವುದು. ಸಮಕಾಲೀನ ಸಂದರ್ಭದ, ಬದುಕಿನ ಎಚ್ಚರದಿಂದ ಕಾವ್ಯ ರಚಿಸುವುದು.

ಈ ಕೆಲವು ಮಾತುಗಳು ನವ್ಯಕಾವ್ಯದ ಹೊಸ ಧೋರಣೆಯನ್ನು ನಿದರ್ಶಿಸುವಂಥವುಗಳು. ಕಾವ್ಯ ಹೊಸ ದಿಕ್ಕನ್ನು ಪಡೆಯುವುದು ಅಗತ್ಯವೆಂಬ ಎಚ್ಚರ ನವ್ಯಕವಿಗಳಲ್ಲಿ ಇರುವುದು ಅವಶ್ಯಕವಾಯಿತು. ಗೋಕಾಕ ಅವರ ಕಾವ್ಯ ಭಾರತೀಯ ಸಾಹಿತ್ಯ ಸಂಸ್ಕೃತಿ ಹಾಗೂ ತತ್ವಜ್ಞಾನಗಳ ಕ್ರೋಡೀಕರಣದ ಫಲವಾಗಿ ಇಂಗ್ಲೀಷಿನ ಡಬ್ಲ್ಯೂ. ಬಿ. ಈಟ್ಸ್ ಅವರ ಕಾವ್ಯದಂತೆ ಅರ್ಥಪೂರ್ಣವಾಗುತ್ತದೆ. ಯಾವುದೇ ಅಬ್ಬರ ಹಾಗೂ ಪ್ರಚಾರವಿಲ್ಲದ ಕಾವ್ಯ ಅವರವಾಗಿತ್ತು. `ತ್ರಿಶಂಕುವಿನ ಪ್ರಜ್ಞಾಪ್ರಭಾತ' ಮುಂಬರುವ `ಭಾರತ ಸಿಂಧುರಶ್ಮಿ' ಮಹಾಕಾವ್ಯದ ಸೂಚನೆಯನ್ನೊದಗಿಸಿದರೆ, `ಇಂದಿಲ್ಲ ನಾಳೆ' ಯಲ್ಲಿಯ ಮುಕ್ತ ಛಂದಸ್ಸು ಹಾಗೂ ಮುಕ್ತ ಸಮಾಜ ಸಂಸ್ಕೃತಿ ಅವರ ಸಂಕೀರ್ಣ ಅನುಭವವನ್ನು ಪ್ರತಿನಿಧಿಸುವಲ್ಲಿ ಸಫಲವಾಗುತ್ತವೆ.

ಹೊಸದೆಲ್ಲ ಹುಟ್ಟಿ ಬರಲಿ
ಬೇಡಯ್ಯ ಬಂಧಗಳ ಬಂದಿವಾಸ ;
ಸಾಕಯ್ಯ ಮೃತ್ಯುಗಳಾವರ್ತ
ನಿನ್ನ ಮಣಿತವಿರಲಿ ಸಮುದ್ರದ ಕುಣಿತದಂತೆ

ರವೀಂದ್ರನಾಥ ಟಾಗೋರ್ ಅವರ ಕಾವ್ಯದಲ್ಲಿರುವ ವಿಶಾಲ ಧೋರಣೆ ಗೋಕಾಕರ ಕಾವ್ಯದಲ್ಲಿದೆ. ಅಖಂಡ ಮಾನವೀಯತೆಯ ದೃಷ್ಟಿ ಅವರ ಕಾವ್ಯಧೋರಣೆಯನ್ನು ವಿಸ್ತಾರ ಗೊಳಿಸುತ್ತದೆ. ನವ್ಯಕಾವ್ಯದ ಹೊಸಭೂಮಿಯನ್ನು ಸಿದ್ಧಪಡಿಸುವಲ್ಲಿ, ಹದಗೊಳಿಸುವಲ್ಲಿ ಗೋಕಾಕರು ಯಶಸ್ವಿಯಾದರು. ಇದು ಯಾವ ಕವಿಗಳಿಗೂ ಸಾಧ್ಯವಾಗಿರಲಿಲ್ಲ. ಹೊಸ ದೃಷ್ಟಿ, ಹೊಸ ಧೋರಣೆ, ಹೊಸ ಕಾವ್ಯಸ್ವರೂಪವನ್ನು ಕನ್ನಡಕ್ಕೆ ಪ್ರಸ್ತುತಪಡಿಸುವಲ್ಲಿ ಗೋಕಾಕರು ಯಶಸ್ವಿಯಾಗಿದ್ದಾರೆ. ಅವರ ಕಾವ್ಯದ ಬೇರುಗಳು ಭೂಮಿಯಲ್ಲಿ ಬೇರೂರಿ ಇಡೀ ವಿಶ್ವವನ್ನೇ ವ್ಯಾಪಿಸುತ್ತವೆ. ಅವರದು ತಂತ್ರಪ್ರಧಾನ ಕಾವ್ಯವಲ್ಲ. ಭಾರತೀಯ ಸಂಸ್ಕೃತಿ ಹಾಗೂ ಮಾನವೀಯ ಮೌಲ್ಯಗಳ ಅಪಚ್ಛಾಯದಲ್ಲಿ ತೊಡಗಿ, ಮಹಾಕಾವ್ಯವನ್ನು ಸೃಷ್ಟಿಸಿ ಸಫಲವಾಗುತ್ತದೆ. ಎಂದೋ ಬರೆದ ಅವರ ದ್ಯಾವಾ ಪೃಥಿವೀ ಗೋಕಾಕರ ವಿಶಿಷ್ಟ ದೃಷ್ಟಿಯನ್ನು ಸಂಕೇತಿಸಿ, ನವ್ಯಕಾವ್ಯ ರಚಿಸುವವರಿಗೆ ಮಾರ್ಗದರ್ಶಿಯಾಗುತ್ತದೆ.

ಬೇಂದ್ರೆ, ಕುವೆಂಪು, ಗೋಕಾಕ್ ಮುಂತಾದವರ ಕಾವ್ಯರೀತಿಗಳನ್ನು ಕಂಡು ತಮ್ಮ ತನವನ್ನು ಕಾಯ್ದುಕೊಂಡು ಕಾವ್ಯ ಬರೆಯುತ್ತ ಬಂದ ಉತ್ತರ ಕರ್ನಾಟಕದ ಕವಿಗಳಲ್ಲಿ ಚನ್ನವೀರ ಕಣವಿ ಅವರು ಮುಖ್ಯರಾಗುತ್ತಾರೆ. ಅವರು ಹಲವು ಕವಿಗಳ ಕಾವ್ಯ ಬೆಳವಣಿಗೆಯನ್ನು ಗುರುತಿಸುತ್ತ ಬಂದಿದ್ದಾರೆ. ಪ್ರಚಾರದ ಅಬ್ಬರದಿಂದ ಅವರು ಗೋಕಾಕರ ಹಾಗೆ ದೂರವಿದ್ದವರು, ಕಾವ್ಯಕ್ಕೆ ಮುಡಿಪಾದ ಬದುಕು ಅವರದು. ರೊಮ್ಯಾಂಟಿಕ್, ನವ್ಯ ಎರಡೂ ದಡಗಳಲ್ಲಿ ಸೃಷ್ಟಿಯಾಗುತ್ತ ಬಂದ ಕಾವ್ಯವನ್ನು ಕಂಡು, ಕಾವ್ಯಧೋರಣೆ, ದೃಷ್ಟಿ ಬದಲಾದಂತೆ, ತಮ್ಮ ಕಾವ್ಯ ಮಾರ್ಗವನ್ನು ಬದಲಿಸಿಕೊಳ್ಳುತ್ತ ಬಂದವರು. ಕಾವ್ಯಕ್ಕೆ ಒಲ್ಲೊಬ್ಬ ಶಿವರುದ್ರಪ್ಪ, ಇಲ್ಲೊಬ್ಬ ಕಣವಿ ಎಂದು ಹೇಳಬಹುದು. ಕಣವಿ ಅವರು ನೆಲಮುಗಿಲಿನ ಬಣ್ಣ ವೈವಿಧ್ಯವನ್ನು ಕಂಡು ಅಂಥಾ ಅನುಭವವನ್ನು ಕಾವ್ಯದಲ್ಲಿ ಒಡಿದಿಟ್ಟವರು. ಅವರ ಕಾವ್ಯ, ಚಿತ್ರಗಳ ಹಾಗೆ, ಶಿಲ್ಪದ ಹಾಗೆ ಕಣ್ಣನ್ನು ಸೆಳೆಯುತ್ತದೆ. ಕಾವ್ಯ ಕುಸುರುಗೆಲಸದ ಸೃಷ್ಟಿಯೆಂಬುದನ್ನು ಸಾರುತ್ತದೆ. ಕಾವ್ಯದಲ್ಲಿ ಅವರು ಸಮನ್ವಯವನ್ನು ಸಾಧಿಸಿ ಬೇಂದ್ರೆ, ಗೋಕಾಕರಂತೆ ವಿಶಿಷ್ಟವಾಗಿ ಕಾಣುತ್ತಾರೆ. ಬದುಕು ಗಂಭೀರವಾದದ್ದು ಅದು ಬರೀ ವಿಡಂಬನೆಯಲ್ಲ, ಬದುಕಿನಂತೆ ಕಾವ್ಯವಿರಬೇಕೆಂಬುದು ಅವರ ವಿಶಾಲ ಧೋರಣೆ.

ಶಂಕರ ಮೊಕಾಶಿ ಪುಣೇಕರ ಅವರ `ಮಾಯೆಯ ಮೂರು ಮುಖಗಳು ' ಇಂದಿಗೂ ಅವರ ಕಾವ್ಯಸಿದ್ಧಿಗೆ ದ್ಯೋತಕವಾಗಿದೆ. ಯಾವುದೇ ಅಬ್ಬರ ಉಬ್ಬರವಿಲ್ಲದ ಕಾವ್ಯಕ್ಕೆ ಇದೊಂದು ಉದಾಹರಣೆ. ಪುಣೇಕರ ಅವರ ಕಾವ್ಯ ಕವಿಗಳಿಗಷ್ಟೇ ಅಲ್ಲದೆ ವಿಮರ್ಶಕರಿಗೂ ಸವಾಲೊಡ್ಡುತ್ತದೆ. ವಿಮರ್ಶಕರನ್ನು ಚಿಕ್ಕವರನ್ನಾಗಿ ಮಾಡುವ ಕಾವ್ಯ ಮಾಯೆಯ ಮೂರು ಮುಖಗಳು.

`ಚಂಡೆಮದ್ದಳೆ 'ಯ ಧ್ವನಿ ಅಡಿಗರ ವಿಶಿಷ್ಟ ಧ್ವನಿಯಾಗಿ, ಹಿಮಗಿರಿಯ ಕಂದರದಂಥ ಯಶಸ್ವಿ ಪದ್ಯ ರಚನೆಗಳಿಂದ ಅವರು ನವ್ಯದ ಮಾರ್ಗದಲ್ಲಿ ನಡೆದರು. ಅದೇ ಹೊತ್ತಿಗೆ ವಿನಾಯಕರ ನವ್ಯ ಕವಿತೆಗಳು ' ಹೆಸರಿನ ಪದ್ಯಗಳು ಪ್ರಕಟಗೊಂಡು ನವ್ಯ ಧೋರಣೆಗೆ ಚಾಲನೆಯನ್ನೊದಗಿಸಿತು. ಒಂದು ರೀತಿಯಿಂದ ನವ್ಯ ಕವಿತೆಯೆನ್ನಬಹುದು. ಗೋಕಾಕ ಅವರಿಂದ ಆರಂಭಗೊಂಡ ಬಂದ ಅಡಿಗರ ರಚನೆಯ ಮಾರ್ಗ ಇವೆರಡನ್ನೂ ಒಂದುಗೂಡಿಸುವ `ಸಮನ್ವಯ ' ವಿಚಾರ ಇಟ್ಟುಕೊಂಡದ್ದನ್ನು ಗಮನಿಸಬಹುದು. ಗೋಕಾಕರ ಮಾರ್ಗದಲ್ಲಿ ನಡೆದು ಬಂದವರನ್ನು

ಸಮನ್ವಯದವರೆಂದು ಗುರ್ತಿಸುವುದು ವಾಡಿಕೆಯಾದಂತಿದೆ. ರೊಮ್ಯಾಂಟಿಕ್ ಭಾವ ಹಾಗೂ ಆದರ್ಶಗಳ ನಂಟನ್ನು ಕಳೆದುಕೊಳ್ಳಲಿಲ್ಲವೆಂಬುದನ್ನು ಎತ್ತಿ ಹೇಳಿ ಕುರ್ತಕೋಟಿ, ಶೇಷಗಿರಿ ರಾವ್ ಮುಂತಾದವರು ಇವರ ರಚನೆಗಳನ್ನು ಶುದ್ಧ ನವ್ಯವೆಂದು ಪರಿಗಣಿಸುವಲ್ಲಿ ಸಂದೇಹ ವ್ಯಕ್ತಪಡಿಸಿದರು. ವಿನಾಯಕರ `ನವ್ಯಕವಿತೆಗಳು' ಸಂಕಲನದ ಹಲವಳಿ ಕಾಲ-ಕವಿ, ದುಃಸ್ವಪ್ನದಂಥ ಯಶಸ್ವೀ ಪದ್ಯಗಳು ಇಡೀ ನಾಗರಿಕತೆಯ ದುರಂತವನ್ನು ಧ್ವನಿಸುತ್ತವೆ ಎಂಬುದನ್ನು ಈ ವಿಮರ್ಶಕರು ಗಮನಿಸಿದ ಹಾಗೆ ತೋರುವುದಿಲ್ಲ. ಇಂಥ ಕವಿತೆಗಳಲ್ಲಿ ವಿನಾಯಕರ ಧೋರಣೆ ನವ್ಯವಾಗಿರುವುದನ್ನು ಗುರ್ತಿಸಬಹುದು.

`ನವ್ಯಧ್ವನಿ' ಸಂಕಲನ ನವ್ಯದ ಒಂದು ಪ್ರಪ್ರಥಮ ದಾಖಲೆಯಾಗಿ ಉಳಿದು, ಇದರಲ್ಲಿ ಎಲ್ಲಾ ಬಗೆಯ ನವ್ಯ ರಚನೆಗಳು ಸಂಕಲಿತವಾಗಿವೆ. ಅಡಿಗರ ಕಾವ್ಯವಿಧಾನವನ್ನನುಸರಿಸಿ ರಾಮಚಂದ್ರ ಶರ್ಮ, ನಾಡಿಗ ಮುಂತಾದವರು ಬರೆಯತೊಡಗಿದರು. ನಿಸಾರ ಅಹಮದ್, ಕಂಬಾರ, ಪಾಟೀಲ್, ಲಂಕೇಶ್, ತೇಜಸ್ವಿ, ಚೆನ್ನಯ್ಯ, ರಾಜಗೋಪಾಲ್ ಮುಂತಾದವರು ನವ್ಯದ ಮಾರ್ಗದಲ್ಲಿ ರಚನೆಯನ್ನಾರಂಭಿಸಿದರು. ಇಬ್ಬರು ಮೂವರು ಅಡಿಗರ ಮಾರ್ಗದಲ್ಲಿ ನಡೆದರೆ, ಬಹಳಷ್ಟು ಜನ ಕವಿಗಳು ಗೋಕಾಕ, ಕಣವಿ, ಶಿವರುದ್ರಪ್ಪ ಇಂಥವರೊಂದಿಗೆ ಕಾವ್ಯದಲ್ಲಿ ಹೊಸತನ ತರುವ ಪ್ರಯತ್ನದಲ್ಲಿ ತೊಡಗಿದರು.

ಅಕ್ಷರ ಹೊಸಕಾವ್ಯ, ಹೊಸ ಜನಾಂಗದ ಕವಿತೆಗಳು, ಬೆನ್ನ ಹಿಂದಿನ ಬೆಳಕು ಅಂಥ್ಯಾಲಜಿಗಳಿಂದ ನವ್ಯ ಕಾವ್ಯಕ್ಷೇತ್ರ ಇನ್ನಷ್ಟು ವಿಸ್ತಾರಗೊಂಡು ಹೊಸ ಬರವಣಿಗೆಗೆ ಅವಕಾಶ ಉಂಟಾಯಿತು. ಕಾವ್ಯಕ್ಷೇತ್ರದಲ್ಲಿ ಅರ್ಥಪೂರ್ಣ ಕೃಷಿಮಾಡುತ್ತ ಬಂದ ಕವಿ ಸಮತೀಂದ್ರ ನಾಡಿಗ್, ಶಾಂತರಸ, ಕುಸನೂರು, ತಿರುಮಲೇಶ, ಲಕ್ಷ್ಮಣರಾವ್, ಸೊರಬ, ಲಕ್ಷ್ಮೀನಾರಾಯಣಭಟ್ಟ, ಪಟ್ಟಣಶೆಟ್ಟಿ ಇವರಲ್ಲದೆ ಇಮ್ರಾಪೂರ, ವಾಲೀಕಾರ, ಬನ್ನಂಜೆ, ಕಾಳೆಗೌಡ ನಾಗವಾರ, ರಾಮಚಂದ್ರ ದೇವ, ಚೊಕ್ಕಾಡಿ ಮುಂತಾದವರ ಕಾವ್ಯ ರಚನೆಯಿಂದ ನವ್ಯ ಇನ್ನೊಂದು ಹಂತವನ್ನು ಕ್ರಮಿಸಿ, ಹೆಚ್ಚು ಸಂಕೀರ್ಣಗೊಳ್ಳುತ್ತ ಬಂತು. ಹಳೆಯ ವಿಚಾರಗಳಿಂದ, ಪ್ರಭಾವಗಳಿಂದ ತಪ್ಪಿಸಿಕೊಳ್ಳಬೇಕೆನ್ನುವ ಹವಣಿಕೆ - ಹಮ್ಮು, ತುಡಿತಗಳನ್ನು ಗುರ್ತಿಸಬಹುದು.

`ಒಂದು ಜನಾಂಗದ ಕಣ್ಣು ತೆರೆಸಿದ ಕವಿ' ಎಂಬ ಅಭಿಪ್ರಾಯ ಪಲ್ಲಟವಾಗಿ ಅಡಿಗರ ಸುತ್ತ ಮುಗಿಬಿದ್ದಿದ್ದ ಗುಂಪು ಸಿಡಿದು ಹೋಗಿ, ನವ್ಯಕಾವ್ಯ ಸಾಯುವ ಸ್ಥಿತಿಯಲ್ಲಿದೆ, ಸತ್ತಿತು ಎಂಬ ಅಭಿಪ್ರಾಯಗಳೂ ಪ್ರಕಟವಾದವು. ಇವಿನ್ನೂ ಘೋಷಣೆಯ ಸ್ವರೂಪದಲ್ಲಿಯೇ ಉಳಿದವು. ನವ್ಯಕಾವ್ಯ ಸತ್ತಿತು ಎಂದು ಹೇಳುವವರು ಅದೇ ಮಾರ್ಗದಲ್ಲಿ ಕಾವ್ಯ ರಚಿಸುತ್ತ ಬಂದರು.

ನವ್ಯಕಾವ್ಯ ಮುಗಿಲಿನ ಕಾವ್ಯವಾಗದೆ ಮಣ್ಣಿನ ಕಾವ್ಯವಾಗಿ, ಮಣ್ಣಿನ ವಾಸನೆಯನ್ನು, ಅಡುಮಾತಿನ ಲಯವನ್ನು, ಸಮಕಾಲೀನ ಪ್ರಜ್ಞೆಯನ್ನು ರೂಢಿಸಿಕೊಳ್ಳಬೇಕೆಂದು, ಅಭಿವ್ಯಕ್ತಿಯಲ್ಲಿ ಪ್ರಾಮಾಣಿಕತೆಯನ್ನು ಸಾಧಿಸಬೇಕೆಂಬ ವಿಚಾರ ಮಹತ್ವ ಪಡೆದು, ನವ್ಯಕವಿಗಳಲ್ಲಿಯ ಹಲವರು `ಬುದ್ಧಿ ಭಾಷೆಗಳ ವಿದ್ಯುದಾಲಿಂಗನ'ದಲ್ಲಿ ನವ್ಯವನ್ನು ಬಂಧಿಸಿಟ್ಟಿದ್ದರಿಂದ ಕಾವ್ಯವು ರೂಪಕ ಸಂಕೇತ ಪ್ರತಿಮೆಗಳಿಂದ ನಿಬಿಡವಾಗುತ್ತ ರಚನೆ ಕ್ಲಿಷ್ಟವಾಗುತ್ತ ಅದು ಕೇವಲ ಬುದ್ಧಿಜೀವಿಗಳ ಸೊತ್ತಾಯಿತೆಂಬುದನ್ನು ಮರೆಯುವಂತಿಲ್ಲ. ಜನಸಾಮಾನ್ಯರ ಆಡುಮಾತನ್ನು ಹಾಗೂ ಲಯವನ್ನು

ರೂಢಿಸುವುದರತ್ತ ಗಮನಾರ್ಹ ಬದಲಾವಣೆಯ ಸೂಚನೆಗಳು ಕಂಡುಬಂದರೂ, ಅಂಥ ಘನವಾದ ದ್ದೇನನ್ನೂ ಸೃಷ್ಟಿಸದೆ ' ನವ್ಯ ಸತ್ತಿತು ' ಎಂದವರ ಘೋಷಣೆ ಅರ್ಥಕಳೆದುಕೊಂಡಿತು. ಸಾಮಾಜಿಕ ರಾಜಕೀಯ ಆರ್ಥಿಕ ಒತ್ತಡಗಳ ಜೋರು, ಬದುಕಿನ ಹೋರಾಟದ ಅನುಭವ ಇಂಥಾ ಕವಿಗಳ ಮನಸ್ಸನ್ನು ಜಗ್ಗಿದ್ದರಿಂದ, ಅಡಿಗರಿಂದ ಭಿನ್ನವಾಗಿ ಬರೆಯಬೇಕೆನ್ನುವ ಛಲದಿಂದ ಕಾವ್ಯದಲ್ಲಿ ಸಾಮಾಜಿಕ, ಸಮಕಾಲೀನ ರಾಜಕೀಯ ಧ್ವನಿ ಸ್ಥಾನ ಪಡೆಯುತ್ತ ಕವಿಗಳು ತಮ್ಮ ಅಸ್ತಿತ್ವದ ಅರ್ಥವನ್ನು ಹುಡುಕುವ ಗೋಜಿಗೆ ತೊಡಗಿದ್ದಲ್ಲದೆ ಬದಲಾಗುತ್ತಿರುವ ಧೋರಣೆ ಹಾಗೂ ವರ್ತಮಾನದ ಕಾಳಜಿಗಳಿಂದ ಕಾವ್ಯ ಹೆಚ್ಚು ಸಂಕೀರ್ಣವಾಗುತ್ತ ಬಂತು. ಭಾಷೆಗೆ ಎಲ್ಲಿಲ್ಲದ ಮಹತ್ವ ಬಂತು. ಭಾಷೆ ಕಾವ್ಯದ ಜೀವಾಳವಾಯಿತು. `ಇವಳೆದೆಗೆ ಬೇರಿಳಿದ ಕಾಲು ನನ್ನದು ' ಎನ್ನುವಂತೆ ಕಾವ್ಯ ಭೂಮಿಯ ಕಡೆಗೆ ತಿರುಗಿತು. ಮಣ್ಣಿನ ಪ್ರಜ್ಞೆ ಬೆಳೆಯುವಂತಾಯಿತು.

ರಾಮಾನುಜನ್ ಕಾವ್ಯ ಕೆಲವರ ಕುತೂಹಲ ಕೆರಳಿಸಿ, ಅದೊಂದು ಹೊಸ ಪ್ರಯೋಗ ವೆಂಬಂತೆ ಕಂಡಿತು. " ..... ಮತ್ತು ಇತರ ಪದ್ಯಗಳು "ಸಂಕಲನ ಬಂದಿದ್ದು, ಹೊಕ್ಕುಳಲ್ಲಿ ಹೂವಿಲ್ಲ' ದ ಧಾಟಿ ಧೋರಣೆ ಇದರಲ್ಲಿಯೂ ಮುಂದುವರಿದಿದ್ದು, ಅದಿನ್ನೂ ತನ್ನದೇ ಸೀಮೆ ಯಲ್ಲಿ ಸುತ್ತುತ್ತಿದೆ. ರಾಮಾನುಜನ್ ಕಾವ್ಯದಲ್ಲಿ ಇ. ಇ ಕಮಿಂಗ್ ಪ್ರಯೋಗ , ಬೆಡಗು, ಬಣ್ಣ ಹೆಚ್ಚಿಗಿದ್ದು ಇಂಗ್ಲೀಷ, ಫ್ರೆಂಚ್, ಜಾಪನೀಸ್, ಪದ್ಯಗಳನ್ನೋದಿದವರಿಗೆ ಕುತೂಹಲ ವೆನ್ನಿಸುವದಿಲ್ಲ. ಪದ್ಯಗಳು ಪ್ರಾಯೋಗಿಕ ಪಾತಳಿಯಲ್ಲಿದ್ದಂತೆ, ಅನುವಾದ ಕೌಶಲ್ಯವನ್ನೊಳ ಗೊಂಡಂತೆ ತೋರುತ್ತದೆ.

ಕಾವ್ಯದ ಸೋಲನ್ನು ಗುರ್ತಿಸಿಕೊಂಡ ಕೆಲವರು ಹೊಸ ಕ್ಷೇತ್ರವನ್ನಗಿಯುವ ಪ್ರಯತ್ನಕ್ಕೂ ತೊಡಗಿದ್ದುಂಟು. ಇಂಗ್ಲೀಷ ಕಾವ್ಯಮಾರ್ಗದಿಂದ ಭಿನ್ನವಾದ ಆಫ್ರಿಕನ್, ನಿಗ್ರೋ, ರಶ್ಯನ್ ಮುಂತಾದ ಕಾವ್ಯರಚನೆಗಳ ಮಾದರಿಯಿಂದ ದಲಿತ, ವಿಪ್ಲವ, ಬಂಡಾಯ ಕಾವ್ಯ ಮಾದರಿಗಳೂ ಕಾಣಿಸಿಕೊಂಡವು.

ದೇವನೂರು ಮಹಾದೇವ, ಸಿದ್ಧಲಿಂಗಯ್ಯ ಮುಂತಾದವರ ಪದ್ಯಗಳು ಪ್ಯಾಂಥರ್ ಪದ್ಯಗಳಂತೆ ಬದುಕಿನ ಕ್ರೂರ ಸತ್ಯವನ್ನೊಳಗೊಂಡು ಗಮನ ಸೆಳೆಯುವಂತಿವೆ. ಸಿದ್ಧಲಿಂಗಯ್ಯ ಅವರ `ಹೊಲೆಮಾದಿಗರ ಹಾಡು ' ಅಂಥ ಭರವಸೆಯನ್ನು ಮೂಡಿಸಿದ್ದು, ಅದಿನ್ನೂ ಆಕ್ರೋಶ, ಆವೇಶಗಳಿಂದ ಮುಕ್ತವಾಗಬೇಕು. `ಸಾವಿರಾರು ನದಿಗಳು ' ಕಾವ್ಯದ ಬೆಳವಣಿಗೆಗೆ ಗುರುತಾಗಿದೆ. ಚಂದ್ರಶೇಖರ ಪಾಟೀಲರ ಅನುಭವ ತುರ್ತು ಅನುಭವವಾಗಿ ಸಾಂದರ್ಭಿಕ ಅನುಭವವಾಗುತ್ತ ಬಂತು. ಸಂದರ್ಭ ಮುಗಿದು ಹೋದ ಮೇಲೆ ಅರ್ಥಕಳೆದುಕೊಳ್ಳುವಂತಾಯಿತು.

ಆಲನಹಳ್ಳಿ ಅವರ `ಕಾಡುಗಿಡದ ಹಾಡುಪಾಡು ', ಇಮ್ರಾಪುರ ಅವರ `ಬಿರುಗಾಳಿ', ಸೊರಬ ಅವರ `ಲೂಸಿ', ಪಾಟೀಲರ `ಗಾಂಧಿಸ್ಮರಣೆ ',ಚೊಕ್ಕಾಡಿ ಅವರ `ಬೆಟ್ಟವೇರಿದ ಮೇಲೆ', ನಾಡಿಗ ಅವರ `ಉದ್ಘಾಟನೆ' ಇವು ಗಮನಾರ್ಹವೆನ್ನಿಸುವಂಥವುಗಳು.

ಇಮ್ರಾಪುರ ಅವರ `ಬಿರುಗಾಳಿ'ಯ ಪದ್ಯಗಳಲ್ಲಿ ಮಣ್ಣಿನ ಅಂಶ ಇರುವುದಷ್ಟೆ ಅಲ್ಲದೆ ಜಾನಪದ ಸತ್ವದಿಂದ ಅವರ ಕಾವ್ಯ ಹೊಸ ತಿರುವು ಪಡೆಯುವುದರಲ್ಲಿದೆ.

ಪಾಟೀಲರ `ಗಾಂಧಿ ಸ್ಮರಣೆ ' ಯ ಪದ್ಯಗಳು ಸಮಕಾಲೀನ ರಾಜಕೀಯ ಧ್ವನಿಯಿಂದ ಕೂಡಿ ಭರವಸೆ ಮೂಡಿಸಿದರೂ ಕಾವ್ಯಾಂಶವಿಲ್ಲದೆ ವಾಚಾಳಿಯಾಗಿಬಿಡುತ್ತದೆ. `ಓ ಎನ್ನ ದೇಶ ಬಾಂಧವರೆ ' ಇನ್ನಷ್ಟು ನಿರಾಶೆಯನ್ನು ಹುಟ್ಟಿಸುತ್ತದೆ. ಕಾವ್ಯ ಪತ್ರಿಕಾ ವರದಿಯ ಮಟ್ಟಕ್ಕಿಳಿದದ್ದೆ ಇದಕ್ಕೆ ಕಾರಣ. `ಅರ್ಧಸತ್ಯದ ಹುಡುಗಿ ' ಯ ಕೆಲವು ಪದ್ಯ ಗಮನಾರ್ಹ. ವಿ. ಜಿ. ಭಟ್ಟರ ಕಾವ್ಯದ ಹಾಗೆ ಇವರ ಕಾವ್ಯ ವಿಡಂಬನೆಯ ಮೊನಚು ಪಡೆದು ಕೇಳುಗರನ್ನು ರಂಜಿಸುತ್ತದೆ.

ಚೊಕ್ಕಾಡಿ ಅವರ `ಬೆಟ್ಟವೇರಿದ ಮೇಲೆ ' ಯಲ್ಲಿನ ನಾಲ್ಕಾರು ಪದ್ಯಗಳು ಮಾತ್ರ ಅವರು ಬೆಳೆಯಬಲ್ಲ ಕವಿ ಎಂಬುದನ್ನು ಸೂಚಿಸುತ್ತವೆ.

ಇತ್ತೀಚೆಗೆ ಹಲವು ಯುವಕರು ಕಾವ್ಯರಂಗದಲ್ಲಿ ಧುಮುಕಿ ಸಾಮಾಜಿಕ, ರಾಜಕೀಯ ಧ್ವನಿಯುಳ್ಳ ಕಾವ್ಯ ರಚಿಸುತ್ತಿರುವರಾದರೂ ಶುದ್ಧಕಾವ್ಯದ ದೃಷ್ಟಿಯಿಂದ ನೋಡಿದರೆ ಸಿದ್ಧಲಿಂಗ ದೇಸಾಯಿ ಅವರ `ಕ್ಯಾದಗೀ ಜವುಳು' ದಂತಹ ಕೃತಿ ಕುತೂಹಲವನ್ನು ಹುಟ್ಟಿಸಿತ್ತು. ಕವಿ ಸಂಹಾರದಿಂದ ಕಾವ್ಯ ಕಳಪೆಯಾಯಿತು. ಶಂಕರ ಕಟಗಿ, ಸತೀಶ ಕುಲಕರ್ಣಿ, ಅಲ್ಲಮಪ್ರಭು ಬೆಟದೂರು, ಸರಜೂ ಕಾಟಕರ, ಸಿದ್ಧನಗೌಡ ಪಾಟೀಲ, ಮುಕ್ತಾಯಕ್ಕ ಮುಂತಾದವರ ಕಾವ್ಯ ಭರವಸೆಯನ್ನು ಮೂಡಿಸುತ್ತವೆ.

ಇಂದು ಬದಲಾಗುತ್ತಿರುವ ಕಾವ್ಯವನ್ನು ಗಂಭೀರವಾಗಿ ಆಲೋಚಿಸುವುದು ಅಗತ್ಯ. ಜರ್ಜರಿತ ಸಮಾಜದ ನೋವು, ನರಳಿಕೆ, ಕಣ್ಣೀರು, ಶೋಷಣೆ ಇವುಗಳಿಂದ ಕವಿ ದೂರ ಉಳಿಯುತ್ತ ಬಂದ. ಸಾವಿರಾರು ಮನೆಗಳುದುರಿದರೂ ಸಾವಿರ ಜನ ಹಸಿವಿನಿಂದ ಕಂಗಾಲಾಗಿ, ನೆಲೆಯಿಲ್ಲದೆ ಅರಚಿಕೊಂಡರೂ ಅದರ ಆರ್ತಧ್ವನಿಯನ್ನು ಕೇಳಿದ ಕವಿಗಳು ಎಷ್ಟು ಮಂದಿ ? ಮಾನವೀಯತೆ, ಪ್ರಗತಿ, ಕ್ರಾಂತಿಯ ಕಲ್ಪನೆಗಳಿದ್ದರೂ ವೈಯಕ್ತಿಕ ಆವೇಶಕ್ಕೆ ಜೋತುಬಿದ್ದಿದ್ದರಿಂದ ಅರ್ಥಪೂರ್ಣ ಉದ್ದೇಶದಿಂದ ವಂಚಿತವಾಗಿ ಕಾವ್ಯವೆನ್ನುವುದು ಬುದ್ಧಿ ಭಾವಗಳ ಪರೇಡಾಗುತ್ತ ಬಂತು. ಜನದ ಆಶೋತ್ತರಗಳನ್ನು ಪ್ರತಿಮಿಸಲು ಸಮರ್ಥವಾಗದೆ, ಘೋಷಣೆಗಳು ಬರೀ ಘೋಷಣೆಗಳಾಗಿ ಉಳಿದು ಬಿಟ್ಟು ವೈಯಕ್ತಿಕ ಛಲ, ಪ್ರತಿಷ್ಠೆ, ರಾಜಕೀಯ ಇವುಗಳ ಪರಿಣಾಮದಿಂದ ಕಾವ್ಯ ವಾಚ್ಯವಾಗುತ್ತ ವ್ಯಂಗ್ಯ ಸೂಕ್ಷ್ಮಗಳನ್ನು ಕಳೆದುಕೊಂಡಿತೆನ್ನಬಹುದು. ಈ ಕಾರಣದಿಂದಲೇ ಭೂಮಿಗೀತದ ತರುವಾಯ ಬಂದ ಅಡಿಗರ ಪದ್ಯಗಳು, ಶರ್ಮ, ನಾಡಿಗ, ರಾಮಾನುಜನ್ ಮುಂತಾದವರ ಪದ್ಯಗಳು ನಿಖರ ಅಭಿವ್ಯಕ್ತಿಯನ್ನು ಸಾಧಿಸಲಿಲ್ಲ. ದೀನ ದಲಿತರು, ದುರ್ಬಲ ವರ್ಗದವರು, ಸಮಾಜ ಎದುರಿಸಬಲ್ಲ ಸವಾಲುಗಳ ಧ್ವನಿಯಾಗಬಲ್ಲ ಕಾವ್ಯ ಅಗತ್ಯವೆನಿಸುವುದು ಅಸ್ವಾಭಾವಿಕವೇನಲ್ಲ. ಕಾವ್ಯ ಬೌದ್ಧಿಕ ಅಂತಸ್ತಿನಿಂದ ಕೆಳಗಿಳಿಯುವ ಸೂಚನೆಗಳು ಕಂಡುಬಂದರೂ ಅದು ಪಡೆಯುವ ದಿಕ್ಕು, ಧೋರಣೆ ಇನ್ನೂ ನಿಶ್ಚಿತವಾಗಿಲ್ಲ.

ರಾಜಕೀಯ, ಸಾಮಾಜಿಕ ಗೊಂದಲ. ಹೋರಾಟ ಸ್ಪರ್ಧೆಗಳಿಗೆ ಸ್ಪಂದಿಸುತ್ತ ಸರಳವಾಗುತ್ತ, ನೇರವಾಗಿ ಹಾಗೂ ವ್ಯಂಗ್ಯದಿಂದ ಕೂಡಿದ ಇಂದಿನ ಕಾವ್ಯರಚನಾಕ್ರಮ ತುಂಬ ಗಮನ ಸೆಳೆಯುವಂಥದ್ದು. ಕಾವ್ಯ ಹೊಸ ರಕ್ತ ಪಡೆದು ಬರಬೇಕೆನ್ನುವ ವಿಚಾರ ಇಂದಿನ ಯುವಕರನ್ನು ಪ್ರೇರೇಪಿಸುತ್ತಿದೆ. ಬದುಕಿನ ಬೇರುಗಳಿಂದ ಹುಟ್ಟುವ ಪ್ರಾಮಾಣಿಕ ಅನುಭವದ

ಕಾವ್ಯಕ್ಕೆ ಮಹತ್ವವಿದ್ದು, ಇಂದಿನ ಕಾವ್ಯ ಹೊಸ ಧೋರಣೆಗಳನ್ನು ಹೊಂದಿದೆ. ಉತ್ತರ ಕರ್ನಾಟಕದ ಆಡು ಮಾತಿನ ಜಾನಪದ ಗೀತಗಳ ಲಯವನ್ನು ಹಿಡಿದುಕೊಂಡು ಚಂದ್ರಶೇಖರ ಕಂಬಾರರ ಕಾವ್ಯ ಗಮನ ಸೆಳೆಯುತ್ತದೆ. ಮಾವುತ್ಸೆ ತುಂಗನ ಕುರಿತು ಬರೆದ ಪದ್ಯ ಹಾಗೂ ಅವರ ಇತರ ಕಾವ್ಯ ನಾಟಕಗಳು ಹೊಸ ದೃಷ್ಟಿ ಧೋರಣೆಯನ್ನು ಪ್ರಕಟಿಸುತ್ತ ಒಮ್ಮೊಮ್ಮೆ ಅಡಿಗರ ಕಾವ್ಯವನ್ನು ಮೀರಿಸುತ್ತವೆ. ಕಂಬಾರರಿಗಿರುವಷ್ಟು ಮಣ್ಣಿನ ಹಾಗೂ ಮಣ್ಣಿನ ಮಕ್ಕಳ ಸಂಪರ್ಕ ಅಡಿಗರಿಗೆ ಇರಲಿಲ್ಲ ವೆಂಬುದನ್ನು ಅವರ ಪದ್ಯಗಳಿಂದ ತಿಳಿದುಕೊಳ್ಳಬಹುದು.

ಅಡಿಗರ ಮಾರ್ಗದಲ್ಲಿ ನಡೆದ ರಾಮಚಂದ್ರ ಶರ್ಮ ಅವರ ಕಾವ್ಯದಲ್ಲಿ ಶರ್ಮರಿಗೆ ವಿಶಿಷ್ಟವಾದ ಧಾಟಿ, ಧೋರಣೆಗಳಿದ್ದು ಅವರ ಕಾವ್ಯದ ಸಂಕೀರ್ಣತೆಯನ್ನು ಹಿಗ್ಗಿಸುತ್ತವೆ.

ಕೆ. ಎಸ್. ನಿಸ್ಸಾರ್ ಅಹಮದ್ ಅವರ ಕಾವ್ಯ ಮೊದಲಿಂದಲೇ ಬೆಳವಣಿಗೆಯನ್ನು ತೋರುತ್ತ ಬಂದಿದೆ. ಕುರಿಗಳು ಸಾರ್ ಕುರಿಗಳು , ಅಮ್ಮ, ಆಚಾರ ಹಾಗೂ ನಾನು ಅಲ್ಲದೆ ಅವರ ಸಮಗ್ರ ಕಾವ್ಯ ಸಂಕಲನ ನಿಸಾರ್ ಉತ್ತಮ ಕವಿಯೆಂಬುದನ್ನು ಸಿದ್ಧಪಡಿಸುತ್ತವೆ. ಕಾಲಕ್ಕೆ ತಕ್ಕಂತೆ ದೃಷ್ಟಿ ಧೋರಣೆಯನ್ನು ಬದಲಿಸಿಕೊಳ್ಳುತ್ತ ಬಂದ ಅವರೊಬ್ಬ ಮಹತ್ವದ ಕವಿಗಳಲ್ಲಿ ಒಬ್ಬರಾಗುತ್ತಾರೆ.

`ಕರಿತೆಲಿ ಮಾನವನ ಜೀ ಪದ ' ದಿಂದ ಹಿಡಿದು ಈ ವರೆಗೂ ಜೀವಂತ ಕಾವ್ಯ ಬರೆಯುವ ಧಾಡಿಸೀ ಕವಿ ಚೆನ್ನಣ್ಣ ವಾಲೀಕಾರ. ಅವರ ಕಾವ್ಯ ಎಂತೆಂತಹ ಕವಿಗಳ ಕಾವ್ಯವನ್ನು ಮೆಟ್ಟಿ ನಿಲ್ಲುವಂಥಾದ್ದು. `ಪ್ಯಾಂಥರ್ ಪದ್ಯ'ದಂಥ ಅವರ ರಚನೆಗಳು ಅವರೊಬ್ಬ ಮಹತ್ವದ ಕವಿಯೆಂಬುದನ್ನು ಸಾಬೀತುಪಡಿಸುತ್ತವೆ. ದಲಿತ ಸಾಮಾಜಿಕ ದೃಷ್ಟಿ ಧೋರಣೆಯಿಂದ ಅವರ ಕಾವ್ಯ ನೆಲದಿಂದೆದ್ದು ಪುಟಿಯುತ್ತದೆ. ರಶ್ಯಾ ದೇಶದ ಮಾಯ್ಯಾವಸ್ಕಿಯ ಹಾಗೆ ಒಮ್ಮೊಮ್ಮೆ ಸಿಡಿದೇಳುವ ಕವಿಯಾಗಿ ಹಳೆಯ ಸಮಾಜ ಬದಲಾಗಿ ಹೊಸ ಸಮಾಜ ಬರಬೇಕೆಂದು ಹೋರಾಡುತ್ತಾರೆ. ಪರಂಪರೆಯನ್ನು ಸ್ವೀಕರಿಸುತ್ತ ಇನ್ನೊಂದು ಹೊಸ ಹಾದಿಗಾಗಿ ಕಾಯುತ್ತಿರುವಂತೆ ಅಂಥ ಪ್ರಯೋಗ ನಡೆಯುತ್ತಿವೆ. ಎಚ್. ಎಸ್. ಶಿವಪ್ರಕಾಶ್ ಅಂತಹ ಒಬ್ಬ ಗಮನಾರ್ಹ ಕವಿ.

ಕಾವ್ಯ ಮಣ್ಣಿನಿಂದ ಮತ್ತೆ ಬದುಕಿನ ಹೋರಾಟದತ್ತ ತುಡಿಯುತ್ತಿರುವುದನ್ನು ಗುರ್ತಿಸ ಬಹುದು. ರೂಪಕ, ಸಂಕೇತ, ಪ್ರತಿಮೆಗಳಿಂದ ಅಭಿನೀತವಾಗುವುದಕ್ಕಿಂತ ಮಾನವೀಯ ಮುಖ ವಾಡಗಳನ್ನು ತೆರೆದುತೋರಬಲ್ಲ ನೇರವಾದ ಕಾವ್ಯ ಹೊಸ ರೂಪ, ಆಕಾರವನ್ನು ಪಡೆದೀತು.

ಸರಳ ರಗಳೆ

- ಚೆನ್ನಕ್ಕ ಪಾವಟೆ

ಆಧುನಿಕ ಕನ್ನಡ ಕವಿಗಳಲ್ಲಿ ಸರಳರಗಳೆಯನ್ನು ರೂಪಿಸಿ ಜನಪ್ರಿಯ ಮಟ್ಟಕ್ಕೆ ಏರಿಸಿದ ಕೀರ್ತಿ ನವೋದಯ ಕವಿಗಳಿಗೆ ಸಲ್ಲುತ್ತದೆ. ಕನ್ನಡದ ಲಲಿತರಗಳೆಯೇ ಆದಿ ಅಂತ್ಯಪ್ರಾಸಗಳನ್ನು ಕಳೆದುಕೊಂಡು ಸರಳ ರಗಳೆಯಾಗಿದೆಯೆಂದು ಕೆಲವರ ಹೇಳಿಕೆ. ಸರಳರಗಳೆ ಹೆಸರೇ ಸೂಚಿಸುವಂತೆ ರಗಳೆಯ ಒಂದುಪ್ರಭೇದ, ಕಾವ್ಯದಲ್ಲಿ ಮಾತ್ರೆ ಸಮನಾಗಿದ್ದು `ತಾಳದ ಗಣನೆಗೊಡಂಬಟ್ಟಡೆ ಅದು ರಗಳೆ. 'ಆದರೆ ಸರಳರಗಳೆಯಲ್ಲಿ ಪ್ರತಿಚರಣದಲ್ಲಿಯೂ ನಿಯತವಾಗಿ ಐದೈದು ಮಾತ್ರೆಗಳುಳ್ಳ ನಾಲ್ಕು ಗಣಗಳು ಆದಿ ಅಂತ್ಯಪ್ರಾಸ ರಹಿತವಾಗಿ ಬಂದರೆ ಸ್ಥೂಲವಾಗಿ ಅದನ್ನು ಸರಳರಗಳೆ ಎಂದು ಹೇಳಬಹುದಾಗಿದೆ. ಇಂಗ್ಲೀಷಿನ ಬ್ಲ್ಯಾಂಕವರ್ಸಿನ ಅನುಕರಣೆಯಿಲ್ಲದ ಈ ಸರಳರಗಳೆ ಲಲಿತರಗಳೆಯ ಆಧಾರದ ಮೇಲೆ ನೆಲೆನಿಂತ ಛಂದೋಬಂಧ. ನಾಗವರ್ಮನ ಹೇಳಿಕೆಯೂ ಇದೇ ಆಗಿದೆ. ತೀ ನಂ. ಶ್ರೀಕಂಠಯ್ಯನವರು `ಕಥಾಕಾವ್ಯಕ್ಕೆ ಇಷ್ಟು ಉಚಿತವಾದ ಮಟ್ಟುಗಳನ್ನು ಹಿಂದಿನ ಕವಿಗಳು ಏಕೆ ನಿರಾಕರಿಸಿದರೋ? ಆಧುನಿಕಕಾಲದಲ್ಲಿ ಮಾತ್ರ ರಗಳೆಗೆ ಮತ್ತಷ್ಟು ಪ್ರಾಶಸ್ತ್ಯ ದೊರೆತಿದೆ. ಲಲಿತರಗಳೆಯ ಪ್ರಾಸಗಳನ್ನು ಕಿತ್ತುಹಾಕಿ ಸರಳಮಾಡಿ ಚರಣ ಗಳನ್ನು ತಡೆಯಿಲ್ಲದೆ ಹರಿಯಬಿಡುವುದರಿಂದ ಹುಟ್ಟಿರುವ ಸರಳರಗಳೆ ಈಗಾಗಲೇ ಕವಿಪ್ರಿಯ ವಾಗಿದೆ. ಇಂಗ್ಲಿಷಿನ ಬ್ಲ್ಯಾಂಕವರ್ಸ ಎಂಬ ಮಟ್ಟಿನಂತೆ ನಾಟಕಗಳನ್ನು ಕಥಾಕಾವ್ಯಗಳನ್ನು ಬರೆಯುವುದಕ್ಕೆ ಇದನ್ನು ಉಪಯೋಗಿಸುವ ಪ್ರಯತ್ನವು ಆಶಾಜನಕವಾಗಿ ನಡೆಯುತ್ತಿದೆ " ಎಂದು ಹೇಳಿರುವುದು ಅದರ ಪ್ರಚುರತೆಗೆ ಸಾಕ್ಷಿ.

ಈಗಿನ ಕಾಲದವರು ಇಂಗ್ಲೀಷಿನ ಬ್ಲ್ಯಾಂಕವರ್ಸನ್ನು ಅನುಕರಣಮಾಡಿ ಸರಳರಗಳೆಯೆಂದು ಕರೆಯುವ ಈ ಪದ್ಯಜಾತಿಗೆ ಕನ್ನಡ ಕವಿ ಹರಿಹರನೇ (ಪ್ರಾಸವನ್ನು ಬಿಟ್ಟರೆ) ಮಾರ್ಗ ದರ್ಶಕ ನೆಂಬುದನ್ನು ಬಸವರಾಜದೇವರ ರಗಳೆಯ ಕೆಳಗಿನ ಈ ನಾಲ್ಕು ಸಾಲುಗಳು ಸ್ಪಷ್ಟ ಪಡಿಸುತ್ತವೆ ;

ಅಳಿಯೆಱಿಗದನಿಲನಲುಗದ ರವಿಕರಂ ಪುಗದ
ಸುಳಿಗೊಂಡು ದಳವೇಱಿ ಹಸುರಳಿದು ಬೆಳಪುಳಿದು
ಸುರುಚಿರಮೆನಿಪ್ಪ ಮೀಸಲ ಮೊಗ್ಗೆಯಂ ಕಂಡು
ಇರವಂತಿಗೆಯೊಳ್ ಮೆವ್ವ ಬರಿಯಮುಗ್ಗುಳ್ಗಳಂಕೊಂಡು [೧]

ಇಲ್ಲಿ ಆದಿ ಅಂತ್ಯಪ್ರಾಸಗಳು ನಿಯತವಾಗಿದೆ. ಐದು ಮಾತ್ರೆಗಳ ನಾಲ್ಕುಗಣಗಳೂ ನಿಯತ ವಾಗಿ ಬರುತ್ತವೆ. ಇದು ಲಯವಿನ್ಯಾಸಕ್ಕೆ, ವೈವಿಧ್ಯತೆಗೆ ಅಧಿಕ ಅವಕಾಶ ಮಾಡಿಕೊಡದು.ಆದ್ದರಿಂದ ಆಧುನಿಕ ಕವಿಗಳು ಲಲಿತ ರಗಳೆಯ ಆದಿಅಂತ್ಯಪ್ರಾಸಗಳನ್ನು ತೆಗೆದು ಸರಳರಗಳೆಯ ರೂಪು ಕೊಟ್ಟರು. ಇದು ಲಯವೈವಿಧ್ಯ ವಿನ್ಯಾಸಕ್ಕೆ ಅನುಕೂಲವಾಯಿತು.

---

೧. ಹರಿಹರ : ಬಸವರಾಜದೇವರ ರಗಳೆ (ಸಂ) ಟಿ. ಎಸ್. ವೆಂಕಣ್ಣಯ್ಯ ೩ನೆಯ ಸ್ಕಂಧ :- ಪು- ೧೪

ಕೋಳಿ ಮೂರನೆಬಾರಿ ಕೂಗಿ ಯೇಸುವ ಕೊಲ್ಲ
ಲೆಳಸಿದ ಯಹೂದ್ಯರ ಮನಸಾಕ್ಷಿಯೊಲು ಸುಮ್ಮ
ನಾಗೆ ಕಾಯಫನಕಟ ನಡೆಸಿದ ವಿಚಾರಣೆಯ
ಕೆಟ್ಟನೀತಿಗೆ ಹೇಸಿ ಬೆಳುಗದಿರನೆಳೆವೊಂಗೆ "[೨]

ಗೋವಿಂದ ಪೈಗಳು ಗೊಲ್ಗೊಥಾದ ಈ ನಾಲ್ಕು ಸಾಲುಗಳಲ್ಲಿ ಐದು ಮಾತ್ರೆಗಳ ನಾಲ್ಕು ಗಣಗಳ ನಿರ್ಬಂಧವಾಗಲಿ, ಆದಿ ಅಂತ್ಯಪ್ರಾಸಗಳ ಆವಶ್ಯಕತೆಯಾಗಲಿ ಇಲ್ಲದ್ದು, ಪ್ರತಿಸಾಲಿನಲ್ಲಿ, ೩೦ ಮಾತ್ರೆ, ಯತಿ ಇರುವಿಕೆಯಿಂದ ಲಯವೈವಿಧ್ಯತೆ ಸಾಧ್ಯವಾಗಿದೆ. ಇದರಿಂದ ಛಂದಸ್ಸಿನ ಬಿಗಿ ಸಡಿಲಗೊಳ್ಳುವ ಅಭಿಪ್ರಾಯವೂ ಇದೆ. ಇದನ್ನು ಕುರಿತು ಗೋಕಾಕರು ``ಐದು ಮಾತ್ರೆಗಳ ನಾಲ್ಕು ಗಣಗಳಿರಬೇಕೆಂಬ ನಿಯಮಕ್ಕೆ ಅಸ್ತಿತ್ವವೇ ಇಲ್ಲವಾಗಿದೆ. ಇಪ್ಪತ್ತು ಮಾತ್ರೆಗಳಿದ್ದರಾಯಿತು. ಅವುಗಳನ್ನು ಯಾವ ಗಣಗಳಾಗಿಯೂ ವಿಭಾಗಿಸಬಹುದೆಂದು ಕಲ್ಪಿಸಬಹುದು " ಎಂದು ಸರಳರಗಳೆಯಲ್ಲಿ ಲಯ ಗಣ ಇವುಗಳ ಕಟ್ಟನ್ನು ಮುರಿಯುವ ಪದ್ಧತಿಯ ಬಗೆಗೆ ವಿಷಾದಿಸಿದ್ದಾರೆ. `` ಬ್ಯಾಂಕವರ್ಸಿಗೆ ಸರಿಸಮಾನವಾಗಿ ನಿಂತು ಅದನ್ನು ಗಂಡುಮೀರುವಷ್ಟು ಶಕ್ತಿಯು ಇನ್ನೂ ಕನ್ನಡದ ಸರಳರಗಳೆಗೆ ಬಂದಿಲ್ಲ " ವೆಂಬ ಮಾತು ನಿಜವಾದರೂ ``ಬ್ಯಾಂಕವರ್ಸಿನ ಪುಣ್ಯವನ್ನು ಯಾಚಿಸಿ ಇಂದು ಸರಳರಗಳೆ ಜೀವಿಸುತ್ತಿದೆ "[೩] ಎಂಬ ಮಾತು ಉತ್ಪ್ರೇಕ್ಷೆ, ಒಪ್ಪಲಾಗದು " ಎಂಬ ಎಸ್. ಅನಂತನಾರಾಯಣರ ನುಡಿ ಅರ್ಥಗರ್ಭಿತವೆನಿಸಿದೆ.

ಕನ್ನಡ ಸರಳರಗಳೆಗೆ ಇಂಗ್ಲೀಷಿನ ಬ್ಯಾಂಕವರ್ಸ ಸ್ಫೂರ್ತಿ ಕೊಟ್ಟಿದ್ದರೂ, ಇದು ಅದರ ಪಡಿನೆಳಲಲ್ಲ. ಇಂಗ್ಲೀಷ ಬ್ಯಾಂಕವರ್ಸಿನ ಸಾಧನೆ ೬೦೦ ವರ್ಷದ್ದಾದರೆ, ಕನ್ನಡ ಸರಳರಗಳೆಯ ಸಾಧನೆ ೩೦ ವರ್ಷಗಳದ್ದು. ಹೀಗಿದ್ದ ಸಂದರ್ಭದಲ್ಲಿ ಅದರ ನೆರಳು ಇದು ಎಂದಾಗಲಿ ಅದರ ಪುಣ್ಯದಿಂದ ಬೆಳೆಯುತ್ತಿದೆಯೆಂದು ಹೇಳುವ ಮಾತುಗಳು ಅರ್ಥವಿಲ್ಲದವೆನಿಸುತ್ತವೆ. ಸರಳ ರಗಳೆಯ ರೂಪ ಆಧುನಿಕ ಕನ್ನಡ ಕವಿಗಳಿಗೂ ಹೊಸದು. ಯೋಗ್ಯ ಪರಿಸರ, ಹದವಾದ ನೆಲದ ಗುಣ, ಸುಸೂತ್ರ ವಾತಾವರಣ, ಅನುವರಿತು ಬಂದ ಮಳೆ ಇಲ್ಲದಿದ್ದರೆ ಸಸಿಗಳು ಬಿಸಿಲಿನ ಬೇಗೆಗೆ ಬಾಡಿ ಹೋಗುವಂತೆ, ಸಾಹಿತ್ಯರೂಪದ ಬೆಳವಣಿಗೆಗೂ ಈ ಗುಣಧರ್ಮ ಅತ್ಯಾವಶ್ಯಕ. ಇಂದು ಅಂಥ ಉತ್ತಮಲಕ್ಷಣ ಪಡೆದು ಸರಳರಗಳೆ ಬೆಳೆಯುತ್ತಿದೆ. ಈ ಬೆಳವಣಿಗೆ ಭವಿಷ್ಯದತ್ತ ಒಳ್ಳೆಯ ಲಕ್ಷಣಗಳನ್ನು ತೋರಿಸುತ್ತಿದೆ.

ಹೊಸಗನ್ನಡ ಕವಿಗಳು ಸರಳರಗಳೆಯನ್ನು ಬೆಳೆಸಿದ ಮುಂದಾಳುಗಳು. ಗೋಕಾಕರು "ಮೊಟ್ಟಮೊದಲು ಮಂಗಳೂರಿನ ಕೆಲವು ಕವಿಗಳು ಅದನ್ನು ತಮ್ಮ ಕಾವ್ಯದ ರಚನೆಗಾಗಿ ವಿನಿಯೋಗಿಸುತ್ತ ಬಂದಿದ್ದರು " ಎಂದು ಹೇಳಿದರೂ, ಮಾಸ್ತಿಯವರು ಈ ಛಂದಸ್ಸಿಗೆ ಮೊತ್ತ ಮೊದಲು ಶ್ರೀಕಾರ ಬರೆದವರು. ಕಥನಕವನಗಳಿಗೆ ಸರಳರಗಳೆ ಹೇಳಿ ಮಾಡಿಸಿದ ಛಂದೋ ಬಂಧವೆನಿಸಿತು. ಕಥನಕವನಗಳು ಬಹುಶಃ ಮಾಸ್ತಿಯವರ `ಸ್ಥಳಗಳ ಹೆಸರು ' ಎಂಬ ಕವನದಿಂದ ಪ್ರಾರಂಭವಾದವು. ಈ ಕಾರಣದಿಂದ ಕನ್ನಡದಲ್ಲಿ ಕಥೆ ಹೇಳುವುದಕ್ಕೆ ಪ್ರಶಸ್ತವಾದ ಸರಳರಗಳೆಯ ಛಂದಸ್ಸನ್ನು ಮೊತ್ತ ಮೊದಲ ಬಾರಿಗೆ ಬಳಸಿ ಕವನ ಬರೆದ ಶ್ರೇಯಸ್ಸು ಮಾಸ್ತಿ ಅವರದು.

---

೨. ಎಂ. ಗೋವಿಂದ ಪೈ : ಗೊಲ್ಗೊಥಾ (೧೯೩೬) ಸಾಲುಗಳು ೧-೪

೩. ವಿ. ಕೃ. ಗೋಕಾಕ : ಇಂದಿನ ಕನ್ನಡ ಕಾವ್ಯದ ಗೊತ್ತುಗುರಿಗಳು ಪು. ೧೦೮

ಸರಳ ರಗಳೆಯಲ್ಲಿ ಮೊದಲಬಾರಿಗೆ `ಸ್ಥಳಗಳ ಹೆಸರು ' ಕವನ ಬರೆದರೂ, ಅವರೇನೂ ಕಥನಕವನದ ಪ್ರಥಮ ಬರಹಗಾರರಲ್ಲ.

೧೯೨೪ರಲ್ಲಿ ಬರೆದ ಮಾಸ್ತಿಯವರ `ಅರುಣ' `` ಸ್ಥಳಗಳ ಹೆಸರು' ಸರಳ ರಗಳೆಯನ್ನು ಅವಲಂಬಿಸಿದ ಪದ್ಯಗಳು. ಕಥೆ ಹೇಳುವುದಕ್ಕೆ ಪ್ರಶಸ್ತವಾದ ಸರಳ ರಗಳೆಯ ಛಂದಸ್ಸನ್ನು ಮೊದಲಬಾರಿಗೆ ರೂಪಿಸಿ ಕಥೆ ಹೇಳಲು ಬಳಸಿದ್ದರೂ, `ನವರಾತ್ರಿ', `ಮೂಕನ ಮಕ್ಕಳು' `ರಾಮನವಮಿ'`ಗೌಡರ ಮಲ್ಲಿ' ಮುಂತಾದ ಕಥನಕವನಗಳಿಗೆ ಸರಳ ರಗಳೆಯೊಂದಿಗೆ ಬೇರೆ ಬೇರೆ ಛಂದೋರೂಪಗಳನ್ನು ಕಥೆಗಾರಿಕೆಗೆ ಸೊಗಸಾಗಿ ಬಳಸಿಕೊಂಡಿದ್ದಾರೆ. `ಅರುಣ' ಸ್ಥಳಗಳ ಹೆಸರು ಕವಿತೆಗಳಲ್ಲಿ ಅನಾವಶ್ಯಕ ವರ್ಣನೆಗಳಿಲ್ಲದೆ, ಸರಳಪದ ಸಂಯೋಜನೆಯಲ್ಲಿ ಮೂರು ಕಥೆಗಳನ್ನು ಎರಕಹೊಯ್ದಿದ್ದಾರೆ. ಸರಳವಾಗಿ ಪ್ರವಹಿಸುವ ಸರಳರಗಳೆಯು ಮಾಸ್ತಿಯವರ ಕಥನಕಲೆಗೆ ತುಂ ಒಪ್ಪವಾದ ಚೌಕಟ್ಟನ್ನು ಹಾಕಿಕೊಟ್ಟಿದೆ.

ಮಾಸ್ತಿಯವರು ಪ್ರಾರಂಭದಲ್ಲಿ ಇದನ್ನು ಬಿಡಿವೃತ್ತವೆಂದು ಕರೆದಿದ್ದರು. ವೃತ್ತದ ಯಾ ನಿಯಮವೂ ಇಲ್ಲದೆ ಪ್ರತಿಸಾಲೂ ಬಿಡಿ ಬಿಡಿಯಾಗಿದ್ದುದರಿಂದ ಬಿಡಿವೃತ್ತವೆಂದು ಕರೆದಿರಬಹುದು ಆದರೆ ಲಲಿತರಗಳೆಯಿಂದ ಹುಟ್ಟಿದ ರಗಳೆ ಪ್ರಾಸವನ್ನು ಕಳೆದುಕೊಂಡು ಸರಳಗೊಂಡು ರಗಳೆಯ ವಿಶಿಷ್ಟರೂಪಾಗಿ ಈಗ ರೂಢಿಯಲ್ಲಿ ಸರಳರಗಳೆ ಎಂಬ ಹೆಸರೇ ಛಂದೋರೂಪಕ್ಕೆ ಸೂಕ್ತವಾ ಬಂದಿದೆ. `ಗೋವಿಂದ ಪೈ ಅವರು ಈ ಛಂದೋರೂಪಕ್ಕೆ ಸರಳರಗಳೆ ಎನ್ನದೆ " ಇದು ಝುಂ ಯೆಂಬ ಲೋಕ ವಿಶ್ರುತವಾದ ತಾಳವನ್ನು ಇಷ್ಟು ಪ್ರತ್ಯಕ್ಷವಾಗಿ ಒಂದೇ ಒಂದು ಇಳಿಯಷ್ಟಾದರೂ ತಪ್ಪದೇ ಅನುಸರಿಸುವದರಿಂದ ಈ ಛಂದಸ್ಸಿಗೆ ಝುಂಪೆ ಎಂಬ ಅನ್ವರ್ಥನಾಮವೇ ನೇರವಾ ಒಪ್ಪುತ್ತದೆ "[೪] ಎಂದಿದ್ದಾರೆ.

ಇಪ್ಪತ್ತನೆಯ ಶತಮಾನದಲ್ಲಿ ಪ್ರಜ್ಞಾಪೂರ್ವಕ ಸರಳರಗಳೆ ಛಂದಸ್ಸು ರೂಢಿಗೊಂಡಿತ ಇದರ ಅಸ್ತಿತ್ವದ ಬಗ್ಗೆ " ಎಸ್. ಅನಂತ ನಾರಾಯಣ ಅವರು ಸುಮಾರು ೧೮೦೦ ರಲ್ಲಿ ಯಾದವಕವಿಯ `ಕಲಾವತಿ ಪರಿಣಯ' ದಿಂದ ಕೆಲವು ಸಾಲುಗಳನ್ನು ಉದ್ಧರಿಸಿ, ಅವು ವಾಸ್ತ ವಾಗಿ ಸರಳರಗಳೆಯೆ ಆಗಿವೆ ಎಂದೂ, ಆ ಕವಿಯಲ್ಲಿ ಆಕಸ್ಮಿಕವಾಗಿ ಹೀಗೆ ಸರಳರಗಳೆ ಕಾ ಕೊಂಡಿತೇ ಹೊರತು ಪ್ರಜ್ಞಾಪೂರ್ವಕವಾಗಿ ಕವಿ ರೂಪಿಸಿಕೊಂಡಿದ್ದಲ್ಲ " ಎಂದು ತಿಳಿಸಿದ್ದಾರೆ. ಕಲಾವತಿ ಪರಿಣಯದಿಂದ ಸುದೀರ್ಘ ಭಾಗಗಳನ್ನು ಉದ್ಧರಿಸಿ `ಆ ಕೃತಿಯು ದಂಡಕವ ರಚಿತವಾಗಿದೆಯೆಂದು ಬೆಳ್ಳಾವೆ ವೆಂಕಟನಾರಾಯಣಪ್ಪನವರು ತಮ್ಮ ಲೇಖನದಲ್ಲಿ ಸ್ಪ ಪಡಿಸಿರುವರು.[೫] ಕಲಾವತಿ ಪರಿಣಯದಲ್ಲಿ ಉದ್ಧೃತವಾಗಿರುವ ಕೃತಿಭಾಗಗಳನ್ನು ಪರಿಶೀಲಿಸಿ ಮೇಲ್ನೋಟಕ್ಕೆ ತಿಳಿದು ಬರುವುದು ಅದು ಐದು ಮಾತ್ರೆಯ ಗಣಗಳು ಏಕತ್ರಕಾರವಾಗಿ ಕ ಬರುವ ದಂಡಕ ಎಂಬುದು. ಯಾವುದೇ ಕವಿ ರಗಳೆಯನ್ನು ಬರೆದಿಲ್ಲ. ಸರಳರಗಳೆಯನ್ನು ಬರೆದ ದಂಡಕವನ್ನು ಐದುಮಾತ್ರೆಯ ನಾಲ್ಕು ನಾಲ್ಕು ಗಣಗಳಾಗಿ ಜೋಡಿಸಿ ಆರ್. ನರಸಿಂಹಾಚಾರ್

---

೪ ಗೋವಿಂದ ಪೈ : ಗೊಲ್ಲೊಪ್ಪಾ ೧೯೪೮ ಮುನ್ನುಡಿ ಪು IX

೫. ಎಸ್. ಅನಂತನಾರಾಯಣ:ಹೊಸಕನ್ನಡ ಕವಿತೆಯ ಮೇಲೆ ಇಂಗ್ಲೀಷ ಸಾಹಿತ್ಯದ ಪ್ರಭಾವ ; ಪು

೬. ಕಲಾವತಿ ಪರಿಣಯ : ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ : ಜನವರಿ ೧೯೫೫ : ಪು ೨೭೦-೨೧೫

ತಮ್ಮ ಕವಿಚರಿತೆಯ ಮೂರನೆಯ ಸಂಪುಟದಲ್ಲಿ ಲಿಚ್ಚುಮಾಡಿಸಿದ್ದು ಕೃತಿಯು ರಗಳೆಯ ರೂಪವಾಗಿದೆ ಎಂದು ಹೇಳಿದ್ದು, ಮೇಲಿನ ತಪ್ಪು ಕಲ್ಪನೆಗೆ ಕಾರಣವಾಯಿತು. " ಎಂದು ಹೇಳುತ್ತ," ಸರಳ ರಗಳೆ ಕನ್ನಡದಲ್ಲಿ ಪ್ರಪ್ರಥಮವಾಗಿ ಪ್ರಜ್ಞಾಪೂರ್ವಕವಾಗಿ ರೂಪಿತವಾದದ್ದು ಇಪ್ಪತ್ತನೆಯ ಶತಮಾನದ ಆದಿಭಾಗದ ದಶಕಗಳಲ್ಲಿ. ಇಂಗ್ಲೀಷ ಕಾವ್ಯದ ಪರಿಚಯದ ಪ್ರೇರಣೆಯಿಂದಾಗಿ ಹೊಸಕಾವ್ಯವನ್ನು ನಿರ್ಮಿಸಬೇಕೆಂಬ ಹಂಬಲವನ್ನು ಹೊಂದಿದ ಕನ್ನಡ ಕವಿಗಳು ಹೊಸ ಹೊಸ ಮಟ್ಟುಗಳನ್ನು ರೂಪಿಸಿ ಪ್ರಯೋಗಿಸಿದರು[೭] ಹೀಗೆ ಹೊಸ ಮಟ್ಟುಗಳನ್ನು ರೂಪಿಸುವಲ್ಲಿ ಅವರಿಗೆ ಹಿಂದಿನ ಸಾಹಿತ್ಯದಲ್ಲಿ ಬಳಕೆಯಾಗಿದ್ದ ಪಟ್ಟಿದಿ, ರಗಳೆ, ಸಾಹಿತ್ಯ ಇತ್ಯಾದಿ ಮಟ್ಟುಗಳು ಆಧಾರವಾದವು " ಇಂಗ್ಲೀಷಿನ ಬ್ಲ್ಯಾಂಕವರ್ಸಿನ ಜನಪ್ರಿಯತೆ, ಹಲವು ಸೌಲಭ್ಯಗಳನ್ನು ಮನಗಂಡು ಕನ್ನಡ ಕವಿಗಳು ಅದಕ್ಕೆ ಸಮಾನವಾದ ಮಟ್ಟೊಂದನ್ನು ರೂಪಿಸಿಕೊಳ್ಳಲು ಯತ್ನಿಸಿದ ಅವರಿಗೆ ಸಹಜವಾಗಿಯೇ ಕಾಣಿಸಿದ್ದು ಲಲಿತರಗಳೆ. ಲಲಿತರಗಳೆಯು ಆದಿ ಅಂತ್ಯಪ್ರಾಸಗಳನ್ನು ಕಿತ್ತುಹಾಕಿ, ಪಾದಾಂತಯತಿಯನ್ನು ತೆಗೆದುಹಾಕಿದ್ದರಿಂದ ರಗಳೆಗೆ ನಿರಾತಂಕವಾದ ಓಟವು ಲಭಿಸಿತು. ಯತಿಯು ಪಾದದ ಮಧ್ಯೆ, ಕೊನೆ ಎಲ್ಲಿ ಬೇಕೆಂದರಲ್ಲಿ ಬರಲು ಸಾಧ್ಯವಾಯಿತು. ಒಂದೇ ಬಗೆಯ ಗಣಗಳ ಸ್ಥಾನದಲ್ಲಿ ಬೇರೆ ಬೇರೆ ಜಾತಿಯ ಗಣಗಳು ಬಂದಿದ್ದರಿಂದ ವೈವಿಧ್ಯವನ್ನು ತರಲು ಸಾಧ್ಯವಾಯಿತು. ಹೀಗೆ ರಗಳೆಯು ತನ್ನ ಎರಡು ಮೂರು ನಿಯಮಗಳನ್ನು ಕಳೆದುಕೊಂಡುದರಿಂದ ಅದಕ್ಕೆ `ಸರಳರಗಳೆ ' ಎಂದು ಹೆಸರಾಯಿತು. ಸರಳರಗಳೆ ಎಂಬ ಹೆಸರು ಬಳಕೆಗೆ ಬಂದಿರುವದರಿಂದ ಅದನ್ನೇ ಇಟ್ಟುಕೊಳ್ಳಬಹುದು. ಆದರೆ ಪ್ರಾಸನಿರಾಕರಣೆ ಪಾದಾಂತಯತಿಯನ್ನು ತೆಗೆದುಹಾಕಿದ್ದು ಗಣನಿಯಮೋಲ್ಲಂಘನೆ ಇವುಗಳಿಂದಾಗಿ ರಗಳೆಯು `ಸರಳ'ಗೊಂಡು ಸರಳರಗಳೆಯಾಯಿತೆಂಬ ಮಾತು ಸರಳರಗಳೆಯು ರಗಳೆಗಿಂತ ಸರಳವೆಂಬ ಭಾವನೆಯನ್ನು ಉಂಟು ಮಾಡುತ್ತದೆ. ಆದರೆ ಖಚಿತ ನಿಯಮಗಳನ್ನು ಹೊಂದಿದ್ದ ರಗಳೆಯು ತನ್ನ ನಿಯಮಗಳನ್ನು ಕಳೆದುಕೊಂಡಿದ್ದರಿಂದ ಸರಳವಾಗಲಿಲ್ಲ ಸಂಕೀರ್ಣವಾಯಿತು. ರಗಳೆಯ ಲಕ್ಷಣಗಳನ್ನು ನಾಲ್ಕು ಮಾತಿನಲ್ಲಿ ಪಟ್ಟಿ ಮಾಡಿ ಹೇಳಿಬಿಡಬಹುದು. ಆದರೆ ಸರಳರಗಳೆಯ ಲಕ್ಷಣವನ್ನು ಅಷ್ಟು ಸುಲಭವಾಗಿ ಪಟ್ಟಿ ಮಾಡಲಾಗುವದಿಲ್ಲ. ಸರಳ ರಗಳೆ ವಾಸ್ತವವಾಗಿ ಸಂಕೀರ್ಣವೇ ಆಗಿದೆ [೮]"ಎಂದು ಸರಳ ರಗಳೆಯನ್ನು ಕುರಿತು ವಿಶ್ಲೇಷಣಾತ್ಮಕ ವಿವೇಚನೆ ಕೈಕೊಂಡ ಡಾ. ಎಮ್. ಚಿದಾನಂದಮೂರ್ತಿಯವರ ಹೇಳಿಕೆಗೆ ಎರಡು ಮಾತಿಲ್ಲ.

ಸರಳ ರಗಳೆಯನ್ನು ಬಳಸಿಕೊಂಡು ಸಿದ್ಧವಾದ ಮೊದಲನೆಯ ಪ್ರಯೋಗಕೃತಿ `ಸ್ನಳಗಳ ಹೆಸರು'. ಇದನ್ನು ಕುರಿತು ಎಸ್. ಅನಂತನಾರಾಯಣ ಹೇಳುವಂತೆ ' ಇಲ್ಲಿ ಕಾಣುವ ಸರಳ ರಗಳೆ ಪ್ರಾಯೋಗಿಕ ರೂಪವಲ್ಲ ; ಆಗಲೇ ಸಿದ್ಧಿಯನ್ನು ಪಡೆದ ರೂಪವಾಗಿದೆ. ಹಸಿಹಸಿಯಾದ ಪ್ರಯೋಗರೂಪದಲ್ಲಿಲ್ಲ ; ಪಕ್ವವಾಗಿ ರಸದೂಟವಾಗಿದೆ " ಎಂದಿರುವರು.

---

೭. ತೀ. ಸಂ. ಶ್ರೀಕಂಠಯ್ಯ : ಕನ್ನಡದಲ್ಲಿ ಹೊಸಮಟ್ಟುಗಳಿಗಿರುವ ಅವಶ್ಯಕತೆ (ಸಮಾಲೋಕನ)

೮. ಎಂ. ಚಿದಾನಂದಮೂರ್ತಿ : ಭಂವಪ್ಪಿನ ಪ್ರಯೋಗಗಳು `ಸಪ್ತೋದಯ ಕಾವ್ಯದಲ್ಲಿ' (ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು : ಪು ೧೧೫-೨೫)

೯. ಡಾ. ಎಮ್. ಚಿದಾನಂದಮೂರ್ತಿ : ರಗಳೆ ಸರಳ ರಗಳೆ ಮತ್ತು ಮಹಾಭಂದಸ್ಸು `ಸಹ್ಯಾದ್ರಿ' ಪು ೫೬೭. ೬೮

.... ಹಂಡಾಗಿ ಬಲು ಚೆಲುವೆ
ತುಟಿಯು ರಂಗು ; ಮೂಗು ಮೂಗುತಿ, ಬಾವಲಿಯು
ಕಿವಿ ; ಹಣೆಯು ಕುಂಕುಮದ ಬಟ್ಟು ; ಭಾರದ ಹೆರಳು
ಹೆರಳನಲಿ ತೊಟ್ಟ ಮಲ್ಲಿಗೆ ಹೂವು ಕೊಪ್ಪು ಇವ
ಕಂಡು ಮನಸೋತವನು [೨೦] ||

ಸರಳ ರಗಳೆಯ ಪ್ರಥಮ ಪ್ರಯೋಗವಾದ ಈ ಬಂಧ ತನ್ನದೇ ಆದ ಲಯ ಕಾಪಾ ಕೊಂಡು ಅನಂತರದ ಪ್ರಯೋಗಕ್ಕೆ ಸಮೀಪವಾಗಿ ಸಾಂದರ್ಭಿಕವಾಗಿ ಹರಿದು ತನ್ನ ಗಾಂಭೀರ್ಯವನ್ನು ಉಳಿಸಿಕೊಂಡಿದೆ. ವಿರಾಮದ ಏರಿಳಿತದಿಂದ ಲಯವಿನ್ಯಾಸ ವಿವಿ ಗತಿಯನ್ನು ಸಾಧಿಸಿರುವುದು ಸರಳರಗಳೆಯ ಹಿರಿಯ ಗುಣವೆನಿಸಿದೆ.

ಮಾಸ್ತಿಯವರ ಪ್ರಥಮ ಪ್ರಯೋಗಕ್ಕೆ ೩೩ ಈ ಸರಳರಗಳೆಯ ೩೭ ಅವರ ಎಲ್ಲ ಸರಳರಗಳೆಯ ಕವಿತೆಗಳಲ್ಲಿಯೂ ಕಾಣುವದಿಲ್ಲ. ಅವರ ಅನೇಕ ಪದ್ಯಗಳ ಸಾಲುಗಳು ಬಂದು ಪಕ್ಕದಲ್ಲೊಂದಿಟ್ಟಾಗ ಸಾಮಾನ್ಯವಾದ ಗದ್ಯವೆನಿಸುತ್ತಿದೆ. ಶ್ರೀನಿವಾಸರ ನವರಾತ್ರಿ ಮೊದಲಾ ಕಥಾಕವನ ಸಂಗ್ರಹಗಳು ಈ ಕುಂದುಕೊರತೆಗಳಿಂದ ತಪ್ಪಿಸಿಕೊಂಡಿಲ್ಲ [೨೧] ಇಂತಹ ಸಂದರ್ಭಗಳಲ್ಲಿ ಯಾಂತ್ರಿಕವಾಗಿ ೩೦ ಮಾತ್ರೆಗಳಿದ್ದರೂ, ಗದ್ಯತನವೇ ಮುಖ್ಯವಾಗಿ ಕಾಣಿಸಿ ಅದು ಸರಳ ರಗಳೆಯ ಲಕ್ಷಣಗಳನ್ನು ಹೊಂದಿದ್ದರೂ ಸರಳರಗಳೆಯಾಗದೇ ಹೋಗುವ ಸಾಧ್ಯತೆ ಇದೆ.

ಸರಳ ರಗಳೆಯನ್ನು ಅನುಸರಿಸಿ ಹೊಸ ಕೃತಿಗಳಿಗೆ ಕೈಯಿಕ್ಕಿ ಅನೇಕ ಬರಹಗಾರರ ೫ ಮಾತ್ರೆಯ ೪ ಗಣನಿಯಮವನ್ನನುಸರಿಸುವಲ್ಲಿ ಎಡವಿದ್ದು ಕಂಡುಬರುತ್ತದೆ.

ಏತಕೋ ಎದೆಯು ಡಬುಡಬುಯೆಂದು ಹೊಡೆಯುವುದು
ದಾಹವನು ಹೊರಡುವನು ಅವನು ಇಂತಾಗುವನು
ಸೀರದಿದ ಲಕ್ಷ್ಮಣನ ? ನನೆ ಬೇಗ ರಾಮ್ಯ ಮನೆ [೨೨]

ಪ್ರತಿಪಾದದ ಕೊನೆಗೆ ಪೂರ್ಣ ವಿರಾಮವಿಲ್ಲ, ೩೦ ಮಾತ್ರೆಯ ಗಣದ ಒಂದು ಸಾ ಅರ್ಥದ ಒಂದು Unit ಮುಗಿದಾಗ, ಏಕತಾನತೆಯಿಂದ ಬೇಸರ ಹುಟ್ಟಿಸುವಂತಿದೆ. ಸಾಲು ಅರ್ಥದಲ್ಲಿಯೂ ಪದಗಳಲ್ಲಿಯೂ ಕೊನೆಯಲ್ಲಿಯೂ ವಿರಾಮ ಪಡೆಯದೆ, ಮುಂದಕ್ಕೆ ಹರಿ ಬೇಕು. ಐದು ಮಾತ್ರೆಯ ಪ್ರತಿ ಗಣಕ್ಕೆ ಒಂದು ಪದ್ಯ. ಎರಡು ಪದಗಳೊಡನೆ ಅರ್ಥವಿರಾ ಸಾಲಿನ ಕೊನೆಯಲ್ಲಿ ಪೂರ್ಣವಿರಾಮ ಬಂದರೆ ಅದನ್ನು ಸರಳರಗಳೆ ಎಂದು ಕರೆಯಲಾಗುವುದಿ ಆದಿ ಅಂತ್ಯ ಪ್ರಾಸ ಕಳೆದು ಬರಹಗಳನ್ನು ಹರಿಯಬಿಡುವುದರಿಂದ ಮಾತ್ರ ಸರಳ ರಗಳೆಯಾಗುತ್ತ ಮೇಲಿನ ಸಾಲುಗಳಲ್ಲಿ ಗಣ ಗಣ ಮಾತ್ರಾಪ್ರಮಾಣವಿಲ್ಲದ ವೈವಿಧ್ಯತೆ ಕಳೆದುಕೊಂಡು ಏಕತಾ ಹೊಂದಿರುವುದರಿಂದ ಇದನ್ನು ಸರಳರಗಳೆ ಎಂದು ಹೇಳದೇ ಅದರ ಹತ್ತಿರದು ಎಂ ಹೇಳಬಹುದಾಗಿದೆ.

---

೨೦. ಮಾಸ್ತಿ : ಅರುಣ, ಪು ೩೫-೩೬

೨೧. ಡಾ. ಜವರೇಗೌಡ : ಶ್ರೀನಿವಾಸರ ಅವರ ಕೃತಿಗಳು ಪ್ರಸ್ತುತ ಪ್ರಕಾಶ ... ೧೯೬೯

೨೨. ಕೆ. ದರಬಂಡಪ್ಪ ; ಕೊಡ್ಡಾರ್ ... ೧೯೬೨ ಸಾಲುಗಳು ೩೩೬ - ೩೮೪.

ಅದೇ ರೀತಿ 'ಸೀತಾ ವನವಾಸ 'ದ ಕೆಳಗಿನ ಸಾಲುಗಳನ್ನು ಗಮನಿಸಿದರೆ ಸರಳ ರಗಳೆಯ ಲಕ್ಷಣ ಸ್ಪಷ್ಟವಾಗಿ ಕಂಡುಬರುತ್ತದೆ.

ಲಕ್ಷ್ಮಣನು ಕಂಗೆಟ್ಟು ಇಂತು ದೊರಕೆ ಸರಿಯಿ
ಅಸವಳಿದು ಬಸವಳಿದು ದೆಸೆಗಾಣದೊರಲಿಡುತ
ಸೀತೆಯಾಕ್ರಂದನಕೆ ಗುಹೆಗಳಾಕ್ರಂದಿಸಲು
ಗುಹೆಗಳಿಂ ಘುಡುಘುಡಿಸಿ ಮೃಗಗಳಾರ್ಭಟಿಸಿದವು [೨] ॥

ಇಲ್ಲಿಯ ಪಾದಗಳಲ್ಲಿ ಸಹಜತೆ ಸರಳ ಹರಿಯುವಿಕೆ ರಸಭಂಗತೆಗೆ ಅವಕಾಶವಿಲ್ಲದೆ ಏಕತಾನತೆ ಇಲ್ಲದೆ, ಸರಳ ರಗಳೆಯ ಲಕ್ಷಣಗಳನ್ನೆಲ್ಲಗೊಂಡ ಕಾವ್ಯಬಂಧ ಇದಾಗಿದೆ.

''ಕಥನಕವನ ಶೈಲಿಯು ಸರಳರಗಳೆ ಹಲವೆಡೆ ಕಾವ್ಯಮಯವಾಗಿ ಸಂಭಾಷಣೆ ಅಲ್ಲಿ ಣಾಮಕಬಹುದು. ಈ ಶೈಲಿಯಲ್ಲಿ ಮೂಲತಃ ಎರಡು ಗುಣಗಳಿರಬೇಕು. ಮನೋಹರವಾದ ನಿರೂಪಣಚಾತುರ್ಯ ಹಾಗೂ ಅವ್ಯಾಹತವಾಗಿ ಕಥೆಯನ್ನು ನಿರೂಪಿಸುವ ರೀತಿ. ಈ ಉದ್ದೇಶ ಸಾಧನೆಗೆ ಸರಳ ರಗಳೆ ಹೊಳೆಯಾಗಿ ಪ್ರವಹಿಸಬೇಕಾಗುತ್ತದೆ. ಪ್ರತಿಯೊಂದು ಸಾಲಿನ ಕೊನೆಗೆ ವಿರಾಮವಿದ್ದಲ್ಲಿ ಅದು ವಿಘಾತಕವಾಗಿ ಪರಿಣಮಿಸುವುದು [೩]'' ಎಂಬ ಗೋಕಾಕರ ಮಾತನ್ನು ಮನದಂದರೆ ಸರಳ ರಗಳೆಯಲ್ಲಿ ವೈವಿಧ್ಯತೆ ಸಿದ್ಧಿಯಾಗುವದರಲ್ಲಿ ಸಂಶಯವಿಲ್ಲ. ಅದೇ ರೀತಿ 'ನಿಯಮಗಳನ್ನು ಅತಿಶ್ರದ್ಧೆಯಿಂದ ಅನುಸರಿಸಿದರೆ, ಏಕಾದವೂಟವಾಗಿ ಬೇಸರ ತರಿಸುತ್ತದೆ. ಒಂದು ಕಿವಿಯನ್ನು ತಾಳಕ್ಕೂ ಒಂದು ಕಿವಿಯನ್ನು ಭಾವಾಗತಿಗೂ ಪದ್ಮಕಾರನು ತೆರೆದಿಟ್ಟು ಎರಡಕ್ಕೂ ವಿರೋಧ ಬಾರದಂತೆ ತನ್ನ ಹಾಡನ್ನು ಕಟ್ಟಬೇಕು. ನಿಯಮ ವೈವಿಧ್ಯತೆಗಳ ಸಮನ್ವಯವೇ ಭೂಮಿನ ತಿರುಳು' ಎಂಬ ತೀ. ನಂ. ಶ್ರೀಯವರ ಅಭಿಪ್ರಾಯ ನೆನೆದು [೪] ಶಿಥಿಲತೆಗೆ ಅವಕಾಶ ಕೊಡದೆ, ಅತಿಜಿಗಿಯಾಗಿಸದೆ ಸರಳ ರಗಳೆಯಲ್ಲಿ ರಸಸಮನ್ವಯ ಸಾಧಿಸುವುದೇ ಇದರ ಮುಖ್ಯ ಲಕ್ಷಣವೆನಿಸಿದೆ.

ಗಣವ್ಯತ್ಯಾಸದಿಂದ ಉಚ್ಚಾರಾಂಶಗಳ ವ್ಯತ್ಯಾಸದಿಂದ ಬ್ಲಾಂಕವರ್ಸಿನಲ್ಲಿ ವೈವಿಧ್ಯ ಬಂದಿದೆ. ಇದೊಂದೇ ಅಲ್ಲದೆ ತಾಂತ್ರಿಕ ಗುಣವೂ ಅಲ್ಲಿದೆ ಮಿಲ್ಟನ್ ಕವಿ ತನ್ನ ಸರಳ ರಗಳೆಯಲ್ಲಿ ಸಮಶೈಲಿಯನ್ನು (Grand skyle) ಹೊಗೆ ಸಾಧಿಸಿದನೆಂಬುದರ ಬಗ್ಗೆ ಚರ್ಚಿಸುತ್ತ ಕ್ವಿಲ್ಲರ್ ಕೂಚ್ ಹೇಳಿರುವ ಹೇಳಿಕೆಯನ್ನು ಗಮನಿಸಬಹುದು ''ಇದರ ಗುಟ್ಟು ಮುಖ್ಯವಾದ ಗುಟ್ಟು ಇದನ್ನು ಬದಲಾಯಿಸುವಲ್ಲಿ ಸೊಗಸಾಗಿ ನಿರ್ದೇಶಿಸಿ ಪಲುಕಿಸುವಯತಿಯು ಚಾರುನಡೆಯಲ್ಲಿದೆ'' ಎಂದಿರುವನು [೫] ಈ ತಾಂತ್ರಿಕಗುಣವೇ ಕುವೆಂಪು ಅವರ ರಾಮಾಯಣ ದರ್ಶನ ಮಹಾಭಂಡಾರದ ಜನತೆಗೆ ಸ್ಫೂರ್ತಿನೀಡಿದೆ.

---

೧. ಕೆ. ಸರಜಂಹಶಾಸ್ತ್ರಿ : ಸೀತಾವನವಾಸ. ಪು ೧೯೩೨ ಸಾಲು ೩೭೨ -೩೭೫
೨. ವಿ. ಕೃ. ಗೋಕಾಕ : ಇಂದಿನ ಕನ್ನಡ ಕಾವ್ಯದ ಗೊತ್ತುಗುರಿಗಳು ಪು - ೯೪
೩. ತೀ. ನಂ. ಶ್ರೀ. : ಸಂಭಾವನೆ : ಹೊಸ ಭಾವನೆಯ ಲಯಗಳು ೧೯೪೧ ಪು -೪೧೫
೪. Quiller Couch Cambridge Lecturer 1944 p -258

``ಮಾತ್ರೆಗಳ ವೈವಿಧ್ಯತೆಯಿಂದ ಗಣ ಲಯಗಳ ವ್ಯತ್ಯಾಸಗಳಿಂದ ಕನ್ನಡದ ಸರಳ ರಗಳೆಯಲ್ಲಿ ವೈವಿಧ್ಯತೆ ತರುವ ಪ್ರಯತ್ನವಿದೆ. ಇದರಿಂದಲೇ ಮಹಾಛಂದಸ್ಸೆಂಬ ಸರಳ ರಗಳೆಯ ಪ್ರಭೇದ ಸೃಷ್ಟಿಯಾಗಿದೆ. ಪ್ರತಿಪಾದದಲ್ಲಿಯ ಒಂದೆರಡು ಮಾತ್ರೆಗಳನ್ನು ಹೆಚ್ಚಿಸುವುದೂ ಕಡಿಮೆ ಮಾಡುವುದು ಲಯವೈವಿಧ್ಯ ಲಾಲಿತ್ಯ ಬಿಸಿ ಇವುಗಳನ್ನು ತರುವ ಒಂದು ತಾಂತ್ರಿಕ ವಿಧಾನ. ನಿಯಮಾನುಸಾರವಾಗಿ ಬಂಧವನ್ನಿಟ್ಟುಕೊಂಡೇ ವೈವಿಧ್ಯತೆ ಪಡೆಯಲು ಸಾಧ್ಯವಾದರೆ ಸರಿ, ಆದರೆ ಅಗತ್ಯವಾದ ನಿಯಮಗಳನ್ನು ಮೀರಿ ಹೋಗುವುದರಲ್ಲಿ ಏನೂ ತಪ್ಪಿಲ್ಲ " ಸ್ವಾತಂತ್ರ್ಯದ ಲಾಲಸೆಯು ದುಷ್ಪರಿಣಾಮಕಾರಿಯು [೧೫]" ಎನ್ನುವ ಅವರ ಅಭಿಪ್ರಾಯವೂ ನಿಜ. ಕವಿ ತನ್ನ ಭಾವವನ್ನು ಸಂಪೂರ್ಣವಾಗಿ ತೃಪ್ತಿಕರವಾಗಿ ಅಭಿವ್ಯಕ್ತಗೊಳಿಸಲು ಉದ್ದೇಶ ಪೂರ್ವಕವಾಗಿ ಫಲಸಾಧನೆಯ ದೃಷ್ಟಿಯಿಂದ ಛಂದಸ್ಸನ್ನು ಬದಲಾಯಿಸಿಕೊಳ್ಳಬಹುದು. ಹೊಸಛಂದಸ್ಸನ್ನೇ ಸೃಷ್ಟಿಸಿಕೊಳ್ಳುವ ಸ್ವಾತಂತ್ರ್ಯ ಹೊಂದಿದ ಕವಿ ಅಲ್ಲಲ್ಲಿ ಅಗತ್ಯಕ್ಕೆ ಅನುಗುಣವಾಗಿ ಛಂದಸ್ಸಿನ ನಿಯಮ ಮೀರುವುದು ಅಂತಹ ಪ್ರಮಾದವೇನಲ್ಲ.

ಕವಿಗೆ ಛಂದಸ್ಸಿನ ನಿಯಮ ಮೀರಲಾರದಂತಹ ಕಟ್ಟುನಿಟ್ಟಿನ ನಿಯಮವಿಲ್ಲ. ಅವಶ್ಯಬಿದ್ದರೆ ಲಯವೈವಿಧ್ಯ ಲಾಲಿತ್ಯ ಮತ್ತು ಭಾವಪೂರ್ಣಾಭಿವ್ಯಕ್ತಿ ಇವುಗಳಿಗಾಗಿ ಈ ನಿಯಮಗಳನ್ನು ಸಡಿಲಿಸಿಕೊಳ್ಳಬಹುದು. ಪ್ರಯೋಗ ನಡೆಸಿ ಛಂದೋವೈವಿಧ್ಯ ತರಬಹುದು. ಇದರಿಂದ ಕಾವ್ಯದ ಪರಿಮಿತಿ ವಿಸ್ತಾರಗೊಳ್ಳುತ್ತದೆ. ``ಕಾಲಕ್ಕೆ ತಕ್ಕಂತೆ ರಚನೆಯನ್ನೇ ಅಲ್ಲ ಛಂದಸ್ಸನ್ನು ವ್ಯಾಕರಣವನ್ನು ಕೂಡ ತನಗೆ ಬೇಕಾದಂತೆ ಸೇರ್ಪಡಿಸಲೂ ಮಾರ್ಪಡಿಸಿಕೊಳ್ಳಲೂ ಕವಿಗೆ ಅಧಿಕಾರವಿದೆ [೧೬] ಇದು ಕಾವ್ಯದ ಬೆಳವಣಿಗೆಯಲ್ಲಿ ಆರೋಗ್ಯಕರ ಹಾದಿ.

``ಇಂಗ್ಲೀಷ ಬ್ಯಾಂಕವರ್ಸದ ರೀತಿಯಂತೆ ನಮ್ಯತೆ ಪ್ರಯೋಗ ಸಾಫಲ್ಯ ಇವುಗಳನ್ನು ಸರಳ ರಗಳೆಯಲ್ಲಿ ಗುರುತಿಸುವದಾದರೆ, ಲಯದಲ್ಲಿ ಒಂದು ಹೊಸ ಬೆಳಕನ್ನು ತರುವದಕ್ಕಾಗಿ ಒಂದು ಜಾತಿಯ ಗಣಗಳ ಸ್ಥಾನದಲ್ಲಿ ಅದೇ ಮಾತ್ರೆ ಪರಿಮಿತಿಯ ಇನ್ನೊಂದು ಜಾತಿಯ ಗಣಗಳನ್ನು ಇರಿಸುವುದಕ್ಕೆ ಗಣಪರಿವೃತ್ತಿ ಎಂಬ ಹೆಸರನ್ನು ತೀ. ನಂ. ಶ್ರೀ ಸೂಚಿಸಿರುವರು. ಸರಳರಗಳೆಯ ಪ್ರತಿಪಾದದಲ್ಲಿ [೧೭]

5 + 5 + 5 +5
3 + 4 + 3 + 4 +3
5 + 5 + 3 + 4 + 3

ಈ ರೀತಿ ಮಾತ್ರಾ ಬದಲಾವಣೆಯನ್ನು ಗಣಪರಿವೃತ್ತಿ ಎನ್ನಲಾಗಿದೆ. ೫ ಮಾತ್ರೆಯ ಗಣದ ಧಾಟಿಯಲ್ಲಿ ಚರಣದ ಮಧ್ಯಭಾಗದಲ್ಲಿ ಈ ಪರಿವೃತ್ತಿ ಛಾಯೆ ಬಂದರೆ ಅತಿಶಯ ಬಳುಕು ಅಲ್ಲಿ ಗೋಚರವಾಗುತ್ತದೆ ಎನ್ನುವ ತೀ ನಂ. ಶ್ರೀ ತಮ್ಮ `ಹೊಸ ಛಂದಸ್ಸಿನ ಲಯಗಳು ' ಲೇಖನದಲ್ಲಿ

---

೧೬. ವಿ. ಕೃ. ಗೋಕಾಕ : ಇಂದಿನ ಕನ್ನಡ ಕಾವ್ಯದ ಗೊತ್ತುಗುರಿಗಳು ಪು. : ೧೦೫
೧೫. ಗೋವಿಂದ ಪೈ : ಕರ್ನಾಡ ಸಾಹಿತ್ಯಜ್ಞರ ಆತ್ಮಕಥನ
೧೭. ತೀ. ನಂ. ಶ್ರೀ : ಸಂಭಾಷಣೆ `ಹೊಸ ಛಂದಸ್ಸಿನ ಲಯಗಳು ಪು : ೪೧೩

ವೀರಕ್ಕೆ । ವಿನಯ । ಮೆಂಬುದು । ಮುಡಿಯ । ಮಾಣಿಕಂ

ಇಲ್ಲಿ 5 + 5 ಮಾತ್ರೆಯಂತೆ `ಮೆಂ'ಎಂದಾದ ಮೇಲೆ ಗಣ ಮುಗಿಯಬೇಕಾಗಿದ್ದರೂ 5 + 3 + 4+ 3 + 5 ಮಾತ್ರೆಗಳ ಬಳಕೆ ರಮ್ಯತೆಗೆ ಕಾರಣವಾಗಿದೆ. ಕನ್ನಡ ಸಾಹಿತ್ಯಕೋಶದಲ್ಲಿ ಇಂಥ ಉದಾಹರಣೆಗಳು ಅಧಿಕ.

ಸರಳ ರಗಳೆಯನ್ನಾಧರಿಸಿಕೊಂಡು ಕನ್ನಡ ಕವಿ ಕುವೆಂಪು ಅವರು ಸರಳರಗಳೆಯನ್ನಾಧರಿಸಿ ಚಿತ್ರಾಂಗದಾ, ರಕ್ತಾಕ್ಷಿ, ಬಿರುಗಾಳಿ, ಯಮನ ಸೋಲು ಹೀಗೆ ಅನೇಕ ಸರಳ ರಗಳೆಯ ನಾಟಕಗಳನ್ನು ರಚಿಸಿರುವರು. ಚಿತ್ರಾಂಗದಾ ದೀರ್ಘ ಕಾವ್ಯದಲ್ಲಿ ಚಿತ್ರಾಂಗದೆಯ ಕಥೆಯ ಸುಂದರ ಚಿತ್ರಣವಿದೆ. ಇದೊಂದು ಕಥನಕವನ. ಕಥನ ಕವನಗಳಿಗೆ ಹಿಂದೆ ಷಟ್ಪದಿಯ ಲಕ್ಷಣಗಳು ಹೊಂದಿಕೊಂಡಂತೆ, ಕುವೆಂಪು ಅವರು ಪ್ರಾರಂಭದಲ್ಲಿ ಸರಳ ರಗಳೆ ಅವಲಂಬಿಸಿ ಕಥನಕವನಗಳನ್ನು ಬರೆಯಲಾರಂಭಿಸಿದರು. ಇವರ ಕಥನಕವನಗಳ ವೈಶಿಷ್ಟ್ಯವೆಂದರೆ ಸ್ವತಂತ್ರವಾಗಿ ಕನ್ನಡದಲ್ಲಿ ಮೊತ್ತಮೊದಲು ಮಹೋಪಮಯನ್ನುಪಯೋಗಿಸಿದ್ದು. ಸರಳ ರಗಳೆಯಿಂದ ಪ್ರಾರಂಭಗೊಂಡ ಛಂದೋ ಮಟ್ಟ ಮಹಾಛಂದಸ್ಸಿಗೆ ಮಾರ್ಪಾಡಾದುದು. ಸರಳ ರಗಳೆಯನ್ನು ಕಥೆ ಹೇಳಲೆಂದೇ ನಿರ್ಮಿಸಿಕೊಂಡುದು ಒಂದು ಹಿರಿಯಸಾಧನೆ.

ಮಹಾಛಂದಸ್ಸು ಎಂಬ ಹೊಸ ಛಂದೋರೂಪ ಶ್ರೀ ರಾಮಾಯಣ ದರ್ಶನಕ್ಕಾಗಿ ಕುವೆಂಪುರವರೇ ರಚಿಸಿದ ಹೊಸ ಕೊಡುಗೆ. 1936 ರಲ್ಲಿ ರಚನೆಗೊಂಡ ಚಿತ್ರಾಂಗದಾ 1946 ರಲ್ಲಿ ಕೆಲಬದಲಾವಣೆಗಳೊಂದಿಗೆ ಮಹಾಛಂದಸ್ಸಿನ ಕೃತಿಯಾಯಿತು. ಈ ಬಗ್ಗೆ ಅವರೇ ಹೇಳುವಂತೆ ``ಸುಮಾರು 5000 ಪಂಕ್ತಿಗಳನ್ನು ಬರೆದ ನಂತರ ನಾನು ಕಾವ್ಯಕ್ಕೆ ಆಧೀನನಾದೆ. ಅದರಲ್ಲಿ ಲಯವಾದೆ. ಛಂದಸ್ಸು ತಾನಾಗಿಯೇ ಬದಲಾವಣೆ ಹೊಂದಿತು. ಗುರಿ ಬದಲಾಯಿಸಿತು. ಐದು ಮಾತ್ರೆಯ ಲೆಕ್ಕಾಚಾರದ ಗಣಗಳನ್ನು ಮುರಿದು ತುಂಡುಮಾಡಿದೆ. ಮುರಿದಷ್ಟು ಸಂತೋಷವಾಯಿತು. ಅದನ್ನು ಪ್ರಯತ್ನಪೂರ್ವಕವಾಗಿ ಮಾಡಿದೆನೆಂದು ಭಾವಿಸಬಾರದು. ನನಗೆ ಅರಿವಿಲ್ಲದೆಯೆ ಭಾವ ನನ್ನನ್ನು ಆ ಕಡೆಗೆ ಎಳೆಯಿತು ಇದು ತಪ್ಪಿರಬಹುದೆಂದು ನನ್ನ ಪಂಡಿತ ತನ ನನಗೆ ಬೋಧಿಸಿತು. ತಿದ್ದಿದೆ, ಒಡೆದೆ ಮತ್ತೆ ತನ್ನದೇ ದಾರಿ ಹೋಗಲೆಂದು ಕಡಿವಾಣವನ್ನು ಸಡಿಸಿಲಿದೆ ಓಡಿತು. ಅದರ ರಹಸ್ಯ ಮೊದಲು ನನಗೆ ಗೊತ್ತಾಗಲಿಲ್ಲ. ಎಲ್ಲೆಲ್ಲಿ ಸಂಪ್ರದಾಯವನ್ನು ಮೀರಿ ತುಳಿದ ದಾರಿಯನ್ನು ಬಿಟ್ಟು ಹೋಗಿತ್ತೋ ಅಲ್ಲಲ್ಲಿ M (Mark) ಎಂದು ಗುರುತು ಹಾಕಿಕೊಂಡೆ. ಕೊನೆಗೆ ಅದೇ ಸರಿಯೆಂದು ಅರಿವಾಯಿತು. ಮಹಾಛಂದಸ್ಸೆಂಬ ಅರಿವಾಯಿತು. ಮಹಾಛಂದಸ್ಸೆಂಬ ಹೆಸರು ಹೊಳೆದದ್ದು ಆಗಲೇ ಎಂ" ಎಂಬುದಾಗಿ ಹೇಳಿರುವರು.

ಬಿರುಗಾಳಿ ಮತ್ತು ರಕ್ತಾಕ್ಷಿ ನಾಟಕಗಳಲ್ಲಿ ಸರಳರಗಳೆ ನಮ್ಯತೆಯ ಅರಿವಾಗಿ ಪ್ರಯೋಗಗಳು ನಡೆದಿವೆ. ಇಂಥ ಸಂದರ್ಭದಲ್ಲಿ ಕವಿಯಾದವನು ಛಂದಸ್ಸನ್ನು ಬೇಕಾದ ಹಾಗೆ ಮಾರ್ಪಡಿಸಿಕೊಳ್ಳಬಹುದು. ಭಾವದ ಮಣಿತಕ್ಕೆ ತಕ್ಕ ರೀತಿಯಲ್ಲಿ ಅದನ್ನು ರೂಪಿಸುವ ಗುಣಧರ್ಮ ಸುರಿತ ಕವಿಗೆ ಮನದಟ್ಟಾಗಿದ್ದರೆ ಸಾಕು. ಇದನ್ನು ಕುರಿತು ಟಿ. ಎಸ್. ವೆಂಕಣಯ್ಯನವರು " ಪದ್ಯ ರಚನೆಯಲ್ಲಿ ಹೆಚ್ಚು ಸ್ವಾತಂತ್ರ್ಯವನ್ನು ವಹಿಸುತ್ತಾರೆ. ಗಣಕ್ಕೆ ಐದು ಮಾತ್ರೆ ಇರುವುದು ಅದರ

---

೨೦. ದೇ. ಜ. ಗೌ. : ಶ್ರೀ ಕವಿ ಕೃತುದರ್ಶನಂ ಅದೇ ಪು : ೨೪

ಲಕ್ಷಣವಾದರೆ, ಕೆಲವು ವೇಳೆ ಅದರ ಸಂದರ್ಭಾನುಸಾರ ಗಣಕ್ಕೆ ಮೂರು ನಾಲ್ಕು ಅಥವಾ ಆರು ಮಾತ್ರೆಗಳನ್ನು ಉಪಯೋಗಿಸುತ್ತಾರೆ. ಕೆಲವು ಪಾದಗಳಲ್ಲಿ ಗಣಗಳ ಸಂಖ್ಯೆಯೂ ಹೆಚ್ಚು ಕಡಿಮೆಯಾಗುತ್ತದೆ. ಹೀಗಾಗಿ ಪದ್ಯವನ್ನೇ ಓದುವ ಹಾಗೆ ಓದುವವರಿಗೆ ಅನೇಕ ವೇಳೆ ಎಡವಿದಂತೆ ಮುಗ್ಗರಿಸಿದಂತೆ ಆಗುತ್ತದೆ [೨೦]" ಈ ಛಂದೋಭಂಗ ಅಜಾತುರ್ಯದಿಂದ ಅಜ್ಞತೆಯಿಂದ ಆದದ್ದಲ್ಲ ಎಂಬುದೂ ಇವರ ಹೇಳಿಕೆ ಇದನ್ನು ಕುರಿತು ಕೃಷ್ಣಶಾಸ್ತ್ರಿಗಳು " ಮಹಾಕವಿಗಳಿಗೆ ದಾರಿ ತೋರಿಸುವವರು ಯಾರು ? ವಸ್ತು ಚೆನ್ನಾಗಿದ್ದರೆ ಅದರ ಗುಣಾತಿಶಯದಲ್ಲಿ ಲೋಪದೋಷಗಳು ಎಲ್ಲಿಯೋ ಅಡಗಿ ಹೋಗುವವು, ಬುದ್ದಿ ಪೂರ್ವಕವಾಗಿ ಮಾಡುವ ವ್ಯತ್ಯಾಸಗಳು ಉಂಟು ಮುಂದೆ ಅದೇ `ವೈವಿಧ್ಯ', `ವಿಶೇಷ' ಎನ್ನಿಸಿಕೊಳ್ಳಬಹುದು "ಎಂದಿರುವರು [೨೧] ಟಿ. ಎಸ್. ವೆಂಕಣಯ್ಯನವರ ಆಳವಾದ ನೋಟಕ್ಕೆ ತೀಕ್ಷ್ಣದೃಷ್ಟಿಗೆ ಅವರ ಮುನ್ನುಡಿಗಳೇ ಪರಮ ಪ್ರಯೋಜನವೆನಿಸಿವೆ ; ವೈವಿಧ್ಯತೆ ವಿಶೇಷತೆಗೆ ಸಾಕ್ಷಿಯಾಗಿವೆ.

ಇಂಗ್ಲೀಷ ಬ್ಲ್ಯಾಂಕವರ್ಸನ ಪ್ರಯೋಗಗಳಿಂದ ಮಿಲ್ಟನ್ ಕವಿ ತನ್ನ ಮಹಾಕಾವ್ಯಕ್ಕೆ ಸರಿಯಾದ ಛಂದೋರೂಪ ಹೊಂದಿಸಿಕೊಂಡಂತೆ, ಸರಳ ರಗಳೆಯಲ್ಲಿಯೂ ಪುಟ್ಟಪ್ಪನವರು ಹೊಸ ಹೊಸ ಪ್ರಯೋಗಗಳನ್ನು ನಡೆಸಿ ಮಹಾಕಾವ್ಯಕ್ಕೆ ಸರಿಹೋಗುವ ಮಹಾಛಂದಸ್ಸನ್ನು ರೂಪಿಸಿಕೊಂಡಿರುವರು.

ಸಿದ್ಧಾರ್ಥ ಸತಿಯ ಗೋಳಿಗೆ ನೂಂಕಿ ಕಂಬನಿಯ
ಕರೆಯದೆಯೆ ಓಡುತಿಹೆ ತಸ್ಕರನ ತೆರದಿ [೨೨]

ಮಹಾರಾತ್ರಿ ನಾಟಕದ ಎರಡು ಸಾಲುಗಳಲ್ಲಿ ಎರಡನೆಯ ನಾಲ್ಕನೆಯ ಗಣದಲ್ಲಿ ೩ ಮಾತ್ರೆ ಕಡಿಮೆಯಾಗಿವೆ. ಹೀಗೆ ಮಾತ್ರೆಗಳನ್ನು ಹೆಚ್ಚಿಸಿ ಕಡಿಮೆ ಮಾಡಿ ವೈವಿಧ್ಯತೆ ಸಾಧಿಸಿರುವೆಡೆ ಸ್ಮಶಾನ ಕುರುಕ್ಷೇತ್ರ ಮತ್ತು ಶಿವರಾತ್ರಿ ನಾಟಕಗಳಿಂದ ಸಾಕ್ಷ್ಯಾಧಾರಗಳನ್ನು ಗಮನಿಸಬಹುದು. ವೀರದ್ವಿಪದಗಳನ್ನು ಸರಳರಗಳೆಯ ನಡುವೆ ಬಳಸಿಕೊಂಡು ವೈವಿಧ್ಯ ಸಾಧಿಸಿದುದಕ್ಕೆ ಅವರ `ಮಹಾರಾತ್ರಿ ' ಕೃತಿ ಉತ್ತಮ ಉದಾಹರಣೆ.

ಮಹಾಛಂದಸ್ಸನ್ನು ಕುರಿತ ಚಿದಾನಂದಮೂರ್ತಿಯವರ ಅಭಿಪ್ರಾಯ ಹೀಗಿದೆ. ``ಐದೈದು ಮಾತ್ರೆಗಳ ಯಾಂತ್ರಿಕ ಗಣನೆ ಇರುವುದು ಸರಳ ರಗಳೆ ಎಂದಾದರೆ, ಮಹಾಛಂದಸ್ಸು ಅದರಿಂದ ಭಿನ್ನವಾಗುತ್ತದೆ. ಆದರೆ ಸರಳರಗಳೆ ಅಂತಹ ಗಣನೆಯಿಂದ ಮುಕ್ತವಾದದ್ದು ಕುವೆಂಪು ಅವರು ಯಾವ ಮಹಾಛಂದಸ್ಸನ್ನು ಗುರುತಿಸಿಕೊಂಡರೋ ಅದು ಒಂದಲ್ಲ ಒಂದು ರೀತಿಯಲ್ಲಿ ಅವರಿಗಿಂತ ಹಿಂದೆಯೇ ಮಾಸ್ತಿಯವರಲ್ಲಿ ಕಾಣಿಸಿಕೊಂಡಿತ್ತು..... ಮಾಸ್ತಿ ಪೈ ಅವರ ರಚನೆಗಳನ್ನು ಸರಳ ರಗಳೆಗಳೆಂದೇ ವ್ಯವಹರಿಸುತ್ತೇವೆ. ಕುವೆಂಪು ಅವರ ಮಹಾಛಂದಸ್ಸು ತನ್ನ ಒಟ್ಟು ರಚನೆಯಲ್ಲಿ ಸರಳರಗಳೆಯೆಂದೇ ನನ್ನ ಸ್ಪಷ್ಟ ಅಭಿಪ್ರಾಯವಾಗಿದೆ. ಸರಳರಗಳೆಯ ಅತ್ಯುತ್ಕೃಷ್ಟ ಪರಿಪೂರ್ಣರೂಪವೇ ಮಹಾಛಂದಸ್ಸು ಶ್ರೀರಾಮಾಯಣ ದರ್ಶನಕ್ಕಿಂತ ಹಿಂದೆ ಬಂದಿದ್ದ ಸರಳ ರಗಳೆಯ ಪ್ರಯೋಗದಲ್ಲಿ ಮಹಾಛಂದಸ್ಸಿನಲ್ಲಿ ಕಂಡುಬರುವ ಅದ್ಭುತ ಪ್ರಯೋಗಶೀಲತೆ ವೈವಿಧ್ಯ

---

೨೧. ಟಿ. ಎಸ್. ವೆಂಕಣಯ್ಯ : ಬಿರುಗಾಳಿ ೧೯೩೦ ಮುನ್ನುಡಿ ಪು - ೫

೨೨.ಕುವೆಂಪು : ರಕ್ತಾಕ್ಷಿ ೧೯೩೨ ಎ. ಆರ್. ಕೃಷ್ಣಶಾಸ್ತ್ರಿ

ಕಾಣಿಸದು ಒಂದು ಮಟ್ಟನ್ನು ಸಮರ್ಥರೀತಿಯಲ್ಲಿ ಬಳಸಿದ್ದಕ್ಕೆ ಹೊಸ ಹೆಸರನ್ನು ಕೊಡುವುದು ಉಚಿತವೇ ಎಂಬ ಸಂದೇಹ ನನಗುಂಟು. ಮಹಾಛಂದಸ್ಸನ್ನು ಸರಳ ರಗಳೆ ಎಂದೇ ಯಾರಾದರೂ ವ್ಯವಹರಿಸಿದರೆ ನನ್ನ ಮಟ್ಟಿಗೆ ತಪ್ಪೇನು ಕಾಣದು. ಆದರೆ ಕವಿಗಳು ತಾವೇ ಆ ಮಟ್ಟವನ್ನು ಮಹಾಛಂದಸ್ಸು ಎಂದು ಕರೆದಿರುವದರಿಂದ ಅದನ್ನೇ ಬಳಸುತ್ತ ಹೋಗುತ್ತೇನೆ"[೨೩] ಎಂದಿರುವರು. ಡಾ. ಕಲಬುರ್ಗಿಯವರ ದೃಷ್ಟಿಯಲ್ಲಿ ``ಸರಳರಗಳೆಯ ಸರ್ವತೋಭದ್ರರೂಪವೇ ಮಹಾ ಛಂದಸ್ಸು" ಹೀಗೆ ಕುವೆಂಪು ಅವರು ಸರಳರಗಳೆಯ ಮೂಲಕ ಮಹಾಛಂದಸ್ಸಿನ ಉನ್ನತ ಮಟ್ಟ ಏರಿದುದು.

ಎಂ. ಗೋವಿಂದ ಪೈ ಅವರ ಗೊಲ್ಗೊಥಾ ಹಾಗೂ ವೈಶಾಖಿ ಇವೆರಡೂ ಸರಳ ರಗಳೆಯನ್ನೊಳಗೊಂಡ ಎರಡು ಮಹಾಕಾವ್ಯಖಂಡಗಳು. (Epic fragments) ಮಿಲ್ಟನ್ ಕವಿಯು ಬೈಬಲ್ಲಿನಲ್ಲಿ ಬರುವ ಚೋಬನ ಕಥೆಯನ್ನು ಸಂಕ್ಷಿಪ್ತ ಮಹಾಕಾವ್ಯ (Brief Epic) ಎಂದು ಗುರುತಿಸಿಕೊಂಡಿದ್ದ. ಯೇಸುಕ್ರಿಸ್ತನ ಕೊನೆಯದಿನ ಹಾಗೂ ಬುದ್ಧನ ಪರಿನಿರ್ವಾಣದ ಎರಡೂ ವಸ್ತುಗಳನ್ನು ತೆಗೆದುಕೊಂಡು ಗೋವಿಂದ ಪೈ ಸರಳ ರಗಳೆಯಲ್ಲಿ ಎರಡು ಕಾವ್ಯ ಬರೆದಿದ್ದಾರೆ. ಗೊಲ್ಗಾಥಾ ಯೇಸುವಿನ ಕಡೆಯದಿನ. ೧೯೩೧ರಲ್ಲಿ ರಚಿತವಾದ ಕೃತಿ. ಇದರಲ್ಲಿ ಯೇಸುವನ್ನು ಪಿಲಾತ ವಿಚಾರಣೆ ನಡೆಸಿ ಮರಣದಂಡಗೆ ಗುರಿಮಾಡಿದುದು, ಶಿಕ್ಷೆಯನ್ನು ಕಾರ್ಯರೂಪಕ್ಕೆ ತಂದು ಯೇಸುವನ್ನು ಶಿಲುಬೆಗೆ ಏರಿಸಿದುದು, ಯೇಸು ಕೃಷ್ಣ ಒಂದೇ ಎಂದು ಸಾರುವ ಗೊಲ್ಗಾಥಾ ಸಮನ್ವಯ ದರ್ಶನ ಕಾವ್ಯವೆನಿಸಿದೆ. ಯೇಸುವನ್ನು ಜ್ಞಾನವೃಕ್ಷದ ಉಪಮೆಯಲ್ಲಿ ತೋರಿದ್ದು, ಒಮ್ಮೆ ಪ್ರೌಢ, ಒಮ್ಮೆ ಲಲಿತವಾಗಿ ಹರಿಯುವ ಘನವಾದ ಶೈಲಿ, ಧ್ವನಿಪೂರ್ಣ ಉಪಮೆಗಳು ಇಡಿಯ ಕಾವ್ಯವನ್ನೇ ಬೆಳಗುತ್ತಿರುವ ಜೀವನತತ್ವ ಇವೆಲ್ಲ ಸೇರಿ ಆ ಕಾವ್ಯವನ್ನು ಮಹಾಕಾವ್ಯ ಪಂಕ್ತಿಗೆ ಸೇರಿಸಿದೆ.

ವೈಶಾಖಿ ಗೊಲ್ಗಾಥಾದ ಜೊತೆಯ ಕಾವ್ಯ. ಯೇಸುವಿನ ಕಡೆಯದಿನದ ಚಿತ್ರಣದ ಗೊಲ್ಗಾಥಾ ವಸ್ತು ದುರಂತ. ಏಸು ೩೦ರ ಹರೆಯದಲ್ಲಿ ಶಿಲುಬೆಗೇರಿಸಲ್ಪಟ್ಟರೆ ಬುದ್ಧನ ಕಡೆಯ ದಿನ ವೈಶಾಖಿಯ ವಸ್ತು. ಶಾಂತಬುದ್ಧ ಅಂನೆಯ ವಯಸ್ಸಿನ ತುಂಬು ಜೀವಿಯಾಗಿ ತಾನಾಗಿಯೇ ದೇಹಬಿಟ್ಟವ. ಕಾಲದೇಶ, ವಾತಾವರಣ, ಭಿನ್ನಪರಿಣಾಮ ವೈಶಾಖಿಯು ಗೊಲ್ಗೊಥಾದ ಹಿರಿಮೆ ಸಾಧಿಸದೇ ಹೋಗಿದೆ.

ಮಾಸ್ತಿ ವೆಂಕಟೇಶ ಅಯ್ಯಂಗಾರ ಅವರು ಕನ್ನಡದಲ್ಲಿ ಕಥೆ ಹೇಳಲು ಪ್ರಶಸ್ತವಾದ ಸರಳರಗಳೆಯ ಛಂದಸ್ಸನ್ನು ಬಳಸಿದ್ದು ಅವರ ಶ್ರೇಯಸ್ಸು. " ಮನಸ್ಸಿನ ಭಾವಗಳನ್ನು ವ್ಯಕ್ತ ಗೊಳಿಸುವದರಲ್ಲಿ ಮಾತಿನ ಭಾಷೆಗೆ ಒಂದು ಶಕ್ತಿ ಇದೆ. ಛಂದೋಬದ್ಧವಾದ ಭಾಷೆಗೆ ಒಂದು ಶಕ್ತಿ ಇದೆ."[೨೪] ಟಿ. ಎಸ್. ವೆಂಕಣ್ಣಯ್ಯನವರು ಹೇಳಿರುವ ಈ ಮಾತಿನ ಭಾಷೆ ಮತ್ತು ಛಂದೋಬದ್ಧವಾದ ಭಾಷೆ ಇವುಗಳ ಸಮನ್ವಯವು ಮಾಸ್ತಿಯವರ ಕಥನಕವನಗಳಲ್ಲಿ ಕಾಣುತ್ತೇವೆ. ಆದರೂ ಎಷ್ಟೋ ಬಾರಿ ಗದ್ಯದಂತೆ ಇದು ಎಷ್ಟು ದೂರ ಬೇಕಾದರೂ ಹೋಗಬಲ್ಲದು ಎಂದು ವೆಂಕಣ್ಣಯ್ಯನವರು ವರ್ಣಿಸಿರುವ ಸರಳರಗಳೆ ಅಲ್ಲಲ್ಲಿ ಗದ್ಯತನಕ್ಕಿಳಿಯುವ ಸಂಭವವಿದೆ.

---

೨೩. ಮಾಸ್ತಿ : ಯಶೋಧರಾ ೧೯೩೩ ಸ್ಥಾನ ೫

೨೪. ಕುವೆಂಪು : ಬರುಗಾಳಿ ೧೯೩೦ ಟಿ. ಎಸ್. ವೆಂಕಣ್ಣಯ್ಯನವರ ಮುನ್ನುಡಿ ಪು. ೪

ಮಾಸ್ತಿಯವರಲ್ಲಿ " ಸರಳ ರಗಳೆಯ ಬನಿ ಬಿಗಿಪು ಒಂದೊಂದು ಕಡೆಗೆ ಸಾಲದೆನ್ನುವವರುಂಟು. ಮಾತುಗಳ ಶಯ್ಯೆಯಲ್ಲಿ ಅಲ್ಲಲ್ಲಿ ಸಡಿಲ ಕಾಣುವದುಂಟು.

ಸಾಲುಗಳಿಗಾಗಿ ಆಯ್ದು ಸೇರಿಸುವ ಪದಗಳಲ್ಲಿ ಅಗತ್ಯಕ್ಕೆ ತಕ್ಕ ಧಡುವತಿ ಇಲ್ಲದೆ ಇರಬಹುದು. ಆದರೆ ಕೃತಿಯ ಕಾರ್ಯಕ್ಕೂ ರಸಸಾಧನೆಗೂ ವಿರೋಧವಾಗುವಷ್ಟು ಇದೆಯೆಂದರೆ ನಾನು ಒಪ್ಪಲಾರೆ. ಸರಳ ರಗಳೆಯಲ್ಲಿ ಕಥನಕವನವನ್ನು ಸಾಮಾನ್ಯ ರೀತಿಯಲ್ಲಿ ಮೊದಲು ಮಾಡಿ ಅಗತ್ಯಕ್ಕೆ ತಕ್ಕಂತೆ ಬೆಳೆಸುತ್ತಾರೆ "[೨೦] ಎಂದು ವಿ.ಸಿ. ಹೇಳಿದ್ದು ಮಾಸ್ತಿಯವರ ಹೆಚ್ಚುಪಾಲು ಕಥನ ಕವನಕ್ಕೆ ಒಪ್ಪತಕ್ಕಮಾತು.

ಮಾಸ್ತಿಯವರಲ್ಲದೆ ಎಂ. ಎಸ್. ಅನಂತಪದ್ಮನಾಭರಾಯರು ಸರಳ ರಗಳೆಯಲ್ಲಿ ``ಶ್ರೀ ರಾಮಕೃಷ್ಣ ಪರಮಹಂಸರು" ಮತ್ತು ``ಕರ್ಣ" ಎಂಬ ಎರಡು ದೀರ್ಘ ಕಥನ ಕವನಗಳನ್ನು ಬರೆದಿರುವರು.[೨೧] ಎಲ್.ಗುಂಡಪ್ಪನವರು ಮ್ಯಾತ್ಯೂ ಅರ್ನಾಲ್ಡ ಬರೆದ `ಸೊಹ್ರಾಬ್ ರುಸ್ತುಂ' ಕವಿತೆಯನ್ನು ಕನ್ನಡಕ್ಕೆ ಸರಳ ರಗಳೆಯಲ್ಲಿ ಅನುವಾದಿಸಿರುವರು. ಇಂಗ್ಲೀಷ ಕಾವ್ಯದಲ್ಲಿ ಉತ್ತಮ ಕಥನ ಕವನವೆನಿಸಿದ ಈ ಕವಿತೆ ಕನ್ನಡದ ಅನುವಾದ ಕೃತಿ. ಸರಳ ರಗಳೆಯ ನಡೆಯಾಗಿ ಪ್ರೌಢನಾಗಿ ಭಾವಕ್ಕೆ ಪುಷ್ಟಿಕೊಡುವಂತಾಗಿದೆ. ಕೆಲವು ಕಡೆಗಳಲ್ಲಿ ಸರಳ ರಗಳೆ ಯಾಂತ್ರಿಕವಾಗಿ ಕಾಣಿಸಿದ್ದರೂ ಒಟ್ಟಿನಲ್ಲಿ ಅನುವಾದ ಗಂಭೀರವಾಗಿದೆ.[೨೨] ಎಸ್. ವಿ. ಪರಮೇಶ್ವರ ಭಟ್ಟರ `ಜಹನಾರಾ' ಆತ್ಮಕಥಾರೂಪದ ದೀರ್ಘೋಪಮೆಯ ಕಥನಕವನ. ವರ್ಡ್ಸವರ್ತನ Michael ಕವಿತೆಯನ್ನು `ಮಾಚಯ್ಯ' ಹೆಸರಿನಲ್ಲಿ ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಒಟ್ಟಿನಲ್ಲಿ ಈ ಕವಿತೆಯು ಮೂಲದ ಸರಳ ರಗಳೆಯ ನಡೆಯನ್ನು ಕಥೆಯ ಮನತಾಗುವ ಗುಣವನ್ನು ಉಳಿಸಿಕೊಂಡಿದೆ. ಆನಂದ ಕಂದರ `ಶಬರಿಯ ಬಾಳು ' ಸರಳ ರಗಳೆಯಲ್ಲಿರುವ ಭಾವಪ್ರಧಾನ ಕಥನಕವನ ಬ್ರೌನಿಂಗ ಕವಿಯ `ಡ್ರಮಾಟಿಕ್ ಮಾನಲಿಂಗ್' ಮಾದರಿಯದು. ಶಬರಿಯು ತನ್ನ ಕಥೆಯನ್ನು ಹೇಳಿಕೊಳ್ಳುವಾಗ ಅಲ್ಲಿನ ವಾತಾವರಣ ರಾಮಲಕ್ಷ್ಮಣರ ಪರಿಪುಷ್ಟ ಚಿತ್ರಣ, ಶಬರಿಯ ಮನಸ್ಸಿನ ಆಗು ಹೋಗುಗಳು ಭಾವಲಹರಿಗಳು ಸ್ಫುಟವಾಗಿವೆ. ಕನ್ನಡದಲ್ಲಿ ಈ ರೀತಿಯ ಕವಿತೆ ಇದೊಂದೇ ಎಂದು ಕಾಣುತ್ತದೆ.

ಹೀಗೆ ಸರಳವಾಗಿ ಪ್ರವಹಿಸುವ ಸರಳ ರಗಳೆ ರೋಷ, ಕ್ರೋಧ, ಕಿಡಿಕಾರುವ ಸಂದರ್ಭ ಸಾಮ್ಯ ಗಾಂಭೀರ್ಯ ಸ್ವಭಾವಗಳನ್ನು ಕೂಡ ಸರಾಗವಾಗಿ ಬಿತ್ತರಿಸುವ ನಾಟಕೀಯ ಗುಣವಿಶೇಷತೆಗಳನ್ನು ವ್ಯಕ್ತಪಡಿಸುವ ಛಂದೋಮಾಧ್ಯಮವೆನಿಸಿದೆ.

---

೨೦. ವೀ. ಸಿ. ಕವಿಕಾವ್ಯದೃಷ್ಟಿ ಪು ೧೩೫

೨೧. ಎಂ. ಎಸ್. ಅನಂತಪದ್ಮನಾಭರಾಯ ; ಕರ್ಣ : ೧೯೩೬, ಶ್ರೀರಾಮಕೃಷ್ಣ ೧೯೩೯

೨೨. ಎಲ್. ಗುಂಡಪ್ಪ : ಸೊಹಾಬ್ ರುಸ್ತುಂ ' ೧೯೪೭ ಪ್ರಬುದ್ಧ ಕರ್ನಾಟಕ ೧೯೩೩

ಆಧುನಿಕ ಕನ್ನಡ ಮಹಾಕಾವ್ಯ

ಜಿ. ಎಸ್. ಅಮೂರ

ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯದಲ್ಲಿ ಮಹಾಕಾವ್ಯದ ಪರಂಪರೆಯನ್ನು ಪುನರ್ನಿರ್ಮಿಸಿದ ಶ್ರೇಯಸ್ಸು ಕುವೆಂಪುರವರ ಮೇರುಕೃತಿ ರಾಮಾಯಣ ದರ್ಶನಂ[೧] ಗ್ರಂಥಕ್ಕೆ ಸಲ್ಲುತ್ತದೆ. ಮಹಾಕಾವ್ಯದ ಯುಗ ಎಂದೋ ಮುಗಿದು ಹೋಗಿದೆ ಎನ್ನುವ ಅಭಿಪ್ರಾಯ ಸಾಹಿತ್ಯ ಸಂದರ್ಭದಲ್ಲಿ ನಿರ್ಣಯಾತ್ಮಕ ಸ್ವರೂಪವನ್ನು ಹೊಂದುತ್ತಿರುವಾಗಲೇ ಕುವೆಂಪುರವರ **ರಾಮಾಯಣ ದರ್ಶನಂ** ಅಲ್ಲದೆ ವಿ. ಕೃ. ಗೋಕಾಕರ **ಭಾರತ ಸಿಂಧುರಶ್ಮಿ**[೨] ಹಾಗೂ ಸಂ. ಶಿ. ಭೂಸನೂರಮಠರ **ಭವ್ಯಮಾನವ**[೩] ಗಳಂಥ ಎರಡು ಮಹಾಕಾವ್ಯಗಳು ಕನ್ನಡದಲ್ಲಿಯೇ ಹುಟ್ಟಿ ಬಂದುದು ಆಶ್ಚರ್ಯಕರವಾಗಿದೆ.

೧

ಕುವೆಂಪುರವರ ಸಾಹಿತ್ಯಸೃಷ್ಟಿ ಕಾವ್ಯಕ್ಕೆ ಸೀಮಿತವಾಗಿಲ್ಲ. **ಕಾನೂರು ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು**ಗಳಂಥ ಕಾದಂಬರಿಗಳನ್ನು ಬರೆದು ಅವರು ಶ್ರೇಷ್ಠ ಕಾದಂಬರಿಕಾರರ ಸಾಲಿಗೆ ಸೇರಿದ್ದಾರೆ. ಇದಲ್ಲದೆ, ನಾಟಕ, ಚರಿತ್ರೆ, ಆತ್ಮಚರಿತ್ರೆ, ಸಾಹಿತ್ಯ ವಿಮರ್ಶೆಗಳ ಕ್ಷೇತ್ರಗಳಲ್ಲಿಯೂ ಅವರು ಬಹುದಿನ ಬಾಳಬಲ್ಲ ಕೃತಿಗಳನ್ನು ಸೃಷ್ಟಿಸಿದ್ದಾರೆ. ಆದರೆ ಮಿಲ್ಟನ್‌ನಂತೆ ಅವರು ಕೂಡ ಮಹಾಕಾವ್ಯದ ಸೃಷ್ಟಿಯನ್ನೇ ಗುರಿಯಾಗಿಟ್ಟುಕೊಂಡು ಅದಕ್ಕಾಗಿ ತಮ್ಮನ್ನು ಸಿದ್ಧಪಡಿಸಿಕೊಂಡವರು. ಸಂಸ್ಕೃತ, ಕನ್ನಡ ಮತ್ತು ಪಾಶ್ಚಾತ್ಯ ಕಾವ್ಯ ಪರಂಪರೆಗಳ ಪ್ರಚಂಡ ಅಭ್ಯಾಸದೊಂದಿಗೆ ಮಹಾಕಾವ್ಯದ ಸ್ವರೂಪಕ್ಕೆ ಸಂಬಂಧಿಸಿದ ಭವ್ಯತೆ, ಭೂಮಾನುಭೂತಿ, ದರ್ಶನಧ್ವನಿ, ಮಹೋಪಮೆ ಮುಂತಾದ ಕಲ್ಪನೆಗಳ ಬಗ್ಗೆ ಆಳವಾಗಿ ಚಿಂತಿಸಿದವರು. ಮುಂದೆ ತಮ್ಮ ಮಹಾಕಾವ್ಯದಲ್ಲಿ ಪ್ರಯೋಗಿಸಲಿರುವ ಸರಳ ರಗಳೆಯ ಛಂದಸ್ಸಿನಲ್ಲಿ ಪರಿಣತಿಯನ್ನು ಸಾಧಿಸಿದವರು. ಇದರ ಜೊತೆಗೆ ಮಹರ್ಷಿ ಅರವಿಂದರೇ ಮೊದಲಾದ ದ್ರಷ್ಟಾರರ ದರ್ಶನಗಳನ್ನು ಮೈಗೂಡಿಸಿಕೊಂಡವರು. ಈ ಹಿನ್ನೆಲೆಯಲ್ಲಿ **ರಾಮಾಯಣ ದರ್ಶನಂ** ಕುವೆಂಪು ಸಾಹಿತ್ಯ ಸೃಷ್ಟಿಯ ಕೇಂದ್ರಸ್ಥಾನದಲ್ಲಿದೆಯೆಂದು ನಿಃಸಂಶಯವಾಗಿ ಹೇಳಬಹುದು.

ಮೂರು ಕಾರಣಗಳಿಂದಾಗಿ **ರಾಮಾಯಣದರ್ಶನಂ** ಕನ್ನಡ ಸಾಹಿತ್ಯದಲ್ಲಷ್ಟೇ ಅಲ್ಲದೆ ಭಾರತೀಯ ಸಾಹಿತ್ಯದ ಇತಿಹಾಸದಲ್ಲಿಯೇ ಮಹತ್ವದ ಸ್ಥಾನವನ್ನು ಪಡೆದಿದೆ. ೧ ರಾಮಾಯಣ ಕಾವ್ಯಗಳ ಪರಂಪರೆಯನ್ನು ಶ್ರದ್ಧೆಯಿಂದ ಮತ್ತು ಸಮರ್ಥವಾಗಿ ಮುಂದುವರೆಸಿಕೊಂಡು ಬಂದುದು.[೨] ತನ್ನ ಯುಗದಲ್ಲಿ ಪರಿಪೂರ್ಣವೆಂದು ತೋರಿಬಂದ ದರ್ಶನವನ್ನು ಕವಿ ಈ ಮಹಾಕಾವ್ಯದಲ್ಲಿ ಅಭಿವ್ಯಕ್ತಿಸಿರುವುದು ಮತ್ತು[೩] ಕನ್ನಡ ಮಹಾಕಾವ್ಯದ ಪರಂಪರಾಗತ ಆಕಾರವನ್ನು

ಉಳಿಸಿಕೊಂಡು ವಿಶ್ವದ ಇತರ ಭಾಷೆಗಳಲ್ಲಿಯ ಮಹಾಕಾವ್ಯಗಳ ಅಂಶಗಳನ್ನು ಒಳಗೊಳ್ಳುವ ಮೂಲಕ ಈ ಮಾಧ್ಯಮದ ಸಾಧ್ಯತೆಗಳನ್ನು ಹೆಚ್ಚಿಸಿರುವುದು. ಭಾರತದ ಇತರ ಭಾಷೆಗಳಲ್ಲಿಯಂತೆ ಕನ್ನಡದಲ್ಲಿಯೂ ರಾಮಾಯಣ ಕಾವ್ಯಗಳ ಪರಂಪರೆ ಹಳೆಯದು. ಕ್ರಿ. ಶ. ೧೨-೧೩ನೆಯ ಶತಮಾನದ ನಾಗಚಂದ್ರನಿಂದ ಇಪ್ಪತ್ತನೆಯ ಶತಮಾನದ ಕುವೆಂಪುವರೆಗೆ ರಾಮಾಯಣದ ಕಥೆ ಅನೇಕ ಪ್ರತಿಭಾವಂತ ಕವಿಗಳಿಗೆ ವಸ್ತುವನ್ನೊದಗಿಸಿದೆ. ವಾಲ್ಮೀಕಿಯ ಮೂಲ ಆಧಾರದ ಮೇಲೆ ನಿರ್ಮಿತವಾದ ಈ ಎಲ್ಲ ಕಾವ್ಯಗಳೂ ಒಂದಿಲ್ಲೊಂದು ರೀತಿಯಲ್ಲಿ ರಾಮಾಯಣ ದರ್ಶನಗಳೇ. ಎಂದರೆ, ವಿಶಿಷ್ಟ ಶ್ರದ್ಧೆ - ಸಿದ್ಧಾಂತಗಳ ಚೌಕಟ್ಟಿನಲ್ಲಿ ಕವಿ ತನ್ನ ದರ್ಶನವನ್ನು ಮೂಡಿಸಲು ಮಾಡಿದ ಪ್ರಯತ್ನಗಳೇ. ನಾಗಚಂದ್ರ ಜೈನ ಕವಿ. ಅವನ **ರಾಮಚಂದ್ರ ಚರಿತ ಪುರಾಣ** ವಿಮಲಸೂರಿಯ **ಪಉಮ ಚರಿಅ**ವನ್ನು ಆಧಾರವಾಗಿಟ್ಟುಕೊಂಡು ರಚಿಸಿದ ಚಂಪೂಕಾವ್ಯ. ರಾವಣನ ಪಾತ್ರದ ಮೂಲಕ ಕರ್ಮದ ಪ್ರಭಾವವನ್ನು ಸಂಕೀರ್ತಿಸ ಹೊರಟ ನಾಗಚಂದ್ರನ ಕೃತಿ ಮೂಲ ವಾಲ್ಮೀಕಿ **ರಾಮಾಯಣ**ದಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು - ರಾವಣನ ಮನಃಪರಿವರ್ತನೆ, ಸೀತೆ ಕಂತಿಯಾಗಿ ತಪಸ್ಸಿಗೆ ಹೊರಡುವುದು - ಇತ್ಯಾದಿ ಮಾಡಿ ಕೊಳ್ಳುತ್ತದೆ. ಇದೇ ರೀತಿ ವೈಷ್ಣವನಾದ ನರಹರಿ ಅಥವಾ ಕುಮಾರ ವಾಲ್ಮೀಕಿ **ರಾಮಾಯಣದ** ಕಥೆಯನ್ನು ವಿಷ್ಣುವಿನ ಸರ್ವೋತ್ತಮತ್ವವನ್ನು ಪ್ರಸ್ಥಾಪಿಸುವ ಸಾಧನವನ್ನಾಗಿ ಬಳಸಿಕೊಳ್ಳುತ್ತಾನೆ. ವಾಲ್ಮೀಕಿ **ರಾಮಾಯಣ**ದಲ್ಲಿ ಅತಿಲೌಕಿಕದ ಪ್ರಪಂಚ ಇದೆಯಾದರೂ ರಾಮ ಮಾನವೀಸ್ತರ ದಲ್ಲಿಯೇ ವ್ಯವಹರಿಸುತ್ತಾನೆ. (`ಆತ್ಮಾನಂ ಮಾನುಷಂ ಮನ್ಯೇ ದಶರಥಾತ್ಮಜಂ ') ಮೂಲವನ್ನು ನಿಷ್ಠೆಯಿಂದ ಅನುಸರಿಸುವ **ಶ್ರೀರಾಮಪಟ್ಟಾಭಿಷೇಕ** ರಾಮಾಯಣದ ಕಥೆಯಲ್ಲಿ ` ಸೃಷ್ಟಿಯ ಸಮಷ್ಟಿ ಪ್ರಜ್ಞೆಯ ಸಾಮೂಹಿಕ ವಿಕಾಸ 'ದ ಧರ್ಮದ `ಜೀವಂತ ಸೂತ್ರ'ಗಳ ಗುಟ್ಟನ್ನು ಅರಸುವುದು ಈ ಕಾರಣಕ್ಕಾಗಿಯೇ. ಕುವೆಂಪುರವರ `**ರಾಮಾಯಣ ದರ್ಶನಂ** ಕೂಡ ಇದೇ ಸಂಪ್ರದಾಯದಲ್ಲಿ ಬಂದ ಕೃತಿ. ವಾಲ್ಮೀಕಿ ರಾಮಾಯಣದ ಕಥೆಯನ್ನು ಇದ್ದಕ್ಕಿದ್ದಂತೆ ಹೇಳುವುದರಲ್ಲಾಗಲಿ, ಮೂಲ ಕಾವ್ಯದ ದರ್ಶನವನ್ನು ಪುನರ್ದರ್ಶಿಸುವುದರಲ್ಲಾಗಲಿ ಕುವೆಂಪು ತೃಪ್ತಿಪಟ್ಟುಕೊಳ್ಳುವುದಿಲ್ಲ. ಕೃತಿರೂಪದಲ್ಲಿ ಕಾಣಿಸಿಕೊಂಡ ಭಗವದಾವಿರ್ಭಾವವೇ ಆದ **ರಾಮಾಯಣ** ಅವರ ದೃಷ್ಟಿಯಲ್ಲಿ ರಾಮನಿಗಿಂತ ಅಗ್ರತೆಯನ್ನು ಹೊಂದಿದೆ :

ರಾಮಂಗೆ ಮೊದಲಲ್ತೆ
ರಾಮಾಯಣಂ ? ಮುನ್ನಲ್ತೆ, ಪಿರಿದಲ್ತೆ, ಮೆಯ್ಯಲ್ತೆ,
ಮನೆಯಲ್ತೆ ರಾಮಾಯಣಂ. [ಪು. ೮೮೪]

ಕುವೆಂಪುರವರ ಕಾವ್ಯ ತನ್ನ ಸಾಂಕೇತಿಕತೆಯತ್ತ ತಾನೇ ಬೊಟ್ಟು ಮಾಡಿ ತೋರಿಸುತ್ತವೆ ;

ಇತಿಹಾಸಮಲ್ತು । ಬರಿ ಕಥೆಯಲ್ತು ; ಕಥೆ ತಾಂ
ನಿಮಿತ್ತ ಮಾತ್ರಂ, ಆತ್ಮಕೆ ಶರೀರದೋಲಂತೆ.
ಮೆಯ್ವೆತ್ತುದಿಲ್ಲಿ ರಾಮನ ಕಥೆಯ ಪಂಜರದಿ
ರಾಮರೂಪದ ಪರಾತ್ಪರನ ಪುರುಷೋತ್ತಮನ
ಲೋಕಲೀಲಾದರ್ಶನಂ

[ಪು. ೮೭೬-೭೭]

ತನ್ನ ಕಾವ್ಯಪರಂಪರೆಯ ಸಂಪ್ರದಾಯ ಹಾಗೂ ಪ್ರಾಯೋಗಿಕತೆಗಳನ್ನು ಒಟ್ಟಿಗೆ ಬಳಸಿ ೂಳ್ಳುವುದಲ್ಲದೆ ಪಾಶ್ಚಾತ್ಯ ಮಹಾಕಾವ್ಯದ ಪರಂಪರೆಯೊಡನೆ ಸಮನ್ವಯ ಸಾಧಿಸುವ ಸಂಕಲ್ಪವನ್ನು ಾಮಾಯಣದರ್ಶನಂ ಹೊಂದಿದೆ. ಈ ಅಂಶವನ್ನು ವಿ. ಸೀತಾರಾಮಯ್ಯನವರು ಬಹು ಚೆನ್ನಾಗಿ ುರುತಿಸಿದ್ದಾರೆ. ``ಇಲ್ಲಿ ಇರುವ ಅತಿ ಪ್ರಾಕೃತಿಕ ಉದ್ದೇಶ, ದೃಷ್ಟಿ, ವಾಕ್‌ಸಂಪತ್ತಿ, ಪ್ರಾಚೀನ ಾವ್ಯಗಳ, ಮಧ್ಯಯುಗದ, ಇಂದಿನ ಕಾಲದ ಹೊರ ಒಳ ದೇಶಗಳ ಇತಿಹಾಸ ಕಾವ್ಯಗಳ ಕಳೆಗಳನ್ನೆಲ್ಲ ುಂಬಿಸಿಕೊಂಡು ಸ್ವಪ್ರಜ್ಞಾಲಂಕೃತವಾಗಿದೆ. ''೪ ದರ್ಶನವೈವಿಧ್ಯವೇ ಯುಗ ಧರ್ಮ ವಾಗಿರುವ ಇಪ್ಪತ್ತನೆಯ ಶತಮಾನವನ್ನು ಯಾವ ಒಂದು ಕೃತಿಯೂ ಸಂಪೂರ್ಣವಾಗಿ ಪ್ರತಿ ನಿಧಿಸುವುದು ಅಸಾಧ್ಯ. ಆದರೆ ಭಾರತೀಯ ಸಂಸ್ಕೃತಿಯ ಮೂಲಗಳಲ್ಲೊಂದಾದ ರಾಮಾಯಣದ ಕಥೆಯಲ್ಲಿ ನ್ನ ಸಮನ್ವಯದೃಷ್ಟಿಯ ಮೂಲಕ ಹೊಸ ಚೈತನ್ಯ ತುಂಬಲೆತ್ನಿಸುವ ರಾಮಾಯಣ ದರ್ಶನಂ ಾರ್ಥಕ ಕೃತಿಯೆನಿಸಿಕೊಳ್ಳುತ್ತದೆ.

ಕುವೆಂಪುರವರ ಮಹಾಕಾವ್ಯದ ಸತ್ವ ಅದರ ಅಖಂಡ ದರ್ಶನದಲ್ಲಿದೆ. ಈ ಕಾವ್ಯದ ಾತಾವರಣ, ಪಾತ್ರಸೃಷ್ಟಿ, ಸಂರಚನೆ, ಶೈಲಿ ಎಲ್ಲವನ್ನು ಈ ದರ್ಶನ ಸೋದ್ದಿಶ್ಯವಾಗಿ ನಿಯಂತ್ರಿಸು ತ್ತದೆ. `ಶ್ರೀ ರಾಮಾಯಣ ಚಿತ್ ತಪಶ್ರೀ ' ಎಂಬ ಸಂಚಿಕೆಯಲ್ಲಿ ಕಾವ್ಯದ ಆತ್ಮದಂತಿರುವ ಈ ರ್ಶನವನ್ನು ನವ್ಯ ಸಾಕ್ಷಾತ್ಕಾರ ಪಡೆದ ಸೀತೆ ತ್ರಿಜಟೆಗೆ ಸೂತ್ರರೂಪವಾಗಿ ತಿಳಿಸುತ್ತಾಳೆ.

ಆವುದಾಗಲಿ ನೆಪಂ
ಫಲದಾಯಕಂ ತಪಂ ನನಗೆ , ರಘುನಾಥಂಗೆ
ಮೇಣ್ ರಾಕ್ಷಸೇಂದ್ರಂಗೆ ಮೂವರ್ಗಮವರವರ
ಕರ್ಮಾನುಸಾರಿ ಜನ್ಮೋದ್ದೇಶ ಸಾಧನೆಗೆ
ಮೇಣಾತ್ಮವಿಕಸನದ ಪರಿಣಾಮ ಸಿದ್ಧಿಗೆ
ಸಹಾಯಮಾದುದು ಮಂಥರೆಯ ಮೂಲದೀ ಬೃಹತ್
ದುರ್ಘಟನೆ. ಇನ್ನೆನಿತು ಜೀವರಿಗೆ ತಂತಮ್ಮ
ಕರ್ಮಕ್ಷಯಕೆ ಮತ್ತೆ ಧರ್ಮಾಭ್ಯುದಯಕಿದು
ನಿಮಿತ್ತಮಾದುದೋ ಪೇಳ್ವರಾರ್ ?
[ಪು.೭೬೪]

ಇಂಥ ಒಂದು ಘನವಾದ ಉದ್ದೇಶ ಹೊಂದಿರುವುದರಿಂದ ರಾಮಾಯಣದರ್ಶನಂ ಕಸೂತ್ರತೆಯನ್ನು ಸಾಧಿಸುತ್ತದೆ. ಇದು ಅದರ ಮಹತ್ತು,

ಈ ಕಾವ್ಯದಲ್ಲಿ ಬರುವ ಎಲ್ಲ ಪಾತ್ರಗಳೂ ಒಂದಿಲ್ಲೊಂದು ರೀತಿಯಿಂದ ತಮ್ಮ ತ್ಕೋನ್ನತಿಯನ್ನು ಸಾಧಿಸುತ್ತವೆಯಾದರೂ, ಗ್ರೀಕರ ಮಹಾಕಾವ್ಯಗಳಲ್ಲಿದ್ದಂತೆ, ಅವುಗಳೆಲ್ಲ ಧಿಯ ಅಧೀನ :

ನೆಯ್ವಾಳುತಿದೆ ಜಗವನೊಂದತಿ ವಿರಾಣ್ ಮನಂ
ಸೂಕ್ಷ್ಮಾತಿ ಸೂಕ್ಷ್ಮ ತಂತ್ರದಿ ಬಿಗಿದು ಕಟ್ಟಿಯುಂ
ಜೀವಿಗಳ್ಗಿಚ್ಛೆಯಾ ಸ್ವಾತಂತ್ರ್ಯಭಾವಮಂ

ನೀಡಿ, ಮಂಥರೆ, ಸೀತೆ, `ರಾಮ ರಾವಣರೆಲ್ಲರುಂ,
ಸೂತ್ರಗೊಂಬೆಗಳಲ್ತೆ ಆ ವಿಧಿಯ ಹಸ್ತದಲಿ '?
[ಪು.೭೦-೭೧]

``ವಿಧಿಯ ಸೂತ್ರದ ಜಗಜ್ಜಾಲದೊಳ್ ವ್ಯಕ್ತಿಗಳ್ ಗ್ರಂಥಿ ಮಾತ್ರಗಳಲ್ತೆ ? `` ಎಂ
ಕೇಳುವ ಸೀತೆ ಈ ತತ್ವವನ್ನು ಸಂಪೂರ್ಣವಾಗಿ ಅರಿತಿದ್ದಾಳೆ. ಈ ಅರಿವು ಅವಳ ಅಹಂಕಾರ
ನಾಶಕ್ಕೆ ಕಾರಣವಾದರೆ, ಅಶೋಕವನದಲ್ಲಿ ಅವಳು ಆಚರಿಸುವ ಘೋರ ತಪಸ್ಸು ಪರಮತತ್ವ
ದರ್ಶನಕ್ಕೆ ಸಾಧನವಾಗುತ್ತದೆ.

ರಾಮನನರಿತೆನಾತ್ಮದಿಂ
ತನ್ನ ನಿತ್ಯವಿಭೂತಿಯಿಂ ಪರಬ್ರಹ್ಮನೆಂತು
ತಾನ್; ಸರ್ವಸೃಷ್ಟಿ ಮೇಣ್ ಲೀಲಾ ವಿಭೂತಿಯುಂ
ತಾನ್. ರಾಮಮಯಮೀ ಸಮಸ್ತಲೋಕಂ
[ಪು.೭೬೫]

ಆತ್ಮಸಿದ್ಧಿಯನ್ನು ಪಡೆದ ಸೀತೆ `ರಾವಣಂಗೊಳಿತಕ್ಕುಂ, ಋತದ ರೀತಿಯಿಂ ' ಎಂ
ಅವನಿಗೂ ಶುಭವನ್ನೇ ಕೋರುತ್ತಾಳೆ.

ಕುವೆಂಪುರವರ ರಾವಣ `ಮಹಾಸಾಧಕ'. ಅವನ ಪಾತ್ರಸೃಷ್ಟಿಯಲ್ಲಿ ನಾಗಚಂದ್ರನ ಪ್ರಭ
ಸ್ಪಷ್ಟವಾಗಿ ಮೂಡಿಬಂದಿದೆ. ರಾವಣನ ಪುನಃಪ್ರವತ್ತಿಯಲ್ಲಿ ಸೀತೆಯ ಮೂಲಕ ಬಂದೊದಗ
ಕ್ರಾಂತಿ ಕುವೆಂಪು ನಾಗಚಂದ್ರನಿಂದ ಸ್ವೀಕರಿಸಿದ ಅಂಶ. ಆದರೆ ಈ ಮನಃಪ್ರವೃತ್ತಿಯ ಕಲ್ಪನೆ ಮ
ಅವರದೇ. ರಾವಣನ ಸ್ವಭಾವದಲ್ಲಿ ಸೇರಿಕೊಂಡ ದೋಷಕ್ಕೆ ಅವರು ಕಲ್ಪಿಸುವ ಕಾರಣ ನ
ಯುಗದ ತಿಳಿವಿನಿಂದಲೇ ಬಂದದ್ದು.

ಪುಟ್ಟುವಾಗಳೆಯೆ ನಾಂ
ನೆತ್ತರೊಳೆ ಪೆಣ್ಣೊಡಲಿನಾಸೆಯಾ ಬೇಟಮಂ
ಪೊತ್ತು ಪುಟ್ಟಿದೆನೈಸೆ
[ಪು. ೨೩೬]

ಎಂದು ಹೇಳುವ ರಾವಣ ತನ್ನ ದೌರ್ಬಲ್ಯ ವಂಶಗತವಾಗಿ ಬಂದುದು ಎಂದು ಸೂಚಿಸುತ
ತನ್ನ ವಶವಾಗಲೊಲ್ಲದ ಸ್ತ್ರೀಯೊಬ್ಬಳನ್ನೂ ಕಾಣದೆ ಹೋದ ಅವನ ಅನುಭವ ಈ ದೌರ್ಬ
ಪುಷ್ಟಿಯನ್ನು ಒದಗಿಸುತ್ತದೆ. ಆದರೆ ಸೀತೆಯಿಂದಾಗಿ ಅವನ ಜೀವನದ ದಿಕ್ಕು ಬದಲಾಗಿ, ಆತ
ದ್ವಾರದ ದ್ವಾರ ತೆರೆಯುತ್ತದೆ. ಇದು ರಾವಣನು ಕಾಣುವ ಪರಮಸತ್ಯ.

ಸೀತೆ
ನನಗೆ ದೇವತೆ, ಮಾತೆ ! ಶ್ರದ್ಧೆಗೆಟ್ಟಿದ್ದೆನಗೆ
ಶ್ರದ್ಧೆಯಂ ಮರುಕೊಳಿಸುತಾತ್ಮದುದ್ಧಾರಮಂ
ತಂದ ದೇವತೆ ! ಪುಣ್ಯಮಾತೆ !
[ಪು. ೭೮೬]

ಸೀತೆ ರಾವಣನ ಉದ್ಧಾರಕ್ಕೆ ಕಾರಣಳಾದರೆ, ರಾವಣ ರಾಮನ ಆತ್ಮಜ್ಞಾನಕ್ಕೆ ಸಾಧನ ಆಗುತ್ತಾನೆ. ವಾಲ್ಮೀಕಿಯ ಕಾವ್ಯದಲ್ಲಿ ರಾಮ ಧರ್ಮಮೂರ್ತಿ. ``ರಾಮಂ ಋಷಿಭಿಸ್ತುಲ್ಯಂ ಬಲಂ ಧರ್ಮಮಾಶ್ರಿತಂ '' ಎಂದು ರಾಮನೇ ತನ್ನ ಬಗ್ಗೆ ಹೇಳುತ್ತಾನೆ. ``ಧರ್ಮೋ ಹಿ ರಮೋ ಲೋಕೇ ಧರ್ಮೇ ಸತ್ಯಂ ಪ್ರತಿಷ್ಠಿತಂ'' ಎನ್ನುವುದು ಅವನ ಜೀವನದ ಮೂಲತತ್ವ. ರಾಮನ ಈ ಮೂಲ ಕಲ್ಪನೆಯನ್ನುಳಿಸಿಕೊಂಡು ಅವನ ಪಾತ್ರಕ್ಕೆ ಕುವೆಂಪು ಬೇರೆ ಆಯಾಮಗಳನ್ನು ಸೇರಿಸುತ್ತಾರೆ. ಅವರ ದೃಷ್ಟಿಯಲ್ಲಿ ರಾಮ, ರಾವಣರು ಬೇರೆ ಬೇರೆಯಾಗಿರದೆ ಒಂದೇ ಶಕ್ತಿಯ ಪೂರಕ ಪ್ರತಿಮೆಗಳಾಗಿದ್ದಾರೆ. ಈ ರಹಸ್ಯವನ್ನು ರಾಮ ಕಂಡುಕೊಂಡು ಹನುಮಂತನಿಗೆ ವರಿಸುತ್ತಾನೆ.

ನಾನೆ
ಆ ರಾವಣನೆ ಮೂಲ ಬಲಶಕ್ತಿ ! ನನ್ನ ಅಸತ್
ಶಕ್ತಿಯಂ ಗೆಲಲರಿದು ನನಗಲ್ಲದಿತರರಿಗೆ

[ಪು. ೭೭೦]

ಕುವೆಂಪುರವರ ದರ್ಶನದ ತಿರುಳು ಅದರ ಆಧ್ಯಾತ್ಮಿಕತೆಯಲ್ಲಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಅವರದು ಮಹರ್ಷಿ ಅರವಿಂದರು ಹೇಳುವ ಆತ್ಮಕಾವ್ಯ (epic of the soul) ದ ರೀತಿ. ಈ ದೃಷ್ಟಿಯಿಂದ **ರಾಮಾಯಣದರ್ಶನಂ** ದ ಸ್ಫೂರ್ತಿಯ ಉಗಮವನ್ನು **ಸಾವಿತ್ರಿ**ಯಲ್ಲಿಯೂ ಕಾಣಬಹುದು.

ಆದರೆ, ಕುವೆಂಪುಕಾವ್ಯದ ಸಾಧನೆ ಅದರ ಆಧ್ಯಾತ್ಮಿಕತೆಗಷ್ಟೇ ಸೀಮಿತವಾದುದಲ್ಲ. ರಾಮ, ರಾವಣ, ಸೀತೆ ಮೊದಲಾದ ಪಾತ್ರಗಳು ಕವಿಯ ಆಧ್ಯಾತ್ಮಿಕ ತಿಳಿವಿನ ಆಳವನ್ನು ಪ್ರದರ್ಶಿಸುವಂತೆ, ಅವರು ಪುನರ್ರಚಿಸಿದ ಮಂಥರೆ ಮತ್ತು ಊರ್ಮಿಳೆಯರ ಪಾತ್ರಗಳು ಅವರ ವಿಶಾಲ ಮಾನವೀಯ ತೆಯ ಸಂಕೇತಗಳಾಗಿವೆ. ಕುವೆಂಪು ಮಂಥರೆಯನ್ನು ಕಾಣುವ ದೃಷ್ಟಿ ಈ ಯುಗದ ಸಂವೇದನೆ ಯನ್ನು ಪ್ರತಿಫಲಿಸುತ್ತದೆ.

ಓ ಪತಿತೆ ,
ಓ ಕುಬ್ಜೆ, ಓ ಮಂಥರೆಯೆ, ಮರುಗುವೆನ್ ನಿನಗೆ
ಕವಿಸಹಜ ಕರುಣೆಯುಂ, ಲೋಕಕ್ರೋಧಮದಹಸ್ತಿ
ಪದದಲನದೋಷದಾವಾಗ್ನಿಗಾಹುತಿಯಾಗಿ
ಬಿಳ್ದ ನಿನ್ನಾ ಭಸ್ಮರಾಶಿಯಂ ತೊಳೆವುದಿದೊ
ಕಣ್ಗಂಗೆ ಕಾವ್ಯ ಮಹಿಮಾ ಸಿಂಧುತೀರ್ಥಕ್ಕೆ !

[ಪು.೧೨೭]

ಇದೇ ತೆರನಾದ ಕರುಣಾದೃಷ್ಟಿ ಊರ್ಮಿಳೆಯ ಪಾತ್ರವನ್ನೂ ನೋಡಿದೆ. ಅವಳ `ದೀರ್ಘ ನಿದ್ರೆ'ಯಲ್ಲಿ ಸೀತೆಯ ತಪಸ್ಸಿಗಿಂತ ಮಿಗಿಲಾದ ಸಾಧನೆಯನ್ನು ಕವಿ ಗುರುತಿಸುತ್ತಾರೆ. ಸ್ತ್ರೀತ್ವದ ಚಿಂತನ ಪ್ರತಿಮೆಯಾಗಿ ಊರ್ಮಿಳೆ ಅವರ ಕಾವ್ಯದಲ್ಲಿ ಅಮರತ್ವವನ್ನು ಪಡೆಯುತ್ತಾಳೆ.

ಪೆಣ್ತನಂ ತಾನೆ ನೀನಲ್ಲದೂರ್ಮಿಳೆಯಲ್ತು
ಪೆಣ್ಣೆಂಬ ತಪಕೆ ನೀಂ ನಿರುಪಮ ಪ್ರತಿಮೆಯೌ '

[ಪು.೧೧೧]

ರಾಮಾಯಣ ದರ್ಶನಂ ದ ಕರ್ತೃ ಕೂಡ ಕಾವ್ಯದ ಒಂದು ಪಾತ್ರವಾಗಿದ್ದಾನೆ. ಡಾಂ ದಿವೈನ್ ಕಾಮಿಡಿ (Divine Comedy) ಯಲ್ಲಿದ್ದಂತೆ ಅವನ ಮನಸ್ಸಿನ ವಿಕಾ ಆತ್ಮೋನ್ನತಿಯ ಕ್ರಮವನ್ನು ಕೂಡ ಅಲ್ಲಿ ನಾವು ಗುರುತಿಸಬಹುದು. ``ಕುವೆಂಪುವ ಸೃಜ ಕೃತಿ '' ಎಂಬ ಹೇಳಿಕೆ ಕೇವಲ ಶಬ್ದಚಮತ್ಕಾರವಾಗಿರದೆ, ಕವಿ ರಾಮಾಯಣದ ಕಥೆಯನ್ನು ಸೃಷ್ಟಿಸುವ ಮೂಲಕ ತಾನೇ ಪುನಃ ಸೃಷ್ಟಿಗೊಳ್ಳುವ ಪವಾಡವನ್ನೂ ಸಂಕೇತಿಸುತ್ತದೆ. ಇದು ಆತ್ಮೋನ್ನತಿಗೆ ಸಂಬಂಧಿಸಿದ ವಿಷಯವಾಗಿದ್ದಂತೆ ಅವನ ಕಾವ್ಯವ್ಯಾಪಾರಕ್ಕೂ ಸಂಬಂಧಿಸಿ ದ್ದಾ ಕಾವ್ಯದುದ್ದಕ್ಕೂ ಕವಿಯ ಶಕ್ತಿಯ ವಿಕಾಸದ ಕ್ರಮವೂ ನಿರ್ದೇಶಿತವಾಗಿದೆ. ರಾಮಾಯಣದರ್ಶನಂ ಕಾವ್ಯಸೃಷ್ಟಿಯಿನ್ನೇ ವಸ್ತುವಾಗಿರಿಸಿಕೊಂಡ ಮಹಾಕಾವ್ಯವೂ ಆಗಿದೆ. ಆಧುನಿಕತೆಯ ಒಂದು ಮುಖ್ಯವಾದ ಅಂಶ.

ಕುವೆಂಪುರವರ ಕಾವ್ಯ ಅವರ ವೈಯಕ್ತಿಕ ಚಿಂತನೆಯ ಫಲವಾಗಿದ್ದಂತೆ ಭಾರ ಸಂಸ್ಕೃತಿಯ ಆಳವಾದ ಅರಿವಿನ ಫಲವೂ ಆಗಿದೆ. ಇಲ್ಲಿ ಮೂಡಿಬರುವ ಪೂರ್ಣತ್ವದ ಉಪನಿಷತ್ತುಗಳಷ್ಟು ಪ್ರಾಚೀನವಾದದ್ದು, ಹಾಗೆಯೇ ಸ್ಥಿತ್ಯಂತರಗಳನ್ನು ಗುರುತಿಸುವುದ ಉಪಯೋಗಿಸುವ ಪಂಚಕೋಶಗಳ ಕಲ್ಪನೆಯೂ ಹಳೆಯದೇ. ಕವಿಯು ಪ್ರತಿಭೆ ವಿಜ್ಞಾನವನ್ನು ಸೃಷ್ಟಿಸುವುದಕ್ಕಾಗಿ ಮಡಿಯುವುದಕ್ಕಿಂತ ಹೆಚ್ಚಾಗಿ ತಾನು ಮೈಗೂಡಿಸಿಕೊಂಡ ದ ತಕ್ಕ ಪ್ರತೀಕಗಳನ್ನು ಸೃಷ್ಟಿಸುವಲ್ಲಿ ಸಾರ್ಥಕತೆ ಪಡೆಯುತ್ತದೆ. ರಾಮಾಯಣ ದರ್ಶ ಹೋಮರನ ಈಲಿಯಡ್, ಒಡಿಸ್ಸಿಗಳಿಗಾಗಲಿ, ವ್ಯಾಸ, ವಾಲ್ಮೀಕಿಯರ ಇತಿಹಾಸ ಕಾವ್ಯಗಳ ಹೋಲಿಸುವುದು ಅಷ್ಟೊಂದು ಲಾಭದಾಯಕವಾಗಲಾರದು. ಹೋಲಿಸುವುದಾದರೆ ಡಾಂಟೆಯ ದಿವೈನ್ ಕಾಮಿಡಿಗೆ ಹೋಲಿಸಬೇಕು. ಕ್ರಿಶ್ಚಿಯನ್ ದರ್ಶನವನ್ನು ಕಲೆ ಪರಿವರ್ತಿಸಲು ಡಾಂಟೆ ಬಳಸಿದ ವಿಧಾನಗಳನ್ನೇ ಕುವೆಂಪು ಕೂಡ ಬಳಸುತ್ತಾರೆ. ಡಾ ದರ್ಶನವನ್ನು ಒಪ್ಪದೇ ಹೋದರೂ ಅವನ ಕಲೆಯನ್ನು ನಾವು ಮೆಚ್ಚುವಂತೆ ಕುವೆಂಪು ನಮ್ಮ ದರ್ಶನವಾಗಿವಿದ್ದರೂ ಅವರ ಕಲಾತ್ಮಕತೆಯನ್ನು ಗ್ರಹಿಸುವುದು ನಮ್ಮಿಂದ ಸಾ ಬೇಕು. ಸುದೈವದಿಂದ ಈ ದರ್ಶನ ಭಾರತೀಯ ಮೂಲಗಳಿಂದ ಬಂದುದಾದುದರಿಂದ ನ ಓದುಗರಿಗಂತೂ ತಾತ್ವಿಕ ಸಮಸ್ಯೆಗಳು ಅಡ್ಡಬರುವುದಿಲ್ಲ.

ಇಪ್ಪತ್ತನೆಯ ಶತಮಾನದ ಕನ್ನಡಸಾಹಿತ್ಯದಲ್ಲಿ ಕಂಡುಬರುವ ಹೊಸ ಬ ಹಿನ್ನೆಲೆಯಲ್ಲಿ ರಾಮಾಯಣ ದರ್ಶನಂನಲ್ಲಿ ಕುವೆಂಪು ಬಳಸುವ ಹಳಗನ್ನಡ ಭಾಷೆ ವಿಕ್ಷಿಪ್ತವೆಂದೆನಿಸಬಹುದು. ಇದು ಈ ಕಾವ್ಯ ಎದುರಿಸುತ್ತಿರುವ ಟೀಕೆಯನ್ನು ಮಿ ಪ್ಯಾರಡೈಸ್ ಲಾಸ್ಟ್ (Paradise Lost) ಕೂಡ ಎದುರಿಸಬೇಕಾಗಿ ಬಂದ ಸಂದ ನಾವಿಲ್ಲಿ ನೆನೆಯಬಹುದು. ಆದರೆ ಮಿಲ್ಟನ್‌ನ ಶೈಲಿಯನ್ನು ಖಂಡಿಸಿದ ಎಲಿಯಟ್ ನಂತ ಉಪಯುಕ್ತತೆಯನ್ನು ಒಪ್ಪಿಕೊಂಡ. ಅವನ ಮಾತುಗಳು ರಾಮಾಯಣದರ್ಶನಂಗೂ ಅ ವುದರಿಂದ ಇಲ್ಲಿ ಅವು ಪ್ರಸ್ತುತವೆನಿಸಬಹುದು :

ಪ್ರತಿಯೊಂದು ತಲೆಮಾರಿನ ಕವಿಗಳು ಕಾವ್ಯದ ಭಾಷೆಯನ್ನು ವ್ಯವಹಾರದ
ಾಷೆಯಲ್ಲಿ ಪರಿವರ್ತಿಸತೊಡಗಿದರೆ ಕಾವ್ಯ ತನ್ನ ಮಹತ್ವದ ಕರ್ತವ್ಯವೊಂದರಿಂದ ಚ್ಯುತಿ
ೊಂದುತ್ತದೆ. ಯಾಕೆಂದರೆ, ತನ್ನ ಕಾಲದ ಭಾಷೆಯನ್ನು ಪರಿಷ್ಕರಿಸುವ ಕಾರ್ಯದಲ್ಲಿ
ಪಭಾಗಿಯಾಗುವುದಷ್ಟೇ ಕಾವ್ಯದ ಉದ್ದೇಶವಾಗಿರಕೂಡದು. ಭಾಷೆ ಅಪರಿಮಿತವಾದ
ಗದಿಂದ ಬದಲಾಗುವುದನ್ನು ಅದು ತಡೆಗಟ್ಟಬೇಕು, ಇಂಥ ಒದಲಾವಣೆ ನಿಜವಾದ
ಳವಣಿಗೆಯಾಗಿರದೆ ಭಾಷೆ ಕ್ರಮೇಣ ಅವನತಿಹೊಂದುವುದಕ್ಕೆ ಕಾರಣವಾಗುತ್ತದೆ. ಇದು
ೂದು ನಾವು ಎದುರಿಸುತ್ತಿರುವ ಗಂಡಾಂತರ "

ತಮ್ಮ ಕಾವ್ಯವನ್ನು ಹಳಗನ್ನಡದಲ್ಲಿ ರಚಿಸುವ ಮೂಲಕ ಕುವೆಂಪು ನಮ್ಮಿಂದ
ರೆಯಾಗುತ್ತಿರುವ ಭಾಷಾಸಂಪತ್ತನ್ನು ಮರಳಿ ದೊರಕಿಸಿದುದಲ್ಲದೆ ಇಂದು ಓದುಗ ಹಾಗೂ
ವ್ಯಪರಂಪರೆ ನಡುವೆ ಉಂಟಾಗಿರುವ ಕಂದರಕ್ಕೆ ಒಂದು ಸೇತುವೆಯನ್ನೂ ಕಟ್ಟಿದ್ದಾರೆ. (ಪ್ರತಿನರ
ಾಹರಿಚರಿತೆಯ ಬಗೆಗೂ ಇದೇ ಮಾತನ್ನು ಹೇಳಬಹುದು) ಇನ್ನು ಮುಂದೆ ಬರುವ ಕವಿಗಳು
ಳಗನ್ನಡದಲ್ಲಿ ಬರೆಯಲಾರರು. ಆದರೆ ಹಳಗನ್ನಡದಲ್ಲಿರುವ ಕಾವ್ಯಗಳಿಂದ ಕಲಿತುಕೊಳ್ಳುವ
ಕ್ಷ್ಮತೆಗಳನ್ನು ಕುರಿತು ಅವರು ಕೂಡ ಗಂಭೀರವಾಗಿ ವಿಚಾರ ಮಾಡಬೇಕಾದ ಅವಶ್ಯಕತೆಯಿದೆ.

ಕುವೆಂಪುರವರ ಕಾವ್ಯದ ವೈಶಿಷ್ಟ್ಯವೆಂದರೆ ಕನ್ನಡ ಕಾವ್ಯ ಪರಂಪರೆಯಲ್ಲಿ ಅದು ಆಳವಾದ
ರುಗಳನ್ನು ಬಿಟ್ಟಿದ್ದರೂ ಅದು ಉಸಿರಾಡಿಸುವ ಹವೆ, ಉಣ್ಣುವ ನೀರು ಇಂದಿನವೇ ಆಗಿವೆ.
ಮಾಯಣದರ್ಶನದಿಂದ ಭಾವಸ್ಪಾದ ಸರಳ ರಗಳೆ ಕುವೆಂಪುರವರಿಗೆ ಮಾಧ್ಯಮವಾದಂತೆ.
ಸವಾಸ, ವಿನಾಯಕ ಮೊದಲಾದ ಉಳಿದ ಕವಿಗಳಿಗೂ ಮಾಧ್ಯಮವಾಗಿದೆ. ಈ ಭಾವಸ್ಪು
ರ್ವ ಪಶ್ಚಿಮಗಳ ಪ್ರತಿಭೆಗಳು ಒಟ್ಟಾಗಿ ದುಡಿದುದರ ಫಲಗಳಲ್ಲೊಂದು. ಇದಲ್ಲದೆ ಕುವೆಂಪು
ಸುವ ಹೊಮೆರಿಕ್ ಉಪಮೆಗಳಲ್ಲಿ ಬಹಳಷ್ಟು ಸಾಮಾನ್ಯ ಜೀವನದ ಚಿತ್ರಗಳೇ ಆಗಿದ್ದು
ೃದಲ್ಲಿ ವರ್ತಮಾನದ ಆಯಾಮವನ್ನು ಸೃಷ್ಟಿಸಲು ಸಹಾಯಕಾರಿಯಾಗುತ್ತವೆ.

೨

ಕುವೆಂಪುರವರಂತೆ ವಿನಾಯಕ ಕೃಷ್ಣ ಗೋಕಾಕರೂ ಮಹಾಕಾವ್ಯದ ರಚನೆಯತ್ತ
ದಲಿಂದಲೂ ಒಲಿದವರು. ೧೯೬೫ ರಲ್ಲಿ ತ್ರಿಶಂಕುವಿನ ಪ್ರಭಾಪ್ರಭಾತವೆಂಬ ಕಥನ ಕಾವ್ಯವನ್ನು
ಾಗ ಅದನ್ನು ಅವರು `ಮಹಾಕಾವ್ಯದ ಒಂದು ಮಿಡಿ ' ಯೆಂದೇ ಪರಿಚಯಿಸಿದರು. `ತ್ರಿಶಂಕು
ಕಾಂಡ ' ಎಂಬ ಶೀರ್ಷಿಕೆಯನ್ನು ಹೊತ್ತು ಈ ಕಥನಕಾವ್ಯ ಭಾರತ ಸಿಂಧೂರಶ್ಮಿಯ ಹತ್ತನೆಯ
ಡವಾಯಿತು. ೩೫,೦೦೦ ಪಂಕ್ತಿಗಳಷ್ಟು ದೀರ್ಘವಾದ ಭಾರತ ಸಿಂಧೂರಶ್ಮಿಯನ್ನು ರಚಿಸಲು
ೋಕಾಕರಿಗೆ ಬಹು ವರ್ಷಗಳೇ ಬಿಡಿದವು. ಶಿವರಾತ್ರಿಯಂದು ತಮ್ಮ ಕಾವ್ಯವನ್ನು ಗೋಕಾಕರು
ಾರದ ಕೈಲಾಸ ದೇವಾಲಯಕ್ಕೆ ಹೋಲಿಸಿದ್ದಾರೆ.

ಕನ್ನಡಿಯ ಗಿರಿಶ್ರೇಣಿಯಲ್ಲೊಂದು ಬೆಟ್ಟವನು
ಸರ್ವರಿಗಾದ ದೇಗುಲವ ಗೆಯ್ಪುಹೆ ಕೃಷ್ಣನೆಸಗಂತೆ ;
ನಾನಿದರ ದೃಷ್ಟಾರ ! ನಾನಿದರ ತೃಷ್ಟಾರ,

ಮೂರ್ತಿಶಿಲ್ಪಿಯು, ಕಲ್ಲುಕುಟಿಗ, ದಿನಗೂಲಿಯುವ

[ಪು. xxiii]

ಭಾರತ ಸಿಂಧುರಶ್ಮಿಯು ವಸ್ತುವಿನ ಆಕರಗಳೆಲ್ಲವನ್ನೂ ಗುರುತಿಸುವುದು ಕಷ್ಟವ ಕ
ಯಾಕೆಂದರೆ ಗೋಕಾರು ಸಂಸ್ಕೃತದ ವೇದ, ಬ್ರಾಹ್ಮಣ, ಪುರಾಣಗಳಂತೆ ಇಂಗ್ಲೀಷಿನಲ್ಲಿ ದೊಂ
ಪ್ಯಾರಡೈಜ್ ಲಾಸ್ಟ್ (Paradise Lost), ವಾಲ್ಡನ್, (Walden), ದ ಪ್ರೊಫೆಟ್ (T
Prophet) ಇಂಥ ಆಕರಗಳನ್ನು ತೋಳಿಸಿಪ್ಪಾರೆ. ಆದರೆ ಅವರೇ ಹೇಳುವ ಹಾಗೆ ಆ
ಕಾವ್ಯದ ಮುಖ್ಯ ಆಕರ ಋಗ್ವೇದ, ಅದರಲ್ಲಿಯೂ ವಶಿಷ್ಠ, ವಿಶ್ವಾಮಿತ್ರ ಹಾಗೂ ಪಾಪ
ಮಂಡಲಗಳು. ತಮ್ಮ ಮಹಾಕಾವ್ಯವನ್ನು ಭಾರತಸಿಂಧು ರಶ್ಮಿಯೆಂದು ಕರೆದುದರ ಔಚಿತ್ಯ
ಗೋಕಾಕರು ಹೀಗೆ ವಿವರಿಸುತ್ತಾರೆ : " ಈ ಶೀರ್ಷಿಕೆಯಲ್ಲಿ ಒಂದು ಅರ್ಥವನ್ನು ವ್ಯಂಜಿಸಿದ್ದೆ
ಋಗ್ವೇದದಲ್ಲಿ ಬರುವ ಸುದಾಸನು ದಾಸಕುಲದ ಒಬ್ಬ ಚಕ್ರವರ್ತಿ. ಅವನೇ ಭರತ. ಅ
ಸಂಘಟಿಸಿದ ರಾಜ್ಯ ಭಾರತವರ್ಷವಾಯ್ತು. 'ಸಿಂಧು' ಎನ್ನುವುದು ಅಸ್ತಿತ್ವದ ಒಂದು ನ
(stream of existence) 'ರಶ್ಮಿ' ವೃಷ್ಟಿಯ ಒಂದು ಕಿರಣ. ಈ ರಶ್ಮಿ ಸಿಂಧುವಿ
ಲೀನವಾಗಬೇಕು..... ಅಂದರೆ ವೃಷ್ಟಿಯಿನ್ನುವುದು ಅಸ್ತಿತ್ವದಲ್ಲಿ ಸಮಾವಿಷ್ಟವಾದಾಗ ಮ
ಜೀವನ ಪೂರ್ಣವಾಗುತ್ತದೆ. "[೬] ಈ ಮಹಾಕಾವ್ಯದ ವಸ್ತುವಿಗೆ ಎರಡು ಮುಖಗ
ಮಾನವನಿಂದ ದೈವೀ ಜೀವನದ ಏಳ್ಗೆ ಹಾಗೂ ಏಳು ಸಂಸ್ಕೃತಿ ಹಾಗೂ ಜನಾಂಗಗಳ ಸಾಮರಸ್ಯ
ಹುಟ್ಟುವ ರಾಷ್ಟ್ರ. ಭಾರತ ಸಿಂಧು ರಶ್ಮಿಯ ನಾಯಕನಾದ ವಿಶ್ವಾಮಿತ್ರನ ಜೀವನದಲ್ಲಿ ಈ ದ್ವಿ
ಮುಖ ಸಾಕಾರಗೊಳ್ಳುತ್ತದೆ.

ಭಾರತಸಿಂಧು ರಶ್ಮಿಯಲ್ಲಿ 'ಪೀಠಿಕಾಸಂಧಿ'ಯನ್ನು ಹೊರತುಪಡಿಸಿದಂತೆ ೧ ಪೂ
ವರಕಾಂಡ ೨ ಉತ್ಸರ್ಗಕಾಂಡ ೩ ಮನುಕುಲಪುನಃಕಾಂಡ ೪ ಸಪ್ತಸಿಂಧೂಕಾಂಡ ೫ ಕಾವ್ಯ
ನೃಪರಾಜ್ಯಕಾಂಡ ೬ ಋಷ್ಯಾಶ್ರಮಕಾಂಡ ೭ ಮಾತೆರಾಜ್ಞಕಾಂಡ ೮ ಅಶ್ವಮೇಧಕಾಂಡ ೯ ಭ
ವಿಸ್ತರಣ ಕಾಂಡ ೧೦. ತ್ರಿಶಂಕುವೃಷ್ಟಾಕಾಂಡ ೧೧ ಕ್ಷಾಂತಪರ್ಣನಕಾಂಡ ಹಾಗೂ ೧೨ ಕ
ಶತಮರ್ಕಾಂಡ ಎಂಬ ಹನ್ನೆರಡು ಕಾಂಡಗಳಿವೆ. ರಚನೆಯ ದೃಷ್ಟಿಯಿಂದ ಈ ಮಹಾಕಾವ್
ನಾಲ್ಕು ಭಾಗಗಳನ್ನು ಗುರುತಿಸಬಹುದು. I ಸೃಷ್ಟಿಯ ಉಗಮ (ಮೊದಲ ಮೂರು ಕಾಂಡಗ
ವಿಶ್ವಾಮಿತ್ರನ ಜನನ, ವಿದ್ಯಾಭ್ಯಾಸ ಹಾಗೂ ಪೂರ್ವಜನಗಳು (೪, ೫, ೬ ಕಾಂಡಗಳು
ಪಾರರಾಜ್ಯ ಯುದ್ಧ ಹಾಗೂ ಅದರ ಪರಿಣಾಮಗಳು (೭, ೮, ೯ ಕಾಂಡಗಳು) ಹಾಗೂ
ಪೂರ್ಣತೆಯತ್ತ ವಿಶ್ವಾಮಿತ್ರನ ವಿಕಾಸ (೧೦, ೧೧, ೧೨ ಕಾಂಡಗಳು). ಸಂಕೀರ್ಣ ರಚನೆಯ
ಕರೆಯಲಾದ ಭೂದೃಶ್ಯಗಳಲ್ಲಿ, ಮಹಾಕಾವ್ಯದ ಬಂಧವಿನ್ಯಾಸ ಹಾಗೂ ಅದರ ಆಕಾರ ಪೌರ್ವಾತ್ಯ ಪ
ಪಾಶ್ಚಾತ್ಯ ಮಾದರಿಗಳ ಬೆಸುಗೆಯಾಗಿದೆ. ಭಾರತೀಯ ಮಹಾಕಾವ್ಯಗಳು ಬಳಸಿಕೊಳ್ಳುವ ಅಲಂ
ವರ್ಣನೆಗಳನ್ನೆಲ್ಲ ಹೋಮರ್ ಮೊದಲಾದವರ ಮಹಾಕಾವ್ಯಗಳಲ್ಲಿ ಕಾಣಬಹುದಾದ ಮಹತ್ವ
ಗಳೂ ಇಲ್ಲಿವೆ.

ಮಹಾಕಾವ್ಯಗಳ ನಾಯಕರಲ್ಲಿ ವಿಶ್ವಾಮಿತ್ರನ ಸ್ಥಾನ ಅದ್ವಿತೀಯವಾದದ್ದು. ಎ
ಆಟದಿಂದಾಗಿ ಮಹರ್ಷಿಯಾಗಬೇಕಾಗಿದ್ದ ವಿಶ್ವರಥ ರಾಜನಾಗುತ್ತಾನೆ. ಆದರೆ ತನ್ನ ಕ
ಹಾಗೂ ಆತ್ಮಶಕ್ತಿಗಳ ಬಲದಿಂದ ಮತ್ತಿಯನ್ನು ಎದುರಿಸಿ ಹೊಸ ವ್ಯಕ್ತಿತ್ವ ಹಾಗೂ

ಹೆಸರುಗಳನ್ನು ಗಳಿಸಿ ವಿಶ್ವಾಮಿತ್ರನಾಗುತ್ತಾನೆ. ಅವನ ಜೀವನಕ್ಕೊಂದು ಮಹತ್ವದ ತಿರುವು ಕೊಡುವ ಘಟನೆ ವಶಿಷ್ಠನ ಆಶ್ರಮದಿಂದ ನಂದಿನಿಯನ್ನು ಅಪಹರಿಸಲು ಅವನು ಮಾಡುವ ಪ್ರಯತ್ನ ಹಾಗೂ ಅನುಭವಿಸುವ ಸೋಲು ;

ಒಂದು ಪಾಠದ ಕಲಿತೆ ಮಹರ್ಷಿಗಳಿಂದಿಲ್ಲಿ ;
ಸಪ್ತಸೈಂಧವದ ಚಕ್ರಾಧಿಪತ್ಯವ ಗೆಲಲು
ಮೊದಲು ಬೇಕಹುದು ಚೈತನ್ಯಬಲ. ಚಂದ್ರಬಲ,
ತಾರಾಬಲದ ಮೀರುತಾತ್ಮಬಲವೊಂದಿಹುದು
ತಾ ದೈವಬಲವಾಗಿ. ಆತ್ಮಬಲವಿರೆ ಕ್ಷಾತ್ರ
ಸಂಧಿಸಿರುವುದು ತಾನೆ. ಮೊದಲು ಬೇಕು ತಪಸ್ಸು.

[ಸಂ. ೧ ಪು. ೪೯೩]

ಈ ಹೊಸ ಅರಿವಿನ ಹಿನ್ನೆಲೆಯಲ್ಲಿ ವಿಶ್ವರಥ ರಾಜ್ಯತ್ಯಾಗ ಮಾಡಿ ಕುಮಂಗಾ ತೀರ್ಥದಲ್ಲಿ ಘೋರ ತಪಸ್ಸನ್ನಾಚರಿಸುತ್ತಾನೆ. ಈ ತಪಸ್ಸು ಮೇನಕೆಯಿಂದ ಒಮ್ಮೆ ಭಂಗವಾದರೂ ಈ ಹೊಸ ಅನುಭವ ಅವನ ಆಧ್ಯಾತ್ಮಿಕ ವಿಕಾಸ ಮುಂದುವರಿಯುವುದಕ್ಕೆ ಸಹಾಯಕಾರಿಯಾಗುತ್ತದೆ. ಅವನ ತಪಸ್ಸು ಫಲಕೊಟ್ಟು, ವಿಶ್ವಮಾತೆ ಅದಿತಿಯ ಪ್ರಸಾದದಿಂದ ಅವನಿಗೆ ಗಾಯತ್ರಿ ಮಂತ್ರದ ಸಾಕ್ಷಾತ್ಕಾರವಾಗುತ್ತದೆ. ವಿಶ್ವಾಮಿತ್ರನಾಗಿ ಮಾರ್ಪಟ್ಟು ಪಡೆದ ವಿಶ್ವರಥನಿಗೆ ತನ್ನ ಜೀವನದ ಧ್ಯೇಯ ಈಗ ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ. ಸಪ್ತಸಿಂಧುಗಳನ್ನೊಟ್ಟುಗೂಡಿಸಿ ರಾಷ್ಟ್ರವೊಂದನ್ನು ಕಟ್ಟಬೇಕೆಂಬ ಅವನ ಸಂಕಲ್ಪ ಈಗ ಮಾನವನ ಪರಮಕಲ್ಯಾಣದತ್ತ ತಿರುಗುತ್ತದೆ. ಮಾನವ ದೇವನಾಗಬೇಕು, ಭೂಮಿ ಸ್ವರ್ಗವಾಗಬೇಕು ಎನ್ನುವುದು ಅವನ ಹೊಸ ಸಂಕಲ್ಪವಾಗುತ್ತದೆ. ವಿಶ್ವಾಮಿತ್ರನ ಆಧ್ಯಾತ್ಮಿಕ ದರ್ಶನ ಅವನ ರಾಷ್ಟ್ರೀಯ ದರ್ಶನವನ್ನು ಒಳಗೊಳ್ಳುವಷ್ಟು ವಿಶಾಲ ವಾಗುತ್ತದೆ.

ಸಪ್ತಸಿಂಧುದೇಶವನ್ನು ಒಂದು ರಾಷ್ಟ್ರವನ್ನಾಗಿ ಪರಿವರ್ತಿಸಬೇಕೆನ್ನುವ ವಿಶ್ವಾಮಿತ್ರನ ಕನಸು ತೃತ್ಸು ಭರತ ಸುದಾಸನ ಮೂಲಕ ನನಸಾಗುತ್ತದೆ. ಸುದಾಸನ ಬಗೆಗೆ ಸಾಂಸ್ಕೃತಿಯನ್ನು ವಿಶ್ವರಥ ಬಿಡುವವನಾಗಿದ್ದ. ಸುದಾಸನ ಹೆಸರೇ ಸೂಚಿಸುವಂತೆ ಆತ ಮಿಶ್ರಸಂಸ್ಕೃತಿಯ ಪ್ರತಿನಿಧಿ. ದಶರಾಜ್ಞ ಯುದ್ಧದಲ್ಲಿ ಸುದಾಸ ಆರ್ಯ ಅರಸುಗಳನ್ನು ಸೋಲಿಸುತ್ತಾನೆ. ಇಡೀ ಸಪ್ತಸಿಂಧು ದೇಶ ಅವನ ಸ್ವಾಮಿತ್ವಕ್ಕೆ ಒಳಗಾಗುತ್ತದೆ. ಸೋತ ರಾಜರು ಈರಾನ್, ದಕ್ಷಿಣದತ್ತ ಸರಿಯುತ್ತಾರೆ. ಸಪ್ತಸಿಂಧುದೇಶ ಭಾರತವರ್ಷವಾಗುತ್ತದೆ. ಆರ್ಯರ ಹಾಗೂ ದಾಸರ ಸಂಸ್ಕೃತಿಗಳ ಬೆಸುಗೆಯಲ್ಲಿ ಹೊಸ ಸಂಸ್ಕೃತಿಯೊಂದು ಹುಟ್ಟಿಕೊಳ್ಳುತ್ತದೆ. ಹೊಸ ರಾಷ್ಟ್ರವೊಂದು ಜನ್ಮತಾಳುತ್ತದೆ.

ಭಾರತ ವರ್ಷದ ಸ್ಥಾಪನೆ ವಿಶ್ವಾಮಿತ್ರನ ಕನಸಿನ ಒಂದು ಭಾಗ ಮಾತ್ರ. ವಿಶ್ವರಥ ಋಷಿಯಾಗುವುದಕ್ಕಿಂತಲೂ ಮೊದಲೇ ಇಕ್ಷ್ವಾಕುವಂಶದ ತ್ರಿಶಂಕು ಸತ್ಯವ್ರತನತ್ತ ಆಕರ್ಷಿತನಾಗಿದ್ದಾನೆ. ಯಾದವಕನ್ಯೆ ಉಪದಾನವಿಯನ್ನು ಅಪಹರಿಸಿ ದಸ್ಯು ಬಂಧವನ್ನು ಸೇರಿದ ಸತ್ಯವ್ರತನನ್ನು ಧರ್ಮದ ಮಾರ್ಗಕ್ಕೆ ಮರಳಿ ತರಲು ವಿಶ್ವರಥನೇ ಮುಂದಾಗಿರುತ್ತಾನೆ. ಹೆಂಡತಿ ಸತ್ಯರಥೆ ತೀರಿಕೊಂಡಾಗ ಸತ್ಯವ್ರತ ಅವಳ ಇಚ್ಛೆಯನ್ನು ಪೂರೈಸಲು ಸದೇಹ ಸ್ವರ್ಗಕ್ಕೆ ಹೋಗಬಯಸಿ

ವಿಶ್ವಾಮಿತ್ರನ ಸಹಾಯವನ್ನು ಯಾಚಿಸುತ್ತಾನೆ. ಈ ಯಾಚನೆಯನ್ನು ವಿಶ್ವಾಮಿತ್ರ ಸ್ವೀಕರಿಸುವುದರೊಂದಿಗೆ ಅವನ ಜೀವನದಲ್ಲಿ ಎರಡನೆಯ ಮಹಾಘಟನೆ ನಡೆಯುತ್ತದೆ. ತನ್ನ ತಪಃ ಪ್ರಭಾವದಿಂದ ಸತ್ಯವ್ರತವನನ್ನು ಸ್ವರ್ಗಕ್ಕೇರಿಸಲು ವಿಶ್ವಾಮಿತ್ರ ವಿಫಲನಾದಾಗ ಪ್ರತಿ ಸ್ವರ್ಗವನ್ನೇ ಕಟ್ಟಲು ಆತ ಮನಸ್ಸು ಮಾಡುತ್ತಾನೆ. ಆದರೆ ಅವನು ಕಟ್ಟುವ ಹೊಸ ಸ್ವರ್ಗ ವಿಕೃತಿಗಳಿಂದ ತುಂಬಿರುತ್ತದೆ. ಇದು ಅವನು ಅನುಭವಿಸುವ ಎರಡನೆಯ ಸೋಲು. ಪತನದ ಹಾದಿಯಲ್ಲಿರುವ ವಿಶ್ವಾಮಿತ್ರನನ್ನು ಬ್ರಹ್ಮ ಎಚ್ಚರಿಸುತ್ತಾನೆ.

ನಿನ್ನ ಸಂಕಲ್ಪವಿದೆ ದಿವ್ಯತಮವೆಂಬ ಜಲ್ಪ
ಅತಲ ಪಾತಾಲಕ್ಕೆ ನಿನ್ನನೊಯ್ಯುವುದು ಅಲ್ಪ !
ದಿವ್ಯಪ್ರಜ್ಞೆಗೆ ದಾರಿಯಾಗುವದೆ ನರಗೆ ಶ್ರೇಯ
ದಿವ್ಯನೋಂಪಿಗೆ ನೇಗಿಲಾಗುವುದೆ ಅವಗೆ ಪ್ರೇಯ
[ಸಂ ೨. ಪು ೫೫೧]

ಎಚ್ಚತ್ತ ವಿಶ್ವಾಮಿತ್ರ ಮತ್ತೆ ತನ್ನ ಆಧ್ಯಾತ್ಮ ಯಾತ್ರೆಯನ್ನು ಮುಂದುವರಿಸುತ್ತಾನೆ. ಕ್ರಾಂತದರ್ಶಿಯಾಗುತ್ತಾನೆ. ಅವನ ಹೊಸ ಸಾಧನೆಯನ್ನು ತೋರಿಸುವ ಎರಡು ಘಟನೆಗಳು ಭಾರತ ಸಿಂಧುರಶ್ಮಿ ಯಲ್ಲಿ ಕ್ರಾಂತದರ್ಶನಕಾಂಡದಲ್ಲಿ ವರ್ಣಿತವಾಗಿವೆ. ನರಮೇಧದಿಂದ ಶುನಃಶ್ಶೇಪನ ವಿಮೋಚನೆ ಹಾಗೂ ಅಮಿಷಗಳ ತಿರಸ್ಕಾರ. ಮುಂಗಳದೊಂದಿಗೆ ಮಹಾಕಾವ್ಯ ಮುಕ್ತಾಯವಾಗುತ್ತದೆ.

ಯುಗಯುಗಕ್ಕೆ ವಿಶ್ವಾಮಿತ್ರರುದಿಸಲಿ ಪೃಥ್ವಿಯುದರದಲಿ ;
ಅಭ್ಯುದಯ ನಿಃಶ್ರೇಯಗಳಿಗೆ ಮಾಡಲಿ ದಾರಿ
ಸಪ್ತರಶ್ಮೀದರ್ಶನದ ಭವ್ಯಭವನದಲಿ
ಮರ್ತ್ಯಯಾತ್ರಿಗಳಿರಲಿ ದೇವಮಾನವರಾಗಿ !
ಮಾರ್ಪಡಲಿ ಮರ್ತ್ಯಸಮಾಜ, ಆಗಿ ದಿವ್ಯ ಸಮಾಜ !
[ಸಂ.೨ ಪು. ೭೩೪]

ಮಹರ್ಷಿ ಅರವಿಂದರ ಮಹತ್ವದ ಹೇಳಿಕೆಯೊಂದು ಹೀಗಿದೆ. `ಸಾಮಿಗೆ ಹಾಗೂ ಹೊರಗಿನಿಂದ ಬರುವ ದುಃಖಕ್ಕೆ ಕವಿಗಳು ಅವಾಸ್ತವ ಗಮನ ಕೊಡುತ್ತಾರೆ. ಆದರೆ ನಿಜವಾದ ಶೋಕಾಂತಿಕೆಗಳೆಂದರೆ ಆತ್ಮದ ಸೋಲುಗಳು ಮತ್ತು ನಿಜವಾದ ಮಹಾಕಾವ್ಯವೆಂದರೆ ದೇವತ್ವದತ್ತ ಮಾನವನ ಯಶಸ್ವೀ ಆರೋಹಣ. " ಅರವಿಂದರ ದರ್ಶನವಲ್ಲಿಯೇ ಮೂಡಿಬಂದ ಗೋಕಾಕರ ಮಹಾಕಾವ್ಯದ ಮುಖ್ಯ ಸಾಧನೆ ವಿಶ್ವಾಮಿತ್ರನನ್ನು ದೇವತ್ವದತ್ತ ಏರಬಲ್ಲ ಮಾನವನ ಸಂಕೇತವನ್ನಾಗಿ ಪರಿವರ್ತಿಸಿದುದು. ವಿಶ್ವಾಮಿತ್ರನ ರಾಜಕೀಯ ಸಾಧನೆ ಅವನ ಆಧ್ಯಾತ್ಮಿಕ ಸಾಧನೆಯ ಪರಿಣಾಮಗಳಲ್ಲೊಂದಾಗಿದೆ. ಗೋಕಾಕರು ಜೀವನವನ್ನು ಈ ಮಹಾಕಾವ್ಯದಲ್ಲಿ ಇಡಿಯಾಗಿ ನೋಡಿದ್ದಾರೆ. ಲೌಕಿಕ ಹಾಗೂ ಆಧ್ಯಾತ್ಮಿಕ ಜೀವನಗಳನ್ನು ಅವರು ಬೇರೆ ಬೇರೆಯಾಗಿ ಪರಿಗಣಿಸುವುದಿಲ್ಲ. ಹೀಗಾಗಿ ಮಾನವನ ಆಧ್ಯಾತ್ಮಿಕ ವಿಕಾಸದ ಕತೆ ರಾಷ್ಟ್ರದ ವಿಕಾಸದ ಕತೆಯೂ ಆಗಿದೆ.

ಆಧುನಿಕ ಓದುಗರಿಗೆ ಭಾರತಸಿಂಧು ರಶ್ಮಿಯ ಮೌಲ್ಯ ಎರಡು ಬಗೆಯದಾಗಿದೆ. ಈ ಮಹಾಕಾವ್ಯ ವಿಕಾಸದ ಮಾರ್ಗದಲ್ಲಿ ಮಾನವನ ಸಾಧ್ಯತೆಗಳು ಅನಂತವಾಗಿವೆ ಎಂದು ಸೂಚಿಸುವುದರ ಜೊತೆಗೆಯೆ ಸಾಂಸ್ಕೃತಿಕ ಐಕ್ಯದ ಆದರ್ಶವನ್ನೂ ಎತ್ತಿಹಿಡಿಯುತ್ತದೆ. ಜಾತಿಂಗಗಳ ಘರ್ಷಣೆಗಳಿಂದ ಹಾಗೂ ವಿನಾಶಕಾರಿ ಪ್ರೇರಣೆಗಳಿಂದ ಜರ್ಜರಿತವಾದ ನಮ್ಮ ಶತಮಾನಕ್ಕೆ ಭಾರತಸಿಂಧುರಶ್ಮಿಯ ಸಂದೇಶ ಎಷ್ಟು ಪ್ರಸ್ತುತವಾಗಿದೆಯೆನ್ನುವುದನ್ನು ಬಿಡಿಸಿ ಹೇಳಬೇಕಾಗಿಲ್ಲ. ಗೋಕಾಕರು ಇತಿಹಾಸವನ್ನು ಪುನರ್ನಿರ್ಮಿಸಿದ ಕ್ರಮಗಳನ್ನು ಪ್ರಶ್ನಿಸುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗುವುದಿಲ್ಲ. ಆದರೆ, ಐಕ್ಯ ಹಾಗೂ ಸಾಮರಸ್ಯಗಳ ಹೊಸತೊಂದು ಪುರಾಣವನ್ನು ತಮ್ಮ ಮಹಾಕಾವ್ಯದಲ್ಲಿ ಅವರು ಸೃಷ್ಟಿಸಿದ್ದಾರೆ ಎನ್ನುವ ಸತ್ಯವನ್ನು ಒಪ್ಪಲೇಬೇಕಾಗುತ್ತದೆ. ರಾಷ್ಟ್ರೀಯ ಮಹಾಕಾವ್ಯವಾದ ವರ್ಜಿಲ್‌ನ The Aeneid ಮತ್ತು ಆಧ್ಯಾತ್ಮಿಕ ಮಹಾಕಾವ್ಯವಾದ ಡಾಂಟೆಯ Divine Comedy ಎರಡರ ಉದ್ದೇಶಗಳನ್ನು ಒಂದೇ ಕೃತಿಯಲ್ಲಿ ಸ್ವಸಂಸ್ಕೃತಿಯ ಸಂದರ್ಭದಲ್ಲಿ ಸಾಧಿಸಲೆತ್ನಿಸುವ ಅವರ ಸಾಹಸ ಅದ್ವಿತೀಯವಾದದ್ದು.

೩

``ಆಧ್ಯಾತ್ಮ ಕಾವ್ಯವಾಗಬಲ್ಲುದೆ ?'' ಎಂಬ ಪ್ರಶ್ನೆಗೆ ಉತ್ತರವಾಗಿ ಹುಟ್ಟಿಕೊಂಡ ಮಹಾದೇವಿಯಕ್ಕನ ಜೀವನವನ್ನಾಧರಿಸಿದ ಸಂ. ಶಿ. ಭೂಸನೂರಮಠರ ಲಘುಕಾವ್ಯ `ಸಮರಸ' ಬೆಳೆದು ಭವ್ಯ ಮಾನವ ವಾಗಲು ಕಾಲುಶತಮಾನವೇ ಬೇಕಾಯಿತು. ಈ ಅವಧಿಯಲ್ಲಿ ಶೂನ್ಯ ಸಂಪಾದನೆಯಂಥ ಪರಾಮರ್ಶನಗ್ರಂಥಗಳ ಮೂಲಕ ಭೂಸನೂರಮಠರ ದರ್ಶನ ವಿಕಾಸಗೊಂಡು ಮಹಾದೇವಿಯಕ್ಕನ ಆಧ್ಯಾತ್ಮಿಕ ಸಾಧನೆಯನ್ನು ಒಳಗೊಂಡ ಭವ್ಯಮಾನವ ದರ್ಶನವಾಗಿ ಪರಿಣಮಿಸಿತು. `ಸಮರಸ 'ದ ನಾಯಿಕೆಯಾದ ಮಹಾದೇವಿಯಕ್ಕ `ಮೂಲ ಪೀಠಿಕೆ' ಯಾಗಿ ಉಳಿದು `ಮಾನವ 'ನೆ ಕಾವ್ಯದ ಮಹಾನಾಯಕನಾದ. ತಮ್ಮ ಕಾವ್ಯದ `ಪ್ರತಿಜ್ಞೆ'ಯನ್ನು ಭೂಸನೂರಮಠರು ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ.

೧. ಹೆಣ್ಣು ಗಂಡೆನ್ನದೆ ಮಾನವದ ಗಾಂಭೀರ ಮಹಾದೇವ.

೨. ವಿಶ್ವಪ್ರಪಂಚವೆ ತನ್ನ ಮಹಾಮನೆಯಾಗಿರುವ ಮಾನವ ಮಹಾದೇವನೆ ಸರ್ವೋತ್ತಮ.

೩. ಕತ್ತಲೆಯ ಪ್ರಶ್ನೆಗಳಿಗೆ ಈ ಭವ್ಯ ಮಾನವ ಮಹಾದೇವ ಉತ್ತರ.

೪. ಇಹಲೋಕ ಪರಲೋಕವನ್ನೊಳಗೊಂಡ ಭೂಲೋಕ ಸರ್ವಾಧಿಕ, ಸರ್ವಶ್ರೇಷ್ಠ.

೫. ಮಾನವ ಜೀವನ ವಿಲಾಸಕ್ಕೆ ಭೂಲೋಕವೆ ಪರಮ ಚರಮ ರಂಗಸ್ಥಲ.

ಈ `ಪ್ರತಿಜ್ಞೆ' ಭವ್ಯಮಾನವದ ದರ್ಶನ ಮೂಲ ಸೂತ್ರಗಳ ಸಂಹಿತೆಯಾಗಿದೆ.

ಭವ್ಯಮಾನವದಲ್ಲಿ (೧) ಕಲ್ಯಾಣ ಕಾಂಡ (೨) ಶ್ರೀಶೈಲಕಾಂಡ (೩) ಕತ್ತಲೆಯ ಕಾಂಡ (೪) ಉದಯಕಾಂಡ (೫) ಉಜ್ವಲಕಾಂಡ ಹಾಗೂ (೬) ಭವ್ಯಕಾಂಡಗಳೆಂಬ ಆರು ಕಾಂಡಗಳಿವೆ. ರಾಮಾಯಣದರ್ಶನಂ ಅಥವಾ ಭಾರತಸಿಂಧುರಶ್ಮಿಗೆ ಹೋಲಿಸಿದರೆ ಭವ್ಯಮಾನವದಲ್ಲಿ ಕಥೆಯ ಅಂಶ ಬಹಳ ಕಡಿಮೆ, ಪಾತ್ರಗಳ ಸಂಖ್ಯೆಯೂ ಸೀಮಿತ.

`ಕಲ್ಯಾಣ ಕಾಂಡ' ದಲ್ಲಿ ಉಡುತಡಿಯಿಂದ ಕಲ್ಯಾಣಕ್ಕೆ ಹೊರಟುಬಂದ ಮಹಾದೇವಿಯಕ್ಕ ಅನುಭವಮಂಟಪದ ` ಭವ್ಯಮಾನವದ ಸಾಕಾರಸ್ವಪ್ನ ' ಗಳಾದ ಶರಣರೆದುರು ಮುಚ್ಚುಮರೆಯಿಲ್ಲದೆ ತನ್ನ ಜೀವನವನ್ನು ತೆರೆದಿಡುತ್ತಾಳೆ. ಅವಳ ಭಕ್ತಿಯ ಅನನ್ಯತೆ ಹಾಗೂ ಆಧ್ಯಾತ್ಮಿಕ ಸಾಧನೆಗಳು ಶರಣರ ಮನಸ್ಸನ್ನು ಗೆಲ್ಲುತ್ತವೆ. ಅಲ್ಲಮಪ್ರಭು ಅವಳ ಜೀವನದ ಮುಂದಿನ ಮಾರ್ಗವನ್ನು ನಿರ್ದೇಶಿಸುತ್ತಾನೆ.

ನಡೆ ತಾಯೆ ನಡೆ ಮುಂದೆ ಶ್ರೀಶೈಲ ಪರ್ವತಕೆ
ಶ್ರೀ ಚೆನ್ನಮಲ್ಲಿಕಾರ್ಜುನನ ಕದಳೀಬನಕೆ
ಅದೆ ನಿಮ್ಮ ಸಮರಸೈಕ್ಯದ ಠಾವು ತಾಯೆ
[ಪು. ೯೫]

`ಪರಮ ಪದವಿ'ಯನ್ನು ಪಡೆಯುವುದೊಂದೇ ಈ ಮಾರ್ಗದ ಗುರಿಯಲ್ಲ. ಲೋಕ ಕಲ್ಯಾಣವೂ ಅಷ್ಟೇ ಮಹತ್ವದ್ದಾಗಿದೆ. ಇದು ಭೂಸನೂರಮಠರು ಮೂಲ ಕಥೆಯಲ್ಲಿ ಮಾಡಿಕೊಂಡ ಅತಿ ಮಹತ್ವದ ಬದಲಾವಣೆ.

ಲೋಕದೊಳು ಮಾನವನ ಕುಲದೊಳಗೆ ನೀ ಹುಟ್ಟಿ
ಕುಲದ ಲೋಕದ ಋಣವ ತೀರಿಸುವ ಮಣಿಹ
ಪೂರೈಸಬೇಕಿಲೆ ಮಗಳೇ ಮಹಾದೇವಿ

ಎನ್ನುವ ಮಾತು ಬಸವಣ್ಣನಿಗೆ ಹೊಂದುವಷ್ಟು ಪ್ರಭುವಿಗೆ ಹೊಂದುವುದಿಲ್ಲವಾದರೂ ಅದನ್ನಾಡುವವನು ಪ್ರಭುವೇ.

ಪ್ರಭು ತೋರಿದ ಮಾರ್ಗದಲ್ಲಿ ಮಹಾದೇವಿಯಕ್ಕನನ್ನು ಕರೆದೊಯ್ಯುವ ಹೊಣೆ ಈ ಮೊದಲೇ ಉಡುತಡಿಯಲ್ಲಿ ಗುರುವೆಂದು ಸ್ವೀಕರಿಸಿದ ತೀವಳ್ಳಿಯ (ಅನ್ವರ್ಥಕವಾದ ಹೆಸರು) ಗುರುಚೆನ್ನಮಲ್ಲಯ್ಯನದಾಗುತ್ತದೆ. ಮುಂದಿನ ಐದೂ ಕಾಂಡಗಳಲ್ಲಿ ನಮಗೆ ಮುಖ್ಯವಾಗಿ ಕೇಳಿಬರುವುದು ಅವನ ಧ್ವನಿ.

`ಶ್ರೀಶೈಲಕಾಂಡ' ದಲ್ಲಿ ಮಹಾದೇವಿಯಕ್ಕ ತನ್ನಂತೆಯೆ ಮನೆಬಿಟ್ಟು ಹೊರಬಂದ ಚೆನ್ನಮಲ್ಲಯ್ಯ ಹಾಗೂ ಅವನ ನೆಚ್ಚಿನ ಶಿಷ್ಯ ಗಿರಿಮಲ್ಲಯ್ಯರನ್ನು ಕೂಡಿಕೊಳ್ಳುತ್ತಾಳೆ. ಗುರುಮಲ್ಲಯ್ಯ ಪರಮಜ್ಞಾನಿಯಾದರೆ `ಕೋಟಿ ಕುಲದ ಪ್ರಶ್ನೆಮೂರ್ತಿ'ಯಾದ ಗಿರಿಮಲ್ಲಯ್ಯ ಅತ್ಯಂತ ಪ್ರಾಮಾಣಿಕನಾದ ಜಿಜ್ಞಾಸು. ಚೆನ್ನಮಲ್ಲಯ್ಯನ ಅಂತರ್ದೃಷ್ಟಿಯಲ್ಲಿ ಅಕ್ಕ ಮಾನುಷಕೆ ಬಂದ ದಿವ್ಯ ಉಷೆ. ಪ್ರಭುವಿನಂತೆ ಅವನೂ ಅವಳ ಸಾಧನೆಯನ್ನು ಯಥಾರ್ಥವಾಗಿ ಗ್ರಹಿಸುತ್ತಾನೆ.

ಮಾನವಜಾತಿಯ ಮಬ್ಬುಗತ್ತಲೆ ಮೀರಿ
`ನೀನಾರು ' ತಿಳಿದು ನಿನ್ನರಿವಿನ ಬೆಳಗಿಗೆ
ನಿನ್ನ ನೀ ಕಂಡು ಸರ್ವಾಂಗೆಯೆನಿಸಿಕೊಂಡು
ಭಕ್ತಿ ಪೂಜೆಯ ಮಾಡಿ ನೋಟಜೇಟವ ಮಾಡಿ

ಅಂಗ ಅಂಗವನೆಲ್ಲ ರಮಣನಿಗೊಪ್ಪಿಸಿ
ಮಾನವನೊಳು ನಿನ್ನ ನಿಜಕೆ ಮುಟ್ಟಿದೆಯಲ್ಲಾ !

[ಪು. ೧೯೮]

ಆದರೆ ಬೆಳಗು ಅದ್ಭುತ ,ಕತ್ತಲೆ ಮಹಾದ್ಭುತವೆಂದು ನಂಬಿರುವ ಗುರು ಚೆನ್ನಮಲ್ಲಯ್ಯ ಅಕ್ಕನ ಪರಿಪೂರ್ಣತೆಗೆ ಅಧೋಲೋಕಗಳ ಅರಿವು ಅವಶ್ಯವೆಂದರಿತು ಅವುಗಳ ಪರಿಚಯ ಮಾಡಿಕೊಡುತ್ತಾನೆ. ಈ ಅಧೋಲೋಕಗಳ ಅನಾವರಣವೇ `ಕತ್ತಲೆಯ ಕಾಂಡ' ದ ವಸ್ತುವಾಗಿದೆ. **ಡಿವೈನ್ ಕಾಮಿಡಿಯಲ್ಲಿ** ವರ್ಜಿಲ್ ಡಾಂಟೆಯನ್ನು Inferno ಹಾಗೂ Purgatory ಗಳಿಗೆ ಕರೆದೊಯ್ದಂತೆ ಚೆನ್ನಮಲ್ಲಯ್ಯ ಅಕ್ಕನಿಗೆ ಅಧೋಲೋಕಗಳನ್ನು ಕಥನ ರೂಪವಾಗಿ ನಿರೂಪಿಸುತ್ತಾನೆ. Inferno ದ ಹರವಾಗಲಿ, ಸಾಕಾರತೆಯಾಗಲಿ `ಕತ್ತಲೆಯ ಕಾಂಡ' ದಲ್ಲಿಲ್ಲ. ಆದರೆ ಈ ಕಾಂಡದಲ್ಲಿ ಬರುವ ಆಖ್ಯಾನಗಳು ಮನುಷ್ಯನ ಪತಿತ ಜೀವನವನ್ನು ಸಾಂಕೇತಿಕವಾಗಿ ಸೂಚಿಸುವಲ್ಲಿ ಯಶಸ್ವಿಯಾಗಿವೆ. ಲೋಕದ ಕುರುಡುಗಣ್ಣಿನ ಆಟಗಳ ದೃಷ್ಟಾಂತಗಳಾಗಿ ಅವು ಅರ್ಥಪೂರ್ಣವಾಗಿವೆ. ಚೆನ್ನರಾಯನ ಮೋಹ, ಬಂಕಣ್ಣ ಚಿಕ್ಕಣರ ಮದ ಮತ್ಸರಗಳು, ಮಾರಪ್ಪನ ಲೋಭ, ಅಲ್ಪಕ್ಕಾಗಿ ನಡೆಯುವ ಯುದ್ಧ ಹೋರಾಟಗಳು ಇವೆಲ್ಲ ಕತ್ತಲೆಯ ತಾಂಡವಗಳೇ. **ರಾಮಾಯಣ, ಮಹಾಭಾರತ**ಗಳ ಪ್ರಸ್ತಾಪವೂ ಇಲ್ಲಿ ಬರುತ್ತದೆ. ರಾಮ, ಕೃಷ್ಣ ಇಂಥ ಅವತಾರಗಳ ಮಹತಿಯನ್ನು ಒಪ್ಪಿಕೊಳ್ಳುತ್ತಲೇ ಚೆನ್ನಮಲ್ಲಯ್ಯ ಅವು ಕೂಡ ಕತ್ತಲೆಯನ್ನು ನಾಶ ಮಾಡಲಿಲ್ಲ ಎಂದು ಹೇಳುತ್ತಾನೆ. ವಿರಳವಾಗಿ ದೊರೆಯುವ ಸಜ್ಜನಿಕೆಯ ಕುರುಹುಗಳನ್ನು ಗುರುತಿಸಲು ಚೆನ್ನಮಲ್ಲಯ್ಯ ತಪ್ಪುವುದಿಲ್ಲ. ಆದರೆ ಇವು 'ಸಾಸುವೆಯ ಬೆಳಕು ' ಸಾಗರದ ಕತ್ತಲೆ ' ಎಂಬ ಸತ್ಯದ ನಿದರ್ಶನಗಳೇ ಆಗಿವೆ. ಈ ಅಧೋಲೋಕಗಳ ದರ್ಶನದಿಂದ ಖಿತಿಗೊಂಡ ಮಹಾದೇವಿಯಕ್ಕ ಚೆನ್ನಮಲ್ಲಯ್ಯನನ್ನು ಪ್ರಶ್ನಿಸುತ್ತಾಳೆ.

ಹೋಗಿ ಸುಖವಿರುತಿರ್ದೆ ಬೆಳಗಿನಾ ಕಾಡೊಳಗೆ !
ಬಿಡಿಸಿದಿರಿ ತಂದೇ, ಏಕೆ ಬಿಡಿಸಿದಿರಿ ?

[ಪು. ೪೧೩]

ಆದರೆ ಈ ಪ್ರಶ್ನೆಗೆ ಉತ್ತರವನ್ನು ಚೆನ್ನಮಲ್ಲಯ್ಯ ಗಿರಿಮಲ್ಲಯ್ಯನಿಗೆ ಬೇರೊಂದು ಸಂದರ್ಭದಲ್ಲಿ ಆಗಲೇ ಕೊಟ್ಟಿರುತ್ತಾನೆ ;

ಕಂಡೂ ಕಂಡೂ ಕಣ್ಣಾರೆ ಕಂಡು
ಕೈಲಾಸ ವೈಕುಂಠ ಸ್ವರ್ಗದೊಳು ಕುಳಿತರೆ,
ಮೋಕ್ಷ ನಿರ್ವಾಣಸುಖ ಸಮರಸದ ಸೀಮೆಯೊಳು
ಪಾಪ ತುಂಬಿದ ಜಗವ ನುಗಿಸಿ ಹೊರಹಾಕಿ
ಬಾಗಿಲವ ಬಿಲಿದು, ಒಳಗೆ ಕುಳಿತರೆ ಮಗನೇ
ಕಟುಕತನವೆಂಥ !

[ಪು. ೩೦೭]

`ಉದಯಕಾಂಡ'ದಲ್ಲಿ ಮುಂಬೆಳಗಿನತ್ತ ಪ್ರಯಾಣವಿದೆ. ಈ ಕಾಂಡ ಶರಣರ ಭಾಷೆಯಲ್ಲಿ ಅತ್ಯಂತ ಮಹತ್ವದ ಪರಿಕಲ್ಪನೆಯಾದ `ಬಯಲಿ 'ನ ನಿರ್ವಚನಕ್ಕೆಯೇ ಮೀಸಲಾಗಿದೆ. ಕತ್ತಲೆ ಬೆಳಗುಗಳ ರಹಸ್ಯವನ್ನು ಅರಿಯಲು `ಬಯಲಿ'ನ ತಿಳುವಳಿಕೆ ಅವಶ್ಯವಾಗಿರುವುದು ಇದರ ಕಾರಣ. ಇದರ ಮುಂದಿನ `ಉಜ್ವಲಕಾಂಡ'ದಲ್ಲಿ ಮೋಳಿಗೆಯ ಮಾರಯ್ಯನ ಕಥೆಯ ಮೂಲಕ ಚೆನ್ನ ಮಲ್ಲಯ್ಯ ಭಕ್ತನ ನಿಜಸ್ವರೂಪವನ್ನು ತೆರೆದು ತೋರಿಸುತ್ತಾನೆ. ಹನ್ನೆರಡನೆಯ ಶತಮಾನದಲ್ಲಿ ಮಾರಯ್ಯನಂಥ ಶರಣರು ಆಗಿಹೋದುದೇ `ಬೂದಿಯೊಳು ಹೊಸ ಜಗವು ಹುಟ್ಟಬಹುದು ' ಎಂಬ ಆಶಾವಾದಕ್ಕೆ ಎಡೆಮಾಡಿಕೊಡುತ್ತದೆ.

ಇಲ್ಲಿಗೆ ಮಹಾದೇವಿಯಕ್ಕನ ಪ್ರಶ್ನೆಗಳು ಕೊನೆಗೊಂಡು ಅವಳು ಲೋಕ ಕಲ್ಯಾಣಕ್ಕಾಗಿ ಸಿದ್ಧಳಾಗುತ್ತಾಳೆ.

ಬಿಡಲಾರೆನಯ್ಯ ಮರ್ತ್ಯಲೋಕವನು
ಮರ್ತ್ಯಲೋಕವು ಮಹಾಮನೆಯಾಗದನ್ನಕ್ಕ

[ಪು. ೮೩೧]

ತಮ್ಮ ದರ್ಶನದ ಅಭಿವ್ಯಕ್ತಿಯ ಆವಶ್ಯಕತೆಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಭೂಸನೂರ ಮಠರು ಮೂಲ ಕತೆಯಲ್ಲಿ ಮಹತ್ವದ ಬದಲಾವಣೆಗಳನ್ನು ಮಾಡಿಕೊಂಡಿದ್ದಾರೆ. ಇವುಗಳಲ್ಲಿ ಅತಿ ಮುಖ್ಯವಾದುದೆಂದರೆ ಅಕ್ಕ ತನ್ನನ್ನು ಮಾನವ ಲೋಕಕ್ಕೆ ಅರ್ಪಿಸಿಕೊಳ್ಳುವುದು. ಇದು ಶರಣರು ತಮಗಾಗಿ ಆಯ್ದುಕೊಂಡ ಮಾರ್ಗವೇ ಆದರೂ ಇಲ್ಲಿ ಸಾವಿತ್ರಿಯ ಪ್ರಭಾವವಿದೆಯೆಂದೆನಿಸುತ್ತದೆ. ಸಾವಿತ್ರಿಯ ಆಯ್ಕೆಯೇ ಅಕ್ಕನ ಆಯ್ಕೆಯೂ ಆಗಿದೆ.

In vein thou temptest with solitary bliss
Two spirits saved out of a suffering world.
My soul and his indissolubly linked
In the one task for with our lives were born
To raise the world to God in deathless light,
To bring God down to the world on earth
we came,
To change the eartly life to life divine

[**Savitri** p 777] ೭

ಶೂನ್ಯ ಸಂಪಾದನೆಯ ಭಾಷೆ ರಚನೆಗಳಿಂದ ಭವ್ಯ ಮಾನವ ತುಂಬ ಪ್ರಭಾವಿತವಾಗಿದೆ. ಈ ಕಾವ್ಯವನ್ನು ಇನ್ನೊಂದು `ಶೂನ್ಯಸಂಪಾದನೆ ' ಯೆಂದು ಕರೆದರೂ ತಪ್ಪಾಗಲಾರದು. ರಾಮಾಯಣದರ್ಶನಂ ಕನ್ನಡ ಕಾವ್ಯದ ಮಾರ್ಗ ಪರಂಪರೆಯನ್ನು ಮುಂದುವರಿಸಿದಂತೆ ಭವ್ಯ ಮಾನವ ಅದರ ದೇಶೀ ಪರಂಪರೆಯನ್ನು ಪುನರ್ನಿರ್ಮಿಸುತ್ತದೆ.

ಟಿಪ್ಪಣಿಗಳು

೧. ಕುವೆಂಪು, ಶ್ರೀರಾಮಾಯಣ ದರ್ಶನಂ, ಕನ್ನಡ ಅಧ್ಯಯನಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೭೧

೨. ವಿ. ಕೃ. ಗೋಕಾಕ, **ಭಾರತ ಸಿಂಧುರಶ್ಮಿ**, ಸಂಪುಟ ೧ - ೨,ಐ. ಬಿ. ಎಚ್. ಪ್ರಕಾಶನ, ಬೆಂಗಳೂರು, ೧೯೮೨

೩. ಸಂ. ಶಿ. ಭೂಸನೂರಮಠ, ಭವ್ಯಮಾನವ, ರಾಯಚೂರು ಶ್ರೀ ಸಿದ್ಧಲಿಂಗೇಶ್ವರ ಮಠ ಮತ್ತು ಆದವಾನಿ ಕಲ್ಲುಮಠದ ಅಧಿಪತಿಗಳು, ೧೯೮೩.

೪. ವಿ. ಸೀತಾರಾಮಯ್ಯ, **ಸಾಹಿತ್ಯಾಲೋಕನ**, ಗೀತಾ ಬುಕ್ ಹೌಸ್, ಮೈಸೂರು, ೧೯೭೯, ಪು. ೪೧೯

೫. T. S. Eliot, **On Poetry and Poets, The Noonday Press,** ೧೯೭೦,pp ೧೪೨ -೩

೬. ಎಸ್ಕೆ, ವಿನಾಯಕ ಮಹಾದರ್ಶನ, ಐ. ಬಿ. ಎಚ್. ಪ್ರಕಾಶನ, ಬೆಂಗಳೂರು, ೧೯೮೬ ಪು. ೪೦೭

೭. Sri Aurobindo, Savitri, Sri Aurobindo Ashram, Pondicherry, ೧೯೫೪, p. 777

[ಈ ಲೇಖನಕ್ಕಾಗಿ ನನ್ನ **ಅರ್ಥಲೋಕದಲ್ಲಿ** ಪ್ರಕಟವಾದ `ಶ್ರೀ ರಾಮಾಯಣದರ್ಶನಂ ಪುನರ್ವಿಮರ್ಶೆ ' ಹಾಗೂ March of Karnataka ದ ಮಾರ್ಚ ೧೯೭೩ ರ ಸಂಚಿಕೆಯಲ್ಲಿ ಬಂದ ` Bharata Sindhu Rashmi : A National Epic' ಎಂಬ ಲೇಖನಗಳನ್ನು ಬಳಸಿಕೊಂಡಿದ್ದೇನೆ.]

ಚುಟುಕು ಸಾಹಿತ್ಯ

- ಶ್ರೀಪಾದ ಶೆಟ್ಟಿ

ಜಗತ್ತು ಬೆಳೆದಿದೆ. ಇನ್ನೂ ಬೆಳೆಯುತ್ತಲೇ ಇದೆ. ವ್ಯಾಪಕವಾದ ಈ ಜಗದ ರೀತಿ ನೀತಿಗಳನ್ನು ಅರಿಯುವ ಅರ್ಥ ಮಾಡಿಕೊಳ್ಳುವ ಪ್ರಯತ್ನದಲ್ಲಿ ಮನುಷ್ಯ ತೊಡಗಿದ್ದಾನೆ. ಹೀಗೆ ತನ್ನ ಅರಿವಿಗೆ ದಕ್ಕಿದ್ದನ್ನು ಅರ್ಥವಾದದ್ದನ್ನು ಅಭಿವ್ಯಕ್ತಪಡಿಸಲು ಆತ ಆತುರನಾಗಿದ್ದಾನೆ. ಜಗತ್ತು ಬೆಳೆದಂತೆ ಮನುಷ್ಯನ ತಿಳಿವಳಿಕೆಯು ವಿಸ್ತಾರವಾದಂತೆ ಅರಿವಿನ ಆಯಾಮ ಹೆಚ್ಚುತ್ತಾ ಹೋದಂತೆ ಕಾಲ ಮಾತ್ರ ಹೆಚ್ಚಾಗಲಿಲ್ಲ.ಅದು ಇದ್ದಂತೆಯೇ ಇದೆ. ಕಾರಣ ಏನನ್ನೇ ಅರಿಯಲು ಹೊರಟರೂ ಕಾಲಮಿತಿಯನ್ನು ಮಾತ್ರ ಮೀರುವಂತಿಲ್ಲ. ಹಿಂದಕ್ಕೆ ಮನುಷ್ಯನಿಗೆ ಆಸ್ತಿ, ಮನೆ, ಹಣ, ನಗ-ನಾಣ್ಯ ಇವೆಲ್ಲ ಅತ್ಯಂತ ಮುಖ್ಯವಾಗಿದ್ದವು. ಈಗಲೂ ಇವು ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಂಡಿಲ್ಲ. ಆದರೆ ಕರ್ತೃತ್ವಶಾಲಿಯಾದ ವ್ಯಕ್ತಿಗೆ ಕಾಲ ಇವೆಲ್ಲಕ್ಕಿಂತ ಬೆಲೆಬಾಳುವಂತಹದ್ದಾಗಿದೆ. ಆತ ಕ್ಷಣಗಳನ್ನು ಅತ್ಯಂತ ಅಮೂಲ್ಯವೆಂದು ಪರಿಗಣಿಸುತ್ತಾನೆ. ಇಂದು ಯಾವುದನ್ನೇ ಆಗಲಿ ದೀರ್ಘಕ್ಕೊಯ್ಯುವ ಅಥವಾ ತಡಮಾಡಿ ಮುಗಿಸುವ ವ್ಯವಧಾನ ಜನರಿಗೆ ಇಲ್ಲ. ಕ್ಲಿಪ್ತಕಾಲದಲ್ಲಿ ಎಲ್ಲಾ ಕೆಲಸಗಳು ಮಾಡಿ ಮುಗಿದಿರಬೇಕು. ಮಾಡುವ ಕೆಲಸ ಚಿಕ್ಕದಾಗಿದ್ದರೂ ಅದು ಚೊಕ್ಕದಾಗಿರಬೇಕು. ಇದು ಇಂದಿನ ಕಾಲಧರ್ಮ, ಯುಗಧರ್ಮ. ಧರ್ಮ, ಕಲೆ, ಶಿಲ್ಪ, ಸಂಗೀತ, ಸಾಹಿತ್ಯ ಇವೆಲ್ಲವುಗಳ ಮೇಲೆ ಯುಗಧರ್ಮದ ಗಾಢವಾದ ಪ್ರಭಾವವಾಗಿದೆ. ಆಂಗ್ಲ ಕವಿಯೊಬ್ಬನು ಹೇಳಿದಂತೆ ಇಂದು ನಮಗೆ ನಿಂತುಕೊಳ್ಳಲಿಕ್ಕಾಗಲಿ ಅಥವಾ ಏನನ್ನೇ ಆಗಲಿ ದಿಟ್ಟಿಸಿ ನೋಡಲಿಕ್ಕಾಗಲಿ ಸಮಯವಿಲ್ಲ. (We have no time to stand and stare). ಹೀಗೆಂದು ಎಲ್ಲವನ್ನು ನಿರಾಕರಿಸಿ ಜ್ಞಾನದ ಕಿರಣ ಶ್ರೇಣಿಯನ್ನು ತೂರಿ ಬರುವ ಕಿಟಕಿಯನ್ನು ಮುಚ್ಚಿಕೊಂಡು ಕುಳಿತರೆ ಸಾಧ್ಯವಿಲ್ಲ. ಇದನ್ನೆಲ್ಲಾ ಗಮನಿಸಿ ಪ್ರಯೋಗಶೀಲರಾದ ನಮ್ಮ ಸಾಹಿತಿಗಳು ಎಲ್ಲಾ ಜನರಿಗೆ ತಲುಪಿಸಬಲ್ಲ ಸಾಹಿತ್ಯವನ್ನು ರಚಿಸತೊಡಗಿದರು. ದೀರ್ಘವಾದ ಕಾವ್ಯ ಕಾದಂಬರಿಯ ಬರವಣಿಗೆಯನ್ನು ಸಮಯದ ಅಭಾವದಿಂದ ದೂರವಿರಿಸಿ ಓದುಗರ ಮೇಲೆ ಹೆಚ್ಚು ಪರಿಣಾಮವನ್ನುಂಟು ಮಾಡಬಲ್ಲ ಚುಟುಕನ್ನು ಅವರು ರಚಿಸಿದರು. ಅವರು ಕಿರಿದರಲ್ಲಿ ಹಿರಿದನ್ನು ಹೇಳಹೊರಟರು. ಕವನ, ಕಥೆ, ವರದಿ, ವೃತ್ತಾಂತ ವರ್ಣನೆಗಳನ್ನೆಲ್ಲ ಚುಟುಕಾಗಿ ಪೊಟಕಾಗಿ ಬರೆಯತೊಡಗಿದರು. ಓದುಗರು ನಿಯತಕಾಲಿಕೆಗಳಲ್ಲಿ ಮೊದಲು ಇಂತಹ ಕಿರಿದಾದ ಬರಹದತ್ತ ಗಮನ ಹರಿಸಿ ನಂತರ ದೀರ್ಘವಾದ ಪ್ರಬಂಧವನ್ನೋ ನೀಳ್ಗತೆಯನ್ನೋ ಓದತೊಡಗಿದರು. ಇದು ಕಾಲದ ಪ್ರಭಾವ. ಇಂತಹ ಸಂದರ್ಭದಲ್ಲಿ ಚುಟುಕು ಸಾಹಿತ್ಯ ಜನ್ಮತಾಳಿತು.

ಚುಟುಕು ಕನ್ನಡದ ಜನಪ್ರಿಯ ಸಾಹಿತ್ಯ ಪ್ರಕಾರವಾಗಿ ಬೆಳೆದು ಬಂದಿದೆ. ಈ ಚುಟುಕು ಸಾಹಿತ್ಯಕ್ಕೆ ಜನಪ್ರಿಯತೆಯನ್ನು ತಂದುಕೊಟ್ಟವರಲ್ಲಿ ಜಿ. ಪಿ. ರಾಜರತ್ನಂ, ಪಿ. ಜಿ. ಭಟ್ಟ, ಅಕಬರ ಪಿ, ದಿನಕರ ದೇಸಾಯಿ, ಜಿ. ಎಸ್. ಅನ್ನದಾನ, ದೇವಾಸಾರಿಪ್ರಿಯ, ಪಿಡಂಬಾರಿ, ನಾರಾಯಣ ಗೌಲ, ಶ್ಯಾಮ ಹುದ್ದಾರ, ಶಾಂತಾರಾಮ ಬಾಳಿಗಳಿ, ಶಂ. ಗು. ಬಿರಾದಾರ, ಪಂಚಾಕ್ಷರಿ ಹಿರೇಮಠ ಎಂತಾದವರನ್ನು ಹೆಸರಿಸಬೇಕಾಗುತ್ತದೆ. ಇವರೆಲ್ಲಾ ನಮ್ಮ ಸಮಾಜದಲ್ಲಿ ನಮ್ಮ ಸುತ್ತಮುತ್ತ ಕಂಡುಬರುವ ವಿಷಯವಸ್ತುಗಳನ್ನು ಆಯ್ದುಕೊಂಡು ಚುಟುಕುಗಳನ್ನು ಬರೆದಿದ್ದಾರೆ. ಚುಟುಕಕ್ಕೆ ಒಗ್ಗದ ಬಗ್ಗದ ವಸ್ತುವೇ ಇಲ್ಲ. ಅದು ಸಮುದ್ರದಂತೆ ಎಲ್ಲವನ್ನು ತನ್ನಲ್ಲಿ ಒಳಗೊಳ್ಳಬಲ್ಲುದು. ಪ್ರೀತಿ, ಪ್ರೇಮ, ಕಿ, ರಾಜಕಾರಣ, ದಗಲ್ಬಾಜಿ ತನ, ಪಡಪೋಶಿತನ, ಬಾಂಧವ್ಯ, ಮಾನವೀಯತೆ, ವ್ಯಕ್ತಿತ್ವದ ಸತಿ, ಜೀವನಮೌಲ್ಯ, ಶ್ರಾಮಾಣಿಕತೆ, ನಿಸರ್ಗ ಪ್ರೇಮ ಎಲ್ಲವನ್ನೂ ಇದು ಒಳಗೊಳ್ಳಬಲ್ಲುದು. ನೋದದ ಮೂಲಕವೇ ವಿಷಾದವನ್ನು ಹಾಗೂ ವ್ಯಂಗ್ಯವನ್ನು ವ್ಯಕ್ತಪಡಿಸುವುದು ಚುಟುಕದ ಹ್ಮಿಂದು ಗುಣ.

ಸಮರ್ಥನಾದ ಕವಿಯ ಕೈಯಲ್ಲಿ ಚುಟುಕ ಮಹತ್ವವನ್ನು ಪಡೆಯುತ್ತದೆ. ಕವಿ ನಿದವನು ಒಮ್ಮೆ ಚುಟುಕದ ನಾಡಿಮಿಡಿತವನ್ನು ಅರಿತರೆ ಅವನು ಬರೆದದ್ದೆಲ್ಲಾ ಟುಕವಾಗುತ್ತದೆ. ಅವನು ಪ್ರತಿಭಾವಂತನಾದರೆ ಅವನಿಂದ ಸೃಜನಗೊಂಡ ಚುಟುಕುಗಳು ಶೇಷಾರ್ಥಗಳಿಂದ ನವೋನವ ಭಾವಗಳಿಂದ ಜೀವ ತುಂಬಿಕೊಳ್ಳುತ್ತವೆ. ಹಾಗೆಯೇ ಮಗನ ಅಂತರಂಗಕ್ಕಿಳಿದು ನೆನಪಿನಲ್ಲಿ ಉಳಿಯುತ್ತವೆ. ಗಾತ್ರವು ಕಿರಿದಾಗಿರುವುದರಿಂದ ಟುಕುಗಳನ್ನು ಸೂತ್ರದಂತೆ ನೆನಪಿಟ್ಟುಕೊಳ್ಳಲು ಸಾಧ್ಯ. ಹೀಗೆಂದು ಎಲ್ಲರೂ ಚುಟುಕ ರೆದರೆ ಅದು ಚುಟುಕಾಗಿರಲು ಸಾಧ್ಯವಿಲ್ಲ. ಅದಕ್ಕೆ ಪ್ರತಿಭೆಯ ಸ್ಪರ್ಶವೇಕು. ಅದು ದಾಗಿದ್ದಂತೆ ಶಬ್ದಗಳನ್ನು ಬಳಸುವಲ್ಲಿಯೂ ಎಚ್ಚರವಹಿಸಬೇಕಾಗುತ್ತದೆ. ಕಿರುಬೆರಳಿನ ತ್ರದ ಹಸ್ತಿದಂತದಲ್ಲಿ ನಟರಾಜನ ವಿಗ್ರಹವನ್ನು ಕೆತ್ತಿದಂತೆ, ಅಕ್ಕಿಕಾಳಿನಲ್ಲಿ ಚಿತ್ರವನ್ನು ರೆದಂತೆ ಚುಟುಕವನ್ನು ಬರೆಯುವಲ್ಲಿ ಕುಶಾಗ್ರತೆಯನ್ನು ತೋರಬೇಕಾಗುತ್ತದೆ. ಒಂದೊಂದು ಬ್ದವೂ ಹೊಸ ಅರ್ಥವನ್ನು ಪಡೆದು ಓದುಗನ ಅರಿವಿಗೆ ಆನಂದಕ್ಕೆ ಗುಟುಕನ್ನು ಕೊಡುತ್ತದೆ.

ಚುಟುಕದ ಪ್ರಾಚೀನತೆಯನ್ನು ಹೇಳುವಾಗ ಇದು ವೇದದಷ್ಟು ಆದಿ ಎನ್ನಲಾಗುತ್ತದೆ. ಸಂಸ್ಕೃತ ಕಾವ್ಯಗಳಲ್ಲಿ ಇದು ಅಲ್ಲಲ್ಲಿ ಕಾಣಿಸಿಕೊಂಡು ಓದುಗರಿಗೆ ಕಚಕುಳಿಯಿಟ್ಟು ಚ್ಚರಿಸಿದ ಈ ಬಗೆಯ ಕಾವ್ಯಶೈಲಿ ಮೊದಲು ಶೃಂಗಾರ ರಸಕ್ಕೆ ಸೀಮಿತಗೊಂಡಿದ್ದು ಲಕ್ರಮೇಣ ಇದು ಜೀವನದ ಎಲ್ಲಾ ಮುಖಗಳಲ್ಲಿಯೂ ಹಬ್ಬಿಕೊಂಡಿತೆದು ತ. ಸು. ಾಮರಾಯರು ಅಭಿಪ್ರಾಯ ಪಡುತ್ತಾರೆ. ಸಂಸ್ಕೃತದಲ್ಲಿ ಇದನ್ನು ಚಾಟುಪದ್ಯವೆಂದು ರೆಯುತ್ತಾರೆ. ``ಚಾಟುವಿಗೆ ಇಂಥದೇ ಭಾವ ಇಂಥದೇ ರಸವಿರಬೇಕೆಂಬ ಕಟ್ಟಿಲ್ಲ. ಸ್ವರೂಪ ನ್ನಾದಾಗಿರಬೇಕು, ಹೇಳುವ ರೀತಿಯಲ್ಲಿ ಚಮತ್ಕಾರವಿರಬೇಕು. ಧ್ವನಿ ತುಂಬಿರಬೇಕು'' ಂದು ಚಾಟುಪದ್ಯವನ್ನು ಕುರಿತು ಜಿ. ಪಿ. ರಾಜರತ್ನಂ ಹೇಳಿದ್ದಾರೆ.

ಚುಟುಕವನ್ನು ಸಂಸ್ಕೃತದ ಮುಕ್ತದ ಜೊತೆಗೂ ಹೋಲಿಸಬಹುದಾಗಿದೆ. ಮುಕ್ತಕ ಎಂದರೆ ಅದರ ಹೆಸರೇ ಸೂಚಿಸುವಂತೆ ಮುಕ್ತಿಸಂತೆ ಹೊಳೆಯುವ ಸ್ವತಂತ್ರ

ವಾದ ಒಂದು ಬಿಡಿ ಪದ್ಯ. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ಗಾದೆ ಉದಾಹರಣೆಯಾಗಬಲ್ಲ ಪದ್ಯ. ``ಅಲ್ಪದರಲ್ಲಿ ಕಲ್ಪವನ್ನು ಸೃಷ್ಟಿಸಬಲ್ಲ ಸುಮನೋಹರವಾದ ಭಾವಪೂರ್ಣ ಪದ್ಯ '' ಎಂದು ತ. ಸು.ಶಾಮರಾಯರು ಮುಕ್ತಕದ ಕುರಿತು ಬರೆದಿದ್ದಾರೆ. ಮುಕ್ತಕದ ಕಾವ್ಯ ಬಿಗು ಬಂಧದಿಂದ, ಕ್ಲಿಷ್ಟ ಛಂದದಿಂದ ಮುಕ್ತವಾಗುತ್ತದೆ. ತೀ. ನಂ ಶ್ರೀ ಅವರ `ಒಲುಮೆ' ಸಂಕಲನದಲ್ಲಿ ಸಂಸ್ಕೃತ ಚಾಟುಪದ್ಯಗಳ ಮುಕ್ತಕಗಳ ಮಾದರಿಯನ್ನು ನಾವು ಕಾಣಬಹುದಾಗಿದೆ. ಮುಕ್ತಕವನ್ನು ತೀ.ನಂ.ಶ್ರೀಯವರು ಪೂರ್ಣ ಕಾವ್ಯವೆಂದೆ ಭಾವಿಸಿದ್ದರು. ಮುಕ್ತಕದ ಸಮಗ್ರ ಸವಿಯನ್ನು ಆಸ್ವಾದಿಸಬೇಕಾದರೆ ಕವಿ ಕಲ್ಪನೆಯೊಂದಿಗೆ ನಮ್ಮ ಕಲ್ಪನೆಯನ್ನು ಹರಿಯಬಿಡಬೇಕು ಎಂಬ ಅಭಿಪ್ರಾಯವನ್ನು ಅವರು ಹೊಂದಿದ್ದರು

ಹೊಸಗನ್ನಡ ಸಾಹಿತ್ಯದಲ್ಲಿ ಚುಟುಕ ಪ್ರಕಾರವನ್ನು ಹುಟ್ಟುಹಾಕಿದ ಶ್ರೇಯಸ್ಸು ಜಿ. ಪಿ. ರಾಜರತ್ನಂ ಅವರಿಗೆ ಸಲ್ಲುತ್ತದೆ. ಕನ್ನಡದಲ್ಲಿ ಚುಟುಕು ಚಾಲ್ತಿಗೆ ಬಂದದ್ದು ಈ ಶತಮಾನದ ಮಧ್ಯಭಾಗದಲ್ಲಿ ಮಕ್ಕಳ ಸಾಹಿತ್ಯ ರಚನೆಯಲ್ಲಿ ಆಸಕ್ತರಾಗಿದ್ದ ಜಿ. ಪಿ ರಾಜರತ್ನಂ ಅವರು `ನೂರು ಪುಟಾಣಿ ' ಎಂಬ ಸಂಕಲನವನ್ನು ೧೯೪೦ರಲ್ಲಿ ಪ್ರಕಟಿಸಿದರು ಇದರಲ್ಲಿ ಸಂಸ್ಕೃತ ಸಾಹಿತ್ಯದ ಎಪಿಗ್ರಂ, ಶರಣರ ಹಾಗೂ ದಾಸರ ವಚನಗಳಿಂದ ಆಯ್ದ ಬಿಡಿ ನುಡಿ, ಸರ್ವಜ್ಞನ ವಚನ, ಜನಪದದ ಬಿಡಿ ಪದ್ಯ ಇವೆಲ್ಲವುಗಳಿಂದ ಆಯ್ದುಕೊಂಡ ದೃಷ್ಟಾಂತಗಳು ಹಾಗೂ ರಾಜರತ್ನಂ ಅವರದೇ ಆದ ಕೆಲವು ಸ್ವತಂತ್ರ ರಚನೆಗಳಿರುತ್ತಿವೆ. `ನೂರು ಪುಟಾಣಿಗಳು ' ಸಂಕಲನದ ಮೂಲಕ ಅವರು ಈ ಚುಟುಕು ಸಾಹಿತ್ಯ ಒಂದು ಪ್ರಕಾರವಾಗಿ ಬೆಳೆಯಬಲ್ಲ ಬುನಾದಿಯನ್ನು ಹಾಕಿಕೊಟ್ಟರು.

ರಾಜರತ್ನಂ ನಂತರ ೧೯೪೬ ರಲ್ಲಿ ವಿ. ಜಿ. ಭಟ್ಟರ ತುಂಟನ ಪದಗಳು ಸಂಕಲನ ಪ್ರಕಟವಾಯಿತು. ಇದು ವಿಮರ್ಶಕರ ಗಮನವನ್ನು ಸೆಳೆಯಿತು. ಆಗ ಚುಟುಕದ ಸ್ವರೂಪ ವಸ್ತು, ವೈಶಿಷ್ಟ್ಯಗಳನ್ನು ಗುರುತಿಸುವ ಪ್ರಯತ್ನ ನಡೆಯಿತು. ಆ ಸಂಕಲನಕ್ಕೆ ಮುನ್ನುಡಿಯನ್ನು ಬರೆಯುತ್ತಾ ಡಾ. ವ್ಹಿ. ಕೆ. ಗೋಕಾಕರು ``ಚುಟುಕು ಒಂದು ಲಘುಗೀತ. ಪ್ರಾಸದ ಮೊನೆ ಮಾತಿನ ಹದನ, ಛಂದಸ್ಸಿನ ಬಿಗುವು, ನಿರೂಪಣೆಯ ಮಿತವ್ಯಯ ಈ ಕಾವ್ಯ ಪ್ರಕಾರದ ಮುಖ್ಯ ಸಾಧನ ಸಾಮಗ್ರಿ. ಸಾಹಿತ್ಯಕ್ಕೆ ಇದ್ದ ಅನಂತ ಮುಖಗಳು ಚುಟುಕಕ್ಕೂ ಇವೆ. ಆದರೆ ಕಿರಿದರಲ್ಲಿ ಹಿರಿಯ ಅರ್ಥ ಮೂಡಿಬರಬೇಕು '' ಎಂದು ಚುಟುಕದ ಗುಣಲಕ್ಷಣಗಳ ಕುರಿತು ವಿವೇಚಿಸಿದ್ದಾರೆ.

ಎಂ. ಜಿ. ಭಟ್ಟರು ತುಂಟನ ಪದಗಳನ್ನು ನಾಡಿನ ಹಿರಿ ಕಿರಿಯ ಮಕ್ಕಳಿಗೆ ಅರ್ಪಿಸಿ ಅವರು ಚುಟುಕು ಒಂದರಲ್ಲಿ ಹೀಗೆ ನಿರೂಪಿಸಿದ್ದಾರೆ.

``ನಾಡಿನ ಹಿರಿ ಕಿರಿ
ಮಕ್ಕಳಿಗೀ ಮರಿ
ಪುಸ್ತಕವನು ನಾ ನೀಡುವೆನು
ಚಿಕ್ಕವರೆಲ್ಲಾ ದೊಡ್ಡವರಾಗಿ

ದೊಡ್ಡವರೆಲ್ಲ
ಚಿಕ್ಕವರಾಗಿ
ಬೆರೆಯುವುದನು ನಾ ನೋಡುವೆನು "

ಂದು ಲವಲವಿಕೆಯಿಂದ ಹಿರಿಯರು ಕಿರಿಯರಾಗಲು ಹಾಗೂ ಕಿರಿಯರು ಹಿರಿಯರಾಗಲು ಚುಟುಕನ್ನು ಅರ್ಪಿಸಿದ್ದಾರೆ. ಅದರಂತೆ ಏನನ್ನಾದರೂ ಮರೆತು ಬರಬೇಕು ಎಂಬುದನ್ನು ``ಮರೆವು' ಂಬ ಚುಟುಕದಲ್ಲಿ ವ್ಹಿ. ಜಿ. ಭಟ್ಟರು ಕಟ್ಟಿಕೊಡುವ ಬಗೆ ಅತ್ಯಂತ ಸುಂದರವಾಗಿದೆ.

`` ಕಾಶಿಗೆ ಹೋದನೆ
ಶಂಕರ ಭಟ್ಟ
ಬರುವಾಗಲೇ ಮರತೇ ಬಿಟ್ಟ
ಈ ಸಂಸಾರದ
ಸಾರದ ಬಾರದ
ತಲೆಗಾಧಾರದ
ಆ ಜುಟ್ಟ "

ಇಲ್ಲಿ `ಜುಟ್ಟ' ವನ್ನೇ ಮರೆತು ಬಂದ ಎಂದು ಹೇಳುವಲ್ಲಿ ವ್ಯಂಗ್ಯ ಹಾಗೂ ಹಾಸ್ಯ ಸಂಬನೆಯಿದೆ.

ರಾಜರತ್ನಂ ಮತ್ತು ವ್ಹಿ. ಜಿ. ಭಟ್ಟರ ಕಾವ್ಯದಿಂದ ಪ್ರೇರಣೆ ಪಡೆದು ೧೯೫೨ರಲ್ಲಿ ಪಿ ಎಂ. ಅಕಬರ ಅಲಿ ಹಾಗೂ ಎಸ್. ಬಿ. ತೋಫಖಾನೆ ಅವರು ಸೇರಿ `ಅನ್ನ' ಎಂಬ ಚಕಲನವನ್ನು ಪ್ರಕಟಿಸಿದರು. ಅದಕ್ಕೆ ಮುನ್ನುಡಿಯನ್ನು ಬರೆಯುತ್ತಾ ಡಾ. ವ್ಹಿ. ಕೆ. ಗೋಕಾಕ ರವರು `ಮಾತಿನ ಬಿಗುವು' ಹಾಗೂ ಚಮತ್ಕಾರ ಅದು ಎದ್ದು ಕಾಣುವಂತೆ ಅದನ್ನು ಳೆಗಟ್ಟಿಸುವ ಪ್ರಾಸ, ಸೂಕ್ಷ್ಮವಿಮರ್ಶೆ, ಕೊನೆಯ ಸಾಲಿನಲ್ಲಿ ಅನಿರೀಕ್ಷಿತವಾಗಿ ಬರುವ ಸಾಪಿಷ್ಕರಣ ಇಲ್ಲವೆ ಮುಕ್ತಾಯ ಇವು ಲಿಮರಿಕ್ ಹಾಗೂ ಚುಟುಕದ ವಿಶೇಷ ಲಕ್ಷಣಗಳು. ವ್ಯ ಪುರುಷನು ಒಮ್ಮೊಮ್ಮೆ ಕಾಲಭೈರವನಾಗುವುದುಂಟು. ಆಗ ಬಿಳಿ ಕರಿ ಚೇಳುಗಳು ವನ ಆಭರಣಗಳಾಗುತ್ತವೆ. ಚುಟುಕುಗಳು ಇಂಥ ಆಭರಣಗಳು. ಚೇಳು ಬಿಳಿಯದಿರಲಿ, ಪ್ಪಗಿರಲಿ ಅದರ ಕೊಂಡಿ ಇಲ್ಲವೆ ಪೊನೆ ಏಳು ಲೋಕಗಳನ್ನು ಎಚ್ಚರಿಸಬಲ್ಲುದು. ಅದು ಷದ ಪೊನೆಯಲ್ಲ. ಸೂಜಿ ಮದ್ದಿನ ಸೂಜಿ. ವಿಷವೆಂದರೂ ಸಮಾಜದ ದೇಹಕ್ರಿಯೆಗೆ ಕಾದ ವಿಷ. ಅಂತೇ ಪರಮೌಷಧಿ ಎಂದು ಚುಟುಕದ ಆಕೃತಿ ಹಾಗೂ ಸತ್ವದ ವಿಷಯದಲ್ಲಿ ಳಕು ಚೆಲ್ಲಿದ್ದಾರೆ.

ಇಂಗ್ಲೀಷಿನ ಲಿಮರಿಕ್ ಛಂದಸ್ಸನ್ನು ಚುಟುಕು ಅಳವಡಿಸಿಕೊಂಡಿದೆ. ಲಿಮರಿಕ್‌ದ ದು, ಎರಡು ಐದನೆಯ ಸಾಲುಗಳು ದೀರ್ಘವಾಗಿಯೂ, ಸಮಾನವಾಗಿಯೂ ಇದ್ದು ವು ಅಂತ್ಯಪ್ರಾಸವನ್ನು ಹೊಂದಿರುತ್ತದೆ. ಮೂರು ಮತ್ತು ನಾಲ್ಕನೆಯ ಸಾಲುಗಳು ಳಿದವುಗಳಿಗಿಂತ ಕಿರಿದಾಗಿದ್ದು ಸಮಾನವಾಗಿರುತ್ತವೆ. ಇಲ್ಲಿ ಒಮ್ಮೊಮ್ಮೆ ಅಂತ್ಯ ಪ್ರಾಸ

ಕಾಣಿಸಿಕೊಳ್ಳುತ್ತದೆ. ಲಿಮರಿಕ್‌ನ್ನು ಕುರಿತು `A popular form of short humoro verse often nonsensical and frequently ribard' ಎಂದು `ಎನ್‌ಸೈಕ್ಲೊಪಿಡಿ ಬ್ರಿಟಾನಿಕಾ ' ದಲ್ಲಿ ಹೇಳಲಾಗಿದೆ. ಲಿಮರಿಕ್ ಬಂಧಕ್ಕೆ ಒಳಗಾಗಿ ಪಂಚಪದಿಯಾದ ಚು ಕಾಲಾನುಕ್ರಮದಲ್ಲಿ ಚೌಪದಿಯಾಗಿ ನಿಂತಿತು. ಹಾಗೂ ಜನಪ್ರಿಯವಾಯಿತು. ಎರಡನೆ ನಾಗವರ್ಮನು ಇದನ್ನು `ಇಷುಕುಂಗಬ್ಬು' ಎಂದರೆ ಸಾಂದ್ರವಾದ ಅರ್ಥವುಳ್ಳ ಕಾವ್ಯ ಎ ಕರೆದಿದ್ದಾನೆ. `ಪುಟಾಣಿ ' `ಚಾಟು', `ನಾಟು ನುಡಿ' ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತ

ಸಾಮಾನ್ಯವಾಗಿ ನಾಲ್ಕೇ ನಾಲ್ಕು ಸಾಲು. ಸಾಲಿನ ಕೊನೆಗೆ ಪ್ರಾಸ. ಮುಖ್ಯ ಹಾಸ್ಯ ಕೆಲವೊಮ್ಮೆ ವಿಡಂಬನೆ ಟೀಕೆ. ಇದು `ಚುಟುಕು' ಎಂದು ಜ್ಞಾನಗಂಗೋತ್ರಿ (ಕರ್ನ ವಿಶ್ವಕೋಶ)ಯಲ್ಲಿ ಚುಟುಕನ್ನು ವ್ಯಾಖ್ಯಾನಿಸಲಾಗಿದೆ. ಇತ್ತೀಚೆಗೆ ಚುಟುಕು ಹನಿಗವನ ಗದ್ಯದ ನಡಿಗೆಯನ್ನು ಮೈಗೂಡಿಸಿಕೊಂಡಿದೆ. ಇತ್ತೀಚಿಗೆ ಚುಟುಕು ಬದಲಾವಣೆ ಮಜಲುಗಳನ್ನು ದಾಟಿ ಬೆಳೆದು ಬಂದ ಬಗೆಯನ್ನು ಗುರುತಿಸಿದ ಡಾ. ಎಂ. ಆರ್ ಅಲಿಯವರು `ಚುಟುಕಕ್ಕೆ ಅಮೀಬಾದಂಥ ಆಕಾರವಿಲ್ಲದ ಆಕಾರವಿದೆ ' ಎಂದಿದ್ದಾರಲ್ಲ ಬಂಧುರದ ಬಂಧುರತೆಯಿಂದ ಅದರ ಆಕೃತಿ ವಿಶೇಷವಾಗಿದೆ ಎಂದು ಹೇಳಿ ಅದನ್ನು ಬೇರೆ ಉದಾಹರಣೆಯೊಂದಿಗೆ ವಿವರಿಸಿದ್ದಾರೆ.

``ಚುಟುಕು ಸಣ್ಣದಾದರೂ ಬರೆಯುವುದು ಕಷ್ಟ
ಮಾತು ತಪ್ಪಿದರೆ ಕವಿಯಾಗುವನು ಭ್ರಷ್ಟ
ಬರಿ ನಾಲ್ಕು ಪಂಕ್ತಿಯಲಿ ನಾನ್ನೂರು ತುಂಬಿ
ಕಂಪು ಬೀರಿದರೆ ಹಾರಾಡುವುದು ತುಂಬಿ ''

ಎಂದು ಈ ಚುಟುಕಿನ ಸಂವಿಧಾನವನ್ನು ಚೌಪದಿಯಲ್ಲಿ ದಿನಕರ ದೇಸಾಯಿಯ ಅತ್ಯಂತ ಮಾರ್ಮಿಕವಾಗಿ ನಿರೂಪಿಸಿದ್ದಾರೆ.

ಅಲ್ಲದೆ ಇವರು ಈ `ಚುಟುಕ ' ದ ಶೈಲಿ ಹೇಗಿರಬೇಕೆಂಬುದನ್ನು ಕುರಿತು -

`` ಚುಟುಕು ಬರೆದರೆ ಅದರ ಕೊನೆಗಿರಲಿ ಹರಿತ
ಇದರಿಂದ ಎಚ್ಚರಾಗುವನು ಜಡಪಥಿತ ''

ಎಂದು ಅವರು ಬರಿ ನಾಲ್ಕೇ ನಾಲ್ಕು ಸಾಲುಗಳಿದ್ದರೂ ಪ್ರತಿ ಪಂಕ್ತಿಯಲ್ಲಿ ಭಾವನೆಯ ಮಿಂಚು ಮಿಂಚಬೇಕು ಎಂದು ಹೇಳಿದ್ದಾರೆ.

ಪ್ರಾಸ ಚುಟುಕದ ಇನ್ನೊಂದು ಲಕ್ಷಣ. ಹೊಸ ಮೆರುಗನ್ನು ಕೊಡುವ ಈ ಹೆಚ್ಚಾದಾಗ ಓದುಗರಿಗೆ ಬೇಸರವನ್ನುಂಟು ಮಾಡಬಹುದು.

`` ಪ್ರಾಸಗಳ ಎಳೆತವು ಕಿಟ್ಟದರೆ ಜಾಣಾ
ಹಾರಿ ಹೋಗುವುದು ಪದ್ಯದ ಪುಟ ಪ್ರಾಣಾ

ಎಂದಿಗೂ ಕಾವ್ಯವಾಗದು ಬಲಾತ್ಕಾರ
ಹೂವರಳಿದರೆ ಮಾತ್ರ ಕಲೆಯ ಉದ್ಧಾರ "

ಎಂದು ಯಾವಾಗಲೂ ಚುಟುಕು ಹೂವರಳಿದಂತೆ ತನ್ನಷ್ಟಕ್ಕೆ ತಾನೇ ಹೂವಾಗಿ ಅರಳಬೇಕೆ ಹೊರತು ಅದಕ್ಕೆ ಪ್ರಾಸದ ಬಲಾತ್ಕಾರ ಎಂದಿಗೂ ಸಲ್ಲದು ಎಂದಿದ್ದಾರೆ.

ಈ ಚುಟುಕು ಹೆಚ್ಚಾಗಿ ಸಮಕಾಲೀನ ಸಂಗತಿಗಳನ್ನೇ ಕುರಿತು ರಚಿಸಿಕೊಂಡಿರುತ್ತದೆ. ಚುಟುಕು ಎಂದರೆ ಓದಿ ಮರೆತು ಬಿಡುವ ಸಾಹಿತ್ಯ ಎಂಬ ಕಾಲವೂ ಒಂದಿತ್ತು. ಪತ್ರಿಕೆಗಳಲ್ಲಿ, ವಿಶೇಷಾಂಕಗಳಲ್ಲಿ ಸುದೀರ್ಘ ಲೇಖನ ಬರೆದ ನಂತರ ಉಳಿದ ತೆರವಾಗಿದ್ದ ಜಾಗ ತುಂಬಲು ಈ ಕವಿತೆಗಳು, ಚುಟುಕುಗಳು ಬೇಕಾಗುತ್ತಿದ್ದವು. ಅವು ಆ ಸ್ಥಾನವನ್ನು ಅತ್ಯಂತ ಸಮರ್ಪಕವಾಗಿ ತುಂಬುತ್ತಿದ್ದವು. ಆದರೆ ಸಮರ್ಥ ಕವಿಗಳ ಕೈಯಲ್ಲಿ ಚುಟುಕು ವಿಶೇಷವಾದ ಭಾವ ಮೌಲ್ಯಗಳಿಂದ, ವಿಡಂಬನೆಯಿಂದ, ನವೀನ ಹಾಸ್ಯದಿಂದ ಓದುಗರ ಮನದಲ್ಲಿ ಅಚ್ಚೊತ್ತಿದಂತೆ ಉಳಿಯುತ್ತವೆ.

ಇಂದು ರಾಜಕೀಯವು ಸಮಕಾಲೀನ ಸಮಾಜದ ಅನಿವಾರ್ಯ ಸಂಗತಿ. ಯಾರೂ ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಅದು ಜನಜೀವನವನ್ನು ವ್ಯಾಪಿಸಿಕೊಂಡಿದೆ. ಇಂತಹ ರಾಜಕೀಯ ರಂಗವನ್ನು ಆ ರಂಗದಲ್ಲಿಯೇ ಇದ್ದು, ಆ ರಂಗದಿಂದಾಚೆಗಿನಿಂದ ದೂರ ನಿಂತು ನೋಡಿದ ದಿನಕರ ದೇಸಾಯಿ, ಎಂ. ಅಕಬರ ಅಲಿ, ಹಾಗೆಯೇ ರಾಜಕೀಯದ ಸೂಕ್ಷ್ಮಗಳನ್ನು ಗ್ರಹಿಸಿದ ವ್ಯಿ. ಜಿ. ಭಟ್ಟ, ಶ್ಯಾಮ. ಭಾರ ಮುಂತಾದವರು ಅದನ್ನು ಚುಟುಕುಗಳಲ್ಲಿ ಬಳಸಿದ ರೀತಿ ಮಾರ್ಮಿಕವಾಗಿದೆ.

ದಿನಕರ ದೇಸಾಯಿಯವರು :

" ಈ ಲೋಕವೆನ್ನುವುದು ಕಳ್ಳ ಬಾಜಾರ
ರಾಜ್ಯವಾಳುವ ಶಕ್ತಿ ಸುಳ್ಳು ಸರಕಾರ
ಕಳ್ಳರಿಗೆ ಸುಳ್ಳರಿಗೆ ವಿಪರೀತ ದೋಸ್ತಿ
ಜನಕೋಟಿಗಳ ಸುಲಿದು ಮಾಡಿದರು ಆಸ್ತಿ "

ಎಂದು ಸದ್ಯದ ರಾಜಕೀಯಕ್ಕೆ ಚುಟುಕಿನಲ್ಲಿ ಅತ್ಯಂತ ಮಾರ್ಮಿಕವಾಗಿ ಕನ್ನಡಿ ಹಿಡಿದಿರುವುದನ್ನು ಕಾಣಬಹುದು.

ಅದರಂತೆ ಎಂ. ಅಕಬರ ಅಲಿ ಅವರು :

" ಮನವು ದೋಸೆಯ ಹಂಚು ಮುಖವು ಸಾತ್ವಿಕ ಮಿಂಚು
ಹೊತ್ತು ಗೊತ್ತಿಗೆ ತಾಗುವ ತನ್ನದೇ ಗತ್ತು
ಮನೆಯೊಳಗೆ ಬಹಳ ಬಿಗು ಹೊರಗೆಲ್ಲ ಧಳಕು ನಗೆ
ಮನೆ ಮರೆತು ಮೂರು ಗೆದೆಯುವುದೊಂದೆ ಗೊತ್ತು "

ಎಂದು ರಾಜಕೀಯದ ಧೂರೀಣನನ್ನು ಕುರಿತು ಚುಟುಕವೊಂದನ್ನು ವರ್ಣಿಸಿದ್ದಾರೆ.

ವಿಡಂಬನೆ ಚುಟುಕದ ಅತ್ಯಂತ ಪ್ರಮುಖವಾದ ಲಕ್ಷಣವಾಗಿದೆ. ವ್ಯಿ. ಜಿ. ಭಟ್ಟ.

ದಿನಕರ ದೇಸಾಯಿ, ಅಕಬರಲಿ ಮುತಾದವರು ವಿಡಂಬನೆಯನ್ನು ತಮ್ಮ ಚುಟುಕಗಳಲ್ಲಿ ಪರಿಣಾಮಕಾರಿಯಾಗಿ ವ್ಯಕ್ತಪಡಿಸಿರುವುದನ್ನು ಕಾಣಬಹುದು.

ವ್ಹಿ. ಜಿ. ಭಟ್ಟ ಅವರು :

``ಕೊರಸುಗಾಯಿಯ ಗೊಜ್ಜು ಬೆಳ್ಳಳ್ಳಿಯೊಗ್ಗರಣೆ
ಸಾರಿನಲಿ ತೇಲಿತ್ತು ಕರಿಯಬೇವು
ಅವುಗಳಾ ಕಂಪಿಗೂ ನನ್ನ ಕೌಶಲ್ಯಕೂ
ಮೆಚ್ಚಿ ಮುಂದೂಡಿದನು ಯಮನು ಸಾವು"

ಎಂದು `ನನ್ನ ಸಾವು' ಎಂಬ ಚುಟುಕಿನಲ್ಲಿ ಅವರು ವಿಡಂಬನೆಯನ್ನು ಸೊಗಸಾ ತಂದಿದ್ದಾರೆ.

``ಈ ಚತುಷ್ಪಾದಕೆ ಎಲ್ಲಿಂದ ಬರಬೇಕು
ಆ ಮೇರು ಕೃತಿಯ ಘನತೆ ?
ಅಲ್ಲ ವಿದ್ಯುದ್ದೀಪ ಸಾಲುಗ್ಯಾಸು ಹಿಲಾಲು
ಮೂಲೆಯಲಿ ಮಿಣಿ ಮಿಣಿ ಗುಡುತಿಹ ಹಣತೆ"

ಎಂದು ಚುಟುಕನ್ನು ಮನೆಯಲ್ಲಿ ಮಿನುಗುವ ಹಣತೆ ಎಂದು ಕರೆದು ಅದ ಘನತೆಯನ್ನು ಹೆಚ್ಚಿಸಿದ್ದಾರೆ.

ಹಾಗೆಯೇ ಇವರು ತಮ್ಮ ಇನ್ನೊಂದು ಚುಟುಕದಲ್ಲಿ

``ಇರುವ ಕಂಬನಿಯಲ್ಲ ಈಗಲೇ ಹರಿಸದಿರು
ನಾಲ್ಕು ಹನಿ ಇರಲಿ ಕಣ್ಣಲ್ಲಿ
ನಾಸತ್ತ ಮೇಲೆ ಉದುರಿಸಲು ಬೇಡವೇ ಅಷ್ಟು
ಹತ್ತು ಮಂದಿಯ ಎದುರು ಮಣ್ಣಿನಲ್ಲಿ"

ಎಂದು ಇಲ್ಲಿ ವಿಡಂಬನೆಯನ್ನು ಅತ್ಯಂತ ಸೊಗಸಾಗಿ ಅಭಿವ್ಯಕ್ತಪಡಿಸಿದ್ದಿರುವುದ ಕಾಣಬಹುದು.

ವ್ಹಿ. ಜಿ. ಭಟ್ಟರ ವಿಡಂಬನೆಯ ಮೊನಚಿಗೆ ಇನ್ನೊಂದು ಚುಟುಕನ್ನು ಉದಾಹರ ಬಹುದು.

``ಮದುವೆಯಾಗಲೋ ಬಿಡಲೋ ಎಂದು ಛಗು ಭೂಪನಿಗೆ
ಹಗಲಿರುಳು ಘೋರ ಚಿಂತೆ
ಕೊನೆಗೆ ಆ ಅಮರಣ ಬ್ರಹ್ಮಚಾರಿಯೇ ಇರಲು
ಆಣೆ ಮಾಡಿದ ತನ್ನ ತಂದೆಯಂತೆ"

ಇದರ ಕೊನೆಯ ಸಾಲು ವಿಡಂಬನೆಯ ಬಾಂಬಾಗಿ ಸ್ಫೋಟಗೊಳ್ಳುವ ಬಗೆ ಅತ್ಯ ಸುಂದರವಾಗಿದೆ.

``ಹೆಂಡತಿಯು ಹೊಡೆಯುತ್ತಿದ್ದರೂ ತಾನೆ ಹೊಡೆದಂತೆ
ಅಬ್ಬರಿಸಿ ಮರ್ಯಾದೆ ಮುಚ್ಚಿಕೊಂಡು
ಮೆರೆವ ಗಂಡನ ಹಾಗೆ ಸರಕಾರ ಬಳಲುತಿದೆ
ವ್ಯಾಪಾರಿ ಹಿಡಿತದಲಿ ಸಿಲುಕಿಕೊಂಡು ''

ಇಲ್ಲಿ `ವ್ಯಾಪಾರಿ ಮತ್ತು ಸರಕಾರ ' ಎಂಬ ಚುಟುಕದಲ್ಲಿ ವ್ಯಾಪಾರಿಗಳ ಹಿಡಿತ ಲ್ಲಿರುವ ಸರಕಾರವನ್ನು ಎಂ. ಆಕಬರ ಅಲಿಯವರು ಪಿಡಂಬಿಸಿದುದನ್ನು ಈ ಚುಟುಕದಲ್ಲಿ ಣಬಹುದು.

ಸಮಾಜದ ವಿಮರ್ಶೆ ಮಾಡಲು ಹಾಗೂ ಅದರ ಲೋಪದೋಷಗಳನ್ನು ನಿವಾರಿಸಲು ಡಂಬನ ಸಾಹಿತ್ಯ ಒಂದು ಉಪಯುಕ್ತ ಸಾಧನ. ಹಾಗೆಯೇ ಅದು ಆತ್ಮವಿಮರ್ಶೆಯ ಉಪಕರಣ. ನಕರ ದೇಸಾಯಿ ಅವರು ತಮ್ಮ ಚುಟುಕನ್ನು ಶಸ್ತ್ರವೈದ್ಯನ ಕತ್ತರಿಯಂತೆ ತಮ್ಮ ಪರಿಸರದ ೋಪ ದೋಷಗಳನ್ನು ಹಾಗೂ ಸಾಮಾಜಿಕ ಅನಿಷ್ಟಗಳನ್ನು ಕತ್ತರಿಸುವ ಪೋಲೀಸ ವ್ಯವಸ್ಥೆಯ ರ್ಯ ವೈಖರಿಯನ್ನು ಈ ಕೆಳಗಿನ ಚುಟುಕದಲ್ಲಿ ಕಂಡುಬರುತ್ತದೆ.

``ಅಡಗಿಸಿಟ್ಟರು ಹೆಣವ ಮಾಡದೆಯೆ ಸದ್ದು
ಮರುದಿವಸ ಹುಡುಕಿ ತೆಗೆಯಿತು ಒಂದು ಹದ್ದು
ಪೋಲೀಸರೊಳಗೆ ಹದ್ದಿಗೆ ಆಗ್ರಸ್ಥಾನ
ದೊರೆಯಬೇಕೆನ್ನುವದೆ ಕವಿಯ ತೀರ್ಮಾನ ''

ಅದರಂತೆ ಇವರು ವ್ಯಕ್ತಿಪೂಜೆ, ಆತ್ಮವಿಮರ್ಶೆ, ದೀನದಲಿತರ ಕೂಗು, ಪಾನ ತಿಬಂಧ ನೀತಿ, ವ್ಯಭಿಚಾರ, ತೆರಿಗೆ, ವ್ಯಾಪಾರ ಮುಂತಾದ ಹಲವಾರು ಸಮಾಜದ ಜ್ವಲಂತ ಮಸ್ಯೆಗಳನ್ನು ತಮ್ಮ ಚುಟುಕುಗಳ ಮುಖಾಂತರ ಪಿಡಂಬಿಸಿದ್ದಾರೆ.

ಜಿ. ಎಸ್. ಅನ್ನದಾನಿಯವರು :

`` ಒಳಗೊಂದು ಹೊರಗೊಂದು ದೊಡ್ಡವರ ನೀತಿ
ಅದಕಾಗಿ ನಮಗೆಲ್ಲ ಭಜೀತಿ
ಅಂತರಂಗ ಬಹಿರಂಗ ಶುದ್ಧಿಯೊ ಈಗ
ಬೇಡೆಂದು ಹಾಕಿದರು ಆತ್ಮಕೆ ಬೀಗ ''

ಎಂದು `ದೊಡ್ಡವರ ಕತ' ಎಂಬ ಚುಟುಕದ ಮುಖಾಂತರ ಸಮಾಜದಲ್ಲಿಯ ಖಂಡರ ನೀತಿಯನ್ನು ಪಿಡಂಬಿಸಿದ್ದಾರೆ.

ಹಾಗೆಯೇ ಶಾಂತಾರಾಮ ಬಾಳೆಗುಳಿ ಅವರು

``ದೇಶಭಕ್ತರಿಗುಂಟು ಒಳಕಿಸೆಯ ಅಂಗಿ
ಪಾತಿನಲಿ ಬೆಲ್ಲವನು ತಿನಿಸುವರು ತಂಗಿ

ಮರುಳಾಗಿ ಮೈಮರೆತು ಯಾಚಿದರೆ ನಿದ್ದೆ
ದೇಶಭಕ್ತರೆ ಎದ್ದು ಮೇಯುವರು ಗದ್ದೆ "

ಎಂದು ಒಂದು ವೇಳೆ ದೇಶಭಕ್ತರ ಮಾತಿಗೆ ಮರುಳಾದರೆ ಅವರು ಎಲ್ಲವನ್ನೂ ಮೆಯ್ದು ಬಿಡುತ್ತಾರೆ ಎಂದು ವಿಡಂಬಿಸಿದ್ದಾರೆ.

ಇನ್ನು ಶ್ರೀಶ್ಯಾಮ ಹುದ್ದಾರ ಅವರು ತಮ್ಮ ಚುಟುಕುಗಳಲ್ಲಿ ಉತ್ತರ ಕರ್ನಾಟಕದ ಭಾಷೆಯನ್ನು ತ್ರಿಪದಿಯ ರೂಪದಲ್ಲಿ ತುಂಬಾ ಪರಿಣಾಮಕಾರಿಯಾಗಿ ಬಳಸಿದ್ದಾರೆ. ತ್ರಿಪದಿಯಲ್ಲಿ ರಚನೆಗೊಂಡ ಅವರ ಚುಟುಕುಗಳು ವ್ಯಂಗ್ಯ ವಿನೋದದಿಂದ ಓದುಗನ ಗಮನವನ್ನು ಸೆಳೆಯುತ್ತವೆ.

ಜೀವಂತ ಇದ್ದಾಗ ಜೀವ ಹಿಂಡಿದ ಮಂದಿ
ಸತ್ತಾಗ ಸುತ್ತ ಕುಂತಾರ ॥ ಬೊಮಟ್ಯಾರ
ಅತ್ತಾಂಗ ಮಾಡಿ ನಕ್ಕಾರ ॥

ದಿನಕರ ದೇಸಾಯಿಯವರ ಸಾವಿನ ಸಂದರ್ಭದಲ್ಲಿ ರಚನೆಗೊಂಡ ಈ ಚುಟುಕ ಅಷಾಢಭೂತಿಗಳ ನಕಲಿ ಪ್ರೀತಿಯನ್ನು ಅನಾವರಣಗೊಳಿಸಿದೆ. ಅದರಂತೆ

ಬಂಗಾರ ಕಳೆದಿಲ್ಲ ಬೆಳ್ಳೀಯ ಕಳೆದಿಲ್ಲ
ಮತ್ಯಾಕ ಮಗನ ಬಡದಾಳ ॥ ಮಾತಾಯಿ
ರೇಶನ್ ಕಾರ್ಡ ಕಳದಾನ ॥

ಮಾಧ್ಯಮ ವರ್ಗದವರಿಗೆ ಅತ್ಯಂತ ಅಮೂಲ್ಯ ಆಸ್ತಿಯಾದ ರೇಶನ್ ಕಾರ್ಡ ಕಳೆದುಹೋದಾಗ ತಾಯಿ ಮಗನನ್ನು ಬಡಿಯುವಲ್ಲಿ ಸಮಾಜದ ವ್ಯವಸ್ಥೆ ಕುರಿತಾದ ವ್ಯಂಗ್ಯ, ವಿಷಾಣಕ ಮುಪ್ಪುರಿಗೊಂಡಿದ್ದನ್ನು ನಾವು ಕಾಣಬಹುದಾಗಿದೆ.

ಚುಟುಕು ದಿನಕರ ದೇಸಾಯಿಯವರ ಕಾಲದಲ್ಲಿ ಅತ್ಯಂತ ಪ್ರವರ್ಧಮಾನ ಸ್ಥಿತಿಯಲ್ಲಿತ್ತು. ಅನೇಕ ಪತ್ರಿಕೆಯವರು ಇವರ ಚುಟುಕುಗಳಿಗಾಗಿ ಬೇಡಿಕೆ ಸಲ್ಲಿಸಿ ಪತ್ರಗಳನ್ನು ಬರೆಯುತ್ತಿದ್ದರು. ರಾಜಕೀಯದ ಒಳಹೊರಗನ್ನು ಕಂಡ ಅವರ ಚುಟುಕುಗಳು ಅತ್ಯಂತ ಸತ್ವಪೂರ್ಣವಾಗಿದ್ದವು. ಷಟ್ಪದಿಗೆ ರಾಘವಾಂಕ, ಸಾಂಗತ್ಯಕ್ಕೆ ರತ್ನಾಕರವರ್ಣ, ತ್ರಿಪದಿಗೆ ಸರ್ವಜ್ಞ, ಚುಂಪೂವಿಗೆ ಪಂಪ ಹೆಸರಾದಂತೆ ದಿನಕರ ದೇಸಾಯಿಯವರು ' ಚುಟುಕು ಸಾಮ್ರಾಟ ' ಎಂಬ ಬಿರುದಿಗೆ ಪಾತ್ರರಾಗಿದ್ದಾರೆ. ಪ್ರಾರಂಭದಲ್ಲಿ ಭಾವಗೀತೆಗಳನ್ನು ಬರೆಯುತ್ತಿದ್ದ ದಿನಕರರು ಕ್ರಮೇಣ ಚುಟುಕದ ಕಡೆಗೆ ವಾಲಿದರು. ಆದರೆ ಮೊದಲು ಚುಟುಕುಗಳ ಬರವಣಿಗೆಯ ಕಡೆಗೆ ಗಮನ ಹರಿಸಿದ್ದವರು ವಿ. ಜಿ. ಭಟ್ಟ, ಅ. ಅಕಬರ ಅಲಿ ಮುಂತಾದವರು ಕವನದ ಕಡೆಗೆ ವಾಲಿದರು. ಆ ಬಳಿಕ ಜಿ. ಎಸ್. ಅನ್ನದ, ಶಾಂತಾರಾಮ ಬಾಳೆಗುಳಿ, ವಿಮಲಾಬಾರಿ, ಶ್ಯಾಮ ಹುದ್ದಾರ ಮೊದಲಾದವರು ದಿನಕರ ದೇಸಾಯಿಯವರ ಹೆಜ್ಜೆಯಲ್ಲಿಯೇ ಚುಟುಕುಗಳನ್ನು ರಚಿಸಿದರೂ ಸಹ ವೈವಿಧ್ಯತೆ, ವಿಷಯ ವಾಚ್ಯ ಭಾಷೆಯ ಸಾಧ್ಯತೆ ಮುಂತಾದ ವಿಷಯದಲ್ಲಿ ಅವರಿಗೆ ದಿನಕರರು ಏರಿದ ಎತ್ತರ ತಲುಪಲಾಗಲಿಲ್ಲ.

ಆದರ `ಹನಿಗವನ'ಗಳ ಸುಗ್ಗಿ ಪ್ರಾರಂಭವಾದ ನಂತರ ಹಾಗೂ ದಿನಕರರು ಕಣ್ಮರೆಯಾದ ನಂತರ ಪತ್ರಿಕೆಗಳಲ್ಲಿ ಚುಟುಕು ಕಾಣಿಸಿಕೊಳ್ಳುವುದು ಕ್ರಮೇಣ ಕಡಿಮೆಯಾಯಿತು. ಚುಟುಕದ ಭವಿಷ್ಯ ಏನು ಎಂದು ನಿರ್ಧರಿಸುವ ಕಾಲ ಇದಲ್ಲ. ಯಾಕೆಂದರೆ ಚುಟುಕು ಈಗ ತನ್ನ ಏಕತಾನತೆ, ಜೋಡು ಪ್ರಾಸಗಳ ಪುನರಾವರ್ತನೆ, ರಾಜಕೀಯದ ಹಳಸಲು ಪಿಠಂಬನೆಯಿಂದ ಸೋಲುತ್ತಿದೆ. ಅದಕ್ಕಾಗಿ ಚಮತ್ಕಾರಿಕ ಪದಪ್ರಯೋಗಗಳಿಂದ ಪ್ರೇಮ, ವಿರಹ, ಪ್ರೀತಿ, ರಾಜಕೀಯ ದೈನಂದಿನ ವ್ಯವಹಾರ ಸೂಕ್ಷ್ಮಗಳನ್ನು ಚಿಕ್ಕ ಚಿಕ್ಕ ಕವನಗಳಲ್ಲಿ ಹೊಸೆಯುವ ಹನಿಗವನಗಳು ಈಗ ಹೆಚ್ಚು ಜನಪ್ರಿಯವಾಗಿವೆ. ಒತ್ತೆಗೊಂದು ಕಾಲ ಸೊಸೆಗೊಂದು ಕಾಲ ಎಂಬಂತೆ ಈಗ ಚುಟುಕದ ಕಾಲ ಮುಗಿದು ಹನಿಗವನಕ್ಕೆ ಹೆಚ್ಚಿನ ಮನ್ನಣೆಯಿದೆ. ಇತಿಹಾಸ ಚಕ್ರ ಮತ್ತೆ ತಿರುಗಿದರೆ ಚುಟುಕು ಮತ್ತೆ ತನ್ನ ಹೆಚ್ಚಿನ ಕಸುವಿನೊಂದಿಗೆ ಮೂಡಿ ಬಂದೀತು. (ರಾಘವಾಂಕನಿಂದ ಪ್ರತಿಷ್ಠಾಪನೆಗೊಂಡ ಷಟ್ಪದಿ ಸಂಪ್ರದಾಯ ಇಂದಿಗೂ ಜೀವಂತವಾಗಿ ಉಳಿದ ಹಾಗೆ) ಪ್ರಕೃತಿಯು ತನ್ನ ಹಲವಾರು ವಿದ್ಯುತ್ತಗಳಿಂದ ಸದಾ ಹೊಸತನವನ್ನು ಸೂಚಿಸುವಂತೆ ಕೃತಿಯಲ್ಲಿಯೂ ಅಂತಹ ಹೊಸತನ ಆಗಾಗ ಚಿಮ್ಮುತ್ತದೆ. ಕಾರಣ ಚುಟುಕದ ಕಾಲ ಮುಗಿದೇ ಹೋಯಿತು ಎಂಬ ನಿರ್ಣಯ ಮಂಡಿಸುವುದು ಕ್ಷಿಣ ಶಕ್ತಿಶಾಲಿ ಕವಿಗಳ ಕೈಯಲ್ಲಿ ಚುಟುಕು ಮತ್ತೆ ಹೊಸ ಕಸುವಿನೊಂದಿಗೆ ಹೊರಹೊಮ್ಮೀತು ಎಂಬ ನಿರೀಕ್ಷೆಯನ್ನಿಟ್ಟುಕೊಳ್ಳೋಣ.

●

ಆಧುನಿಕ ವಚನ ಸಾಹಿತ್ಯ

-ಕೃ.ಆ.ಮಧುಚಂ

ಸತ್ಯ, ಸ್ವತ್ವದ ದೃಷ್ಟಿಯಿಂದ ಆಧುನಿಕ ವಚನಗಳು ಶರಣ ವಚನಗಳಿಗೆ ಸರಿಸ
ಯಾಗಲಾರವು ನಿಜ ! ಆದರೆ ಆ ಪ್ರಕಾರದ ಬೇರೆ ಬೇರೆ ಸಾಧ್ಯತೆಗಳನ್ನು ಪ್ರಯೋಗ ವೈವಿಧ್
ಮೂಲಕ ಬೆಳಕಿಗೆ ತಂದ ಯಶಸ್ಸು ಆಧುನಿಕ ವಚನಗಳದು. ಹೊಸಗನ್ನಡ ನವೋದ
ಸಂದರ್ಭದಿಂದ ಮೊದಲ್ಗೊಂಡು ತೀರ ಇತ್ತೀಚಿನವರೆಗೂ ರಚಿತಗೊಳ್ಳುತ್ತಿರುವ ವಚನಗಳ
`ಆಧುನಿಕ ವಚನ' ಗಳೆಂದು ಕರೆಯಬಹುದು.

ಆಧುನಿಕ ವಚನಗಳ ಆಶಯ ಹಾಗೂ ರಚನಾವಿನ್ಯಾಸವನ್ನು ಹೊಸಗನ್ನಡ ನವೋದ
ಸಂದರ್ಭದ ಸಾಹಿತ್ಯ ಅಧ್ಯಯನ ಹಾಗೂ ಸಾಹಿತ್ಯಸೃಷ್ಟಿಗಳೆರಡೂ ರೂಪಿಸಿವೆ. `ವಚನ'ವ
ಸಾಹಿತ್ಯ ಪ್ರಕಾರವಾಗಿ ಪರಿಗಣಿಸಿ, ಸಾಹಿತ್ಯ ಚರಿತ್ರೆಯಲ್ಲಿ ಅದಕ್ಕೆ ವಿಶಿಷ್ಟ ಸ್ಥಾನ ದೊರಕಿ
ರ್ಣನೆಯು ಶತಮಾನವಲ್ಲಿ. ನವೋದಯ ಸಾಹಿತ್ಯವು ಕನ್ನಡ ಸಾಹಿತ್ಯ ಪರಂಪರೆಯ
ಪ್ರೇರಣೆ ಪಡೆಯುವಲ್ಲಿ, ಶಿವಶರಣರ ವಚನಗಳ ಪ್ರಭಾವ ಹಲವಾರು ಕಾರಣಗಳ
ಗಮನಾರ್ಹವಾಗಿದೆ. ತಮ್ಮ ಸುತ್ತಣ ಸಮಾಜದ ಸುಧಾರಣೆ ಹಾಗೂ ಅಂತರಂಗದ ವಿಕಾಸ
ಉದ್ದೇಶವಾಗುಳ್ಳ ಶರಣರ ವಚನಗಳಲ್ಲಿ ನವೋದಯ ಸಂದರ್ಭದ ವ್ಯಾಪ್ತಿಯುತ್ಪಾದ
ಆಶಯವು ಭಾಷೆ ಮತ್ತು ಆಶಯಕ್ಕೆ ಸಂಬಂಧಿಸಿದಂತೆ ಇವೆ. ಆಧುನಿಕ ವಚನಕಾರರಿ
ಕಾರಣಕ್ಕಾಗಿ ಶರಣರ ವಚನಗಳ ಪ್ರಭಾವ ಅನಿವಾರ್ಯವೆನಿಸಿದೆ.

ಆಧುನಿಕ ವಚನಗಳ ಸಾಮಾಜಿಕ ಹಾಗೂ ಧಾರ್ಮಿಕ ಆಶಯಗಳನ್ನು ನಿರ್ಧರಿಸು
ನವೋದಯ ಸಂದರ್ಭದ ರಾಷ್ಟ್ರೀಯತೆ, ಪ್ರಾದೇಶಿಕತೆ, ಧರ್ಮನಿರಪೇಕ್ಷತೆಗಳ ಚಿಂ
ಪ್ರಮುಖ ಪಾತ್ರವಹಿಸಿವೆ. ಧರ್ಮನಿರಪೇಕ್ಷತೆಯು ನವೋದಯ ಕಾಲದಲ್ಲಿ ಪಡೆದ ಕ
ಸ್ವರೂಪವನ್ನು ಶಂಕರ ಮೊಕಾಶಿ ಪುಣೇಕರರು ಉಚಿತವಾಗಿ ಗುರುತಿಸಿದ್ದಾರೆ. ಅವರ ಪ್ರ
ಧರ್ಮಯುಗದಿಂದ ಕಿಸ್ತೆರೆದು ವ್ಯಕ್ತಿತ್ವವನ್ನು ಗುರುತಿಸಿ, ಮಾನವಿಕ ಸ್ತರಗಳಲ್ಲಿ
ಭಾವಜೀವನದ ಸಮಗ್ರತೆಯನ್ನು ಸವಿಯುವ ಹೊಸಯುಗದ ಲಕ್ಷಣವಾಗಿ ಮ
ಕೇಂದ್ರಿತ ವ್ಯಕ್ತೀಕರಣ ಕಾಣುವುದಕ್ಕಿದೆ. ಮನುಷ್ಯನ ಎಲ್ಲ ಭಾವನೆ, ಸಂವೇದನ
ಮಾನವ ಮನಸ್ಸಿನಲ್ಲಿಯೇ ಹುಟ್ಟಿ ಆ ಮಾನವಿಕ ಸ್ತರದಲ್ಲಿಯೇ ಅವು ಪರಿಪಾಕಗೊ
ಕ್ರಿಯೆಯೇ `ಮಾನವ ಕೇಂದ್ರಿತ ವ್ಯಕ್ತೀಕರಣ'. ತನ್ನೆಲ್ಲಾ ಅಂತರಂಗದ ನೋವು ನಲಿ
ಯಾವುದೋ ಅಲೌಕಿಕ ವೈಭವವನ್ನು ಸಾಕ್ಷಿಯಿಸ್ಸಾಗಿಟ್ಟುಕೊಳ್ಳದೆ ತನ್ನೊಳಗಿನ ಶಕ್ತಿ
`ಅಂತರಾತ್ಮ'ವೆಂಬ ಸಂಕೇತದ ಮೂಲಕ ಪರಿಭಾವಿಸುವ ಕ್ರಿಯೆ ನವೋದಯ ಕ

ಪ್ರಮುಖ ಲಕ್ಷಣವಾಗುತ್ತದೆ. ರವೀಂದ್ರರ ಕಾವ್ಯಧರ್ಮವೂ ಈ ನೆಲೆಯದೇ. ಆಧುನಿಕ ರಚನಕಾರರಾದ ದಿವಾಕರ, ಬೇಂದ್ರೆ, ಕುವೆಂಪುರವರ ವಚನಗಳು ರೂಪಾಂಶದಲ್ಲಿ ಪ್ರಾಚೀನ ವಚನಗಳಿಗಿಂತಲೂ ಠಾಕೂರ್ ಹಾಗೂ ವಿಟ್‌ಮನ್‌ರ ರಚನೆಗಳಿಗೆ ಹತ್ತಿರವಾಗಿವೆ. ಶಯದ ಹಂತದಲ್ಲಿಯೂ ಠಾಕೂರರ ಪ್ರಭಾವವನ್ನು ಆಧುನಿಕ ವಚನ ರಚನೆಗಳಲ್ಲಿ ಗುರುತಿಸಬಹುದು.

ಆತ್ಮಾನಂದವೇ ತನ್ನ ಜೀವಭಾವಗಳ ಆಧಾರವಾಗಿರಲಿ ಎಂದು ಆಶಿಸಿದ ದಿವಾಕರರು ಆನಂದದ ಆದಿಮೂಲವಾದ `ರಸ' ದ ಬಗೆಗೆ ತಮ್ಮ ವಚನಕೃತಿಗಳಲ್ಲಿ ಏಪೇಚಿಸಿದ್ದಾರೆ. ಧರ್ಮನಿರಪೇಕ್ಷಯುಗದ ಕವಿ . ಪರಾವಸ್ತುವೆಂಬ ಪರಿಕಲ್ಪನೆಯಲ್ಲಿ ಮೂಲಭೂತ ಬದಲಾವಣೆ ಮಾಡಿಕೊಳ್ಳುತ್ತಾನೆ. ಕವಿಯ ಅಸ್ತಿತ್ವದಿಂದ, ವ್ಯಕ್ತಿತ್ವದಿಂದ ಆತನ ಭಾವಕೋಶದಲ್ಲಿ ವಿಶ್ವಶಕ್ತಿ ರಸಾಸ್ವಾದನೆಗೆ ಗುರಿಯಾಗಬಲ್ಲ ವಿಷಯವೂ, ಸಹ ಆಸ್ವಾದನೆಗೆ `ಅಂತರಾತ್ಮ' ನಂತೆ ಜೊತೆಗೂಡಬಲ್ಲ ಚೇತನವೂ ಆಗಬಲ್ಲುದು.

ಕುವೆಂಪುರವರ `ಕಿಂಕಿಣಿ'ಯ ವಚನಗಳು ಶೈಲಿಯಲ್ಲಿಯೂ ಆಶಯದಲ್ಲಿಯೂ ಠಾಕೂರರ `ಗೀತಾಂಜಲಿ'ಯ ರಚನೆಗಳಿಗೆ ಹತ್ತಿರವಾಗಿವೆ. ರವೀಂದ್ರರು ಪ್ರಕೃತಿಯು ವಿಶ್ವಸ್ಪಂದನದಲ್ಲಿ ಸರ್ವಾಂತರ್ಯಾಮಿ ಅವ್ಯಕ್ತ ಶಕ್ತಿಯೊಂದು ಅಡಗಿರುವುದಾಗಿ ಭಾವಿಸುತ್ತಾರೆ. ಅವರ ವಿಚಾರಗಳೆಲ್ಲ ಈ ಭವ್ಯ ಕೇಂದ್ರವಸ್ತುವಿನ ಸುತ್ತಲೇ ಸುತ್ತುತ್ತವೆ. ವಿಶ್ವವ್ಯಾಪಕ, ಜಗವನ್ನು ನಿಯಂತ್ರಿಸುವ ಸರ್ವಶಕ್ತ ನಿರಾಕಾರದೊಡನೆ ವೈಯಕ್ತಿಕ ಭಾವುಕ ಸಂಬಂಧವನ್ನು ಹೊಂದುವುದು ಆಧುನಿಕ ಕವಿಗೆ ಕಷ್ಟವೇ. ಮುಗಿಲಿನ ಈ ನಿರಾಕಾರ ಅಮೂರ್ತದೊಂದಿಗೆ ಮಾನವಕೇಂದ್ರಿತ ವ್ಯಕ್ತೀಕರಣ ಯುಗದ ಕವಿಗೆ ತನ್ನ ಭಾವಾನುಭಾವಗಳ ಉದ್ವೇಗವನ್ನು `ರಸ' ವಾಗಿ ಪರಿವರ್ತಿಸಿ ಸಹಾಯಕವಾಗಬಲ್ಲ ಸಂಬಂಧ ಸಾಧ್ಯವಾಗಲಾರದು. ಭಕ್ತಸಿದ್ಧವ ತನ್ನ ಭಾವಗಳ ಉದ್ವೇಗಕ್ಕೆ ನಿರಾಕಾರ ಪರದೈವದ ಪರಿಹಾರಪರ ಸಾಂತ್ವನಕ್ಕೆ ಶರಣ ಹೋಗುತ್ತಾನೆ. ಭಾವಜೀವಿಯಾದ ಕವಿಯಾದರೋ ತನ್ನ ಅನುಭವಗಳನ್ನು ಸಬಯುವುದರಲ್ಲಿ ಜೊತೆಗಾರನಾಗಿ, ನೋವುನಲಿವುಗಳಲ್ಲಿ ಪಾಲುಗಾರನಾಗಿ ಭಾವಗಳ ರಸಾನುಭೂತಿಗೆ ಕಾರಣವಾಗುವ `ಅಂತರಾತ್ಮ'ನಿಗೆ ತನ್ನನ್ನು ಒಪ್ಪಿಸಿಕೊಳ್ಳುತ್ತಾನೆ. `ಕಿಂಕಿಣಿ'ಯ ವಚನಗಳು ಈ ತಾತ್ವಿಕತೆಯ ಆಧಾರದಿಂದಲೇ ನಿಸರ್ಗದ ನಿಗೂಢವೆನಿಸುವ ಶಕ್ತಿಯನ್ನರಿಯಲು ತೊಡಗುತ್ತವೆ. ಹಾಗೂ ರಸದೃಷ್ಟಿಯಿಂದ ನಿಸರ್ಗ ಪರಿಭಾವನೆಗೆ ತಕ್ಕ ಮೇದಿಕೆಯನ್ನು ರೂಪಿಸಿಕೊಳ್ಳುತ್ತವೆ. ಶರಣ ವಚನಗಳಿಗಿಂತ ಆಧುನಿಕ ವಚನಗಳು ಹೀಗೆ ಆಶಯದಲ್ಲಿ ಭಿನ್ನವಾಗುತ್ತವೆ. ಆಧ್ಯಾತ್ಮ ಜೀವನದ ತುತ್ತತುದಿಯ ಸಾಧ್ಯತೆಗಿಂತ ಅದನ್ನು ಹೊಂದಲು ಕೈಗೊಳ್ಳುವ ಸಾಧನೆಯು ಹುಟ್ಟುಹಾಕುವ ಭಾವೋದ್ವೇಗವೇ ಆಧುನಿಕ ವಚನಗಳಲ್ಲಿ ಮುಖ್ಯ. ಭಟ್. ಎ. ಪಾಮಗದ `ಹೊನ್ನ ಸುಮಷ', ಮ. ಶ್ರೀ. ದೇಶಪಾಂಡೆಯವರ `ಅಕ್ಕರದ ಅಂಜಲಿಗಳು' ಈ ಕೃತಿಗಳೂ `ದೇವ'ನನ್ನು ಅರಸುವ ಮೇಲಾಟವು ಹುಟ್ಟುಹಾಕುವ ಭಾವಪ್ರಚಾರ ವಚನಗಳನ್ನು ಒಳಗೊಂಡಿವೆ. ಇದೇರೀತಿ ಲೌಕಿಕಭಾವೆಗಳ ಪ್ರಕಟನೆಗಾಗಿ ರಚಿತಗೊಂಡ ಬೇಂದ್ರೆಯವರ `ಕರುಳಿನ ವಚನಗಳು' ಕೌಟುಂಬಿಕ ಆವರಣದಲ್ಲಿ ಅರಳಬಹುದಾದ ವಿಶಾಲ್ಪ್ರೇಮವು ವಾತ್ಸಲ್ಯರಸವಾಗಿ ಉತ್ಕರ್ಷ ಹೊಂದಿರುವುದಕ್ಕೆ ಕುರುಹಾಗಿವೆ.

ಆಧುನಿಕ ವಚನಕಾರರ ಉಕ್ತಿಗಳಾದ ಎಸ್. ಜಿ. ಪರಮೇಶ್ವರಪ್ಪನವರ 'ಪರಾ
ಗುರು', ಎಸ್. ಜಿ. ರಂಗನ್ನನವರ 'ರಂಗಮ್ಮ', ಸಿದ್ಧಯ್ಯ ಪುರಾಣಿಕರ 'ಶ್ರೀಶೈಲ
ಸಿದ್ಧೇಶ್ವರ', ಮುಂತಾದವು ತಮಗಾದ ಇಷ್ಟ ದೈವಾನುಭವ ಪದ್ಧತಿಯನ್ನು ಭಾವನಾತ್ಮಕ ಶೈ
ರೀತಿಯಲ್ಲಿ ಹೊಸ ಆಕಾಯವನ್ನು ಹೊಂದಿವೆ. ತಮಗಾದ ಭಾವನಾತ್ಮಕ ಅನುಭವಕ್ಕೆ ಶಬ್ದರೂಪ
ಅಲೌಕಿಕ ದೈವದ ಸಂಕೇತವು ಕೂಡ. ಆಧುನಿಕ ವಚನಕಾರ ಉಕ್ತಿಗಳು ಮಾಡಿರುವ
ನವೋದಯ ಆಕಾಯವಾದ 'ಉಕ್ತಿಮೂರ್ತಿ'ಯಿಂದ ಕ್ರಿಯಾನ್ವಿತ ಜೀವಾತ್ಮ 'ಪರ
ಮುಸ್ಸಿವಾಗಿಟ್ಟುಕೊಂಡಿವೆ.

'ರಂಗಬ್ಬನ ಪದ'ಎಸ್. ಜಿ. ರಂಗನ್ನನವರಿಗೆ 'ರಂಗಮ್ಮ' ಸೆನ್ನುವುದು
ಬ್ರಹ್ಮಾಂಡವನ್ನು ಆವರಿಸಿರುವ ಶಿಮಿತ್ತ ಶಕ್ತಿ. ಇಲ್ಲಿನ ಸಮಾಜ, ಗೃಹ, ಪಾರಾ
ಕಟ್ಟೆಗೆ. ಎಲ್ಲವೂ ಅರ್ಥಪೂರ್ಣ ಪಾರಮಾರ್ಥಿಕ ಶಿಮಿತಾರ್ಥವನ್ನು ಸ್ಥಾಪಿಸಿ
ಅವಶ್ಯಕವಾದ ಜೀವನಮೌಲ್ಯಕ್ಕಾಗಿ ರಂಗನ್ನನವರಿಗೆ ದೈವದ ಅಗತ್ಯ ಕಾಯ ಬರುತ್ತದೆ.

ಪರಮೇಶ್ವರ ಭಟ್ಟರ ಇಷ್ಟ ದೈವವಂಬಿಗನ ಶಿಮಿತಿಯನ್ನು ಮಾಪಕೆಯಾ ಹೀ
ಯುಳ್ಳದ್ದು. ಇಷ್ಟದೈವದೊಡನೆ ತೀರ ಅತ್ಮೀಯತೆಯು. ಕಲೆಗಾರ ಭಾವಯಿಕ್ಕೆ ಸಂ
ಯನ್ನವರು ಇದೆಯಾತ್ಮಕ. 'ಸಮಾಧಿಗಾರರು' ಬಹುತ ಇಷ್ಟವಾಗುವ ಕಾರ್ಯ. ಇಷ್ಟದೈವದ ಅನು
ಕ್ಕಾಗಿ ದೊರೆಹೋಗದೆ ಭಾವಾವೇಶದಿಂದಲೇ ಬಹುತ ಇಷ್ಟವಾಗುತ್ತೆ. ಎಂಬ ಭಾವ ಪ
ನಿರಪೇಕ್ಷಿಯಿಂದ ಕವಿಗೆ ಅನಿವಾರ್ಯ. ಭಟ್ಟರ ಮಾತುಗಳಲ್ಲಿಯೆ ಹೀಗೆ ವ್ಯಕ್ತವಾಗಿದೆ.

" ನಾನು ನಿನ್ನನು ಕೈಹಿಡಿದ ನಂತಹ ಮಾತು
ಬೇಡವಾಗಿಲ್ಲ.
ನಾನು ನಮಸ್ಕಾರ ಮಾಡುವಾಗಿದೆ
ಇನ್ನೆಲ್ಲವೂ ಅಚೆದಾದ ತೆಳ್ಳನೀರು
ಬೆಳಗ ಬರುತ್ತೇನೆ. ನಿಂಗಳ್ಳಿಯ ಸಂತೆಯ. ಸಮಾಧಿಗಾರರು "

('ಶಂಖಿಲ' ಪು : ೧೨೦, ೬ ನ : ೧

ದೈವದ ಸಂಬಂಧ ಎನ್ನುವುದು ಭಟ್ಟರಲ್ಲಿ ಪರಿಪಾಲಕರ ಶಕ್ತಿಯು ಅಧೀನದಲ್ಲಿ
ಆ ಸಂಬಂಧ. ಶಿಷ್ಟಮಲ್ಲಿನಿಂದ ಕ್ರಿಯಾನ್ವಿತ್ವವನ್ನು ಪಡೆದುಕೊಳ್ಳುವ ಪರಿ
ಬರುತ್ತದೆ.

" ಒಳ್ಳೆಯ ಇಳುವರಿಯ ಬೀಜ ಬಿತ್ತಿದೇನೆ.
ಒಳ್ಳೆಯ ಫಲದ ಬಂದೀಕೊಡುವೆನ್ನದೆಯಾ
ಬಾರದಿದ್ದಲ್ಲಿ ಬರಲಿರುವಾಗ ಬಾಡದ ಮನ ಕೊಡು
ಸಮಾಧಿಗಾರರು "

('ಶಂಖಿಲ' ಪು. ೩೭, ೧೦ ನ : ೧

ಧರ್ಮನಿರಪೇಕ್ಷ ಯುಗದ ಕವಿ ಪ್ರಕೃತಿಯ ಆಗುಹೋಗುಗಳನ್ನು ಮಾನವೀಕ ಭಾವಗಳ ಆಕರವನ್ನಾಗಿಸಿಕೊಳ್ಳುತ್ತಲೇ ವ್ಯಕ್ತೀಕೃತವಾದ ಪ್ರಕೃತಿ ದೇವಿ ಎಂಬ ಪರಿಕಲ್ಪನೆಯನ್ನು ರೂಪಿಸಿಕೊಳ್ಳಬಲ್ಲ. ಹೀಗೆ ಪ್ರಕೃತಿಶಕ್ತಿಯನ್ನು ದೈವೀಕರಿಸಿದ್ದ ಮಾನವ ಪರಿಭಾವಿಸುವ ಪ್ರಕ್ರಿಯೆ ಪರಮೇಶ್ವರ ಭಟ್ಟರ ವಚನಗಳಲ್ಲಿ ಅತ್ಯಂತ ಸಮರ್ಥವಾಗಿ ಅಭಿವ್ಯಕ್ತಗೊಳ್ಳುತ್ತದೆ.

"ಅಗಣಿತ ಮಾಳಿಯಂತೆ ಸ್ವರಗಾ ಧೋ ಧೋ ಸುರಿದು ಮಾನ
ಕೇಳುವುದು

ಕಲ್ಪನೆಯ ಹೊಳೆಯ ಮೇಲೆ
ಒಮ್ಮೊಮ್ಮೆ ಹೀಗೆ ನೀ ತೋರಿಸುವೆ ನಿನ್ನ ಲೀಲೆ
ಬೇಸಗೆಯ ಬಿಸಿಲಂತೆ ಸ್ವರಾಕ್ಷರ ರಣರಣ ಉರಿದು ಮನ
ಬೀಗುವುದು ಕಲ್ಪನೆಯ ಒಳೆಯಮೇಲೆ
ಒಮ್ಮೊಮ್ಮೆ ಹೀಗೆ ನೀ ತೋರಿಸುವೆ ನಿನ್ನ ಲೀಲೆ
ಇದನೆ ಜನ 'ಶಿವಲೀಲೆ' ಎಂಬರಲ್ಲವೆ ಸದಾಶಿವಗುರು"

(' ಉಪ್ಪುಕಡಲು ', ಪು : ೭೯)

ಪರಮೇಶ್ವರ ಭಟ್ಟರ ಕಡಲನ್ನು ಕುರಿತ ವಚನಗಳಲ್ಲಿ ವಚನ ರಚನೆಯ ಬೆಡಗು ಮುಗಿಲೆತ್ತರಕ್ಕೆ ರಮಣೀಯವಾಗಿ ಬೆಳಗಿದೆ. ಇಲ್ಲಿ ದೈವದೊಂದಿಗಿನ ಸಂಬಂಧವು ಸತ್ಯದ ಅನುಭವಗಳ ಸಾಮಾನ್ಯವಲಯವನ್ನು ಮೀರಿದೆ, ಅದನ್ನು ನಿಯಂತ್ರಿಸುವಂಥ ಆಧ್ಯಾತ್ಮಿಕ ಸ್ವರೂಪವನ್ನುಳ್ಳದ್ದು. ಕಡಲಿನ ವಚನಗಳು ನಿಸರ್ಗದ ಅಧ್ಯಾತ್ಮೀಕರಣದಿಂದ ಸಿದ್ಧಗೊಂಡಿವೆ. ಕಡಲು ತಮ್ಮ ಇಷ್ಟದೈವದ ಅವಿಕಾರೀ ಎನ್ನುವ ಭಟ್ಟರು ತಾವು 'ಪಾತ್ರದ ...ಟಿ' ನೆಲೆಯಲ್ಲಿ ನಿಂತಿರುವುದಾಗಿ ಹೇಳುತ್ತಾರೆ. ಕಡಲಿನ ಮುನಿಸು, ಕಿನಿಸು, ಪರಿಹಾಸ, ...ದನ್ನು ಎಲ್ಲವೂ ನಿತ್ಯಜೀವನದ ಆಗುಹೋಗುಗಳ ತುಣುಕಿನಿಂದ ರೂಪುಗೊಂಡಿದ್ದರೂ, ...ದ್ದು ವಿಶಾಲ್ಯದ ಅರಿವಿಕೆಗೆ ಸಾಕ್ಷಿಯಾಗಿರುವುವು.

ಹೀಗೆ ಇಷ್ಟದೈವದ ಬಳಕೆಯು ಆಧುನಿಕ ವಚನಕಾರರಲ್ಲಿ ಕೇವಲ ತಾಂತ್ರಿಕ ...ದ್ಯೇಕ ಮಾತ್ರವಾಗಿ ನಿಲ್ಲದೆ ಜೀವನ ಶ್ರದ್ಧೆಯ ಹೃದಯ ಸಂಸ್ಕಾರದ ಕೇಂದ್ರವಾಗುತ್ತದೆ. ...ಥ ಶುದ್ಧ ಜೀವನ ಸಂಹಿತೆಯಾಗಿಯೇ ಸಿದ್ಧಯ್ಯ ಪುರಾಣಿಕರ ವಚನಗಳು ಪ್ರಕಟಗೊಂಡಿವೆ. ...ಯಲ್ಲಿಯೂ ಶಿವ ಅಧಿಕವಾಗಿದ್ದಾನೆ ಎಂಬ ನೆಲೆಯಿಂದ ಹೊರಟ ವೀರಶೈವಧರ್ಮವು ...ಕ್ತಿಮಾರ್ಗ, ಪಂಚಾಚಾರ, ಅಷ್ಟಾವರಣ - ಈ ಮೂರು ಸಾಧನ ಮಾರ್ಗಗಳನ್ನು ...ಪಡಿಸಿಕೊಂಡಿತು. ಆಧುನಿಕ ವಚನಗಳಲ್ಲಿನ ಧಾರ್ಮಿಕ ಆಶಯವು, ತನ್ನ ಲೀಲೆಗಾಗಿ ...ಯಮೆಲ್ಲಗೊಂಡ ಪಂಚಭೂತ ಸೃಷ್ಟಿಯನ್ನು ನಿರ್ಮಿಸಿದ ಶಿವನ ಪಾರಮಾರ್ಥಿಕ ಸ್ವರೂಪ ...ಶಾಲಿ ಸೃಷ್ಟಿಯ ಹಿಂದೆ ವಿನ್ಯಾಸಗಳ ಹಿಂದಣ ಶಕ್ತಿಯೇ ಪ್ರಧಾನವೆಂದು ಪರಿಗಣಿಸುತ್ತದೆ. ...ಹಾರವಾಗಿ, ಅನಿವಾರ್ಯವಾಗಿ 'ಶಿವ'ನ ಕಲ್ಪನೆಯು ಪಾರಮಾರ್ಥಿಕ ಚೌಕಟ್ಟಿನ ...ದಿಂದ ಧರ್ಮನಿರಪೇಕ್ಷತೆಯನ್ನು ಆಧುನಿಕ ಧಾರ್ಮಿಕ ಆಶಯವು ಒಳಗೊಂಡಿದೆ.

ಸಿದ್ಧಯ್ಯ ಪುರಾಣಿಕರ ಕೆಲವು ರಚನೆಗಳು ಶರಣ ವಚನಗಳ ಅನುಭಾವದ ಜಾಡನ್ನು ಅನುಸರಿಸಿದಂತೆ ಕಂಡರೂ ಆಶಯ ತಾತ್ವಿಕವಾಗಿ ಧರ್ಮನಿರಪೇಕ್ಷ. ಅವರ ವಚನಗಳಲ್ಲಿ ಸೃಷ್ಟಿಯ ಸೌಂದರ್ಯ, ಆಗಾಧತೆ, ವೈವಿಧ್ಯ, ರೌದ್ರ ಇವೆಲ್ಲವೂ ವ್ಯಕ್ತೀಕೃತ ದೈವವಾಗಿ ಪ್ರಕಟಗೊಳ್ಳುತ್ತದೆ. ವ್ಯಕ್ತೀಕೃತ ದೈವವಾದ `ಸ್ವತಂತ್ರಧೀರ ಸಿದ್ಧೇಶ್ವರ 'ನನ್ನು ಕೇಂದ್ರವಾಗಿಟ್ಟುಕೊಂಡು ಸೃಷ್ಟಿಯ ಪರಿಭಾವನೆಯ ಮೂಲಕ ಭಾವದ ವಿನ್ಯಾಸವನ್ನು ಪ್ರಕಟಿಸುವ ರೀತಿ ಇಂತಿದೆ ;

" ನಿನ್ನ ವಿಶ್ವ ಚಿತ್ರವನ್ನು ನೋಡುತ್ತ ನಿಂತೆ,
ಭೂವ್ಯೋಮ ವ್ಯೋಮಾತೀತಗಳನ್ನು ವ್ಯಾಪಿಸಿದ
ಅದರ ಭೂಮಾಕೃತಿಗೆ ಬೆರಗಾದೆ ;
ಸಚರಾಚರ ಸೃಷ್ಟಿಯ
ವಿಸ್ಮಯಜನಕ ವೈವಿಧ್ಯಕ್ಕೆ ವಿಭ್ರಮಗೊಂಡೆ,
ನಿತ್ಯ ನವೀನ ರೇಖಾವೈಖರಿಗೆ
ವರ್ಣವಿನ್ಯಾಸಕ್ಕೆ ಮಾರುಹೋದೆ !"

(`ವಚನೋದ್ಯಾನ ', ಪು : ೧೭ ,೩೩)

ಈ ಭಾವವು ವಚನದ ಕೊನೆಯಲ್ಲಿ, ಭಾವಜೀವಿಯೊಡನೆ ಜೊತೆಗೂಡಿ ಬರುವ `ಅಂತರಾತ್ಮ 'ನೊಂದಿಗೆ ಸಹ ಆಸ್ವಾದನೆಯಲ್ಲಿ ನಿಲುಗಡೆ ಹೊಂದುತ್ತದೆ.

``ಚಿತ್ರದಿಂದ ಚಿತ್ರಕಾರನತ್ತ, ಚಿತ್ರಹೊರಳಿತು
ಚಿತ್ರ ಕಾಣದಾಯಿತು; ಚಿತ್ರಕಾರ ಕಾಣುವವನಲ್ಲ,
ಚಿತ್ರವೂ ಉಳಿಯಲಿಲ್ಲ; ಚಿತ್ರನೋಡುವ ನಾನೂ ಉಳಿಯಲಿಲ್ಲ
ಏನುಳಿದುದೆಂಬುದೂ ತಿಳಿಯಲಿಲ್ಲ
ಸ್ವತಂತ್ರಧೀರ ಸಿದ್ಧೇಶ್ವರಾ !"

ಸಿದ್ಧಯ್ಯ ಪುರಾಣಿಕರಲ್ಲಿ, ಧಾರ್ಮಿಕ ಸಂಸ್ಥೆಯಲ್ಲಿ ತಾಂಡವನಾಡುತ್ತಿರುವ ಭ್ರಷ್ಟಾಚಾರದ ಮುಖವನ್ನು ಕಟುವಾಗಿ ಟೀಕಿಸುವುದರ ಮೂಲಕವೇ ದೇವರು ಹಾಗೂ ಧರ್ಮವನ್ನು ನಿರ್ವಹಿಸಿಕೊಳ್ಳುವ ಕ್ರಮ ಕಂಡುಬರುತ್ತದೆ. ಭಕ್ತ ಹಿತಾರ್ಥವಾಗಿ ಇದುವರೆಗೆ ಏನೇನೋ ಅವತಾರಗಳನ್ನು ದೇವರು ಎತ್ತಿದುದಾಯ್ತು, ಇನ್ನು, ಹಸಿದವರ ಮುಂದೆ ರೊಟ್ಟಿಯಾಗಿ, ಶೋಷಿತರ ಮುಂದೆ ವಿಮೋಚನೆಯಾಗಿ, ನಿರಕ್ಷರಿಗಳಿಗೆ ವಿದ್ಯೆಯಾಗಿ ಆವಿರ್ಭವಿಸಬೇಕೆಂದು ಪುರಾಣಿಕರು ಇಷ್ಟದೈವವಲ್ಲಿ ಕೋರುತ್ತಾರೆ (`ವಚನೋದ್ಯಾನ ' ಪು : ೧೮) ಹೀಗೆ `ದೇವ' ನೆಂಬ ಧಾರ್ಮಿಕ ಯುಗದ ಸಂಕೇತವನ್ನು ಆಧ್ಯಾತ್ಮಿಕ ಅನುಭವ ಅಭಿವ್ಯಕ್ತಿಗೆ ಬಳಸಿಕೊಳ್ಳುವುದರೊಂದಿಗೆ ಸಾಮಾಜಿಕ ಸಂದರ್ಭದಲ್ಲಿ ಅದರ ಸ್ಥಾನವನ್ನು ಹೊಸದಾಗಿ ರೂಪಿಸಿಕೊಳ್ಳುವುದು ಮುಖ್ಯವಾಗುತ್ತದೆ. ಮೂರ್ತಿಪೂಜೆಯ ಎಲ್ಲ ಆಡಂಬರ ವಿಧಿಗಳನ್ನು ನಿರಾಕರಿಸಿ, ಅದಕ್ಕೆ ಪರ್ಯಾಯವಾಗಿ ದೀನದಲಿತರ ಸೇವೆಯಲ್ಲಿ ಜೀವ

...ತ್ಯವನ್ನು ಕಂಡುಕೊಳ್ಳುವ ಅಗತ್ಯವನ್ನು ರವೀಂದ್ರರ ಮಾನವತಾವಾದವು ಎತ್ತಿ ಹಿಡಿಯುತ್ತದೆ. ...ನತಾವಾದಿ ಸಾಮಾಜಿಕ ಚಿಂತನೆಗಳು ಆಧುನಿಕ ವಚನಗಳಲ್ಲಿ ಎದ್ದು ಕಾಣುವ ಅಂಶ. ...ಯು ಅನಾಥ ಶಿಶುವಿನ ಆಕ್ರಂದನವಾಗಿ, ರೋಗಿಯ ನರಳಿಕೆಯಾಗಿ ಪರಿತ್ಯಕ್ತೆಯ ಕಣ್ಣೀರಾಗಿ, ...ವರ ನಿಟ್ಟುಸಿರಾಗಿ, ಪತಿತರ ಆಕ್ರಂದನವಾಗಿ ಕರೆಯುವಂತೆ ಸಿದ್ಧಯ್ಯ ಪುರಾಣಿಕರು ಭಾವಿಸುತ್ತಾರೆ. ...ವಚನೋದ್ಯಾನ' ಪು : ೩೧) ಈ ವಿಶಾಲವಿಶ್ವ ತನ್ನೊಬ್ಬನಿಗಾಗಿ ಮಾತ್ರ, ಎಂಬುದನ್ನು ಬಿಟ್ಟು ...ಕ್ಕಾಗಿ ತಾನು, ತನ್ನವರಿಗಾಗಿ ತಾನು ಎಂದು ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳುವ ಆದರ್ಶಕ್ಕೆ ...ಣಿಕರು ಸಮ್ಮತಿಸುತ್ತಾರೆ. ಹೀಗೆ 'ಅಂತರಾತ್ಮ', 'ವಿಶ್ವಾತ್ಮ' ಎಂಬ ವ್ಯಕ್ತಿ ಕೇಂದ್ರಿತ ನೆಲೆಯಿಂದ ...ರಟು ಸರ್ವೋದಯದ ಆಧ್ಯಾತ್ಮಿಕ ಕಾವ್ಯವು ಧಾರ್ಮಿಕತೆಯೊಂದಿಗೆ ಏಕಕಾಲಕ್ಕೆ ಸಾಮಾಜಿಕ ...ತೆಯನ್ನು ಒಳಗೊಳ್ಳುವ ಬಗೆಯನ್ನು ಕಾಣಬಹುದು. ದಿವಾಕರ, ಕುವೆಂಪು, ಪರಮೇಶ್ವರಭಟ್ಟ ...ಗಣ್ಣ, ಸಿದ್ಧಯ್ಯಪುರಾಣಿಕ, ಮಹದೇವ ಬಣಕಾರ, ಜೀರಗೆ ಕಟ್ಟಿ ಬಸಪ್ಪ ಮುಂತಾದವರು ...ನಗಳಲ್ಲಿ ಸಾಮಾಜಿಕ ಬದಲಾವಣೆಯ ಹಂಬಲದೊಂದಿಗೆ ಒಳಧಾರ್ಮಿಕ ತುಡಿತವೂ ...ತೆಗೂಡಿರುವುದನ್ನು ಕಾಣಬಹುದು.

ವಚನ ಸಾಹಿತ್ಯವೆಂದರೆ ಲಿಂಗವಂತ ಸಾಹಿತ್ಯವೆಂದೇ ಕೆಲವರ ಅಭಿಪ್ರಾಯವಿದೆ. ...ರಶೈವಧರ್ಮದ ತಾತ್ವಿಕ ಚೌಕಟ್ಟಿನಲ್ಲಿಯೇ ಪರಂಪರಾಗತ ರೀತಿಯಲ್ಲಿ ವಚನ ರಚನೆ ...ಡಿದ ಆಧುನಿಕ ವಚನಕಾರರ ಸಂಖ್ಯೆ ಸಾಕಷ್ಟಿದೆ. ಜ. ಚ. ನಿ. ಮಹದೇವ ಬಣಕಾರ, ...ಜಗಂ, ಮಾತೆ ಮಹಾದೇವಿ ಇತ್ಯಾದಿ ಪ್ರಮುಖರನ್ನು ಹೆಸರಿಸಬಹುದು. ಆಧುನಿಕ ವಚನ ...ರಲ್ಲಿ ಲಿಂಗವಂತ ವಚನಕಾರರು ಎಂದು ಪ್ರತ್ಯೇಕಿಸುವುದು ಸರಿಕಾಣದಿರಬಹುದು. ಆದರೆ ...ಗವಂತ ಹಿನ್ನೆಲೆಯಿಂದ ಬಂದ ವಚನಕಾರರು ಸಹಜವಾಗಿಯೇ ವೀರಶೈವ ತಾತ್ವಿಕ ...ಭಾಷೆಯಲ್ಲಿ ತಮ್ಮ ಶ್ರದ್ಧೆ, ನಂಬಿಕೆ, ಜೀವನಾಸಕ್ತಿಗಳನ್ನು ಶರಣವಚನಗಳ ತಾಂತ್ರಿಕ ...ದರಿಯ ರೂಪದಲ್ಲಿ ಪ್ರಕಟಿಸಿರುವುದರಿಂದ, ಈ ರೀತಿಯ ಪ್ರತ್ಯೇಕತೆ ಅಧ್ಯಯನದ ...ಕೂಲಕ್ಕೋಸ್ಕರ ಅನಿವಾರ್ಯವೆನಿಸುತ್ತದೆ.

ಶರಣ ವಚನಗಳ ಆಶಯ ಹಾಗೂ ರೂಪದ ಅನುಕರಣೆಯನ್ನು ಮಾಡುವ ...ನಿಕ ವಚನ ರಚನೆಗಳನ್ನು 'ಸಾಂಪ್ರದಾಯಿಕ ವಚನ'ಗಳೆಂದು ಕರೆಯಬಹುದು. ಈ ...ಯ ವಚನಗಳನ್ನು ಅವುಗಳ ಧಾರ್ಮಿಕ ಆಶಯವನ್ನು ಮೌಲ್ಯಮಾಪನ ಮಾಡುವುದು ...ರ್ಮನಿರಪೇಕ್ಷ ಯುಗದಲ್ಲಿ ನಿಜಕ್ಕೂ ಸವಾಲೆನಿಸಬಹುದು. ೧೨ನೇ ಶತಮಾನದ ...ನಗಳನ್ನು ನಾವು ಪರಿಭಾವಿಸುವಾಗ ಕೂಡ ನಮಗೆ ಸಾಹಿತ್ಯಕ ಭಾವತೀವ್ರತೆಯುಳ್ಳ ಶರಣರ ...ನೆಗಳೇ ಅಪೇಕ್ಷಣೀಯವೆನಿಸುತ್ತವೆ. ಮಾನವೀಯ ತುಡಿತಗಳುಳ್ಳ, ಶುದ್ಧ, ವೈಯಕ್ತಿಕ ...ತೆ ಹಾಗೂ ಹಂಬಲಗಳನ್ನು ಇಷ್ಟದೈವದೆದುರು ತೋಡಿಕೊಳ್ಳುವ ಶರಣ ವಚನಗಳು ...ಜವಾಗಿಯೇ ಸರ್ವೋದಯದ ಮಾನವ ಕೇಂದ್ರಿತ ಮನಸ್ಸನ್ನು ಆಕರ್ಷಿಸಿದವು. ಆದೇ ...ರ ಧಾರ್ಮಿಕ, ತಾತ್ವಿಕ ವಿಷಯಗಳನ್ನೊಳಗೊಂಡ, ಮತೀಯ ವಿವರಗಳಿಗೆ ಮಾತ್ರ ...ತವೆನಿಸುವ ವಚನಗಳು ಸರ್ವೋದಯ ವಿಮರ್ಶಕರ ಅಪೇಕ್ಷಣೀಯ ಅಂಶ ...ಳಿಯಲಿಲ್ಲ. ಆದರೆ, ಧರ್ಮಕೇಂದ್ರಿತ ಯುಗದ ಮನಸ್ಸು, ಇಂದು ನಾವು ಸಾಹಿತ್ಯಕ

ಕಾರಣಗಳಿಗಾಗಿ ಮೆಚ್ಚುವ ವಚನಗಳ ಜೊತೆಗೆ ಇತರ ವಚನಗಳ ಬಗೆಗೂ ಸಮಾನ ಗೌ
ಭಕ್ತಿ, ಶ್ರದ್ಧೆಯನ್ನು ಹೊಂದಿರಬಹುದಾಗಿದೆ. ಶರಣ, ಸ್ಥಾವರ, ಗುರು, ಲಿಂಗ, ಪ್ರಾಣ, ಇತ್ಯಾ
ಪದಗಳು ಪಾರಿಭಾಷಿಕ ಪದಗಳಾಗಿ ಆ ಧರ್ಮದ ಅನುಯಾಯಿಗಳ ಭಾವ ಕೋಶದಲ್ಲಿ
ವಿಶಿಷ್ಟವಾದ ಸ್ಥಾನವನ್ನು ಪಡೆದಿರುತ್ತವೆ. ಹೀಗಾಗಿ ವಿಷಯಗಳಲ್ಲಿ ಸ್ವಾಮಾಜಿಕ ನ
ಅನುಭವದ ನಿರೂಪಣೆ ಆಧುನಿಕವಚನಗಳಲ್ಲಿವೆಯೆ ? ಎಂಬ ಪ್ರಶ್ನೆಗೆ ಉತ್ತರಿಸುವ ಮುನ್ನ
ಪಾರಿಭಾಷಿಕ ಪದಗಳು ಧರ್ಮದ ಅನುಯಾಯಿಗಳ ಭಾವಕೋಶದಲ್ಲಿ ಪಡೆದಿರುವ ಸ್ಥಾ
ಸ್ವರೂಪವನ್ನು ಲಕ್ಷ್ಯದಲ್ಲಿಟ್ಟುಕೊಳ್ಳುವುದು ಒಳ್ಳೆಯದು.

ಶ್ರೀ. ಜ. ಚ. ನಿ. ಯವರು ವೀರಶೈವ ಮಠಾಧೀಶರಾಗಿದ್ದು, ವೀರಶೈವಸಿದ್ಧಾ
ಗ್ರಂಥಗಳನ್ನು ರಚಿಸಿ `ಸಾಹಿತ್ಯ ಬ್ರಹ್ಮ' ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಧಾರ್ಮಿ
ಸಿದ್ಧಾಂತದ ಸೀಮಿತತೆಯಲ್ಲಿಯೂ ಸುಂದರವಾಗಿ ಅರಳಿರುವ ವಚನಗಳು ಇವರ ವ
ಸಂಗ್ರಹಗಳಲ್ಲಿವೆ. ಜ. ಚ. ನಿ. ಯವರು ತಮ್ಮ `ಅಭಯವಾಣಿ' ಸಂಗ್ರಹವ
``ಅಂತರಂಗದ ವಾಣಿ'' ಎಂದು ಕರೆದುಕೊಳ್ಳುತ್ತಾರೆ. ಧಾರ್ಮಿಕ ಸಿದ್ಧಾಂತದ ಗಹನತೆ
ಪಗರಣದಲ್ಲಿ ಹಳವಂಡಗೊಂಡ ಮನಸ್ಸು ಹಗುರವಾಗಿ ಹರುಷದಿಂದೊಡಗೂಡಿ ಮ
ಹಾಡುವಂತಾಗಲೆಂಬ ಹೃದಯದ ಹಂಬಲಿಕೆ ಈ ರಚನೆಯ ಹಿಂದಿದೆ. `ಅಭಯವಾಣಿ'
ಪಾರಲೌಕಿಕ ದೈವದ ಪರಿಹಾರರೂಪೀ ಅಭಯವನ್ನು ಕೋರುವ ನೆಲೆಯ
ಹೊರಟದ್ದಲ್ಲ. ``ತನ್ನ ಮಗನ ತಾ ತೂಗಿಹೊರಟಿದೆ'' ಎಂಬ ವ್ಯಕ್ತಿ ಕೇಂದ್ರಿತ ಆಶಯ
ಹೊಂದಿದೆ.

ಭಗವಂತನ ಅನಾದಿ, ಅನಂತ ಪಾರಲೌಕಿಕ ವ್ಯಕ್ತಿತ್ವದ ಸ್ವರೂಪವನ್ನು ಅರಿ
ರೀತಿಯು ಜ. ಚ. ನಿ. ಯವರ ವಚನದಲ್ಲಿ ನವೀನ ರೀತಿಯಲ್ಲಿ ಹೀಗೆ ವ್ಯಕ್ತಗೊಂ

``ಅಂಜನದ ನೆರವಿನಿಂದ ಮಣ್ಣೊಳಗಿನ ಹೊನ್ನು ತೋರುವಂತೆ
`ಎಕ್ಸ್‌ರೆ' ನೆರವಿನಿಂದ ಗರ್ಭದ ತಿರುಳು ಹುರುಳುಗಳ ಕಾಣುವಂತೆ
ದೇವ, ನಿಮ್ಮ ಅನುಭಾವ ಬಲದಿಂದ
ಶ್ರೀ ನಿಡುಮಾಮಿಡಿ ಶ್ರೀಗಿರಿ ಸೂರ್ಯಸಿಂಹಾಸನಾಧೀಶ್ವರನ
ನಿಜನಿಲುವು ನೋಟಕ್ಕೆ ನಿಂದಿತು, ಭಾವಕ್ಕೆ ಬಂದಿತ್ತು ''

(`ವಚನ ಮಂಜರಿ', ೩

ಶರಣರಂತೆ ಜ.ಚ.ನಿ. ಯವರೂ ಇಷ್ಟ ದೈವವನ್ನು ಅನೇಕ ಸಂಬಂ
ವಿಗಳ ಮೂಲಕ ಸಂಬೋಧಿಸುತ್ತಾರೆ. ಇವರಲ್ಲಿ ಶರಣಸತಿ ಲಿಂಗಪತಿ ಭಾವದ ವಚ
ಗಿವೆ. ಪರಬ್ರಹ್ಮದ ವಸ್ತುವನ್ನು ಯೌಗಿಕ ಪರಿಭಾಷೆಯಲ್ಲಿ ನಿರೂಪಿಸಿರುವಂತೆಯೇ
ಸುಂದರ ನಿರೂಪಣೆಯ ವಚನಗಳು: ಕಠಿಣವಾದ ತಾತ್ವಿಕ ವಿಷಯಗಳನ್ನೂ ಶಿ
ನಿರೂಪಿಸುತ್ತವೆ. ಇವರ ವಚನಗಳಲ್ಲಿ ಸಾಧನ ಪಥದ ತೊಳಲಾಟಗಳೂ ಇವೆ. ವ್ಯ
ವಲಯದೊಳಗಿನ ಅಧಿಕಾರದ ತೆರಿಗೆ ಪಡೆಯಬೇಕಾದುದನ್ನು ಕುರಿತು ಬರೆದ್ದಾ

ಪ್ರಾಮಾಣಿಕ, ಪರಿಶುದ್ಧವಲ್ಲದ ಸ್ಥಿತಿಯಲ್ಲಿ ತನ್ನ ಸಾಧನೆ ಕುಂಟುತ್ತಿರುವುದರ ಬಗೆಗೂ ಜ. ಚ. ನಿ. ಜಾಗ್ರತರಾಗಿದ್ದಾರೆ.

"ಪೀಠಾಧಿಕಾರದ ಬಲೆಯನೆಸೆದೆ ಬಿದ್ದಿಹೆನು, ಬಳಲಿಹೆನು
ಸ್ವತ್ವದ ಅಭಿಲಾಷೆ ಅಳವಟ್ಟಿತ್ತು. ವೈಭವದ ಆಸೆ ಆವರಿಸಿತ್ತು
ಜನಜಂಗುಳಿಯು ಹಂಗಿಗ ನಾನಾದೆ"

("ವಚನ ಮಂಜರಿ")

ಈ ಹಿಂದೆಯೇ ಹೇಳಿರುವಂತೆ, ಜ. ಚ. ನಿ. ಯವರದು ಭಕ್ತ, ಸಾಧಕ ಮಾರ್ಗಕ್ಕಿಂತ ಹೆಚ್ಚಾಗಿ ಸಾಹಿತ್ಯಕ ಮಾರ್ಗವೂ ಹೌದು. ಈ ನಿಲುವು ಅವರ ವಚನದಲ್ಲೇ ಹೀಗೆ ವ್ಯಕ್ತವಾಗಿದೆ :

"ಶರಣ ಸಾಹಿತ್ಯವನೆ ಬರೆದಿಹೆನೆಂಬಿರಿ
ಬರೆದಿರೇನು ? ಛಾಪಿಸುವಡೆ
ಶರಣರು ಲಿಂಗಾಂಗಿಗಳಲ್ಲವೆ ? ಅಷ್ಟಾವರಣ ನಿಷ್ಠರಲ್ಲವೆ ?
ಪಂಚಾಚಾರ ಪರಾಯಣರಲ್ಲವೆ ? ಷಟ್‌ಸ್ಥಲ ನಿಷ್ಠರಲ್ಲವೆ ?
ಆಗಲಿ, ಆಗದಿರಲಿ,
ಸಾಹಿತ್ಯಕ್ಕೆ ಭಿನ್ನಭೇದಗಳುಂಟೆ ? ಪಕ್ಷವಿಪಕ್ಷಗಳುಂಟೆ ?

'ಸಾಹಿತ್ಯದ ಸೇವೆಯೆ ಎನಗೆ ಐಕ್ಯದ ಆನಂದ' ಎಂಬ ದೃಢ ನಿಲುವೂ ಜ. ಚ. ನಿ. ಯವರದು

ನವೋದಯ ಆಶಯಗಳ ಹಿನ್ನೆಲೆಯಲ್ಲಿ ಪ್ರಕಟವಾದ ಆಧುನಿಕ ವಚನಗಳ ಧಾರ್ಮಿಕ ಹಾಗೂ ಸಾಮಾಜಿಕ ಚಿಂತನೆಗಳು ಆಧುನಿಕ ವಚನಗಳ ರಚನಾವಿನ್ಯಾಸವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ. ಆಕೃತಿ ಹಾಗೂ ಆಶಯಗಳ ಪರಸ್ಪರ ಪೂರಕತೆಯನ್ನು ನಾವು ಆಧುನಿಕ ವಚನಗಳಲ್ಲಿ ಕಾಣಬಹುದು. ಆಶಯ ಹಾಗೂ ರಚನಾ ವಿನ್ಯಾಸಕ್ಕೆ ಸಂಬಂಧಿಸಿದಂತೆ, ವಚನಕಾರರ ವೈಯಕ್ತಿಕ ಪ್ರಯತ್ನಗಳ ವೈಶಿಷ್ಟ್ಯ, ಇತಿ ಮಿತಿಗಳನ್ನೊಳಗೊಂಡ ವಿಸ್ತಾರವಾದ ಹರಹು ಆಧುನಿಕ ವಚನಗಳಿವೆ. ಪ್ರಕೃತಿ ಆರಾಧನೆ, ಅಂತರಂಗದ ಭಾವಾಭಿವ್ಯಕ್ತಿ, ಸಾಹಿತ್ಯ ದರ್ಶನ, ಸಾಮಾಜಿಕ ಸಿದ್ಧಾಂತ, ವಿಜ್ಞಾನ ಎಲ್ಲವೂ ಆಧುನಿಕ ವಚನ ಪ್ರಕಾರದ ವಿಶಾಲ ವಲಯದಲ್ಲಿದೆ. ಬೇಂದ್ರೆಯವರ 'ಕರುಳಿನ ವಚನಗಳು' ವಾತ್ಸಲ್ಯಭಾವದ ಹೊಳೆಯನ್ನು ಹರಿಸಿದರೆ ಸಿ. ಕೃಷ್ಣರ 'ನನ್ನ ಅಪ್ಪರೆ' ಪ್ರಣಯದ ಸೊಗಸನ್ನು ಪರಿಚಯಿಸುತ್ತದೆ. ದಿವಾಕರ, ...ಪ್ಪರವರ ರಚನೆಗಳು ಆಧುನಿಕ ಧಾರ್ಮಿಕ ಆಶಯದ ಮುಖವಾಣಿಯಾಗುವ ಆಧ್ಯಾತ್ಮಿಕ ಗದ್ಯಗೀತಾತ್ಮಕ ರಚನೆಗಳು. ಸಿದ್ದಯ್ಯ ಪುರಾಣಿಕ, ಎಸ್. ಪಿ. ಪರಮೇಶ್ವರ ಭಟ್ಟ ಮುಂತಾದ ಪ್ರಮುಖ ವಚನಕಾರರ ವಚನಗಳಲ್ಲಿ ಏಕಕಾಲಕ್ಕೆ ಜೀವನಾನುಭವವೂ ಅನುಭಾವವೂ ಪ್ರಯೋಗಾತ್ಮಕ ನೆಲೆಯಲ್ಲಿ ಪ್ರಕಟವಾಗಿವೆ. ಜ. ಚ. ನಿ., ಮಹದೇವ

ಬಣಕಾರ, ನಾ. ಚೆ., ಮೂಜಗಂರ ವಚನಗಳು ವೀರಶೈವ ಧಾರ್ಮಿಕ ಪ್ರೇರಣೆಯ ಚೌಕಟ್ಟಿನಲ್ಲಿ ಮೂಡಿವೆ. ಹೀಗೆ, ಆಧುನಿಕ ವಚನಗಳ ಅಭಿವ್ಯಕ್ತಿ ವೈವಿಧ್ಯಮಯವಾಗಿದೆ. ಈ ರೀತಿಯ ವೈವಿಧ್ಯದಲ್ಲಿಯೇ ಆಧುನಿಕ ವಚನಗಳು ಪ್ರಭಾವ ಹಾಗೂ ಪ್ರೇರಣೆಯ ನೆಲೆಯನ್ನು ಕಂಡುಕೊಳ್ಳುವಲ್ಲಿ ಏರ್ಪಟ್ಟ ವೈಶಿಷ್ಟ್ಯದಿಂದಾಗಿ ಮೂರು ರೀತಿಯ ರಚನಾ ವಿನ್ಯಾಸವನ್ನು ಪಡೆದುಕೊಳ್ಳುತ್ತವೆ. ಸಾಂಪ್ರದಾಯಕ ವಚನಗಳು, ಪ್ರಯೋಗಾತ್ಮಕ ವಚನಗಳು ಹಾಗೂ ಗದ್ಯಗೀತಾತ್ಮಕ ವಚನಗಳಲ್ಲಿ ಕೊನೆಯ ಪ್ರಕಾರದಲ್ಲಿ ಕೃಷಿ ಸ್ವಲ್ಪ ಕಡಿಮೆ ಎಂದೇ ಹೇಳಬೇಕು. ವಿಷಯ ವೈವಿಧ್ಯದ ದೃಷ್ಟಿಯಿಂದಲೂ ರಚನಾವೈಶಿಷ್ಟ್ಯದ ದೃಷ್ಟಿಯಿಂದಲೂ ಈ ಪ್ರಕಾರದ ಮುಂದುವರಿಕೆ ಆಶಾದಾಯಕವಾಗಿದೆ. ೨೦ನೆಯ ಶತಮಾನದಲ್ಲಿ ಶರಣರ ವಚನ ಪ್ರಕಾರಕ್ಕೆ ಹೊಸ ಆಯಾಮ ದೊರಕಿತು. ಅಂತಹ ಹೊಸ ಹೊಸ ಆಯಾಮಗಳು ಈ ಪ್ರಕಾರಕ್ಕೆ ದೊರಕಬಹುದಾದ ಸಾಧ್ಯತೆಗಳನ್ನು ನಿರೀಕ್ಷಿಸುವತ್ತ ಈವರೆಗಿನ ಆಧುನಿಕ ವಚನ ಸೃಷ್ಟಿ ನಮ್ಮನ್ನು ಪ್ರೇರೇಪಿಸುತ್ತದೆ.

ಜ. ಚ. ನಿ. ಯವರನ್ನು ಬಿಟ್ಟರೆ ಹೆಚ್ಚು ಸಂಖ್ಯೆಯಲ್ಲಿ ವೀರಶೈವ ಧಾರ್ಮಿಕ ಚೌಕಟ್ಟಿನಲ್ಲಿ ವಚನಗಳನ್ನು ರಚಿಸಿದವರು ಮಹದೇವ ಬಣಕಾರರು. ಇವರು ವಚನಗಳನ್ನು ಸ್ಥಳಾನುಸಾರಿಯಾಗಿ ವಿಂಗಡಿಸಿಕೊಂಡು ರಚಿಸಿದ್ದಾರೆ. ಬಹಳಷ್ಟು ವಚನಗಳು ಶರಣ ವಚನಗಳ ಸತ್ವದಿಂದ ಪ್ರಭಾವಿತವಾಗಿವೆ. ಆದರೂ ಹೋಲಿಕೆ, ದೃಷ್ಟಾಂತಗಳಲ್ಲಿನ ನಾವೀನ್ಯತೆ ಓದುಗರ ಗಮನ ಸೆಳೆಯುತ್ತದೆ. ಧಾರ್ಮಿಕ ವಲಯದ ಭ್ರಷ್ಟಸ್ವರೂಪವನ್ನು ಖಂಡಿಸುವಲ್ಲಿ ಇವರ ವಚನಗಳು ವಿಚಿತ್ರ ರೀತಿಯ ವೊನಚನ್ನೂ ತೀಕ್ಷ್ಣತೆಯನ್ನೂ ಪಡೆಯುತ್ತವೆ. `ಗುರು', `ಲಿಂಗ', ` ಜಂಗಮ', `ಮಾಯೆ', `ಅನುಭಾವ ' ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಬಣಕಾರರ ವಚನಗಳು ಶರಣರ ಪ್ರಸಿದ್ಧ ವಚನಗಳ `ದನಿ'ಯನ್ನೇ ನೆನಪಿಗೆ ತರುತ್ತವೆ. ಆದರೂ ವಿಷಯ ಪ್ರತಿಪಾದನೆಯಲ್ಲಿ ಸ್ವಂತಿಕೆ ಇಲ್ಲದಿಲ್ಲ. ದೇವಾಲಯ, ತೀರ್ಥಸ್ನಾನಗಳನ್ನು ಅವರು ಖಂಡಿಸಿರುವ ರೀತಿ ಚಮತ್ಕಾರಿಕವಾಗಿದೆ.

``ನಿಮ್ಮ ನೋಡಲೆಂದು ದೇವಾಲಯಕೆ ಹೋದರೆ
ಅಲ್ಲಿ ದೇವ ಲಯನಾಗಿದ್ದನಯ್ಯ ;
ನಿಮ್ಮ ನೋಡಲೆಂದು ತೀರ್ಥಯಾತ್ರೆಗೆ ಹೋದರೆ
ಅಲ್ಲಿ ದೇವ ತೀರ್ಥ ಅರ್ಥಿಯಾಗಿದ್ದನಯ್ಯ !"

(` ಮಹದೇವ ಬಣಕಾರ ವಚನಗಳು ' ಪು : ೩೩
ಸಂಖ್ಯೆ : ೬೪)

ಮಧ್ಯಮ ವರ್ಗದ ಆಶಯಗಳು ಆಧುನಿಕ ವಚನಗಳ ಸಾಮಾಜಿಕ ಧೋರಣೆಯನ್ನು ನಿರ್ಧರಿಸಿವೆ.ಅಧಿಕಾರದ ದಬ್ಬಾಳಿಕೆಯ ವಿರುದ್ಧ ದನಿ ಎತ್ತಬೇಕಾದರೂ ಮಧ್ಯಮ ವರ್ಗಕ್ಕಿರುವ ಮಿತಿ ವಿಶಿಷ್ಟವಾದುದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ಜನಸಾಮಾನ್ಯರ ಸ್ಥಿತಿ ಗತಿಗಳ ವಿವೇಚನೆಯು ಆಧುನಿಕ ವಚನಗಳಲ್ಲಿ ಸಶಕ್ತವಾಗಿಯೇ ನಡೆದಿವೆ. ಚುನಾವಣೆ, ತಂತ್ರ, ಕಾನೂನು, ಶಾಸನ, ಮಹಿಳೆಯ ಶೋಷಣೆ, ವಿಕ್ಕುಕಾಣದ ಯುವ ಪೀಳಿಗೆ, ಇತ್ಯಾ

ಷಯಗಳ ಬಗೆಗೆ ಆಧುನಿಕ ವಚನಕಾರರು ಎಚ್ಚರವಾಗಿದ್ದಾರೆ. ಒಟ್ಟಿನಲ್ಲಿ ಸ್ವಾತಂತ್ರ್ಯೋತರದ ಪರಿಸ್ಥಿತಿಯ ಬಗೆಗೆ ಆಧುನಿಕ ವಚನಗಳು ಹೆಚ್ಚಿನ ಆಶಾವಾದವನ್ನು ವ್ಯಕ್ತಪಿಸಲಿಲ್ಲ.

ತನ್ನೆಲ್ಲ ಸೌಂದರ್ಯ, ಸಮೃದ್ಧಿ, ವೈವಿಧ್ಯದಿಂದ ವಿಜೃಂಭಿಸುವ ಈ ಬದುಕಿನ ಕರಾಳ ಮುಖವನ್ನು ಅರ್ಥೈಸುವಲ್ಲಿ ಆಧುನಿಕ ವಚನಕಾರರ ಪ್ರಧಾನ ಒಲವು ಸೌಂದರ್ಯಾತ್ಮಕ ಲೆಯಲ್ಲಿಯೇ ಇದೆ. ಜೀವನದ ವೈಭವದಲ್ಲಿ ಬಡತನವೂ ಒಂದು ಭಾಗ್ಯಪ್ರಪಂಚ ಎಂಬ ಆಶಯವು ಬದುಕಿಗೆ ಜೀವಚೈತನ್ಯವನ್ನು ಒಪ್ಪಿಕೊಳ್ಳುವ ಜೀವಪರ ಧೋರಣೆಯಾಗುತ್ತದೆ.

ಕಾದಂಬರಿ

- ಗುರುಪಾದ ಮರಿಗುದ್ದಿ

ಒಂದು ಶತಮಾನದ ಇತಿಹಾಸ ಹೊಂದಿರುವ ಕನ್ನಡ ಕಾದಂಬರಿಯು, ಕನ್ನಡ
ಸೃಜನಶಕ್ತಿಯ ಅನೇಕ ಪ್ರಯೋಗಗಳನ್ನು, ಸಾಮರ್ಥ್ಯಗಳನ್ನು ಅಭಿವ್ಯಕ್ತಗೊಳಿಸುತ್ತ
ಬಂದಿರುವುದು ಅಧ್ಯಯನ ಯೋಗ್ಯವಾಗಿದೆ. ಐರೋಪ್ಯ ಕಾದಂಬರಿ ಔದ್ಯೋಗಿಕ ಕ್ರಾಂ
ಮತ್ತು ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಗಳ ಮುಖಾಮುಖಿಯಲ್ಲಿ ರೂಪಗೊಂಡರೆ
ಭಾರತೀಯ ಕಾದಂಬರಿಯು ವಸಾಹತುಶಾಹಿ ಮತ್ತು ಹೊಸ ರಾಷ್ಟ್ರೀಯತೆಯ ಅನುಭವದ
ಹಿನ್ನೆಲೆಯಲ್ಲಿ ಮೈದೋರಿತು. ಆಂಗ್ಲಭಾಷಾ ಶಿಕ್ಷಣ, ಸಂಪರ್ಕ ಹಾಗೂ ಬ್ರಿಟಿಷ ಆಡಳಿತದಿಂ
ಭಾರತೀಯ ಲೇಖಕರಿಗೆ ಯುರೋಪಿನ ಸಾಹಿತ್ಯರೂಪಗಳ ಬಗ್ಗೆ ಹೊಸ ಅರಿವು ಬಂದಿತು
ಒಂದೆಡೆಗೆ ಮಹಾಕಾವ್ಯ ನಾಟಕ ಪುರಾಣ ಇತಿಹಾಸಗಳ ಆದರ್ಶಗಳನ್ನು, ಇನ್ನೊಂದೆಡೆ
ಜನಜೀವನದ ಏರುಪೇರುಗಳನ್ನು, ವಿವರಗಳನ್ನು ಗರ್ಭೀಕರಿಸಿಕೊಂಡಿದ್ದ ಪಾಶ್ಚಾತ್ಯ
ಕಾದಂಬರಿ ಪ್ರಕಾರ, ಭಾರತೀಯರಿಗೆ ಸಿದ್ಧರೂಪದಲ್ಲಿ ದೊರೆತದ್ದು ನಿಜ. ಆದರೆ ಅದ
ಎಲ್ಲ ವಿಚಾರಗಳಲ್ಲಿ ವಿದೇಶಿ ಮಾದರಿಯಾಗಿ ಮುಂದುವರೆಯಲಿಲ್ಲ. ಪರಂಪರಾಗ
ಭಾರತೀಯ ಬದುಕಿನ ತತ್ವಾದರ್ಶಗಳನ್ನು, ಮೌಲ್ಯಗಳನ್ನು ಕಾದಂಬರಿ ಪ್ರಕಾರ ಒಳಗೊಳ್ಳಲ
ಸಾಧ್ಯವಾಯಿತು.

ಕನ್ನಡ ಕಾದಂಬರಿಯು ಒಂದು ಸಾಹಿತ್ಯದ ಪ್ರಕಾರವಾಗಿ ಸ್ವೀಕೃತವಾಗುವ ಮೊದಲ
ಆ ದಿಸೆಯಲ್ಲಿ ಭಾಷಿಕ ಸಿದ್ಧತೆ ಆರಂಭಗೊಂಡಿತ್ತು.[೧] ಯಾದವನ `ಕಲಾವತಿ' (೧೮೧೫
ಮುಮ್ಮಡಿ ಕೃಷ್ಣರಾಜ ಒಡೆಯರ `ಸೌಗಂಧಿಕಾ ಪರಿಣಯ ' (೧೮೨೧)ಗಳು ಗದ್ಯ ಕಾ
ಗಳಂತಿದ್ದು, ಕಥಾನಕದಲ್ಲಿ ಬಣ್ಣನೆಯಲ್ಲಿ `Romance' ಮಾದರಿಗಳನ್ನು ಹೋಲುತ್ತವ
ಕೆಂಪು ನಾರಾಯಣನ `ಮುದ್ರಾಮಂಜೂಷ ' ಭಾಷೆಯ ಸರಳತೆ ಸ್ಪಷ್ಟತೆಗಳಿಂದ ಕಥ
ಸಂವಹನಕ್ಕೆ ನಾಂದಿ ಹಾಡಿತು. ಕಾದಂಬರಿ ರೂಪುಗೊಳ್ಳುವ ಮೊದಲಿನ ಪ್ರಯತ್ನಗಳಲ್ಲಿ ಇದ
ಹೆಚ್ಚಿನ ಮಹತ್ವ ನೀಡಲಾಗುತ್ತಿದೆ. ಆದರೆ ಮುದ್ರಾಮಂಜೂಷವಾಗಲಿ, ಮುದ್ದಣ ಕವಿ
ಅಪೂರ್ಣವಾದ ಗೋದಾವರಿಯಾಗಲಿ, ಇಂತಹ ಇನ್ನೂ ಕೆಲವು ಪ್ರಯತ್ನಗಳಾಗಲಿ ಕನ್ನ
ಗದ್ಯವು ಕಾದಂಬರಿಗಾಗಿ ಸಿದ್ಧಗೊಳ್ಳಲು ಕಾರಣವಾದವೇ ಹೊರತು ಕಾದಂಬರಿ ಸ್ವರೂಪ
ವಿಶೇಷ ಕೊಡುಗೆ ನೀಡಲಿಲ್ಲ.

ಕಾದಂಬರಿ ಸ್ವರೂಪ ಕನ್ನಡದಲ್ಲಿ ರೂಢಗೊಂಡದ್ದು ಗಳಗನಾಥ ಮ
ವೆಂಕಟಾಚಾರ್ಯರ ಅನುವಾದಗಳಿಂದ. ಮರಾಠಿಯ ಹರಿನಾರಾಯಣ ಆಪ್ಟೆಯವರ ಕಾದಂ

ಳು ಗಳಗನಾಥರ ಮೂಲಕ, ಬಂಗಾಲಿಯ ಬಂಕಿಮಚಂದ್ರರ ಕಾದಂಬರಿಗಳು
ಂಕಟಾಚಾರ್ಯರ ಮೂಲಕ ಕನ್ನಡಕ್ಕೆ ಬಂದವು. ಬಂಗಾಲದಲ್ಲಿ ಬೀಸುತ್ತಿದ್ದ ರಾಷ್ಟ್ರೀಯತೆ
ಮತ್ತು ಸುಧಾರಣೆಯ ಗಾಳಿ ವೆಂಕಟಾಚಾರ್ಯರ ಅನುವಾದದಿಂದಾಗಿ ದೂರದ ಮೈಸೂರು
ಪ್ರಾಂತ್ಯಕ್ಕೂ ವ್ಯಾಪಿಸಿತು. ಬಂಗಾಲಿ ಭಾಷೆಯ ಯಥಾವತ್ತಾದ ಅನುವಾದದಿಂದ ಒಂದು
ಬಗೆಯ ಕೃತಕತೆ, ಸುದೀರ್ಘ ಸಮಾಸ ವಾಕ್ಯಗಳಿಂದ ಭಾಷೆಯ ಪೆಡಸುತನ ಅಲ್ಲಲ್ಲಿ ಕಾಣಿಸಿದರೂ,
ಾದಂಬರಿಗಳು ಓದುಗರನ್ನು ಸೆಳೆದುಕೊಂಡವು. ಅದರಂತೆ ಉತ್ತರ ಕರ್ನಾಟಕದಲ್ಲಿ ಗಳಗನಾಥರ
ನುವಾದಗಳು ಸ್ವದೇಶಿ ಭಾವನೆಗಳಿಗೆ ಪ್ರಚೋದನೆ ನೀಡಿದವು. ಗಳಗನಾಥರ ಶೈಲಿ
ಹಜವಾಗಿಯೂ ಸರಳವಾಗಿಯೂ ಓದುಗರಿಗೆ ಆಪ್ತವೆನಿಸಿತು. ನಿರೂಪಕ ಓದುಗರೊಂದಿಗೆ
ಲಿತ ಪ್ರಬಂಧಗಳ ಹಾಗೆ ಆತ್ಮೀಯ ಸಂಬಂಧ ಸ್ಥಾಪಿಸುತ್ತಾನೆ. ``ಪ್ರಿಯ ವಾಚಕರೆ..
ವ್ಯಯಸ್ಥರಾದ ನಿಮ್ಮಲ್ಲಿ ಬಹುಜನರು ಮನಸ್ಸಿನಲ್ಲಾದರೂ ಒಪ್ಪಿಕೊಳ್ಳ ಬಹುದೆಂದು
ನುಭವದಿಂದ ಹೇಳಬಹುದಾಗಿದೆ.'' ``ಸದ್ಯಕ್ಕೆ ಹೆಗ್ಗನ ವಾಸಸ್ಥಳದ ಪರಿಚಯವನ್ನು ನಾವು
ಮಾಡಿಕೊಡುವೆವು. ಅದಕ್ಕಾಗಿ ವಾಚಕರು ನಮ್ಮೊಡನೆ ಹೆಗ್ಗನ ಬೆನ್ನುಹತ್ತಿ ಬರಬೇಕು.''[೨] ಈ
ರನಾದ ಬರವಣಿಗೆಯ ಕಾರಣ ಅಂದಿನ ಸುಶಿಕ್ಷಿತರಲ್ಲಿ ಕಾದಂಬರಿಗಳು ಜನಪ್ರಿಯಗೊಂಡವು.
ಬರಾರಿ ಕಾದಂಬರಿಗಳ ಅನುವಾದದ ಹಿಂದೆ ಗಳಗನಾಥರಿಗೆ ಕನ್ನಡಿಗರಲ್ಲಿ ದೇಶದ ಬಗ್ಗೆ ಭಾಷೆಯ
ಗ್ಗೆ ಸ್ವಾಭಿಮಾನ ತುಂಬುವ, ನೈತಿಕ ಮೌಲ್ಯಗಳನ್ನು ಜಾಗೃತಗೊಳಿಸುವ ಉದ್ದೇಶ ಮಿಗಿಲಾಗಿತ್ತು.
ಬಾಧಪಕರುಣಾವಿಲಾಸ ಎಂಬ ಸ್ವತಂತ್ರ ಕಾದಂಬರಿಯನ್ನೂ ಅವರು ಬರೆದರು. ವೆಂಕಟಾಚಾರ್ಯರು
ಮತ್ತು ಗಳಗನಾಥರು ತಮ್ಮ ಅನುವಾದ ಕೃತಿಗಳಿಂದ ಕನ್ನಡ ಕಾದಂಬರಿಗೆ ಖಚಿತ ಆಕಾರ
ೀಡಲು ಯತ್ನಿಸಿದರು. ಸುಶಿಕ್ಷಿತ ಮಧ್ಯಮ ವರ್ಗದ ಜನರು ಅವರ ಕಾದಂಬರಿಗಳಿಂದ
ಾರತೀಯತೆಯ ದೃಷ್ಟಿಕೋನವನ್ನು, ಕಾದಂಬರಿ ಓದುವ ಹವ್ಯಾಸವನ್ನು ಬೆಳೆಸಿಕೊಂಡರು.
ಕಾದಂಬರಿ' ಎಂಬ ಹೆಸರು ಸಾಹಿತ್ಯ ಪ್ರಕಾರಕ್ಕೆ ವಿಶಿಷ್ಟವಾಗಿ ಬಳಕೆಗೊಂಡದ್ದು ಕೂಡ
ಇವರಿಂದಾಗಿಯೆ [೩]. ಅನುವಾದಯುಗದಲ್ಲಿ ಕನ್ನಡದ ಸ್ವತಂತ್ರ ಕಾದಂಬರಿಗಳು ಕೂಡ
ಾಣಿಸಿಕೊಂಡವು. ಗುಲ್ವಾಡಿ ವೆಂಕಟರಾಯರ ಇಂದಿರಾಬಾಯಿ, ಬೋಳಾರ ಬಾಬುರಾವರ ವಾಗ್ವೇವಿ,
ರೂರ ವಾಸುದೇವಾಚಾರ್ಯರ ಇಂದಿರೆ, ಎಂ. ಎಸ್. ಪುಟ್ಟಣ್ಣನವರ ಮಾಡಿದ್ದುಣ್ಣೋ
ಮಹಾರಾಯಾ ಮುಖ್ಯವಾದ ಸ್ವತಂತ್ರ ಕಾದಂಬರಿಗಳು. ಸನಾತನ ಮೌಲ್ಯಗಳನ್ನು ಎತ್ತಿಹಿಡಿದು,
ೈತಿಕತೆ ತುಂಬುವುದು ಇವುಗಳಲ್ಲಿಯ ಪ್ರಧಾನ ಆಶಯವಾಗಿದೆ. ಪರಕೀಯ ಆಡಳಿತವನ್ನು,
ಸಹತುವಾದವನ್ನು ಅಲ್ಲಗಳೆಯುವ (ದುರ್ಬಲ) ಧ್ವನಿಯೂ ಇವುಗಳಲ್ಲಿದೆ. ಇದೇ ಕಾಲಕ್ಕೆ
ಾಶ್ಚಾತ್ಯ ಪ್ರಚಾರವಾದದ ಬೆಳಕಿನಲ್ಲಿ ಭಾರತೀಯ ರೂಢಿ-ಸಂಪ್ರದಾಯ ಶರಣತೆಯನ್ನು ಪ್ರಶ್ನಿಸುವ
ದೆಗಾರಿಕೆಯೂ ಇಲ್ಲಿ ವ್ಯಕ್ತವಾಗಿದೆ. ಇಂದಿರಾಬಾಯಿ ಕಾದಂಬರಿಯು ವಾಸ್ತವವಾದಿ ಮಾರ್ಗದ,
ಸಾಮಾಜಿಕ ಪ್ರಜ್ಞೆಯ ಮಹತ್ವದ ಕೃತಿ. ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳಲ್ಲಿ ಹುಟ್ಟಿಕೊಂಡ
ಈ ಕಾದಂಬರಿ ವಿಧವಾ ಸಮಸ್ಯೆಯನ್ನು ಪ್ರಬುದ್ಧವಾಗಿ, ಕಲಾತ್ಮಕವಾಗಿ ಚಿತ್ರಿಸುತ್ತದೆ. ಬಾಲ್ಯವಿವಾಹಕ್ಕೆ
ಬಲಿಯಾಗಿದ್ದ ಇಂದಿರಾಬಾಯಿ ತೋರುವ ದಿಟ್ಟತನ, ಬಂಡು ಸ್ವಭಾವ ಅಂದಿನ ಕಾಲಕ್ಕೆ
ಸಹಜವಾಗಿರಲಿಲ್ಲ. ಅದರ ಒಂದು ಭಾಗವಾಗಿ ಈ ವಿವರಣೆಯನ್ನು ಗಮನಿಸಬೇಕು. `` ಆ
ಮೇಲೆ ಸಂತರು ಎರಡ್ಮೂರು ದಿವಸಗಳ ಪರ್ಯಂತರ ಭಕ್ತವಿಜಯ, ದಾಸವಿಜಯ, ಸಂತಸೇವಾಮೃತ
ವೇ ಮುಂತಾದ ಅನೇಕ ಗ್ರಂಥಗಳನ್ನೊಂದಿ ವಿವರಣ ಭಾಷಣ ನಿರೂಪಣಗಳನ್ನು ಮಾಡಿದರು.

ಆದರೂ ಇಂದಿರಾಬಾಯಿಯ ಮನಸ್ಸು ಲೇಶಾಂಶವಾದರೂ ಪರಿಣಮಿಸಲಿಲ್ಲ. ಅವಳು ಮೊದಲಿನಂತೆಯೇ ಯಾರನ್ನಾದರೂ ಕಾಣಿಸಿಕೊಳ್ಳದೆ ಸಂತಮಂಡಲಿಯವರಲ್ಲಾವಸಾದರೂ ಒಂದೊಂದು ಸಮಯದಲ್ಲಿ ಅವಳಿದ್ದ ಕೋಣೆಯ ಬಾಗಿಲಿನ ಸಮೀಪ ಬಂದರೆ, ಕೂಡಲೆ ಬಾಗಿಲು ಮುಚ್ಚುವುದು, ಅಥವಾ ಅವನು ಅಲ್ಲಿಂದಲೇ ತಿರುಗಿ ಹೋಗುವ ಹಾಗೆ ತನ್ನೊಳು ತಾನೇ ಏನಾದರೂ ಮಾತನಾಡುವುದು, ಏವಂಚ ಅವಳು ಸಂತಮತಾವಲಂಬನ ಮಾಡುವುದು ದುರ್ಲಭವೆಂದು ಕಾಣಿಸುವ ಹಾಗಿನ ಎಲ್ಲಾ ಚಿನ್ಹೆಗಳನ್ನು ತೋರಿಸುತ್ತಾ ಬಂದಳು. ತಂದೆ ತಾಯಿಗಳು ಎಷ್ಟು ಸಾರಿ ಹೇಳಿದರೂ ಕೇಳುತ್ತಿದ್ದಿಲ್ಲ. ''೪ ಗಂಡ ಸತ್ತಾಗ ಇಂದಿರಾಬಾಯಿ ತಾಯಿ ತಂದೆಯರಿಗೆ ಹೇಳುವ ಮಾತುಗಳಲ್ಲಿಯೂ ಸ್ತ್ರೀವಾದಿ ಧೋರಣೆಯು ಸ್ಪಷ್ಟವಾಗಿದೆ. ಇದರಂತೆ ವಾಗ್ದೇವಿ ಮತ್ತು ಇಂದಿರೆ ಕೂಡ ಸ್ತ್ರೀ ಸಮಸ್ಯೆಗೆ ಸಂಬಂಧ ಪಡುತ್ತವೆ. ಇಪ್ಪತ್ತನೆಯ ಶತಕದ ಆಚೀಚೆಯ ಕಾಲಾವಧಿಯಲ್ಲಿ ಓದುಗರ ಗಮನವನ್ನು ಸಾಮಾಜಿಕ ಸಮಸ್ಯೆಯತ್ತ ಸೆಳೆಯುವಲ್ಲಿ ಕಾದಂಬರಿಗಳು ಸಮರ್ಥವಾದವು.

ಪುಟ್ಟಣ್ಣನವರ ಮಾಡಿದ್ದುಣ್ಣೊ ಮಹಾರಾಯ ಕಾದಂಬರಿಯು ಮೈಸೂರು ಸಂಸ್ಥಾನದ ಇತಿಹಾಸದ ಆವರಣ ಪಡೆದರೂ ವಾಸ್ತವಮಾರ್ಗದ ಒಳ್ಳೆಯ ಪ್ರಯೋಗವಾಗಿದೆ. ಕಾದಂಬರಿಯ ಸಾಹಿತ್ಯದ ಸ್ವರೂಪ ಕಥೆ - ಉಪ ಕಥೆಗಳ ನಿರೂಪಣೆಯಲ್ಲಿ, ಪಾತ್ರಗಳ ಸ್ವಭಾವ ಚಿತ್ರಣದಲ್ಲಿ ಅನುಭವಕ್ಕೆ ಬರುತ್ತದೆ. ``ತಮ್ಮ ಕಾದಂಬರಿಯ ಬಹಳ ಚಿಕ್ಕದಾದ ಮೂಲ ಕಥೆಗೆ ಸಹಾಯಕವಾಗುವ ಇನ್ನಿತರ ಉಪಕಥೆಗಳು, ವೃತ್ತಾಂತಗಳು, ವರ್ಣನೆಗಳು ಮೊದಲಾದವುಗಳನ್ನು ರೋಚಕವಾಗಿ ಹೇಳುತ್ತಾ ಹೋಗುವ ಪುಟ್ಟಣ್ಣನವರ ನಿರೂಪಣಾ ವಿಧಾನದಲ್ಲಿ ಕುತೂಹಲ ಕಡೆಯವರೆಗೂ ಇರುತ್ತದೆ ''೫ ಎಂಬುದು ಗಮನಾರ್ಹವಾಗಿದೆ. ಮೊದಲ ಹಂತದ ಕನ್ನಡದ ಈ ಕಾದಂಬರಿಗಳಿಂದ ಒದಗಿದ ಪ್ರಯೋಜನಗಳಲ್ಲಿ ಎರಡು ಅಂಶಗಳು ಮುಖ್ಯವೆನಿಸುತ್ತವೆ. ಮೊದಲನೆಯದಾಗಿ ಕನ್ನಡ ಕಾದಂಬರಿಗಳ ವಾಸ್ತವವಾದಿ ಮಾರ್ಗವು ಗಟ್ಟಿಯಾಗಿ ತಲೆಯೆತ್ತಿತು. ಸಾಮಾಜಿಕ ಸಮಸ್ಯೆಗಳ ಚಿಂತನೆ ಇಲ್ಲಿ ಪ್ರಧಾನವಾಯಿತು. ಎರಡನೆಯದಾಗಿ ಕಾದಂಬರಿಯ ಭಾಷೆ, ಅಭಿವ್ಯಕ್ತಿ, ತಂತ್ರಗಳು ಸಿದ್ಧಗೊಂಡವು. ಮುಂದಿನ ಕಾದಂಬರಿಕಾರರಿಗೆ ಇದು ನೆಲೆಗಟ್ಟಾಯಿತು.

ಮುಂದಿನ ದಶಕಗಳಲ್ಲಿ ಕನ್ನಡ ಕಾದಂಬರಿಯು ಸ್ವತಂತ್ರ ಅಸ್ತಿತ್ವ ಪಡೆಯಿತಷ್ಟೇ ಅಲ್ಲ, ಈ ಪ್ರಕಾರದ ಹಿರಿಮೆ ಗರಿಮೆಗಳಿಗೆ ನಿದರ್ಶನವಾಗಬಲ್ಲ ಕೃತಿಗಳನ್ನು ನೀಡಿತು. ಭಾರತೀಯ ಸ್ವಾತಂತ್ರ್ಯ ಹೋರಾಟ, ಸ್ವದೇಶಿ ಆಂದೋಲನ, ಗಾಂಧೀಜಿಯವರ ವಿಚಾರಧಾರೆಗಳಿಂದ ಅಂದಿನ ಬರಹಗಾರರು ಒಂದಿಲ್ಲೊಂದು ತೆರನಾಗಿ ಪ್ರಭಾವಿತರಾಗಿದ್ದರು. ಶಿಕ್ಷಣದ ಪ್ರಸಾರದಿಂದಾಗಿ ಡಿಕನ್ಸ್, ಸ್ಕಾಟ್, ಝೋಲಾ, ಟಾಲಸ್ಟಾಯ, ಗಾರ್ಕಿಯಂತಹ ಕಾದಂಬರಿಕಾರರು ಪರಿಚಿತವಾಗಿದ್ದರು. ಇವುಗಳಿಂದಾಗಿ ಈ ಹಂತದ ಕನ್ನಡ ಕಾದಂಬರಿಗಳು ವಸ್ತು - ತಂತ್ರಗಳಿಂದ ಮತ್ತೆ ಭಿನ್ನವಾಗಿ ಕಾಣಿಸುತ್ತವೆ. ಕಾನೂರು ಹೆಗ್ಗಡತಿ, ಮರಳಿ ಮಣ್ಣಿಗೆ, ಸಮರಸವೆ ಜೀವನ, ಗ್ರಾಮಾಯಣ ಮುಂತಾದ ಪ್ರಮುಖ ಕಾದಂಬರಿಗಳಲ್ಲಿ ಬದುಕಿನ ಪ್ರವಾಹವೇ ತುಂಬಿಕೊಂಡಿದೆ. ಕಾನೂರು ಹೆಗ್ಗಡತಿ ಕಾದಂಬರಿಯು ಮಲೆನಾಡಿನ ಜೀವನಕ್ರಮದ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ಕಥನಕ್ರಮದ ಕಲೆಗಾರಿಕೆಯಲ್ಲಿ ಇನ್ನಿಲ್ಲದಂತೆ ಹಿಡಿದಿಟ್ಟಿದೆ. ಸಮಾಜದ ಅನೇಕ ಸ್ತರಗಳ ಜನಜೀವನ ಓದುಗರ ಕೈಗೆ

ಎಟಕುವಂತಿದೆ. ಬೇಟೆ, ಜೂಜು, ಕಳ್ಳಂಗಡಿ, ಕೊಯ್ಲು, ಪ್ರಣಯ, ಕಾಮ, ತ್ಯಾಗ, ಆದರ್ಶ, ಕನಸು, ಆಸೆ, ಭ್ರಮೆ, ಮೋಸಗಳ ಜನರೆಲ್ಲ ಅವರವರ ಪರಿಸರದಲ್ಲಿ ಉಸಿರಾಡುತ್ತಾರೆ. ಆಧುನಿಕ ಶಿಕ್ಷಣದ ಬಳುವಳಿಯಾದ ವೈಚಾರಿಕತೆ ಹೂವಯ್ಯನನ್ನು ಕಾಡಿನ ಬದುಕಿಗೆ ಪರಕೀಯನಾಗಿ ಮಾಡಿದೆ. ಆದರೆ ಪ್ರಕೃತಿ, ಕಾಡು, ಗಿಡಮರಗಳು ಆತನನ್ನು ಸೂಕ್ಷ್ಮನನ್ನಾಗಿ, ಸಂವೇದನಾಶೀಲನನ್ನಾಗಿ ಮಾಡುತ್ತವೆ. ಆತನ ವ್ಯಕ್ತಿತ್ವ ಊರ್ಧ್ವಗಾಮಿಯಾಗಿದ್ದರೆ, ರಾಮಯ್ಯ, ಚಂದ್ರಯ್ಯಗೌಡರು, ಸುಬ್ಬಮ್ಮ, ಕೃಷ್ಣಪ್ಪರು ಅವನತಿಗೆ ಸಾಗುತ್ತಾರೆ. ವಾಸುವಿನ ಜೇಬುದರ್ಶನ, ಶಾಮಯ್ಯಗೌಡರ ನಾಮದ ಪೆಟ್ಟಿಗೆಯ ವರ್ಣನೆ, ಕೌಲಿಕರು ಹಾಕುವಿಕೆಗಳೆಲ್ಲ ವಾಸ್ತವವಾಗಿ ಧೋರಣೆಯ ಉತ್ತಮ ನಿದರ್ಶನಗಳಾಗಿವೆ. ಒಟ್ಟಿನಲ್ಲಿ ಇಲ್ಲಿಯ ಬದುಕಿನ ವೇಗ ರಭಸದ್ದಾಗಿದೆ ; ಪ್ರತಿ ವಿವರ ವರ್ಣನೆಗಳೂ ಸಾವಯವಸಂಬಂಧ ಪಡೆದಿವೆ.

ಕಾರಂತರ ಮರಳಿ ಮಣ್ಣಿಗೆಯಲ್ಲಿ ಕರಾವಳಿ ತೀರದ ಮೂರು ತಲೆಮಾರಿನ ಬದುಕು ಹರಹಿಕೊಂಡಿದೆ. ರಾಮೈತಾಳರ ಸಹಜ ಮಣ್ಣಿನ ಬದುಕು, ಲಚ್ಚನ ನೆಲೆ ತಪ್ಪಿದ ಬದುಕು, ರಾಮನ ಪ್ರಜ್ಞಾಪೂರ್ವಕ ಆಯ್ಕೆಯಾದ ಮಣ್ಣಿನ ಬದುಕುಗಳು, ಹಲವು ಸಂಬಂಧಗಳ ಸಂಘರ್ಷ, ಸಾತತ್ಯ, ಸಮಸ್ಯೆ, ಸೋಲು, ಗೆಲವುಗಳಲ್ಲಿ ಮೂರ್ತಗೊಂಡಿವೆ. ದಕ್ಷಿಣಕನ್ನಡ ಜಿಲ್ಲೆಯ ಬದಲಾಗುತ್ತಿರುವ ಜೀವನಕ್ರಮ ಮತ್ತು ಜೀವನ ಮೌಲ್ಯಗಳ ವಿಶ್ಲೇಷಣೆಯು, ಅನೇಕ ಸಂಗತಿಗಳತ್ತ ಬೆಳಕುಬೀರುತ್ತದೆ. ಪಾರೋತಿ, ಸರಸೋತಿಯರ ಪಾತ್ರಗಳು ಕನ್ನಡ ಕಾದಂಬರಿಗಳ ಪಾತ್ರವರ್ಗದಲ್ಲಿಯೇ ಉಜ್ವಲವಾಗಿವೆ. ಇದರಂತೆ ಪಾದಳ್ಳಿಯ ಬದುಕಿನ ಸುತ್ತ ಹೆಣೆದುಕೊಂಡ ಗ್ರಾಮಾಯಣ ಉತ್ತರ ಕರ್ನಾಟಕದ ಜನ ಜೀವನಕ್ಕೆ ಕನ್ನಡಿ ಹಿಡಿಯುತ್ತದೆ. ಸಮರಸವೆ ಜೀವನ ಇನ್ನೂ ಹೆಚ್ಚಿನ ಕಾಲ ಪ್ರದೇಶಗಳ ವ್ಯಾಪ್ತಿಯಲ್ಲಿ ವ್ಯಕ್ತಿಗಳ ವಿಕಾಸ, ಅಧಃಪತನ, ಗುಣಾವಗುಣಗಳ ಚಿಂತನೆಗೆ ತೊಡಗುತ್ತದೆ. ನಿಸರ್ಗ ಮತ್ತು ಮಲೆಗಳಲ್ಲಿ ಮದುಮಗಳು ಕಾದಂಬರಿಗಳು ವಿಶಿಷ್ಟ ಪ್ರಾದೇಶಿಕತೆಯ ಕೃತಿಗಳಾಗಿವೆ. ಗ್ರಾಮ ಸಂಸ್ಕೃತಿಯ ವಿವಿಧ ಮುಖಗಳು, ವಿವರಗಳು ಇಲ್ಲಿ ಹಾಸುಹೊಕ್ಕಾಗಿವೆ. ಮಿರ್ಜಿ ಅಣ್ಣಾರಾಯರು ಉತ್ತರ ಕರ್ನಾಟಕದ ಗಡಿ ಪ್ರದೇಶವೊಂದರ ಆಡುಭಾಷೆಗೆ ಸಮೀಪದಲ್ಲಿ ಕೃತಿ ರಚಿಸಿ ನಿಸರ್ಗ ಕೃತಿಯಲ್ಲಿ ಪ್ರಾದೇಶಿಕತೆಯನ್ನು ಸಮರ್ಥವಾಗಿ ತಂದಿದ್ದಾರೆ. ಕಾದಂಬರಿ ಪ್ರಕಾರದ ತಂತ್ರದ ಬಗ್ಗೆ ತಲೆಕೆಡೆಸಿಕೊಳ್ಳದೆಯೂ, ಹಳ್ಳಿಯ ಪ್ರೇಮಿಗಳ ಬದುಕನ್ನು ಹೃದಯಂಗಮವಾಗಿ ಬಿಡಿಸಿದ್ದಾರೆ. ಮಲೆಗಳಲ್ಲಿ ಮದುಮಗಳು ಕೃತಿಯುಲ್ಲಂತೂ ಬದುಕು ಸಹಜವಾದ ಬಣ್ಣ-ವಾಸನೆಗಳೊಂದಿಗೆ ಉಕ್ಕಿ ಹರಿದಂತೆ ಅನುಭವವಾಗುತ್ತದೆ. ಮನುಷ್ಯ - ಪ್ರಕೃತಿಗಳು ಕೈ ಕೈ ಹಿಡಿದೇ ಎದುರಾಗುತ್ತವೆ.

ಸಾಮಾಜಿಕ ಕಾದಂಬರಿಗಳಲ್ಲಿ ಕಾರಂತರಿಗೆ ಪ್ರತ್ಯೇಕ ಸ್ಥಾನವಿದೆ. ಅವರ ಕಾದಂಬರಿಗಳು ಮನುಷ್ಯ ಬದುಕಿನ ಸಂಕೀರ್ಣತೆಯನ್ನು ಸಮಾಧಾನವಾಗಿ ಚಿತ್ರಿಸುತ್ತವೆ. ಮಾನವೀಯ ಸಂಬಂಧಗಳನ್ನು, ಪ್ರಕೃತಿಯ ಪ್ರಭಾವವನ್ನು ಗಂಭೀರವಾಗಿ ಅನ್ವೇಷಿಸುತ್ತವೆ. ಎಲ್ಲ ಸಾಮಾಜಿಕ ನಂಬಿಕೆ, ರೂಢಿ, ಸಂಪ್ರದಾಯಗಳನ್ನು ಕಾರಂತರು ಸಮರ್ಥಿಸದಿದ್ದರೂ, ಅವುಗಳೊಂದಿಗೆ ಬದುಕುವ ಜನರ ಭಾವನೆಗಳನ್ನು ಗೌರವಿಸುತ್ತಾರೆ. ನಿಸರ್ಗವನ್ನು

ಆರಾಧಿಸವಿದ್ದರೂ ಅದರ ಶಕ್ತಿ ಸಾಮರ್ಥ್ಯಗಳನ್ನು ಗುರುತಿಸುತ್ತಾರೆ. ಸ್ಪಾರ್ಧ, ಕ್ರಿರ್ಯ,
ಪ್ರೇಮಗಳನ್ನು ಸಂಯಮದಿಂದ ಚಿತ್ರಿಸುವ ಅವರ ಶೈಲಿ ಕಾರಂತರನದ ಛಾಯೆ ಹೊಂದಿದೆ.
ಸರಸಮ್ಮನ ಸಮಾಧಿಯ ರಹಸ್ಯ, ದೇವದೂತರುದ ವಿಡಂಬನೆ, ಸ್ವಪ್ನದ ಹೊಳಪು
ಭಾವಮಯತೆ, ನಷ್ಟದಿಗ್ಗಜಗಳುದ ವ್ಯಂಗ್ಯಗಳೆಲ್ಲ ತೀವ್ರವಾಗಿ ಕೃತಿಗರ್ಭದಿಂದ ರೂಪ
ಪಡೆಯುತ್ತವೆ. ನಿಧಾನವಾದ ಕಥಾಪ್ರವೇಶ, ಉದ್ವೇಗರಹಿತ ನಿರೂಪಣೆ, ಭಾಷೆಯ
ನಿರಾಡಂಬರತೆ, ವೈಚಾರಿಕ ಸ್ಪರ್ಶಗಳಿಂದಾಗಿ ಕಾರಂತರ ಕಾದಂಬರಿಗಳು ಇತರ ಕೃತಿಗಳಿಂತ
ಬೇರೆಯೇ ಆಗಿ ನಿಲ್ಲುತ್ತವೆ. ಅವರ ಕಾದಂಬರಿಗಳ ಆರಂಭದ ಶೈಲಿಗಾಗಿ ಈ ಭಾಗವನ್ನು
ಗಮನಿಸಬಹುದು ``ಎಷ್ಟೋ ವರ್ಷಗಳ ಹಳೆಯ ಕತೆಯಿದು. ಇಂದಿನ ದಿನಕ್ಕೂ, ಆ ದಿನಕ್ಕೂ
ಆವರಣದಲ್ಲಿ, ಕುಡಿಯರು ಬಾಳಿ ಬದುಕಿದ ರೀತಿಯಲ್ಲಿ, ಬಹುಮಟ್ಟಿನ ವೃತ್ಯಾಸವನ್ನು
ನಾವು ಕಾಣಲಾರೆವಾದರೂ ಕುಡಿಯರ ಕೆಂಚ ಅವನ್ನೆಲ್ಲ ಕಾಣಬಲ್ಲ. ಅವನಿಗೀಗ ಅರವತ್ತು
ವಯಸ್ಸಿರಬಹುದು. ಆ ಅರವತ್ತು ವಯಸ್ಸಿನ ಬಾಳ್ವೆಯಲ್ಲೇ ಅವನ ಮತ್ತು ಅವನ ಬಳಗದ
ಅರಣ್ಯ ಜೀವನದಲ್ಲಿ ಎಷ್ಟೋ ಪರಿವರ್ತನೆಗಳಾಗಿವೆ ಎಂದು ತಿಳಿದುಕೊಂಡಿದ್ದಾನೆ ಆತ
ಕಾಲದ ಎಣಿಕೆ, ಸಂವತ್ಸರಗಳ ಎಣಿಕೆ, ಹೊತ್ತು ಗೊತ್ತುಗಳ ನಿಶ್ಚಿತ ಲೆಕ್ಕ ಕೆಂಚನಿಗಿಲ್ಲ.''
ಬೆಟ್ಟದ ಜೀವ, ಅಳಿದ ಮೇಲೆ, ಚೋಮನದುಡಿ, ಮೂಕಜ್ಜಿಯ ಕನಸುಗಳು, ಮಿದಾರ್ಯರ
ಉರುಳಲ್ಲಿ ಮುಂತಾದ ಕಾದಂಬರಿಗಳ ಬರವಣಿಗೆ ಚೊಕ್ಕವಾಗಿದೆ. ಅವಿವೃಕ್ತಿ
ಕಲಾತ್ಮಕವಾಗಿದೆ. ಮನೋಭಾವ ಸ್ವತಂತ್ರವಾಗಿದೆ. ಸುತ್ತಲಿನ ಪರಿಸರದ ಜನರು ಹೇ
ಬದುಕುತ್ತಾರೆ. ಅವರ ಬೇಕು ಬೇಡುಗಳೇನು, ಏನು ಹೇಳುತ್ತಾರೆ, ಏನು ಮಾಡುತ್ತಾರೆ
ಖಾಸಗಿ ಜೀವನ ಎಂತು, ಸುಖದಲ್ಲಿ ದುಃಖದಲ್ಲಿ ಪ್ರತಿಕ್ರಿಯೆ ಯಾವುದು ಎಂಬೆಲ್
ಅನ್ವೇಷಣೆಯಲ್ಲಿ ಕಾದಂಬರಿಗಳು ಅಮೂರ್ತದರ್ಶನದತ್ತ ಮುಖಮಾಡುತ್ತವೆ. ``ಜೀವ
ಶ್ರದ್ಧೆ ಶಿವರಾಮ ಕಾರಂತರ ಕಾದಂಬರಿಗಳ ಕೇಂದ್ರ ವಸ್ತುವಾಗಿದೆ. ಅವರ ತೋಧ
ಕಾದಂಬರಿಕಾರ ಕಾರಂತರ ಪ್ರಧಾನ ಕಾಳಜಿಯಾಗಿದೆ. ಆ ಶ್ರದ್ಧೆ ಮತ್ತು ಅದರ ತೋಧನೆ
ಪ್ರಕ್ರಿಯೆಯಲ್ಲಿ ಪಡೆಯುವ ಅನುಭವ ಮತ್ತು ಸೋಸಿಕೊಳ್ಳುವ ಅರಿವು ಕಾರಂತ
ಕಾದಂಬರಿಗಳ ಜೀವದ್ರವ್ಯಗಳಾಗಿವೆ''[೭] ಎಂಬುದು ಸೂಕ್ತವಾಗಿದೆ.

ಸಾಮಾಜಿಕ ಕಾದಂಬರಿಗಳು ಪುಟ್ಟಪ್ಪ, ಕಾರಂತರ ಮೂಲಕ ಪ್ರಬುದ್ಧ ಕಲಾತ್
ಸ್ವರೂಪ ಪಡೆಯುವ ಹೊತ್ತಿನಲ್ಲಿ ಹೊಸದೊಂದು ಪ್ರವಾಹ ಇದಕ್ಕೆ ಸೇರಿಕೊಂಡಿತು. ಅನ
ಕಟ್ಟೀಮನಿ, ಬಲ್ಲಾಳ, ನಿರಂಜನ, ತರಾಸು, ಚಿದುರಂಗ ಮುಂತಾದವರ ಪ್ರಗತಿಶೀ
ಮನೋಧರ್ಮದ ಕಾದಂಬರಿಗಳು. ಸಾಮಾಜಿಕ ವಿಷಮತೆಗಳಿಗೆ, ಸಾಂಪ್ರದಾಯ
ವಿರೂಪಗಳಿಗೆ ರಾಪುಗನ್ನಡಿಗಳಾದವು. ಅನಕೃರು ಅನೇಕ ಕಾದಂಬರಿಗಳನ್ನು ಕಿರಿ
ಕಾಲಾವಧಿಯಲ್ಲಿ ನೀಡಿ, ಓದುಗರ ಒಂದು ವರ್ಗವನ್ನು ಬೆಳೆಸಿದರು. ಕಾದಂಬರಿ
ಸ್ವರೂಪ, ತಂತ್ರಗಳ ಬಗ್ಗೆ, ಪ್ರಯೋಗ ಸಾಧ್ಯತೆಗಳ ಬಗ್ಗೆ ಕಾಳಜಿ ಎಷ್ಟರ ಮಟ
ಅವರಿಂದ ಸಾಧ್ಯವಾಗಲಿಲ್ಲ. ಓದುಗರ ಅಭಿರುಚಿಯನ್ನು ಮೇಲಕ್ಕೆತ್ತಲೂ ಅವ
ಯತ್ನಿಸಲಿಲ್ಲ. ಆದರೆ ಮೈಚಳಿ ಬಿಟ್ಟು ವಿಷಮ ದಾಂಪತ್ಯದ ಬಗ್ಗೆ, ವೇಶ್ಯಾವೃತ್ತಿಯ ಬ
ಲೈಂಗಿಕತೆಯ ಬಗ್ಗೆ ಬರೆದರು. ವೈವಿಧ್ಯಮಯವಾದ ಪಾತ್ರವರ್ಗವನ್ನು ಸೃಷ್ಟಿಸಿ
ಸರಳ ಮೋಹಕ ಶೈಲಿಯನ್ನು ರೂಪಿಸಿದರು. ಇದು ನನ್ನ ಮೋಹಕವಾಗಿ, ಉಪ್ಪರ

ವಾಸ್ತವ ಕೃತಿಗಳಲ್ಲಿ ಕಾಣಿಸಿಕೊಂಡಿತು. ಸಿರಂಜನರು ಸಾಮಾಜಿಕ ಸಮಸ್ಯೆಗಳ ವಿವಿಧ ಮುಖಗಳನ್ನು, ಅದರ ಹಿಂದಿನ ಆರ್ಥಿಕ ಕಾರಣಗಳನ್ನು ಗ್ರಹಿಸಿ ಕಾದಂಬರಿಗೆ ಚಿರಿತ್ರೆಯ ಚೌಕಟ್ಟನ್ನು ಒದಗಿಸಲು ಯತ್ನಿಸಿದರು. ಅದರೆ ಸಾಮಾಜಿಕ ಸಮಸ್ಯೆಗಳನ್ನು ಪ್ರಗತಿಶೀಲರು ಮೇಲ್ಪದರಲ್ಲಿ ಗ್ರಹಿಸಿದರು. ಸಮಸ್ಯೆಯನ್ನು ಸಾಕಷ್ಟು ವೈಭವೀಕರಿಸಿ ಸಹಾನುಭೂತಿ ಹುಟ್ಟುವಂತೆ ಮಾಡಿದರೆ ಹೊರತು ಗಂಭೀರ ಚರ್ಚೆಗೆ ಒಳಪಡಿಸಲಿಲ್ಲ. ಏಕಕ್ಕರ ಕಾದಂಬರಿಗಳು ಬರುಬರುತ್ತ ಶಿಥಿಲಗೊಂಡು ಒಂದೇ ಪಡಿಯಚ್ಚಿನಲ್ಲಿ ಕಯಾರಾದಂತೆ ಭಾಸವಾದವು. ವೇಗದ, ಉತ್ಸಾಹದ ಬರವಣಿಗೆಯು ಕಾರಣ ಸಾಹಿತ್ಯಕ ಶಿಲೆಗಾರಿಕೆಯು ಇಲ್ಲವಾಯಿತು. ವರ್ಣನೆ, ವಿವರಣೆ, ನಿರೂಪಕನ ಅಂತರ, ಅಗತ್ಯದ ಸಂವಾದ, ಸಾಟಿಯುತೆಗಳು ಎಲ್ಲೆಲ್ಲಿ ಬರಬೇಕು, ಬರಬಾರದು ಎಂಬುದರ ಔಚಿತ್ಯವನ್ನು ಲಕ್ಷಿಸಲಿಲ್ಲ. ಈ ಮಿತಿಗಳ ನಡುವೆಯೂ ಸಂಧ್ಯಾರಾಗ, ಉದಯರಾಗ, ನಟಸಾರ್ವಭೌಮ, ರಂಗಮ್ಮನ ದರಾರ, ಮೃತ್ಯುಂಜಯ, ಮಾಡಿ ಮಡಿದವರು, ಬೆಂಗಳೂರಿಗೊಂದು ಟಿಕೇಟು ಕಾದಂಬರಿಗಳು ಪ್ರಭಾವಯಾಗಿ ಮೂಡಿಬಂದಿವೆ. ಬಿ.ಎಲ್.ಎಸ್ ' ಬಂಡಾಯ ' ಚದುರಂಗರ 'ವೈಶಾಖ'ಗಳು ನಂತರದ ಬೇರೆ ಮಾರ್ಗಕ್ಕೆ ಸೇರುವ ಗಂಭೀರ ವಿಶ್ಲೇಷಣೆಗೆ ಆಹ್ವಾನಿಸುವ ಕೃತಿಗಳಾಗಿವೆ.

ಸಾಮಾಜಿಕ ಕಾದಂಬರಿಯು ಹೆಜ್ಜೆಗಳು ದಟ್ಟವಾಗಿ ಮೂಡತೊಡಗಿದ ಮೇಲೆ ಐತಿಹಾಸಿಕ ಮತ್ತು ಪೌರಾಣಿಕ ಕಾದಂಬರಿಗಳು ಕನ್ನಡದಲ್ಲಿ ಹುಟ್ಟಿಕೊಂಡವು. ದೇವುಡು, ಮಾಸ್ತಿ, ಆನಂದಕಂದ, ವಟ್ಟಿಸ್ವಾಮಯ್ಯ, ಕೆ. ಪಿ. ಪುಟ್ಟಯ್ಯ, ತರಾಸು, ಶಂಕರ ಮೊಕಾಶಿ ಪುಣೇಕರರು ಈ ಪ್ರಕಾರದ ಒಳ್ಳೆಯ ಕೃತಿಗಳನ್ನು ನೀಡಿದರು. ಸ್ವಾತಂತ್ರ್ಯ ಹೋರಾಟ ಮತ್ತು ರಾಷ್ಟ್ರೀಯತೆಯ ಭಾಗವಾಗಿ ಪುರಾಣ ಇತಿಹಾಸಗಳ ಬಗ್ಗೆ ಹೊಸ ಅರಿವು ಕಾಣಿಸಿತು. ಭಾರತೀಯ ಸಾಮಾಜಿಕ ಸಮಸ್ಯೆಗಳ ಸಂಕೀರ್ಣತೆ ಮತ್ತು ಸೈತಿಕ ಅಧಃಪತನ, ಸಾರ್ವತ್ರಿಕ ಉದಾಸೀನತೆಗಳು ಲೇಖಕರನ್ನು ಕಾಡಿವೆ. " ಸಮಕಾಲೀನ ಸಮಸ್ಯೆಗಳನ್ನು ಪುರಾಣೇತಿಹಾಸಗಳ ಬೆಳಕಿನಲ್ಲಿ ಪರಿಶೀಲಿಸಿ, ಅಲ್ಲಿಯ ಉದಾತ್ತ ಅಂಶಗಳನ್ನು ಜನರಲ್ಲಿ ತುಂಬಲೆಂದು ಮಹಾಕ್ಷತ್ರಿಯ, ಮಹಾಬ್ರಾಹ್ಮಣ, ಚೆನ್ನಬಸವನಾಯಕ, ವಿಕ್ರಮರಾಜೇಂದ್ರ, ಶಾಂತಲಾದಂತಹ ಕಾದಂಬರಿಗಳು ಹುಟ್ಟಿಕೊಂಡವು. ಮಾಸ್ತಿಯವರು ದೇಶಿಯ ರಾಜಮನೆತನಗಳ ಭವ್ಯತೆಯ ಚಿತ್ರವನ್ನು ಬ್ರಿಟಿಷ ಸಾಮ್ರಾಜ್ಯಶಾಹಿ ವ್ಯವಸ್ಥೆಯ ವಿಸ್ತಾರದ ಹಿನ್ನೆಲೆಯಲ್ಲಿ ನೀಡುತ್ತಾರೆ. ಎರಡೂ ಐತಿಹಾಸಿಕ ಕಾದಂಬರಿಗಳಲ್ಲಿ ಇತಿಹಾಸದ ಎಳೆಗಳು ಸಬಲವಾಗಿ ಜೋಡಣೆಯಾಗಿಲ್ಲ. ಇದೇ ಆಗ ಹೊಸಗುಗಳು ಅರಮನೆಗೆ ಸಂಬಂಧಿಸಿದಂತೆ ಒರಾಪ್ರದರಿಂದ, ಆಗಿನ ಪರಿಸರದ ಒಡನಾಟ ಕೂಡ ಜೀವಪೂರ್ಣ ಕೊಳ್ಳುವುದಿಲ್ಲ. ತರಾಸು ಚರಿತ್ರೆಯ ಘಟನೆಗಳಿಗೆ ಉಜ್ವಲವಾದ ವರ್ಣ ನೀಡಿದರೂ, ನಿರೂಪಕನ ಅಭಿಪ್ರಾಯ ಉತ್ಪ್ರೇಕ್ಷೆಗಳೇ ಅಧಿಕವಾಗಿ ಸಂಯಮ ಇಲ್ಲವಾಗುತ್ತದೆ. ಅವರೂ ನಿರೂಪಕನ ಅಭಿಪ್ರಾಯ ಉತ್ಪ್ರೇಕ್ಷೆಗಳೇ ಅಧಿಕವಾಗಿ ಸಂಯಮ ಇಲ್ಲವಾಗುತ್ತದೆ. ಅವರೂ ದುರ್ಗಾಸ್ತಮಾನ ಗಾಥ ವಿಹಾರದಲ್ಲಿ. ಸಹಾನುಭೂತಿಯಲ್ಲಿ ತೀವ್ರವಾಗಿ ಓದುಗರನ್ನು ತಟ್ಟುತ್ತದೆ.

ಇವ್ಹರಲ್ಲಿ ಸಾಮಾಜಿಕ ಕಾದಂಬರಿಯು ಮಹಿಳಾ ಕಾದಂಬರಿಕಾರರ ಕೈಯಲ್ಲಿ ಇನ್ನೊಂದು ಆಯಾಮವನ್ನು ಪಡೆಯಿತ್ತು. ತ್ರಿವೇಣಿಯವರ ಕಾದಂಬರಿಗಳು ಹೆಣ್ಣಿನ

ಮಾನಸಿಕ ಪ್ರಪಂಚವನ್ನು ವಿಶ್ಲೇಷಣೆಗೆ ಒಳಪಡಿಸಿದವು. ಕಥನಕಲೆಯ ಜೊತೆಗೆ ಮನೋ ವಿಶ್ಲೇಷಣೆ ಸೇರಿಕೊಂಡು (ಸೋತು ಗೆದ್ದವಳು, ಶರಪಂಜರ, ಸಮಸ್ಯೆಯ ಮಗು ಮುಂತಾದ ಕೃತಿಗಳಲ್ಲಿ) ತ್ರಿವೇಣಿಯವರ ಶೈಲಿಯೊಂದು ಭಿನ್ನವಾಯಿತು. ಇದರಂತೆ ಎಂ. ಕೆ. ಇಂದಿರಾರ ಕಾದಂಬರಿಗಳೂ ಓದುಗರಲ್ಲಿ ಜನಪ್ರಿಯವಾದವು. ಮಧ್ಯಮ ವರ್ಗದ ಸ್ತ್ರೀಯರ ಸಮಸ್ಯೆಗಳನ್ನು ಆಧರಿಸಿದ ಇಂದಿರಾರ ಕಾದಂಬರಿಗಳು ಸರಳ ರಚನೆಗಳಾಗಿವೆ. ಫಣಿಯಮ್ಮ ಕೃತಿಯು ಮಲೆನಾಡಿನ ವಿಧವೆಯರ ಬದುಕಿನ ಉತ್ತಮ ಚಿತ್ರಣವಾಗಿದ್ದು ಅಲ್ಲಿ ವಾತಾವರಣ ಜೀವಂತವಾಗಿ, ಮನುಷ್ಯ ಪ್ರವೃತ್ತಿಗಳು ವಾಸ್ತವವಾಗಿ ಬರುತ್ತವೆ.

ಕನ್ನಡ ಕಾದಂಬರಿಯು ವಾಸ್ತವಮಾರ್ಗದ ಉತ್ತಮ ಕೃತಿಗಳನ್ನು ನೀಡಿ ಭಾವನಾತ್ಮಕ ಸೆಳವಿಗೂ, ಸಂಸ್ಕೃತಿಯ ಪ್ರಚಾರಕ್ಕೂ ತೊಡಗಿದಾಗ ಮತ್ತೆ ಹೊಸ ನೀರು ಅದಕ್ಕೆ ಸೇರಿಕೊಂಡಿತು. ಈ ಸಲ ಫ್ರಾಯ್ಡ್, ಮಾರ್ಕ್ಸ್, ಕಾಮು, ಕಾಫ್ಕಾರ ಬರಹಗಳು ಒಂದು ನಿಟ್ಟಿನಲ್ಲಿ ಇದಕ್ಕೆ ಚಾಲನೆ ನೀಡಿದರೆ, ಸ್ವಾತಂತ್ರ್ಯೋತ್ತರ ಪರಿಸ್ಥಿತಿಯಿಂದಾಗಿ ಮೂಡಿದ ಸಾರ್ವತ್ರಿಕ ನಿರಾಶೆ, ಹತಾಶೆ, ಹಿಂಸೆ, ಅಧಿಕಾರದಾಹಗಳು ಇನ್ನೊಂದು ರೀತಿಯಲ್ಲಿ ಕಾರಣವಾದವು. ಇದರ ಪರಿಣಾಮದಿಂದಾಗಿ ಕಾದಂಬರಿಯ ರೂಪ, ವಸ್ತು, ತಂತ್ರ ನಿರೂಪಣೆಗಳಲ್ಲಿ ಬದಲಾವಣೆ ಅನಿವಾರ್ಯವೆನಿಸಿತು. ಅನಂತಮೂರ್ತಿ, ಲಂಕೇಶ, ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲ, ಪೂರ್ಣಚಂದ್ರ ತೇಜಸ್ವಿ, ಕಂಬಾರ, ಭೈರಪ್ಪ ಮುಂತಾದವರ ಕಾದಂಬರಿಗಳು ಗಾಢವಾದ ಚಿಂತನೆಗೆ ತೊಡಗಿಸುತ್ತವೆ. ಜೊತೆಗೆ ಬರಗೂರ, ದೇವನೂರ, ಬೋಳುವಾರ, ಸಾರಾ ಅಬೂಬಕರ, ಬಿ. ಟಿ. ಲಲಿತಾ ನಾಯಕ, ಭಾನು ಮುಷ್ತಾಕ ಮೊದಲಾದವರು ವಿಭಿನ್ನ ಸಾಮಾಜಿಕ ಸಾಂಸ್ಕೃತಿಕ ಜಗತ್ತನ್ನು ಮೊದಲ ಸಲ ಮೂರ್ತಗೊಳಿಸಿದ್ದಾರೆ.

ಪುಟ್ಟಪ್ಪ ಮತ್ತು ಕಾರಂತರ ಪ್ರಭಾವದಲ್ಲಿ ಹೆಜ್ಜೆ ಹಾಕುತ್ತಿದ್ದ ಕನ್ನಡ ಕಾದಂಬರಿಗೆ `ಸಂಸ್ಕಾರ ' ಹೊಸ ತಿರುವು ನೀಡಿತು. ಭಾರತೀಯ ಸಾಮಾಜಿಕ ಧಾರ್ಮಿಕ ಜಡತ್ವವನ್ನು ಜೀವವಿರೋಧಿ ನಿಲುವನ್ನು ವಿಡಂಬಿಸುವ ಈ ಕೃತಿಯಲ್ಲಿ ನೆಲದ ಬದುಕಿನ ಅನನ್ಯ ಶೋಧವಿದೆ. ಇಲ್ಲಿಯ ಪ್ರಾಣೇಶಾಚಾರ್ಯರು, ಚಂದ್ರಿ, ನಾರಾಯಣಪ್ಪ ಒಂದೊಂದು ಮೌಲ್ಯ ಪ್ರಜ್ಞೆಯ ಸಂಕೇತವಾಗಿ, ಬಹುಕಾಲ ಮನದಲ್ಲಿ ಮೂಡಿ ನಿಲ್ಲುತ್ತಾರೆ. ಪೂರ್ಣಚಂದ್ರ ತೇಜಸ್ವಿಯವರ ಕಾದಂಬರಿಗಳು ಅಸ್ತಿತ್ವವಾದಿ ರಚನೆಗಳ ನಡುವೆ ವಿಶಿಷ್ಟವಾಗಿವೆ. ಬದುಕಿನ ನಿಗೂಢತೆಯನ್ನು ಅನ್ವೇಷಿಸುತ್ತ, ಮಾನವ ಸ್ವಭಾವಗಳನ್ನು ಹಾಸ್ಯಮಿಶ್ರಿತ ಧಾಟಿಯಲ್ಲಿ ಚಿತ್ರಿಸುತ್ತ, ಸಂಬಂಧಗಳ ಜಟಿಲತೆಯನ್ನು ಸೂಚಿಸುತ್ತ ಸಾಗುವ ಕರ್ವಾಲೋ ಮತ್ತು ಚಿದಂಬರ ರಹಸ್ಯಗಳು ಅನನ್ಯವಾಗಿವೆ. ಪುಟ್ಟಪ್ಪನವರ ಪ್ರಕೃತಿ ಪ್ರೇಮವಿಲ್ಲಿ ಪ್ರಕೃತಿಯ ಶೋಧವಾಗಿ, ಕಾರಂತರ ಜೀವನಶ್ರದ್ಧೆ ಇಲ್ಲಿ ಜೀವನದ ಪ್ರೀತಿಯಾಗಿ, ಕುತೂಹಲವಾಗಿ ಮಾರ್ಪಟ್ಟಿದೆ. ಪುಟ್ಟಪ್ಪ ಕಾರಂತರ ಉತ್ತಮಾಂಶಗಳು ತೇಜಸ್ವಿಯವರ ಕಾದಂಬರಿಗಳಲ್ಲಿ ಮುಂದುವರೆದ ಹೊಸ ರೂಪವನ್ನೂ ಶಕ್ತಿಯನ್ನೂ ಪಡೆದಂತಿವೆ.

ದೇಸಾಯಿ ಹಾಗೂ ಚಿತ್ತಾಲರು ಅಸ್ತಿತ್ವವಾದಿ ಕಾದಂಬರಿಗಳನ್ನು ನೀಡಿದ್ದರೂ ಇಬ್ಬರೂ ಬೇರೆ ಬೇರೆ ದೃಷ್ಟಿಕೋನಗಳಲ್ಲಿ ಬದುಕನ್ನು ಕಾಣಿಸುತ್ತಾರೆ. ಚಿತ್ತಾಲರ ಕೃತಿಗಳಲ್ಲಿ

ಮನೋವಿಶ್ಲೇಷಣೆಗೆ, ನಗರೀಕರಣದ ಸಂಕೀರ್ಣತೆಗೆ ಒತ್ತು ಬೀಳುತ್ತದೆ. ಶಿಕಾರಿಯ ಶೋಷಣೆ, ಕೌರ್ಯದ ಸೂಕ್ಷ್ಮ ಎಳೆಗಳು, ಪುರುಷೋತ್ತಮದ ಸ್ವಂತಿಕೆಯ ಹುಡುಕಾಟ, ಜೀವಪ್ರೀತಿಯ ಎಳೆಗಳು ಆಸಕ್ತಪೂರ್ಣವಾಗಿವೆ. ಮನುಷ್ಯನ ಮೂರ್ತ ಅಮೂರ್ತ ಜಗತ್ತಿನ ಶೋಧ ಮತ್ತು ಅರಿಯುವಿಕೆ ಒಂದು ಗಂಭೀರ ಪ್ರಕ್ರಿಯೆಯಾಗಿ ಚಿತ್ತಾಲರ ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುತ್ತದೆ.

ದೇವನೂರ ಮಹಾದೇವ ಮತ್ತು ಸಾರಾ, ಭಾನುರಂತಹ ಲೇಖಕರ ಮೂಲಕ ಕನ್ನಡ ಕಾದಂಬರಿ ಅಧಿಕೃತವಾಗಿ ದಲಿತ ಮತ್ತು ಮುಸ್ಲಿಂ ಬದುಕನ್ನು ಅನಾವರಣಗೊಳಿಸಿತು. ಒಡಲಾಳ, ಕುಸುಮಬಾಲೆಗಳು ಕಲೆಗಾರಿಕೆಯ ಸೂಕ್ಷ್ಮ ಸೌಂದರ್ಯವನ್ನು, ವಸ್ತು ತಂತ್ರಗಳಲ್ಲಿಯ ಪರಿಣಾಮಿಸುವ ಶಕ್ತಿಯನ್ನು ಪಡೆದುಕೊಂಡಿವೆ. ಸಂವಹನದ ಸಮಸ್ಯೆಗಾಗಿ ಬಹು ಚರ್ಚಿತವಾದ ಕುಸುಮಬಾಲೆ ದಲಿತ ಚಿತ್ರಣದ ಗದ್ಯಕಾವ್ಯವಾಗಿದೆ. ಭಾಷೆಯ ಮೂಲಕ ಕೆತ್ತಲಾಗುವ ಶಿಲ್ಪ, ಬಣ್ಣನೆಯ ಮೂರ್ತತೆ, ಸಂಕೇತದ ಅಮೂರ್ತ ಅರ್ಥವಲಯಗಳಿಗಾಗಿ ಕಾದಂಬರಿಯ ಈ ಭಾಗವನ್ನು ಕಾಣಬಹುದು.

> ``ಯಾಡನ ತಲ್ಪ ಭೂಮಿಮ್ಯಾಲ ಇಟ್ಟವಳಾಗಿ
> ಎದ್ದು ಅಕ್ಕಮಾದೇವಮ್ಮ ನಡೆದವಳಾಗಿ ಬಂದಳು
> ಆ ಕಣ್ಣೀರು ತುಂಬಿದ್ದ ಕೆರೆಯ ಕರೆಗ, ಸರಣು
> ಆ ಕೆರೆಗ ಮೂರು ಸಲ ಮಾಡಿದಳು. ಕಣ್ಣುಗ
> ಆ ಕೆರೆಯ ನೀರ ಮೂರು ಸಲ ಒತ್ತಿಕೊಂಡಳು ''[೯]

ಕನ್ನಡ ಕಾದಂಬರಿಲೋಕ ಸತ್ವದಲ್ಲಿ, ಸಮೃದ್ಧಿಯಲ್ಲಿ ಬೆರಗು ಹುಟ್ಟಿಸುವಂತಿದೆ. ಸಾಮಾಜಿಕ ಕಳಕಳಿಯನ್ನು, ಸ್ಪಂದನವನ್ನು ಆರಂಭದಿಂದಲೂ ಅದು ಒಳಗೊಂಡಿದೆ. ಸಮಕಾಲೀನ ಸಮಸ್ಯೆಗಳನ್ನು, ಸಮಷ್ಟಿಯ, ವ್ಯಷ್ಟಿಯ ಬೇಕು ಬೇಡಗಳನ್ನು ಕಾದಂಬರಿಕಾರರು ಗುರುತಿಸಿದ್ದಾರೆ, ಚರ್ಚಿಸಿದ್ದಾರೆ. ಇನ್ನೂ ಸಮಾಜಶಾಸ್ತ್ರ, ಮಾನವ ಶಾಸ್ತ್ರಗಳು ತಲೆಯೆತ್ತುವ ಹಂತದಲ್ಲಿದ್ದಾಗ, ಅವುಗಳ ಜವಾಬ್ದಾರಿಯನ್ನೂ ಕಾದಂಬರಿಗಳು ನಿರ್ವಹಿಸಿವೆ. ಸಂಸ್ಕೃತಿಯ ಅಧ್ಯಯನದ ಮಾನವ ಸ್ವಭಾವ ವರ್ತನೆಗಳ ಅಧ್ಯಯನದ ಮೂಲ ಆಕರಗಳಂತೆ ಅನೇಕ ಕಾದಂಬರಿಗಳು ದಾಖಲೆಗಳಾಗಿವೆ. ಇಂದಿರಾಬಾಯಿ ಕೃತಿಯಲ್ಲಿ ಬರುವ ಇಂದಿರೆಯ ವಿವಾಹದ ಪ್ರತಿ ಆಚರಣೆಯ ವರ್ಣನೆ ಅಂದಿನ ವಿವಾಹದ ವಿಧಿ-ವಿಧಾನಗಳಿಗೆ ಸಾಕ್ಷಿ ಎನಿಸುತ್ತದೆ. ಗ್ರಾಮಾಯಣ, ಫಣಿಯಮ್ಮ, ಮಲೆಗಳಲ್ಲಿ ಮದುಮಗಳುದಲ್ಲಿಯ ಪ್ರತಿ ವಿವರಗಳೂ ಜನಾಂಗದ ಅಧ್ಯಯನಕ್ಕೆ ಸಹಾಯಕವೇ ಆಗಿವೆ.

ಕನ್ನಡ ಕಾದಂಬರಿಯಲ್ಲಿ ಮನುಷ್ಯ ಬದುಕು ವರ್ಣಿತಗೊಂಡಂತೆ, ನಿಸರ್ಗದ ಬಣ್ಣನೆಯೂ ಅನಿವಾರ್ಯ ಅಂಗವಾಗಿ ಬಂದಿದೆ. ಸಂಸ್ಕೃತಿ, ಪ್ರಕೃತಿಗಳ ಮುಖಾಮುಖಿಯಲ್ಲಿ, ಕೊಡುಕೊಳ್ಳುವಿಕೆಯಲ್ಲಿ ಮಹತ್ವದ ಕಾದಂಬರಿಗಳು ಬಿಚ್ಚಿಕೊಳ್ಳುತ್ತವೆ. ಕುವೆಂಪು ಕಾದಂಬರಿಗಳ ಬೇಟೆ, ಮಲೆ, ಕಾನನ, ಕಾರಂತರಲ್ಲಿಯ ಮಳೆ, ಸಮುದ್ರಗಳು ಸಾಂಕೇತಿಕವಾಗಿವೆ. ಕಾಡು, ವೈಶಾಖ, ಕರ್ವಾಲೋದಲ್ಲಿಯೂ ಪ್ರಕೃತಿಯು ಮಹತ್ವದ ಪಾತ್ರ ವಹಿಸಿದೆ. ಮನುಷ್ಯ ಪ್ರಕೃತಿ

ಎರಡರ ಸಹಬಾಳ್ವೆ, ಸಂಪರ್ಕ, ಆಕ್ರಮಣ, ಚೆಲುವು, ಕೌರ್ಯ ಗಳು ಅನೇಕ ಕಾದಂಬರಿಗಳನ್ನು ನಿಯಂತ್ರಿಸಿವೆ. ಪ್ರಕೃತಿ, ಕನ್ನಡದ ಮಹತ್ವದ ಕಾದಂಬರಿಗಳ ಒಡಲಲ್ಲಿ ತುಂಬಿಕೊಂಡಿದೆ, ಬಣ್ಣನೆಯಾಗಿ, ಸಂಕೇತವಾಗಿ.

ನಮ್ಮ ಕೆಲವು ಕಾದಂಬರಿಗಳು ಗದ್ಯಕಾವ್ಯಗಳಾಗಿ, ಅಮೂರ್ತ ನಾಟಕಗಳಾಗಿ ಕಾಣಿಸುತ್ತವೆ. ಕಾವ್ಯ, ನಾಟಕಗಳ ಉತ್ತಮಾಂಶಗಳನ್ನು ಸಮರ್ಥ ಲೇಖಕರು ಮಾತ್ರ ಕಾದಂಬರಿಯಲ್ಲಿ ತರಬಲ್ಲರು. ಕಾನೂರು ಹೆಗ್ಗಡತಿಯ ಹೂವಯ್ಯನ ಭಾವಪ್ರಪಂಚ, ಸೀತೆಯೊಂದಿಗಿನ ಸಂವಾದ, ಕಾರಂತರ ಮೂಕಜ್ಜಿಯ ಕನಸುಗಳ ಅತೀಂದ್ರಿಯ ಅನುಭವದ ಕ್ಷಣಗಳು ಇದಕ್ಕೆ ನಿದರ್ಶನವಾಗಿವೆ. ಇದು ಮಲೆಗಳಲ್ಲಿ ಮದುಮಗಳು ಕೃತಿಯ ಕೆಳವರ್ಗದ ಜನರ ಬದುಕಿನಲ್ಲಿ ಅರ್ಥಪೂರ್ಣವಾಗಿ ಬಂದಿದೆ. ಗುತ್ತಿ, ತಿಮ್ಮಿಯರು ಬೆಟ್ಟದ ನೆತ್ತಿಯ ಮೇಲೆ ಕಳೆಯುವ ರಾತ್ರಿ, ಐತ ಪೀಂಚಲುವಿನ ಪ್ರಣಯದಾಂಪತ್ಯ, ಗಡ್ಡದಯ್ಯನ ಬಣ್ಣನೆಯಲ್ಲಿ ಗದ್ಯಕಾವ್ಯ ಪ್ರವಹಿಸುತ್ತದೆ. ಮುಸ್ಸಂಜೆಯ ಕಥಾ ಪ್ರಸಂಗದಲ್ಲಿ, ಭೈರಪ್ಪನವರ ಪರ್ವದಲ್ಲಿ, ಕುಸುಮಬಾಲೆಯಲ್ಲಿ ಇಂತಹ ಸಂದರ್ಭಗಳಿವೆ.

ಕನ್ನಡ ಕಾದಂಬರಿಗಳ ಪಾತ್ರ ಪ್ರಪಂಚ, ಜೀವನಾದರ್ಶ, ಹಂಬಲ, ದರ್ಶನಗಳು ನಮ್ಮ ಕಾಲದ ಜನರ ಆಶೋತ್ತರಗಳೇ ಆಗಿವೆ. ಕುವೆಂಪು ಹೂವಯ್ಯ, ಚಿನ್ನಮ್ಮ, ಕಾರಂತರ ವೃದ್ಧೆಯರು, ಗೋಕಾಕರ ನರಹರಿ ಮುಂತಾದವರ ಆದರ್ಶ ಕನ್ನಡ ಜನರ ಆದರ್ಶವೂ ಆಗಿದೆ. ಕಾದಂಬರಿಕಾರರ ಜೀವನದ ಬಗೆಗಿನ ನಿಲುವುಗಳು ಅವರ ಕೃತಿಗಳಿಗೆ ಬಾಧಕವಾಗಲಿಲ್ಲ ಎಂಬುದೂ ಗಮನಾರ್ಹ. ಕಾರಂತರ ವೈಚಾರಿಕತೆ ಅವರ ಕಾದಂಬರಿಗಳ ಪಾತ್ರಗಳ ಧಾರ್ಮಿಕ ನಂಬಿಕೆ, ಆಚರಣೆಗಳಿಗೆ ಅಡ್ಡಿಯಾಗಲಿಲ್ಲ. ಬದಲಾಗಿ ಅವರವರ ಬದುಕುವ ರೀತಿಗಳನ್ನು ಗೌರವಿಸುವ, ಸಂಯಮದಿಂದ ವರ್ತಿಸುವ ಹಿರಿಯ ಆದರ್ಶ ಅಲ್ಲಿದೆ.

ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಅನೇಕಾನೇಕ ಪ್ರಯೋಗಗಳು ನಡೆದಿವೆ. ವಸ್ತು, ಬಣ್ಣನೆ, ನಿರೂಪಣೆ, ಅಭಿವ್ಯಕ್ತಿ, ತಂತ್ರ, ಶೈಲಿ, ಭಾಷಾ ಬಳಕೆಗಳ ವೈವಿಧ್ಯ ಅಪಾರವಾಗಿದೆ. ಭಾರತೀಯ ಸೃಜನಶೀಲ ಪ್ರಜ್ಞೆಯ ವಿಕಾಸ, ದೇಶೀಯ ಅನುಭವ, ಅರಿವುಗಳ ನೆಲೆಗಟ್ಟು ಇಲ್ಲಿ ಸ್ಫುಟವಾಗಿದೆ. ವಾಸ್ತವವಾದಿ ಮಾರ್ಗದ ಸಾಮಾಜಿಕ ಕಾದಂಬರಿಗಳು ಸಾಮಾಜಿಕ ಬದಲಾವಣೆಯನ್ನು ದಾಖಲಿಸುತ್ತ ಬಂದಿವೆ. ಪುರಾಣ, ಚರಿತ್ರೆ, ಕಲ್ಪನೆ, ರಮ್ಯತೆ, ವಾಸ್ತವದ ರೀತಿಯಲ್ಲಿ ಕೆಲವಾದರೂ ಗಮನಿಸಬೇಕಾದ ಕೃತಿಗಳು ರೂಪಗೊಂಡಿವೆ. ಭಾರತೀಯರ ಸ್ವಾತಂತ್ರ್ಯಪೂರ್ವ, ಸ್ವಾತಂತ್ರ್ಯೋತ್ತರ ಬೇಕು ಬೇಡಗಳಿಗೆ ಧ್ವನಿ ನೀಡಿರುವ ಕಾದಂಬರಿಗಳು. ನಮ್ಮ ನಾಡಿನ ಬಯಲುನಾಡು, ಮಲೆನಾಡು, ಕರಾವಳಿ ಪ್ರದೇಶಗಳ ಗ್ರಾಮ ಬದುಕಿಗೆ ಕನ್ನಡಿಗಳಾಗಿವೆ. ಕನ್ನಡ ಸಾಹಿತ್ಯದ ಆಧುನಿಕ ಸ್ವರೂಪಗಳಲ್ಲಿ ಕಾದಂಬರಿ ಪ್ರಕಾರವು ಸಶಕ್ತವಾಗಿ ಬೆಳೆದಿದ್ದು, ಭಾರತೀಯ ಯಾವುದೇ ಭಾಷೆಯ ಕಾದಂಬರಿಗಳೊಂದಿಗೆ ಹೋಲಿಸಲು ಅರ್ಹವಾದ ಹತ್ತಾರು ಕೃತಿಗಳನ್ನು ಹೆಸರಿಸಬಹುದಾಗಿದೆ. ನಾಳೆಯ ದಿನಗಳಲ್ಲಿ ಇನ್ನೂ ಎತ್ತರಕ್ಕೆ ಬೆಳೆದು ಹೊಸ ಸಾಧ್ಯತೆಗಳಲ್ಲಿ ಅರಳಬಲ್ಲ ಶಕ್ತಿ ಅದಕ್ಕಿದೆ.[೧೦]

ಟಿಪ್ಪಣಿಗಳು

೧. ಇಂಗ್ಲೀಷ್ ಭಾಷೆಯಲ್ಲಿ ರಿಚರ್ಡಸನ್‌ನ ಒಲೆ ರೂಪದ ಕಾದಂಬರಿಗಳು ಕಾಣಿಸಿಕೊಂಡದ್ದು ೧೮ನೇ ಶತಮಾನದ ಮಧ್ಯದಲ್ಲಿ. ನಂತರ ಸುಮಾರು ೧೦೦ ವರ್ಷಗಳ ಮೇಲೆ ಭಾರತೀಯ ಭಾಷೆಗಳಲ್ಲಿ ಒಂದೊಂದಾಗಿ ಕಾದಂಬರಿಗಳು ಬರತೊಡಗಿದವು. ಆದರೆ ದಂಡಿಯ `ದಶಕುಮಾರ ಚರಿತೆ', ಸುಬಂಧುವಿನ `ವಾಸ್ತವದತ್ತಾ' ಬಾಣ ಭಟ್ಟನ `ಕಾದಂಬರಿ'ಗಳನ್ನು ಮೊದಲ ರಮ್ಯ ಕಾದಂಬರಿಗಳೆಂದೂ ಭಾವಿಸಲಾಗುತ್ತದೆ.

ನೋಡಿ : Three Novels from Ancient India
- Vishwanath S. Naravane.

೨. (ಉದ್ಧೃತ) ಹೊಸ ಗನ್ನಡ ಸಾಹಿತ್ಯದ ಉದಯಕಾಲ

- ರಾ. ಯ. ಧಾರವಾಡಕರ. ಪು. ೪೧೫

೩. ಅಂದು `ನಾವೆಲ್ಲು' ಎಂದರೆ ವೆಂಕಟಾಚಾರ್ಯರ ಅನುವಾದಗಳಿಗೆ ಅನ್ವಯವಾಗುತ್ತಿತ್ತು ಎಂಬುದಕ್ಕೆ ದಿ. ಎ. ಆರ್. ಕೃಷ್ಣಶಾಸ್ತ್ರಿಗಳ `ಬಂಕಿಮ ಚಂದ್ರ'ಕೃತಿಯ ಆರಂಭದಲ್ಲಿ ಕಾಣಬಹುದು. ಅದರಂತೆ ಓದುಗರ ಮನೆಮನೆಗೆ ಕಾದಂಬರಿಗಳನ್ನು ಹೊತ್ತು ಒಯ್ದು ಮಾರಿ ಸಾಹಿತ್ಯ ಪ್ರಚಾರ ಹಾಗೂ ಜೀವನ ನಿರ್ವಹಣೆ ನಡೆಸುತ್ತಿದ್ದ ಗಳಗನಾಥರ ವಿಚಾರಕ್ಕೆ ದಿ. ಸ. ಸ. ಮಾಳವಾಡರ `ದಾರಿ ಸಾಗಿದೆ ದೊಡ್ಡಪ್ಪ ಕೃತಿಯನ್ನು ನೋಡಬಹುದು.

೪. ಇಂದಿರಾಬಾಯಿ - ಗುಲ್ವಾಡಿ ವೆಂಕಟರಾವ್ ಪು. ೧೬೮
೫. ಎಂ. ಎಸ್. ಪುಟ್ಟಣ್ಣ ಒಂದು ಅಧ್ಯಯನ - ಡಾ. ಎಚ್. ಎಸ್. ಸುಜಾತ ಪು. ೮೧
೬. ಕುಡಿಯರ ಕೂಸು- ಶಿವಾರಾಮ ಕಾರಂತ ಪು. ೧
೭. ನಿರಪೇಕ್ಷ - ಜಿ. ಎಚ್. ನಾಯಕ ಪು. ೧೭೫

೮. ಸನಾತನ ತತ್ವಗಳಿಗೆ, ಭಾರತೀಯ ಸಂಸ್ಕೃತಿಗೆ ಒದಗಿದ ಆಪತ್ತು - ವಿಪತ್ತುಗಳ ಬಗ್ಗೆ ಜನಕ್ಕೆ ಅರಿವು ಮೂಡಿಸುವುದು ಆ ಕಾಲದ ತುರ್ತಾಗಿತ್ತು. ದೇಶದ ಎಲ್ಲೆಡೆ ಹಿಂದೂ ಧರ್ಮದ ಆಚರಣೆಗಳ ಬಗ್ಗೆ ಖಂಡನೆ ಕೇಳಿಬರುತ್ತಿತ್ತು. ಬ್ರಿಟಿಷ್ ಸಾಮ್ರಾಜ್ಯಶಾಹಿ ಬಲಾಢ್ಯವಾಗಿ, ಪಾಶ್ಚಾತ್ಯ ವಿಚಾರಧಾರೆಗಳು ಅಬ್ಬರಗೊಂಡಿದ್ದವು. ಪರಮಹಂಸ, ವಿವೇಕಾನಂದರ ಬೋಧನೆಗಳು ಅರವಿಂದರ ಚಿಂತನೆಗಳು ಇದಕ್ಕೆ ಪ್ರತಿ ಎಂಬಂತೆ ವ್ಯಾಪಿಸಿದವು. ಕನ್ನಡ ಸಂಶೋಧನೆಯ ಆರಂಭಿಕ ಪ್ರಯತ್ನಗಳು, ಆಲೂರ ವೆಂಕಟರಾಯರ ಲೇಖನಿಸಗಳು ಬಿ. ಎಂ. ಶ್ರೀ. ಶಿವಮೂರ್ತಿಶಾಸ್ತ್ರಿಗಳವರ ಭಾಷಣ, ಪ್ರಪಚನಗಳು ಪರೋಕ್ಷವಾಗಿ ಪೌರಾಣಿಕ, ಐತಿಹಾಸಿಕ ಕಾದಂಬರಿಗಳಿಗೆ ಇಂಬು ನೀಡಿದವು.

೯. ಕುಸುಮಬಾಲೆ ದೇವನೂರ ಮಹಾದೇವ, ಪು. ೧೯

೧೦. ಲೇಖನದ ಮಿತಿಯಿಂದಾಗಿ ಕನ್ನಡ ಕಾದಂಬರಿಯ ಸಮಗ್ರ ಇತಿಹಾಸವನ್ನಾಗಲಿ, ಪ್ರತಿಯೊಬ್ಬ ಕಾದಂಬರಿಕಾರರನ್ನಾಗಲಿ ಚರ್ಚೆಗೆ ಎತ್ತಿಕೊಂಡಿಲ್ಲ. ಜೊತೆಗೆ ಅನುವಾದಿತ, ವೈಜ್ಞಾನಿಕ, ಕಾಲ್ಪನಿಕ, ಪತ್ತೇದಾರಿ ಕಾದಂಬರಿಗಳ ಬಗ್ಗೆಯೂ ಚರ್ಚಿಸಲು ಸಾಧ್ಯವಾಗಿಲ್ಲ.

ಪಣ್ಣಕತೆ

- ಮಲ್ಲಿಕಾರ್ಜು

ಯುರೋಪಿನಲ್ಲಿ ನಡೆದ ಕೈಗಾರಿಕಾ ಕ್ರಾಂತಿಯು ಬಿಸಿ ಬರೀ ತಾಂತ್ರಿಕ ರಂಗದಲ್ಲಷ್ಟೆ ಕಾಣಿಸಿಕೊಳ್ಳದೆ, ಪ್ರತಿಯೊಂದು ರಂಗದಲ್ಲಿಯೂ ತನ್ನ ಗಾಢವಾದ ಪರಿಣಾಮವನ್ನು ಬೀರಿತು. ಅದಕ್ಕೆ ಸಾಹಿತ್ಯಕ್ಷೇತ್ರ ಹೊರತಾಗಲಿಲ್ಲ. ಪಾಶ್ಚಾತ್ಯರ ಭಾರತಾಗಮನ ಆಳ್ವಿಕೆಯಿಂದಾ ಭಾರತದಲ್ಲಿ ಅದುವರೆಗಿದ್ದ ಸಾಂಸ್ಕೃತಿಕ, ಸಾಹಿತ್ಯಿಕ ಜೀವನಮೌಲ್ಯಗಳು ಘರ್ಷಣೆಗೊಳಗಾ ಬದಲಾವಣೆ ಹೊಂದಿದವು. ಪಾಶ್ಚಾತ್ಯರ ಸಂಸ್ಕೃತಿ, ಅಲ್ಲಿನ ಜೀವನ ಮೌಲ್ಯಗಳು, ವ್ಯಕ್ತಿ ವ್ಯಕ್ತಿಗಳ ನಡುವಿನ ಸಂಬಂಧ, ಗಂಡು ಹೆಣ್ಣಿನ ಮಧ್ಯದ ಸಂಬಂಧಗಳು ನಮ್ಮವರ ಮೇ ಅಗಾಧ ಪರಿಣಾಮವನ್ನುಂಟು ಮಾಡಿದವು. ಆಂಗ್ಲ ಸಾಹಿತ್ಯದ ಅಭ್ಯಾಸದಿಂದ ಅಲ್ಲಿನ ಒಳ ಹೊರಗು ನಮ್ಮ ಸಾಹಿತಿಗಳಿಗೆ ತೆರೆದಿಟ್ಟಂತಾಯಿತು. ಜೀವನದ ಮೌಲ್ಯ ಬದಲಾವಣೆ ಪ್ರಜ್ಞಾಶೀಲತೆ ಎಂಥದೋ ಒಂದು ಆವೇಗದ ವಿಚಾರಕ್ಕೆ ಹಾದಿಮಾಡಿಕೊಟ್ಟಿತೆಂದ ಆಂಗ್ಲರ ಆಳ್ವಿಕೆ-ದಬ್ಬಾಳಿಕೆ-ದಾಸ್ಯತ್ವ-ಗುಲಾಮಗಿರಿ ಮುಂತಾದ ಸ್ವಾತಂತ್ರ್ಯಹೀನತೆಯು ಬ ನಮ್ಮ ಸಾಹಿತಿಗಳ ಅರಿವನ್ನು ಕೆದಕಿತು. ಈ ಕಾರಣದಿಂದ ಸ್ವಾತಂತ್ರ್ಯದ, ವಿಮೋಚನೆ ಹಂಬಲ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಒಡಮೂಡತೊಡಗಿತು. ಕಥೆ ಕಾವ್ಯಗಳಲ್ಲಿ ಭಾವನೆ ಓತಪ್ರೋತವಾಗಿ ಹರಿಯಲಾರಂಭಿಸಿತು.

ಔದ್ಯೋಗಿಕ ಕ್ರಾಂತಿಯ ಮೂಲಕ ಬದಲಾವಣೆಗೊಂಡ ಪ್ರಪಂಚದ ಸಾಹಿ ಲೋಕದ ಬಿಸಿಯು ಭಾರತಕ್ಕೆ ಬಂಗಾಲದ ಬಾಗಿಲಿನ ಮೂಲಕ ಪ್ರವೇಶಿಸಿತು. ರವೀಂದ್ರನಾ ಟ್ಯಾಗೋರ ಅವರು ಮೊಟ್ಟಮೊದಲಿಗೆ ಬಂಗಾಲಿ ಭಾಷೆಯಲ್ಲಿ ಇವರ ಪ್ರಯೋ ಮಾಡಿದರು. ನಂತರ ಎಲ್ಲ ಪ್ರದೇಶಗಳಿಗೂ ಪಸರಿಸಿತು. ಅದು ಕನ್ನಡನಾಡಿಗೆ ಬರ ತಡವಾಗಲಿಲ್ಲ.

ಕನ್ನಡದಲ್ಲಿ ೧೯ನೆಯ ಶತಮಾನದ ಕೊನೆಕೊನೆಯ ಭಾಗದಲ್ಲಿ ಈ ಹೊಸ ಸಾಹಿ ಪ್ರಕಾರದ ಕುರುಹುಗಳು ಕಂಡುಬರುತ್ತಿದ್ದರೂ ೨೦ನೆಯ ಶತಮಾನದಲ್ಲಿ ಅದು ಬ ನಿರ್ದಿಷ್ಟರೂಪ ತಾಳಿದ್ದನ್ನು ಕಾಣಬಹುದು. ಇದು ಮೊದಲು ಅನುವಾದ ಅನುಕರಣಗಳ ಮೆಲ್ಲನೆ ಕನ್ನಡ ನೆಲದಲ್ಲಿ ಹೆಜ್ಜೆ ಇಡಲು ಪ್ರಾರಂಭಿಸಿ ಮುಂದೆ ರಾಜಮಾರ್ಗವ ನಿರ್ಮಿಸಿತು. ಆಧುನಿಕ ಬದುಕಿನ ವೇಗ, ಜನರ ಏರಿದ ಜೀವನಮಟ್ಟ, ಅಚ್ಚಿನ ಶಿಕ್ಷಣ ನಾಗರಿಕತೆಯ ಬೆಳವಣಿಗೆ, ಜೀವನದ ಸಂಕೀರ್ಣ ಸಮಸ್ಯೆಗಳು ಇವೆಲ್ಲ ಈ ಸಣ್ಣ ಕಥಾ ಪ್ರಕಾರಕ್ಕೆ ಪೋಷಣೆಯನ್ನು ನೀಡಿವೆಯೆಂದು ಭಾವಿಸಬಹುದು.

ಸಣ್ಣಕಥೆಯು ಭಾವಗೀತೆಯ ಜೊತೆ ಜೊತೆಗೆ ಹುಟ್ಟಿ ತನ್ನದೇ ಆದ ಸ್ವತಂತ್ರ
ತ್ವವನ್ನು ತಂರಜ್ಞೊತ್ತಿಗೆ ರೂಪಿಸಿಕೊಂಡಿದ್ದಷ್ಟೇ ಅಲ್ಲದೆ, ತುಂಬ ಜನಪ್ರಿಯ ಸಾಹಿತ್ಯ
ಪ್ರಕಾರವಾಗಿಯೂ ಬೆಳೆಯಿತು. ಆಧುನಿಕ ಕನ್ನಡದ ಕಥಾಸಾಹಿತ್ಯವನ್ನು ಅವಲೋಕಿಸಿದಾಗ
ಈ ಸ್ಪಷ್ಟವಾದ ಮಜಲುಗಳು ಕಂಡುಬರುತ್ತವೆ. ಜೀವನದರ್ಶನ, ನಿರೂಪಣಾ ವಿಧಾನ,
ಶೈಲಿವಿಧ್ಯ, ಭಾಷೆಯ ಬಳಕೆಯ ಹಿನ್ನೆಲೆಯಲ್ಲಿ ಈ ಹಂತಗಳನ್ನು ಗುರುತಿಸಬಹುದು.

ಸಪೋದಯ ಮಾರ್ಗ : ಈ ಮಾರ್ಗದಲ್ಲಿ ಮೊದಲು ಹೆಜ್ಜೆ ಹಾಕಿದವರು ಶ್ರೀನಿವಾಸ
ಸರದೇಶಪಾಂಡೆಯವರು. ಇವರಿಗಿಂತ ಪೂರ್ವದಲ್ಲಿ ಪಂಜೆ ಮಂಗೇಶರಾಯರು, ಕೆರೂರು ವಾಸು
ದೇವಾಚಾರ್ಯರು, ಎಂ. ಎಸ್. ಕಾಮತರು ಈ ದಿಸೆಯಲ್ಲಿ ಕಾರ್ಯಮಾಡಿದುದನ್ನು ಮರೆ
ಯುವಂತಿಲ್ಲ. ಆದರೆ ೧೯೨೦ರಲ್ಲಿ ಪ್ರಕಟವಾದ ಶ್ರೀನಿವಾಸರ "ಸಣ್ಣಕತೆ"ಗಳು ಗ್ರಂಥ
ರೂಪದಲ್ಲೇ ಆಧುನಿಕ ಸಾಹಿತ್ಯ ಪ್ರಪಂಚದಲ್ಲಿ ಸಣ್ಣಕತೆಗಳಿಗೆ ಬಾಗಿಲು ತೆರೆಯಿತು ಎಂದು ಖಚಿತ
ವಾಗಿ ಹೇಳಬಹುದು.

ಕನ್ನಡದ ಮೊಟ್ಟಮೊದಲ ಸಣ್ಣಕತೆಗಾರರೆಂದು ಸರ್ವಶ್ರೀ ಪಂಜೆ ಮಂಗೇಶರಾಯರು,
ಕೆರೂರ ವಾಸುದೇವಾಚಾರ್ಯರು, ಎಂ. ಎಸ್. ಕಾಮತರ ಹೆಸರುಗಳನ್ನು ಒಮ್ಮೆಲೇ ಒಟ್ಟು
ಗೂಡಿಸಿ ಹೇಳಲಾಗುತ್ತದೆ. ಪಂಜೆಯವರು ಕನ್ನಡ ಸಣ್ಣಕತೆಯ ಮೂಲಪುರುಷರು ಎನ್ನುವ
ವಿಷಯಕ್ಕೆ ಎರಡಿಲ್ಲ ಎಂದು ಗೋವಿಂದ ಪೈಗಳು ಅಭಿಪ್ರಾಯಪಟ್ಟಿದ್ದಾರೆ. ಆದರೆ ಪಂಜೆ
ಮಂಗೇಶರಾಯರ ಕತೆಗಳಲ್ಲಿ ಆಧುನಿಕ ಸಣ್ಣಕತೆಯ ಸಂಪೂರ್ಣ ಲಕ್ಷಣಗಳು ಕಂಡು
ಬರುವುದಿಲ್ಲ. ಅವುಗಳಲ್ಲಿ ಅನುಕರಣೆ, ರಂಜಕತೆ, ಪೌರೋಡಗಳು ಹಾಸುಹೊಕ್ಕಾಗಿ
ಬೆರೆತುಕೊಂಡಿರುವುದನ್ನು ಕಾಣಬಹುದು.

ಕೆರೂರ ವಾಸುದೇವಾಚಾರ್ಯರು ತಮ್ಮ `ಸಚಿತ್ರ ಭಾರತ' ಮತ್ತು `ಶುಭೋದಯ'
ಪತ್ರಿಕೆಗಳಲ್ಲಿ ಕೆಲವು ಐತಿಹಾಸಿಕ ಮತ್ತು ಪತ್ತೇದಾರಿಯ ಕುತೂಹಲ ಕೆರಳಿಸುವ ಕಥೆಗಳನ್ನು
ಬರೆದರು. ಅವುಗಳಲ್ಲಿ ನೀತಿಬೋಧೆಯು ಎದ್ದು ತೋರುತ್ತದೆ. ಸಹಜತೆ, ವಾಸ್ತವತೆ ಕಡಿಮೆ.
ಇವರ `ಪ್ರಕೃತಿಬಲ' ಮಲ್ಲೇಶಿಯ ನಲ್ಲೆಯರು ' `ಕರಿಗಾಲಿನ ಗಿರಿರಾಯರು 'ಮತ್ತು
'ಮೆಚ್ಚಿದ ಮುತ್ತು ' ಕತೆಗಳಲ್ಲಿ ಉತ್ತಮ ಕಥಾವಸ್ತುವಿದೆ. ಇವರು ಭಾಷಾಂತರ ಕತೆಗಳನ್ನು
ಬರೆದಂತೆ ಕೆಲವು ಸ್ವತಂತ್ರ ಕತೆಗಳನ್ನೂ ರಚಿಸಿರುವರು. ಯಾಕೋ ಇವರ ಕತೆಗಳು ಹೆಚ್ಚು
ಜನರ ಗಮನ ಸೆಳೆಯಲಿಲ್ಲ.

ಕ್ರಿ. ಶ. ಸುಮಾರು ೧೯೦೦ರಲ್ಲಿ ಮಂಗಳೂರಿನ `ಸುಬೋಧಿನಿ ' ಮಾಸಪತ್ರಿಕೆಯಲ್ಲಿ
ಪಂಜೆಯವರ `ಸನ್ನ ಚಿಕ್ಕತಾಯಿ' `ಸನ್ನ ಚಿಕ್ಕ ತಂದೆ ' ಎಂಬ ಮೊದಲ ಕತೆಗಳು ಪ್ರಕಟ
ವಾದವು. ಇವುಗಳಲ್ಲಿ ನೇರ ಕಥನಕಲೆ, ಪೌರೋಡಪರ ಶೈಲಿಯನ್ನು ಕಾಣಬಹುದು. ಎಂ.
ಎಸ್. ಕಾಮತರು `ಅಂದಿನ ಆ ಊರು ' ಎಂಬ ಕಥಾ ಸಂಗ್ರಹ ಪ್ರಕಟಿಸಿದರು.

ಸಣ್ಣಕತೆಯ ಲಕ್ಷಣ, ವೈಶಿಷ್ಟ್ಯಗಳನ್ನು ಸೂಕ್ಷ್ಮವಾಗಿ ಅರಿತುಕೊಂಡು ಅದರ ಸಾಧ್ಯ
ತೆಯನ್ನು ಕಂಡುಹಿಡಿದು, ಸ್ಥಾಪಿಸಿ ಆಧುನಿಕ ಸಾಹಿತ್ಯ ನಿರ್ಮಿತಿಯಲ್ಲಿ ಆ ಸಾಹಿತ್ಯ
ಪ್ರಕಾರಕ್ಕೂ ಒಂದು ಮಹತ್ವದ ಸ್ಥಾನವನ್ನು ಕಲ್ಪಿಸಿಕೊಡಬೇಕೆಂಬ ಮಹತ್ವಾಕಾಂಕ್ಷೆಯನ್ನಿಟ್ಟು

ಕೊಂಡು ಕನ್ನಡದಲ್ಲಿ ಸಣ್ಣಕತೆಗಳನ್ನು ಬರೆಯಲು ಪ್ರಾರಂಭಿಸಿದವರು. ಶ್ರೀ ಮಾಸ್ತಿ ವೆಂಕಟೇಶ
ಅಯ್ಯಂಗಾರ ಅವರು. ಸಣ್ಣಕತೆಯ ಜನಕರೆಂದು ಪ್ರಸಿದ್ಧರಾಗಿರುವ ಇವರು ಶ್ರೀನಿವಾಸ
ಎನ್ನುವ ಕಾವ್ಯನಾಮದಿಂದ ಕನ್ನಡ ಸಾಹಿತ್ಯಕ್ಕೆ ಅಪಾರವಾದ ಸಣ್ಣಕತೆಯ ಬೆಳೆಯನ್ನು
ಬೆಳೆದುಕೊಟ್ಟರು.

ಕನ್ನಡದಲ್ಲಿ ಮೊಟ್ಟ ಮೊದಲು ಸಣ್ಣಕತೆಗಳನ್ನು ಬರೆದವರು ಅವರೇ ಹೌದೋ
ಅಲ್ಲವೋ ಎನ್ನುವುದನ್ನು ಚರ್ಚಿಸಿ ಗೊಂದಲಕ್ಕೊಳಗಾಗದೆ, ಆಧುನಿಕ ಕನ್ನಡ ಸಾಹಿತ್ಯದಲ್ಲಿ
ಒಬ್ಬನೇ ಲೇಖಕ ರಚಿಸಿದ ಸಣ್ಣಕತೆಗಳ ಸಂಖ್ಯೆ, ಬೆಲೆ, ಪ್ರಭಾವ, ಪರಿಣಾಮ ಈ ದೃಷ್ಟಿಗಳಿಂದ
ಅವರು ಕನ್ನಡದಲ್ಲಿ ಸಣ್ಣಕತೆಗಳ ತಂದೆ ಎನ್ನುವುದರಲ್ಲಿ ಸಂದೇಹವಿಲ್ಲ. ೧೯೧೯ನೆಯ
ವರ್ಷದಲ್ಲಿ ಪ್ರಬುದ್ಧ ಕರ್ನಾಟಕ ' ಜನ್ಮತಾಳುವ ಮೊದಲೇ ಶ್ರೀನಿವಾಸರ ` ರಂಗಪ್ಪನ
ಮದುವೆ ' ಎಂಬ ಸಣ್ಣಕತೆ `ಮಧುರವಾಣಿ' ಪತ್ರಿಕೆಯಲ್ಲಿ ಅಚ್ಚಾಗಿತ್ತು . ಇದಕ್ಕೂ ಮೊದಲು
`ಸಚಿತ್ರ ಭಾರತ, ' `ವಾಗ್ಭೂಷಣ,' `ಸದ್ಬೋಧಚಂದ್ರಿಕೆ, ' `ಸುವಾಸಿನಿ, ' `ಶ್ರೀಕೃಷ್ಣ
ಸೂಕ್ತ ' ಮುಂತಾದ ಪತ್ರಿಕೆಗಳಲ್ಲಿ ಬೇರೆ ಬೇರೆ ಲೇಖಕರ ಸಣ್ಣಕತೆಗಳು ಬರುತ್ತಿದ್ದವು.

ಹೀಗೆ `ರಂಗಪ್ಪನ ಕಥಾಮಾಲಿಕೆ'ಯಿಂದ ಪ್ರಾರಂಭವಾದ ಶ್ರೀ ಮಾಸ್ತಿಯವರ ಕಥಾ
ಸಾಹಿತ್ಯದ ಕೃಷಿ, ಇಂದಿನ ಸಣ್ಣಕತೆಯ ಬೆಳೆಗೆ ಸಹಾಯಕವಾಯಿತು. ಸಣ್ಣಕತೆಯ ಬೆಳೆ
ಬಂದದ್ದು ಅವರ ಕೈಯಿಂದಲೇ. ಮಾಸ್ತಿಯವರ ಜೀವನದೃಷ್ಟಿ ಅಭಿವ್ಯಕ್ತಿಯ ರಚನಾ ವಿಧಾನ
ತೆರೆದ ಕಣ್ಣಿನಿಂದ ಬದುಕಿನ ಮಗ್ಗುಲನ್ನು ನೋಡುವ ವಿಶಿಷ್ಟ ಮನೋಭಾವಗಳೇ ಅವರ
ಕಲೆಗೆ ನೆಲೆ ಎನ್ನಬಹುದು. ಅವರ ಮೊದಲ ಕಥಾಸಂಕಲನ ೧೯೨೦ರಲ್ಲಿ ಪ್ರಕಟವಾಯಿತು.
ರಂಗಪ್ಪ, ರಂಗಶಾಮಿ, ವೆಂಕಟಶಾಮಿ, ಉಗ್ರಪ್ಪ, ಅಂಜಪ್ಪ ಇತ್ಯಾದಿ ಇವರ ಕತೆಯ ಪಾತ್ರಗಳು
ನಿತ್ಯಜೀವನದಲ್ಲಿ ಕಣ್ಣೆದುರಿಗೆ ಹರಿದಾಡುವವರೆ ಆಗಿದ್ದಾರೆ. `ಮೊಸರಿನ ಮಂಗಮ್ಮ '
`ಕಾಮದ ಹಬ್ಬದ ಒಂದು ಕತೆ',`ವೆಂಕಟಶಾಮಿಯ ಪ್ರಣಯ',` ಇಂದಿರೆಯೋ ಅಲ್ಲವೋ
ಇವು ಜೀವನದ ಸಭ್ಯದ ಸ್ಥಿತಿಗೆ ಸಹನೆ ತೋರಿಸಿದ, ಅವರ ಆದರ್ಶದ ಒಲವನ್ನು ಚಿತ್ರಿಸಿ
ಕತೆಗಳು.

ಶ್ರೀನಿವಾಸರ ಪ್ರಭಾವದ ಜಾಡಿನಲ್ಲಿ ನಡೆದೂ ಸ್ವತಂತ್ರ ವೈಶಿಷ್ಟ್ಯಗಳನ್ನು ಉಳಿ
ಕೊಂಡವರು, `ಆನಂದ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಅಜ್ಜಂಪುರದ ಸೀತಾರಾಮ
ಅವರು. ಪ್ರಣಯ ಕತೆಗಳಿಂದ ಹೆಸರುವಾಸಿಯಾಗಿರುವ ಇವರ ಕಥನಕಲೆ ಮಧುರವಾಗಿ
ಪ್ರಣಯಭರಿತವಾದ ಸರಳ, ಸುಂದರ ಚಿತ್ರನಿರೂಪಣೆಯಲ್ಲಿ ಇವರದು ಎತ್ತಿದ ಕೈ
`ಕೊನೆಯ ಎಂಟಾಣೆ ' ಈ ಕತೆಯಲ್ಲಿ ಬಡತನದಿಂದ ವ್ಯಕ್ತಿಯ ಆಶೆ, ಆಕಾಂಕ್ಷೆ ಹೇ
ವಿಫಲವಾಗುತ್ತವೆಂಬ ಚಿತ್ರಣ ಓದುಗರ ಮನಸ್ಸಿನಲ್ಲಿ ಸ್ಥಿರವಾದ ಗಾಢವಾದ ಪರಿಣಾ
ಬೀರುತ್ತದೆ. `ನಾಕೊಂದ ಹುಡುಗಿ' ಇವರ ಕಥಾಸಾಹಿತ್ಯ ಮಾರ್ಗದಲ್ಲಿ ಒಂದು ಮೈಲುಗಲ್ಲು

ಕೆ. ಗೋಪಾಲಕೃಷ್ಣರಾಯರು ಒಳ್ಳೆಯ ಪ್ರಯೋಗಶೀಲರು. ಪತ್ರಕಥೆ, ದಿನಚರಿಕ
ಇತ್ಯಾದಿ ಹೊಸ ತಂತ್ರಗಳ ಬಳಕೆಯಲ್ಲಿ ಇವರು `ಹುಚ್ಚುಮನಿ', ` ನಮ್ಮ ದೊಡ್ಡಪ್ಪ
`ಡಾ. ಸುಶೀಲಾ ಸಂಕೇತ ' ಮುಂತಾದ ಕತೆಗಳನ್ನು ಬರೆದಿದ್ದಾರೆ.

ಉತ್ತರ ಕರ್ನಾಟಕದ ಜನಪದ ಜೀವನವನ್ನು ಕಲಾವಸ್ತುವನ್ನಾಗಿಟ್ಟುಕೊಂಡು ಜಾನಪದ
ತೆಗಳನ್ನು ಬರೆದವರಲ್ಲಿ ಶ್ರೀ ಬೆಟಗೇರಿ ಕೃಷ್ಣಶರ್ಮರದು ವಿಶಿಷ್ಟವಾದ ಸಾಧನೆ. `ಆನಂದ
ಂದ' ಎಂಬ ಕಾವ್ಯನಾಮದಿಂದ ಬರೆಯುತ್ತಿರುವ ಇವರ ಕ್ಷೇತ್ರ ಸೀಮಿತವಾದದ್ದು. ಇದೇ
ುಂಬಿಗೆ ಸೇರಿದ ಕೃಷ್ಣಕುಮಾರ ಕಲ್ಲೂರರ ಶೈಲಿ ಕಾವ್ಯಮಯವಾಗಿದೆ. ಟೆಂಗ್ಸ
ೋವಿಂದರಾಯರ `ಗಂಗೆಯ ಗುತ್ತಿಗೆ' ಕಥಾಸಂಕಲನದ `ಛಪ್ಪರ ಬಂಧ' ಮತ್ತು `ಗಂಗೆಯ
ುತ್ತಿಗೆ', ಉತ್ತಮ ಕಥೆಗಳು. ರಂ. ಶ್ರೀ ಮುಗಳಿಯವರ `ಕನಸಿನ ಕೆಳದಿ' ಪಿತಾಂತು ವೇಶ್ಯೆಯ,
ತೆಯನ್ನೊಳಗೊಂಡಿದೆ. ಶೈಲಿ ನಿರರ್ಗಳವಾಗಿದೆ. ಕನ್ನಡ ಕಥಾಕ್ಷೇತ್ರದಲ್ಲಿ ಗೋರೂರು
ಾಮಸ್ವಾಮಿ ಅಯ್ಯಂಗಾರರದು ಒಂದು ವಿಶಿಷ್ಟವಾದ ಸ್ಥಾನ. ಗ್ರಾಮಾಂತರ ಪ್ರದೇಶದಲ್ಲಿಯೆ
ುಟ್ಟಿ ಬೆಳೆದ ಇವರು ಗ್ರಾಮ್ಯಭಾಷೆಯಲ್ಲಿಯೆ ಅಲ್ಲಿಯ ಜೀವನವನ್ನು, ಸರಸವಾಗಿ,
ಸೋದಪೂರ್ಣವಾಗಿ ಚಿತ್ರಿಸಿದ್ದಾರೆ.

೧೯೨೦ರಿಂದ ೩೦ರ ಅವಧಿಯಲ್ಲಿ ದೇವುಡು (ಸೋಲೋ ಗೆಲವೋ), ಕಾರಂತ (ಸಮ್ಮ
ಾಷ್ಟರು), ಬೇಂದ್ರೆ (ಪಾಲಾ ಪೂ), ಮುಗಳಿ (ಕನಸಿನ ಕೆಳದಿ), ಪುತಿನ (ಧ್ವಜರಕ್ಷಣೆ)
ಾಜರತ್ನಂ (ಹಸಿಗಳು), ವಿ. ಸೀ. (ರಾಧೆ), ಕುವೆಂಪು (ಸನ್ಯಾಸಿ ಮತ್ತು ಇತರ ಕತೆಗಳು)
ೊದಲಾದ ಹಿರಿಯ ಶ್ರೇಷ್ಠ ಸಾಹಿತಿಗಳೆಲ್ಲ ಸಣ್ಣಕಥೆಯ ಕ್ಷೇತ್ರದಲ್ಲಿ ಕೃಷಿಗೈದು ಹುಲುಸಾದ
ೆಳೆ ಬೆಳೆಸಿದ್ದಾರೆ.

ಪ್ರಗತಿಶೀಲ ಮಾರ್ಗ : ೧೯೨೦ರ ಸುಮಾರಿನಲ್ಲಿ ಕನ್ನಡ ಕಥೆಗಾರರ ಮುಂದೆ
ಣ್ಣಕತೆಯ ಬಗ್ಗೆ ಸ್ಪಷ್ಟವಾದ ರೂಪರೇಷೆಗಳು ಇದ್ದವು. ಸಣ್ಣಕತೆಗಳ ಬರವಣಿಗೆಯ ಜೊತೆ
ೊತೆಯಲ್ಲಿಯೆ ಸಣ್ಣ ಕತೆಯ ಬಗ್ಗೆ ವಿಮರ್ಶೆಯೂ ಪ್ರಾರಂಭವಾಯಿತು. ಜಾಗತಿಕ ದ್ವಿತೀಯ
ುದ್ಧವಾಯುದ್ಧದ ಪರಿಣಾಮಗಳು ಕತೆಗಾರರ ಮನಸ್ಸಿನ ಮೇಲೆಯೂ ಭೀಕರ ಪರಿಣಾಮ
ನ್ನುಂಟುಮಾಡಿದವು. ಬದುಕಿನ ಸಂಗ್ರಾಮದಲ್ಲಿ ಕತೆಗಾರನ ಅತೃಪ್ತ ಮನೋಭೂಮಿಕೆ
ುಲ್ಲಿ ಕಾವು ಹುಟ್ಟಿಸಿದಂತೆ, ಸ್ವಾತಂತ್ರ್ಯ ಚಳುವಳಿಯೂ ಹೊಸ ಹೊಸ ಸಮಸ್ಯೆ, ಚಿಂತನೆ,
ಾವನೆಗಳನ್ನು ಜನರ ಮನಸ್ಸಿನಲ್ಲಿ ಉಂಟು ಮಾಡಿತು.

`ಕಲೆಗಾಗಿ ಕಲೆ' ಎನ್ನುವ ಕೂಗು ಕಾಲಾಂತರದಲ್ಲಿ ಕರಗಿ `ಬದುಕಿಗಾಗಿ ಕಲೆ' ಎನ್ನುವ
ೊಸ ಧ್ವನಿಯೊಂದು ಜಾಗತಿಕವಾಗಿ ಹುಟ್ಟಿಕೊಂಡ ಸಂದರ್ಭದಲ್ಲಿ ಭಾರತದಲ್ಲಿಯೂ
ೀದೇ ಉದ್ದೇಶಿತ `ಪ್ರಗತಿಶೀಲ ಚಳುವಳಿ' ಹುಟ್ಟಿಕೊಂಡಿತು. ಇದಕ್ಕೆ ಕಾರ್ಲಮಾರ್ಕ್ಸ್,
ಿನಿನ್, ಏಂಗೆಲ್ಸ್‌ರ ವರ್ಗಸಮರದ, ಸಮತಾವಾದದ ಸಿದ್ಧಾಂತ ಪ್ರೇರಣೆ ನೀಡಿತು.
ಾದು ಸಾಹಿತಿಗಳ ವೈಚಾರಿಕ ದಿಕ್ಕನ್ನೇ ಬದಲಿಸಿತು. ಸಾಮ್ಯವಾದ (Communism)
ಿದ್ಧಾಂತದ ಕಡೆಗೆ ಒಲವಿರುವ ಮತ್ತು ವೈಚ್ಛಾಸಕ ದೃಷ್ಟಿಕೋನವುಳ್ಳ ಬಹುಪಾಲು ಭಾರತೀಯ
ುರಹಗಾರರು ಸ್ವಾತಂತ್ರ್ಯಾನಂತರವೂ ಭಾರತೀಯರ ಸ್ಥಿತಿ-ಗತಿಗಳು ಸುಧಾರಿಸದೆ, ಇನ್ನಷ್ಟು
ುಲ್ಬಣಗೊಂಡಿರುವುದನ್ನು ಕಂಡು ಅದಕ್ಕೆ ಸೈದ್ಧಾಂತಿಕ ಹಿನ್ನೆಲೆಯಲ್ಲಿಯೆ ಮೂಲಭೂತವಾಗಿ
ಿದಲಾವಣೆಯ ಮಾರ್ಗವನ್ನು ಕಂಡುಹಿಡಿದರು. ಅದಕ್ಕೆ ಪ್ರೇರಕವಾಗುವಂತೆ ಸಾಹಿತ್ಯವನ್ನು
ೃಷ್ಟಿಮಾಡಿದರು. ಹೋರಾಟದ ಅನುಭವವಿರುವ, ಸಾಮಾಜಿಕ ಸ್ಥಿತಿಗತಿಗಳನ್ನು ಸಂಪೂರ್ಣ
ರ್ಥಮಾಡಿಕೊಂಡಿರುವ, ಸಮಾಜದ `ಬೇಸ್' ಗೊತ್ತಿರುವ, ಸಾಮಾಜಿಕ ರೋಗಗಳನ್ನು

ಕಂಡಿರುವ, ಅದಕ್ಕೆ ಸರಿಯಾದ ಮದ್ದು ಕಂಡುಹಿಡಿದ ವೈದ್ಯರಂತೆ ಪ್ರಗತಿಶೀಲ ಲೇಖಕರು ಔಷಧದ ರೂಪದಲ್ಲಿ ಹರಿತವಾದ ಲೇಖನಿಯ ಅಸ್ತ್ರವನ್ನು ಬಳಸಿ ಕನ್ನಡ ಸಾಹಿತ್ಯದ ದಿಕ್ಕನ್ನೇ ಬದಲಿಸಿದರು.

`ಪ್ರಗತಿಶೀಲ 'ಚಳುವಳಿಯ ಮುಂಚೂಣಿಯಲ್ಲಿ ನಿಂತವರು ಅ. ನ. ಕೃ., ತ.ರಾ.ಸು., ನಿರಂಜನ, ಕಟ್ಟೀಮನಿಯವರೆನ್ನಬಹುದು. ಅ. ನ.ಕೃ. ಅವರು ೧೯೨೨ರಲ್ಲಿ `ಕಾಮನ ಬಿಲ್ಲು,' ಕಥಾಸಂಗ್ರಹವನ್ನು ಪ್ರಕಟಿಸಿದರು. ಅವರ ನೇತೃತ್ವದಲ್ಲಿ ನೆರೆದ ಕನ್ನಡ ಕತೆಗಾರರ ಬಳಗ ಸಂಪ್ರದಾಯ ಸಾಹಿತ್ಯವನ್ನು ಜಿಡ್ಡುಗಟ್ಟಿದ ವ್ಯವಸ್ಥೆಯನ್ನು ಅಪ್ಪಿಕೊಂಡು ಹೊರೆಟದ್ದನ್ನು ಪ್ರಗತಿಶೀಲ ಮನೋಭಾವದ ಲೇಖಕರು ಕಟುವಾಗಿ ವಿಮರ್ಶಿಸಿ, ನಿತ್ಯ ಬದುಕಿನ `ವಾಸ್ತವ ಚಿತ್ರಣ'ಕ್ಕೆ ಕರೆಕೊಟ್ಟರು. ಹೊಟ್ಟೆ ಹಸಿದ ಹೊತ್ತಿನಲ್ಲಿ, ದಾಸ್ಯದ ಉರುಳಿನಲ್ಲಿ ಸಿಲುಕಿರುವ ಸಂದರ್ಭದಲ್ಲಿ ರಾಮ, ಸೀತಾ, ಸಾವಿತ್ರಿ, ದ್ರೌಪತಿ ಎನ್ನುವ ಸಂಪ್ರದಾಯ ಶರಣ ಬರವಣಿಗೆ ನಮಗೆ ಬೇಕಿಲ್ಲ. ಹೊಸ ರೀತಿಯ ಬರವಣಿಗೆ, ಸಾಮಾನ್ಯ ಜನರ ಆಶೋತ್ತರಗಳ ಮುಖವಾಣಿಯಾದ ಬರವಣಿಗೆಬೇಕು. ನಿತ್ಯ ಬದುಕಿನ ಪ್ರಾಥಮಿಕ ಅವಶ್ಯಕತೆಗಳಾದ ಅನ್ನ , ಬಟ್ಟೆ, ವಸತಿ ಒದಗಿಸುವ ಸಾಹಿತ್ಯ ಬರಬೇಕು ಎಂದು ಹೇಳಿದರು. `` ರಾಜಸೇವಾಸಕ್ತರು ಬರೆಯುವ ಭಟ್ಟಂಗಿತನದ ಸಾಹಿತ್ಯದಿಂದ ಜನ- ಮನದ - ದೇಶದ ಏಳ್ಗೆ ಆಗುವುದಿಲ್ಲ '' ಎಂಬ ಅವರ ಮಾತಿನಲ್ಲಿಯೇ ಪ್ರಗತಿಶೀಲ ಚಳುವಳಿಯ ರೂಪರೇಷೆಗಳನ್ನು ಗುರುತಿಸಬಹುದಾಗಿದೆ.

ಇದರಿಂದ ಸಮಾಜದ ಮೇಲೆ , ಜನರ ಬದುಕಿನ ಮೇಲೆ ದೇಶದ ಮೇಲೆ ಯಾವ ರೀತಿಯ ಪರಿಣಾಮವಾಯಿತು ಎನ್ನುವುದಕ್ಕಿಂತಲೂ ಸಣ್ಣಕಥಾ ಸಾಹಿತ್ಯಕ್ಕೆ ವೇಗ ಬಂತು. ತಂತ್ರ, ಶೈಲಿ, ವಸ್ತು ವೈವಿಧ್ಯತೆಯಲ್ಲಿ ಮುಂಗಾರು -ಮಿಂಚು-ಗುಡುಗುಗಳು ಕಾಣಿಸಿಕೊಂಡವು. ದೀನದಲಿತರ, ಕೂಲಿಕಾರರ, ರೈತರ ಜೀವನದ ಬವಣೆ, ಬೇಗುದಿ ಕಥಾವಸ್ತುಗಳಾಗಲು ಪ್ರಾರಂಭಿಸಿದವು. ನಿರೂಪಕಶಕ್ತಿ ಅಲಗಿನ ಮೊನೆಯಷ್ಟೇ ಹರಿತವಾಗಿ ಓದುಗರ ಮನಸ್ಸನ್ನು ತಿವಿಯಲು ಆರಂಭಿಸಿತು.

ತ. ರಾ. ಸು. ಅವರ `ಗಿರಿಮಲ್ಲಿಗೆಯ ನಂದನದಲ್ಲಿ ' ರಸವತ್ತಾದ ಶೈಲಿಯಿಂದ ಕೂಡಿದ ರಂಜನೀಯ ಕತೆಗಳ ಸಂಗ್ರಹ. ಬಸವರಾಜ ಕಟ್ಟೀಮನಿಯವರು `ಕಾರವಾನ್' ಕಥಾಸಂಕಲನ ದಿಂದ ಹಿಡಿದು,` ಹುಲಿಯಣ್ಣನ ಮಗಳು,' ಸಂಗ್ರಹದವರೆಗೆ ೮ ಉತ್ತಮ ಕಥಾಸಂಕಲನ ಗಳನ್ನು ಪ್ರಕಟಿಸಿದರು. `ಸೋಲೋ ಗೆಲವೋ ' ಕೃತಿಯ ದೇವುಡು, `ಪಾಲಾಪೂ' `ಹಿರಿದ ಕತ್ತಿ',`ಏಕಾಶಿನಿ,' `ಮಗುವಿನ ಕರೆ 'ಕತೆಗಳ ದ.ರಾ. ಬೇಂದ್ರೆ, `ಧ್ವಜರಕ್ಷಣೆಯ' ಪು.ತಿ.ನ. `ಕುರಿಯ ಹಿಂಡು', `ಜಲಧರ',`ಕ್ಷೀರಸಾಗರ 'ಕಥೆಗಳ ಎಂ. ವಿ. ಸೀತಾರಾಮಯ್ಯ, ಅಚ್ಚಕನ್ನಡತನ ಮತ್ತು ಜೀವನ ದರ್ಶನ ಪ್ರತೀಕವಾದ `ಮಾತನಾಡುವ ಗಂಗು' `ಜೂಜು ಗಾರ' ಕತೆಗಳ ಅಶ್ವತ್ಥ-ಹೀಗೆ ಇವರೆಲ್ಲ ಈ ಧೋರಣೆಯನ್ನಿಟ್ಟುಕೊಂಡು ಕತೆ ರಚಿಸಿದ್ದಾರೆ.

`ಸಂಪಿಗೆಯ ಹೂ',`ಚೈತ್ರ ಪಲ್ಲವ 'ಗಳ ಕರ್ತೃ ವ್ಯಾಸರಾಯ ಬಲ್ಲಾಳರು ಮುಂಬೈ ಜೀವನದ, ಅಲ್ಲಿನ ಸುಶಿಕ್ಷಿತ ಜನರ ಹಲವಾರು ಸಮಸ್ಯೆಗಳನ್ನು ಯಥಾವತ್ತಾಗಿ ಚಿತ್ರಿಸಿದ್ದಾರೆ.

ಕಪ್ಪು ಹುಡುಗಿ', `ನಾಳಿನ ಕನಸು 'ಗಳ ಕರ್ತೃ ದ. ಬಾ. ಕುಲಕರ್ಣಿ, `ಗೀಜಗರೆ', `ಬಯಲು ಂಗಾರ ' ಸಂಕಲನಗಳ ರಾಮಚಂದ್ರ ಕೊಟ್ಟಲಗಿ ಸಹಜವಾದ ಸರಳವಾದ ಶೈಲಿಯಲ್ಲಿ ಪಾತ್ರಗಳಲ್ಲಿ ಧ್ಯೇಯ - ಧೋರಣೆಗಳಲ್ಲಿ ಆಶಾವಾದ, ಹೃದಯಸ್ಪಂದನವನ್ನು, ವಸ್ತುವಿನ ಆಯ್ಕೆಯಲ್ಲಿ ವಿಶಿಷ್ಟತನವನ್ನು ತೋರಿದ್ದಾರೆ. ವಿಡಂಬನೆಗೆ ಹೆಸರಾದ ವಿ. ಜಿ. ಭಟ್ಟ, ವಸ್ತು ಾಗೂ ಕಥನಕಲೆಯಲ್ಲಿ ಹೊಸ ದೃಷ್ಟಿಯುಳ್ಳ ಶ್ರೀನಿವಾಸ ಹಾವನೂರ, `ಅನ್ನಪೂರ್ಣ', ಕೊನೆಯ ಗಿರಾಕಿ', `ಯಾವ ಜನ್ಮದ ಶಾಪ' ಗಳ ನಿರಂಜನ, `ರುದ್ರವೀಣೆ ' `ಮೋಚಿ' ತೆಗಳ ಭಾರತೀಪ್ರಿಯ, ಕರಾವಳಿಯ ನೈಜ ಚಿತ್ರಣ, ನೈಪುಣ್ಯವುಳ್ಳ ಭಾರತೀಸುತ, ಮಿರ್ಜಿ ಅಣ್ಣಾರಾಯ, `ಮೀನಿನ ಹೆಜ್ಜೆ ''ಶವದ ಮನೆ' ಗಳ ಚದುರಂಗ, `ಆಶೆಯ ಶಿಶು'ವಿನ ಕೆ. ವೆಂ. ರಾಜಗೋಪಾಲ, `ರೇವು' ಕತೆಯ ನರೇಂದ್ರಬಾಬು, `ನಿಂಬಿಯ ನಂಜು 'ಕತೆಯ ಕೃಷ್ಣಮೂರ್ತಿ ಪುರಾಣಿಕ ಹೀಗೆ ನೂರಾರು ಮಂದಿ ಕತೆಗಾರರು ಆಧುನಿಕ ಜೀವನದ ಹಲವಾರು ವಸ್ತುವಿಷಯಗಳನ್ನು ಆರಿಸಿಕೊಂಡು ಸಣ್ಣಕತೆಗಳನ್ನು ರಚಿಸಿದ್ದಾರೆ.

೧೯೪೫ರಲ್ಲಿ ಯುದ್ಧ ನಿಂತು ೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದರೂ ಕನ್ನಡ ಸಾಹಿತ್ಯದಲ್ಲಿ, ಸಣ್ಣಕತೆಗಳಲ್ಲಿ ಹೆಚ್ಚಿನ ಯಾವ ಬದಲಾವಣೆಯೂ ಆಗಲಿಲ್ಲ. ಆದರೆ ಈ ಅವಧಿಯಲ್ಲಿ ಅನೇಕ ಜನ ಮಹಿಳೆಯರು ಕನ್ನಡ ಕಥಾಸಾಹಿತ್ಯ ರಚನೆಗೆ ಕೈಹಾಕಿದ್ದು ಗಮನಾರ್ಹ ಸಂಗತಿ. ಕೊಡಗಿನ ಗೌರಮ್ಮ, ಶ್ಯಾಮಲಾದೇವಿ ಬೆಳಗಾಂವಕರ, ಎಚ್. ವಿ. ಸಾವಿತ್ರಮ್ಮಾ, ತ್ರಿವೇಣಿಯಂಥವರು ಪ್ರಮುಖರೆನ್ನಬಹುದು.

ನವ್ಯಮಾರ್ಗ : ಕನ್ನಡ ಸಾಹಿತ್ಯದ ಪ್ರಗತಿಶೀಲತೆಯ ಆಂದೋಲನ ಕಾದಂಬರಿ, ಸಣ್ಣಕತೆಗಳಲ್ಲಿ ಕೊನರೊಡೆದು ಒಂದು ಮಹತ್ವದ ಪ್ರಕಾರವಾಗಿ ಬೆಳೆದು ಇನ್ನೂ ಜನಮನ ತಲುಪುತ್ತಿರುವಾಗಲೇ ಇನ್ನೊಂದೆಡೆ ನವ್ಯ ಸಾಹಿತ್ಯ ಪ್ರಕಾರ ಕನ್ನಡ ಸಾಹಿತ್ಯರಂಗದಲ್ಲಿ ಕಾಲು ಾಚಿತು. ವಸ್ತುವಿನ ಆಯ್ಕೆಯಿಂದ ಮೊದಲುಗೊಂಡು ನಿರೂಪಣಾ ವಿಧಾನ, ಭಾಷೆ, ತಂತ್ರ, ಪ್ರಾರಂಭ ಮತ್ತು ಮುಕ್ತಾಯ ಇವುಗಳಲ್ಲಿ ಹೊಸತನವನ್ನು ತಂದ ನವ್ಯಕತೆಗಳು ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಮನ್ವಂತರವನ್ನೇ ಹುಟ್ಟುಹಾಕಿದವೆನ್ನಬಹುದು. ಮೇಲ್ತರ ಗತಿಯ ಮತ್ತು ಸಾಮಾನ್ಯ ಜನರ ಜೀವನದರ್ಶನ, ಮಾನಸಿಕ ವಿಶ್ಲೇಷಣೆ, ಪ್ರತಿಮೆ, ಸಂಕೇತ, ವಿಚಾರವಾದ, ಡಾಂಭಿಕ ಆದರ್ಶ, ಮೂಢನಂಬಿಕೆ, ಹುಸಿಜೀವನ ಮೌಲ್ಯಗಳು, ಪ್ರಕೃತಿಯ ಪ್ರತಿಕ್ರಿಯೆಯ ಮನೋಭಾವ, ಮಿಂಚಿನ ಅರ್ಥಗರ್ಭಿತ ಧ್ವನಿಯ ಶೈಲಿ, ಇವುಗಳನ್ನೊಳಗೊಂಡ ನವ್ಯಕತೆಗಳು ಇತ್ತೀಚೆಗೆ ಕಾಣಿಸಿಕೊಳ್ಳುತ್ತಿವೆ. ಮೂಲಭೂತ ಮಾನವೀಯ ಪ್ರವೃತ್ತಿಗಳ ಚೊಕ್ಕ ಸುಂದರ ಹೃದಯಸ್ಪರ್ಶಿ ಚಿತ್ರಣ, ಸಮಾಜದ ಆರ್ಥಿಕ ವ್ಯವಸ್ಥೆ, ಅವ್ಯವಸ್ಥೆ, ಫ್ರಾಯ್ಡ್ ಮಂಥ ಮನೋವಿಜ್ಞಾನಿಗಳ ಪ್ರಭಾವ ನವ್ಯಕತೆಗಳಲ್ಲಿ ಕಂಡುಬರುತ್ತಿದೆ.

ಯಾಂತ್ರಿಕ ಯುಗದ ಜೀವನ ಮತ್ತು ವಸ್ತುನಾವೀನ್ಯಕ್ಕೆ ಅನುಸಾರವಾಗಿ, ತಂತ್ರ ಾವಿನ್ಯ, ನವ್ಯಕತೆಗಳಲ್ಲಿ ಎದ್ದುಕಾಣುತ್ತಿದೆ. ಮಾನಸಿಕ ವಿಜ್ಞಾನ ವಿಶ್ಲೇಷಣೆ, ಕತೆಯಲ್ಲಿ ೆಬ್ಬಜಾಲವನ್ನು ಮೀರಿದ `ಧ್ವನಿ' ಇಂತಹ ನವ್ಯಕತೆಗಳಲ್ಲಿ ಅಡಗಿರುವುದನ್ನು ಕಾಣಬಹುದು. ೊಸ ಹೊಸ ಸಂವೇದನೆಗೆ ಒಗ್ಗುವಂತಹ, ಅಭಿವ್ಯಕ್ತಿಯಲ್ಲಿ ಸಾಮರ್ಥ್ಯವಿರುವಂಥ, ತಂತ್ರ ೈಲಿಗಳನ್ನಿಟ್ಟು ಕೊಂಡು ನವ್ಯಸಂಪ್ರದಾಯ ಕನ್ನಡ ಸಾಹಿತ್ಯದಲ್ಲಿ ಮುಖಿಚಾಚಿತು.

ನವ್ಯಬರಹಗಾರರಿಗೆ ಸ್ವಾನುಭವವೇ ಸಾಹಿತ್ಯಿಕ ತಿರುಳಾಯಿತು. ನವೋದಯದಲ್ಲಿ ವ್ಯಕ್ತಿಯನ್ನು ಬದುಕಿನಿಂದ ಹೊರಗಿಟ್ಟು ನೋಡಿದರು, ಸಮಾಜದಲ್ಲಿ ಆತನ ಬಗೆಗಿರುವ ಬದುಕಿನ ಹಸಿವು ಹಂಬಲಗಳು ಅರಿವಿಗೆ ವೇದ್ಯವಾದರೂ, ನಿರೂಪಿಸುವಲ್ಲಿ ಅಂತರಿಕತೆಗೆ ಒತ್ತುಕೊಡಲಿಲ್ಲ. ನವ್ಯ ಬರಹಗಾರರಿಗೆ ವ್ಯಕ್ತಿಯ ಬದುಕಿನ ಬಾಹ್ಯಜಗತ್ತಿಗಿಂದಲೂ ಆಂತರಿಕ ಜಗತ್ತು ಗಂಭೀರವಾಗಿ ಗೋಚರಿಸಿತು. ನವೋದಯ ಬರಹಗಾರರಿಗೆ ಸಮಾಜಿಕ ಪ್ರಜ್ಞೆಯತ್ತ ಹೆಚ್ಚು ಗಮನ ಹರಿಯಿತು. ಆದರೆ ಅದನ್ನು ಗಂಭೀರವಾಗಿ ಚಿಂತನಕ್ಕೆ ಒಳಪಡಿಸಿ ಚಿತ್ರಿಸಲಿಲ್ಲ. ನವ್ಯ ಬರಹಗಾರರು ಮಾತ್ರ ನೆಲದಾಳದಲ್ಲಿ ಕಾಲು ಇಳಿಬಿಟ್ಟು ಬದುಕಿನ ಅಂತರ್ಯವನ್ನು ಅರಿಯಲು ಹೆಚ್ಚು ಹೆಚ್ಚು ಅಂತರ್ಮುಖಿಯಾಗಿ ಚಿಂತನೆಗೆ ತೊಡಗಿದರು. ತಮ್ಮನ್ನು ತಾವು ಶೋಧಿಸಿಕೊಳ್ಳುತ್ತ ತನ್ಮೂಲಕ ಬದುಕಿನ ಶೋಧನೆಗೆ ತೊಡಗಿದರು. ವಾಸ್ತವತೆ, ಮಣ್ಣಿನ ವಾಸನೆಗಳನ್ನು ಮೈಗೂಡಿಸಿಕೊಳ್ಳುವುದರಲ್ಲಿ ಶ್ರೇಷ್ಠತೆಯನ್ನು ಕಂಡುಕೊಂಡರು.

ನವೋದಯದ ಅತಿಭಾವುಕತೆಯಿಂದ ನವ್ಯ ಬರಹಗಾರರು ದೂರವಾಗಿ ವಾಸ್ತವಿಕತೆಯನ್ನು ಕಟ್ಟಿಕೊಂಡೇ ಬರೆಯಲು ಪ್ರಾರಂಭಿಸಿದರು. ವ್ಯಕ್ತಿಯ ಮಾನಸಿಕ ಒಳವ್ಯಾಪಾರಗಳ ಸೂಕ್ಷ್ಮಾತಿ ಸೂಕ್ಷ್ಮಗಳನ್ನೆಲ್ಲ ಕೆದಕಿ ನೋಡಿ, ಅವುಗಳನ್ನು ಹೊರಹಾಕುವಾಗ ನೇರವಾಗಿ ಹೇಳದೆ ಸಾಂಕೇತಿಕವಾಗಿ ನಿರೂಪಿಸಿದರು. ಸಂಕೇತಗಳನ್ನು ತಮ್ಮ ನಿತ್ಯ ಜೀವನದಲ್ಲಿಯ ಸರಳ ವಸ್ತುಗಳಿಂದ ಆಯ್ದುಕೊಳ್ಳದೆ ಸಂಕೀರ್ಣತೆಯಿಂದ ಆಯ್ದುಕೊಂಡರು.

ಇಂದಿನ ಸಮಾಜದಲ್ಲಿ ವ್ಯಕ್ತಿ ವ್ಯಕ್ತಿಗಳ ಸಂಬಂಧಗಳು ಬಹಳಷ್ಟು ಸಂಕೀರ್ಣಗೊಳ್ಳುತ್ತಲಿವೆ. ಇದರಿರದಾಗುವ ಅನಾಥಪ್ರಜ್ಞೆಯಾಗಲಿ, ಒಂಟಿತನವಾಗಲಿ, ಅಸಹಾಯಕತೆಯಾಗಲಿ, ಮನುಷ್ಯನನ್ನು ಕಾಡದೆ ಇರದು. ಇಂತಹ ಸಂದರ್ಭದಲ್ಲಿ ಬರಹಗಾರ ಅಂತರಂಗ ಶೋಧನೆಯ ಅವಶ್ಯಕತೆಯನ್ನು ಗಂಭೀರವಾಗಿ ಚಿಂತಿಸಿದ. ವ್ಯಕ್ತಿ ಸಾಮಾಜಿಕವಾಗಿ ವೈಯಕ್ತಿಕವಾಗಿ, ಲೈಂಗಿಕವಾಗಿ ಸತ್ಯಕ್ಕೆ ಶರಣಾದಾಗ ಅಭಿವ್ಯಕ್ತಿಯಲ್ಲಿ ಪ್ರಾಮಾಣಿಕತೆಯನ್ನು ಬಯಸಿದ. ಹಾಗೆ ಇರಲೂ ಪ್ರಯತ್ನಿಸಿದ. ಸಾಹಿತ್ಯ ಲೈಂಗಿಕತೆಯ ಬಗ್ಗೆ ಬಹಳಷ್ಟು ಮಡಿವಂತಿಕೆಯ ಮನೋಭಾವವನ್ನು ಬೆಳೆಸಿಕೊಂಡು ಬಂದಿತ್ತು. ಇಂತಹ ಸಂದರ್ಭದಲ್ಲಿ ಲೈಂಗಿಕತೆಯ ಬಗ್ಗೆ ಇರುವ ಕಟ್ಟುಪಾಡುಗಳನ್ನು ಕಿತ್ತು, ಹೆಣ್ಣುಗಂಡಿನ ಸಂಬಂಧಗಳ ಬಗ್ಗೆ ಮುಕ್ತವಾದ ಚಿಂತನಕ್ಕೆ ನವ್ಯರು ಎಡೆಮಾಡಿಕೊಟ್ಟರು. ಹೊಸ ಆಲೋಚನಾ ದಿಕ್ಕು, ಹೊಸ ಸಂವೇದನೆ, ಪ್ರಾಮಾಣಿಕ ಅಭಿವ್ಯಕ್ತಿ, ನಿಗೂಢದ ಜೊತೆ ಚರ್ಚೆ, ಅಜ್ಞಾತ ಚಿತ್ತದ ಬಗೆಗಿನ ನವೀನಪ್ರಜ್ಞೆ, ಆತ್ಮರತಿ ಇವು ನವ್ಯಕತೆಗಳ ಲಕ್ಷಣಗಳೆನಿಸಿಕೊಂಡವು.

ಕನ್ನಡದ ನವ್ಯಕತೆಗಾರರಲ್ಲಿ ಬಿ. ಸಿ. ರಾಮಚಂದ್ರಶರ್ಮ, ಯು. ಆರ್. ಅನಂತಮೂರ್ತಿ, ಸದಾಶಿವ, ಟಿ. ಜಿ. ರಾಘವ, ತ. ರಾ. ಸು., ಯಶವಂತ ಚಿತ್ತಾಲ, ರಾಜಲಕ್ಷ್ಮಿ, ಎನ್. ರಾವ್, ವೀರ್ಣಾ ಶಾಂತೇಶ್ವರ, ಶಾಂತಿನಾಥ ದೇಸಾಯಿ, ಲಂಕೇಶ, ಪೂರ್ಣಚಂದ್ರ ತೇಜಸ್ವಿ, ಶ್ರೀಕಾಂತ, ಕ. ವೆಂ. ರಾಜಗೋಪಾಲ, ಪಿ. ವಿ. ನಂಜರಾಜ ಅರಸ, ಗಿರಡ್ಡಿ ಗೋವಿಂದರಾಜ್ ಅವರು ಪ್ರಮುಖರು. ರಾಮಚಂದ್ರ ಶರ್ಮರ 'ಬೆಳಗಾಯಿತು', 'ಸೆರಗಿನ ಕೆಂಡ', 'ಏಳನೆಯ ಜೀವ,' ಈ ನವ್ಯಕತೆಗಳಲ್ಲಿ ಸಮಸ್ಯೆಯ ಆಂತರಿಕ ಹೃದಯಸ್ಪಂದನ ಚಿತ್ರಣವನ್ನು, ತೊಳಲಾಟವನ್ನು ಕಾಣಬಹುದು. 'ಎಂದೆಂದಿಗೂ ಮುಗಿಯದ ಕತೆ' 'ಕ

ಂಕಲನದಿಂದ `ಪ್ರಶ್ನೆ 'ಸಂಕಲನದವರೆಗೆ ಯು . ಆರ್. ಅನಂತಮೂರ್ತಿಯವರು ವ್ಯಕತೆಯ ಹೊಸ ಮಾರ್ಗದಲ್ಲಿ ನಡೆದು ಅದರಲ್ಲಿ ಸಿದ್ಧಿಯನ್ನು ಕಾಣಲು ಪ್ರಯತ್ನಿಸಿ ಸಫಲ ರಾಗಿದ್ದಾರೆ. `ಹುಲಿಯ ಹೆಂಗರುಳು',`ಪಂಜರದ ಗಿಳಿ',` ಪ್ರಶ್ನೆ ' ಮುಂತಾದ ಅವರ ಕತೆಗಳಲ್ಲಿ ಹೃದಯ, ಭಾವನೆ, ಮನಸ್ಸುಗಳ ವಿವಿಧ ಬಗೆಯ ಹೋರಾಟದ ಚಿತ್ರಣವನ್ನು ಕಾಣಬಹುದು. ನಲ್ಲಿಯಲ್ಲಿ ನೀರು ಬಂದಿತು ' ಕಥಾ ಸಂಕಲನದ ಸದಾಶಿವ ಅವರು ಇನ್ನೂ ನವ್ಯ ಮಾರ್ಗದಲ್ಲಿಯೆ ಮುಂದುವರೆದಿದ್ದಾರೆ. `ಜ್ವಾಲೆ ಅರಿತು 'ಸಂಕಲನದ ಟಿ. ಜಿ. ರಾಘವ ರವರು ಫ್ರಾಯ್ಡನ ತತ್ವಕ್ಕೆ ಶರಣಾಗಿ ಕಾಮವೇ ಜೀವನದ ಆಗು ಹೋಗುಗಳ ಸೂತ್ರವೆಂಬಂತೆ ತಮ್ಮ ವಿಚಿತ್ರ ವಿವಿಧ ವಿನ್ಯಾಸಗಳನ್ನು ಪ್ರತಿಮೆ, ಸಂಕೇತಗಳ ಮೂಲಕ `ಬೀಗದಕೈ ' ಮುಂತಾದ ಕತೆಗಳಲ್ಲಿ ಚಿತ್ರಿಸಿದ್ದಾರೆ.

`ಅಬೋಲಿನ' ಮತ್ತು `ಪಯಣ ' ಸಂಕಲನಗಳಲ್ಲಿನ ಕಥೆಗಳಲ್ಲಿ ಚಿತ್ತಾಲರು ಸಂವೇದನೆಯಲ್ಲಿ, ವಸ್ತುವಿನಲ್ಲಿ ನವ್ಯತೆಯನ್ನು ತರುತ್ತಾರೆ. ಇವರು ತಮ್ಮ ಕಥೆಗಳಲ್ಲಿ ಜೀವನದ ನಗ್ನಸತ್ಯವನ್ನು ಅತ್ಯಂತ ಪರಿಣಾಮಕಾರಿಯಾಗಿ ನಿರೂಪಿಸಿದರೆ, ಪಿ. ಲಂಕೇಶರ `ಕೆರೆಯ ನೀರನು ಕೆರೆಗೆ ಚೆಲ್ಲಿ ' ಸಂಕಲನದಲ್ಲಿ ಮಾನವನ ಸಣ್ಣತನವನ್ನು, ನಾನಾ ಮುಖವಾಗಿ ತೋರಿಸಲಾಗಿದೆ. ತೇಜಸ್ವಿಯವರ `ಹುಲಿಯೂರಿನ ಸರಹದ್ದು ' ಒಬ್ಬ ಮನುಷ್ಯನ ಮುಗ್ಧ ಸಂವೇದನೆಗಳು ಯಾವ ರೀತಿಯಾಗಿರಬಲ್ಲವು ಎಂಬುದಕ್ಕೆ ನಿದರ್ಶನವಾಗಿದೆ. ತ. ರಾ. ಸು. ಅವರು 0-0-0, ಸಂಜರಾಜ್ ಅರಸ್ ಅವರ `ರಕ್ತ ತೊಟ್ಟಿಕ್ಕುತ್ತಿತ್ತು , ವೀಣಾ ಯಲಬುರ್ಗಿಯವರ 'ಮುಳ್ಳುಗಳು', ` ಕೊನೆಯ ದಾರಿ',` ಕವಲು ' ನೇರ ನುಡಿಯ, ಸ್ಪಷ್ಟ ವಿಚಾರದ ದುರಂತ ವ್ಯವಸ್ಥೆಯ ಚಿತ್ರವನ್ನು ನಿಚ್ಚಳವಾಗಿ ಬಿಡಿಸಿ ತೋರಿಸುತ್ತವೆ.

ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಆರ್ಥಿಕ ಸಿದ್ಧಾಂತ, ಫ್ರಾಯ್ಡನ ಮನೋವಿಜ್ಞಾನ, ನವ್ಯಕತೆಗಳಲ್ಲಿ ಒಡಮೂಡುತ್ತಿರುವಂತೆ, ಆತ್ಮದ ಹಂಬಲವೂ ಮೈದೋರುತ್ತದೆ. ನವ್ಯಕತೆಗಾರರು ಜೀವನ ದೃಷ್ಟಾರರು, ವ್ಯಕ್ತಿತ್ವದ ಹಿರಿಮೆಯನ್ನು, ಅಗತ್ಯವನ್ನು ಘೋಷಿಸುವುದು, ವ್ಯಕ್ತಿ ಸಮಾಜಯಂತ್ರದಲ್ಲಿ ಒಂದು ತಿರುಪೋ, ಗಾಲಿಯ ಭಾಗವೋ ಆಗದೆ ಜೀವಂತ ಚಿಲಾಪಣೆಯ ನಾಣ್ಯವಾಗಿ ಉಳಿಯುವಂತೆ ಮಾಡುವ ಕಲೆ ಇಂದಿನ ಕತೆಗಳಲ್ಲಿ ಕಾಣಬೇಕಾಗಿದೆ.

ದಲಿತ ಬಂಡಾಯ ಮಾರ್ಗ : ನವ್ಯ ಪ್ರಕಾರ ಆಂತರಿಕ ಗೊಂದಲಗಳ ವ್ಯವಸ್ಥೆಯ ಅವ್ಯವಸ್ಥೆಯ ಮಡಿಲಲ್ಲಿ ಹೋಗಿ ಆ ಸಂಘರ್ಷಗಳ ಅಡಿಯಲ್ಲಿ ಸಿಕ್ಕು ಅಲ್ಲಿಯ ಸೂಕ್ಷ್ಮಾತಿಸೂಕ್ಷ್ಮ ವಿಚಾರ ಸಂವೇದನೆಗಳನ್ನು ಸಹೃದಯರ ಮಟ್ಟಕ್ಕೆ ತಂದು ತಲುಪಿಸುವಲ್ಲಿ ವಿಫಲವಾಗಿ ತಾನೇ ಹೆಣೆದುಕೊಂಡ ಬಲೆಯಲ್ಲಿ, ಜನಪರವಾದ ಕ್ರಿಯೆಯತ್ತ ಸಾಗದೇ ಹೋದಾಗ ಕನ್ನಡ ಸಾಹಿತ್ಯ ಮತ್ತೊಮ್ಮೆ ತನ್ನ ಮಗ್ಗುಲ ಹೊರಳಿಸುವ ಕ್ರಿಯೆಗೆ ಒಳಗಾಯಿತು. ಅದನ್ನೇ ದಲಿತ ಬಂಡಾಯವೆಂದು ಕರೆಯಲಾಗುತ್ತದೆ.

ಜಮೀನ್ದಾರಿಕೆಯ ಅವನತಿಯ ಮತ್ತು ಬಂಡವಾಳಶಾಹಿ ಪ್ರವೇಶದ ಸಂಕ್ರಮಣ ಕಾಲಘಟ್ಟದಲ್ಲಿ ನಡೆದ ಸಾಂಸ್ಕೃತಿಕ ಚಳುವಳಿಯನ್ನು ಸಾಹಿತ್ಯಿಕವಾಗಿ ತಂದವರು ದಲಿತ ಬಂಡಾಯದ ಬರಹಗಾರರು. ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ ಜಾತಿಯ ಬಿಸಿಯುಂಡವರು,

ಮೊಟ್ಟಮೊದಲು ಧ್ವನಿ ಎತ್ತಿ ಹಾಡಿದ್ದು ಸಿದ್ಧಲಿಂಗಯ್ಯನ ಹೊಲೆಮಾದಿಗರ ಹಾಡಿನ ಮೂಲಕ
ಸಾಹಿತ್ಯದಲ್ಲಿ ಮಡಿವಂತಿಕೆಯ ಬೇಲಿಯನ್ನು ಮುರಿದು ಒಳಬಂದ ದಲಿತಸಾಹಿತ್ಯ ಹಲವಾ
ಬದುಕಿನ ವೈಚಿತ್ರ್ಯಗಳನ್ನು ಬಿಚ್ಚಿಟ್ಟಿತು.

ಈ ಸಮಾಜ ವ್ಯವಸ್ಥೆಯಲ್ಲಿರುವ ಹಳಸಲು ರೀತಿಯನ್ನು ಪ್ರಶ್ನಿಸುವ ಹಾಗೂ ಉತ್ತರಿಸು
ಪ್ರತಿಭಟಿಸುವ ಎದೆಗಾರಿಕೆಯನ್ನು ಒಂದು ಗುಣವೆಂದು ಪರಿಭಾವಿಸಿದಾಗ ಅದು ಬಂಡಾ
ವೆನಿಸಿಕೊಳ್ಳುತ್ತದೆ. ದಲಿತ - ಬಂಡಾಯ ಈ ಎರಡು ಶಬ್ದಗಳು ನಮ್ಮ ಸಾಮಾಜಿಕ ಜೀವನದ
ಮಾನವನ ಎರಡು ಸ್ಥಿತಿಗಳನ್ನು ಸೂಚಿಸುತ್ತವೆ. ಈ ಪದಗಳ ಅರ್ಥವ್ಯಾಪ್ತಿಯ ಬಗ್ಗೆ ಹಲ
ಬಗೆಯ ಹೇಳಿಕೆಗಳು ಹುಟ್ಟಿಕೊಂಡಿದ್ದರೂ ಒಟ್ಟಾರೆ ಅವುಗಳ ತಿರುಳು ಮಾತ್ರ ಒಂದೇ ಆಗಿರುವು
ಸ್ಪಷ್ಟ. ದಲಿತ ಹಾಗೂ ಬಂಡಾಯ ಪದಗಳು ಸಾಮಾಜಿಕ ನೆಲೆಯಲ್ಲಿ ಅರ್ಥೈಸಿಕೊಂಡು ಕನ್ನ
ಸಾಹಿತ್ಯ ಪ್ರಕಾರದಲ್ಲಿ ಒಂದು ಮಹತ್ವದ `ಪಂಥವಾಗಿ' ಹಾಗೂ ಕನ್ನಡ ಸಾಹಿತ್ಯ ಚರಿತ್ರೆ
ಬೆಳವಣಿಗೆಯಲ್ಲಿ ಒಂದು ಹಂತವಾಗಿ ಬೆಳೆದು ಬಂದದ್ದು ಐತಿಹಾಸಿಕ ವಾಸ್ತವತೆಯಾಗಿದೆ.

ಬಂಡಾಯದ ಮೂಲ ಗುಣ - ಸ್ವಭಾವಗಳನ್ನು ಪ್ರತಿಭಟಿಸುವಲ್ಲಿ, ಪ್ರಶ್ನಿಸುವ
ಕಾಣುತ್ತೇವೆ. ಇಂತಹ ಗುಣಸ್ವಭಾವದ ಸಾಹಿತ್ಯ ಸಾಂಪ್ರದಾಯಿಕ ಸಾಹಿತ್ಯಿಕ ಚೌಕಟ್ಟನ್ನು ಮುರಿ
ಹೊಸ ದಿಕ್ಕಿನತ್ತ, ಜನಪರ ಬದುಕಿನತ್ತ ಸಾಗಿ ಅನೇಕ ಸಾಹಿತಿಗಳನ್ನು ತನ್ನತ್ತ ಸೆಳೆ
ಕೊಂಡು ಸಾಹಿತ್ಯ ಸೃಷ್ಟಿಗೆ ಅಣಿಗೊಳಿಸಿತು. ಬರಗೂರ ರಾಮಚಂದ್ರಪ್ಪ, ಪೂರ್ಣಚಂದ್ರತೇಜ
ಕುಂ. ವೀರಭದ್ರಪ್ಪ, ಬೆಸಗರಹಳ್ಳಿ ರಾಮಣ್ಣ ದೇವನೂರ ಮಹಾದೇವ, ಗೀತಾ ನಾಗಭೂಷ
ಬಿ. ಟಿ. ಲಲಿತಾ ನಾಯಕ್, ಚನ್ನಣ್ಣ ವಾಲೀಕಾರ ಮುಂತಾದ ಲೇಖಕರು ಈ ಧೋರಣೆಯ ಕಥೆಗಳ
ನೀಡಿದರು.

ಹೀಗೆ ಕನ್ನಡದಲ್ಲಿ ಕಥಾಸಾಹಿತ್ಯ ಪ್ರಾಚೀನ ಕಾಲದಿಂದಲೂ ನಡೆದು ಬಂದು ಅಧು
ಯುಗದಲ್ಲಿ ತನ್ನ ರೂಪ ದೃಷ್ಟಿ, ಧೋರಣೆಗಳನ್ನು ಸಂಪೂರ್ಣವಾಗಿ ಬದಲಿಸಿಕೊಂಡು, ಕಾಲದ
ಕಾಲಕ್ಕೆ ಮೈದೋರಿದ ಹೊಸ ಹೊಸ ಒಲವುಗಳನ್ನು ಸ್ವೀಕರಿಸುತ್ತ ಸಮೃದ್ಧವಾಗಿ ಬೆಳೆದುಬಂ

ಪ್ರಬಂಧ ಸಾಹಿತ್ಯ

-ವೀರೇಂದ್ರ ಸಿಂಪಿ

ಕನ್ನಡದಲ್ಲಿ ಲಲಿತಪ್ರಬಂಧ ನವೋದಯ ಕಾಲದ ಅತ್ಯಂತ ಜನಪ್ರಿಯ ಸಾಹಿತ್ಯ ಪ್ರಕಾರಗಳಲ್ಲಿ ಒಂದಾಗಿದೆ. ಭಾವವೇ ಪ್ರಧಾನವಾಗಿರುವ, ಲೇಖಕನ ಮೋಹಕ ವ್ಯಕ್ತಿತ್ವದ ಅಭಿವ್ಯಕ್ತಿಯಾಗಿರುವ, ಗದ್ಯದ ಭಾವಗೀತೆಯೇ ಆಗಿರುವ ಭಾವ ಪ್ರಬಂಧ ಲಲಿತ ಪ್ರಬಂಧದ ಒಂದು ಮುಖ್ಯ ಶಾಖೆಯಾಗಿರುವಂತೆ, ಹಾಸ್ಯವೇ ಪ್ರಧಾನವಾಗಿರುವ ಹರಟೆ ಲಲಿತಪ್ರಬಂಧದ ಇನ್ನೊಂದು ಶಾಖೆಯಾಗಿದೆ.

ಕನ್ನಡ ಪ್ರಬಂಧ ಸಾಹಿತ್ಯ ವೈವಿಧ್ಯಪೂರ್ಣವೂ ಅತ್ಯಂತ ಶ್ರೀಮಂತವೂ ಆಗಿದೆ. ಮೂರು ಡಜನಿನ ಪ್ರಬಂಧಕಾರರ, ಸಾಧನೆಯ ಸ್ಥೂಲ ಜೋಟ ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಅಷ್ಟೊಂದು ಸ್ಪಷ್ಟ ಉದ್ದೇಶವಿರದ ನಗೆಬರಹಗಳು ಈ ಅಧ್ಯಯನದ ವ್ಯಾಪ್ತಿಯಲ್ಲಿ ಬರುವದಿಲ್ಲ.

ವಿ. ಎನ್. ಮೂರ್ತಿರಾಯರು ಲಲಿತಪ್ರಬಂಧ ಸಾಹಿತ್ಯ ಪ್ರಕಾರದ ಆಚಾರ್ಯ ಪುರುಷರಾಗಿದ್ದಾರೆ. `ಹಗಲುಗನಸು'' ಅಲೆಯುವ ಮನ'' ಮಿನುಗು ಮಿಂಚು'' ಚಿತ್ರಗಳು ಚಿತ್ರಗಳು' ಅವರ ಲಲಿತ ಪ್ರಬಂಧ ಸಂಕಲನಗಳಾಗಿವೆ. ಕನ್ನಡ ಲಲಿತ ಪ್ರಬಂಧಕ್ಕೆ ನಿರ್ದಿಷ್ಟ ರೂಪ ಆಕಾರಗಳನ್ನು ಕೊಟ್ಟವರೇ ಅವರು. ಅವರ ಪ್ರಬಂಧಗಳಲ್ಲಿ ಹೃದಯದ ಮಾರ್ದವತೆ ಜೊತೆಗೆ ಬುದ್ಧಿಯ ಪ್ರಖರತೆಯನ್ನೂ ಕಾಣಬಹುದು. ಪರಿಪಕ್ವಮನದ ಅಭಿವ್ಯಕ್ತಿಗಳಾಗಿರುವ ಅವರ ಪ್ರಬಂಧಗಳಲ್ಲಿ ಭಾವಗೀತೆಯ ಸೂಕ್ಷ್ಮತೆ, ಸಣ್ಣಕತೆಯ ಲಾಲಿತ್ಯವನ್ನು ಕಾಣಬಹುದು. ಚುತ್ತಲಿನ ಪ್ರಕೃತಿಯಲ್ಲಿ ಅವರು ಸೌಂದರ್ಯ ಕಂಡಂತೆ ಮಾನವ ಸ್ವಭಾವದಲ್ಲಿ ಅಡಕವಾದ ಹೃದಯಸೌಂದರ್ಯವನ್ನು ಕಾಣಬಲ್ಲ ಮಾನವತಾವಾದಿಗಳೂ ಆಗಿದ್ದಾರೆ. ಅವರ ಪ್ರಬಂಧಗಳಲ್ಲಿ ಸರಸದಾಂಪತ್ಯ ಚಿತ್ರಗಳನ್ನೂ, ಸ್ವಾರಸ್ಯಕರವಾದ ಮನೋಲಹರಿಗಳನ್ನೂ ಹಿಂದಿನ ಕಾಲದ ಬೆಳಿಯುಹೋದ ಸಾಂಸ್ಕೃತಿಕ ದೃಶ್ಯಗಳನ್ನೂ ರಸಿಕತೆಯನ್ನೂ, ರೋಮ್ಯಾಂಟಿಕ್ ಕನಸುಗಾರಿಕೆಯನ್ನೂ, ಸಿಹ್ಮಲ್ಮಶ ವ್ಯಕ್ತಿತ್ವದ ನೋಟವನ್ನೂ ತಮ್ಮನ್ನು ಹೊರಲು ಮಾಡಿಕೊಂಡು ಅನ್ಯರನ್ನು ತುಂಟಹಾಸ್ಯಕ್ಕೀಡು ಮಾಡುವ ರೀತಿಯನ್ನೂ ಕಾಣಬಹುದು. ಅವರ ಗದ್ಯ ಸರಳ ಸುಂದರ ಮೋಹಕ ಗದ್ಯ. ಅವರ `ಚಿತ್ರಗಳು ಪತ್ರಗಳು' ಸಾಹಿತ್ಯಿಕ ಮಹತ್ವ ಪಡೆದಂತೆ ಸಾಂಸ್ಕೃತಿಕ ಮಹತ್ವವನ್ನೂ ಪಡೆದಿದೆ. ಅಪೂರ್ವ ಕಲಾತ್ಮಕತೆಯನ್ನು ಹೊಂದಿದ ಈ ಪುಸ್ತಕ ವಿಶ್ವವಿದ್ಯಾಲಯವೊಂದರ ಅವರಗಿದ ಗತಕಾಲದ ಸಾಂಸ್ಕೃತಿಕ ದಾಖಲೆಯೂ ಆಗಿದೆ. ಅವಿನ ಪ್ರಾಧ್ಯಾಪಕರ ಕುರಿತ ವ್ಯಕ್ತಿಚಿತ್ರಗಳು ಒಕ್ಕುಮಿಕ್ಕಾಗಿ ಪ್ರಶಂಸಾಪರವಾಗಿರದೆ. ಅವರ ಶಕ್ತಿ

ದೌರ್ಬಲ್ಯಗಳ ಮಾದರಿ ಅಭಿವ್ಯಕ್ತಿಯಾಗಿವೆ. ಸಂಬಂಧಿಸಿದ ವ್ಯಕ್ತಿಯನ್ನು ಟೀಕಿಸುತ್ತಿದ್ದರೂ ಯಾರಮನವನ್ನೂ ನೋಯಿಸದಂತೆ ಬರೆಯುವ ಗದ್ಯ ಎ. ಎನ್. ಮೂರ್ತಿರಾಯರದು. ತೀ. ನಂ. ಶ್ರೀ. ಅವರಿಗೆ ಮೂರ್ತಿರಾಯರು ಬರೆದ ತಿಳಿಹಾಸ್ಯದಿಂದ ಕೂಡಿದ ಪತ್ರಗಳು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅಪರೂಪದ ಪತ್ರಗಳಾಗಿವೆ. ನಾಡಿನ ಸಾಂಸ್ಕೃತಿಕ ಇತಿಹಾಸದ ಕೊಂಡಿಗಳೂ ಆಗಿವೆ.

ಎ. ಎನ್. ಮೂರ್ತಿರಾಯರ ಪ್ರಬಂಧಗಳನ್ನು ಓದುವದೆಂದರೆ, ಒಬ್ಬ ಸುಸಂಸ್ಕೃತ ಮಾನವತಾವಾದಿಯ ಒಡನಾಟ ಮಾಡಿದಂತೆ, ವಿ. ಸೀ ಅವರ ಪ್ರಬಂಧಗಳನ್ನು ಓದುವದೆಂದರೆ ಒಬ್ಬ ಪರಿಪೂರ್ಣ ರಸಿಕನ, ಕಲಾಕಾರನ ಸಹವಾಸ ಮಾಡಿದಂತೆ. `ಬೆಳದಿಂಗಳು ' `ಸೀಕರಣೆ' ಎಂಬ ಎರಡು ಪ್ರಬಂಧ ಸಂಕಲನಗಳನ್ನು ಪ್ರಕಟಿಸಿದ್ದಾರೆ, ರಸಿಕರಾದ ವಿ. ಸೀ ಅವರು ಬಾಳಿನಲ್ಲಿ ಸುಂದರವಾದುದನ್ನು ಗ್ರಹಿಸಿ ಅದನ್ನು ಬಣ್ಣದ ಮಾತಿನಲ್ಲಿ ಹೇಳತಕ್ಕವರು. `ಮೈಸೂರು ರುಮಾಲಿ' ನಲ್ಲಿ ಕಲಾಭಿಜ್ಞತೆ, ರಸಿಕತೆ ಹಾಗೂ ಸೊಗಸುಗಾರಿಕೆಗಳು ವ್ಯಕ್ತವಾಗಿವೆ. ವ್ಯಾಪಕವಾದ ಓದು, ಅದಕ್ಕಿಂತಲೂ ವಿಸ್ತಾರವಾದ ಜೀವನಾನುಭವಗಳಿಂದ ಕೂಡಿದ ಅವರ ಪ್ರಬಂಧಗಳು ಓದುಗನನ್ನು ವಿವಿಧ ಭಾವಲಹರಿಗಳಲ್ಲಿ ಸುತ್ತಾಡಿಸಿ ಬರುತ್ತವೆ. `ಸಾಮಾನ್ಯದಿಂದ ವಿಶೇಷಕ್ಕೆ, ಚಪಲತೆಯಿಂದ ಗಂಭೀರತೆಗೆ ದಾಟಿ ಹೋಗುವುದು ಅಲ್ಲಿ ಇಲ್ಲಿ ನಮ್ಮ ಅನುಭವಕ್ಕೂ ಲೋಕ ಜೀವನಕ್ಕೂ ಸಂಬಂಧಿಸಿದ ಸಂಗತಿಗಳನ್ನು ಬೆಳೆಸುವದು ಪ್ರಬಂಧದ ರೀತಿ ' ಪ್ರಬಂಧ ಕುರಿತ ಈ ವ್ಯಾಖ್ಯೆ ಅವರ ಬಹುತೇಕ ಪ್ರಬಂಧಗಳಿಗೆ ಅನ್ವಯವಾಗುತ್ತದೆ. ಅವರ ಮನಸ್ಸಿನ ಒಲವು, ಓಟ, ಆಕಾಂಕ್ಷೆಗಳನ್ನು ನೇಯುವ ಒಂದು ಕ್ರಮವೇ ಪ್ರಬಂಧವಾಗಿರುತ್ತದೆ. ಲೋಕಾಭಿರಾಮವಾಗಿ ಕುಳಿತು ವಿಷಯವನ್ನು ಹಲವು ಮಗ್ಗಲುಗಳಿಂದ ಕಂಡು, ಅದನ್ನು ನಾಲ್ಕು ದಿಕ್ಕಿಗೆ ಹರಡಿ, ಕತೆ, ಉಪಕತೆ, ಗಾದೆ ಸಾಮತಿಗಳಿಂದ ವಿಸ್ತರಿಸುತ್ತ, ಒಮ್ಮೆ ನೇರವಾಗಿ ಇನ್ನೊಮ್ಮೆ ವ್ಯಂಗ್ಯವಾಗಿ, ಮಗುದೊಮ್ಮೆ ಕುಚೇಷ್ಟೆಯಿಂದ ವಿಷಯದ ಕುರಿತು ವ್ಯಾಖ್ಯಾನಿಸುತ್ತ ಹೋಗುತ್ತಾರೆ. ಲೋಕಾನುಭವ ಜ್ಞಾನದ ವಿವಿಧ ಶಾಖೆಗಳ ಅಧ್ಯಯನದಿಂದ ಪರಿಪುಷ್ಟವಾದ ರಸಿಕನ ಮನಸ್ಸಿನ ವೇಗದ ಓಟ, ತಿರುವು ಚಮತ್ಕಾರಗಳ ಸೊಗಸು ವಿ. ಸೀ ಪ್ರಬಂಧಗಳ ವೈಶಿಷ್ಟ್ಯವಾಗಿದೆ. ಕೆಲವೊಂದು ಸಾರೆ ಅವರ ಪ್ರಬಂಧಗಳ ಬಂಧ ಶಿಥಿಲವಾಗುತ್ತದೆ. ಆದರೆ ಲಲಿತ ಪ್ರಬಂಧದ ಮುಖ್ಯ ಜೀವಾಳವಾದ ಲೇಖಕನ ಮನೋವಿಲಾಸ ಎಂಥ ಓದುಗನನ್ನೂ ಮುದಗೊಳಿಸುತ್ತದೆ.

`ಈಚಲು ಮರದ ಕೆಳಗೆ ',` ರಾಮಾಚಾರಿಯ ನೆನಪು ',`ರಥಸಪ್ತಮಿ ಮತ್ತು ಇತರ ಚಿತ್ರಗಳು', `ಧೇನುಕ ಪುರಾಣ', `ದೀಪರೇಖೆ'ಗಳೆಂಬ ಐದು ಪ್ರಬಂಧ ಸಂಕಲನಗಳನ್ನು ಪ್ರಕಟಿಸಿದ ಪು. ತಿ. ನ. ನಮ್ಮ ಪ್ರಮುಖ ಪ್ರಬಂಧಕಾರರಲ್ಲಿ ಒಬ್ಬರಾಗಿದ್ದಾರೆ. ಅವರ ಕಾವ್ಯ ಸಂಸ್ಕೃತ ಭೂಯಿಷ್ಟವಾದರೆ ಪ್ರಬಂಧಗಳಲ್ಲಿ ಅವರು ಬಳಸಿದ ಭಾಷೆ ಸರಳ ಆಡು ಭಾಷೆಯಲ್ಲಿದ್ದುದೊಂದು ವೈಶಿಷ್ಟ್ಯ. ಚಿಂತನಶೀಲತೆ, ಕಲ್ಪಕತೆ ಅವರ ಪ್ರಬಂಧಗಳ ವೈಶಿಷ್ಟ್ಯವಾಗಿದೆ. ಬೆರಗುಗಣ್ಣಿನಿಂದ ಪುತಿನ ವಸ್ತುಗಳನ್ನು ನೋಡಿ ಸರ್ವೇಂದ್ರಿಯಗಳಿಂದ ಅವುಗಳನ್ನು ಗ್ರಹಿಸಿ ನಂತರ ಅವುಗಳ ಮೇಲೆ ವಿಚಾರದ ಹೊರೆಯನ್ನು ಹೊರಿಸುತ್ತಾರೆ. ಇತಿಹಾಸ, ಪುರಾಣ, ವಿಜ್ಞಾನ, ಮಾನವಿಕ ಶಾಸ್ತ್ರಗಳ ಜಗತ್ತಿನಿಂದ ಹೇರಳವಾದ ನಿದರ್ಶನ ಗಳನ್ನು ಕೊಡುತ್ತಾರೆ. ಪ್ರಬಂಧಗಳಲ್ಲಿ ಅವರ ವಿಚಾರಗಳು ಹಲವು ಅನಿರೀಕ್ಷಿತ ತಿರುವು ಬಯಲುಗಳಲ್ಲಿ ಸಾಗುತ್ತವೆ. `ಈಚಲು ಮರದ ಕೆಳಗೆ ' ಪ್ರಬಂಧ ಜಗತ್ತಿನ

ಸತ್ಯಮಿಥ್ಯೆಗಳ ಕುರಿತ ಆಧ್ಯಾತ್ಮಿಕ ಜಿಜ್ಞಾಸೆ ವ್ಯಕ್ತಪಡಿಸಿದಂತೆ, `ನೆರಳು, ನಡು ನೆರಳು ಪಡಿನೆರಳು 'ನಿರೀಕ್ಷಣಾಶಕ್ತಿ ಚಿಂತನಶೀಲತೆಗಳ ಅಭಿವ್ಯಕ್ತಿಯಾಗಿದೆ. ಸಾಮಾನ್ಯ ವಸ್ತುವಾದ ನೆರಳು ಇಲ್ಲಿ ಅಸಾಮಾನ್ಯತೆಯ ಮಟ್ಟಕ್ಕೇರುತ್ತದೆ. ಅವರ ಗದ್ಯ ವಾಸ್ತವತೆಯ ನೆಲೆಯಿಂದ ಕಾವ್ಯದ ಹುಚ್ಚಿಗೇರುತ್ತದೆ. `ಮಸಾಲೆ ದೋಸೆ'ಒಂದು ಮಾದರಿಯಾದ ಭಾವಲಹರಿಯಾಗಿದೆ. `ಮಸಾಲೆ ದೋಸೆಯ ಮೊದಲ ತುಣುಕು ರಸನೆಗೆ ಸೋಂಕಿದಾಗ ಕಾಂತೆಯ ಪ್ರಣಯ ಕೋಪದಂತೆ ಅದು ಹೊರಗೆ ಕಟು ಒಳಗೆ ಮೃದು '. ಅದರಂತೆ ಧೇನುಕೋಪಾಖ್ಯಾನ ಕರ್ತೃಯ ವರ್ಣನೆಯ ನೆಪದಲ್ಲಿ ಮಾಡುವ ಜೀವನ ತತ್ವವೊಂದರ ಸರಸವ್ಯಾಖ್ಯಾನವಾಗಿದೆ. ಅವರ ಪ್ರಬಂಧಗಳಲ್ಲಿ ಕಾಣುವ ವಿವಿಧ ನಿರೂಪಣಾ ರೀತಿಯೂ ವಿಸ್ಮಯಕಾರಿಯಾಗಿದೆ.

ಗೊರೂರ ರಾಮಸ್ವಾಮಿ ಅಯ್ಯಂಗಾರರ ಪ್ರಬಂಧಗಳು ಹಾಸ್ಯಪ್ರಧಾನವಾಗಿ ಹರಟೆಗಳತ್ತ ವಾಲುತ್ತವೆ. ಒಮ್ಮೊಮ್ಮೆ ಅವು ಹಾಸ್ಯಕತೆಗಳೋ ಎನ್ನುವಂತೆ ಭಾಸವಾಗುತ್ತದೆ. `ನಮ್ಮೂರ ರಸಿಕರು', `ಹಳ್ಳಿಯ ಚಿತ್ರಗಳು', `ಹಳೆಯ ಪಳೆಯ ಮುಖಗಳು 'ಸಂಗ್ರಹ ಗಳಲ್ಲಿಯ ಪ್ರಬಂಧಗಳು ಹಳ್ಳಿಯ ಜೀವನದ ರಸಿಕ ಜೀವನ ಚಿತ್ರಗಳನ್ನೂ ಒದಗಿಸುತ್ತಿದ್ದು, ಲೇಖಕರ ದಟ್ಟವಾದ ಜೀವನಾನುಭವವನ್ನೂ ಅವಲಂಬಿಸಿವೆ. ಹಳ್ಳಿಯ ಜನಸಾಮಾನ್ಯರ, ಶಾನು ಬೋಗರ, ಕ್ಷೌರಿಕರ, ಅಂಚೆಯಾಳುಗಳ ಕುರಿತು ವ್ಯಕ್ತಿಚಿತ್ರಗಳನ್ನೂ ಹಾಸ್ಯಲೇಪಿತ ಶೈಲಿಯಲ್ಲಿ ಹಿಡಿದಿರಿಸಿದ್ದಾರೆ. ಅವರು ಏನೇ ಬರೆಯಲಿ, ಎಂಥ' ಸಾಮಾನ್ಯ ಸನ್ನಿವೇಶದ ವರ್ಣನೆಯನ್ನೇ ಮಾಡಲಿ ಅದು ರಸಗವಳವಾಗುತ್ತದೆ.

ಹಳ್ಳಿಯ ಜೀವನದೊಂದಿಗೆ ಪೂರ್ತಿ ಬೆರೆತು ಹೋದ ಗೊರೂರ ಅವರದು ವಿನೋದ ಪ್ರವೃತ್ತಿ. ಸಾಮಾನ್ಯ ಜೀವನದಲ್ಲಿ ಸಹಾನುಭೂತಿ, ವರ್ಣನೆಯ ರೀತಿಯಲ್ಲಿ ಸ್ವಾಭಾವಿಕತೆ, ಹಾಸ್ಯ ವಿನೋದಾವಕಾಶಗಳಲ್ಲಿ ಮರ್ಯಾದೆ ಮೀರದ ಕುತೂಹಲ ಅವರ ಲಲಿತಪ್ರಬಂಧದ ಲಕ್ಷಣಗಳಾಗಿವೆ. ವ್ಯಕ್ತಿಯ ನಡತೆ, ಮುಖಭಾವ, ಆಕಾರ, ಉಡುಪುಗಳಲ್ಲಿ ಅವರು ಹಾಸ್ಯದ ಅಂಶ ಕಾಣುತ್ತಾರೆ. ವಿಲಕ್ಷಣ ಘಟನೆಗಳನ್ನು ಹಾಸ್ಯಕ್ಕೆ ಸಾಮಗ್ರಿಯಾಗಿ ಬಳಸಿಕೊಳ್ಳುತ್ತಾರೆ. ಸರಳ ನಿರಾಡಂಬರ ಶೈಲಿಯಲ್ಲಿ ಹಳ್ಳಿಯ ನಿಷ್ಕಲ್ಮಶ ಜೀವನ ಚಿತ್ರಗಳನ್ನೂ ಒದಗಿಸಿದಂತೆ ಪ್ರತಿಯೊಂದು ಹಳ್ಳಿಯಲ್ಲಿ ಸಿಗಬಹುದಾದ ಪಾತ್ರಗಳ ಪರಿಚಯವನ್ನು ಮಾಡಿಕೊಡುತ್ತಾರೆ. ವಿಮರ್ಶಕರೊಬ್ಬರು ಹೇಳುವಂತೆ ಗೊರೂರರ ಒಂದೊಂದು ಪ್ರಬಂಧವೂ ಒಂದೊಂದು ಕಾದಂಬರಿಯನ್ನು ಓದಿದ ಅನುಭವವನ್ನು ತಂದುಕೊಡುತ್ತವೆ.

ಗೊರೂರರು ಹಳೆಯ ಮೈಸೂರಿನ ಗ್ರಾಮೀಣ ಸಂಸ್ಕೃತಿಯನ್ನು ಹಾಸ್ಯ ಲೇಪಿತ ಶೈಲಿಯಲ್ಲಿ ವಿವರಿಸಿದರೆ, ಸಿಂಪಿಲಿಂಗಣ್ಣನವರು ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ತಲೆಮಾರಿನ ಹಿಂದೆ ಪ್ರಚಲಿತವಿದ್ದ ಬಯಲಾಟ, ನಾಟಕ, ಕುಸ್ತಿ, ಮೊಹರಂ, ಹೋಳಿಹುಣ್ಣಿವೆಗಳ ರಸವತ್ತಾದ ವರ್ಣನೆಯನ್ನು ತಮ್ಮ `ತಲೆಮಾರಿನ ಹಿಂದೆ' ಪುಸ್ತಕದಲ್ಲಿ ಒದಗಿಸಿದ್ದಾರೆ. ಹಳ್ಳಿಯ ಹತ್ತು ಸಮಸ್ತರ ಚಹರೆಪಟ್ಟಿಯನ್ನು ತಮ್ಮ `ದಿಟ್ಟಿಸಿನೋಡಿದರೆ' ವ್ಯಕ್ತಿಚಿತ್ರಗಳ ಸಂಗ್ರಹದಲ್ಲಿ ಹಾಸ್ಯಲೇಪಿತ ಶೈಲಿಯಲ್ಲಿ ಹಿಡಿದಿರಿಸಿದ್ದಾರೆ. ಸ್ವಾತಂತ್ರ್ಯೋತ್ತರ ಭಾರತದ ಗ್ರಾಮೀಣ ಜೀವನದ ಕೊಳಕುಗಳನ್ನು ತಮ್ಮ `ಅಸ್ತವ್ಯಸ್ತ' ಪರಟೆಗಳ ಸಂಗ್ರಹದಲ್ಲಿ ಕೊಟ್ಟಿದ್ದಾರೆ. ತಮ್ಮ `ಸ್ವರ್ಗದೋಲೆಗಳು' ಮೂಲಕ ಕನ್ನಡ ಸಂಸ್ಕೃತಿಯ ದರ್ಶನ ಮಾಡಿಕೊಟ್ಟಿದ್ದಾರೆ.

ಸಿಂಪಿಲಿಂಗಣ್ಣನವರು ಕನ್ನಡ ನಾಡಿನ ಪ್ರಾಚೀನ ಸಾಹಿತ್ಯ, ಸಂಸ್ಕೃತಿ, ಚಾರಿತ್ರ ಇತಿಹಾ
ಜನಪದ ಸಾಹಿತ್ಯ, ಕಲೆ, ಆಧ್ಯಾತ್ಮ ವಿಷಯಗಳನ್ನು ವಿವರಿಸುವ ೧೫ ಪ್ರಬಂಧ ಸಂಕಲನಗಳ
ಪ್ರಕಟಿಸಿದ್ದಾರೆ. ಹೇರಳವಾದ ಪಡೆನುಡಿ, ಪಾಕ್‌ಸಂಪ್ರದಾಯ, ಗಾದೆ ಮಾತುಗಳ
ಪರಿಪುಷ್ಟವಾದ ಅವರ ಗದ್ಯ ದೇಶೀಯ ಸೊಗಸಿನಿಂದ ಕಂಗೊಳಿಸುತ್ತದೆ. ಅವರ ಪ್ರತಿಯೊ
ಪ್ರಬಂಧ ಸಂಕಲನ `ನೂರುಗಾಡಿಗೆ ಒಂದು ಬಡಿಗೆ ' ಯನ್ನು ಕುರಿತು ಡಾ. ಜಿ. ಎಸ
ಶಿವರುದ್ರಪ್ಪ ಹೀಗೆ ಹೇಳುತ್ತಾರೆ : " ಸಿಂಪಿಯವರು ವಿಷಯವೊಂದನ್ನು ತಮ್ಮ ಅನುಭವ
ಕಲಿಕೆ ವಿಚಾರಗಳ ಹಿನ್ನೆಲೆಯಲ್ಲಿ ಹಿಗ್ಗಿಸಬಲ್ಲರು. ಮಾತುಗಳನ್ನು ಹಿಡಿದು ಚಿಮತ್ಕಾರ ಮಾಡ
ಬರಹಗಳಿಗೆ ಗಾದೆಮಾತಿನ ಶೀರ್ಷಿಕೆ ಕೊಡುವ, ತಮ್ಮ ಪರಿಸರದ ಸಾಮಾನ್ಯ ಸಂಗತಿ
ನಿದರ್ಶನ ಕೊಡುವ, ಜಾನಪದ ಸಾಹಿತ್ಯದಿಂದ, ವಚನಕಾರರ ಸಾಹಿತ್ಯದಿಂದ ಪದ
ಪಡೆಸುವ, ಆದರ್ಶಗಳ ಬಗ್ಗೆ ಕಳಕಳಿತೋರುವ ಈ ಪ್ರಬಂಧಗಳು ಓದುಗರ ಮನವ
ತಟ್ಟುತ್ತವೆ."

ಕುವೆಂಪು ಮೂಲತಃ ಕವಿಗಳು ಹಾಗೂ ಕಾದಂಬರಿಕಾರರು. ಅವರು `ಮಲೆನಾಡ
ಚಿತ್ರಗಳು' ಮೂಲಕ ತಾವು ಸಮರ್ಥ ಪ್ರಬಂಧಕಾರರೆಂಬುದನ್ನೂ ಸ್ಪಷ್ಟಪಡಿಸಿದ್ದಾ
ಪೂರ್ವಾನುಭವಗಳೆಂಬ ಸ್ಮೃತಿಭಾಂಡದಲ್ಲಿ ಪೋಲಿಪೋಲಿಯಾಗಿ ಅಲೆಯುವ
ಹರಟೆಯಿಂದು ಅವರೇ ಹೇಳಿದ್ದಾರೆ. ಆ ಮಾತು `ಮಲೆನಾಡಿನ ಚಿತ್ರಗಳು ' ಹರಟೆಗ
ಅಕ್ಷರಶಃ ಅನ್ವಯಿಸುತ್ತದೆ. ಮಲೆನಾಡಿನ ವೈವಿಧ್ಯಮಯ ಜೀವನದರ್ಶನವನ್ನು `ಮಲೆನಾ
ಚಿತ್ರಗಳು' ಮೂಲಕ ಒದಗಿಸಿದ್ದಾರೆ. ಇದೇ ಜೀವನದರ್ಶನ ಮುಂದೆ ಅವರ `ಮಲೆಗ
ಮದುಮಗಳು ' ಕಾದಂಬರಿಯಲ್ಲಿ ದಟ್ಟವಾಗಿ ವಿವರವಾಗಿ ಮೂಡಿದ್ದೊಂದು ವಿಶೇ
ಮಲೆನಾಡಿನ ಪ್ರಕೃತಿ ಜೀವನ, ಪ್ರಾಣಿ ಜೀವನ, ಜನಜೀವನಗಳೆಲ್ಲ ಮಲೆನಾಡಿನ ಚಿತ್ರಗ
ದಾಖಲಾಗಿವೆ.

ಹಳ್ಳಿಯ ವಿಶಿಷ್ಟ ವ್ಯಕ್ತಿಗಳ ಕುರಿತು ವ್ಯಕ್ತಿಚಿತ್ರಣ ಒದಗಿಸಿದಂತೆ ಬೇಟೆಯ ವಿ
ಪ್ರಕಾರಗಳನ್ನು ಇಲ್ಲಿ ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಮಲೆನಾಡ ಪ್ರದೇಶದ ಪ್ರಕೃತಿ
ವರ್ಣನೆಯೂ ಇಲ್ಲಿ ದೊರೆಯುತ್ತದೆ. ಅಚ್ಚುಮುನ ಅಭ್ಯುದಯ, ಮನೆಯ ಶಾಲೆಗಳ ವ
ಮೂಲೆ, ರಾಮರಾವಣರ ಯುದ್ಧದಲ್ಲಿ ಕಾಣುವ ಹಾಸ್ಯ ವಿಡಂಬನೆಯ ಹಾಸ್ಯ, ಈ ಹರಟೆ
ಗತಕಾಲದ ಗ್ರಾಮೀಣ ಸಂಸ್ಕೃತಿಯ ಚಿತ್ರಣಗಳೂ ಆಗಿವೆ. ಕುವೆಂಪು ಅವರ ವಿಚಾರಧ
ಜೀವಂತವಾದುದು. `ಮಲೆನಾಡ ಚಿತ್ರಗಳು' ಪ್ರಬಂಧಗಳ ಅರ್ಧಪೂರ್ಣ ಮುಂದು
ಯನ್ನು ಪೂರ್ಣಚಂದ್ರ ತೇಜಸ್ವಿಯವರ `ಪರಿಸರದ ಕಥೆಗಳಲ್ಲಿ ' ಕಾಣಬಹುದು.

ಕಟ್ಟುನಿಟ್ಟಿನ ಬಿಗುವು ಇಲ್ಲದ ಗೊತ್ತುಗುರಿಯಿಲ್ಲದ ಹರಟೆಗಳೂ ಅಲ್ಲದ `ನಿ
ಬಂಧ ' ವೆಂದು ಕರೆಯಬಹುದಾದ ಸುಂದರವಾದ ಅಪರೂಪದ ಲಲಿತ ಪ್ರಬಂಧ
ತೀ. ನಂ. ಶ್ರೀ ಅವರ `ನಂಜುಂಡಿ' ಪ್ರಬಂಧ ಸಂಕಲನದಲ್ಲಿ ಸಿಗುತ್ತವೆ. ಸಾಮ
ವಿಷಯವನ್ನೂ ಗಂಭೀರ ಸ್ವರಕ್ಕೇರಿಸಿ ಪೂರ್ಣತೆಯ ವೈಖರಿಯಿಂದ ಅವನ್ನು ಆಕರ್ಷ
ಮಾಡುವದು ತೀ. ನಂ ಶ್ರೀಯವರಿಗೆ ಸಾಧಿಸಿದೆ. ಸಂಯಮಾರಿಕೆ, ಅಚ್ಚುಕಟ್ಟು
ವಿಸ್ತಾರವಲ್ಲದ ಸಂಕ್ಷಿಪ್ತತೆ. ಒಂದು ಭಾವವನ್ನು ಬೆಳೆಸುವ ರೀತಿ, ವೈಯಕ್ತಿಕ ನೆ

ವಿಷಯಗಳನ್ನು ಅತ್ಯಲ್ಪ ಶೈಲಿಯಲ್ಲಿ ಪರಿಚಯಿಸುವ ಪದ್ಧತಿಗಳನ್ನೂ ಕಾಣಬಹುದು. 'ಸಂಪುಟ' ದಲ್ಲಿ ಮೂವತ್ತು ಪ್ರಬಂಧ. ಪ್ರಬಂಧ ಸಂಪುಟ ಪ್ರಕಾರಕ್ಕೆ ಬಿಗುವಿನ ಬಂಧ ದಲ್ಲಿ ಖಾಲಿಸಿದವರು ತೀ. ನಂ. ಶ್ರೀ ಯವರು.

ಕೆ. ವೆಂಕಟರಾಮಪ್ಪನವರ 'ಲಹರಿ ಲಹರಿ'ಯಲ್ಲಿ ವಿವಿಧ ವಿಷಯಗಳ ಬಗ್ಗೆ ಬರೆಯುವಾಗ, ಸೊಗಸಾದ ವಿಚಾರ ಸ್ಪರ್ಶವಿದೆ. ಎಲ್ಲಿಂದಲೋ ವಿಷಯ ತ್ಯಾರಂಭಿಸಿ ಅದನ್ನು ಪರ್ಯವಸಾನವಾಗಿ ಮುಕ್ತಾಯಗೊಳಿಸುವ ಶಾಸ್ತ್ರೀಯವಿದೆ. ಗಾದೆ, ಸಾಮತಿ, ಒಳಕೆಮಾತು ಸಂಸ್ಕೃತ, ಇಂಗ್ಲಿಷ್, ತೆಲುಗು ಕಾವ್ಯಗಳ ವಿಚಿತ್ರಪೂರ್ಣ ಬಳಕೆಯಿಂದ ಶೈಲಿ ಶಕ್ತಿಪೂರ್ಣವಾಗಿದೆ. ಬಿಡಿಸಿಹೇಳದೆ ಧ್ವನಿ ಮಾತನ್ನು ಬಿಚ್ಚಿಬಿಟ್ಟು ಅದರಲ್ಲಿ ಸ್ವಾರಸ್ಯ ತುಂಬಿದ ರೀತಿ ಅನನ್ಯವಾಗಿದೆ. ತೀರ ಚಿತ್ರವಾದ ತರ್ಕಸರಣಿಯನ್ನು ಬಿಳಿಸುತ್ತ ಹೋಗುವುದು. ಕೆ. ವೆಂಕಟರಾಮಪ್ಪನವರ ವಿಶೇಷತೆ.

ಎಂ. ಪಿ. ಶ್ರೀರಾಮಮೂರ್ತಿಯವರು - ಧ್ವನಿಮುದ್ರಿಕೆ ಮತ್ತು ಮಾಗಿಲುಗಳು. ರಸಿಕತೆ, ಶಬ್ದಾಂತರ ಎಂಬ ಮೂರು ಪ್ರಬಂಧ ಸಂಕಲನಗಳನ್ನು ಪ್ರಕಟಿಸಿದ್ದಾರೆ. ವಿಷಯ ವಿವರಣೆಯಲ್ಲಿ ಸ್ಪಷ್ಟತೆ, ಮರ್ಯಾದೆ ಮೀರಿದ ಹಾಸ್ಯ, ಅತ್ಯಲ್ಪವೆನ್ನಿಸಿದ ಕೃತಕವಲ್ಲದ ಚಮತ್ಕಾರ ಓದುಗರೆಂಬಿಗಿನ ಸ್ನೇಹ ಸಂಬಂಧ ಕಾಪಾಡುವ ಶೈಲಿ ಎಂ. ಪಿ. ಎಸ್. ಅವರ ಪ್ರಬಂಧಗಳ ವೈಶಿಷ್ಟ್ಯ. ಕಲ್ಪನೆಯ ರಾಜಾಜ್ಞೆಯಲ್ಲಿ ಬಂತು ವಸ್ತುವನ್ನು ಸೊಗಸಾಗಿ ವರ್ಣಿಸುತ್ತಾರೆ. 'ಮಾಗಿಲುಗಳು' ಅವರ ಚಿತ್ರಕಲೆಗೆ ಕಲ್ಪನಾಶಕ್ತಿಗೆ ದೃಷ್ಟಾಂತವಾಗಿದೆ. ಆಕಾಶದಲ್ಲಿ ಮಾಗಿಲಿನ ತುಂಡು ಕುದುರೆಯಂತೆಯೂ ಲೇಖಕರನ್ನು ಕುದುರುತ್ತದೆ. ಧ್ವನಿಮುದ್ರಿಕೆಯಲ್ಲಿಯೂ ಧ್ವನಿಲೇಖನವು ವರ್ಣನೆಯಷ್ಟೂ ಜಾಣಿಗಿ ಕಾವ್ಯವೇ ಆಗಿದೆ. 'ಗಡ್ಡ ಬೆಳೆಸಿದವನ' ಒಂದು ಲಘುಬರಹ. ಪುರಾಣಕಾವ್ಯ ಇತಿಹಾಸಗಳಲ್ಲಿ ಬರುವ ಗಡ್ಡದ ಉಲ್ಲೇಖದಿಂದಿಗೆ ವರ್ತಮಾನದ ಸ್ಥಿತಿಯ ವರ್ಣನೆಗೆ ಎಡಗುತ್ತಾರೆ.

ಎಸ್. ಪ್ರಹ್ಲಾದರಾಯರ ಮಧ್ಯಾಹ್ನ, ಮುತ್ತಿನಹಾರ ಪ್ರಬಂಧ ಸಂಕಲನಗಳಲ್ಲಿಯ ಪ್ರಬಂಧಗಳು ಸಮಸ್ಕೃತ ಮನಸ್ಸಿನ ನೇರವಾದ ಆಲೋಚನೆಗಳಿಗೆ ಪರಿವರ್ತನೆಗಳಾಗಿವೆ. ಇವು ಅನುಭವದ ಲಗು - ಬಿಗುಗಳನ್ನು ವರ್ಣಿಸುವ ಪ್ರಬಂಧಗಳೆಂದು ಲೇಖಕರೇ ಹೇಳುತ್ತಾರೆ. ಈ ಪ್ರಬಂಧಗಳ ಬಂಧ ಬಿಗುವಾಗಿದ್ದು, ಎಲ್ಲಿಲ್ಲಿ ಮಂದಗತಿಯಿಂದ ಸಾಗುತ್ತ ಬಾಲ್ಯ ಜೀವನದ ಘಟನೆಗಳನ್ನು ಕೌಟುಂಬಿಕ ಜೀವನದ ಸ್ವಾರಸ್ಯವನ್ನು ಒಳಗೊಳ್ಳುತ್ತ ಎಲ್ಲಿಲ್ಲಿ ಪ್ರಕೃತಿ ಸೌಂದರ್ಯವನ್ನು ವರ್ಣಿಸುವ ರೀತಿ ಸೊಗಸಾಗಿದೆ. ಪಕ್ಷಿಗಳಿಗೆ ಹಾರುವ ಹುಚ್ಚಿದೆಯೆಂದು ಹೇಳುವ ರೀತಿ ಮನೋಜ್ಞವಾಗಿದೆ.

ದ. ಬಾ. ಕುಲಕರ್ಣಿಯವರ ಸಾಮಾನ್ಯ ಹಾಗೂ ಬದುಕಿನ ಬಾಳುವೆಗಳಲ್ಲಿ ಒಂದು ಅಂತರ್ಮುಖ ದೃಷ್ಟಿಕೋನ, ಸಂಕಥನ, ಲಲಿತವಾದ ಚಿಕ್ಕ ಚಿಕ್ಕ ವಾಕ್ಯಗಳಿಂದೆಸಗುವಿರುವ ಹದವಾದ ಹಾಸ್ಯವಿಲಾಸವನ್ನು ಕಾಣುತ್ತೇವೆ.

ಪಿ. ಕೆ. ಗೋಕಾಕರ ಚಿಲುಮೆ ಎಲುಬಿನಲ್ಲಿ ಸೌಂದರ್ಯ ಮೀಮಾಂಸೆಯದೆ ಧ್ಯೇಯ ಬಂಧದಲ್ಲಿ ನೇರವಾದ ತಾಗೂ ಸ್ಪಷ್ಟವಾದ ಕಥನ ವಿವರಣೆಯಿದೆ. 'ಚಿಮಣಿ ಬಾಗಿಲು' ಭೀರ ವಿಷಯ ವಿವೇಚನೆಯನ್ನೊಳಗೊಂಡಿದೆ. ಶಕ್ತಿಯುತವಾದ ಗದ್ಯ ಶೈಲಿ ಈ ವಸ್ತುವಿಗೆ ಶಿಷ್ಟವಾಗಿದೆ.

ರಂ. ಶ್ರೀ. ಮುಗಳಿಯವರ 'ಪಾಥೇಯ'ದಲ್ಲಿ ಆಧುನಿಕತೆಯ ಭ್ರಮೆಯಲ್ಲಿ ದಾರಿ ತಪ್ಪುತ್ತಿರುವ ಯುವಕರನ್ನು ಉದ್ದೇಶಿಸಿ ಜೀವನದ ಆದರ್ಶಗಳ ಕುರಿತು ಆತ್ಮೀಯವಾದ ಸಲ್ಲಾಪ ನಡೆಸಿದ್ದಾರೆ. ಅವರ 'ಕಟುಸತ್ಯ' ಪ್ರಬಂಧ ಸಂಕಲನದಲ್ಲಿ ಕೆಲವು ಹಾಸ್ಯ ಪ್ರಬಂಧಗಳಿವೆ.

ದ. ರಾ. ಬೇಂದ್ರೆಯವರ 'ನಿರಾಭರಣ ಸುಂದರಿ'ಯಲ್ಲಿ ಕೆಲವು ಹರಟೆಗಳು ಪ್ರಕಟವಾಗಿವೆ. ಉಗ್ರವಿಡಂಬನೆ ಈ ಹರಟೆಗಳಲ್ಲಿ ಹಾಸುಹೊಕ್ಕಾಗಿದೆ. ಮೋಹಕ ವ್ಯಕ್ತಿತ್ವ ಸಲಿಗೆಯ ಶೈಲಿ, ತಮ್ಮ ಲೋಪದೋಷಗಳನ್ನು ಎತ್ತಿ ಹೇಳಬಲ್ಲ ಎದೆಗಾರಿಕೆ, ಸಮಾಜ ವಿಡಂಬನೆಗಳು ವ್ಯಂಗ್ಯಶೈಲಿಯಲ್ಲಿ ಮೂಡಿವೆ. 'ನನ್ನ ಅವತಾರ'ದಲ್ಲಿ ನನಗಿಂತ ದೊಡ್ಡವರಾರೂ ಇಲ್ಲ. ನನ್ನ ನಂಬುವವರು ಏನನ್ನು ನಂಬುತ್ತಾರೆ. ನಂಬದವರು ಏನು ಹೇಳಿದರೂ ನಂಬುವದಿಲ್ಲ. `ಸಾವಿನಕೂಡ ಸರಸ ' ಅವರ ಉತ್ಕೃಷ್ಟ ಹರಟೆ ಯಾಗಿದೆ. ಬೇಂದ್ರೆಯವರ ಮೊನಚಾದ ಹಾಸ್ಯಕ್ಕೆ ಉದಾಹರಣೆ-ನಾಟಕ ಗೃಹಗಳಲ್ಲಿ `ಉಗುಳಬಾರದು' ಎಂದು ಬರೆಯಲಾಗಿದ್ದು ಉಗುಳಿಸಿಕೊಳ್ಳುವಂತಹ ಪ್ರಸಂಗಗಳು ತಮ್ಮ ನಾಟಕದಲ್ಲಿಯೂ ಅಭಿನಯದಲ್ಲಿಯೂ ಇರುವದೆಂಬ ಭೀತಿಯಿರುವದರಿಂದ ಅವರು ಹೀಗೆ ಬರೆಸಿರುವರೇನೋ.

ನಾ. ಕಸ್ತೂರಿ ಕನ್ನಡದ ಸಮರ್ಥ ಹರಟೆಗಾರರಲ್ಲೊಬ್ಬರು. ಮಾನವ ಸ್ವಭಾವಜನ್ಯ ಗುಣಾವಗುಣಗಳನ್ನು ಸೂಕ್ಷ್ಮದೃಷ್ಟಿಯಿಂದ ಕಂಡು ಅಲ್ಲಿ ತಮ್ಮ ವಿನೋದಲಹರಿಯನ್ನು ಹರಿಬಿಡುತ್ತಾರೆ. ಅವರ `ಉಪಾಯವೇದಾಂತ' ಹರಟೆಗಳ ಸಂಕಲನದಲ್ಲಿ ಅವರ ಸಹಜ ಮೌಲಿಕ ಹಾಸ್ಯ ಕಂಡುಬರುತ್ತದೆ. ಪ್ರತಿಷ್ಠಿತ ಜನರ ಟೊಳ್ಳುಗಳನ್ನು ಬಯಲಿಗೆಳೆಯುವುದು ಅವರಿಗೆ ಲೀಲಾಜಾಲ. ಅವರ ಹರಟೆಗಳು ವಿರೋಧಾಭಾಸಗಳಿಂದ ಕೂಡಿವೆ. ಮಾನವನ ಅಜ್ಞಾನ, ಅವಿವೇಕಗಳನ್ನು ಕಂಡು ಅವುಗಳನ್ನು ಉಗ್ರ ವಿಡಂಬನೆಗೆ ಒಳಪಡಿಸುವುದು ಅವರ ಪದ್ಧತಿ. `ನನ್ನ ಬೆನ್ನು ' ನಾ. ಕಸ್ತೂರಿಯವರ ಪ್ರಸಿದ್ಧ ಪ್ರಬಂಧಗಳಲ್ಲೊಂದು.

ಕಾರಂತರ ಆರು ಪ್ರಬಂಧ ಸಂಕಲನಗಳು ಪ್ರಕಟವಾಗಿವೆ. ಗ್ನಾನ, ಹಳ್ಳಿಯಹತ್ತು ಸಮಸ್ತರು, ಮೈಗಳ್ಳನ ದಿನಚರಿಯಿಂದ, ಮೈಲಿಕಲ್ಲಿನೊಡನೆ ಮಾತುಕತೆ ಇವು ಪ್ರಮುಖವಾಗಿವೆ. `ಗ್ನಾನ 'ನಮ್ಮ ಮೂಢನಂಬಿಕೆಗಳ, ವಿಚಾರಹೀನತೆಯ ಅಜ್ಞಾನದ ಕಟುವಿಡಂಬನ ಮಾಡುತ್ತದೆ. `ಸುತ್ತಲೂ ಲತ್ತೆಕೊಡುವ ಕತ್ತೆಯೊಂದು ಈ ಪುಸ್ತಕದಲ್ಲಿ ವರ್ಣಿತವಾಗಿದೆ. ತಿಳಿದವರು ತಿಳಿಯದವರನ್ನು ತಿಳಿಯದ ಹಾಗೆ ಮೋಸ ಮಾಡುವ ಬಗೆಯೇ ಜ್ಞಾನವೆಂದು ಹೇಳಿ ಪಂಡಿತರೆನ್ನಿಸಿಕೊಳ್ಳುವವರ ಪೊಳ್ಳುತನವನ್ನು ಬಯಲಿಗೆಳೆದಿದ್ದಾರೆ. `ಮೈಲಿ ಕಲ್ಲಿನೊಡನೆ ಮಾತುಕತೆ 'ನಮ್ಮ ಸಂಸ್ಕೃತಿಯ ಮುಖ್ಯ ಘಟ್ಟಗಳ ಕುರಿತ ವಿವೇಚನೆಯನ್ನೊಳಗೊಂಡಿದೆ. `ಮೈಗಳ್ಳನ ದಿನಚರಿಯಿಂದ' ಕಾರಂತರು ತಮ್ಮ ಮೇಲೆ ಸೋಮಾರಿತನವನ್ನು ಆರೋಪಿಸಿಕೊಂಡು ಬರೆದ ಹರಟೆಗಳಾಗಿವೆ.

ಶ್ರೀರಂಗರ ಹರಟೆಗಳಲ್ಲಿ ಮೂರ್ತಿಭಂಜಕತನವಿದೆ. ವಿಚಾರದಲ್ಲಿ ನಾವೀನ್ಯತೆಯಿದೆ. ಹೊಸದೃಷ್ಟಿಕೋನವಿದೆ. ಸಮಾಜದ ರೀತಿನೀತಿಗಳ ಕಟುಟೀಕೆ ಇವರ ಮುಖ್ಯ ರೀತಿಯಾಗಿದೆ. `ಮೀಮಾಂಸೆಗಳು '`ಮಂಗನ ಮಲ್ಲಿನಾಥ' `ಮುಕ್ಕಣ್ಣ ಯಾತ್ರೆ 'ಈ ಸಂಕಲನಗಳಲ್ಲಿ ಹಾಸ್ಯ ವಿಡಂಬನೆ ತಾನೇ ತಾನಾಗಿ ಚಲ್ಲುವರಿದಿದೆ. `ಶ್ರೀರಂಗ ಸತ್ತಾಗ ' ಎಂದು ತಮ್ಮ ಬಗ್ಗೆಯೇ

ಒಂದು ಹರಟೆ ಬರೆದು ತಮ್ಮ ದೋಷಗಳಿಗೆ ತಾವೇ ಕನ್ನಡಿ ಹಿಡಿದಿದ್ದಾರೆ. ಒಟ್ಟಾರೆ ನಾಟಕಗಳಲ್ಲಿ ತೋರುವ ಕ್ರಾಂತಿಕಾರಿ ಮನೋವೃತ್ತಿಯನ್ನು ಹರಟೆಗಳಲ್ಲಿಯೂ ತೋರಿದ್ದಾರೆ.

ಬೀಚಿ : ನಗೆಗೆ ಇನ್ನೊಂದು ಹೆಸರು ಬೀಚಿ. ಅವರ ತಿಮ್ಮ ಕನ್ನಡ ಹರಟೆಗೆ ಅಮೌಲ್ಯಕಾಣಿಕೆ, ಜಗತ್ತಿನ ಮೂರ್ಖತನವನ್ನೂ ಮೌಢ್ಯವನ್ನು ಕಂಡು ಬೀಚಿ ನಗುತ್ತಾರೆ. ಅಷ್ಟೇ ನಿಜವಾಗಿ ತಮ್ಮ ಲೋಪದೋಷಗಳನ್ನು ಕುರಿತು ಕೂಡ ಅವರು ನಗದೆ ಇರುವದಿಲ್ಲ. ಅವರ ಮಾತ್ರೆಗಳು, ಹುಚ್ಚು ಹುರುಳು, ಗಾಳಿಮಾತು ಮೊದಲಾದ ಸಂಕಲನಗಳಲ್ಲಿ ಹರಟೆಗಳು ಪ್ರಕಟವಾಗಿವೆ. ಎಲ್ಲೆಲ್ಲಿ ಮಾತು ಮತ್ತು ಕೃತಿಗಳ ನಡುವೆ ಆಳವಾದ ಅಂತರ ಕಂಡು ಬರುತ್ತದೆಯೋ ಅದು ಬೀಚಿ ಅವರ ಕಟು ಟೀಕೆಗೆ ಗುರಿಯಾಗಲೇಬೇಕು. ಅವರ ಹರಟೆಗಳಲ್ಲಿ ಪ್ರತಿಷ್ಠಿತರ ದೇಶಭಕ್ತನಾಯಕರ ಡಂಭಾಚಾರಿಗಳ ಎರಡು ಬಗೆಯ ಜೀವನ ಕುರಿತು ತೀಕ್ಷ್ಣ ವಿಡಂಬನೆಯಿದೆ. `ಲಂಚಪ್ರಪಂಚ' ನೀರಿನ ಗಂಗಮ್ಮ ಇವೆರಡು ಲಘು ಹರಟೆಗಳಿಗೆ ಉತ್ತಮ ಉದಾಹರಣೆಗಳಾಗಿವೆ. ಆದರೆ ಬೀಚಿ ಅವರ ಹರಟೆಗಳು ವಿಷಯದ ಹರಹನ್ನು ನಾಲ್ಕು ದಿಕ್ಕಿಗೆ ಪಸರಿಸುವದಿಲ್ಲ.

ಎರಡನೇ ತಲೆಮಾರಿನ ಪ್ರಬಂಧಕಾರರು

ಹಿರಿಯ ತಲೆಮಾರಿನ ಅಗ್ರೇಸರ ಪಟ್ಟ ಎ. ಎನ್. ಮೂರ್ತಿರಾವರಿಗೆ ಸಂದರೆ ಆ ಪಟ್ಟ ಎರಡನೇ ತಲೆಮಾರಿನ ಪ್ರಬಂಧಕಾರರಲ್ಲಿ ರಾಕು ಅವರಿಗೆ ಸಲ್ಲುತ್ತದೆ. `ಗಾಳಿಪಟ ' ದೇವಕನ್ಯೆ' ಎಂಬ ಎರಡು ಸಂಕಲನಗಳನ್ನು ಅವರು ಪ್ರಕಟಿಸಿದ್ದರೂ ಪ್ರಬಂಧ ಸಾಹಿತ್ಯದ ಎಲ್ಲ ಸಾಧ್ಯತೆಗಳನ್ನು ಅವರು ಸೂರೆಗೊಂಡದ್ದು ಗಾಳಿಪಟದಲ್ಲಿಯೇ. ವ್ಯಂಗ್ಯೋಕ್ತಿ, ತರ್ಕ, ಜಿಜ್ಞಾಸೆ, ಹಳೆಗನ್ನಡ ಕಾವ್ಯದ ಸಾಲುಗಳು ಉಪಮೆಗಳು ಸೂಕ್ತಿಗಳು ವಿಚಾರಗಳು ಇವುಗಳ ಸಮ್ಮೋಹಕ ಮಿಶ್ರಣವೇ ಅವರ ಪ್ರಬಂಧಗಳಾಗಿವೆ. ತೀರ ಸಾಮಾನ್ಯವೆನ್ನಬಹುದಾದ ವಿಷಯದ ಸುತ್ತಲೂ ಇವರು ಹೆಣೆಯುವ ಮಾತಿನ ಹಂದರ ಅನುಪಮ ವಿಷಯದ ನಾಲ್ಕೂ ಮಗ್ಗಲುಗಳನ್ನು ವಿಶ್ಲೇಷಿಸಿ ಅವುಗಳನ್ನು ಕಲಾತ್ಮಕವಾಗಿ ಜೋಡಿಸುತ್ತಾರೆ. ಅವರ ವಕ್ರೋಕ್ತಿ ವಿಲಾಸಗಳಿಗೆ, ಕೊಂಕು ಕಟಕಿಗಳಿಗೆ ಅತ್ಯುಕ್ತಿಗಳಿಗೆ ಕಲ್ಪನಾ ಚಮತ್ಕಾರಗಳಿಗಾದರೂ ಅವರ ಗಾಳಿಪಟ ಓದಬೇಕು. ಅವರು ಹರಡಿ ಬಿಟ್ಟ ಸಂದೇಹಗಳಿಗೆ ಅವರೇ ಕೊಟ್ಟ ಉತ್ತರಗಳು ಮನನೀಯವಾಗಿವೆ. ವಿಮರ್ಶಕರೊಬ್ಬರು ಹೇಳುವಂತೆ ಅವರ `ಗಾಳಿಪಟ' ಶೈಲಿಯು ಒಂದು ಟಂಕಶಾಲೆಯಾಗಿದೆ.

ವಿನೋದದೃಷ್ಟಿ, ಚಿಂತನಪರತೆ, ಪ್ರಗಲ್ಭ ಪಾಂಡಿತ್ಯ, ಓತ ಪ್ರೋಕವಾದ ಧಾರವಾಡದ ದೇಶೀ ಭಾಷೆಯಲ್ಲಿ ಅಭಿವ್ಯಕ್ತಗೊಂಡದ್ದು - ಆರ್. ವಾಯ್.ಧಾರವಾಡಕರ ಪ್ರಬಂಧಗಳಲ್ಲಿ. ನಾಟಕೀಯತೆ ಅವರ ಪ್ರಬಂಧಗಳಲ್ಲಿ ಹಾಸುಹೊಕ್ಕಾಗಿದೆ. ಜನಸಾಮಾನ್ಯರ ಮಾತಿನ ವೈಖರಿಯನ್ನೂ ಅವರು ಶೈಲಿಯಲ್ಲಿಯೇ ಸಾಕ್ಷಾತ್ಕರಿಸುತ್ತ ನಿರರ್ಗಳವಾಗಿ ಮತ್ತು ದೀರ್ಘವಾಗಿ ವಿಷಯದ ವಿವಿಧ ಮಗ್ಗಲುಗಳನ್ನೂ ರಮ್ಯವಾಗಿ ವ್ಯಾಖ್ಯಾನಿಸುತ್ತಾರೆ. `ಧೂಮ್ರ ವಲಯಗಳ ' ನಂತರ ಬಂದ `ತೂರಿದ ಚಿಂತನ ' ಗಳು ಚಿಂತನ ಪ್ರಬಂಧಗಳ ಸಂಕಲನವಾಗಿದೆ. ಇದರಲ್ಲಿ ವ್ಯಕ್ತವಾಗುವ ಲೇಖಕರ ಅನುಭವದ ಹರಹು ವಿಸ್ತಾರವಾಗಿದೆ. ಘಟನೆಯಿಂದ ಘಟನೆಗೆ ಕುಪ್ಪಳಿಸುತ್ತ ಹೋಗುವ ರೀತಿ ಅನನ್ಯವಾಗಿದೆ. `ನವಿಲುಗರಿ' ಅವರ ಇನ್ನೊಂದು

ಪ್ರಬಂಧ ಸಂಕಲನ ಸಾಮಾನ್ಯ ವಸ್ತು ವಿವೇಚನೆಯಿಂದ ಪ್ರಾರಂಭಿಸಿ ಉತ್ತುಂಗ ವಿಚಾರಕ್ಕೆ ಸಾಗಿ ಹೋಗುವ ರೀತಿ ಇವರ ಪ್ರಬಂಧಗಳನ್ನು ಸ್ವಚ್ಛಂದ ಲಹರಿಗಳನ್ನಾಗಿಸಿವೆ.

ಎಚ್. ಎಸ್. ಕೆ. ಅವರ ಸುರಹೊನ್ನೆ ಮೇಘಲಹರಿಗಳಲ್ಲಿ ಸೂಕ್ಷ್ಮ ನಿರೀಕ್ಷಣಾ ಶಕ್ತಿಯನ್ನು ಕಾಣುತ್ತೇವೆ. ವಿಷಯ ವೈವಿಧ್ಯ, ಆಯಾ ವಿಷಯಗಳ ಕುರಿತು ಅವರು ಕೊಡುವ ಉದಾಹರಣೆಗಳು,ಕಥಾನಕಗಳು, ಕಾವ್ಯದ ಸಾಲುಗಳು ಅವರ ಬಹುಶ್ರುತತ್ವಕ್ಕೆ ಸಾಕ್ಷಿಯಾಗಿವೆ. ನೊಣ, ಸುರಹೊನ್ನೆ, ನಗು ಮುಂತಾದ ಪ್ರಬಂಧಗಳಲ್ಲಿ ಹಾಸ್ಯಲೇಪಿತ ಶೈಲಿಯಿದೆ. ತಡವಾಗಿ ಏಳುವುದು ಓದುಗನನ್ನು ಆತ್ಮೀಯವಾಗಿ ವಿಶ್ವಾಸಕ್ಕೆ ತೆಗೆದುಕೊಳ್ಳುವ ರೀತಿ ಮನನೀಯ ವಾಗಿದೆ. `ತಿಳಿಸಾರು,' `` ಮೇಘ ಲಹರಿ ' ಉತ್ಕೃಷ್ಟ ಪ್ರಬಂಧಗಳಾಗಿವೆ.

ಎನ್ಕೆ ಅವರ ಲಲಿತ ಪ್ರಬಂಧಗಳು ರಸಿಕತೆ, ಲೋಕಜ್ಞಾನ, ಜೀವನಾನುಭವಗಳ ಮುಪ್ಪುರಿಯಾಗಿವೆ. ಅವು ಉತ್ತರ ಕರ್ನಾಟಕದ ಮಧ್ಯಮವರ್ಗದ ಕೌಟುಂಬಿಕ ಜೀವನದ ಕುರಿತು ಕ್ಷಕಿರಣ ಬೀರುತ್ತವೆ. ವಿಚಿತ್ರ ಸ್ವಭಾವಗಳ ವಿನೋದಪೂರ್ಣ ವಿಶ್ಲೇಷಣೆ ಎನ್ಕೆ ಅವರ ವೈಶಿಷ್ಟ್ಯ. ನಿವೃತ್ತ ಜೀವನ ಚಿತ್ರಗಳು ವೈಯಕ್ತಿಕ ಜೀವನದ ಅರೆಕೊರೆಗಳು ಅಳಿಯ ಮತ್ತು ದೀಪಾವಳಿಯ ಸಡಗರ ಅವರ ಪ್ರಬಂಧಗಳ ಮುಖ್ಯ ವಸ್ತುಗಳಾಗಿವೆ. ಕಸದಲ್ಲಿ ರಸವನ್ನು ಕಾಣುವುದು ಅವರ ರೀತಿಯಾಗಿದೆ. ಅವರದು ಪೂರ್ಣ ವಿನೋದದ ದೃಷ್ಟಿ, ಸಮಾಜದ ವಿಡಂಬನೆಯನ್ನು ಅವರು ನವುರಾದ ರೀತಿಯಲ್ಲಿ ಮಾಡುತ್ತಾರೆ. ಆತ್ಮೀಯವಾದ ಮಾತಿನ ಧಾಟಿ ಅವರ ಶೈಲಿಯ ವೈಶಿಷ್ಟ್ಯ. ಶ್ಲೇಷೆ ಕಟಕಿ, ವ್ಯಂಗ್ಯ ವಿಡಂಬನಗಳಿಂದ ಅವರ ಭಾಷೆ ಶ್ರೀಮಂತವಾಗಿದೆ. ಅವರ ಹಾಸ್ಯದಲ್ಲಿ ನೋವಿನ ಛಾಯೆಯಿದೆ.

ಆ.ರಾ. ಮಿತ್ರರು ತಮ್ಮ ಪ್ರಬಂಧಗಳಲ್ಲಿ ಮಾನವ ಸ್ವಭಾವದ ಅರೆಕೊರೆಗಳನ್ನು ವ್ಯಕ್ತಪಡಿಸುವ ರೀತಿ ಅನನ್ಯವಾಗಿದೆ. ಅವರು ತಮ್ಮ ಪ್ರಬಂಧಗಳಲ್ಲಿ ಬಳಸುವ ಭಾಷೆ ನಯನಾಜೂಕಿನ ಭಾಷೆ. ವಸ್ತುವನ್ನು ಸಮರ್ಥಿಸುತ್ತಿದ್ದರೂ ಅದನ್ನು ನಿಜವಾಗಿಯೂ ಖಂಡಿಸು ತ್ತಿದ್ದಾರೆಂದು ನಂಬಿಕೆ ಹುಟ್ಟಿಸುವ ಶೈಲಿ ಅವರದು. ಅವರ ಪ್ರಬಂಧಗಳಲ್ಲಿ ಭಾವಗೀತೆಯ ಏಕಸೂತ್ರತೆ ಪ್ರಸನ್ನ ಮನೋಧರ್ಮಗಳನ್ನು ಕಾಣುತ್ತೇವೆ. ವಸ್ತು ವಿವೇಚನೆಯ ಚಮತ್ಕಾರ ದಿಂದಾಗಿ ಅವರ ಪ್ರಬಂಧಗಳು ಹಿರಿಯ ತಲೆಮಾರಿನ ಪ್ರಬಂಧಗಳನ್ನು ನೆನಪಿಗೆ ತರುತ್ತವೆ. ನೂತನ ಪದಪ್ರಯೋಗಗಳು ಆ.ರಾ. ಮಿತ್ರರ ವೈಶಿಷ್ಟ್ಯ.

`ಗುಬ್ಬಿಗೂಡು ' ಏಕನಿಷ್ಠೆಯಿಂದ ಲಲಿತ ಪ್ರಬಂಧಗಳನ್ನು ಬರೆಯುತ್ತ ಬಂದ ಬಿ. ಆರ್. ವಾಡಪ್ಪಿಯವರ ಪ್ರಬಂಧ ಸಂಕಲನ. ಅವರದು ಕಥನದ ಶೈಲಿ. ಒಂದೊಂದು ವಸ್ತುವಿನ ಸುತ್ತಲೂ ಅವರ ಸುಸಂಸ್ಕೃತ ಮನದ ಅಲೆದಾಟವನ್ನು ಕಾಣಬಹುದು.

ಎನ್. ಎಸ್. ಗದಗಕರರು ತಮ್ಮ ವಾದಗಳನ್ನು ಹಾಸ್ಯ ಪರಿಹಾಸದಲ್ಲಿ ಜೀವನದ ಹಾಗೂ ಸಾಹಿತ್ಯದ ಸನ್ನಿವೇಶಗಳಿಂದ ವಿಸ್ತರಿಸುತ್ತ ಹೋಗುತ್ತಾರೆ.

ಲಾಂಗೂಲಾಚಾರ್ಯರ ಹರಟೆಗಳು ಚುರುಕುಮತಿಗೆ ನಿದರ್ಶನಗಳಾಗಿವೆ. ಒಂದು ತುಂಡು ಸುದ್ದಿಯ ಮೇಲೆ ಅವರು ಸೊಗಸಾಗಿ ಹರಟೆ ಹೊಡೆಯಬಲ್ಲರು. ಅವರ ಹರಟೆಗಳು

ಸಾಮಯಿಕ ಬರಹಗಳಾಗಿ ಕಂಡರೂ ಬಹಳಷ್ಟು ಪಾಲು ಓದಿ ತಲೆಗೆ ಚುರುಕ್ ಎನಿಸಿ ಕೊಳ್ಳಲು ಅರ್ಹವಾಗಿವೆ. ಗಂಭೀರ ವಿಷಯ ಅಥವಾ ಪುರಾಣದ ಸಂದರ್ಭಗಳನ್ನು ಕುಚೇಷ್ಟೆ ಯಿಂದ ಕಾಣುವುದೂ ಲಘು ವಿಷಯಗಳನ್ನು ಗಂಭೀರ ದೃಷ್ಟಿಯಿಂದ ಕಾಣುವುದೂ ಅವರ ರೀತಿ. ರಾಜಕಾರಣದಿಂದ ರಾಮಾಯಣದವರೆಗೆ, ಗೌಳಿಗನಿಂದ ಗಣೇಶನವರೆಗೆ ಅವರ ಹರಟೆಗಳ ವ್ಯಾಪ್ತಿಯಿದೆ. ಗೌಳಿಗನು ಹಾಲಲ್ಲಿ ನೀರನ್ನು ಕೂಡಿಸುವದೆಂದರೆ ಜಲಚಿಕಿತ್ಸಾ ಪ್ರಯೋಗವೆಂದು ಅವರು ಕರೆಯುತ್ತಾರೆ. ಅವರನ್ನು ವ್ಯಂಗ್ಯ ಶೈಲಿಯ ಚಕ್ರವರ್ತಿಯೆಂದು ಕರೆಯಬಹುದು.

ದೇಜಗೌ ಅವರ ಪ್ರಬಂಧಗಳು ಹಿರಿಯ ತಲೆಮಾರಿನ ಡಿ.ಎಲ್. ನರಸಿಂಹಾಚಾರ್ಯರ ಪ್ರಬಂಧಗಳನ್ನು ಹೋಲುತ್ತವೆ. ಸರಳತೆ, ಖಚಿತ ಆಲೋಚನೆ, ಹೇಳಬೇಕಾದುದನ್ನು ಅಚ್ಚುಕಟ್ಟಾಗಿ ಹೇಳುವ ರೀತಿ ಜವರೇಗೌಡರ ಪ್ರಬಂಧಗಳ ವೈಶಿಷ್ಟ್ಯಗಳು. ಕೆನೆ ಮತ್ತು ತೆನೆ ಆಕಾಶವಾಣಿಗಾಗಿ ಬರೆದ ಚಿಂತನಗಳಾಗಿವೆ. ಕನ್ನಡ, ಸಂಸ್ಕೃತ ಜನಪದ ಸಾಹಿತ್ಯದ ಅವತರಣಿಕೆಗಳಿಂದ ಅವರು ತಮ್ಮ ಚರ್ಚೆಯನ್ನು ಬೆಳೆಸುತ್ತಾರೆ. ಅವರದು ಗಟ್ಟಿ ಮುಟ್ಟಿ ಯಾದ ಗದ್ಯ ಶೈಲಿ.

ಡಾ. ಹಾ. ಮಾ. ನಾಯಕರು ನಮ್ಮ ಸಮರ್ಥ ಪ್ರಬಂಧಕಾರರಲ್ಲೊಬ್ಬರು. `ನಮ್ಮ ಮನೆಯ ದೀಪ' ಮಗುವಿನ ವ್ಯಕ್ತಿತ್ವದ ಸುತ್ತಲೂ ಹರಡಿದ ಸುಂದರ ಪ್ರಬಂಧಗಳ ಸಂಕಲನ. ಈ ಪ್ರಬಂಧಗಳಲ್ಲಿ ಕತೆ ಹಾಗೂ ಪ್ರಬಂಧಗಳ ಲಕ್ಷಣಗಳು ಮೇಳವಿಸಿವೆ. `ಸೂಲಂಗಿ'ಯಲ್ಲಿ ಸುಸಂಸ್ಕೃತ ಸಂವೇದನಾಶೀಲ ವ್ಯಕ್ತಿಯ ಕಲಾತ್ಮಕವೂ ವಿಚಾರಪೂರಿತವೂ ಆದ ಲಹರಿಗಳು ಸಂಗ್ರಹಿಸಲ್ಪಟ್ಟಿವೆ. ೧೫ ಅಂಕಣ ಬರಹಗಳ ಸಂಕಲನಗಳು ಪುಸ್ತಕರೂಪದಲ್ಲಿ ಪ್ರಕಟವಾಗಿವೆ. ಓದುಗರ ಮನತಟ್ಟುವಂತೆ ಅವರು ಬರೆಯಬಲ್ಲರು. ಪರಿಪೂರ್ಣ ವಿಷಯ ಸಂಗ್ರಹ ಮಾಡಿ ಅದನ್ನು ತರ್ಕಬದ್ಧವಾಗಿ ಕಲಾತ್ಮಕವಾಗಿ ಜೋಡಿಸುತ್ತಾರೆ.

ಅವರ ಅಂಕಣ ಬರಹಗಳ ಹಿಂದೆ ಅಪಾರ ವಿದ್ವತ್ತಿದೆ. ಧೀಮಂತ ವ್ಯಕ್ತಿತ್ವದ ಹಾಮಾನಾ ಅವರು ಕನ್ನಡ ಸಂಸ್ಕೃತಿಯ ಹಿತಚಿಂತಕರೂ ಆಗಿದ್ದಾರೆನ್ನುವದು ಅವರ ಬಹುತೇಕ ಅಂಕಣ ಬರಹಗಳಿಂದ ಸ್ಪಷ್ಟವಾಗುತ್ತದೆ.

ಎಸ್. ಎಸ್. ಒಡೆಯರ ಅವರು ಸಂಸ್ಕೃತಿ, ಮಾನವತೆ, ರೀತಿ ನೀತಿಗಳಂಥ ಗಂಭೀರ ವಿಷಯಗಳ ಕುರಿತು ಬೇಕನ್‌ನಂತೆ ಚಿಂತನೆ ನಡೆಸುತ್ತಾರೆ. ಬಾಳಿನ ತಿಳುವಳಿಕೆಯನ್ನು ಉದಾಹರಣೆಗಳೊಂದಿಗೆ ಸ್ಪಷ್ಟಪಡಿಸುತ್ತಾರೆ. ಅವರ ಕೆಲ ಪ್ರಬಂಧಗಳು ಗೋಲ್ಡ್‌ಸ್ಮಿಥನ ಪ್ರಬಂಧಗಳನ್ನು ಹೋಲುತ್ತವೆ.

ಡಾ. ಸಿ. ಪಿ. ಕೆ. ಕೂಡ `ಚಿಂತನ ಬಿಂದು' ಎಂಬ ಸಂಕಲನದಲ್ಲಿ ತಮ್ಮ ಅಧ್ಯಯನ ಅನುಭವಗಳ ಫಲವಾದ ನೇರ ಹಾಗೂ ಸ್ಪಷ್ಟ ಆಲೋಚನೆಯನ್ನು ವ್ಯಕ್ತಪಡಿಸಿದ್ದಾರೆ.

ಪ್ರಭುಶಂಕರರ `ಜನಮನ' ಒಂದು ಅಪರೂಪದ ವ್ಯಕ್ತಿ ಚಿತ್ರಗಳ ಸಂಕಲನ. ತೀರ ಸಾಮಾನ್ಯರ ಅಂತರಂಗವನ್ನು ಇಣಕಿನೋಡುವ ಪ್ರಯತ್ನ ಮಾಡಿದ್ದಾರೆ. `ಶ್ರೀ ದಾಸರು' ಎಂಬುದು ಹಾರ್ದಿಕ ವ್ಯಕ್ತಿ ಚಿತ್ರ. 'ಎತ್ತಿಗೆ ಜ್ವರ, ಎಮ್ಮೆಗೆ ಬರೆ ' ಎಂಬ ಸಂಕಲನದಲ್ಲಿ

ಸಾಮಾಜಿಕ ಚಿಂತನೆಯಿದೆ. ಕತೆ ಉಪಕತೆಗಳಿಂದ ಕೂಡಿದ ಈ ಪ್ರಬಂಧಗಳು ತುಂಬ ಸೊಗಸಾಗಿವೆ.

ಸರೋಜಿನಿ ಶಿಂತ್ರಿಯವರ `ತುಂತುರ' ದಲ್ಲಿ ಹಾಸ್ಯ ಓತಪ್ರೋತವಾಗಿ ಹರಿದಿದೆ. ಸ್ವಾನುಭವದ ಕಥನ ಶೈಲಿಯಲ್ಲಿ ಬಾಳಿನ ಚಿಂತನೆ ನಡೆಸಲಾಗಿದೆ.

ಮೂರನೇ ತಲೆಮಾರಿನ ಪ್ರಬಂಧಕಾರರು

ಸುನಂದಾ ಬೆಳಗಾವಕರರ `ಕಜ್ಜಾಯ' ಒಂದು ರಸಗವಳ. ಬಾಲ್ಯಜೀವನದ ನೆನಪಿನ ಸಹಾಯದಿಂದ ಹೆಕ್ಕಿ ತೆಗೆದ ರಸಾನುಭವದ ಸುಂದರ ನಿರೂಪಣೆಯನ್ನು ಈ ಸಂಗ್ರಹದಲ್ಲಿ ಕಾಣುತ್ತೇವೆ. ಕುಟುಂಬದ ಹಿನ್ನೆಲೆಯಲ್ಲಿ ಜೀವನದ ಸಾವು ನೋವುಗಳ, ಬಾಲ್ಯ ಮುಪ್ಪುಗಳ ಜೀವಂತ ಚಿತ್ರಣವಿದೆ. ಊಟದ ಚಿತ್ರಣವೇ ಇರಲಿ. ಮದುವೆಯ ಚಿತ್ರಣವೇ ಇರಲಿ ಪ್ರಬಂಧಕಾರ್ತಿಯ ರಸಿಕತೆ ಲಾಸ್ಯವಾಡಿದೆ. ಸಂಜೆಯ ವರ್ಣನೆಯಿದು : ``ಸಂಜೆ ಎಣ್ಣೆ ಸ್ನಾನಮಾಡಿ ತಲೆಗೂದಲನ್ನು ಎಳೆ ಬಿಸಿಲಿಗೆ ಹರವಿನಿಂದ ಹೆಂಗಸಿನಂತಿತ್ತು'. ಇಂಥ ವರ್ಣನೆಗಳು ಪುಟಪುಟಕ್ಕೆ ಸಿಗುತ್ತವೆ. ಘಟನೆಗಳನ್ನು ವ್ಯಕ್ತಿಗಳನ್ನು ಕಣ್ಮುಂದೆ ಕಟ್ಟಿನಿಲ್ಲಿಸುವ ಚಿತ್ರಕ ಶೈಲಿ, ಕಾವ್ಯಮಯ ಭಾಷೆ, ಕರುಣಾರಸವನ್ನು ಪ್ರಚೋದಿಸುವ ಚಿತ್ರಣ ಇವರ ಪ್ರಬಂಧಗಳಲ್ಲಿ ಮೇಳವಿಸಿವೆ. `ಮೊಸರವಲಕ್ಕಿ' ಎಂಥ ಕಟುಕನ ಹೃದಯವನ್ನೂ ಕರಗಿಸಬಲ್ಲುದು. ಅವರ ಪ್ರಬಂಧಗಳು ಲ್ಯಾಂಬ್‌ನ ಕರುಣಾರಸಪೂರ್ಣ ಪ್ರಬಂಧಗಳನ್ನು ನೆನಪಿಗೆ ತರುತ್ತವೆ. ಈ ತಲೆಮಾರಿನ ಅತ್ಯಂತ ಶ್ರೇಷ್ಠ ಪ್ರಬಂಧಕಾರ್ತಿ ಸುನಂದಾ ಬೆಳಗಾವಕರ ಅವರು.

ಮ. ಸು. ಕೃಷ್ಣಮೂರ್ತಿ, ಎ. ಎಸ್. ವೇಣುಗೋಪಾಲರಾವ ಅವರು ತಮ್ಮ `ಹಾದಿಪುರಾಣ' ಆತ್ಮೀಯ, ಸಂಕಲನಗಳಲ್ಲಿ ವೈಯಕ್ತಿಕ ಜೀವನದ ಸ್ವಾರಸ್ಯಕರ ಅನುಭವಗಳನ್ನು ಗಾದೆ, ಸಾಮತಿ, ಕನ್ನಡ ಸಂಸ್ಕೃತ ಕಾವ್ಯಗಳಿಂದ ಅಲಂಕರಿಸುತ್ತ ಓದುಗರೊಂದಿಗೆ ಹಂಚಿಕೊಳ್ಳುತ್ತಾರೆ. ವೀರೇಂದ್ರ ಸಿಂಪಿ ತಮ್ಮ ಕಾಗದದ ಚೂರು, ಭಾವ ಮೈದುನ, ಸ್ವಚ್ಛಂದ ಮನದ ಸುಳಿದಾಟ, ಪರಿಸರ ಸ್ಪಂದನ ಸಂಕಲನಗಳಲ್ಲಿ ವೈಯಕ್ತಿಕ ಜೀವನದ ಘಟನೆಗಳ ಸ್ವಾರಸ್ಯಕರ ವರ್ಣನೆಯೊಂದಿಗೆ ಸಾಮಾಜಿಕ ಚಿಂತನೆಯತ್ತ ಸಾಗಿದ್ದಾರೆ. ಚುರುಕಾದ ಸಂಭಾಷಣೆಯ ಮೂಲಕ ಶಂ. ಗು. ಬಿರಾದಾರರು ತಮ್ಮ `ಗಿಡ್ಡ ಹೆಂಡತಿ ಲೇಸು'ದಲ್ಲಿ ರಾಜಕೀಯ ಸಾಮಾಜಿಕ ವಿಡಂಬನೆಗೆ ತೊಡಗುತ್ತಾರೆ. ಅನಂತ ಕಲ್ಲೋಳರು ವೈಭೋಗದ ವೈಖರಿಯಲ್ಲಿ ಕುತೂಹಲಪೂರ್ಣ ಕಥನಗಳನ್ನು ಬಿಚ್ಚುತ್ತಾ ಹೋಗುತ್ತಾರೆ. ಟಿ. ವಿ. ವೆಂಕಟಾಚಲ ಶಾಸ್ತ್ರಿಗಳು ಸದ್ವೆಂತೆಂಬರ ಗಂಡದಲ್ಲಿ ಸಾಮಾನ್ಯ ವಿಷಯಗಳನ್ನು ಪಾಂಡಿತ್ಯ ಪೂರ್ಣ ಭಾಷೆಯಲ್ಲಿ ಹಿಡಿದಿರಿಸಿದ್ದಾರೆ. ಜಿ. ಡಿ. ನಾಡಕರ್ಣಿ ತಮ್ಮ ಹಾಸ್ಯದ ಲಾಸ್ಯದಲ್ಲಿ ಸನ್ನಿವೇಶಗಳ ರಸಪೂರ್ಣ ಬಣ್ಣನೆ ಮಾಡಿದ್ದಾರೆ. ದೇನಾಶ್ರೀ ತಮ್ಮ ಗಿರಿಕಂದರ ಮೋಹಿತರಲ್ಲಿ ಗುಡ್ಡ ಹತ್ತುವ ಅದ್ಭುತ ಪ್ರಸಂಗ ವರ್ಣಿಸುತ್ತ ಕನ್ನಡ ಪ್ರಬಂಧ ಸಾಹಿತ್ಯಕ್ಕೆ ಹೊಸ ಆಯಾಮ ಜೋಡಿಸಿದ್ದಾರೆ. ಜೀಶಂ.ಪರಮಶಿವಯ್ಯನವರು ಜಾನಪದ ಸನ್ನಿವೇಶಗಳಿಂದ ಪ್ರಬಂಧಗಳನ್ನು ಹೆಣೆದಂತೆ ಡಾ. ಡಿ.ಕೆ. ರಾಜೇಂದ್ರರು ಮಾತಿನಮಲ್ಲರು ಮೂಲಕ ತಮ್ಮ ಬಾಲ್ಯದ ನೆನಹಿನ ಚಿತ್ರಣದೊಂದಿಗೆ ಜನಪದ ಗೀತಗಳನ್ನು ಹದವರಿತು ಜೋಡಿಸಿದ್ದಾರೆ. ಅರಾಸೇ

ಯವರು ' ಮುಗಿಲು ಹಳ್ಳಿಯ ಬಖೈರು ಹಾಗೂ ಇತರ ಲೇಖನಗಳು' ಸಂಕಲನದಲ್ಲಿ ಹಳಗನ್ನಡ ಶೈಲಿ ಮತ್ತು ಉರ್ದು ಮಿಶ್ರಿತ ಕನ್ನಡ ಶೈಲಿಯಿಂದಾಗಿ ಜಿಂದಗಿ ', ಲಡಾಯಿ, ಹುಕುಂ ಮುಂತಾದ ಶಬ್ದಗಳ ಬಳಕೆಯಿಂದಾಗಿ ಹೊಸ ಪ್ರಪಂಚದ ಸೃಷ್ಟಿಯನ್ನೇ ಮಾಡಿದ್ದಾರೆ. ಭುವನೇಶ್ವರಿ ಹೆಗಡೆ ತಮ್ಮ ಹಾಸ್ಯ ಪ್ರಜ್ಞೆಯಿಂದ ನಮ್ಮ ಉತ್ತಮ ಪ್ರಬಂಧಕಾರ್ತಿಯರಲ್ಲೇ ಒಬ್ಬರೆನಿಸಿದ್ದಾರೆ.

ಲಂಕೇಶರು ತಮ್ಮ ಪತ್ರಿಕೆಯಲ್ಲಿ ಬರೆಯುವ ಟೀಕೆ ಟಿಪ್ಪಣಿಗಳಲ್ಲಿ ಲಲಿತ ಪ್ರಬಂಧಗಳೂ ಇರುವದುಂಟು. ಅವರು ಬೆಚ್ಚನೆಯ ಭಾವನೆಗಳನ್ನು ಗಾಢ ವೈಚಾರಿಕತೆಯಲ್ಲಿ ಅದ್ದಿ ಬರೆಯುವದರ ಮೂಲಕ ಜೀವನದ ಅರ್ಥ ಶೋಧಿಸುವ ಪ್ರಯತ್ನಮಾಡುತ್ತಾರೆ. ಇಂದು ಬರೆಯುತ್ತಿರುವ ಪ್ರಬಂಧಕಾರರಲ್ಲಿ ಲಂಕೇಶರು ಬಹು ಮುಖ್ಯರೆನಿಸುತ್ತಾರೆ. ಅದೇ ರೀತಿ ಪೂರ್ಣಚಂದ್ರ ತೇಜಸ್ವಿಯವರು. ಆಫ್ರಿಕಾ ಜನಾಂಗದ ಬಗ್ಗೆಯೇ ಬರೆಯಲಿ ಹಕ್ಕಿಗಳ ಪಯಣದ ಕುರಿತೇ ಬರೆಯಲಿ ವೈಜ್ಞಾನಿಕ ಬರಹಗಳಿಗೆ ಕಲೆಯ ಸ್ವರೂಪ ಕೊಡುತ್ತಾರೆ. ಕೆ.ಡಿ. ಕುರ್ತಕೋಟಿಯವರ ' ಉರಿವ ನಾಲಿಗೆ ' ತುಂಬ ವೈಚಾರಿಕತೆಯಿಂದ ಕೂಡಿದ ಪ್ರಬಂಧ ಸಂಕಲನವಾಗಿದೆ.

ಲಂಕೇಶರ ಪ್ರಭಾವಕ್ಕೊಳಗಾದ ಚಂದ್ರಶೇಖರ ಆಲೂರರು 'ಆ ಕ್ಷಣದ ಸತ್ಯ ' ಸಂಕಲನದಲ್ಲಿ ಹದಿಹರೆಯ ಯುವಕ ಯುವತಿಯರ ಮನಸ್ಥಿತಿಯನ್ನು ಕೇಂದ್ರ ವಾಗಿರಿಸಿಕೊಂಡಿದ್ದಾರೆ. ತರುಣರ ದೃಷ್ಟಿಕೋನದಿಂದ ಪ್ರೇಮ, ಸಾವು ಕ್ರಿಕೆಟು ಮುಂತಾದ ವಿಷಯಗಳ ಕುರಿತು ಚಿಂತನ ನಡೆಸಿದ್ದಾರೆ. ಆದರೆ ಟಿ.ಪಿ. ಅಶೋಕರು ಹೇಳುವಂತೆ ಈ ಪ್ರಬಂಧಗಳಲ್ಲಿ ಬೆಚ್ಚನೆಯ ಭಾವನೆಯ ಜೊತೆಗೆ ದಟ್ಟ ವೈಚಾರಿಕತೆಯ ಕೊರತೆ ಕಂಡು ಬರುತ್ತದೆ. ' ಕೆ. ಸತ್ಯನಾರಾಯಣರೂ ನಮ್ಮ ಪ್ರೀತಿಯ ಕ್ರಿಕೆಟ್ಟು 'ತಮ್ಮನ್ನು ಗಾಢವಾಗಿ ತಟ್ಟಿದ ವಿಷಯಗಳನ್ನು ಕುರಿತು ತಮ್ಮ ವ್ಯಕ್ತಿತ್ವವನ್ನೆಲ್ಲ ತೊಡಗಿಸಿ ಬರೆದಿದ್ದರೆ, ಸಿದ್ಧರಾಮ ಹೊನಕಲ್ಲ ಚಂದ್ರಶೇಖರ ಆಲೂರರಂತೆ ಆಪ್ತ, ಬೆಚ್ಚಗಿನ ಭಾವದ ಪ್ರಬಂಧಗಳನ್ನು ಬರೆಯುತ್ತಿದ್ದಾರೆ. ಈ ಮೂವರು ಪ್ರಬಂಧಕಾರರು ನಮ್ಮ ಲಲಿತ ಪ್ರಬಂಧಕ್ಕೆ ಹೊಸ ತಿರುವನ್ನೇ ತಂದುಕೊಟ್ಟಿದ್ದಾರೆ. ಒಟ್ಟಿನಲ್ಲಿ ಕನ್ನಡ ಲಲಿತ ಪ್ರಬಂಧಕ್ಕೆ ಹೊಸ ಚೈತ್ರ ಬಂದಿದೆ. ನವ್ಯಯುಗದಲ್ಲಿ ಪೂರ್ತಿ ಮಾಯವಾಗಿ ಹೋಗಿದ್ದ ಲಲಿತ ಪ್ರಬಂಧ ಮತ್ತೆ ನಮ್ಮ ಹೊಸ ಲೇಖಕರ, ವಿಮರ್ಶಕರ ಲಕ್ಷ್ಯವನ್ನು ಸೆಳೆಯುತ್ತಿರುವುದು ತುಂಬ ಆಶಾದಾಯಕವಾದ ಸಂಗತಿಯಾಗಿದೆ.

●

ಕಂಪನಿ ನಾಟಕ

-ರಾಮಕೃಷ್ಣ ಮರಾಠೆ

ಕಾವ್ಯ ಕತೆ, ಕಾದಂಬರಿಗಳಂತೆ ನಾಟಕವೂ ಸ್ವತಂತ್ರ ಶುದ್ಧ ಸಾಹಿತ್ಯವೆಂದು ಪರಿಗಣಿತವಾದರೂ ಅದರ ಪರಮ ಪ್ರಯೋಜನವಿರುವುದು ರಂಗಪ್ರಯೋಗದಲ್ಲಿ. ಕಾವ್ಯ ಕಾದಂಬರಿಗಳ ರಸಾನುಭವವು ಓದಿ ಕೇಳಿ ಆಸ್ವಾದಿಸುವ ಕೆಲವೇ ಜನರಿಗೆ ಸೀಮಿತವಾದರೆ, ನಾಟಕವು ಪ್ರದರ್ಶನದ ಮೂಲಕ ಜನಸಾಮಾನ್ಯರನ್ನೆಲ್ಲ ಸ್ಪಂದಿಸುವ ವಿಶೇಷಗುಣ ಪಡೆದಿದೆ. ನಟರ ಭಾವಾಭಿನಯ, ಬಣ್ಣ, ಬೆಳಕು, ರಂಗತಂತ್ರಗಳನ್ನೂ ನೋಡಿ ಪ್ರೇಕ್ಷಕರೆಲ್ಲ ರಸಾನುಭವ ಪಡೆಯುವ ಸೌಲಭ್ಯವಿರುವುದರಿಂದಲೇ ನಾಟಕ ಉಳಿದ ಸಾಹಿತ್ಯ ಪ್ರಕಾರಗಳಿಂದ ಭಿನ್ನವಾಗಿ ನಿಲ್ಲುತ್ತದೆ, ಹೆಚ್ಚು ಮಹತ್ವಪೂರ್ಣವೂ ಎನಿಸುತ್ತದೆ. ರಂಗಭೂಮಿ ಸಾಹಿತ್ಯಾದಿ ಹಲವು ಲಲಿತ ಕಲೆಗಳನ್ನು ಮೇಳವಿಸಿಕೊಂಡು ಬೆಳೆಯುವ ಸಂಕೀರ್ಣ ಕಲೆಯಾದರೂ ಅಭಿನಯದ ಮೂಲಕ ತನ್ನ ಒಟ್ಟು ಧೋರಣೆಯನ್ನು ಪ್ರಕಟಿಸುವಂಥದ್ದು. ಆ ಕಾರಣದಿಂದ ಚಿತ್ರ, ಸಂಗೀತ, ಸಂಭಾಷಣೆ ಮುಂತಾದವು ರಂಗಕ್ರಿಯೆಯಲ್ಲಿ ಸ್ವತಂತ್ರವಾಗಿ ವರ್ತಿಸದೆ ಅಭಿನಯದ ಜೊತೆಗೆ ಸಹಕರಿಸಬೇಕಾದುದು ಅನಿವಾರ್ಯ. ರಂಗದ ಮೇಲಿನ ಈ ಸಾಮೂಹಿಕ ಹೊಣೆಗಾರಿಕೆಯಿಂದಾಗಿ ಸಾಹಿತ್ಯವಾದರೂ ತನ್ನ ಸ್ವತಂತ್ರ ಅಸ್ತಿತ್ವ ಕಾಯ್ದುಕೊಳ್ಳಲು ಸಾಧ್ಯವಿಲ್ಲ. ಒಂದು ನಾಟಕವು ಸಾಹಿತ್ಯಿಕವಾಗಿ ಎಷ್ಟೇ ಶ್ರೇಷ್ಠ. ಮಟ್ಟದ್ದಾದರೂ ಪ್ರದರ್ಶನ ತಂತ್ರಗಳ ಇತಿಮಿತಿಗೆ ಸಿಕ್ಕು ಬದಲಾಗುವಾಗ ಅದರ ಸಾಹಿತ್ಯ ದುರ್ಬಲಗೊಳ್ಳುವುದು (ಕೊಂಚವಾದರೂ) ಸ್ವಾಭಾವಿಕ. ಇಂಥ ಸಂದರ್ಭದಲ್ಲಿ ಆ ಕೃತಿಯ ರಂಗರೂಪವನ್ನೇ ಮುಖ್ಯವಾಗಿರಿಸಿಕೊಂಡು ವಿಮರ್ಶಿಸಬೇಕಾಗುತ್ತದೆ. ಆಶ್ಚರ್ಯವೆಂದರೆ ನಮ್ಮಲ್ಲಿ ವೃತ್ತಿರಂಗ ಭೂಮಿಗಾಗಿ (ಪ್ರದರ್ಶನಕ್ಕಾಗಿ) ರೂಪಗೊಂಡ ನಾಟಕಗಳನ್ನೆಲ್ಲ ಸಾಹಿತ್ಯಿಕ ಮಾನದಂಡದಿಂದಲೇ ತೂಗಿ ಅವುಗಳಲ್ಲಿಯ ಕೆಲ ಅಶುದ್ಧ ಅಂಶಗಳಿಗೆ ರಾಹುಗನ್ನಡಿ ಹಿಡಿದು, ನಮ್ಮ ವಿಮರ್ಶಕರು ಅವುಗಳನ್ನು ಸಾಹಿತ್ಯ ಕ್ಷೇತ್ರದಿಂದಲೇ ಬಹಿಷ್ಕರಿಸಿದ್ದು ದುರದೃಷ್ಟಕರ. ``ಯಾವುದೇ ವೃತ್ತಿರಂಗಭೂಮಿಯ ನಾಟಕಕ್ಕಂತೂ ತನ್ನ ಹಿತಾಸಕ್ತಿಗಿಂತ ತನ್ನ ರಂಗಭೂಮಿಯ ಹಿತಾಸಕ್ತಿಯೇ ಮುಖ್ಯ ಗುರಿಯಾಗಿರುತ್ತದೆ. ಹೀಗಾಗಿ ಆ ರಂಗಭೂಮಿಯ ಎಲ್ಲ ಅಂಗಗಳೊಂದಿಗೆ ಮತ್ತು ಅದರ ಒಟ್ಟು ಧೋರಣೆಗೆ ಹೊಂದಿಕೊಂಡು ದುಡಿಯುವ ಸಿದ್ಧತೆಯಲ್ಲಿಯೇ ಇಂಥ ನಾಟಕಗಳು ಹುಟ್ಟಿಕೊಳ್ಳುತ್ತವೆ. ರಂಗಭೂಮಿಯ ಒಂದು ಅಂಗವಾಗಿ ಭಿನ್ನ ಭಿನ್ನ ರುಚಿಯ, ಸಂಸ್ಕಾರದ, ಮನೋಧರ್ಮದ, ಮನಸ್ಥಿತಿಯ ಮತ್ತು ಭಿನ್ನ ಭಿನ್ನ ವಯೋಮಟ್ಟದ, ಬುದ್ಧಿಮಟ್ಟದ ಪ್ರೇಕ್ಷಕ ಸಮುದಾಯವನ್ನು ಎದುರಿಸುವ, ತೃಪ್ತಿಪಡಿಸುವ ಜವಾಬ್ದಾರಿಯನ್ನು ವೃತ್ತಿರಂಗಭೂಮಿಯ ನಾಟಕ ವಿಸ್ತರಿಸಿಕೊಳ್ಳಬೇಕಾಗುತ್ತದೆ. ಹೀಗಾಗಿ

ಸಾಹಿತ್ಯದ ಒಂದು ಪ್ರತ್ಯೇಕ ರೂಪವಾಗಿ ಕಾಣಿಸಿಕೊಳ್ಳುವ ನಾಟಕಕ್ಕಿರದ ಕಷ್ಟದ ಜವಾಬ್ದಾರಿ ಇದರದು "[೧] ನಾಟಕದ ಸಾಹಿತ್ಯರೂಪ ಮತ್ತು ರಂಗರೂಪಗಳೆರಡನ್ನೂ ಪ್ರತ್ಯೇಕವಾಗಿಟ್ಟು ನೋಡುವ, ವಿಮರ್ಶಿಸುವ ಪದ್ಧತಿ ನಮ್ಮಲ್ಲಿಲ್ಲದ ಕಾರಣ ವೃತ್ತಿರಂಗಭೂಮಿಯ ನಾಟಕಗಳಿಗೆ ನಾಟಕಕಾರರಿಗೆ ಯಾವುದೇ ನ್ಯಾಯ ದೊರೆತಿಲ್ಲವೆನ್ನಬೇಕು. ಇವೆರಡನ್ನೂ ಬೇರೆಯಾಗಿ ವಿವೇಚಿಸುವ ಬಂಗಾಲ, ಮಹಾರಾಷ್ಟ್ರಗಳಲ್ಲಿಯ ರಂಗಭೂಮಿ ಸಾಕಷ್ಟು ಬೆಳೆಯುತ್ತಿದ್ದುದನ್ನು ಗಮನಿಸಿದಾಗ ನಮ್ಮ ರಂಗಭೂಮಿಯ ಕೊರತೆ ಎದ್ದುಕಾಣುತ್ತದೆ.'' ನಾಟಕಕಾರನಿಗೆ ಮತ್ತು ನಾಟಕದ ವಿಮರ್ಶಕರಿಗೆ ಈ ಅರಿವು (ಸಾಹಿತ್ಯರೂಪ - ರಂಗ ರೂಪ) ಹೆಚ್ಚು ಅಗತ್ಯವಾಗಿದೆ. ದುರಂತ ನಾಟಕದ ತೀರ ಪ್ರಸಿದ್ಧವಾಗಿರುವ ವ್ಯಾಖ್ಯೆಯನ್ನು ಕೊಟ್ಟ ಅರಿಸ್ಟಾಟಲ್‌ನಿಗೆ ಈ ಅರಿವು ಇತ್ತು. ಭರತನಿಗೆ ಇತ್ತು. ಆದರೆ ಆಧುನಿಕ ವಿಮರ್ಶಕರಲ್ಲಿ ಮಾತ್ರ ನಾಟಕದ ಸಾಹಿತ್ಯಿಕತೆಯನ್ನು ಎತ್ತಿ ಹಿಡಿದು ಉಳಿದ ಅಂಗಗಳನ್ನು ಗೌಣವೆಂದು ತಿಳಿಯುವ ಪರಿಪಾಠ ಮೊದಲಾಗಿದೆ. ಇಂಗ್ಲೀಷನಲ್ಲಿ ಕೂಡ ಶೇಕ್ಸಪಿಯರ ವಿಮರ್ಶಕರಲ್ಲಿ ಎರಡು ಗುಂಪುಗಳಿರುವುದು ಸ್ಪಷ್ಟವಾಗಿ ಕಾಣುತ್ತದೆ. ಅವನ ಸಾಹಿತ್ಯಿಕತೆಯನ್ನು ವಿಮರ್ಶಿಸುವವರು ಒಂದು ಗುಂಪಾದರೆ, ಇನ್ನೊಂದು ಅವನ ನಾಟಕಗಳ ರಂಗಪ್ರದರ್ಶನವನ್ನು ವಿವರಿಸುವವರದು."[೨] ನಮ್ಮಲ್ಲಿಯೂ ಇಂಥ ಸಂಪ್ರದಾಯ ಬೆಳೆದುಬರಬೇಕಾಗಿದೆ. ಸಾಹಿತ್ಯಿಕವಾಗಿ ಸೃಷ್ಟಿಯಾಗುವ ನಾಟಕಕ್ಕಿಂತ ರಂಗಪ್ರಯೋಗಕ್ಕಾಗಿ ರಚನೆಯಾಗುವ ನಾಟಕವು ಉದ್ದೇಶ, ಸ್ವರೂಪ, ಪರಿಣಾಮ, ಪ್ರಯೋಜನೆಗಳಿಂದ ತುಂಬಾ ಭಿನ್ನವಾಗಿರುತ್ತದೆ. ಹೀಗಾಗಿ ಸಾಹಿತ್ಯದ ವಿಮರ್ಶೆ, ಪ್ರದರ್ಶನದ ವಿಮರ್ಶೆ ಪ್ರತ್ಯೇಕವಾಗಿ ಬಂದಷ್ಟು ರಂಗಭೂಮಿಗೆ ಅನುಕೂಲ. ವೃತ್ತಿರಂಗಭೂಮಿಯ ಪ್ರಗತಿ ಕಾಲದಲ್ಲಿ ಕೆಲ ಮಂಡಳಿಗಳು ಪ್ರದರ್ಶನಗಳ ವಿಮರ್ಶೆಗಾಗಿ ರಂಗಮಂದಿರದಲ್ಲಿ ವಿಶೇಷ ಏರ್ಪಾಡು ಮಾಡುತ್ತಿದ್ದುದು ಗಮನಾರ್ಹ. ''ಹುಬ್ಬಳ್ಳಿಯಲ್ಲಿ ಈಗಿರುವ ಮಲ್ಲಿಕಾರ್ಜುನ ಚಿತ್ರಮಂದಿರ ಮೊದಲು ರಂಗಮಂದಿರವಾಗಿತ್ತು. ನಾಟಕಗಳ ವಿಮರ್ಶೆಗಾಗಿ ರಂಗಮಂದಿರದ ಹೊರಗೋಡೆಗೆ ಒಂದು ಕರಿಹಲಗೆ ಇಟ್ಟಿರುತ್ತಿದ್ದರಂತೆ. ಪ್ರೇಕ್ಷಕರು ತಮ್ಮ ಮೆಚ್ಚುಗೆ ಮತ್ತು ಆಗಬೇಕಾದ ಮಾರ್ಪಾಡುಗಳ ಬಗೆಗೆ ಅದರ ಮೇಲೆ ನಿಸ್ಸಂಕೋಚವಾಗಿ ಬರೆಯ ಬಹುದಿತ್ತಂತೆ "[೩] ಪ್ರೇಕ್ಷಕರು ಕ್ರಮೇಣ ಶಿಸ್ತಿನ ಪರಿಮಿತಿ ಮೀರತೊಡಗಿದಾಗ ಈ ಪದ್ಧತಿಯನ್ನು ರದ್ದುಮಾಡಿದಂತೆ ತೋರುತ್ತದೆ.

ವೃತ್ತಿರಂಗಭೂಮಿಯ ನಾಟಕ ಸಾಹಿತ್ಯವನ್ನು ಇಡಿಯಾಗಿ ನೋಡಿದಾಗ ಅದು ವಿಪುಲ ಹಾಗೂ ವೈಶಿಷ್ಟ್ಯಪೂರ್ಣವಾಗಿ ತೋರುವುದಾದರೂ ಇಂದಿನ ಅದರ ನಡೆ ಮಾತ್ರ ತೀರ ನಿರಾಶಾದಾಯಕವಾಗಿದೆ. ಕನ್ನಡ ನಾಟಕ ಸಾಹಿತ್ಯದ ಅಧಿಕೃತ ಇತಿಹಾಸ ಭಾಷಾಂತರ ಮತ್ತು ರೂಪಾಂತರ ಕೃತಿಗಳಿಂದ ಪ್ರಾರಂಭವಾಗುತ್ತದೆ. ಆದರೆ ಉತ್ತರ ಕರ್ನಾಟಕ ವೃತ್ತಿರಂಗ ಸಾಹಿತ್ಯದ ಇತಿಹಾಸ ಮಾತ್ರ ಸ್ವತಂತ್ರ ರಚನೆಗಳಿಂದಲೇ ಆರಂಭವಾಗುವುದು ಗಮನಾರ್ಹ. ಹತ್ತೊಂಬತ್ತನೆಯ ಶತಮಾನದ ಮೊದಲ ಭಾಗದಲ್ಲಿ ಮರಾಠಿ ನಾಟ್ಯ ಸಂಘಗಳ ಪ್ರೇರಣೆಯಿಂದಲೇ ಉತ್ತರ ಕರ್ನಾಟಕದಲ್ಲಿ ನಾಟ್ಯ ಸಂಘಗಳು ಹುಟ್ಟಿಕೊಂಡರೂ ನಾಟಕಗಳಿಗಾಗಿ ಮಾತ್ರ ಅವರನ್ನೇ ಅವಲಂಬಿಸಬೇಕಾಗಿರಲಿಲ್ಲ "[೪] ಅದು ತನ್ನ ಮಾತೃನೆಲದ ಜನಪದ ಭಂಡಾರವನ್ನೇ ನಂಬಿ ನಿಂತಿತ್ತು. ಮೊದಲ ನಾಟಕಕಾರರಾದ ಶ್ರೀನಿವಾಸ ಕವಿಗಳು, ಶಾಂತಕವಿಗಳು ತಮ್ಮ ಮಂಡಳಿಗಳಿಗಾಗಿ ರಚಿಸಿದ ಶ್ರೀಮತಿ ಪರಿಣಯ, ಮದಲಸಾ ಪರಿಣಯ, ಕೀಚಕ ವಧೆ, ಭೌಮಾಸುರ ವಧೆ ಮತ್ತು ಉಷಾಹರಣ, ಸೀತಾರಣ್ಯ ಪ್ರವೇಶಕ, ಮೊದಲಾದವು

ಯಕ್ಷಗಾನ ಬಯಲಾಟಗಳ ಆಧುನಿಕ ರೂಪವಾಗಿದ್ದವು. ಈ ನಾಟಕಗಳ ಆರಂಭ ಸಾಮಾನ್ಯ ವಾಗಿ ಸರಸ್ವತಿ ಸ್ತೋತ್ರ, ಆಕೆಯ ಪ್ರವೇಶ, ಗಣಪತಿಯ ಸ್ತೋತ್ರ, ಆತನ ಪ್ರವೇಶ, ಇವರಿಬ್ಬರ ಆಶೀರ್ವಾದದ ನಂತರ ಬೇವುಗೊಂಚಲು ಮುಡಿದು ಬಂದ ಸವಿಗಾರನ ಹಾಸ್ಯಾಭಿನಯ, ಇಷ್ಟಕ್ಕೆ ನಾಟಕದ ಪೂರ್ವರಂಗ ಮುಗಿದು ನಾಟಕದ ಕಥೆ ಉತ್ತರರಂಗ ದೊಂದಿಗೆ ಆರಂಭವಾಗುತ್ತಿತ್ತು.

ಹೀಗೆ ಕಥಾವಸ್ತು ರಚನಾ ವಿನ್ಯಾಸದ ದೃಷ್ಟಿಯಿಂದ ಮೊದಲ ಕೃತಿಗಳು ಬಯಲಾಟ ಗಳಿಗೂ ನಾಟಕಗಳಿಗೂ ಮಧ್ಯಸ್ಥವಾದ ರೂಪಕಗಳೆನಿಸಿದ್ದವು. ಕರ್ಕಿ ಭಾಗವತರ ಆಟ ಗಳಿಂದಲೇ ತಾವು ಪ್ರೇರಣೆ ಪಡೆದು ನಾಟಕಗಳನ್ನು ರಚಿಸಿದ ಬಗ್ಗೆ ಶಾಂತಕವಿಗಳು ತಮ್ಮ `ನಾಟಕಾವಲೋಕನ' ಎಂಬ ಪದ್ಯದಲ್ಲಿ ಹೇಳಿಕೊಂಡಿರುವುದನ್ನು ನೆನೆಯಬಹುದು. ಮೊದಲ ಮೂವತ್ತು ವರುಷಗಳ ಕಾಲ ವೃತ್ತಿರಂಗಭೂಮಿಯ ಮೇಲೆ ಪೌರಾಣಿಕ ನಾಟಕಗಳೆ ಸಂಭಮಿಸಿದವು. ಈ ಅವಧಿಯಲ್ಲಿ ಗರುಡ ಸದಾಶಿವರಾಯರು, ಕಂದಗಲ್ ಹನುಮಂತ ರಾಯರು, ನಲವಡಿ ಶ್ರೀಕಂಠಶಾಸ್ತ್ರಿಗಳು, ಜಿ.ಜಿ. ಹೆಗಡೆ ಮುಂತಾದವರು ಪೌರಾಣಿಕ ವಸ್ತುವನ್ನು ವೈವಿಧ್ಯಪೂರ್ಣವಾಗಿ ಬಳಸಿ, ಪ್ರದರ್ಶನದ ಜನಪ್ರಿಯ ತಂತ್ರಗಳನ್ನು ಅಳವಡಿಸಿ ಉತ್ತಮ ಕೃತಿಗಳನ್ನು ನೀಡಿದರು. ೧೯೧೦ರ ದಶಕ ನಾಟಕ ಮಂಡಳಿಗಳು ಹೆಚ್ಚುತ್ತಿದ್ದ ಕಾಲ.ಪ್ರೇಕ್ಷಕರೆಲ್ಲ ಹೊಸ ನಾಟಕಗಳಿಗಾಗಿ ಎದುರು ನೋಡುತ್ತಿದ್ದರು. ವಿಶೇಷವೆಂದರೆ ಅವರಿನ್ನೂ ಮರಾಠಿ ನಾಟಕಗಳ ಮೋಹದಿಂದ ಬಿಡುಗಡೆಯಾಗಿರಲಿಲ್ಲ. ಇದನ್ನು ಗಮನಿಸಿದ ವಾಮನರಾವ ಮಾಸ್ತರರು, ಅಡಬಡಿ ಸುಬ್ಬಣ್ಣಾಚಾರ್ಯ ಮೊದಲಾದವರು ಜನಪ್ರಿಯ ಮರಾಠಿ ರಂಗಕೃತಿಗಳನ್ನು ಕನ್ನಡಕ್ಕೆ ಸುಂದರವಾಗಿ ಅಳವಡಿಸಿ ಇತರರಿಗೆ ಸ್ಫೂರ್ತಿಯಾಗಿ ನಿಂತರು.

ಐತಿಹಾಸಿಕ ನಾಟಕಗಳು ತಡವಾಗಿಯೆ ಕನ್ನಡರಂಗ ಪ್ರವೇಶಿಸಿದವೆನ್ನಬೇಕು. ಸುಮಾರು ೧೯೧೦ರ ದಶಕದಲ್ಲಿಯೇ ಶರಣರ ಸಂತರ ಕುರಿತು ನಾಟಕಗಳು ಅಲ್ಲಲ್ಲಿ ಕಾಣಿಸಿಕೊಂಡರೂ ಅವೆಲ್ಲ ಐತಿಹಾಸಿಕತೆಗಿಂತ ಪೌರಾಣಿಕ ಆವರಣದಲ್ಲಿಯೆ ಪ್ರದರ್ಶನಗೊಳ್ಳುತ್ತಿದ್ದುದರಿಂದ ಪ್ರೇಕ್ಷಕರಿಂದ ಅವು ಪೌರಾಣಿಕ ನಾಟಕಗಳೆಂದೇ ಕರೆಯಿಸಿಕೊಳ್ಳುತ್ತಿದ್ದವು. ಆಧಾರಗಳ ಕೊರತೆಯಿಂದ ಕಲ್ಪನಾ ಅಂಶವಿದ್ದ ಐತಿಹಾಸಿಕ ಪ್ರಜ್ಞೆಯ ನಾಟಕಗಳು ರಂಗಪ್ರವೇಶಿಸಿದ್ದು ೧೯೨೦ರ ನಂತರ. ಕಿತ್ತೂರ ಚೆನ್ನಮ್ಮಾ, ಕಿತ್ತೂರ ರುದ್ರಮ್ಮಾ, ಟಿಪ್ಪುಸುಲ್ತಾನ, ನರಗುಂದ ಬಂಡಾಯ, ಸಂಗೊಳ್ಳಿರಾಯಣ್ಣ, ಎಚ್ಚಮ್ಮನಾಯಕ, ಸಿಂಧೂರ ಲಕ್ಷ್ಮಣ ಮೊದಲಾದವು ಈ ಸಾಲಿಗೆ ಸೇರುವ ನಾಟಕಗಳು. ಇವು ಅಂದಿನ ರಾಷ್ಟ್ರೀಯ ಚಳುವಳಿಗೆ ಸ್ಫೂರ್ತಿ ನೀಡುವುದರ ಜೊತೆಗೆ, ಸಂಭಾಷಣೆ ಸನ್ನಿವೇಶ ನಿರ್ಮಾಣದಲ್ಲಿ ಅಳವಡಿಸಿಕೊಂಡ ನೈಜತೆಯಿಂದ ತುಂಬ ಜನಪ್ರಿಯವೆನಿಸಿದವು. ವೃತ್ತಿರಂಗಭೂಮಿ ಬೆಳೆಯುತ್ತ ನಡೆದಂತೆ ಹಾಡು, ಹಾಸ್ಯ ಅದ್ಭುತಗಳ ಅತಿರೇಕ ಪೌರಾಣಿಕ ನಾಟಕಗಳ ಜಡತ್ವಕ್ಕೆ ಕಾರಣವಾದರೆ, ಬ್ರಿಟಿಷ್ ಸರಕಾರ ಒಡ್ಡಿದ ನಿರ್ಬಂಧದಿಂದ ಐತಿಹಾಸಿಕ ನಾಟಕಗಳ ಪ್ರದರ್ಶನ ಕುಂಠಿತಗೊಂಡಿತು. ಇದರಿಂದ ನಾಟಕ ರಚನೆ ಬೇರೊಂದು ನೆಲೆ ಕಂಡುಕೊಳ್ಳಬೇಕಾಯಿತು. ಇದಕ್ಕೆ ಪೂರಕವಾಗಿ ಕಾಲದ ಒಲವು, ಪ್ರೇಕ್ಷಕರ ಅಭಿರುಚಿಗನುಗುಣವಾಗಿ ಸಾಮಾಜಿಕ ವಸ್ತುವಿಗೆ ಹೆಚ್ಚು ಮಾನ್ಯತೆ ದೊರೆಯುವಂತಾಯಿತು. ೧೯೨೦ -೪೦ ರ ದಶಕದಲ್ಲಂತೂ ರಂಗದ ಮೇಲೆ ಸಾಮಾಜಿಕ ನಾಟಕಗಳ ಮಹಾಪೂರವೇ ಹರಿಯಿತು.

ಪ್ರಾರಂಭಿಕ ಹಂತದಲ್ಲಿ ಪ್ರತಿಭಾವಂತ ಸಾಹಿತಿಗಳು, ಸಾಹಿತಿಗಳ ಸಂಪರ್ಕದಲ್ಲಿದ್ದವರು ಮಂಡಳಿಗಳಿಗಾಗಿ ನಾಟಕಗಳನ್ನು ಬರೆದರು. ಕ್ರಮೇಣ ವೃತ್ತಿರಂಗಭೂಮಿ ಸುಶಿಕ್ಷಿತರಿಂದ ದೂರಸರಿದಂತೆ ಸಾಹಿತ್ಯಪ್ರಜ್ಞೆಯುಳ್ಳ ನಾಟಕಕಾರರು ಇದರಿಂದ ದೂರ ಉಳಿದರು. ೧೯೬೦ರಿಂದ ನಾಟಕರಚನೆ ಯಾಂತ್ರಿಕ ಕ್ರಿಯೆಯಾಯಿತು. ಜನಪ್ರಿಯವಾದ ಒಂದು ನಾಟಕವನ್ನು ಮುಂದಿಟ್ಟುಕೊಂಡು ಇತರರು ಅದೇ ಸಿದ್ಧ ಚೌಕಟ್ಟಿನಲ್ಲಿ ಸರಕುತುಂಬುವ ಕೆಲಸಕ್ಕೆ ತೊಡಗಿದರು. ವೃತ್ತಿರಂಗಭೂಮಿಯ ನಾಟಕಗಳು ಸೃಜನಶೀಲತೆಯ ಸಮಸ್ಯೆಯನ್ನೆದುರಿಸುವ ಪ್ರಸಂಗ ಬಂದುದಕ್ಕೆ ಈ ಕೆಳಗಿನ ಅಂಶಗಳು ಕಾರಣವಾದವು :

೧. ನವ್ಯ ನಾಟಕಕಾರರ ದೋಷಾರೋಪಣೆಯ ಪರಿಣಾಮವಾಗಿ ಸಾಹಿತ್ಯ ಪ್ರಜ್ಞೆಯ ಲೇಖಕರು ವೃತ್ತಿರಂಗಭೂಮಿಯ ಬಗ್ಗೆ ಉದಾಸೀನ ತಾಳಿದರು.

೨. ಹೆಚ್ಚು ಹೆಚ್ಚು ಪ್ರೇಕ್ಷಕರನ್ನು ಆಕರ್ಷಿಸಿ ರಂಜಿಸುವುದರ ಮೂಲಕ ಮಾಲಿಕರನ್ನು ತೃಪ್ತಿಪಡಿಸುವ ಹೊಣೆಗಾರಿಕೆಯಿಂದಾಗಿ ವೃತ್ತಿನಾಟಕಕಾರರು ಸಾಹಿತ್ಯದ ಬಗೆಗೆ ಅಷ್ಟೊಂದು ಲಕ್ಷ್ಯಕೊಡದೆ ಹೋದುದು.

೩. ಸನ್ನಿವೇಶ ರಚನೆ, ರಂಗತಂತ್ರಗಳ ಜನಪ್ರಿಯ ಚೌಕಟ್ಟನ್ನೇ ಸ್ವೀಕರಿಸಿ ನಡೆದುದು; ಪ್ರಾಸಬದ್ಧವಾಗಿ ಸಂಭಾಷಣೆ ಜೋಡಿಸುವ ಪದ್ಧತಿಯನ್ನೇ ಎಲ್ಲರೂ ಮುಂದುವರಿಸಿದುದು.

೪. ಒಂದು ಮಂಡಳಿಗಾಗಿ ನಾಟಕ ಬರೆಯುವುದೆಂದರೆ ಅಲ್ಲಿರುವ ನಟ - ನಟಿಯರು ರಂಗಪರಿಕರಗಳನ್ನು ಗಮನದಲ್ಲಿಟ್ಟುಕೊಂಡು ಅವರ ವ್ಯಕ್ತಿತ್ವ, ಅಭಿನಯ ಸಾಮರ್ಥ್ಯಕ್ಕೆ ಹೊಂದುವ ಕೃತಿಗಳನ್ನು ರಚಿಸುವುದೆಂದು ಭಾವಿಸಿದುದು.

೫. ಜನಪ್ರಿಯವಾದ ನಾಟಕವನ್ನು ಬೇರೊಂದು ಮಂಡಳಿಯವರು ಸ್ವಲ್ಪವೂ ಬದಲಾವಣೆಯಿಲ್ಲದೆ, ಅಷ್ಟೇ ಏಕೆ ನಾಟಕಕಾರರನ್ನು ಸಂಪರ್ಕಿಸದೆ ಪ್ರದರ್ಶಿಸ ತೊಡಗಿದುದು.

೬. ಹೆಸರು ಬದಲಿಸಿದ ಮಾತ್ರಕ್ಕೆ ಒಂದು ನಾಟಕ ಹೊಸದೆಂದು ಹತ್ತಾರು ಹೆಸರುಗಳಿಂದ ಪ್ರದರ್ಶನಗೊಳ್ಳುವ ಪರಿಪಾಠ ಆರಂಭವಾದುದರಿಂದ ಹೊಸ ನಾಟಕ ರಚನೆಗೆ ಪ್ರೋತ್ಸಾಹ ಕಡಿಮೆಯಾಯಿತು.

೭. ಹೊಸ ನಾಟಕ ಪ್ರದರ್ಶಿಸಬೇಕೆಂದರೆ ಅದಕ್ಕೆ ತಕ್ಕ ರಂಗಸಜ್ಜಿಕೆ, ವೇಷಭೂಷಣಗಳನ್ನು ಹೊಸದಾಗಿ ನಿರ್ಮಿಸಬೇಕು. ನಾಟಕಕಾರನಿಗೆ ಸಂಭಾವನೆ ಬೇರೆ ಕೊಡಬೇಕು. ಇದೆಲ್ಲ ಹೆಚ್ಚು ವೆಚ್ಚದ ಕೆಲಸವೆಂದು ಮಾಲಿಕರು ಮೊದಲಿದ್ದ ನಾಟಕಗಳನ್ನೇ ಅಲ್ಪಸ್ವಲ್ಪ ವ್ಯತ್ಯಾಸಗಳಿಂದ ಆಡಿಸುತ್ತ ನಡೆದರು.

ಇನ್ನು ವೃತ್ತಿರಂಗಭೂಮಿಯಲ್ಲಿ ಪ್ರದರ್ಶನಗೊಳ್ಳುತ್ತ ಬಂದ ಪ್ರಮುಖ ನಾಟಕಗಳನ್ನು ಪೌರಾಣಿಕ ನಾಟಕಗಳು, ಐತಿಹಾಸಿಕ ನಾಟಕಗಳು ಮತ್ತು ಸಾಮಾಜಿಕ ನಾಟಕಗಳು ಎಂಬ ವಿಭಜನೆಯಡಿಯಲ್ಲಿ ಸಮೀಕ್ಷಿಸಬಹುದು.

ಪೌರಾಣಿಕ ನಾಟಕಗಳು :

ರಂಗಭೂಮಿಯ ಇತಿಹಾಸದುದ್ದಕ್ಕೂ ಪೌರಾಣಿಕ ನಾಟಕಗಳು ಒಂದಿಲ್ಲೊಂದು ವಿಧದಲ್ಲಿ ಗಾಢ ಸಂಬಂಧ ಇಟ್ಟುಕೊಂಡು ಬಂದಿರುವುದನ್ನು ಕಾಣುತ್ತೇವೆ. ಇದಕ್ಕೆ ಜನ ಸಾಮಾನ್ಯರಲ್ಲಿಯ ಧಾರ್ಮಿಕ ಭಾವನೆ, ಭಕ್ತಿ, ಅತಿಮಾನುಷ ಘಟನೆಗಳ ಬಗೆಗಿರುವ ಅವರ ಕುತೂಹಲವೆ ಕಾರಣವೆನ್ನಬೇಕು. ಧಾರ್ಮಿಕ ಆರಾಧನೆಯ ಅಂಗವಾಗಿಯೆ ರಂಗಭೂಮಿ ಅಸ್ತಿತ್ವಕ್ಕೆ ಬಂದಿತೆಂಬುದನ್ನು ಗಮನಿಸಿದರೆ ಪುರಾಣ ಕೃತಿಗಳಿಗೂ ರಂಗಭೂಮಿಗೂ ಇರುವ ನಿಕಟ ಸಂಬಂಧ ಸ್ಪಷ್ಟವಾಗುತ್ತದೆ. ವೃತ್ತಿರಂಗಭೂಮಿಯ ಪ್ರಾರಂಭ ಪ್ರಗತಿಯ ಕಾಲವಂತೂ ಪೌರಾಣಿಕ ನಾಟಕಗಳ ಸುಗ್ಗಿಯ ಕಾಲವೆಂದು ಪರಿಗಣಿಸಲಾಗಿದೆ. ಪ್ರಾರಂಭದಲ್ಲಿ ನಮ್ಮ ನಾಟಕಕಾರರಿಗೆ ಮನರಂಜನೆ ಹಾಗೂ ನಿರಾಯಾಸದ ಬರವಣಿಗೆಗಾಗಿ ಪುರಾಣಪ್ರಪಂಚ ತುಂಬಾ ನೆರವಿಗೆ ಬಂದಿತೆನ್ನಬೇಕು. ಮಹಾಭಾರತ, ರಾಮಾಯಣ, ವಿಷ್ಣುಪುರಾಣ, ಶಿವಪುರಾಣ ಮುಂತಾದ ಇತಿಹಾಸ ಪುರಾಣ ಕಾವ್ಯಗಳಿಂದಾಯ್ದ ಘಟನೆಗಳನ್ನಾಧರಿಸಿ ಅಸಂಖ್ಯಾತ ನಾಟಕಗಳು ರಚನೆಗೊಂಡವು. ವೃತ್ತಿರಂಗಭೂಮಿಯ ನಾಟಕಕಾರರು ಪುರಾಣ ವಸ್ತುವನ್ನು ಜನಪದ ರಂಗಭೂಮಿಗಿಂತ ಬೇರೆಯಾಗಿ ಸ್ವೀಕರಿಸಿದರು. ನಾಟಕೀಯ ಅಂಶಗಳಿರುವ ಪುರಾಣ ಕಥೆಗಳನ್ನೆತ್ತಿಕೊಂಡು ಸನ್ನಿವೇಶಗಳಲ್ಲಿ ವಿಭಜಿಸಿ ವಸ್ತುವನ್ನು ಹೆಚ್ಚು ಖಚಿತವಾಗಿ ನಿರೂಪಿಸುವ ಪ್ರಯತ್ನಕ್ಕಿಳಿದರು. ನಟರ ಪ್ರಾಧಾನ್ಯತೆಯಿಂದ ಪಾತ್ರರಚನೆಗೆ ಮತ್ತು ಜನರ ಆಕರ್ಷಣೆಗಾಗಿ ದೃಶ್ಯಗಳ ವೈಭವೀಕರಣಕ್ಕೆ ಹೆಚ್ಚು ಮಹತ್ವ ನೀಡಿದರು. `ದುಷ್ಟ ಶಿಕ್ಷೆ, ಶಿಷ್ಟ ರಕ್ಷೆ ' ಈ ನಾಟಕಗಳ ಸರಳ ಸೂತ್ರವಾಯಿತು. ಭಕ್ತಿ ಮತ್ತು ನೀತಿಯ ಬದುಕನ್ನು ಪ್ರತಿಪಾದಿಸುವುದರ ಜೊತೆಗೆ ಸುಮಧುರ ಸಂಗೀತ, ರಮ್ಯಾದ್ಭುತ ಸನ್ನಿವೇಶಗಳ ನಿರ್ಮಾಣಕ್ಕೆ ಅವಕಾಶವನ್ನೀಯುವ ಪುರಾಣ ಕಥೆಗಳು ವೃತ್ತಿರಂಗಭೂಮಿಯ ಬೆಳವಣಿಗೆಯಲ್ಲಿ ಮುಖ್ಯ ಪಾತ್ರ ವಹಿಸಿದವು.

ಮೊದಲ ನಾಟಕಕಾರರಲ್ಲಿ ಅಗ್ರಗಣ್ಯರಾದ ಶಾಂತಕವಿಗಳು ೨೫ ಕ್ಕೂ ಹೆಚ್ಚು ಪೌರಾಣಿಕ ನಾಟಕಗಳನ್ನು ರಚಿಸಿದ್ದಾರೆಂದು ತಿಳಿಯುತ್ತದೆ. ಉಷಾಹರಣ, ವತ್ಸಲಾಹರಣ, ಕೀಚಕವಧಾ, ಸಿರಿಯಾಳ ಸತ್ವಪರೀಕ್ಷಾ, ಚಂದ್ರಾವಳಿ, ಸೀತಾರಣ್ಯ ಪ್ರದೇಶಕ, ಸುಂದೋಪ ಸುಂದ, ಸೀತಾ ಸ್ವಯಂವರ ಇವೆಲ್ಲ ಪ್ರದರ್ಶನಕ್ಕಾಗಿಯೆ ರಚನೆಯಾದ ನಾಟಕಗಳು. ಕೃತಪುರ ಮಂಡಳಿ ನರಗುಂದ ಮಂಡಳಿ, ಶಿರಹಟ್ಟಿ, ಗುಳೇದಗುಡ್ಡ, ರಾಣೇಬೆನ್ನೂರ ನಾಟಕ ಮಂಡಳಿಗಳಿಂದ ಈ ಬಹುತೇಕ ನಾಟಕಗಳು ಪ್ರದರ್ಶನ ಕಂಡಿವೆ. ಗಿರಿಜಾ ಕಲ್ಯಾಣ, ವತ್ಸಲಾಹರಣ, ಕೀಚಕ ವಧೆ, ಮೊದಲಾದ ನಾಟಕಗಳಲ್ಲಿ ರಚನಾ ಕೌಶಲ್ಯ ಅಷ್ಟಾಗಿ ಕಂಡುಬರುವುದಿಲ್ಲ. ಶಾಂತಕವಿಗಳದು ಪ್ರಾರಂಭಿಕ ಹಾಗೂ ಪ್ರಾಯೋಗಿಕ ಹಂತವಾಗಿದ್ದರಿಂದ ಅವರ ರಚನೆಗಳಲ್ಲಿ ಶಿಥಿಲತೆ ಎದ್ದುತೋರುವುದು ಸ್ವಾಭಾವಿಕ. ಆದರೂ ಅವರ ಕೃತಿಗಳು ನಿರಾಭರಣವಾದ ಸುಂದರ ಶೈಲಿ, ಸ್ವಾರಸ್ಯಪೂರ್ಣ ಮತ್ತು ಹಿತಮಿತವಾದ ಸಂಭಾಷಣೆಯಿಂದ ಅಂದು ಜನಮನ ಗೆದ್ದುದು ಮರೆಯುವಂತಿಲ್ಲ.

`ಲಲಿತ ಭಾಷಣವಿಹುದು ತಿಳಿ ಗಾನವು ಇಹುದು
ಬೆಳೆದ ಭಕುತರ ಮಹಿಮೆಯಿದಿಹುದು ಹರಿಹರಗಾಢ ಲೀಲಾಮಾಯೆಯ ;
ಭಳಿರೆ ಇಹಪರವೆಮಗೆ ಸಾಧಿಸುವದೊಂದಿರುಳ್ '

ಎಂದು ಜನರು ಸಂತೋಷದಿಂದ ಕುಣಿದಾಡಿದ್ದನ್ನು ಹಾಗೂ `ಹರುಷದ ಉದ್ಗಾರದಿಂ, ಕನ್ನಡದೊಳಿಹ ಸವಿಯನು ಅರಿಯದಲೆ ಅದನ್ನು ಪಳಿದ ದೋಷಿಗಳು ತಾವೆಂದು, ಜನರು ತಮ್ಮ ನಿರ್ಲಕ್ಷ್ಯದ ಬಗ್ಗೆ ಪಶ್ಚಾತ್ತಾಪ ಪಟ್ಟದ್ದನ್ನು ಶಾಂತಕವಿಗಳು ತಮ್ಮ ಪದ್ಯದಲ್ಲಿ ಹೇಳಿ ಕೊಂಡಿದ್ದು ಅವರ ನಾಟಕಗಳ ಜನಪ್ರಿಯತೆಗೆ ಸಾಕ್ಷಿಯಾಗಿದೆ.

ಶಾಂತಕವಿಗಳ ರಚನಾ ಕೌಶಲ್ಯ, ಔಚಿತ್ಯ ಅನೌಚಿತ್ಯಗಳ ಬಗೆಗೆ ತ. ಸು. ಶಾಮರಾಯರು ಹೀಗೆ ಬರೆದಿದ್ದಾರೆ. ``ಶ್ರೀಮಾನ್ ಶಾಂತಕವಿಗಳು ಬರೆದಿರುವ `ಚಂದ್ರಾವಳಿ ಚರಿತ್ರೆ' ಭಾಗವತದಿಂದ ಎತ್ತಿಕೊಂಡುದು. ಪುಷ್ಕಹೃದಯ, ರಮ್ಯಭಾಷಣದೊಂದಿಗೆ ಶ್ರೀಕೃಷ್ಣನು ಕಾಳಿಂದಿಗೆ ಬಂದು ಹೆಣ್ಣುಗಳಿಗಾಗಿ ಹೊಂಚುಹಾಕುತ್ತಾನೆ. ಅಲ್ಲಿಗೆ ಚಂದ್ರಾವಳಿ, ನಕ್ಷತ್ರ ಮಾಲಿಕಾ, ಕೈರವೆಯರೊಡನೆ ವೈಯ್ಯಾರದಿಂದ ಬರುತ್ತಾಳೆ. `ವನದಲ್ಲಿದ್ದ ದುಂಬಿಗಳನ್ನು ನಕ್ಷತ್ರಮಾಲಿಕೆ ವಿರಹಿಗಳನ್ನು. ಎಳೆ ಎಳೆದು ತರಲಿಕ್ಕೆ ವಾರಂಟು ಕೊಟ್ಟು ಮಾರ ಮ್ಯಾಜಿ ಸ್ಟ್ರೇಟನು ಕಳಿಸಿದ ಕರಿ ಅಂಗಿಯವರು ಹಿಂಡೋ' ಎಂಬ ವರ್ಣನೆ ನಾಟಕಕಾರರ ಕಲ್ಪನಾಶಕ್ತಿಗೆ ಪ್ರಶ್ನಾರ್ಥಕ ಚಿಹ್ನೆಯನ್ನು ತೊಡಿಸುತ್ತದೆ. ಆದರೆ ಉತ್ತರ ರಾಮಾಯಣದಿಂದ ಎತ್ತಿಕೊಂಡಿರುವ `ಸೀತಾರಣ್ಯ ಪ್ರವೇಶ' ಇಂತಹ ಅಭಾಸಗಳೇನು ಇಲ್ಲದ ನಿರ್ದುಷ್ಟವಾದ ನಾಟಕ. ಗರ್ಭಿಣಿಯಾಗಿದ್ದ ಸೀತೆಯ ಬಯಕೆ ಮತ್ತು ಸುಂದೋಪಸುಂದ ನಾಟಕಗಳೂ ಸಾಹಿತ್ಯ ದೃಷ್ಟಿಯಿಂದ ಅಷ್ಟೇನೂ ಸುಂದರ ಕೃತಿಗಳಲ್ಲದಿದ್ದರೂ ರಂಗಸ್ಥಳದಲ್ಲಿ ಶೋಭಿಸಬಲ್ಲವು. ಜನರ ದಿನಬಳಕೆಯ ಭಾಷೆಯಲ್ಲಿ ಸರಳವಾಗಿ ಬರೆದ `ಸೀತಾರಣ್ಯ ಪ್ರವೇಶ, ಅಥವಾ ಸೀತಾ ವನವಾಸವು ಅವರ ನಾಟಕ ಕಲಾಶಕ್ತಿಯ ಪರಾಕಾಷ್ಠತೆಗೆ ಒರೆಗಲ್ಲು.''[೫]

ಶಾಂತಕವಿಗಳ ನಂತರ ಮರಾಠಿ ನಾಟಕಗಳ ಅನುವಾದ ಕಾರ್ಯ ತೀವ್ರಗೊಂಡಿತು. ಶಾಂತ ಕವಿಗಳ ಜಾಗೃತಿಯಿಂದ ಜನರಲ್ಲಿ ಕನ್ನಡ ನಾಟಕಗಳ ಬಗ್ಗೆ ಒಲವು ಮೂಡಿತ್ತಾದರೂ ಮರಾಠಿ ನಾಟಕಗಳ ಬಗೆಗಿನ ಮೋಹ ಕಡಿಮೆಯಾಗಿರಲಿಲ್ಲ. ಇದನ್ನು ಗಮನಿಸಿದ ವಾಮನರಾವ ಮಾಸ್ತರರು ಮರಾಠಿ ಕೃತಿಗಳನ್ನು ಕನ್ನಡಕ್ಕೆ ರೂಪಾಂತರಿಸಿದರು. ಪಾರ್ವತೀ ಸತ್ವ ಪರೀಕ್ಷಾ, ಕೃಷ್ಣಾರ್ಜುನರ ಯುದ್ಧ, ಭಕ್ತ ಪ್ರಹ್ಲಾದ, ದ್ರೌಪದಿ ವಸ್ತ್ರಾಪಹರಣ, ವೀರ ಅಭಿಮನ್ಯು, ಇವರಿಂದ ರೂಪಾಂತರಗೊಂಡ ಪೌರಾಣಿಕ ನಾಟಕಗಳು. ಮರಾಠಿ ಭಾಷೆ ಚೆನ್ನಾಗಿ ಬರುತ್ತಿದ್ದ ವಾಮನರಾಯರು ನಾಟಕದ ಶಿಲ್ಪ ನಿರೂಪಣ ತಂತ್ರವನ್ನು ಯಥಾರೀತಿ ಸ್ವೀಕರಿಸಿ, ಅಲ್ಲಿಯ ಭಾಷೆಗೆ ತಕ್ಕಂತೆ ಸೊಗಸಾದ ಕನ್ನಡವನ್ನೂ ಅಳವಡಿಸಿದರು. ಲಲಿತಮಯ ರಂಗಗೀತೆಗಳ ರಚನೆಯಿಂದಲೂ ಈ ನಾಟಕಗಳು ಭಾರೀ ಯಶಸ್ಸನ್ನು ಕಂಡವು.

ನಾಟ್ಯ ಸಂಘಗಳ ಮಾಲಿಕರ ಬಿನ್ನಹದ ಮೇರೆಗೆ ಶ್ರೀನಿವಾಸ ನರಸಿಂಹ ಹುಜರಾತ, ಶ್ರೀನಿವಾಸ ಶ್ಯಾಮಜಿ ಬಾಲೆಹೊಸೂರ, ಅಡಬಡ್ಡಿ ಸುಬ್ಬಣ್ಣಾಚಾರ್, ಹುಬ್ಬಳ್ಳಿಯ ಭೀಮಾಚಾರ್ಯ ಮಾಸ್ತರ, ಜಿ. ಜಿ. ಹೆಗಡೆ, ಮಧ್ವರಾಜ್ ದೇಶಪಾಂಡೆ ಮುಂತಾದವರು ಕೆಲವು ಮರಾಠಿ ಕೃತಿಗಳನ್ನು ರೂಪಾಂತರಿಸಿದರು. ಇದಕ್ಕೂ ಮೊದಲು ಮೈಸೂರ ಆಸ್ಥಾನ ವಿದ್ವಾಂಸ ತಿರುಮಲೆ ವೆಂಕಟಾಚಾರ್ಯರು ಬರೆದ ಅನಸೂಯಾ, ಪ್ರಹ್ಲಾದ, ಲಂಕಾದಹನ, ಶ್ರೀಕೃಷ್ಣಲೀಲಾ ಮುಂತಾದ ಕೃತಿಗಳು ಉತ್ತರ ಕರ್ನಾಟಕದ ಮಂಡಳಿಗಳಿಗೆ ಲಭ್ಯವಾದವು. ಇದರಿಂದ ಅನುವಾದದ ಜೊತೆಗೆ ಸ್ವತಂತ್ರವಾಗಿಯೂ ಪುರಾಣ ವಸ್ತುವನ್ನು ಬಳಸಿ ಹೊಸ ಹೊಸ ನಾಟಕಗಳ ರಚನಾಕಾರ್ಯ ಮುಂದುವರಿಯಿತು.

ಮೈಸೂರು ಭಾಗದ ವೃತ್ತಿರಂಗಭೂಮಿಗಾಗಿ ಪೌರಾಣಿಕ ನಾಟಕಗಳನ್ನು ರಚಿಸಿದವರಲ್ಲಿ ಬೆಳ್ಳಾವೆ ನರಹರಿಶಾಸ್ತ್ರಿ, ಪ್ರಮುಖ ಹೆಸರು. ರಂಗಸಾಹಿತ್ಯ ಮತ್ತು ಸಂಗೀತದ ಅಭ್ಯಾಸದಿಂದಾಗಿ ಶಾಸ್ತ್ರಿಗಳ ನಾಟಕಗಳು ಪ್ರದರ್ಶನ ಯೋಗ್ಯವೆನಿಸಿದ್ದವು. ಗುಬ್ಬಿ ಕಂಪನಿಗಾಗಿಯೆ ನಲವತ್ತು ಕೃತಿಗಳನ್ನು ರಚಿಸಿದ್ದಾರೆ. ಒಟ್ಟು ಅವರ ನಾಟಕಗಳ ಸಂಖ್ಯೆ ಐವತ್ತೊಂದು, ಅವರ ನಾಟಕಗಳ ರಂಗಪ್ರಜ್ಞೆ, ಸಂಗೀತ ಸಂಬಂಧ, ಪಾತ್ರ ರಚನೆಯ ಕೌಶಲ, ಸಂಭಾಷಣೆಗಳ ರಮ್ಯತೆಯಿಂದ ವೃತ್ತಿರಂಗಭೂಮಿಗೆ ಅಪರೂಪದ ಕೊಡುಗೆಗಳಾದವು. ಕೃಷ್ಣಗಾರುಡಿ, ಕೃಷ್ಣಪಾರಿಜಾತ, ಭಾಮಾ ಪರಿಣಯ, ರುಕ್ಮಿಣಿ ಸ್ವಯಂವರ ನಾಟಕಗಳು ಪ್ರೇಕ್ಷಕರಿಂದ ಅಭೂತಪೂರ್ವ ಸ್ವಾಗತವನ್ನು ಪಡೆದವು. ``ಶೃಂಗಾರ, ಹಾಸ್ಯಗಳ ನೆರವಿನಿಂದ ತಮ್ಮ ನೈತಿಕ ಗುರಿಯನ್ನು ಮುಟ್ಟುತ್ತಿದ್ದ ಅವರ ನಾಟಕಗಳು ಆಧುನಿಕರಿಗೆ ರಂಜಿಸದೇ ಹೋಗಬಹುದು. ಆದರೆ ನೂರಕ್ಕೆ ತೊಂಬತ್ತೊಂಭತ್ತು ಭಾಗ ಅನಕ್ಷರಸ್ಥರಿದ್ದ ಕನ್ನಡ ನಾಡಿನ ಸಾಂಸ್ಕೃತಿಕ ಪರಿಸರದಲ್ಲಿ ಇಂತಹ ನಾಟಕಗಳ ಮಹತ್ವವನ್ನು ಗುರುತಿಸಬೇಕಾಗುತ್ತದೆ. ದಾಮಾಜಿ ಪಂತ , ಮಹಾತ್ಮಾ ಕಬೀರ ದಾಸ, ಮಹಾತ್ಮಾ ಬಸವೇಶ್ವರ, ಸಾಧು ತುಕುರಾಮ, ಪುರಂದರ ದಾಸ ಮುಂತಾದ ಸಂತರು ಮತ್ತು ಸಮಾಜ ಸುಧಾರಕರ ಜೀವನವನ್ನು ಚಿತ್ರಿಸುವ ಅವರ ನಾಟಕಗಳಲ್ಲಿ ಪ್ರತಿಪಾದಿತವಾಗಿರುವ ಸಾಮಾಜಿಕ ಮೌಲ್ಯಗಳು ಉದಾರವಾದ ಭಕ್ತಿ ಪರಂಪರೆಯ ನಂಬಿಕೆಗಳು. `ಬಸವೇಶ್ವರ ನಾಟಕದಲ್ಲಿ ಮೇಲಿಂದ ಮೇಲೆ ಪವಾಡಗಳ ಮೂಲಕ ಕಥಾ ನಾಯಕನ ಮಹತ್ವವನ್ನು ಸ್ಥಾಪಿಸಲು ಪ್ರಯತ್ನಿಸುವ ಬೆಳ್ಳಾವೆಯವರ ನಾಟಕೀಯ ತಂತ್ರ. ಸೂಕ್ಷ್ಮ ಹಾಗೂ ಸಂಕೀರ್ಣ ಮಾದರಿಯದಲ್ಲವೆಂಬುದೇನೂ ನಿಜ, ವಾಚ್ಯವಾದ ನೆಲೆಯಲ್ಲಿ ಬಸವಣ್ಣನವರ ವಚನಗಳನ್ನೂ ನಾಟಕಕ್ಕೆ ಅವರು ಅಳವಡಿಸಿಕೊಂಡಿದ್ದಾರೆ. ಆದರೂ ಅವಿದ್ಯಾವಂತ ಜನಸಮೂಹಕ್ಕೆ ರಂಗಭೂಮಿಯ ಮೂಲಕ ವಚನ ಚಳುವಳಿಯ ಆಶಯಗಳನ್ನು ಪ್ರಸಾರ ಮಾಡುವ ಜಾಣ್ಮೆಯನ್ನೂ ಅಲ್ಲಿ ಗುರುತಿಸಬೇಕಾಗುತ್ತದೆ. ಹರಳಯ್ಯ ದೇವರಗುಡಿ ಅರ್ಚಕರ ನಡುವೆ ನಡೆಯುವ ಸಂಭಾಷಣೆಯ ಮೂಲಕ ಪುರೋಹಿತಶಾಹಿಯ ದರ್ಪ ಮತ್ತು ಮೌಢ್ಯವನ್ನು ಬಯಲಿಗೆಳೆಯುವ ಬೆಳ್ಳಾವೆಯವರೂ ಪ್ರಗತಿಪರವಾದದವರೇ ಎಂಬುದರಲ್ಲಿ ಸಂದೇಹವಿಲ್ಲ ''[೬]

ಪೌರಾಣಿಕ ನಾಟಕಗಳ ಬೆಳವಣಿಗೆಯಲ್ಲಿ ಗರುಡ ಸದಾಶಿವರಾಯರ ಸಾಧನೆ ವೈಶಿಷ್ಟ್ಯ ಪೂರ್ಣವಾದುದು. ಪೌರಾಣಿಕ ನಾಟಕಗಳಲ್ಲಿ ಸಂಗೀತ ಹುಚ್ಚು ಹೊಳೆಯಾಗಿ ಹರಿಯುತ್ತಿದ್ದಾಗ ಇವರು ಸಾಹಿತ್ಯಕ್ಕೆ ಪ್ರಾಮುಖ್ಯತೆ ನೀಡಿದರು. ರಂಗಕ್ಕೆ ಸಂಬಂಧಿಸಿದ ಬೇರೆ ಬೇರೆ ಪ್ರವೃತ್ತಿಗಳನ್ನೆಲ್ಲ ಅಭಿನಯ ಸೂತ್ರಕ್ಕೆ ಅಳವಡಿಸಲು ಯತ್ನಿಸಿ ಯಶಸ್ವಿಯಾದರು. ಹೀಗಾಗಿ ಇವರ ನಾಟಕಗಳ ರಚನೆ ಅಭಿನಯ ಮುಖವಾಗಿ ಹರಿಯಿತು. ಚಂದ್ರಮತಿ, ಸಾವಿತ್ರಿ ಸತ್ಯವಾನ, ದುರಾತ್ಮ ರಾವಣ, ಸೌಭದ್ರ, ಭಸ್ಮಾಸುರ ಮೋಹಿನಿ, ಶಕ್ತಿವಿಲಾಸ, ಪ್ರಹ್ಲಾದ, ಶ್ರೀನಿವಾಸ ಕಲ್ಯಾಣ, ಶ್ರೀಕೃಷ್ಣ ಸುಧಾಮ, ಶ್ರೀಕೃಷ್ಣಲೀಲಾ, ಕಂಸವಧೆ, ಅನಸೂಯಾ, ಧರ್ಮ ಸಾಮ್ರಾಜ್ಯ ಮುಂತಾಗಿ ಇಪ್ಪತ್ತಕ್ಕೂ ಹೆಚ್ಚು ಪೌರಾಣಿಕ ಕೃತಿಗಳನ್ನೂ ಇವರು ರಚಿಸಿದ್ದಾರೆ. ಇವುಗಳಲ್ಲಿ ಮರಾಠಿ ರಂಗಭೂಮಿಯ `ರಾಮರಾಜ್ಯ ವಿಯೋಗ' ನಾಟಕವನ್ನು ಅನುವಾದಿಸಿ ಬರೆದ `ಪಾದುಕಾ ಪಟ್ಟಾಭಿಷೇಕ ' ಅಪೂರ್ವ ಯಶಸ್ಸನ್ನು ಕಂಡ ಕೃತಿ. ಗರುಡರು ``ಪೌರಾಣಿಕ ವಸ್ತುವಿನ ನಿರೂಪಣೆ ಅಭಿನಯಗಳಲ್ಲಿ ಹೆಚ್ಚಿನ ಆಸಕ್ತಿ ಜಾಗರೂಕತೆ ವಹಿಸಿದ್ದರು. ಅವರ

ಮೊದಲ ನಾಟಕ `ಮಾರ್ಕಂಡೇಯ' ಎಂದು ಮೊದಲೇ ಹೇಳಿದೆ. ಗರುಡರಿಂದ ಸ್ಫೂರ್ತಿ ಪಡೆದು ಅನೇಕ ಸಂದರ್ಭಗಳಲ್ಲಿ ಅವರ ಶಿಷ್ಯರಾಗಿದ್ದವರು ನಡೆಸಲ್ಪಟ್ಟ ವೃತ್ತಿನಾಟಕ ಸಂಸ್ಥೆಗಳು ಗೊತ್ತಾದ ಪರಿಮಿತಿಯಲ್ಲಿ ಈ ಸೂತ್ರಗಳನ್ನು ಪಾಲಿಸುತ್ತ ಬಂದಿದ್ದರಿಂದ, ಉತ್ತರ ಕರ್ನಾಟಕದ ಪೌರಾಣಿಕ ನಾಟಕಗಳು ಇಡೀ ಕರ್ನಾಟಕದಲ್ಲಿ ಯಶಸ್ಸು ಗಳಿಸಲು ಸಮರ್ಥವಾಯಿತು. ಮೈಸೂರ ಪ್ರಾಂತದ ಪೌರಾಣಿಕ ಕಂಪನಿ ನಾಟಕಗಳಿಗಿಂತ ಸಾಹಿತ್ಯ, ಅಭಿನಯ, ಪ್ರಯೋಗಗಳಲ್ಲಿ ಶ್ರೇಷ್ಠ ಮಟ್ಟದ್ದಾಯಿತು "[೭]

ಬೆಳ್ಳಾವೆಯವರ ನಂತರ ಪೌರಾಣಿಕ ನಾಟಕಗಳ ರಚನೆಯಲ್ಲಿ ಸಿದ್ಧಿ ಪಡೆದ ಮೈಸೂರ ಭಾಗದ ಮತ್ತೊಬ್ಬ ನಾಟಕಕಾರ ಬಿ. ಪುಟ್ಟಸ್ವಾಮಯ್ಯ. ಪೌರಾಣಿಕ ವಸ್ತು, ರಚನೆಯಲ್ಲಿ ಬೆಳ್ಳಾವೆಯವರಿಗಿಂತ ಇವರದು ವಿಶಾಲದೃಷ್ಟಿ, ಸಂಭಾಷಣಾಶೈಲಿ ಅಲಂಕಾರಿಕವಾದುದು. `ಯಾಜ್ಞಸೇನಿಯ ' ಪ್ರಥಮ ದೃಶ್ಯದಲ್ಲಿ ಭೀಷ್ಮನು ದ್ರೋಣರನ್ನು ಕುರಿತು ಹೇಳುವ ಮಾತು : " ಆಚಾರ್ಯರೇ, ಜಗದ್ವಿಖ್ಯಾತನಾದ ಭರತವಂಶದ ನೂರೈದು ಸ್ಫುಲಿಂಗಗಳನ್ನು ನಿಮ್ಮಕೈಲಿಟ್ಟೆನು. ನಿಮ್ಮ ವಿದ್ಯೆಯ ಮಹಿಮೆಯಿಂದ ಅವುಗಳನ್ನು ಪ್ರಜ್ವಲಿಸಿ ಭಾರತವನ್ನು ಬೆಳೆಸುವ ಕ್ಷಾತ್ರತೇಜದ ನೂರೈದು ಪುಣ್ಯಾಗ್ನಿಗಳನ್ನಾಗಿ ಮಾಡಿದಿರಿ....." ಇಂಥ ಸಂಭಾಷಣಾ ಶೈಲಿಯಿಂದ ನಟನ ವ್ಯಕ್ತಿತ್ವಕ್ಕೆ ಹೆಚ್ಚಿನ ತೂಕ ಒದಗುತ್ತಿತ್ತು. ನಟನು ನಾಟಕದ ಮುಖ್ಯ ಭಾಗವಾಗಿ ಬೆಳೆಯಲು ಪೂರಕವಾಗುತ್ತಿತ್ತು.

ಇವರ ಕುರುಕ್ಷೇತ್ರ, ದಶಾವತಾರ ನಾಟಕಗಳು, ಗುಬ್ಬಿ ಕಂಪನಿಯಲ್ಲಿ ಅದ್ಭುತ ಯಶಸ್ಸು ಸಾಧಿಸಿದವು. ಗೌತಮಬುದ್ಧ ಮತ್ತು ಷಾಜಹಾನ್ ಕೃತಿಗಳು ಮಹಮ್ಮದ ಪೀರ ಅವರ ಅಭಿನಯದಿಂದ ಕೀರ್ತಿಯ ಉತ್ತುಂಗಕ್ಕೇರಿದವು. ಇವರು ಬರೆದ ಇತರ ನಾಟಕಗಳೆಂದರೆ ಸತೀತುಳಸಿ, ಬಭ್ರುವಾಹನ, ತಾರಕವಧೆ, ಪ್ರಚಂಡ ಚಾಣಕ್ಯ, ಬಿಡುಗಡೆಯ ಬಿಚ್ಚುಗತ್ತಿ, ಅಭಿನೇತ್ರಿ, ರಾಣಿ, ಸಂಪೂರ್ಣ ರಾಮಾಯಣ, ಪ್ರಭುದೇವ, ಅಕ್ಕಮಹಾದೇವಿ, ಚಿರಕುಮಾರಸಭಾ, ಭಾಷಾಪ್ರಯೋಗ ತಾಂತ್ರಿಕಪ್ರಯೋಗ. ಪಾತ್ರಗಳ ಸಮಾಜೀಕರಣ ದೃಷ್ಟಿಯಿಂದ ಪುಟ್ಟಸ್ವಾಮಯ್ಯನವರ ನಾಟಕಗಳು ಅಭ್ಯಾಸ ಯೋಗ್ಯವಾಗಿವೆ.

ಪೌರಾಣಿಕ ನಾಟಕಕಾರರ ಸಾಲಿನಲ್ಲಿ ಕಂದಗಲ್ ಹನುಮಂತರಾಯರದೇ ಒಂದು ವಿಶಿಷ್ಟಸ್ಥಾನ. ಸಂಗೀತದಲ್ಲಿ ಮುಳುಗಿದ್ದ ನಾಟಕಗಳನ್ನು ಗದ್ಯಕ್ಕೆ ಹೊರಳಿಸಿದ ಶ್ರೇಯಸ್ಸು ಇವರದು. ಪ್ರಾಸಯುಕ್ತ ಭಾಷೆ, ಉಪಮೆ, ಉಪಮಾನಗಳನ್ನು ಸಾಲುಸಾಲಾಗಿ ಬಳಸಿ, ಸನ್ನಿವೇಶಕ್ಕೆ ಗಾಂಭೀರ್ಯ ತುಂಬುವ ರಚನಾಕೌಶಲ್ಯ ಇವರ ವಿಶೇಷತೆ. ಇವರು ಪಾತ್ರ ರಚನೆಗೆ ಹೆಚ್ಚು ಮಹತ್ವ ನೀಡಿದ್ದರಿಂದ ಮಹಾಭಾರತಕ್ಕೆ ಸಂಬಂಧಿಸಿದ ಪ್ರಮುಖ ಪಾತ್ರಗಳು ರಂಗದ ಮೇಲೆ ವಿಜೃಂಭಿಸುವಂತಾಯಿತು. ಇವರ ನಾಟಕಗಳ ಪ್ರದರ್ಶನದಿಂದ ಉತ್ತರ ಕರ್ನಾಟಕದಲ್ಲಿ ನಾಟಕ ಪರಂಪರೆಯೊಂದು ನಿರ್ಮಾಣವಾಯಿತು.

ಕಂದಗಲ್‌ರ ನಂತರ ಪೌರಾಣಿಕ ನಾಟಕಗಳ ರಚನೆಯಲ್ಲಿ ಹೆಸರಾದವರು ನಲವಡಿ ಶ್ರೀಕಂಠಶಾಸ್ತ್ರಿಗಳು. ಇವರು ಮೂಲತಃ ಕವಿಗಳು. ಹೀಗಾಗಿ ಸಂಭಾಷಣೆಗಿಂತ ಹಾಡುಗಳ

ರಚನೆಗೆ ಪ್ರಾಮುಖ್ಯತೆ ದೊರೆಯಿತು. `ವಿಚಿತ್ರ ವಿಲಾಸ,'`ಶೈವ ಶಾಂತಿ,'`ಸಂತಸಂಗ,'`ಶಾಪ
ವಿಮೋಚನೆ,'`ಭಕ್ತ ಸುಧನ್ವ,'` ಲಂಕಾದಹನ,'` ಹಿರಣ್ಯ ಕಶ್ಯಪ ' ಇವರ ಪೌರಾಣಿಕ
ರಚನೆಗಳು. ಇವರ `ಪ್ರಪಂಚ ಪರೀಕ್ಷೆ ' ಜನಪ್ರಿಯ ನಾಟಕ. ನಿಯಮಿತ ಪಾತ್ರಗಳು ಲಲಿತ,
ಪದಗಳು, ಸರಳ ಭಾಷೆಯಿಂದ ಇವರ ನಾಟಕಗಳು ಪ್ರೇಕ್ಷಕರ ಮೆಚ್ಚುಗೆ ಪಡೆದವು.

ಐತಿಹಾಸಿಕ ನಾಟಕಗಳು :

ವೃತ್ತಿರಂಗಭೂಮಿಯಲ್ಲಿ ಪೌರಾಣಿಕ ನಾಟಕಗಳ ರಚನೆಗೆ ದೊರೆತ ಮಹತ್ವ
ಐತಿಹಾಸಿಕ ನಾಟಕಗಳಿಗೆ ದೊರೆಯಲಿಲ್ಲ. ಮೂವತ್ತು ವರುಷಕಾಲ ಪೌರಾಣಿಕ ನಾಟಕಗಳದ್ದೇ
ಸಾಮ್ರಾಜ್ಯ. ಇದಕ್ಕೆ ನಮ್ಮ ಜನರ ಪುರಾಣಶ್ರದ್ಧೆಯೇ ಕಾರಣವೆಂದು ನೇರವಾಗಿ ಹೇಳ
ಬಹುದಾದರೂ ಜನರಲ್ಲಿಯ ಐತಿಹಾಸಿಕ ಪ್ರಜ್ಞೆಯ ಅಭಾವವನ್ನು ಅಲ್ಲಗಳೆಯುವಂತಿಲ್ಲ.
ಸ್ವಾತಂತ್ರ್ಯ ಪೂರ್ವದಲ್ಲಿ ಕನ್ನಡನಾಡು ಹತ್ತೊಂಬತ್ತು ಸಣ್ಣ- ಪುಟ್ಟ ಸಂಸ್ಥಾನಗಳ
ಆಡಳಿತಕ್ಕೊಳಪಟ್ಟಿತ್ತು. ಮೇಲಿಂದ ಮೇಲೆ ಬದಲಾಗುತ್ತಿದ್ದ ರಾಜಕೀಯ ವ್ಯವಸ್ಥೆಯೊಂದಿ
ಜನರು ಹೊಂದಿಕೊಂಡು ಬಾಳಬೇಕಿತ್ತು. ``ಒಂದೊಂದು ಕಾಲದಲ್ಲಿ ಒಂದೊಂದ
ಸಾಮ್ರಾಜ್ಯ ವೈಭವದಿಂದ ಮೆರೆದಿರಬಹುದಾದರೂ ಸಾಮಾನ್ಯ ಜನತೆಯ ನಿಷ್ಠೆ ಚಿಕ್ಕ ಪುಟ್ಟ
ಸಾಮಂತರ ಪಾಳೆಯಗಾರರಿಗೆ ಸೀಮಿತವಾಗಿತ್ತು. ಭಾಷಾಪ್ರೇಮ, ದೇಶಪ್ರೇಮಗಳಿಗಿಂ
ರಾಜನಿಷ್ಠೆಗೆ ಮಹತ್ವವಿತ್ತು. ಮುಸ್ಲಿಂ ಮತ್ತು ಆಂಗ್ಲರ ವಿದೇಶಿ ಆಕ್ರಮಣ ಮತ್ತು ಪ್ರಭಾ
ಗಳೂ ನಮ್ಮ ಜನರ ರಾಷ್ಟ್ರೀಯತೆಯನ್ನು ಮಂಕುಗೊಳಿಸಿದವು. "[೨] ಹೀಗಾಗಿ ಅಖಂ
ರಾಜಕೀಯ ಪರಂಪರೆಯ ಕೊರತೆಯಿಂದ ಐತಿಹಾಸಿಕ ನಾಟಕಗಳು ಅಂದು ಹುಟ್ಟಿಕೊಳ್ಳಲಿ
ವೆನ್ನಬೇಕು. ೧೯೦೫ರಲ್ಲಿ ಕೊಣ್ಣೂರ ಕಂಪನಿ `ಮಹಾತ್ಮ ಬಸವೇಶ್ವರ ' ನಾಟ
ಪ್ರದರ್ಶಿಸುತ್ತಿದ್ದ ಬಗ್ಗೆ ದಾಖಲೆ ಇವೆ. ಅದರೆ ಇಂಥ ನಾಟಕಗಳನ್ನು ಐತಿಹಾಸಿಕವೆಂ
ಪರಿಗಣಿಸುವುದು ಕಷ್ಟ. ಇವುಗಳ ಪ್ರಮುಖ ಪಾತ್ರಗಳು ಐತಿಹಾಸಿಕವಾಗಿದ್ದರೂ ಅವುಗ
ರೂಪ ರಚನೆ, ನಿರೂಪಣಾ ತಂತ್ರಗಳಲ್ಲಿ ಪೌರಾಣಿಕ ಅಂಶಗಳನ್ನೇ ತುಂಬಿಕೊಂಡಿದ್ದವು.

ಐತಿಹಾಸಿಕ ನಾಟಕಗಳ ರಚನೆಯಲ್ಲಿ ಚಿಕ್ಕೋಡಿ ಶಿವಲಿಂಗಶಾಸ್ತ್ರಿಗಳ ಸಾಧ
ಮುಖ್ಯವಾದುದು. ಇವರ ಕಿತ್ತೂರು ಚೆನ್ನಮ್ಮ, ಕಿತ್ತೂರ ರುದ್ರಮ್ಮ ಕೃತಿಗಳು ವೃತ್ತಿರಂಗದ ಮೆ
ಕ್ರಾಂತಿಯನ್ನೇ ಮಾಡಿದವು. ಶಾಸ್ತ್ರಿಗಳ, ರಾಷ್ಟ್ರಾಭಿಮಾನ, ಸಮಕಾಲೀನ ಸ್ವಾತಂತ್ರ್ಯ ಆಂದೋಲನ
ಪ್ರಭಾವ ಬಳಸಿ ಚೆನ್ನಮ್ಮನನ್ನು ಸ್ಫೂರ್ತಿಯ ಚಿಲುಮೆಯಾಗಿ ನಿರ್ಮಿಸಿದ್ದಾರೆ. ನಾಟಕ ನೋಡಿ
ಜನರು ಚಳುವಳಿಯಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದರು. ಇದನ್ನು ಗಮನಿಸಿದ ಬ್ರಿಟಿ
ಸರಕಾರ ನಾಟಕ ಪ್ರದರ್ಶನದ ಅನುಮತಿ ರದ್ದುಗೊಳಿಸಿತು. ಅಂದಿನ ನಾಟಕಕಾರರಿಗೆ ಚರಿತ್ರೆ ನಿ
ನಿಮಿತ್ತವಾಗಿ ಸಮಕಾಲೀನ ಚಳುವಳಿಯೇ ಮುಖ್ಯವಾಯಿತು. ಕಿತ್ತೂರ ಚೆನ್ನಮ್ಮ, ನರಗು
ಮುತ್ತಿಗೆ, ಸಿಂಧೂರ ಲಕ್ಷ್ಮಣ, ಸಂಗೊಳ್ಳಿ ರಾಯಣ್ಣ, ಈ ನಾಟಕಗಳ ನಾಯಕರು ತಮ್ಮ ಸುತ್ತ
ತಮ್ಮ ವೈಯಕ್ತಿಕ ಸಮಸ್ಯೆಗಳಿಗಾಗಿ ಬ್ರಿಟಿಷರ ವಿರುದ್ಧ ಬಂಡೆದ್ದವರಲ್ಲ. ಇಡೀ ಭಾರ
ಸ್ವಾತಂತ್ರ್ಯಕ್ಕಾಗಿ ಸಮರ ಹೂಡಿದ ವೀರಯೋಧರಂತೆ ಕಂಗೊಳಿಸುತ್ತಿದ್ದರು.

ಐತಿಹಾಸಿಕ ನಾಟಕಗಳ ರಚನೆಯಲ್ಲಿ ಸ್ವಾತಂತ್ರ್ಯಪೂರ್ವದ ಉತ್ಸಾಹ ಅನಂತರದಲ್ಲಿ ಗಳಿಯಲಿಲ್ಲ. ಹೊಸ ನಾಟಕಕಾರರು ಮೊದಲಿನ ನಾಟಕಗಳಿಗೆ ಇನ್ನಷ್ಟು ಚಾರಿತ್ರಿಕ ಅಂಶಗಳನ್ನು ಕೂಡಿಸಿ ಮತ್ತೆ ಚೆನ್ನಮ್ಮ, ಸಿಂಧೂರ ಲಕ್ಷ್ಮಣ ಬರೆದರು. ಸಾಮಾಜಿಕ ನಾಟಕಗಳ ಜನ ಪ್ರಿಯತೆಯ ಎದಿರಿನಲ್ಲಿ ಐತಿಹಾಸಿಕ ನಾಟಕಗಳ ರಚನೆ, ಪ್ರದರ್ಶನಗಳೆರಡೂ ಕಷ್ಟದ್ದೆನಿಸಿ ರಬೇಕು. ಭಾರೀ ಬಂಡವಾಳ ಹೊಂದಿದ ಮಂಡಳಿಗಳು ಮಾತ್ರ ಇಂಥ ನಾಟಕಗಳ ಭರ್ಜರಿ ಪ್ರದರ್ಶನಕ್ಕೆ ಮುಂದಾದವು. ಶರಣರ ನಂತರ ಕೃತಿಗಳು ಮಾತ್ರ ಜನಪ್ರಿಯತೆ ಕಳೆದು ಕೊಳ್ಳಲಿಲ್ಲ. ಶಿಶುನಾಳ ಶರೀಫಸಾಹೇಬರು, ಶ್ರೀನಾಗಲಿಂಗಲೀಲೆ, ಗರಗದ ಮಡಿವಾಳೇಶ್ವರ, ಮರುಳ ಶಂಕರದೇವ, ತಿಪ್ಪೇರುದ್ರಸ್ವಾಮಿ ಮುಂತಾದ ನಾಟಕಗಳು ಇಂದಿಗೂ ಪ್ರದರ್ಶನಗೊಳ್ಳುತ್ತಿವೆ.

ಸಾಮಾಜಿಕ ನಾಟಕಗಳು : .

ಈ ಶತಮಾನದ ಆರಂಭದ ಮೂರು ದಶಕಗಳವರೆಗೂ ನಮ್ಮ ವೃತ್ತಿರಂಗಭೂಮಿಯ ಮೇಲೆ ಹೆಚ್ಚಾಗಿ ದೇವ ದಾನವರೆ ಓಡಾಡುತ್ತಿದ್ದರು. ಅತಿರೇಕ ಧಾಟಿಯ ನಾಟಕಗಳು, ಅತಿಯಾದ ಸಂಗೀತ, ಅತಿಯಾದ ಅಭಿನಯ, ಕೃತಕ ಭಾಷೆಯಿಂದ ಪ್ರೇಕ್ಷಕರು ರೋಸಿಹೋಗಿದ್ದರೂ ಕೆಲ ಪ್ರತಿಭಾವಂತ ನಟ -ನಟಿಯರ ಅಭಿನಯ ಕೌಶಲ್ಯ ನೋಡಲು ಜನರು ಪೌರಾಣಿಕ ನಾಟಕಗಳನ್ನು ನೋಡುತ್ತಿದ್ದರು. ಈ ಪರಿಸ್ಥಿತಿ ಸುಧಾರಿಸಿ ಸಮಕಾಲೀನ ಬದುಕಿನ ಹತ್ತಾರು ಘಟನೆಗಳನ್ನು ಬಣ್ಣದ ಬೆಳಕಲ್ಲಿ ಕಾಣುವಂತಾದದ್ದು ವೃತ್ತಿರಂಗಭೂಮಿಯ ಎರಡನೆಯ ಘಟ್ಟದಲ್ಲಿ. ಪಾಶ್ಚಾತ್ಯರ ಆಧುನಿಕ ಶಿಕ್ಷಣ, ಸಾಮಾಜಿಕ ಬದಲಾವಣೆಗಳ ಪರಿಣಾಮವಾಗಿ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸಾಮಾಜಿಕವಸ್ತು ಪ್ರಾಮುಖ್ಯತೆ ಪಡೆಯಿತು. ಸಣ್ಣಕತೆ ಕಾದಂಬರಿಗಳ ಜನಪ್ರಿಯತೆಯಿಂದ ಹೊಸ ನಾಟಕಗಳು ರಂಗವನ್ನೂ ಪ್ರವೇಶಿಸಿ ಸಾಮಾಜಿಕ ಪ್ರಜ್ಞೆಯತ್ತ ಜನರ ಗಮನ ಸೆಳೆದವು. ಈ ನಿಟ್ಟಿನಲ್ಲಿ ಚಿಕ್ಕೋಡಿ ಶಿವಲಿಂಗ ಶಾಸ್ತ್ರಿಗಳ, ವಾಮನರಾವ ಮಾಸ್ತರರ, ಗರುಡ ಸದಾಶಿವರಾಯರ, ಐರಣಿಯ ಕೋಲ ಶಾಂತಪ್ಪನವರ ರಚನೆಗಳು ಹೊಸ ಪರಿಸ್ಥಿತಿ ನಿರ್ಮಿಸಿದವು. ಐತಿಹಾಸಿಕವಾಗಿ ಸಂಸ್ಕೃತದಿಂದ ಅನುವಾದಿತವಾದ ಮೃಚ್ಛಕಟಿಕವೆ ನಮ್ಮ ರಂಗದ ಮೇಲೆ ಪ್ರಯೋಗಗೊಂಡ ಮೊದಲ ಸಾಮಾಜಿಕ ನಾಟಕ. ಸಾರ್ವಕಾಲಿಕವೆನಿಸುವ ಸಾಮಾಜಿಕ, ರಾಜಕೀಯ ವಿಷಯಗಳನ್ನೊಳ ಗೊಂಡ ಈ ಕೃತಿಯನ್ನು ಶಿವಮೂರ್ತಿಸ್ವಾಮಿಗಳ ಶ್ರೀಕಾಡಸಿದ್ಧೇಶ್ವರ ನಾಟಕ ಮಂಡಳಿ ಅತ್ಯಂತ ಯಶಸ್ವಿಯಾಗಿ ಪ್ರದರ್ಶಿಸಿತು. ಹಾಗೆ ನೋಡಿದರೆ ಸಾಮಾಜಿಕ ಪ್ರಜ್ಞೆಯನ್ನು ವೃತ್ತಿರಂಗ ಭೂಮಿಯು ಪ್ರಾರಂಭದಿಂದಲೂ ಮೈಗೂಡಿಸಿಕೊಂಡು ಬಂದಿತೆನ್ನಬೇಕು. ವೃತ್ತಿರಂಗದ ಮೇಲೆ ನಟನೇ ಸಾಮ್ರಾಟ. ಎಷ್ಟೋ ವೇಳೆ ಈತ ಅಶು ನಟನಾಗಿ ರಂಗದ ಮೇಲೆ ನಿಂತ ನಂತರ್ಪ್ರಯೋ ಮಾತುಗಳನ್ನು ಒಪ್ಪಿಸುತ್ತಿದ್ದ. ಇಂಥ ಮಾತುಗಳಲ್ಲಿ ತತ್ಕಾಲೀನ ಸಾಮಾಜಿಕ ರಾಜಕೀಯ ವಿಷಯಗಳು ಧಾರವಾಳವಾಗಿ ಪ್ರಕಟಗೊಳ್ಳುತ್ತಿದ್ದವು. ನಾಟಕ ಪೌರಾಣಿಕವರಲಿ, ಐತಿಹಾಸಿಕವೆ ಇರಲಿ ಚತುರ ಮಾತಿನ ಕಲಾವಿದ ಅಂದಂದಿನ ಸಾಮಾಜಿಕ ರಾಜಕೀಯ ವಿಷಯಗಳನ್ನು ಸ್ವಾರಸ್ಯವಾಗಿ ಜನರಿಗೆ ತಿಳಿಸುತ್ತಿದ್ದ. ಇದು ಕಥಾಚೌಕಟ್ಟನ್ನು ಮೀರಿದ ಮಾತಾದರೂ ಪ್ರೇಕ್ಷಕರು ಚಕಾರವೆತ್ತದೆ ಇವನ್ನೆಲ್ಲ ಕೇಳಿ ಆನಂದಿಸುತ್ತಿದ್ದುದು ಅಂದಿನ ನಟರ, ಪ್ರೇಕ್ಷಕರ ಸಾಮಾಜಿಕ ಪ್ರಜ್ಞೆಗೆ ನಿದರ್ಶನವಾಗಿದೆ. ಹಾಸ್ಯ ಮತ್ತು ಸೇವಕ

ಪಾತ್ರಧಾರಿಗಳು ಸಮಕಾಲೀನ ವಿಷಯಗಳನ್ನು ವಿಡಂಬಿಸಿ ಪ್ರೇಕ್ಷಕರನ್ನು ನಗಿಸುವ ಸಂಗತಿ ಜನಪದ ರಂಗದ ಮೇಲೆ ಮಾರ್ಮಿಕವಾಗಿ ನಡೆಯುತ್ತಿದ್ದುದು, ಮುಂದೆ ವೃತ್ತಿರಂಗ ದಲ್ಲಿಯೂ ಅದು ಮುಂದುವರೆದುದನ್ನು ಕಾಣುತ್ತೇವೆ. ರಾಷ್ಟ್ರೀಯ ಚಳುವಳಿಯ ಸಂದರ್ಭ ದಲ್ಲಂತೂ ನಮ್ಮ ನಾಟಕಕಾರರು ಬರೆದ ಬಹಳಷ್ಟು ನಾಟಕಗಳು ಮಹಾತ್ಮಾ ಗಾಂಧೀಜಿ ಯವರ ಧ್ಯೇಯಾದರ್ಶಗಳನ್ನು ಪ್ರಚಾರ ಮಾಡುವಂಥ ಕೃತಿಗಳಾಗಿದ್ದವು. ಸಮಕಾಲೀನ ಸಮಾಜ ಕುರಿತು ರಚಿಸಲಾದ, ಪ್ರದರ್ಶಿಸಲಾದ ನಾಟಕಗಳನ್ನು ಸಾಮಾಜಿಕ ನಾಟಕಗಳೆನ್ನುವುದಾದರೆ ಸಮಕಾಲೀನ ವಿಷಯಗಳನ್ನು ಗರ್ಭೀಕರಿಸಿಕೊಂಡು ರಚನೆಯಾದ ನಾಟಕಗಳಿಗೂ ವೃತ್ತಿರಂಗಭೂಮಿಗೂ ಇರುವ ಸ್ನೇಹ ಹಳೆಯದೆ ಎನ್ನಬೇಕು. ಗರುಡ ಸದಾಶಿವರಾಯರ ಶ್ರೀರಾಮ ಪಾದುಕಾ ಪಟ್ಟಾಭೀಷೇಕ, ಮಾಯಾಬಜಾರದಂಥ ಪೌರಾಣಿಕ ನಾಟಕಗಳನ್ನು ಶಿವಲಿಂಗಶಾಸ್ತ್ರಿಗಳ ಕಿತ್ತೂರ ಚೆನ್ನಮ್ಮ, ಅಚ್ಯುತರಾಯರ ನರಗುಂದ ಮುತ್ತಿಗೆಯಂಥ ಐತಿಹಾಸಿಕ ನಾಟಕಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಇವುಗಳ ಬಾಹ್ಯರೂಪ ಪೌರಾಣಿಕ, ಐತಿಹಾಸಿಕವಾಗಿದ್ದರೆ ಆಂತರಿಕ ಸ್ವರೂಪ ಸಾಮಾಜಿಕವಾಗಿದ್ದುದು ವೇದ್ಯವಾಗುತ್ತದೆ.

ಕನ್ನಡ ಸ್ವತಂತ್ರ ಸಾಮಾಜಿಕ ನಾಟಕಗಳು ರಂಗದ ಮೇಲೆ ವಿಜೃಂಭಿಸುವ ಪೂರ್ವ ದಲ್ಲಿ ಮರಾಠಿಯಿಂದ ಅನುವಾದಿತವಾದ ನಾಟಕಗಳು ಬಹುಕಾಲದವರೆಗೆ ಯಶಸ್ವಿಯಾಗಿ ಪ್ರದರ್ಶನ ಕಂಡವು. ಸಂಶಯ ಕಲ್ಲೋಳ, ಮಾನಾಪಮಾನ, ವಿಕಚ ಪ್ಯಾಲಾ, ಪಂತಾಂಚಿ ಸೂನ ನಾಟಕಗಳ ಅನುವಾದಗಳಾದ ಸಂದೇಹ ಸಾಮ್ರಾಜ್ಯ, ಭಾಮಿನಿ, ನಿಷಾಮಹಿಮೆ ರಾಯರ ಸೊಸೆ ನೂರಾರು ಪ್ರದರ್ಶನಗಳಿಂದ ಜಯಭೇರಿ ಹೊಡೆದು ನಮ್ಮ ನಾಟಕಕಾರಿಗೆ ಸ್ಫೂರ್ತಿಯಾದವು. ಅಂದು ಈ ಕೃತಿಗಳ ಜನಪ್ರಿಯತೆ ಎಷ್ಟಿತ್ತೆಂದರೆ ಹೆಸರಾಂತ ಮಂಡಳಿಗಳೆಲ್ಲ ತಮಗೆ ಗೊತ್ತಿದ್ದ ನಾಟಕಕಾರರಿಂದಲೋ ಅಥವಾ ಶಾಲೆಯ ಮಾಸ್ತರರಿಂದಲೊ ಇವುಗಳನ್ನು ಪ್ರತ್ಯೇಕವಾಗಿಯೆ ಅನುವಾದಿಸಿಕೊಂಡು ಪ್ರಯೋಗಕ್ಕೆ ಅಣಿಗೊಳಿಸಿದರು. ಹೀಗೆ ಅನುವಾದಿಸಿದ ಒಂದು ಮರಾಠಿ ನಾಟಕದ ಐದಾರು ಕನ್ನಡ ಆವೃತ್ತಿಗಳಾದರೂ ನಮ್ಮಲ್ಲಿ ಸಿಗುತ್ತವೆ.

ಉತ್ತರ ಕರ್ನಾಟಕದಲ್ಲಿ ಸಮಕಾಲೀನ ಅಂಶಗಳಿಗೆ ಪ್ರಾಧಾನ್ಯತೆ ನೀಡಿದವರಲ್ಲಿ ಚಿಕ್ಕೋಡಿ ಶಿವಲಿಂಗಶಾಸ್ತ್ರಿಗಳು ಮುಖ್ಯರು. ಇವರ ಅಸ್ಪೃಶ್ಯತಾ ನಿವಾರಣೆ ಮಹಾತ್ಮಾ ಗಾಂಧೀಜಿಯವರ ಅಸಹಕಾರ ಚಳುವಳಿಯ ಧ್ಯೇಯ ಧೋರಣೆಗಳನ್ನೇ ಪ್ರಚಾರ ಮಾಡುವಂಥ ಕೃತಿ. ಇನ್ನು ಪವಿತ್ರ ಖಾದಿ, ರಾಷ್ಟ್ರಧ್ವಜ ಉಜ್ವಲ ರಾಷ್ಟ್ರೀಯ ನಾಟಕಗಳೆನ್ನಬೇಕು. ಇವರು ಬೆಳಗಾವಿ ಜಿಲ್ಲೆಯ ಮಠವೊಂದರಲ್ಲಿ ನಡೆದ ಘಟನೆಯನ್ನು ಆಧರಿಸಿ ಬರೆದ `ಗುರುವಿರಕ್ತರ ಪ್ರಪಂಚವು, ಧರ್ಮಗುರುಗಳ ಅನೈತಿಕ ಅವ್ಯವಹಾರಗಳನ್ನು ಬಯಲಿಗೆಳೆದ ಕ್ರಾಂತಿಕಾರಿ ಸಾಮಾಜಿಕ ನಾಟಕವಾಗಿದೆ. ಶಿರಹಟ್ಟಿ ವೆಂಕೋಬರಾಯರ ಶ್ರೀ ಮಹಾಲಕ್ಷ್ಮಿ ಪ್ರಾಸಾದಿಕ ನಾಟಕ ಮಂಡಳಿಯಿಂದ ಪ್ರದರ್ಶನಗೊಳ್ಳುತ್ತಿದ್ದ ಗುರುರಾವ್ ಮುದಾಪೂರ ಅವರ `ಇಂದಿರೆ' ಹೆಣ್ಣಿನ ಶೋಷಣೆಯ ಬಗ್ಗೆ ರಚನೆಯಾದ ಮೊದಲ ಸಾಮಾಜಿಕ ನಾಟಕವೆಂದು ಗುರುತಿಸಲಾಗುತ್ತದೆ.

ಸಾಮಾಜಿಕ ನಾಟಕಗಳನ್ನು ಬರೆಯಿಸಿ ಜನಪ್ರಿಯಗೊಳಿಸಿದ ಶ್ರೇಯಸ್ಸು ಹಲಗೇರಿಯ ಶ್ರೀ ಹಾಲಸಿದ್ಧೇಶ್ವರ ಮಂಡಳಿಗೆ ಸಲ್ಲುವಂಥದ್ದು. ಸಂಘದೊಡೆಯ ಜಟ್ಟೆಪ್ಪನವರು ಐರಣಿಯ ಕೋಲ ಶಾಂತಪ್ಪನವರಿಂದ ಬರೆಯಿಸಿದ ಸ್ತ್ರೀ ಬಿ. ಎ. ನಾಟಕಗಳು ಪಾಶ್ಚಾತ್ಯರ ಅನುಕರಣೆ, ಆಧುನಿಕ ಶಿಕ್ಷಣದಿಂದ ಉಂಟಾಗುವ ಸಮಸ್ಯೆಗಳನ್ನು ವಿಡಂಬಿಸುವಂಥವುಗಳಾಗಿವೆ. ಮಂಡಳಿಯು "ವಿನೋದಕ್ಕೆ ಅಳವಡುವಂತೆ ಸಾಮಾಜಿಕ ಕಥಾವಸ್ತುವನ್ನು ಅಳವಡಿಸಿ ನಾಟಕಗಳನ್ನು ರಚಿಸಿ, ಪ್ರತಿದಿನದ ಪ್ರದರ್ಶನಗಳಲ್ಲಿ ಅನುದಿನದ ಸಂಗತಿಗಳಿಗೆ ಉಪ್ಪುಕಾರ ಬೆರೆಸಿ ನಾಟಕ ನಿತ್ಯನೂತನ ವಾಗಿರುವಂತೆ ಮಾಡಿತು. ಈ ದೃಷ್ಟಿಯಿಂದ ಇಲ್ಲಿನ ಪ್ರಯೋಗಗಳು ಹಿರಣ್ಣಯ್ಯನವರಂತಹ ಮಹಾ ಪ್ರತಿಭಾವಂತನಾದ ವಿನೋದ ಕಲಾವಿದನ ಪ್ರಯೋಗಗಳ ನಿತ್ಯ ನೂತನತೆಗೆ ದಾರಿ ತೋರಿದಂಥವು "[೯]

ಸಾಮಾಜಿಕ ನಾಟಕಗಳ ಪರಂಪರೆಯಲ್ಲಿ ವಾಮನರಾಯರು ಅನುವಾದಿಸಿದ `ಸಂದೇಹ ಸಾಮ್ರಾಜ್ಯ ' ಗರುಡ ಸದಾಶಿವರಾಯರ ಸ್ವತಂತ್ರ ಕೃತಿ `ವಿಷಮ ವಿವಾಹ ' ನಾಟಕಗಳು ಮುಖ್ಯವೆನಿಸಿದವು. ಈ ಅವಧಿಯ ನಾಟಕಗಳು ಆಯ್ದುಕೊಂಡ ವಸ್ತುವಿನ ದೃಷ್ಟಿಯಿಂದ ಸಾಮಾಜಿಕವಾದರೂ ರಚನಾ ವಿಧಾನ, ಭಾಷೆಯ ಬಳಕೆ, ಅಭಿನಯ ಶೈಲಿಗಳು ಮಾತ್ರ ಪೌರಾಣಿಕ ಜಾಡಿನಿಂದ ಮುಕ್ತವಾಗಿರಲಿಲ್ಲ. ಆದರೆ ಇವುಗಳಿಂದ ಪ್ರೇಕ್ಷಕರಲ್ಲಿ ಹೊಸ ಜಾಗೃತಿ ಮೂಡಿ ರಂಗಭೂಮಿ ಆತ್ಮೀಯವೆನಿಸಿತು. ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ ಜ್ವಲಂತ ಸಮಸ್ಯೆಗಳನ್ನು ದೈನಂದಿನ ಬದುಕಿನ ಹತ್ತಾರು ವಿಷಯಗಳಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಿದವರಲ್ಲಿ ಕಂದಗಲ್ ಹನುಮಂತರಾಯರು, ನಲವಡಿ ಶ್ರೀಕಂಠಶಾಸ್ತ್ರಿಗಳು, ಎಚ್. ಎಲ್. ಎನ್. ಸಿಂಹ, ಎಲ್. ಎಸ್. ಇನಾಂದಾರ್, ಜಿ. ಜಿ. ಹೆಗಡೆ, ನೀಲಕಂಠರಾವ ಮಾಸ್ತರ ಶೇಡಬಾಳಕರ, ಎಚ್. ಟಿ. ಮಹಾಂತೇಶ ಶಾಸ್ತ್ರಿಗಳು ಅಗ್ರಗಣ್ಯರೆನಿಸಿದ್ದಾರೆ. ಬಡತನದ ಭೂತ, ಮಾತಂಗ ಕನ್ಯಾ, ತಾವರೆ ತೊಟ್ಟಲು, ಬೆಳ್ಳಿಚುಕ್ಕಿ- ಇವು ಕಂದಗಲ್ ರಾಯರು ಬರೆದ ಶ್ರೇಷ್ಠ ಸಾಮಾಜಿಕ ನಾಟಕಗಳು. ರಾಯರ ಕಡುಬಡತನದ ಅನುಭವವೇ ಬಡತನದ ಭೂತ ನಾಟಕಕ್ಕೆ ದ್ರವ್ಯವಾಗಿದೆ. ಇಲ್ಲಿಯ ನಿರುದ್ಯೋಗಿ ಪದವೀಧರನ ದುರಂತ ಬದುಕು ಮನಮಿಡಿ ಯುವಂತಿದೆ. ಎಂದಿನಿಂದಲೂ ನಮ್ಮ ಸಮಾಜವನ್ನು ಕಾಡುತ್ತ ಬಂದ ಬಡತನದ ಸಮಸ್ಯೆಗೆ ಉಳ್ಳವರ ಔದಾರ್ಯದಲ್ಲಿಯೆ ಪರಿಹಾರವಿದೆ ಎಂದು ನಾಟಕಕಾರರು ಸೂಚಿಸಿದ್ದಾರೆ. ಬೆಳ್ಳಿ ಚುಕ್ಕಿಯಲ್ಲಿ ಮಕ್ಕಳ ಅಪಹರಣ ವಸ್ತುವಾದರೆ, ಮಾತಂಗಕನ್ಯಾದಲ್ಲಿ ಹೆಣ್ಣಿನ ಮೇಲಾಗುವ ದೌರ್ಜನ್ಯ, ಜಾತಿವೈಷಮ್ಯದಂತಹ ಸಮಸ್ಯೆಗಳು ಮುಖದೋರಿವೆ. ರಾಯರು ಗಂಭೀರ ಸಮಸ್ಯೆಗಳನ್ನು ಅತ್ಯಂತ ಕಾಳಜಿಯಿಂದ ನಿರೂಪಿಸುತ್ತಾರೆ. ಹಾಗೂ ಅವುಗಳಿಗೆ ಪರಿಹಾರ ಸಮತೆ, ಸಹಬಾಳ್ವೆಯ ಜೀವನದಲ್ಲಿದೆ ಎಂದು ಮಾರ್ಮಿಕವಾಗಿ ಸೂಚಿಸುತ್ತಾರೆ. ಪಾತ್ರ ಚಿತ್ರಣ ಗಮನಿಸಿದರೆ ಇವರು ಬಂಗಾಳಿ ಕಾದಂಬರಿಗಳಿಂದ ಪ್ರಭಾವಿತರಾಗಿದ್ದುದನ್ನು ಕಾಣುತ್ತೇವೆ. ಛಂದೋಬದ್ಧ ಭಾಷೆ ಇವರ ವೈಶಿಷ್ಟ್ಯ. ನಾಟಕ ಸಾಮಾಜಿಕವಾದರೂ ಭಾಷೆಯ ಬಳಕೆ ಮಾತ್ರ ಪೌರಾಣಿಕ ಕೃತಿಗಳಿಂದ ಭಿನ್ನವಾಗಿರಲಿಲ್ಲ.

ನವಯುಗ ಕುಮಾರಿ (ಸೋಹಂ), ಮಂಗಳ ಸೂತ್ರ, ಲವ್ ಮ್ಯಾರೇಜ, ದೈವಚಿತ್ರ ಇವು ನಲವಡಿ ಶ್ರೀಕಂಠಶಾಸ್ತ್ರಿಗಳ ಸಾಮಾಜಿಕ ರಚನೆಗಳು. ರಾಯರು ಗದ್ಯಕ್ಕೆ ಆದ್ಯತೆ ನೀಡಿದರೆ ಇವರು ಗದ್ಯಪದ್ಯಗಳೆರಡನ್ನು ಸಮತೂಗಿಸಿಕೊಂಡು ಬರೆದರು. `ನವಯುಗ ಕುಮಾರಿ 'ಯ

ಮುನ್ನುಡಿಯಲ್ಲಿ ನಾಟಕಕಾರರು ವಸ್ತುವೈವಿಧ್ಯತೆಯ ಬಗ್ಗೆ ಹೀಗೆ ಹೇಳಿದ್ದಾರೆ. ಪರಿಸ್ಥಿತಿಯ ಚಿತ್ರ ! ಸ್ವಾತಂತ್ರ್ಯದ ಗುಟ್ಟು ! ಪತಿತ ಭಗಿನಿಯ ಉದ್ಧಾರ ! ಕುಲಪಂಥಗಳ ತಿರಸ್ಕಾರ ! ಸೋಗಿನ ಸಾಧು ಸಂತರ ನಿಂದ್ಯವರ್ತನ, ಬಹಿಷ್ಕಾರ ಇತ್ಯಾದಿ ನಾಟಕ ನಿರೂಪಣವು ನಾಟ್ಯ ಭೂಮಿಯನ್ನು ಅಲಂಕರಿಸುತ್ತದೆ "[೧೦] ಇವರ ಇತರ ನಾಟಕಗಳಿಗೆ ವಿಧವಾ ವಿವಾಹ, ಅಂತರ್ಜಾತಿ ವಿವಾಹ, ಪಾನನಿರೋಧ ಮುಂತಾದ ವಿಷಯಗಳು ವಸ್ತುವಾಗಿವೆ. ಅಂದಂದಿನ ಸಾಮಾಜಿಕ ರಾಷ್ಟ್ರೀಯ ಚಟುವಟಿಕೆಗಳಿಗೆ ಸ್ಪಂದಿಸಿ ಅವುಗಳಿಗೆ ರಂಗರೂಪ ಕೊಟ್ಟವರಲ್ಲಿ ಇನಾಮದಾರರು ಒಬ್ಬರು. ಭೂದಾನ, ನಮ್ಮದು ಕಾಶ್ಮೀರ, ಹಳ್ಳಿಯಿಂದ ದಿಲ್ಲಿಗೆ ರಾಷ್ಟ್ರೀಯ ಸಮಸ್ಯೆಗಳನ್ನು ಸೆರೆಹಿಡಿದ ನಾಟಕಗಳಾದರೆ, ಕುಲವತಿ, ಅತ್ತಿಗೆ, ಪಠಾಣ ಪಾಶ, ಜಹಗೀರದಾರ, ಧೂಳು ಮುಸುಕಿದ ಹೂವು ಸಮಕಾಲೀನ ಸಮಸ್ಯೆಗಳನ್ನು ಪ್ರದರ್ಶಿಸಿದವು. `ಕೆಸರಿನಲ್ಲಿ ಕಮಲ' ಜಿ. ಜಿ. ಹೆಗಡೆಯವರ ಸ್ವತಂತ್ರ ನಾಟಕವಾದರೆ, ಪಾಣಿಗ್ರಹಣ, ಆಹುತಿ, ವಿಷ್ಣುಮಾಸ್ತರರು ಮರಾಠಿಯಿಂದ ಅನುವಾದಿಸಿದ ಶ್ರೇಷ್ಠ ಸಾಮಾಜಿಕ ನಾಟಕಗಳೆನಿಸಿದವು. ಕಥೆಗೆ ಉಚಿತವಾದ ಹಾಸ್ಯ ಅಭಿನಯಕ್ಕೆ ತಕ್ಕ ಸಂಭಾಷಣೆಯಿಂದ ಇವರ ಕೃತಿಗಳು ಉತ್ತರ ಕರ್ನಾಟಕ ರಂಗಭೂಮಿಗೆ ನೂತನವೆನಿಸಿದವು. ಇನ್ನು ನೀಲಕಂಠರಾವ ಶೇಡಬಾಳಕರ ಮಾಸ್ತರರ ರೈತ ರಾಜ್ಯ, ರಾಜದ್ರೋಹ, ಬ್ಲ್ಯಾಕ್ ಮಾರ್ಕೆಟ್ ನಾಟಕಗಳು ಬ್ರಿಟಿಷ್ ಸರಕಾರದ ಆಡಳಿತ, ಕೃಷಿ ಕಾರ್ಮಿಕರ ಸಂಘಟನೆ, ಕಳ್ಳಸಂತೆಯ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಪ್ರದರ್ಶಿಸಿ ಜನಪ್ರಿಯ ಕೃತಿಗಳೆನಿಸಿದವು. ಈ ನಾಟಕಗಳಿಂದ ರಂಗದ ಮೇಲೆ ಆಡುಭಾಷೆ, ಹಿತಮಿತ ಸಂಗೀತ, ವೇಷಭೂಷಣ, ರಂಗಸಜ್ಜಿಕೆ, ಅಭಿನಯಗಳಲ್ಲಿ ಸಹಜತೆ ಅಳವಟ್ಟಿತಲ್ಲದೆ ವಿಡಂಬನೆಯಿಂದ ಜನರನ್ನು ನಗಿಸುವ ಎಚ್ಚರಿಸುವ ಕಾರ್ಯವು ನಡೆಯಿತು. ಹೀಗಾಗಿ ಇವು ತುಂಬ ಜನಪ್ರಿಯವೆನಿಸಿದವು.

ಸಾಮಾಜಿಕ ನಾಟಕಗಳ ಈ ಬೆಳವಣಿಗೆಯಲ್ಲಿ ಸಂಖ್ಯೆ ಸತ್ವಗಳೆರಡರಿಂದ ಗಮನಾರ್ಹ ಕೃತಿಗಳನ್ನು ರಚಿಸಿ ಉತ್ತರ ಕರ್ನಾಟಕ ರಂಗಭೂಮಿಗೆ ಸಿರಿತನ ತಂದವರೆಂದರೆ ಎಚ್. ಟಿ. ಮಹಾಂತೇಶ ಶಾಸ್ತ್ರಿಗಳು. ಇವರ ನರರಾಕ್ಷಸ, ವಧೂವರ, ಕುಂಕುಮ, ಮಾನವತಿ, ರೂಪ ವತಿ, ಆದರ್ಶಪುತ್ರ, ಅಣ್ಣತಮ್ಮ, ಅಕ್ಕತಂಗಿ, ಹೆಣ್ಣುಗೊಂಬೆಗಳು-ಹೆಣ್ಣಿನ ಜೀವನದ ಸಮಸ್ಯೆಗಳ ವಿವಿಧ ಮುಖಗಳನ್ನು ಮನೋಜ್ಞವಾಗಿ ಬಿಚ್ಚಿತೋರಿಸುತ್ತವೆ. ಪ್ರಜಾಸರಕಾರ, ಎಲ್ಲಿದೆ ಸರಕಾರ ? ಭ್ರಷ್ಟಾಚಾರ ಮುಂತಾದವು ರಾಜಕೀಯ ಅವ್ಯವಸ್ಥೆಯನ್ನು ಚೆನ್ನಾಗಿ ಪ್ರದರ್ಶಿಸುತ್ತವೆ. ಇವರ `ಕುಂಕುಮ' ವು ಏಕದೃಶ್ಯ ತಂತ್ರದಿಂದ ಕನ್ನಡ ರಂಗಭೂಮಿಗೆ ವೈಶಿಷ್ಟ್ಯಪೂರ್ಣವೆನಿಸುವ ಕೃತಿಯಾಗಿದೆ. ವಿಧವಾ ಸಮಸ್ಯೆ ಇದರ ವಸ್ತು. ವಿಧವೆಯಾದರೂ ಹೆಣ್ಣಿಗೆ ಮಾನವ ಸಹಜವಾದ ರಾಗರತಿಗಳಿರುತ್ತವೆ. ಅವುಗಳನ್ನು ಪೂರೈಸಿಕೊಳ್ಳಲು ಆಕೆ ದಾರಿತಪ್ಪಬಹುದು. ಆಗ ಅವಳನ್ನು ಅಪರಾಧಿನಿ ಮಾಡಿ, ಅವಳ ಬಾಳನ್ನು ಸೂಳೇಗೇರಿಗೆ ತಳ್ಳುವುದಕ್ಕಿಂತ ಪುನರ್ವಿವಾಹ ಮಾಡುವುದು ಒಳಿತೆಂದು ಈ ನಾಟಕ ಸೂಚಿಸುತ್ತದೆ. ಪ್ರಾಸಬದ್ಧ ಗದ್ಯ, ಸರಳ ಸಂಭಾಷಣೆ, ಸಹಜ ಸನ್ನಿವೇಶಗಳ ನಿರ್ಮಾಣದಿಂದ ಶಾಸ್ತ್ರಿಗಳ ನಾಟಕಗಳು ಕರ್ನಾಟಕದ ತುಂಬ ಯಶಸ್ವಿಯಾಗಿ ಪ್ರದರ್ಶನಗೊಂಡವು.

ಸಾಮಾನ್ಯವಾಗಿ ವೃತ್ತಿರಂಗ ನಾಟಕಗಳ ಭಾಷೆ ಅಲಂಕಾರಿಕವಾದುದು. ಪ್ರಾರಂಭದ ಪೌರಾಣಿಕ ನಾಟಕಗಳು ಯಕ್ಷಗಾನ ಬಯಲಾಟಗಳ ಭಾಷೆಯನ್ನು ಅನುಸರಿಸಿದರೆ, ಗರುಡ

ಸದಾಶಿವರಾಯರ ಮತ್ತು ಕಂದಗಲ್ ಹನುಮಂತರಾಯರ ಕಾಲದಲ್ಲಿ ಗ್ರಾಂಥಿಕ ಹಳೆಗನ್ನಡ ಪದಪ್ರಯೋಗಗಳಿಂದ ಸಂಭಾಷಣೆ ಗಂಭೀರ ಗತ್ತನ್ನು ಪಡೆಯಿತು. ಈ ನಾಟಕಗಳಲ್ಲಿ ಹಾಸ್ಯ ಮತ್ತು ಸೇವಕ ಪಾತ್ರಗಳು ಮಾತ್ರ ಆಡುಭಾಷೆಯನ್ನು ಬಳಸುತ್ತಾರೆ. ಇದು ಸಂಸ್ಕೃತ ರಂಗಭೂಮಿಯಿಂದ ನಡೆದುಬಂದ ಪದ್ಧತಿಯೆಂದು ಬೇರೆ ಹೇಳಬೇಕಾಗಿಲ್ಲ. ಕಥೆಯ ಕಾಲ, ದೇಶಗಳ ಗಣನೆಯಿಲ್ಲದೆ ಉರ್ದು, ಹಿಂದಿ, ಮರಾಠಿ, ಇಂಗ್ಲೀಷ್ ಭಾಷೆಯ ವಾಕ್ಯ ಗಳನ್ನು ಬಳಸಿರುವುದನ್ನು ಕಾಣುತ್ತೇವೆ. ಇನ್ನು ಐತಿಹಾಸಿಕ ನಾಟಕಗಳಲ್ಲಿಯೂ ಗ್ರಾಂಥಿಕವಾದ ಭಾಷೆಯೇ ಮುಂದುವರೆಯಿತು. ಪೌರಾಣಿಕ ಕೃತಿಗಳಲ್ಲಿ ಸಂಗೀತದ್ದೇ ಮೇಲುಗೈಯಾದರೆ ಇಲ್ಲಿ ಗದ್ಯಕ್ಕೆ ಪ್ರಾಶಸ್ತ್ಯ. ನಾಯಕ, ನಾಯಕಿ ಪಾತ್ರಗಳು ಉದ್ದುದ್ದ ಭಾಷಣ ಮಾಡುವಂತೆ ದೀರ್ಘವಾಗಿ ಮಾತುಗಳನ್ನಾಡುತ್ತವೆ. ಇದರಿಂದ ಅಭಿನಯಕ್ಕೆ ಅವಕಾಶ ಸಿಗದೆ ಕೆಲವೊಮ್ಮೆ ಸನ್ನಿವೇಶಗಳು ನೀರಸವೆನಿಸುತ್ತಿದ್ದವು. ರಾಷ್ಟ್ರೀಯ ಚಳುವಳಿಯ ಸಂದರ್ಭದಲ್ಲಿ ರೂಪ ಗೊಂಡ ನಾಟಕಗಳಲ್ಲಿ ಮಾತ್ರ ಆಡುಭಾಷೆಗೆ ಹೆಚ್ಚಿನ ಅವಕಾಶ ಸಿಕ್ಕಿತು. ಐತಿಹಾಸಿಕ ಕಥೆಗಳಿಗೆ ಯೋಗ್ಯ ಪರಿಸರ ನಿರ್ಮಿಸಲು ಕೆಲ ನಾಟಕಕಾರರು ಲಾವಣಿ, ದಾಸರ ಪದಗಳನ್ನು ಶರಣರ ವಚನಗಳನ್ನು ಬಳಸಿಕೊಂಡರು. ಆರಂಭದ ಸಾಮಾಜಿಕ ನಾಟಕಗಳನ್ನು ಪರಿಶೀಲಿ ಸಿದರೆ ಅವುಗಳ ಭಾಷೆ ಕೂಡ ಪೌರಾಣಿಕ ಜಾಡಿನಲ್ಲಿಯೇ ಮುಂದುವರೆದಿದ್ದು ಗೊತ್ತಾಗುತ್ತದೆ. ಈ ಮಾತಿಗೆ ಗರುಡ ಸದಾಶಿವರಾಯ, ಕಂದಗಲ್ ಹನುಮಂತರಾಯರ ನಾಟಕಗಳೇ ನಿದರ್ಶನ, ಕೋಲ ಶಾಂತಪ್ಪ, ಜಿ. ಜಿ. ಹೆಗಡೆ, ಎಚ್. ಟಿ. ಮಹಾಂತೇಶ ಶಾಸ್ತ್ರಿಗಳ ರಚನೆಗಳಲ್ಲಿ ವಸ್ತುವಿಗೆ ತಕ್ಕ ಸರಸ ಸುಂದರ ಭಾಷಾ ಪ್ರಯೋಗ ಅಳವಟ್ಟಿತು. ಈ ನಾಟಕಕಾರರ ಪ್ರಾಸಮಯತೆಯಿಂದ ಸಂಭಾಷಣೆ ಕೃತಕವೆನಿಸಿ ಧ್ವನಿಸಬೇಕಾದ ಅರ್ಥ ಧ್ವನಿಸುತ್ತಿರಲಿಲ್ಲ. ಕೆ. ಎನ್. ಸಾಳುಂಕೆ, ಪಿ. ಬಿ. ಧುತ್ತರಗಿ, ಎಚ್. ಎನ್. ಹೂಗಾರ ಮುಂತಾದ ಇತ್ತೀಚಿನ ನಾಟಕಕಾರರು ದಿನ ಬಳಕೆಯ ಮಾತಿಗೆ ಅಗ್ರಸ್ಥಾನ ಕೊಟ್ಟರಾದರೂ ಅದರಲ್ಲಿಯೇ ಪ್ರಾಸದ ಆಕರ್ಷಣೆ ಹೆಚ್ಚಿಸಲು ಹೋಗಿ ಅರ್ಥಪರಿಣಾಮಕ್ಕೆ ಗಮನ ನೀಡಲಿಲ್ಲ.

ಪೌರಾಣಿಕ ನಾಟಕಗಳು ಭಕ್ತಿಯನ್ನು, ಐತಿಹಾಸಿಕ ನಾಟಕಗಳು ರಾಷ್ಟ್ರೀಯ ಪ್ರಜ್ಞೆ ಯನ್ನು, ಸಾಮಾಜಿಕ ನಾಟಕಗಳು ಸಮಕಾಲೀನ ಬದುಕನ್ನು ಬಿಂಬಿಸಲು ಮುಂದಾದವಾದರೂ ಇವೆಲ್ಲವುಗಳ ಒಟ್ಟು ಧೋರಣೆಯೆಂದರೆ ನೀತಿಪ್ರತಿಪಾದನೆ. ಮನರಂಜನೆಯ ನೆವದಲ್ಲಿ ಬಳಸಿಕೊಂಡ ವಸ್ತುವನ್ನು ಅತಿರೇಕದ ಧಾಟಿಯಲ್ಲಿಯೇ ನಿರೂಪಿಸುವ ಸಂದರ್ಭದಲ್ಲಿ ರಚನಾ ಕೌಶಲ್ಯ ಶಿಥಿಲಗೊಳ್ಳುವುದು ಈ ನಾಟಕಗಳ ದೊಡ್ಡ ಕೊರತೆ. ವೃತ್ತಿರಂಗಭೂಮಿ ಪ್ರೇಕ್ಷಕರು ಸಂಕೀರ್ಣತೆಯನ್ನು ಸ್ವೀಕರಿಸದಿರುವುದರಿಂದ ಇಲ್ಲಿ ಒಳ್ಳೆಯವರು, ಕೆಟ್ಟವರು ಎಂಬ ಸರಳ ಪಾತಳಿಯ ಮೇಲೆಯೆ ಪಾತ್ರಗಳ ಚಿತ್ರಣವಾಗುತ್ತದೆ. ಒಳ್ಳೆಯವರಿಗೆ ರಕ್ಷೆ, ಕೆಟ್ಟವರಿಗೆ ಶಿಕ್ಷೆಯಾಗುವುದನ್ನು ಅಪೇಕ್ಷಿಸುವುದರಿಂದ ಇದೇ ಚೌಕಟ್ಟಿನಲ್ಲಿ ಕಥೆ ರೂಪಗೊಳ್ಳುತ್ತದೆ. ಇಲ್ಲಿಯ ಪ್ರೇಕ್ಷಕರಿಗೆ ಕಥೆ ಎಲ್ಲಿಯೂ ಗೊಂದಕ್ಕೀಡುಮಾಡದಂತಿರಬೇಕು. ಎಲ್ಲವೂ ಕ್ರಮವಾಗಿ ನಡೆದು ಸುಖಾಂತದಲ್ಲಿ ಮಂಗಲವಾಗಬೇಕು. ಇಂದು ನೋಡಿದ ನಾಟಕ ಮರುದಿನ ಕಥಾರೂಪವಾಗಿ ಹೇಳುವಂತಿರಬೇಕು. ಪ್ರೇಕ್ಷಕರ ಈ ಮನೋಭಾವದ ಹಿನ್ನೆಲೆಯಲ್ಲಿಯೇ ವೃತ್ತಿರಂಗಭೂಮಿಯ ನಾಟಕಗಳು ರಚನೆಯಾಗುತ್ತವೆ.

ಇನ್ನು ಸಾಮಾಜಿಕ ನಾಟಕಗಳ ವಸ್ತು ವೈವಿಧ್ಯ ಗಮನಾರ್ಹವಾದುದು. ಬಡತನದ ಸಮಸ್ಯೆ, ಜಾತಿಯ ಸಮಸ್ಯೆ, ವೇಶ್ಯಾ ಸಮಸ್ಯೆ, ವಿಧವಾ ಸಮಸ್ಯೆ, ಅಂಗವಿಕಲರ ಸಮಸ್ಯೆ, ಮುದುಕರ ಸಮಸ್ಯೆ, ವರದಕ್ಷಿಣೆ ಸಮಸ್ಯೆ, ಬಾಲ್ಯ ವಿವಾಹ ಸಮಸ್ಯೆ, ತಬ್ಬಲಿಗಳ ಸಮಸ್ಯೆ, ಡಾಂಭಿಕ ಸನ್ಯಾಸಿಗಳ ಸಮಸ್ಯೆ, ಗಂಡುಹೆಣ್ಣಿನ ಸಮಸ್ಯೆ, ಅಕ್ಕತಂಗಿ, ಅಣ್ಣತಮ್ಮ, ಅತ್ತೆಸೊಸೆ, ಸತಿಪತಿ, ತಂದೆ ಮಕ್ಕಳು, ನಾದಿನಿಯರ ಮಧ್ಯದೊಳಗಿರುವ ಸಮಸ್ಯೆ- ಹೀಗೆ ವೃತ್ತಿರಂಗ ಭೂಮಿಯ ಸಾಮಾಜಿಕ ನಾಟಕಗಳು ಬಿಡಿಸಲು ಹೊರಟ ಸಮಸ್ಯೆಗಳು ಹಲವಾರು. ಕಾಳಸಂತೆ, ಪಾಶ್ಚಾತ್ಯರ ಅನುಕರಣೆ, ನಿರುದ್ಯೋಗ, ವರದಕ್ಷಿಣೆ, ವಿಧವಾ ವಿವಾಹ, ಸಿರಿವಂತರ ದೌರ್ಜನ್ಯ, ಹೆಣ್ಣಿನ ಶೋಷಣೆ, ಮುಖಂಡರ ದಬ್ಬಾಳಿಕೆ ಮತ್ತು ವೇಶ್ಯಾ ಸಮಸ್ಯೆಗಳಂಥ ಗಂಭೀರ ಸಮಸ್ಯೆಗಳನ್ನು ಬಿಡಿಸಲು ಹೊರಟ ನಾಟಕಗಳು. ಬ್ಲಾಕ್ ಮಾರ್ಕೆಟ, ಹಳ್ಳಿಹುಡುಗಿ, ಬಡತನದ ಭೂತ, ವರನೋಡಿ ಹೆಣ್ಣು ಕೊಡು, ಕಂಕುಮ, ಸಂಪತ್ತಿಗೆ ಸವಾಲ್, ಮಾತಂಗ ಕನ್ಯಾ, ಗೌಡ್ರ ಗದ್ಲ ಮತ್ತು ಸೂಳೆಗೆ ಗಂಡ ಯಾರು ? ಈ ಕೃತಿಗಳು ಯಾವ ವೈಚಾರಿಕ ನಾಟಕಗಳಿಗೂ ಕಡಿಮೆಯಿಲ್ಲದಂತೆ ರಚನೆಗೊಂಡವು. ಆದರೆ ನಿರೂಪಣೆಯ ತಂತ್ರದಲ್ಲಿ ಮಾತ್ರ ಹಾಸ್ಯಕ್ಕೆ, ಮನರಂಜನೆಗೆ ಗಮನಕೊಡುವುದರಿಂದ ಸಮಸ್ಯೆ ಹಗುರಾಗಿ ಪರಿಹಾರ ಸುಲಭವಾಗಿ ಪ್ರೇಕ್ಷಕರ ಮೇಲೆ ಮಾಡಬೇಕಾದ ಪರಿಣಾಮ ಮಾಡದೆಹೋಗುತ್ತವೆ.

ಇನ್ನು ಇತ್ತೀಚಿನ ಸಾಮಾಜಿಕ ನಾಟಕಗಳ ಗಮನ ಸೆಳೆಯುವ ಅಂಶವೆಂದರೆ ನಾಟಕದ ಹೆಸರುಗಳು. ಜನರ ಕುತೂಹಲ ಕೆರಳಿಸುವಂಥ ಪ್ರಾಸಬದ್ಧ ಹೆಸರುಗಳನ್ನಿಡುವುದು ಈಗ ವಿಶೇಷವಾಗಿದೆ. ಸೂಳೆಗೂ ಗೊತ್ತು ತಾಳಿಯ ಕಿಮ್ಮತ್ತು, ಶೆಟ್ಟಿಯ ಹಾರಾಟ ಚೆಂದ್ರಿಯ ಚೆಲ್ಲಾಟ, ಕೈಲಾಗದ ಗಂಡ ಕೈಲಾಸ ಕಂಡ, ತಾಳಿಕಟ್ಟಿದರೂ ಗಂಡನಲ್ಲ, ಮದುವೆಯಾದರೂ ಮಡದಿಯಲ್ಲ, ಶೀಲಗೆಟ್ಟರೂ ಸೂಳೆಯಲ್ಲ, ರೀತಿ ತಪ್ಪಿದರೂ ನೀತಿ ಬಿಡಲಿಲ್ಲ, ಯಾಕವ್ವ ಗರತಿ ನನ್ಯಾಕ ಮರತಿ, ಕುಂಟ ಕುಲಕರ್ಣಿ ತುಂಟ ತಳವಾರ, ಹಾಲಿಗೆ ಬಂದ ಉಕ್ಕು ಹೆಣ್ಣಿಗೆ ಬಂದ ಸೊಕ್ಕು, ಕಳ್ಳದೇವರಿಗೆ ಸುಳ್ಳುಪೂಜಾರಿ, ಹಣ್ಣು ಮಾರುವ ಹೆಣ್ಣು, ಹೆಣ್ಣಿನ ಛಲ ಗಂಡಿನ ಬಲ, ಹೆಣ್ಣಿನ ಹಟ ಗಂಡಿನ ಚಟ, ಸಂತೆ ಮುಗಿದರೂ ಚಿಂತೆ ತಪ್ಪಿಲ್ಲ, ಪ್ರೀತಿ ಅರಳಿತು ಜನ್ಮ ಉಳಿಯಿತು, ಮುದುಕನ ಮದುವೆ, ಗಂಡ ಬಿಟ್ಟ ಗರತಿ, ಕಲಿತ ಕಳ್ಳ, ಬಂಜೆ ತೊಟ್ಟಿಲು ಇತ್ಯಾದಿ. ಈಚಿನ ಹೊಸ ನಾಟಕಕಾರರಂತೂ ವಸ್ತು, ವಿಷಯ, ಶೈಲಿ, ತಂತ್ರಗಳ ಬಗ್ಗೆ ವಿಚಾರಿಸುವುದಕ್ಕಿಂತ ಅದಕ್ಕಿಡಬೇಕಾದ ಹೆಸರಿನ ಬಗೆಗೆ ಹೆಚ್ಚು ತಲೆ ಕೆಡಿಸಿಕೊಳ್ಳುತ್ತಾರೆ. ಇವು ಎಷ್ಟು ಜನರನ್ನು ತಾನೆ ಆಕರ್ಷಿಸಬಹುದು ? ಹೆಸರಿಗೆ ತಕ್ಕಂತೆ ಉಸಿರು ತುಂಬುವ ಕೆಲಸ ಇಂದು ನಡೆಯಬೇಕಾಗಿದೆ.

ಅಡಿಟಿಪ್ಪಣಿಗಳು

೧. ಡಾ. ಎಸ್. ಎಸ್. ಕೋತಿನ: `ನೆಲ್ಲೂರ ನಂಬೆಕ್ಕ'- ಜ್ಞಾನದೇಗುಲ ಅಭಿನಂದನ ಗ್ರಂಥ ಸಂ: ವಿ. ಜಿ. ಹಿರೇಮಠ, ಪುಟ ೨೩೭

೨. ಕೀರ್ತೀನಾಥ ಕುರ್ತಕೋಟಿ - ವಿಮರ್ಶೆಯ ವಿನಯ ; ನಾಟಕ ಪು. ೧೫೭

೩. ಸಂದರ್ಶನ : ಅಶೋಕ ಚಂದರಗಿ ೨೬. ೧. ೮೯

೪. ಮೊದಲ ಮರಾಠಿ ನಾಟಕಕಾರರು ಕನ್ನಡ ಯಕ್ಷಗಾನ ಬಯಲಾಟಗಳಿಂದ, ಚುರಮರಿ ಶೇಷಗಿರಿರಾಯರ ಅನುವಾದಿತ ಶಾಕುಂತಲದಿಂದ ಪ್ರೇರಣೆ ಪಡೆದಿರುವುದನ್ನು ಗಮನಿಸಬೇಕು.

೫. ತ. ಸು. ಶಾಮರಾಯ -ಕನ್ನಡ ನಾಟಕ -ಪು. ೧೬೫

೬. ಕೆ. ಮರುಳಸಿದ್ದಪ್ಪ, ಆಧುನಿಕ ಕನ್ನಡ ನಾಟಕ (ವಿಸ್ತೃತ ಮುದ್ರಣ) ಪು. ೧೩೧

೭. ಬಿ. ಪುಟ್ಟಸ್ವಾಮಯ್ಯ - ಪೌರಾಣಿಕ ನಾಟಕಗಳು, ಕನ್ನಡ ರಂಗಭೂಮಿ ನಡೆದು ಬಂದ ದಾರಿ, ಸಂ : ಡಾ. ಶ್ರೀರಂಗ ಪು. ೭೫

೮. ಕೆ. ಮರುಳಸಿದ್ದಪ್ಪ - ಆಧುನಿಕ ಕನ್ನಡ ನಾಟಕ, ಪು. ೨೦೮

೯. ಡಾ. ಎಚ್. ಕೆ. ರಂಗನಾಥ - ಕರ್ನಾಟಕ ರಂಗಭೂಮಿ, ಪು. ೧೪೩

೧೦. ನಲವಡಿ ಶ್ರೀಕಂಠಶಾಸ್ತ್ರಿಗಳು -`ಸೋಹಂ ' ನಾಟಕದ ಮುನ್ನುಡಿಯಿಂದ

ಹವ್ಯಾಸಿ ನಾಟಕ

-ಶಾಲಿನಿ ರಘುನಾಥ

ಹವ್ಯಾಸಿ ರಂಗಭೂಮಿಯ ಉದಯದೊಂದಿಗೆ ಕನ್ನಡದಲ್ಲಿ ಹವ್ಯಾಸಿ ನಾಟಕಸಾಹಿತ್ಯ ಪರಂಪರೆಯೂ ಪ್ರಾರಂಭವಾಯಿತೆನ್ನಬಹುದು. ಅದಕ್ಕೂ ಮೊದಲು ಐತಿಹಾಸಿಕವಾಗಿ ಮಿತ್ರವಿಂದಾಗೋವಿಂದ (೧೭೦೦) ಕನ್ನಡದ ಮೊದಲ ನಾಟಕ, ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ (೧೮೮೭) ಕನ್ನಡದ ಮೊದಲ ಸ್ವತಂತ್ರ ಸಾಮಾಜಿಕ ನಾಟಕ. ಶಿವರಾಮ ಧಾರೇಶ್ವರರ `ಕನ್ಯಾವಿಕ್ರಯ'. ವೆಂಕಟರಂಗೋಕಟ್ಟಿಯವರ `ಆರುಬೆರಳಿನ ಕುರುಹು' ಶೇಷದಾಸಾಚಾರ್ಯರ `ಸುವದನಾ ಭಾಸ್ಕರ ' ಮುಂತಾದವು ಅಲ್ಲೊಂದು ಇಲ್ಲೊಂದರಂತೆ ಆರಂಭಕಾಲದಲ್ಲಿ ಬಂದ ಕೆಲವೇ ಸಾಮಾಜಿಕ ನಾಟಕಗಳು. ಆದ್ದರಿಂದ ನಿಜವಾದ ಅರ್ಥದಲ್ಲಿ ಕೈಲಾಸಂ, ಶ್ರೀರಂಗರಿಂದಲೇ ಈ ಶತಮಾನದ ಎರಡನೆಯ ದಶಕದಿಂದ ಕನ್ನಡದಲ್ಲಿ ಹವ್ಯಾಸಿನಾಟಕ ಸಾಹಿತ್ಯ ಪರಂಪರೆ ಪ್ರಾರಂಭವಾಯಿತೆನ್ನಬಹುದು. ಈ ದೃಷ್ಟಿಯಿಂದ ಕನ್ನಡ ಹವ್ಯಾಸಿ ನಾಟಕ ಸಾಹಿತ್ಯ ಪರಂಪರೆಗೆ ಎಪ್ಪತ್ತೈದು ವರ್ಷಗಳ ಇತಿಹಾಸದಕ್ಕುತ್ತದೆ.

ಕನ್ನಡದಲ್ಲಿ ಹವ್ಯಾಸಿನಾಟಕಗಳ ಸೃಷ್ಟಿಗೆ ಕಂಪನಿನಾಟಕಗಳು ಮುಖ್ಯ ಕಾರಣವೆನ್ನುವುದು ಒಂದು ಅರ್ಥದಲ್ಲಿ ವಿಪರ್ಯಾಸವೆನ್ನಿಸಿದರೂ ವಾಸ್ತವ. ಸಮಕಾಲೀನ ಪ್ರಜ್ಞೆಯಿಂದ ವಿಮುಖರಾಗಿದ್ದಲ್ಲದೇ ಐತಿಹಾಸಿಕ ನಾಟಕಗಳನ್ನು ತಮ್ಮದೇ ಆದ ಶೈಲಿಯಲ್ಲಿ ಪ್ರದರ್ಶಿಸುತ್ತ ಬಂದ ಕಂಪನಿ ನಾಟಕಗಳು ಬರಬರುತ್ತ ಜನರ ಮನಸ್ಸನ್ನು ಮೊದಲಿನಂತೆ ರಂಜಿಸದಾದವು. ಬ್ರಿಟಿಷ ವಸಾಹತುಶಾಹೀ ವ್ಯವಸ್ಥೆ, ಇಂಗ್ಲೀಷ ಶಿಕ್ಷಣ, ಪಾಶ್ಚಾತ್ಯ ನಾಗರಿಕತೆಗಳ ಪರಿಣಾಮವಾಗಿ ಹೊಸರೀತಿಯ ಮಧ್ಯಮವರ್ಗ ಭಾರತದಲ್ಲಿ, ಅದರಂತೆ ಕರ್ನಾಟಕದಲ್ಲಿ ಸೃಷ್ಟಿಯಾಗಿತ್ತು. ಅವರನ್ನು ಆಕರ್ಷಿಸಬಲ್ಲ ತಾಕತ್ತು ವೃತ್ತಿರಂಗಭೂಮಿಯ ನಾಟಕಗಳಿಗಿ ಇಲ್ಲವಾಗಿತ್ತು. ಸವಕಲಾಗಿರುವ ಮೌಲ್ಯಗಳ ಪ್ರದರ್ಶನ, ಆದರ್ಶೀಕೃತ ಪಾತ್ರಗಳು ಅಸಹಜ ವೇಷಭೂಷಣಗಳು, ಕೃತಕ ಸಂಭಾಷಣೆಗಳು, ಅಭಿನಯಾತಿರೇಕ. ಹಿಡಿತವಿಲ್ಲದ ನೆರಳು ಬೆಳಕಿನ ವ್ಯವಸ್ಥೆ ಮುಂತಾದವುಗಳಿಂದಾಗಿ ವಿದ್ಯಾವಂತ ಪ್ರೇಕ್ಷಕರು ಬೇಸತ್ತಿದ್ದರು. ಷೇಕ್ಸಪಿಯರನ ಅನುವಾದ ನಾಟಕಗಳೂ ರಂಗದ ಮೇಲೆ ಪರಿಣಾಮಕಾರಿ ಯಾಗಿ ಮೂಡಿಬರದೇ ಹೊಸ ಬಗೆಯ ಪ್ರಯೋಗಗಳಿಗಾಗಿ ಜನ ಕಾತರಿಸಿದ್ದರು. ನಾಟಕ, ಇತರ ಕಲಾಸಾಹಿತ್ಯ ಪ್ರಕಾರಗಳಿಗಿಂತಲೂ ಹೆಚ್ಚು ಪ್ರಜ್ಞಾಶೀಲವಾದ ಮತ್ತು ಸ್ವಯಂ ಪ್ರಜ್ಞೆಯಿಂದ ಕೂಡಿರುವ ಪ್ರಕಾರ. ಕಂಪನಿ ನಾಟಕಗಳು ದೃಶ್ಯರಚನೆ ಮತ್ತು ಸಂಗೀತಗಳ ಮೂಲಕ ಮನರಂಜನೆಯನ್ನು ಒದಗಿಸಿದರೂ ನಾಟಕ ಪ್ರಯೋಗಗಳನ್ನು ಒಂದು ಮಹತ್ವದ ಕಲೆಯಾಗಿ

ಲು ಅವುಗಳಿಗೆ ಸಾಧ್ಯವಾಗಲಿಲ್ಲ. ಅಂತಹ ಸಂದರ್ಭದಲ್ಲಿ ಆಂಗ್ಲವಿದ್ಯಾಭ್ಯಾಸವನ್ನು ಪಡೆದು ಿಂಡಿನಲ್ಲಿಯೇ ಬಹುಕಾಲವಿದ್ದು, ಅಲ್ಲಿಯ ನಾಟಕ ಸಾಹಿತ್ಯ ಹಾಗೂ ರಂಗಪರಂಪರೆಯನ್ನು ಾಗಿ ಅಭ್ಯಾಸಮಾಡಿ, ಕರ್ನಾಟಕಕ್ಕೆ ಹಿಂತಿರುಗಿದ ಕೈಲಾಸಂ, ಶ್ರೀರಂಗರು ಹೊಸಬಗೆಯ ೋಗಗಳನ್ನು ಹುಟ್ಟುಹಾಕಿದರೆನ್ನಬಹುದು.

ಇಪ್ಪತ್ತನೆಯ ಶತಮಾನದ ಮೊದಲದಶಕದಲ್ಲಿ ಧಾರವಾಡದ ಭಾರತಕಲೋತ್ತೇಜಕ ೀತ ಸಮಾಜ (೧೯೦೪) ಬೆಂಗಳೂರಿನ `ಅಮೆಚೂರ್ ಡ್ರಾಮಾಟಿಕ್ ಅಸೋಸಿಯೇಷನ್ ೦೯) ಮುಂತಾದ ಹವ್ಯಾಸಿ ಕಲಾತಂಡಗಳು ಉದಯಿಸಿ ಹವ್ಯಾಸಿ ರಂಗಭೂಮಿಯ ತ್ಯಕ್ಕಾಗಿ ಕೆಲವರಿಂದ ನಾಟಕ ಬರೆಸತೊಡಗಿದರು. ಉತ್ತಮ ನಾಟಕಗಳಿಗಾಗಿ, ಬೆಂಗಳೂರಿನ ುಚೂರ್ ಸಂಸ್ಥೆ ೧೯೧೯ರಲ್ಲಿ ನಾಟಕ ರಚನಾ ಸ್ಪರ್ಧೆಯನ್ನು ಏರ್ಪಡಿಸಿತ್ತು. ಅದರಲ್ಲಿ ಾಸಂರವರ `ಟೊಳ್ಳುಗಟ್ಟಿ' ಪ್ರಥಮ ಬಹುಮಾನವನ್ನೂ, ಸಂಸರ `ಸುಗುಣಗಂಭೀರ ' ಡನೆಯ ಬಹುಮಾನವನ್ನೂ ಗಿಟ್ಟಿಸಿಕೊಂಡವು. ಇಲ್ಲಿಂದ ಮುಂದೆ ಲಿಖಿತನಾಟಕಗಳು ೃಯಾಗತೊಡಗಿದವು. ಅನೇಕರು ಈ ಕ್ಷೇತ್ರದಲ್ಲಿ ಪ್ರಯೋಗಗಳನ್ನು ನಡೆಸತೊಡಗಿ ಸಬಗೆಯ ನಾಟಕಗಳ ಸೃಷ್ಟಿಗೆ ಕಾರಣರಾದರು. ಕನ್ನಡದಲ್ಲಿ ಹವ್ಯಾಸಿ ರಂಗಭೂಮಿ ತ್ತು ನಾಟಕ ಸಾಹಿತ್ಯದ ನಂಟು ಈ ಬಗೆಯಲ್ಲಿ ಪ್ರಾರಂಭವಾಗಿದ್ದರೂ, ಮುಂದೆ ಕನ್ನಡದಲ್ಲಿ ತವಾದ ನಾಟಕ ಸಾಹಿತ್ಯವೆಲ್ಲ ರಂಗಭೂಮಿಯ ಸಲುವಾಗಿಯೇ ರಚಿಸಿದ್ದು ಎನ್ನುವಂತಿಲ್ಲ. ಗಭೂಮಿ ನಾಟಕ ಸಾಹಿತ್ಯವನ್ನೇ ಯಾವಾಗಲೂ ಅವಲಂಬಿಸಿಲ್ಲ ಅದಕ್ಕೆ ಸಾಹಿತ್ಯಕೃತಿ ವಾರ್ಯವೇನಲ್ಲ ಎಂಬುದೂ ನಿಜ. ನಮ್ಮ ಜನಪದ ರಂಗಭೂಮಿ ಇದನ್ನು ಸಾಬೀತು ಳಿಸುತ್ತದೆ. ಆಧುನಿಕ ನಾಟಕಕಾರರಲ್ಲಿ ಕೆಲವರು ರಂಗಭೂಮಿಯೊಂದಿಗೆ ನಿಕಟ ಪರ್ಕವಿಟ್ಟುಕೊಂಡವರು. ಅಂಥವರು ರಂಗಸಾಧ್ಯತೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡೇ ಟಕ ರಚಿಸಿದ್ದಾರೆ. ಇತ್ತೀಚಿನ ಅನೇಕ ನಾಟಕಗಳು ರಂಗಭೂಮಿಯಲ್ಲಿ ಪ್ರಯೋಗಗಳಿಂದ ಷ್ಕೃತಗೊಂಡೇ ಮುದ್ರಣಗೊಳ್ಳುತ್ತಿವೆ. ಮತ್ತೆ ಕೆಲವರಿಗೆ ರಂಗಭೂಮಿ, ನಾಟಕ ತ್ರಗಳನ್ನು ಒದಗಿಸಿದೆ. ಆದ್ದರಿಂದ ಕಾದಂಬರಿ ಕಾವ್ಯಗಳ ಹಾಗೆಯೇ ಅಂಥವರಿಗೆ ನಾಟಕವೂ ದು ಸಾಹಿತ್ಯ ಮಾಧ್ಯಮವಾಗಿದೆ. ಮತ್ತೆ ಕೆಲವು ಲೇಖಕರಿಗೆ ರಂಗಭೂಮಿಯ ನೇರ ಪರ್ಕವೇ ಇಲ್ಲ. ಈ ಬಗೆಯ ನಾಟಕಗಳು ರಂಗಪ್ರಯೋಗದ ದೃಷ್ಟಿಯಿಂದ ಸಾರ್ಥಕ ಿರಬಹುದು ಅಥವಾ ಇರಲಿಕ್ಕಿಲ್ಲ. ಕೆ. ವಿ. ಸುಬ್ಬಣ್ಣನಂಥವರು ನಾಟಕ ಸಾಹಿತ್ಯ ಧ್ಯಮವೇ ಬೇರೆ, ನಾಟಕ ರಂಗಮಾಧ್ಯಮವೇ ಬೇರೆ. ಅವುಗಳನ್ನು ವಿಮರ್ಶಿಸುವ ನದಂಡಗಳೂ ಬೇರೆ ಬೇರೆ ಇರಬೇಕು ಎಂದು ಅಭಿಪ್ರಾಯಪಡುತ್ತಾರೆ (ಸುಬ್ಬಣ್ಣಕೆ. ೧೯೮೨ ಪ್ರ. ೮೪) ಉಳಿದೆಲ್ಲ ಸಾಹಿತ್ಯ ಪ್ರಕಾರಕ್ಕಿಂತ ನಾಟಕ ಸಾಹಿತ್ಯ ಪ್ರಕಾರ ೀರ್ಣವಾದ ಕಲೆಯಾಗಿದ್ದು, ನಾಟಕ ಸಾಹಿತ್ಯ ಮತ್ತು ರಂಗಭೂಮಿ ಒಂದರಿಂದ ತ್ತೊಂದು ಪ್ರಭಾವಿತವಾಗಿರುವುದರಿಂದ ಸದ್ಯ ಹವ್ಯಾಸಿನಾಟಕಸಾಹಿತ್ಯವನ್ನು ಕುರಿತು ರ್ಚೆಮಾಡುವಾಗ ಸಹಜವಾಗಿಯೇ ರಂಗಭೂಮಿ ಪ್ರಸ್ತಾಪಗೊಳ್ಳುವುದು ಅನಿವಾರ್ಯ ುತ್ತದೆ. (ಅದಿಲ್ಲವಾದರೆ, `ಹವ್ಯಾಸಿ' ಶಬ್ದಕ್ಕೆ ಅರ್ಥವಿಲ್ಲದಂತಾಗುತ್ತದೆ). ನಾಟಕ ಂದು ಉತ್ತಮ ಸಾಹಿತ್ಯ ಕೃತಿಯಾಗಲಿಕ್ಕೆ ರಂಗಭೂಮಿ ಎಷ್ಟರಮಟ್ಟಿಗೆ ಪೂರಕವಾಗುತ್ತದೆ. ವಾ ನಾಟಕೀಯತೆಯ ಪರಿಕಲ್ಪನೆಯಲ್ಲಿ `ಗೆಸ್ಚರ್' ಸ್ಥಾನಮಾನವೇನು ? ನಾಟಕದ

ಸಾಹಿತ್ಯಿಕ ಭಾಷೆಯನ್ನು ರೂಪಿಸುವಲ್ಲಿ `ಗೆಸ್ಟರ್' ಎಂತಹ ಪಾತ್ರವಹಿಸುತ್ತವೆ. ಇತ್ಯಾ
ಪ್ರಶ್ನೆಗಳು ಪ್ರಸನ್ನರು ಹೇಳುವಂತೆ ಚರ್ಚೆಯಾಗದೆ ಹಾಗೆಯೇ ಉಳಿದು ಬಿಡುತ್ತವ
(ಪ್ರಸನ್ನ ೧೯೮೫ ಪು. ೫೨) ಪಾಶ್ಚಿಮಾತ್ಯ ರಂಗಭೂಮಿಯ ಪರಂಪರೆ ಮತ್ತು ಸಾಹಿತ್ಯಗ
ಅಧ್ಯಯನದ ಪ್ರಭಾವದಿಂದಾಗಿ ಹವ್ಯಾಸಿ ನಾಟಕ ಸಾಹಿತ್ಯ ಕನ್ನಡದ ಇತರ ಸಾಹಿತ
ಪ್ರಕಾರಗಳಿಗಿಂತ ಹೆಚ್ಚಿನ ಬದಲಾವಣೆಗಳಿಗೆ ಒಳಗಾಗಿದೆ. ಕೆಲವು ಪ್ರವೃತ್ತಿಗಳಂತೂ ಈ
ಬಂದು ಆಗ (ತಾತ್ಕಾಲಿಕ) ಹೊರಟು ಹೋಗಿವೆ. ಪ್ರಕಾಶ ಕಂಬತ್ತಳ್ಳಿ ಗುರುತಿಸಿರುವಂ
ವಾಸ್ತವಿಕ ರಂಗಭೂಮಿ, ಅಸಂಗತರಂಗಭೂಮಿ, ಬ್ರೆಕ್ಟ್‌ನ್ ಎಪಿಕ್ ರಂಗಭೂಮಿ, ಮತ್ತು
ಆಧುನಿಕ ಜಾನಪದ ರಂಗಭೂಮಿ, ಬೀದಿ ರಂಗಭೂಮಿ, ರಾಜಕೀಯ ಬಗೆಯ
ರಂಗಭೂಮಿಗಳ ರಂಗಸಿದ್ಧಾಂತಗಳ ಪ್ರಭಾವಗಳು ಕನ್ನಡ ನಾಟಕ ಸಾಹಿತ್ಯದ ಮೇಲೂ ಆಗಿವೆ
(ಕೃಷ್ಣಯ್ಯ ಎಂ. ಎಚ್. ೧೯೯೧ ಪುಟ ೬೧) ಈ ಹಿನ್ನೆಲೆಯಲ್ಲಿ ಕನ್ನಡ ಹವ್ಯಾಸಿ ನಾಟ
ಸಾಹಿತ್ಯ ಪ್ರವೃತ್ತಿಗಳನ್ನು ಅವಲೋಕಿಸೋಣ.

ಕನ್ನಡ ನಾಟಕಗಳಲ್ಲಿ ವಾಸ್ತವತೆ ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ ನಾಟ
ದಿಂದಲೇ ಪ್ರಾರಂಭವಾಗುತ್ತದೆ. ಅತ್ಯಂತ ಸಹಜವಾದ ಆಡುಮಾತಿನಲ್ಲಿ ಹವ್ಯಕ ಸಮಾಜ
ಅಂದಿನ ವಾಸ್ತವದ ಚಿತ್ರಣವನ್ನು ನಾಟಕಕಾರರು ನೀಡಿದ್ದಾರೆ. ಅದನ್ನು ಬಿಟ್ಟ
`ಕೈಲಾಸಂ'ರವರ ಕೃತಿಗಳಿಗೇ ನಾವು ಬರುತ್ತೇವೆ. ನಾಟಕಗಳ ಆಶಯವನ್ನು ಅವರು ತಮ
ಮೊದಲ ನಾಟಕ `ಟೊಳ್ಳುಗಟ್ಟಿ'ಯಲ್ಲಿಯೇ ಸೂಚಿಸಿದ್ದಾರೆ. ಪಾಶ್ಚಾತ್ಯ ನಾಗರೀಕತೆಯ
ಪ್ರಭಾವದಿಂದ ತನ್ನತನವನ್ನು ಕಳೆದುಕೊಳ್ಳುತ್ತಿದ್ದ, ಭಾರತೀಯ ಸಮಾಜವನ್ನು ಕೈಲಾಸ
ತಮ್ಮ ನಾಟಕಗಳಲ್ಲಿ ವಿಡಂಬಿಸಿ ತೋರಿಸಿದರು. ಕೆ. ಮರುಳಸಿದ್ದಪ್ಪನವರು `ಟೊಳ್ಳುಗಟ
'ಯ ಬಗ್ಗೆ ಛಿಮರ್ಶಿಸುತ್ತಾ `ಪಾಶ್ಚಾತ್ಯ ಸಂಸ್ಕೃತಿಯು ನಮ್ಮ ಸಮಾಜದ ಉನ್ನ
ಮೌಲ್ಯಗಳನ್ನು ಬೆಂಕಿಯಾಗಿ ದಹಿಸುತ್ತಿರುವಾಗ ಈ ಮೌಲ್ಯಗಳನ್ನು ಕಾಪಾಡಲು ಮಾಧ
ನಂತಹ ಧೀರರುಬೇಕು. ಪುಟ್ಟುವಿನಂತಹ ಪುಸ್ತಕದ ಹುಳುಗಳಲ್ಲವೆಂಬ ಸಂದೇಶ ಇಲ್ಲಿದೆ
ಪೂರ್ಣವಾಗಿದೆ. 'ಎಂದಿದ್ದಾರೆ (ಮರುಳಸಿದ್ದಪ್ಪ ಕೆ. ೧೯೯೩ ಪು. ೨೨೫) ಕೈಲಾಸಂ ಒಟ
ಹದಿನೇಳು ನಾಟಕಗಳನ್ನು ರಚಿಸಿದ್ದಾರೆ. ಅವುಗಳಲ್ಲಿ `ಪೋಲಿಕಿಟ್ಟಿ' ಬಂಡ್ವಾಳಿಲ್ಲದ ಬಡಾಯಿ
`ಅಮ್ಮಾವ್ರ ಗಂಡ', `ಹುತ್ತದಲ್ಲಿ ಹುತ್ತ ', `ಗಂಡಸ್ಕತ್ರಿ' ಮುಂತಾದವು ಪ್ರಸಿದ್ಧಿ ಪಡೆದವ
ಸಾಮಾಜಿಕ ಪ್ರತಿಷ್ಠೆ ಮತ್ತು ಡಂಭಾಚಾರಗಳ ವಿಡಂಬನೆ ಕೈಲಾಸಂ ಎಲ್ಲ ನಾಟಕಗಳಲ್ಲೂ
ಕಂಡುಬರುತ್ತವೆ. ಈ ನಾಟಕಗಳೆಲ್ಲ ಪ್ರಹಸನವರ್ಗಕ್ಕೆ ಸೇರಿದವು. ವಿಡಂಬನೆಯ
ಮೂಲಕವಾಗಿಯೇ ಸಮಾಜದ ದೋಷಗಳನ್ನು, ಸಮಸ್ಯೆಗಳನ್ನು ಎತ್ತಿತೋರಿಸುವಂತಹವ
ಷಾ, ಇಬ್ಸನ್, ಗಾಲ್ಸವರ್ದಿ ಮೊದಲಾದವರ ನಾಟಕಗಳಿಂದ ಸ್ಫೂರ್ತರಾಗಿ ಕೈಲಾಸಂ ಕನ್ನಡದ
ನಾಟಕಗಳನ್ನು ರಚಿಸಿದರು. ಆದರೆ ಅವರಿಗೆ ಷಾ ಅಥವಾ ಇಬ್ಸನ್ ಅವರ ಮೂಲ ಭೂ
ಕಾಳಜಿಗಳಾಗಲೀ ಅಥವಾ ತಂತ್ರದ ಬಗ್ಗೆ ಅವರಿಗಿದ್ದ ಎಚ್ಚರವಾಗಲೀ ದಕ್ಕದೇ ಹೋದವ
ಆದರೆ `ಕನ್ನಡಕ್ಕೊಬ್ಬನೇ ಕೈಲಾಸಂ' ಎಂಬ ಪ್ರಸಿದ್ಧಿ ಅವರಿಗೆ ಬಂದಿರುವದು ನಾಟಕದ
ಅವರು ಬಳಸಿದ ವಿಶಿಷ್ಟ ಭಾಷಾಪ್ರಯೋಗದಿಂದ ಮತ್ತು ಪಾಶ್ಚಾತ್ಯ ನಾಟಕಗಳಿಂದ ಪಡೆ
ಸಂವಿಧಾನ ಕೌಶಲ ಹಾಗೂ ಮಾತಿನ ಚಮತ್ಕೃತಿಗಳಿಂದಾಗಿ. ಕೈಲಾಸಂ ನಾಟಕ ಭಾ
ಅನನ್ಯವೆನಿಸಿದರೂ ಅದು, ವಿದ್ಯಾವಂತ ಮಧ್ಯಮವರ್ಗಕ್ಕೆ ಮುಖ್ಯವಾಗಿ ಸೀಮಿತವಾಯಿ

ನತೆಗೆ ನಾಟಕಮಾಧ್ಯಮಕ್ಕೆ ಅವಶ್ಯವಿದ್ದ ಕ್ರಿಯಾತ್ಮಕತೆಯನ್ನು ಸಂಪೂರ್ಣವಾಗಿ ಪಡೆದು ಳಲಾರದೇ ಹೋಯಿತು. ಇಷ್ಟಿದ್ದರೂ ಕೈಲಾಸಂ ಕನ್ನಡ ನಾಟಕಗಳಿಗೆ ವಾಸ್ತವತೆಯ ತಳಹದಿಯನ್ನು ಡಿದರು. ಅವರ ನಾಟಕಗಳಲ್ಲಿ ಚಿತ್ರಿತವಾದ ಸಮಸ್ಯೆಗಳು ಇಂದು ಆ ಪ್ರಮಾಣದಲ್ಲಿ ಲ್ಲವಾದರೂ ಅವುಗಳಿಗೆ ಸಾಂಸ್ಕೃತಿಕ ಮತ್ತು ಐತಿಹಾಸಿಕ ಮಹತ್ವವಿದ್ದೇ ಇದೆ.

ಕೈಲಾಸಂ ರವರ ಜೊತೆಗೆ `ಸಂಸ 'ರೂ ನಾಟಕ ರಚನೆಯನ್ನು ಪ್ರಾರಂಭಿಸಿದರು. ದರೆ ಕೈಲಾಸಂ ಪ್ರಮುಖವಾಗಿ ಸಾಮಾಜಿಕ ಸಮಸ್ಯೆಗಳನ್ನು ತಮ್ಮ ನಾಟಕಗಳಲ್ಲಿ ಚಿತ್ರಿಸುವ ಯತ್ನ ಮಾಡಿದರೆ, ಸಂಸರು ಐತಿಹಾಸಿಕ ವಸ್ತುಗಳ ಮೊರೆಹೋದರು. ಅವರು ಸುಮಾರು ೬ ನಾಟಕಗಳನ್ನು ಬರೆದಿದ್ದಾರೆನ್ನಲಾಗುತ್ತದೆ. ಆದರೆ ನಮಗವರು ಉಳಿಸಿದ್ದು ಕೇವಲ ಆರು ಟಕಗಳನ್ನು. ಇವೆಲ್ಲವೂ ಮೈಸೂರು ಅರಸರಿಗೆ ಸಂಬಂಧಿಸಿದವು. ಸಂಸರು ಸಂಸ್ಕೃತ ನಾಟಕ ರಂಪರೆ ಮತ್ತು ಷೇಕ್ಸಪಿಯರನ ನಾಟಕಗಳ ಪ್ರಭಾವಗಳಿಗೆ ಒಳಗಾದರೂ ಪಾತ್ರರಚನೆ ತ್ತು ಸಂಭಾಷಣಾ ಚಾತುರ್ಯಗಳಲ್ಲಿ ತಮ್ಮದೇ ವಿಶಿಷ್ಟತೆಯನ್ನು ಹೊಂದಿದ್ದಾರೆ. ಕನ್ನಡಕ್ಕೆ ಾರಿತ್ರಿಕ ನಾಟಕಗಳ ರಚನಾ ತಂತ್ರವನ್ನು ನೀಡಿದುದು ಅವರ ದೊಡ್ಡ ಕೊಡುಗೆ. ಜೊತೆಗೆ ಂಗಭೂಮಿಯ ನೇರ ಸಂಪರ್ಕ ಅವರಿಗೆ ಕೆಲಮಟ್ಟಿಗೆ ದೊರಕಿದ್ದು ಅದ್ಭುತವಾದ ರಂಗಪ್ರಜ್ಞೆ ವರ ನಾಟಕಗಳಲ್ಲಿದೆ. `ವಿಗಡ ವಿಕ್ರಮರಾಯ ,' `` ಬಿರುದಂತೆಂಬರಗಂಡ ',`ಸುಗುಣ ಂಭೀರ ' ಮುಂತಾದವು ಅವರ ನಾಟಕಗಳು. ವಿಗಡ ವಿಕ್ರಮರಾಯ ಸಂಸರ ನಾಟಕಗಳಲ್ಲೇ ೀಷ್ಠವಾದುದು. ವಿಕ್ರಮರಾಯನ ಪಾತ್ರ ಚಿತ್ರಣದಲ್ಲಿ ಸಂಸರ ಪ್ರತಿಭೆ ಅಸಾಧಾರಣವಾಗಿ ಲಸ ಮಾಡಿದೆ. ವೇಗವಾದ ಕಥಾ ನಿರೂಪಣೆ, ಸ್ಪಷ್ಟವಾಗಿ ಮೂರ್ತವೆತ್ತ ಪಾತ್ರಗಳು, ತ್ಯುಚಿತ ಸಂಭಾಷಣೆ, ಸ್ಮಾರಸ್ಯಕರ ಘಟನೆಗಳು ಮುಂತಾದವುಗಳಿಂದ ಸಂಸರ ನಾಟಕ ಳು ಉತ್ತಮವೆನಿಸಿಕೊಳ್ಳುತ್ತವೆ. ಇಷ್ಟಿದ್ದೂ ಅವರ ನಾಟಕಗಳಲ್ಲಿ ಹೆಚ್ಚಿನವು ರಂಗಭೂಮಿ ುನ್ನು ಕಂಡಿಲ್ಲ.

ದುರಂತದ ಕಲ್ಪನೆ ಕನ್ನಡ ನಾಟಕಸಾಹಿತ್ಯದಲ್ಲಿ ಬಂದುದು ಆಚಾರ್ಯ ಬಿ. ಎಂ ೀಯವರ ಪ್ರಯತ್ನದಿಂದಾಗಿ. ಗ್ರೀಕ್ ಮಾದರಿಯ ದುರಂತನಾಟಕಗಳನ್ನು ಅವರು ನ್ನಡಕ್ಕೆ ಒದಗಿಸಿದರು. ಈಸ್ಕಿಲಸ್‌ನ ಅನುವಾದ ನಾಟಕವಾಗಿ `ಪಾರಸಿಕರು' ಕೃತಿಯನ್ನು ನ್ನಡಕ್ಕೆ ನೀಡುವುದರೊಂದಿಗೆ, ರನ್ನನ ಗದಾಯುದ್ಧವನ್ನು ಅಲ್ಪ ಬದಲಾವಣೆಯೊಂದಿಗೆ ಂದು ಉತ್ತಮ ದುರಂತ ನಾಟಕವನ್ನಾಗಿ ಪರಿವರ್ತಿಸಿ ತೋರಿಸಿದರು. ಇದಲ್ಲದೇ ುರಾಣ ಕತೆಯೊಂದನ್ನು ಆಯ್ದುಕೊಂಡು ಅದರಲ್ಲಿಯ ಅಶ್ವತ್ಥಾಮನ್ ಪಾತ್ರದಲ್ಲಿ ುರಂತದ ಕಲ್ಪನೆಯನ್ನು ಹೊಸದಾಗಿ ಸೃಷ್ಟಿಸಿದರು. ಹೀಗೆ ಬಿ. ಎಂ. ಶ್ರೀ ಕನ್ನಡದಲ್ಲಿಯೇ ುರಂತ ನಾಟಕಗಳ ಹೊಸ ಸಾಧ್ಯತೆಗಳನ್ನು ತೋರಿಸಿದರು. ಈ ಪ್ರಭಾವ ಮುಂದಿನ ಟಕ ಸಾಹಿತ್ಯದ ಮೇಲಾಯಿತು. ಕುವೆಂಪುರವರ `ಸ್ಮಶಾನ ಕುರುಕ್ಷೇತ್ರ ,' `` ಬೆರಳ್‌ಗೆ ಿರಳ್' ಮುಂತಾದವು, ವಿ. ಸೀ ಯವರ `ಆಗ್ರಹ', ಸಿ. ಕೆ. ವೆಂಕಟರಾಮಯ್ಯನವರ ುಂಡೋದರಿ' ಗೋವಿಂದ ಪೈಯವರ `ಹೆಬ್ಬೆರಳು ' ಮುಂತಾದ ಕೃತಿಗಳನ್ನು ಇಲ್ಲಿ ಸರಿಸಬಹುದು.

ಕನ್ನಡ ನಾಟಕ ಕ್ಷೇತ್ರದಲ್ಲಿ ದೀರ್ಘಕಾಲ ಸೇವೆಗೈದವರು ಶ್ರೀರಂಗರು, ಅವರ ಮೊದಲ ನಾಟಕ `ಸ್ವಾರ್ಥತ್ಯಾಗ' ರಚಿತವಾದುದು ೧೯೨೦ ರಲ್ಲಿ ಶ್ರೀರಂಗರು ಸುಮಾರು ನೂರಕ್ಕೂ ಹೆಚ್ಚು ನಾಟಕಗಳನ್ನು ರಚಿಸಿದ್ದಾರೆ. ಕೈಲಾಸಂರವರಂತೆ ಇವರೂ ಇಂಗ್ಲೆಂಡಿನ ರಂಗಭೂಮಿಯ ನಿಕಟ ಪರಿಚಯ ಹೊಂದಿದವರು. ಕೈಲಾಸಂ ನಾಟಕಗಳಿಗಿಂತಲೂ ಇವರ ನಾಟಕಗಳಲ್ಲಿ ಸಾಮಾಜಿಕಪ್ರಜ್ಞೆ ದಟ್ಟವಾಗಿದೆ. ಆರಂಭದ ನಾಟಕಗಳಲ್ಲಿ ಸಾಮಾಜಿಕ ಸುಧಾರಣೆಯ ಹಂಬಲ ತೀವ್ರವಾಗಿದೆ. ಹರಿಜನ್ವಾರದಂತಹ ನಾಟಕ ಸನಾತನಿಗಳಿಂದ ಕಟು ಟೀಕೆಗೆ ಒಳಗಾಯಿತು. `ಶೋಕಚಕ್ರ 'ನಾಟಕದಲ್ಲಿ ಅವರು ಜನರ ಮೌಢ್ಯ ಕಪಟ ಮತ್ತು ಸ್ವಾರ್ಥಗಳನ್ನು ಎತ್ತಿ ತೋರಿಸಿದ್ದಾರೆ. ಸ್ವಾತಂತ್ರ್ಯೋತ್ತರ ಭಾರತದ ಪರಿಸ್ಥಿತಿಯು ಬದಲಾಗದೆ ಇದ್ದದ್ದು ಅವರನ್ನು ಕಳವಳಕ್ಕೀಡುಮಾಡಿದೆ. ಹೀಗೆ ನಾಟಕದ ಮೂಲಕ ಸಾಮಾಜಿಕ ಬದಲಾವಣೆಯನ್ನು ಕುರಿತು ಏನಾದರೂ ಮಾಡಲು ಸಾಧ್ಯ ಎಂಬ ಆಶಯದಿಂದ ಪ್ರಾರಂಭವಾದ ಶ್ರೀರಂಗರ ನಾಟಕ ರಚನೆ, ಏನೂ ಮಾಡಲು ಸಾಧ್ಯವಿಲ್ಲವೆಂಬ ನಿರ್ಧಾರಕ್ಕೆ ಬಂದು, ಮುಂದಿನ ಹಂತದಲ್ಲಿ ತಟಸ್ಥ ಧೋರಣೆಯನ್ನು ಹೊಂದಿದೆ. ಇದೇ ನಮ್ಮ ಸಾಮಾಜಿಕ ದುರಂತದ ಸಂಕೇತ ಆದರೂ ಶ್ರೀರಂಗರ ಕೊನೆ ಕೊನೆಯ ನಾಟಕಗಳಾದ `ರಂಗಭಾರತ' `ಕೇಳುಜನ ಮೇ ಜಯ' ಮುಂತಾದವು ತಟಸ್ಥ ಧೋರಣೆಯನ್ನು ಹೊಂದಿದ್ದರೂ ರಂಗಭೂಮಿಯ ಸಾಧ್ಯತೆಗಳ ದೃಷ್ಟಿಯಿಂದ ಪ್ರಯೋಗಶೀಲವೆನ್ನಿಸುತ್ತವೆ. ಶ್ರೀರಂಗರು ಸಾಮಾಜಿಕ ಸಮಸ್ಯೆಗಳನ್ನಷ್ಟೇ ಅಲ್ಲ. ನಾಟಕದ ಸಮಸ್ಯೆಗಳನ್ನು ಚರ್ಚಿಸಲು ಕೂಡ ನಾಟಕವನ್ನೇ ಮಾಧ್ಯಮವನ್ನಾಗಿ ಮಾಡಿಕೊಂಡಿದ್ದಾರೆ. ಕಂಪನಿ ನಾಟಕಗಳನ್ನು ಕುರಿತು ತೀವ್ರ ಅಸಮಾಧಾನವನ್ನು ಕೈಲಾಸಂರಂತೆ ಇವರೂ ವ್ಯಕ್ತಪಡಿಸಿದ್ದಾರೆ. ಜೊತೆಗೆ `ಪೂರ್ವರಂಗ ' `ಉತ್ತರ ರಂಗ ' `ಕತ್ತಲೆ ಬೆಳಕು ' `ಅಪರಾಧಂಗಳ ಕ್ಷಮಿಸೋ ' ಮುಂತಾದ ನಾಟಕಗಳಲ್ಲಿ ನಾಟಕ, ನಿರ್ದೇಶಕ, ನಟ, ರಂಗಭೂಮಿಗಳನ್ನು ಕುರಿತು ತಾತ್ವಿಕವಾಗಿ ಬಹಳಷ್ಟು ಆಲೋಚಿಸಿದ್ದಾರೆ. ಹೊಸ ಹೊಸ ತಂತ್ರಗಳನ್ನು ಬಳಸಿದ್ದಾರೆ. ಶ್ರೀರಂಗರ ರಂಗಪ್ರಜ್ಞೆ, ಭಾಷೆಯ ಕಠೋರವ್ಯಕ್ತಿನಿಷ್ಠತೆಯ ತೊಡಕನ್ನು ಮೀರಿ, ಅವರ ಕೆಲವು ನಾಟಕಗಳಿಗೆ ನಾಟಕೀಯ ಗುಣವನ್ನು ದೊರಕಿಸಿಕೊಟ್ಟಿದೆ. ಇದಕ್ಕೆ `ಕತ್ತಲೆ ಬೆಳಕು' ಉತ್ತಮ ಉದಾಹರಣೆ. ಶ್ರೀರಂಗರ ಇಂಥ ಪ್ರಯೋಗಗಳಿಂದಾಗಿ ಕನ್ನಡ ನಾಟಕ ಕ್ಷೇತ್ರದಲ್ಲಿ ಹೊಸ ಬಗೆಯ ನಾಟಕಗಳು ಹುಟ್ಟಿ ಕೊಳ್ಳಲು ಚಾಲನೆ ದೊರಕಿದಂತಾಯಿತು. ರಂಗಭೂಮಿಯ ಆಧುನಿಕ ಸೌಕರ್ಯಗಳನ್ನು ಬಳಸಿಕೊಂಡು ತಟಸ್ಥಧೋರಣೆಯಲ್ಲಿಯೂ ಶ್ರೀರಂಗರು ನಾಟಕ ಪ್ರಯೋಗಗಳಲ್ಲಿ ಹೊಸ ಸಾಧ್ಯತೆಗಳನ್ನು ಅನ್ವೇಷಿಸಿದರು.

ಕೈಲಾಸಂ, ಶ್ರೀರಂಗರಂತೆಯೇ ಶಿವರಾಮಕಾರಂತರೂ ಪ್ರಯೋಗ ಪ್ರಿಯರೇ. ಕಂಪನಿ ನಾಟಕಗಳನ್ನು ಕುರಿತು ಅವರೂ ಅಸಮಾಧಾನ ವ್ಯಕ್ತಪಡಿಸಿದವರೇ. ಕಾರಂತರು `ಗರ್ಭಗುಡಿ' `ಬಿತ್ತಿದ ಬೆಳೆ. '' ನಮ್ಮ ಜಾತಿ ,''ಹೇಗಾದರೇನು ' ಮುಂತಾದ ನಾಟಕಗಳನ್ನು ರಚಿಸಿರುವರಾದರೂ `ಗರ್ಭಗುಡಿ'ಯಲ್ಲಿ ವ್ಯಕ್ತವಾದ ಸಾಮಾಜಿಕ ಕಳಕಳಿ ಮಹತ್ವವಾದುದು. ಈ ನಾಟಕ ಧರ್ಮದ ಅವನತಿಯನ್ನು ಸಾಂಕೇತಿಕವಾಗಿ ನಿರೂಪಿಸುತ್ತದೆ.

ಮಾಸ್ತಿಯವರ `ಕಾಕನ ಕೋಟೆ'ಯೂ ನಾಟಕಸಾಹಿತ್ಯದ ದೃಷ್ಟಿಯಿಂದ ಗಮನಿಸಬೇಕಾದ ಕೃತಿಯೇ. ಮಾಸ್ತಿಯವರು ಒಟ್ಟು ಹದಿಮೂರು ನಾಟಕಗಳನ್ನು ಬರೆದಿದ್ದರೂ `ಕಾಕನ

ಕೋಟೆ' ಭಾಷಾ ದೃಷ್ಟಿಯಿಂದ ಮಹತ್ವ ಪಡೆಯುತ್ತದೆ. `ಬೂಡು ' ಕಾಲಕ್ರಮದಲ್ಲಿ `ನಾಡಾ' ಗಿ ಪರಿವರ್ತನೆ ಹೊಂದುವ ಸಂಕೀರ್ಣ ಘಟ್ಟದ ಚಿತ್ರಣ ಕಾಡು ಕುರುಬರ ಕಥೆಯ ಮೂಲಕ ಮೂಡಿಬಂದಿದೆ.

ಪೌರಾಣಿಕ ಮತ್ತು ಐತಿಹಾಸಿಕ ವಸ್ತುವನ್ನು ಆರಿಸಿಕೊಂಡರೂ ಅದನ್ನು ಸಮಕಾಲೀನ ಪ್ರಜ್ಞೆಗೆ ತಿರುಗಿಸಿಕೊಳ್ಳುವ ಪ್ರಯತ್ನ ಕುವೆಂಪುರವರ ಕೆಲವು ನಾಟಕಗಳಲ್ಲಿ ಕಂಡು ಬರುತ್ತದೆ. ವರ್ಣ ವರ್ಗ ಹೋರಾಟಗಳನ್ನು `ಶೂದ್ರ ತಪಸ್ವಿ .' `` ಬೆರಳ್‌ಗೆ ಕೊರಳ್ .'' ಜಲಗಾರ' ದಂತಹ ನಾಟಕಗಳಲ್ಲಿ ಕಾಣುತ್ತೇವೆ. ಆದರೆ ಕುವೆಂಪು ನಾಟಕಗಳಿಗೆ ಬಳಸಿದ ಭಾಷೆ ಮಾತ್ರ ಹಳಗನ್ನಡ ಪ್ರೌಢ ಭಾಷೆಯಾಗಿದೆ.

ಇದಕ್ಕೆ ತದ್ವಿರುದ್ಧವಾಗಿ ಬೇಂದ್ರೆಯವರ ನಾಟಕಗಳಲ್ಲಿ ಉತ್ತರ ಕರ್ನಾಟಕದ ಆಡುಮಾತಿನ ಪ್ರಯೋಗಗಳನ್ನು ಕಾಣುತ್ತೇವೆ. ಬೇಂದ್ರೆಯವರಲ್ಲಿ ಸಾಮಾಜಿಕ ಕಳಕಳಿಯೂ ಅಷ್ಟೇ ತೀವ್ರವಾಗಿದೆ. ಅವರ `ಜಾತ್ರೆ.'' ಸಾಯೋ ಆಟ.' `ನಗೆಯ ಹೊಗೆ ''ಉದ್ಧಾರ' ಮುಂತಾದ ನಾಟಕಗಳು ಈ ಮಾತಿಗೆ ನಿದರ್ಶನಗಳಾಗಿವೆ.

ಶ್ರೀರಂಗರನ್ನು ಬಿಟ್ಟರೆ ನಟರಾಗಿ ನಾಟಕಕಾರರಾಗಿ ರಂಗಭೂಮಿಯ ಸಂಕರ್ಷವನ್ನು ದೀರ್ಘಕಾಲ ಇಟ್ಟುಕೊಂಡವರು ಪರ್ವತವಾಣಿಯವರು. ಇಂಗ್ಲೀಷ್, ಫ್ರೆಂಚ್, ರಷ್ಯನ್ ನಾಟಕಗಳ ಅನುವಾದ ರೂಪಾಂತರಗಳಿಂದಲೇ ಹೆಚ್ಚು ಪ್ರಸಿದ್ಧರು. `ಬಹದ್ದೂರ ಗಂಡ' ನಾಟಕವಂತೂ ರಂಗಭೂಮಿಯ ಮೇಲೆ ೧೫೦ ಕ್ಕಿಂತ ಹೆಚ್ಚು ಪ್ರಯೋಗಗಳನ್ನು ಕಂಡಿದೆ. ಪರ್ವತವಾಣಿಯವರು `ಉಂಡಾಡಿ ಗುಂಡ', `ಬಣ್ಣದ್ಬೊಂಬೆ', `ವಿಪರ್ಯಾಸ .' `ವಾರ್ಷಿಕೋತ್ಸವ .'' ರೋಗಾಲಾಪನೆ ' ಮುಂತಾದ ಜನಪ್ರಿಯ ಪ್ರಹಸನಗಳನ್ನು ರಚಿಸಿದ್ದಾರೆ. ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಆಡುವದಕ್ಕೆ ಅನುಕೂಲವಾಗುವ ಅನೇಕ ನಾಟಕಗಳನ್ನು ರಚಿಸಿದ್ದಾರೆ. ಈ ಪರಂಪರೆಯಲ್ಲಿ ಎ. ಎಸ್. ಮೂರ್ತಿ, ದಾಶರಥಿ ದೀಕ್ಷಿತ, ನವರತ್ನರಾವ್, ಕೆ. ಗುಂಡಣ್ಣ, ಕ್ಷೀರಸಾಗರ ಮುಂತಾದವರು ಕೆಲವು ಉತ್ತಮ ಪ್ರಹಸನ ಗಳನ್ನು ರಚಿಸಿದ್ದಾರೆ.

ಜಿ. ಬಿ. ಜೋಶಿಯವರು `ಕದಡಿದ ನೀರು .' `` ಮೂಕಬಲಿ .''ಸತ್ತವರ ನೆರಳು' `ನಾನೇ ಬಿಜ್ಜಳ ' ಮುಂತಾದ ಕೆಲವೇ ಸತ್ವಶಾಲೀ ನಾಟಕಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಕೆಲವು ಭಿನ್ನ ಭಾಷೆಯ ನಾಟಕಗಳ ಅಳವಡಿಕೆಯಾಗಿದ್ದಾರೂ ಉತ್ತರ ಕರ್ನಾಟಕದ ಆಡು ಮಾತನ್ನು ಬಳಸಿಕೊಂಡು ನಾಟಕ ಕಟ್ಟುವ ಶೈಲಿ ಅವರಿಗೆ ಕರಗತವಾಗಿದೆ. `ಸತ್ತವರ ನೆರಳು' ಬಿ. ವಿ. ಕಾರಂತರ ನಿರ್ದೇಶನದಲ್ಲಿ ಅಪೂರ್ವ ಯಶಸ್ಸನ್ನು ಪಡೆದ ನಾಟಕ. ಗಟ್ಟಿಯಾದ ಕಥಾವಸ್ತು, ಆಡುಮಾತು ಹಾಗೂ ಜೀವನದ ಬಗೆಗಿನ ಆಪ್ತತೆ, ತಿಳಿವಳಿಕೆ ಮುಂತಾದವು ಗಳಿಂದ ಜೋಶಿಯವರ ನಾಟಕಗಳು ಸಾಂಪ್ರದಾಯಿಕವಾದರೂ ಮಹತ್ವ ಪೂರ್ಣವೆನಿಸುತ್ತವೆ. ಆರ್. ಪಿ. ಕುಲಕರ್ಣಿಯವರ `ಗೌರಿ, ' ಕುರ್ತಕೋಟಿಯವರ `ಆಮನಿ' ನಾಟಕಗಳು ಜಡಭರತರ ನಾಟಕಗಳ ಗುಂಪಿಗೆ ಸೇರುವಂತಿದ್ದು, ಭಾಷೆಯ ದೃಷ್ಟಿಯಿಂದ ಹೆಚ್ಚು ಶಿಷ್ಟವೆನ್ನುವಂತಿವೆ.

ವೈಯಕ್ತಿಕತೆ, ಅನುಭವದ ಪ್ರಾಮಾಣಿಕತೆ, ಹೊಸಮೌಲ್ಯಗಳ ನಿಷ್ಠುರ ಶೋಧನೆ ಮೊದಲಾದವುಗಳಿಂದ ಕೂಡಿದ ಹೊಸ ದೃಷ್ಟಿಕೋನ ಮುಂದಿನ ನಾಟಕಕಾರರ ಕೃತಿಗಳಲ್ಲಿ ಕಂಡುಬರುತ್ತದೆ. ಪರಂಪರೆಯಲ್ಲಿ ಶ್ರದ್ಧೆಯನ್ನು ಕಳೆದುಕೊಂಡು ಸಮಕಾಲೀನ ಸಾಮಾಜಿಕ ಬದುಕಿನೊಂದಿಗೂ ಸಂಬಂಧವಿಲ್ಲದ ಮಧ್ಯಮವರ್ಗದ ಬುದ್ಧಿಜೀವಿಗಳು ತಮ್ಮ ಏಕಾಕಿತನಕ್ಕೆ ಪರಿಹಾರ ಕಂಡುಕೊಳ್ಳದೆ ಪರಿತಪಿಸುತ್ತಿದ್ದಾರೆ. ನಾಟಕ ಮಾಧ್ಯಮದಲ್ಲಿ ಬದುಕಿನ ನಿಷ್ಠುರ ಅನ್ವೇಷಣೆಗೆ ತೊಡಗಿದ್ದಾರೆ. ಇಂಥ ಹುಡುಕಾಟದಲ್ಲಿ ನಡೆಸಿದ ಭಿನ್ನರೀತಿಯ ಪ್ರಯೋಗಗಳಿಂದ ಅನೇಕ ಉತ್ತಮ ನಾಟಕಗಳು ಕನ್ನಡದಲ್ಲಿ ಹುಟ್ಟಿಕೊಂಡವು. ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ, ಲಂಕೇಶ ಮುಂತಾದವರನ್ನು ಈ ದಿಶೆಯಲ್ಲಿ ಹೆಸರಿಸಬೇಕು.

ಗಿರೀಶ್ ಕಾರ್ನಾಡರನ್ನು ಕುರಿತು ಬರೆಯುತ್ತಾ ಅನಂತಮೂರ್ತಿಯವರು `ಆಧುನಿಕ ಪಶ್ಚಿಮ ನಾಟಕದಿಂದ ಪ್ರಭಾವಿತವಾಗಿ ಆ ಮೂಲಕ ಆಧುನಿಕತೆಯನ್ನು ನಾಟ್ಯ ಪ್ರಜ್ಞೆಯನ್ನು ತೀವ್ರವಾಗಿಸಿಕೊಂಡು ಜೊತೆಗೆ ಭಾರತೀಯತ್ವವನ್ನು ಅಂದರೆ ಸಮಕಾಲೀನ ಭಾರತೀಯ ಪರಿಸರದ ಔಚಿತ್ಯವನ್ನಿಟ್ಟುಕೊಂಡು ಬರೆಯುತ್ತಿರುವವರಲ್ಲಿ ಕಾರ್ನಾಡರೇ ಶ್ರೇಷ್ಠರೆಂದು ನನ್ನ ಅನಿಸಿಕೆ ಎಂದಿದ್ದಾರೆ. ಪುರಾಣಿಕತೆ ಅಥವಾ ಐತಿಹಾಸಿಕ ವ್ಯಕ್ತಿ ಸಂಗತಿಗಳ ಸ್ಥೂಲ ವಿವರಕ್ಕೆ ಬಾಧೆ ತಟ್ಟದಂತೆ ವರ್ತಮಾನ ಪರಿಸರದಲ್ಲಿ ಪಾತ್ರಗಳ ಅಂತರಂಗವನ್ನು ಅತ್ಯಂತ ಸಮರ್ಥ ವಾಗಿ ವಿಶ್ಲೇಷಿಸುವ ಕಲೆ ಕಾರ್ನಾಡರಿಗೇ ವಿಶಿಷ್ಟವಾದುದು. ವ್ಯಂಗದ ಮೂಲಕ ಒಟ್ಟು ವಸ್ತುವಿನಲ್ಲೇ ಹುದುಗಿದ ದ್ವೈತವನ್ನು ಅವರು ಅಭಿವ್ಯಕ್ತಗೊಳಿಸುವ ರೀತಿ ಅನನ್ಯ ವಾದುದು. ಇದನ್ನು ನಾವು `ಯಯಾತಿ,'` ಹಯವದನ, ' `ತುಘಲಕ್'ಗಳಲ್ಲಿ ನೋಡಬಹುದು. ಮೂರು ನಾಟಕಗಳಲ್ಲಿಯೂ ಮನುಷ್ಯನ ಒಂಟಿತನ ಮತ್ತು ದಿಗ್ಭ್ರಮೆಯ ನೋವು ಪ್ರತಿಧ್ವನಿಸುತ್ತದೆ. `ಹಯವದನ'ದಲ್ಲಿ ಪರಿಷ್ಕಾರಗೊಂಡ ಜಾನಪದ ರಂಗ ತಂತ್ರಗಳನ್ನು ನಿರೂಪಣೆಗೆ ಬಳಸಿಕೊಳ್ಳಲಾಗಿದ್ದು ಭಾಗವತ, ಹಿಮ್ಮೇಳ, ಮುಖವಾಡಗಳು, ವೇಷಭೂಷಣಗಳು ಸಂಗೀತ ಇವೆಲ್ಲಾ ನಾಟಕವನ್ನು ಶೈಲೀಕರಣಗೊಳಿಸಿವೆ. `ತಲೆದಂಡ '`ದಲ್ಲಿ ಬಸವಣ್ಣನ ಕಾಲದ ಐತಿಹಾಸಿಕ ಘಟನೆಯನ್ನು ಸಮಕಾಲೀನ ಪ್ರಜ್ಞೆಯಿಂದ ನೋಡಿದರೆ `ನಾಗಮಂಡಲ' ದಲ್ಲಿ ಜಾನಪದ ವಸ್ತುವನ್ನು ಆಧುನಿಕ ಪ್ರಜ್ಞೆಗೆ ಬಳಸಿಕೊಳ್ಳಲಾಗಿದೆ.

ಆಸ್‌ಬೋರ್ನ್‌ನ ಪ್ರತಿಭಟನಾ ಮಾದರಿಯ ರಂಗಭೂಮಿ ಕನ್ನಡ ನಾಟಕಕಾರರ ಮೇಲೆ ವಿಶೇಷ ಪ್ರಭಾವವನ್ನು ಬೀರಿದಂತಿಲ್ಲ. ಲಂಕೇಶರಿಂದ ಕನ್ನಡಕ್ಕೆ ಅದು ಬಂದರೂ ಹೆಚ್ಚುಕಾಲ ಉಳಿಯದೇ ಹೋಯಿತು. ಲಂಕೇಶರು ಈ ಮಾದರಿಯಲ್ಲಿ `ಟಿ. ಪ್ರಸನ್ನನ ಗೃಹಸ್ಥಾಶ್ರಮ' ಮತ್ತು ` ನನ್ನ ತಂಗಿಗೊಂದು ಗಂಡು ಕೊಡಿ ' ಎರಡು ನಾಟಕಗಳನ್ನು ಬರೆದಿದ್ದಾರೆ. ಈ ಕುರಿತು ಗಿರಡ್ಡಿಯವರು, `ಈ ನಾಟಕಗಳ ಮೂಲಕ ಲಂಕೇಶರು ಬಂಡುಗಾರ ಲೇಖಕರೆಂದು Angry Young Man ಇಮೇಜನ್ನು ಬೆಳಸಿಕೊಂಡರು. ಈ ನಾಟಕಗಳ ನಾಯಕರು ಹತಾಶರಾದ ಬಂಡುಗಾರ ಯುವಕರು ತಮ್ಮ ಸುತ್ತಲಿನ ವ್ಯವಸ್ಥೆಯ ವ್ಯಕ್ತಿಗಳ ಬದುಕಿನ ಟೊಳ್ಳುತನವನ್ನು ತಿವಿದು ತಿವಿದು ಎತ್ತಿ ತೋರಿಸುವುವರಲ್ಲಿ ಖುಷಿ ಪಡುವವರು ಈ ಕೇಂದ್ರಪಾತ್ರಗಳ ಕೋಪ ತಾಪಗಳ ಪ್ರತಾಪವೇ ನಾಟಕದ ಮುಖ್ಯಧ್ವನಿ'

ಎಂದಿದ್ದಾರೆ (ಗಿರಡ್ಡಿ ಗೋವಿಂದ ರಾಜು, ೧೯೮೯ ಪ್ರ. ೨೯) `ಬಿರುಕು', `ಗಿಳಿಯು ಪಂಜರದೊಳಿಲ್ಲ', `ಸಿದ್ಧತೆ,' `ಕ್ರಾಂತಿ ಬಂತು ಕ್ರಾಂತಿ. ' ` ಪೋಲಿಸರಿದ್ದಾರೆ ಎಚ್ಚರಿಕೆ ', `ತೆರೆಗಳು' `ಸಂಕ್ರಾಂತಿ' ಮುಂತಾದ ನಾಟಕಗಳಲ್ಲಿ ಕುಪಿತ ಮಾದರಿ ಇಲ್ಲದಿದ್ದರೂ ಅವು ಜನತೆಯಲ್ಲಿರುವ ಕಪಟನೀತಿ, ಕ್ರೌರ್ಯ ಅವ್ಯವಸ್ಥೆಗಳನ್ನು ಪದರ ಪದರವಾಗಿ ಅನಾವರಣ ಗೊಳಿಸುತ್ತ ಹೋಗುತ್ತವೆ. ಭಾಷೆಯ ಹರಿತವಾದ ಬಳಕೆಯಿಂದಾಗಿ ಲಂಕೇಶರ ನಾಟಕಗಳಲ್ಲಿ ವ್ಯಂಗ್ಯ ವಿಡಂಬನೆಗಳು ತೀಕ್ಷ್ಣವೆನ್ನಿಸುತ್ತವೆ. ಹಳ್ಳಿಯಲ್ಲಿ ಹುಟ್ಟಿ ಬೆಳೆದು ನಗರದಲ್ಲಿ ವಿದ್ಯಾವಂತರಾಗಿ ನೆಲಸುವ ಆಧುನಿಕ ತರುಣರ ವಿಶಿಷ್ಟ ಮನಸ್ಥಿತಿ ಹೊಯ್ದಾಟ ಮತ್ತು ನೈಚ್ಯಾನುಸಂಧಾನಗಳನ್ನು ಕೆಲವು ಕೃತಿಗಳು ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಲಂಕೇಶರ `ತೆರೆಗಳು' ನಾಟಕ ಭಿನ್ನರೀತಿಯದಿದ್ದು ಇದರಲ್ಲಿ ಅಸಂಗತ ನಾಟಕ ತಂತ್ರವನ್ನು ಬಳಸಿಕೊಳ್ಳಲಾಗಿದೆ. `ಕ್ರಾಂತಿ ಬಂತು ಕ್ರಾಂತಿ ' ರಾಜಕೀಯ ಹೊಣೆಗೇಡಿತನವನ್ನು ನಿರೂಪಿಸಿದರೆ, `ಸಂಕ್ರಾಂತಿ' ಐತಿಹಾಸಿಕ ಸಂಗತಿಯನ್ನು ವರ್ತಮಾನದ ಪರಿಸರದಲ್ಲಿ ಪರಿಶೀಲಿಸುತ್ತದೆ.

ಕನ್ನಡದಲ್ಲಿ ಅಸಂಗತನಾಟಕಗಳ ಪ್ರಭಾವ ಕೆಲವರ ಕೃತಿಗಳಲ್ಲಾದರೂ ಕಂಡು ಬರುತ್ತದೆ. ಗಿರಡ್ಡಿ ಗೋವಿಂದರಾಜ ಅವರು ಈ ನಾಟಕಗಳ ತಾತ್ವಿಕ ಅಂಶಗಳ ಬಗ್ಗೆ ಬರೆಯುತ್ತಾ, ` ಅಸಂಗತ ನಾಟಕಗಳ ಜೀವನ ದೃಷ್ಟಿ ಮುಖ್ಯವಾಗಿ ಜೀವನ ಅರ್ಥಹೀನವಾದುದು. ಉದ್ದೇಶ ರಹಿತವಾದುದು. ಅಲೌಕಿಕವಾದುದು ಎಂಬುದನ್ನೇ ಸ್ಥಾಯಿಯಾಗಿ ಇಟ್ಟು ಕೊಂಡಿರುವಂತಹುದು. ಸಂವಹನ ದುಸ್ಸಾಧ್ಯತೆ ತನ್ನತನವನ್ನು ಕಂಡುಕೊಳ್ಳುವ ಸಮಸ್ಯೆ, ತೋರಿಕೆ ಮತ್ತು ವಾಸ್ತವಗಳ ನಡುವಿನ ಗೊಂದಲ, ವ್ಯಕ್ತಿಯ ಅಪರಿಚಿತತೆ, ಏಕಾಂಗಿತನ ಮೌಲ್ಯರಹಿತ ಜಗತ್ತು ಇತ್ಯಾದಿ ಸ್ಥಾಯಿಯ ಪರಿಮಿತಿಯ ಒಳಗೇ ಸುಳಿದಾಡುವ ಸಂಚಾರಿಗಳು. ಜೀವನದ ಬಗೆಗಿನ ಈ ಬಗೆಯ ದೃಷ್ಟಿಕೋನ ನವ್ಯಸಾಹಿತ್ಯವನ್ನು ಆಳವಾಗಿ ಪ್ರಭಾವಿಸಿದ ಅಸ್ತಿತ್ವವಾದದ ಒಂದು ಭಾಗವೇ ಆಗಿದೆ. ಅಂತೆಯೇ ಮೇಲೆ ಸೂಚಿಸಿದ ಸಂಚಾರಿಗಳಲ್ಲಿ ಕೆಲವು ನವ್ಯಸಾಹಿತ್ಯದ ವಸ್ತುವಾಗಿಯೂ ಬಂದಿದೆ ಎಂದಿದ್ದಾರೆ.' (ಗಿರಡ್ಡಿ ಗೋವಿಂದರಾಜ ೧೯೮೯ ಪು. ೩೨) ಅಸಂಗತ ನಾಟಕಗಳಲ್ಲಿ ಕೆಲವು ಜೀವನದ ಅಸಾಂಗತ್ಯವನ್ನು ಸುಸಂಗತವಾದ ಕಥೆ, ಪಾತ್ರ ಮಾತು ನಾಟ್ಯಶಿಲ್ಪಿಗಳ ಮೂಲಕ ತೋರಿಸಿದರೆ, ಮತ್ತೆ ಕೆಲವು ಅದೇ ಅಸಾಂಗತ್ಯವನ್ನು ಅಷ್ಟೇ ಅಸಂಗತವಾದ ತಂತ್ರದ ಮೂಲಕ ತೋರಿಸಿವೆ. ಕನ್ನಡದಲ್ಲಿ ನವ್ಯ ನಾಟಕಕಾರರಲ್ಲಿ ಅನೇಕರು ಅಸಂಗತ ನಾಟಕಗಳನ್ನು ಬರೆದಿದ್ದಾರೆ. ಚಂದ್ರಶೇಖರ ಪಾಟೀಲರ `ಕೊಡೆಗಳು, ' ` ಅಪ್ಪ ', `ಟಿಂಗರಬುಡ್ಡಣ್ಣ', ಚಂದ್ರಶೇಖರ ಕಂಬಾರರ, ` ಚಾಳೇಶ,' `ಸಾರ್ಸಿಸಸ್ ' `ನ ರತ್ನ' ರ `ಎಲ್ಲಿಗೆ, '' ಗೋಡೆ ಬೇಕೇ ಗೋಡೆ? `ಬೊಂತೆ' ಚಂದ್ರಕಾಂತ ಕುಸುನೂರರ `ಮನೆ' ಹಳ್ಳಾ ಕೊಳ್ಳಾನೀರು ' ತೇಜಸ್ವಿಯವರ ` ಯಮಳ ಪ್ರಶ್ನೆ',ಚದುರಂಗರ `ಇಲಿಬೋನು 'ಆರ್ಯರ `ಬಯಲು ಆಲಯದೊಳಗೇ ಸಾಗರ ಅವರ `ನಾಯಕ' ಮುಂತಾದವುಗಳನ್ನು ಹೆಸರಿಸಬಹುದು. ಗಿರೀಶ್ ಕಾರ್ನಾಡರ `ಹಯವದನ ', 'ತುಘಲಕಗಳಲ್ಲಿ', ಲಂಕೇಶರ ಬಿರುಕು, ಜಿ. ಬಿ. ಜೋಶಿಯವರ `ನಾನೇ ಬಿಜ್ಜಳ' ಗಳಲ್ಲಿಯೂ ಅಸಂಗತತೆಯ ಅಂಶಗಳಿವೆ. ಸಂವಿಧಾನ ಶಿಲ್ಪ, ಪಾತ್ರ ರಚನೆ, ಸಂಭಾಷಣೆ ಸನ್ನಿವೇಶಗಳು ಮೊದಲಿನ ನಾಟಕಗಳಿಗಿಂತ ಭಿನ್ನವಾದುದರಿಂದ ಅಸಂಗತ ನಾಟಕಗಳು ಕನ್ನಡಕ್ಕೆ ಅಷ್ಟು ಸುಲಭವಾಗಿ ಒಗ್ಗಿಕೊಳ್ಳಲಾರದೇ ಹೋದವು. ಇಂಥ ನಾಟಕಗಳ ರಚನೆಯೂ ತುಂಬಾ

ಕಷ್ಟದ್ದು. ಆದರೆ ರಂಗ ಪ್ರಯೋಗದ ದೃಷ್ಟಿಯಿಂದ ಇವು ಹೊಸ ಸಾಧ್ಯತೆಗಳನ್ನು ದೊರಕಿಸಿ ಕೊಟ್ಟಿದ್ದನ್ನು ಮರೆಯುವಂತಿಲ್ಲ.

`ಬ್ರೆಕ್ಟ್' ನ ಎಪಿಕ್ ರಂಗಭೂಮಿಯ ಸಿದ್ಧಾಂತ ಮೂಲತಃ ನಮ್ಮ ಭಾರತೀಯ ರಂಗ ಪರಂಪರೆಯಲ್ಲಿ ಹಾಸುಹೊಕ್ಕಾಗಿ ಇರುವುದೇ ಆಗಿದೆ. ವಾಸ್ತವ ರಂಗಭೂಮಿ ಅಸಂಗತ ರಂಗಭೂಮಿಗಳು ಕೆಲಕಾಲ ಅಸ್ತಿತ್ವದಲ್ಲಿದ್ದು ಕ್ರಮೇಣ ನಮ್ಮ ರಂಗಪರಂಪರೆಯಲ್ಲಿ ಚರ್ವಿತ ಚರ್ವಣವೆನ್ನಿಸಿದಾಗ ಪಶ್ಚಿಮದಿಂದ ಹೊಸತು ಎನ್ನುವಂತೆ ಬಂದ, ಆದರೆ ಹಳೆಯ ಪರಂಪರೆಯಲ್ಲಿದ್ದ ತಂತ್ರಗಳೇ ಎಪಿಕ್ ರಂಗಭೂಮಿ ಸಿದ್ಧಾಂತಗಳಲ್ಲಿದ್ದವು. ಪ್ರೇಕ್ಷಕರನ್ನು ತಲ್ಲೀನರಾಗದಂತೆ ತಡೆಯುವ, ಜೀವನ ಬೇರೆ, ನಾಟಕದ ಅನುಭವ ಬೇರೆ ಎಂದು ಎಚ್ಚರಿಸುವ ವಿಧಾನಗಳು ಸ್ವಗತ, ಪ್ರತ್ಯಕ್ಷ, ಅತ್ಮಗತಗಳಲ್ಲದೇ ಸೂತ್ರಧಾರ. ಮೇಳ, ಹಾಡು ಕುಣಿತ ರಂಗಸಜ್ಜಿಕೆ, ಭಾಷೆ ಮತ್ತು ವೇಷಗಳಲ್ಲಿವೆ. ಹೀಗೆ ನಾಟಕದ ರೀತಿಗೆ ಮುಖ್ಯವಾಗಿ ಸಂಬಂಧಿಸುವ ಈ ಕಲ್ಪನೆಗಳಿಂದ ಪ್ರಚೋದಿತರಾಗಿ, ಕನ್ನಡದಲ್ಲಿ ಕೆಲವರು ಉತ್ತಮ ನಾಟಕಗಳನ್ನು ರಚಿಸಿದ್ದಾರೆ. ಇದರಿಂದ ಒಂದರ್ಥದಲ್ಲಿ ಹಿಂದೊಮ್ಮೆ ಕಳಚಿದ ಕೊಂಡಿಯನ್ನು ಬೆಸೆಯುವ ಪ್ರಯತ್ನ ಮಾಡಿದಂತಾಗಿದೆ. ಈ ತಂತ್ರವನ್ನು ಪ್ರಜ್ಞಾ ಪೂರ್ವಕವಾಗಿ ಬಳಸಿದವರೆಂದರೆ ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ್, ಎಚ್. ಎಮ್. ಚೆನ್ನಯ್ಯ, ನಿಸರ್ಗ ಪ್ರಿಯ ಚಂದ್ರಶೇಖರ ಪಾಟೀಲ ಮುಂತಾದವರು. ಕಾರ್ನಾಡರ ' ಹಯವದನ ', ರೀತಿಯಲ್ಲಿ ಎಪಿಕೆ ರಂಗಭೂಮಿ ಮಾದರಿಯ ನಾಟಕಕ್ಕೆ ಉದಾಹರಣೆಯಾಗಬಲ್ಲುದು . ಹಾಡು, ಕುಣಿತಗಳು ಜೊತೆಗೆ ಮುಖವಾಡಗಳು, ಗೊಂಬೆ, ಮೂಕಾಭಿನಯ, ದೈವೀಶಕ್ತಿಯ ಪ್ರಕಟಣೆ ಇತ್ಯಾದಿತಂತ್ರಗಳೂ ಇಲ್ಲಿ ಕೂಡಿಕೊಂಡಿವೆ.

ಜಾನಪದ ತಂತ್ರವನ್ನು ಆಧುನಿಕ ನಾಟಕಗಳಿಗೆ ಬಳಸುತ್ತಿರುವವರಲ್ಲಿ ಕಂಬಾರರು ಮುಖ್ಯರು. `ಋಷ್ಯಶೃಂಗ ',`ಜೋಕುಮಾರಸ್ವಾಮಿ ''ನಾಯೀಕಥೆ ', `ಕಾಡುಕುದುರೆ', `ಸಿರಿಸಂಪಿಗೆ' ಮುಂತಾದ ನಾಟಕಗಳನ್ನು ಇಲ್ಲಿ ಹೆಸರಿಸಬಹುದು. `ಋಷ್ಯಶೃಂಗ'ದಲ್ಲಿ ಜಾನಪದ ವಸ್ತುವಿಗೆ ಪುರಾಣಕಥೆಯ ಸಾಂಕೇತಿಕ ಹಿನ್ನೆಲೆ ಇದ್ದರೆ, `ಜೋಕುಮಾರ ಸ್ವಾಮಿ 'ಯಲ್ಲಿ ಆಧುನಿಕತೆಗೆ ಜಾನಪದ ಆಚರಣೆ- ನಂಬಿಕೆಗಳ ಹಿನ್ನೆಲೆ ಇದೆ. ಫಲವತ್ತತೆಯ ಸಂಕೇತವಾದ ಜೋಕುಮಾರಸ್ವಾಮಿಯ ದೈವಕಥೆಯೊಂದಿಗೆ `ಉಳುವವನಿಗೇ ಭೂಮಿ ' ಎಂಬ ಆಧುನಿಕ ಘೋಷಣಾತತ್ವವೂ ಆಡಗಿದ್ದು, ಇದೊಂದು ಸಶಕ್ತ ನಾಟಕವಾಗಿ ಪರಿಣಮಿಸಿದೆ. ಕಾವ್ಯಮಯವಾದ ಭಾಷೆ ಮತ್ತು ಮಧುರವಾದ ಜಾನಪದ ರಾಗ ಸಂಯೋಜನೆ ಯಿಂದಾಗಿ ಮತ್ತೆ ಮತ್ತೆ ಮೆಲುಕು ಹಾಕಬಹುದಾದ ಹಾಡುಗಳು, ಸಣ್ಣಾಟಗಳ ಮುಕ್ತ ಸಂಭಾಷಣೆಯನ್ನು ನೆನಪಿಸುವಂತಹ ಮಾತುಗಾರಿಕೆಗಳಿಂದಾಗಿ ಜೋಕುಮಾರಸ್ವಾಮಿ, ಜನಪ್ರಿಯ ನಾಟಕವೂ ಆಗಿದ್ದು, ರಂಗದಮೇಲೆ ಅದ್ಭುತ ಯಶಸ್ಸುಗಳಿಸಿದೆ.

ಎಚ್. ಎಮ್. ಚೆನ್ನಯ್ಯನವರ `ಎಲ್ಲರಂಥವನಲ್ಲ ನನ ಗಂಡ .'' ಹುಯ್ಯೆಲ ವೊಡಂಗುರವ', ನಿಸರ್ಗಪ್ರಿಯರ .'' ಬೆಳಕಿನ ಕೆರ.' ಚಂದ್ರಶೇಖರ ಪಾಟೀಲರ `ಗೋಕರ್ಣದ ಗೌಡಶಾನಿ ' ಮುಂತಾದವು ಎಪಿಕ್ ಮಾದರಿಯ ತಂತ್ರವನ್ನು ಬಳಸಿಕೊಂಡು ರಚಿತವಾದ ಇತರ ನಾಟಕಗಳೆನ್ನಬಹುದು. ಇವರೆಲ್ಲ ಭಾಗಶಃ ಎಪಿಕ್ ಮಾದರಿಯನ್ನು ರೂಢಿಸಿ

ಕೊಂಡವರು. ಕಾರಣ, ದಿವಸ್ಪತಿ ಹೆಗಡೆಯವರು ಗುರುತಿಸಿರುವಂತೆ, `ಬ್ರೆಕ್ಟನ' ಅನು ಕರಣೆಯ ಹಿನ್ನೆಲೆಯಲ್ಲಿ ಅವನ ತಾತ್ವಿಕ ಉದ್ದೇಶಗಳ ಒತ್ತಾಸೆ ನಮ್ಮಲ್ಲಿ ಇತ್ತು ಎಂದು ಹೇಳುವಂತಿಲ್ಲ. ನಮ್ಮ ಜಾನಪದ ಕಲೆಗಳಲ್ಲಿ ಬ್ರೆಕ್ಟ್ ಹೇಳುವ ಎಪಿಕ್ ತಂತ್ರ, ಪರಕೀಯತೆ (ಏಲಿಯನೇಶನ್) ಹಾಗೂ ಐತಿಹಾಸಿಕತೆ (ಹಿಸ್ಟಾರಿಫಿಕೇಶನ್) ಈ ಮೂರು ಗುಣಗಳು ಇದ್ದವು. ಹಾಗಿದ್ದಾಗಲೂ ನಮ್ಮ ಪ್ರೇಕ್ಷಕ ಪಾತ್ರಗಳೊಂದಿಗೆ, ಕತೆಯೊಂದಿಗೆ ತಲ್ಲೀನ ನಾಗುತ್ತಿದ್ದ. ಅಂತಹ ಪ್ರೇಕ್ಷಕನಿಗೆ ಬ್ರೆಕ್ಟನ ತಾತ್ವಿಕ ಪ್ರಯೋಗಗಳು ಬರಿಯ ತಾಂತ್ರಿಕ ಹೊಸತನವಾಗಿ ಜಾನಪದ ರಂಗದಿಂದ ನಾಟಕರಂಗಕ್ಕೆ ಬಂದಂತೆ ಎನಿಸಬಹುದೇ ವಿನಾ ಅದಕ್ಕಿಂತ ಹೆಚ್ಚಿನ ಪರಿಣಾಮವೇನೂ ಆಗದು. ಆದ್ದರಿಂದ ಕನ್ನಡದಲ್ಲಿ ಎಪಿಕ್ ರಂಗಭೂಮಿ ಹೊಸತಂತ್ರ ಆಗಿ ನಿಂತಿದೆ. ಹಾಗೂ ಜಾನಪದ ನಾಟಕಗಳಿಗೆ ಇಂಬುಕೊಟ್ಟಿದೆ (ಹೆಗಡೆ, ದಿವಸ್ಪತಿ ೧೯೯೩ಪು. ೨೫೦)

ನವ್ಯ ನಾಟಕಗಳಲ್ಲಿ ಭಿನ್ನ ಭಿನ್ನ ರೀತಿಯ ಪ್ರಯೋಗಗಳು ನಡೆಯುತ್ತ ಬಂದ ಹಾಗೆ, ಸಂಖ್ಯೆಯಲ್ಲಿ ಅದು ಇಳಿಮುಖವನ್ನು ಕಾಣತೊಡಗಿತು. ಪ್ರಯೋಗಕ್ಕಾಗಿ ತಂಡಗಳು ಮತ್ತೆ ನಾಟಕಗಳ ಅನ್ವೇಷಣೆ ಪ್ರಾರಂಭಿಸಬೇಕಾಯಿತು. ಈ ಸಂದರ್ಭದಲ್ಲಿ ಪಾಶ್ಚಾತ್ಯ ಮತ್ತು ಇತರ ಭಾರತೀಯ ಸಾಹಿತ್ಯದಿಂದ ಕೆಲವು ನಾಟಕಗಳನ್ನು ಅನುವಾದ, ರೂಪಾಂತರ ಮಾಡಿ ಕೊಂಡರು. ಸುಮಾರು ೧೦-೧೫ ವರ್ಷಗಳ ಕಾಲ ಈ ಅನುವಾದ ನಾಟಕಗಳೇ ಕನ್ನಡ ರಂಗಭೂಮಿಯನ್ನಾಳಿದವೆನ್ನಬೇಕು. ಬ್ರೆಕ್ಟ್‌ನ ನಾಟಕಗಳೆಲ್ಲ ಅನುವಾದವಾಗಿ ಪ್ರಯೋಗ ವಾದವು. `ಆನೆಮರಿ .'` ತಾಯಿ', 'ತ್ರಿಪೆನ್ನಿ ಅಪೇರಾ .' `ಸತ್ಯವಂತರಿಗಿದು ಕಾಲವಲ್ಲ', `ಗೆಲಿಲಿಯೋ '` ಕಕೇಷಿಯನ್ ಚಾಕ್ ಸರ್ಕಲ್ 'ಮುಂತಾದವು ಇದರಂತೆ ಷೇಕ್ಸಪಿಯರ್‌ನ ನಾಟಕಗಳಲ್ಲಿ ಒಥೆಲೋ, ಮ್ಯಾಕಬೆತ್, ಮಿಡ್‌ಸಮ್ಮರ್ ನೈಟ್ಸ್ ಡ್ರೀಂ, ಹ್ಯಾಮ್ಲೆಟ್‌ಗಳೂ ಪ್ರಯೋಗಗೊಂಡವು. ಅದರಂತೆ ಹಿಂದಿ, ಮರಾಠಿ ಮತ್ತಿತರ ಭಾರತೀಯ ಭಾಷೆಗಳ ಉತ್ತಮ ನಾಟಕಗಳೂ ಕನ್ನಡಕ್ಕೆ ಬಂದವು. ವಿಜಯಾ ತಂಡೂಲ್ಕರ್‌ರವರ ' ಸದ್ದು, ವಿಚಾರಣೆ ನಡೆಯುತ್ತಿದೆ, `ಘಾಸಿರಾಂಕೊತ್ವಾಲ್ .'` ಹಕ್ಕಿ ಹಾರುತಿದೆ ನೋಡಿದಿರಾ ' ಬಾದಲ್ ಸರ್ಕಾರರ `ಬಾಕಿ ಇತಿಹಾಸ', 'ಅಥೇ ಲಿಥೂರೆ ', ' ಏವಂ ಇಂದ್ರಜಿತ್'ಗಳನ್ನೂ ಇಲ್ಲಿ ಹೆಸರಿಸಬಹುದು.

ಹೀಗೆ ಅನುವಾದ ನಾಟಕಗಳು ಕನ್ನಡ ರಂಗಭೂಮಿಯನ್ನು ಜೀವಂತವಾಗಿಟ್ಟ ಸಂದರ್ಭದಲ್ಲಿ ಬಂದ ಕೆಲವು ರಾಜಕೀಯ ನಾಟಕಗಳ ಪ್ರಭಾವ, ಕನ್ನಡ ನಾಟಕಕಾರರ ಮೇಲೂ ಆಯಿತು. `ಕುರಿ' ಮತ್ತು `ಮುಖ್ಯಮಂತ್ರಿ' ಯಂತಹ ನಾಟಕಗಳಿಂದ ಸ್ಫೂರ್ತಗೊಂಡ ಟಿ. ಎಸ್. ಸೀತಾರಾಂ `ಆಸ್ಫೋಟ 'ವನ್ನು ರಚಿಸಿದರು. ಇದಲ್ಲದೇ ಕಂಬಾರರ `ಹರಕೆಯ ಕುರಿ' ಪೈಕುಂಠ ರಾಜುರವರ `ಸಂದರ್ಭ .' ವಿಶುಕುಮಾರರ `ಡೊಂಕುಬಾಲದ ನಾಯಕರು ' ಮುಂತಾದವನ್ನು ಕನ್ನಡದ ರಾಜಕೀಯ ನಾಟಕಗಳು ಎಂದು ಹೆಸರಿಸಲಾಗಿದೆ. ಇವುಗಳಲ್ಲೆಲ್ಲ ಸಮಕಾಲೀನ ರಾಜಕೀಯದ ಅಧಃ ಪತನದ ಚಿತ್ರಣವಿದೆ.

ತೊಂಬತ್ತರ ದಶಕದಲ್ಲಿ ಕನ್ನಡದಲ್ಲಿ ಕೆಲವು ಸ್ವತಂತ್ರ ನಾಟಕಗಳೂ ರಚಿತವಾಗಿದ್ದು ಕನ್ನಡ ನಾಟಕ ರಚನೆಯ ಸತ್ವ ಇನ್ನೂ ಮುಗಿದಿಲ್ಲ ಎಂಬುದನ್ನು ಸಾಬೀತುಗೊಳಿಸಿವೆ. ಕಿ.

ರಂ. ನಾಗರಾಜರ 'ನೀಗಿಕೊಂಡ ಸಂಸ', `ಕಾಲಜ್ಞಾನಿ ಕನಕ',ಚಿ. ಶ್ರೀನಿವಾಸರಾಜುರವರ `ನಾಳೆ ಯಾರಿಗೂ ಇಲ್ಲ'' ಹೆದ್ದಾರಿಯಲ್ಲೊಂದು ರಾತ್ರಿ.'' ಹಳಿಯ ಮೇಲಿನ ಸದ್ದು 'ಎಚ್. ಎಸ್. ಶಿವಪ್ರಕಾಶರ `ಮಹಾಚೈತ್ರ.'' ಸುಲ್ತಾನ ಟಿಪ್ಪು.'' ಮಂಟೇಸ್ವಾಮಿ ಕಥಾಪ್ರಸಂಗ' ಪ್ರಸನ್ನರ `ಒಂದುಲೋಕದ ಕಥೆ'' ದಂಗೆಯ ಮುಂಚಿನ ದಿನಗಳು ''ತದ್ರೂಪಿ' `ಸಾಗರಾಜ್ ಅವರ `ಲಕ್ಷಾಪತಿ ರಾಜನ ಕಥೆ'' ನರಸಿಂಹನರವರ `ಟಿಪಿಕಲ್ ಟಿ. ಪಿ.ಕೈಲಾಸಂ,' `ಟಿ. ಎನ್. ಸೀತಾರಾಮರ 'ನವ್ಮೊಳಗೊಬ್ಬ ನಾಜೂಕಯ್ಯ, ಶಂಕರ್ ಅವರ `ಋತುವೂ ಬದಲಾಗುವುದು' ಮುಂತಾದವನ್ನು ಹೆಸರಿಸಬಹುದಾಗಿದೆ.

ಕಳೆದ ದಶಕದಲ್ಲಿಯೇ ಕನ್ನಡದಲ್ಲಿ ಸ್ವತಂತ್ರ ನಾಟಕಗಳ ಕೊರತೆಯನ್ನು ಹೋಗಿಸುವ ಸಲುವಾಗಿಯೇ ಹೊಸ ಹೊಸ ರೀತಿಯ ಪ್ರಯೋಗಗಳನ್ನು ಮಾಡತೊಡಗಿದರು. ಕನ್ನಡದ ಕೆಲವು ಕಥೆಗಳನ್ನು ನಾಟಕವಾಗಿಸುವ ಪ್ರಯತ್ನವೂ ನಡೆಯಿತು. ದೇವನೂರ ಮಹಾದೇವರ `ಒಡಲಾಳ.'' ಡಾಂಬರು ಬಂದುದು', ಲಂಕೇಶರ 'ರೊಟ್ಟಿ,' ಪೂರ್ಣಚಂದ್ರ ತೇಜಸ್ವಿಯವರ `ತಬರನ ಕಥೆ.'' ಚಿದಂಬರ ರಹಸ್ಯ.'' ಕಿರಿಗೂರಿನ ಗಯ್ಯಾಳಿಗಳು.'' ಅಬಚೂರಿನ ಪೋಸ್ಟಾಫೀಸು.'' ಕುಬಿ ಮತ್ತು ಇಯಾಲ' ಮತ್ತು ` ಕಥೆಗಾರರ ಕಳ್ಳಿಯಲ್ಲೊಂದು ಕೆಂಪು ಹೂವು.'' ಕೊಂಬಿನವರು.'' ಪುಟ್ಟಕ್ಕನ ಮೆಡಿಕಲ್ ಕಾಲೇಜು. ''ಊನ ''ಸುರಂಗ ''ಬೇಸ್ತು' `ಕಪ್ಪೆ ಬಾವಿ ನಕ್ಷತ್ರ.'' ಮೌನಿ.'' ಕತ್ತಲನು ತ್ರಿಶೂಲ ಹಿಡಿದ ಕಥೆ' ಮುಂತಾದ ಕಥೆಗಳನ್ನು ನಾಟಕವಾಗಿಸಿದ್ದನ್ನು ಇಲ್ಲಿ ಹೆಸರಿಸಬಹುದು.

ಈ ಹಿಂದೆ ಲಂಕೇಶರೇ ತಮ್ಮ ಕಾದಂಬರಿ `ಬಿರುಕ'ನ್ನು ನಾಟಕವಾಗಿಸಿದ್ದರು. ಕುವೆಂಪು `ಕಲ್ಕಿ' ಕವನವನ್ನು ನಾಟಕವಾಗಿಸುವ ಪ್ರಯತ್ನವನ್ನೂ ಈ ಅವಧಿಯಲ್ಲಿ ಮಾಡಲಾಯಿತು. ಹೀಗೆ ಭಿನ್ನ ಭಿನ್ನ ರೀತಿಯ ಪ್ರಯೋಗಗಳು ಕನ್ನಡದಲ್ಲಿ ಬಂದವು. ಚಿ. ಶ್ರೀನಿವಾಸರಾಜುರವರ `ಐದು ಮೂಕ ನಾಟಕ' ಗಳನ್ನು ಇಲ್ಲಿಯೇ ಹೆಸರಿಸಬಹುದು. ದಲಿತ ಬಂಡಾಯಗಳ ಹಿನ್ನೆಲೆಯಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಲಘುವಾಗಿ ವಿಡಂಬಿಸುವ ನಾಟಕಗಳು ರಚಿತವಾಗಿದ್ದು ಬೀದಿ ನಾಟಕಗಳೆನ್ನಬಹುದಾದ ಅವುಗಳದ್ದೇ ಒಂದು ಪ್ರಕಾರ ಕನ್ನಡದಲ್ಲಿ ತಲೆ ಎತ್ತಿದೆ. ಈ ಪ್ರಕಾರಕ್ಕಾಗಿಯೇ ಒಂದು ಪ್ರತ್ಯೇಕ ಪ್ರಬಂಧ ರಚಿಸಲ್ಪಡುವುದರಿಂದ ಇಲ್ಲಿ ಅದನ್ನು ಹೆಸರಿಸಿ ಕೈಬಿಡಲಾಗಿದೆ.

ಕನ್ನಡ ರಂಗಭೂಮಿಗೆ ಆಧುನಿಕ ಸೌಕರ್ಯಗಳೆನ್ನಿಸುವ ಸ್ಪಾಟ್‌ಲೈಟ್, ಸೈಕ್ಲೋರಮಾ ಮುಂತಾದವುಗಳು ಒದಗಿ ಬಂದಾಗ ನಾಟಕದ ರಚನೆಯಲ್ಲೂ ಮಾರ್ಪಾಟುಗಳಾಗುವುದು ಅನಿವಾರ್ಯವಾಯಿತು. ಡ್ರಾಯಿಂಗ್ ರೂಂ ನಾಟಕಗಳ ಬದಲಿಗೆ ಭಿನ್ನಬಗೆಯ ನಾಟಕಗಳು ಅವಶ್ಯವೆನ್ನಿಸಿದವು. ಕೆಲವರು ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಗೆ ಹೋಗಿ ತರಬೇತಿಯನ್ನು ಪಡೆದುಬಂದರು. ಶಿವಾನಂದ, ಬಿ. ವಿ.ಕಾರಂತ, ರಾಮಮೂರ್ತಿ ಮತ್ತು ಅಕ್ಷರ ಇವರನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದು. ಪಾಶ್ಚಾತ್ಯ ನಾಟಕ ತಂಡಗಳೂ ಕರ್ನಾಟಕಕ್ಕೆ ಬಂದು ಪ್ರಯೋಗಗಳನ್ನು ಕೊಟ್ಟರು. ಇವೆಲ್ಲವುಗಳ ಪರಿಣಾಮ ಕನ್ನಡ ನಾಟಕಕಾರರ ಮೇಲೆ, ನಿರ್ದೇಶಕರ ಮೇಲೆ ಆಗಿ, ನಾಟಕದ ಸ್ವರೂಪಗಳೂ ನಿಚ್ಚಳವಾಗತೊಡಗಿದವು. ಅಂತೆಯೇ ನಾಟಕ ಸಾಹಿತ್ಯಕೃತಿಯೇ ಬೇರೆ, ನಾಟಕ ರಂಗಪ್ರಯೋಗವೇ ಬೇರೆ, ಅವೆರಡೂ ಭಿನ್ನ ಮಾಧ್ಯಮಗಳು ಎಂಬುದು ಸ್ಪಷ್ಟವಾಗತೊಡಗಿತು. ಈ ಅರಿವಿನಲ್ಲಿ ರಂಗಕೃತಿಗಳನ್ನು ರಚಿಸಲು

ಕೆಲವರು ಪ್ರಯತ್ನಿಸಿದರು. ಅಂಥ ಕೃತಿಗಳಲ್ಲಿ ಸಾಹಿತ್ಯ ಗುಣ ಕಡಿಮೆಯಾಗಿದ್ದು, ಭಾಷೆಯೂ ಅಲಕ್ಷ್ಯಗೊಂಡಿರುವುದು ಕಂಡುಬರುತ್ತದೆ. ಕೆಲವರು ಅನೇಕ ರಂಗ ಪ್ರಯೋಗಗಳನ್ನು ಕಂಡಮೇಲೆ ತಮ್ಮ ಕೃತಿಯನ್ನು ಪ್ರಕಟಿಸುವ ಪ್ರಯತ್ನವನ್ನೂ ಮಾಡಿದರು. ಇಂಥ ಸಂದರ್ಭದಲ್ಲಿ ಆ ಕೃತಿಗಳಲ್ಲಿ ಕೆಲವಾದರೂ ರಂಗ ಯೋಗ್ಯ ಮತ್ತು ವಾಚನಯೋಗ್ಯವಾಗುವ ಸಂಭವವಿದೆ. ಗ್ರೀಕ್ ನಾಟಕಗಳು ಹಾಗೂ ಷೇಕ್ಸಪಿಯರನ ನಾಟಕಗಳೂ ಹೀಗೆಯೇ ಸೃಷ್ಟಿಯಾದವೆಂದು ಹೇಳುತ್ತಾರೆ. ಹವ್ಯಾಸಿನಾಟಕ ಸಾಹಿತ್ಯವು ಕನ್ನಡದಲ್ಲಿ ಹವ್ಯಾಸಿ ರಂಗ ಭೂಮಿಯ ಏರಿಳಿತಗಳೊಂದಿಗೆ ಸಂಬಂಧವನ್ನು ಹೊಂದಿರುವುದು ಅದರ ಪ್ರಭಾವಕ್ಕೆ ಒಳಗಾಗಿರುವುದು ಸ್ಪಷ್ಟವಾಗುತ್ತದೆ. ಇಂದಿಗೂ ಕನ್ನಡದಲ್ಲಿ ಉತ್ತಮ ನಾಟಕಗಳ ಕೊರತೆ ಇರುವುದು ನಿಜ. ಬೆಂಗಳೂರಿನ ರಂಗನಿರಂತರ, ಮೈಸೂರಿನ ರಂಗಾಯಣ, ಹೆಗ್ಗೋಡಿನ ನೀನಾಸಂ ಮುಂತಾದ ರಂಗತರಬೇತಿ ಕೇಂದ್ರಗಳು ರಂಗಭೂಮಿಯ ವ್ಯಾಪ್ತಿಯನ್ನು ವಿಸ್ತರಿಸಲು ಶ್ರಮಿಸುತ್ತಿವೆ. ಕಂಪನಿ ನಾಟಕ ಮತ್ತು ಹವ್ಯಾಸಿ ನಾಟಕಗಳ ಕಂದರವನ್ನು ತುಂಬಲು ಪ್ರಯತ್ನಿಸುತ್ತಿವೆ.

ನಾಡಿನಾದ್ಯಂತ (ರೆಪರ್ಟರಿ) ತಿರುಗಾಟಗಳ ಮೂಲಕ ರಂಗಪ್ರಜ್ಞೆ, ನಾಟಕದಲ್ಲಿ ಅಭಿರುಚಿ ಮೂಡಿಸುತ್ತಿವೆ. ಇಂಥ ಚಟುವಟಿಕೆಗಳಿಂದಲಾದರೂ ಕನ್ನಡದಲ್ಲಿ ನಾಟಕ ಸಾಹಿತ್ಯ ರಚನೆಗೆ ಹೆಚ್ಚಿನ ಸ್ಫೂರ್ತಿ ಅಥವಾ ಚಾಲನೆ ಸಿಗುವುದೋ ನೋಡಬೇಕು.

ಆಯ್ದ ಆಧಾರ ಗ್ರಂಥಗಳು

೧. ಅಶೋಕ ಟಿ. ಪಿ. (ಸಂ) ಕೆ. ವಿ. ಸುಬ್ಬಣ್ಣ ಅವರ ಆಯ್ದ ಬರಹಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೨

೨. ಗಿರಡ್ಡಿ ಗೋವಿಂದರಾಜ, ನಾಟಕ ಸಾಹಿತ್ಯ ಮತ್ತು ರಂಗಭೂಮಿ ಅಕ್ಷರ ಪ್ರಕಾಶನ, ಹೆಗ್ಗೋಡು ೧೯೮೫

೩. ಪ್ರಸನ್ನ. ನಾಟಕ ರಂಗಕೃತಿ, ಅಕ್ಷರ ಪ್ರಕಾಶನ, ಹೆಗ್ಗೋಡು ೧೯೮೫

೪. ಮನ್ವಂತರ ನಾಟಕಾಂಕ, ಮನ್ವಂತರ ಪ್ರಕಾಶನ, ಧಾರವಾಡ, ೧೯೬೭

೫. ಮರುಳಸಿದ್ದಪ್ಪ ಕೆ. ಆಧುನಿಕ ಕನ್ನಡ ನಾಟಕ, ಲಿಪಿ ಪ್ರಕಾಶನ, ಬೆಂಗಳೂರು ೧೯೯೩.

೬. ರಂಗನಾಥ ಎಚ್. ಕೆ. ಕರ್ನಾಟಕ ರಂಗಭೂಮಿ, ಸುರುಚಿ ಪ್ರಕಾಶನ, ಮೈಸೂರು ೧೯೭೮.

ಬೀದಿನಾಟಕ ಸಾಹಿತ್ಯ

- ಶಿವಾನಂದ ಶೆಟ್ಟರ್

ಪೀಠಿಕೆ :

ಕನ್ನಡ ಸಾಹಿತ್ಯದಲ್ಲಿ ಇತರ ಹಲವು ಸಾಹಿತ್ಯ ಪ್ರಕಾರಗಳನ್ನು ವಿಶ್ಲೇಷಿಸಿದಂತೆ ಬೀದಿ ನಾಟಕ ಸಾಹಿತ್ಯ ಪ್ರಕಾರವನ್ನು ವಿಶ್ಲೇಷಿಸುವುದು ಸುಲಭದ ಕೆಲಸವಂತೂ ಅಲ್ಲವೇ ಅಲ್ಲ. ಇದರರ್ಥ ನಮ್ಮಲ್ಲಿ ಬೀದಿನಾಟಕ ಪ್ರಕಾರ ಸ್ಪಷ್ಟ ರೂಪದಲ್ಲಿಲ್ಲವೆಂದಲ್ಲ. ಪಶ್ಚಿಮಬಂಗಾಲ, ಕೇರಳಗಳನ್ನು ಹೊರತುಪಡಿಸಿದರೆ ಇಡೀ ಭಾರತದಲ್ಲಿ ಒಂದಿಲ್ಲೊಂದು ರೀತಿಯ ಸುದ್ದಿಯಲ್ಲಿರುವ ರಂಗಭೂಮಿಯೆಂದರೆ ಕರ್ನಾಟಕದ್ದೇ. ಅದರಲ್ಲೂ ವಿಶೇಷವಾಗಿ ಬೀದಿ ನಾಟಕಗಳು. ಆದರೆ ಆಶ್ಚರ್ಯದ ಸಂಗತಿಯೆಂದರೆ ಸುಮಾರು ಎರಡು ದಶಕಗಳ ಇತಿಹಾಸವಿರುವ ಕನ್ನಡ ಬೀದಿನಾಟಕ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಇನ್ನೂತನಕ ಒಂದೂ ಪೂರ್ಣ ಪ್ರಮಾಣದ ಗ್ರಂಥ ಪ್ರಕಟವಾಗಿಲ್ಲ. ಅಲ್ಲಲ್ಲಿ ಕೆಲ ಬಿಡಿ ಲೇಖನ, ವಿಮರ್ಶೆಯನ್ನು ಬಿಟ್ಟರೆ ಗಣನೀಯವೆನ್ನಬಹುದಾದ ಪ್ರಮಾಣದಲ್ಲಿ ಈ ಪ್ರಕಾರದ ಮೌಲ್ಯಮಾಪನ ಈ ವರೆಗೆ ನಡೆದಿಲ್ಲ. ಬೀದಿನಾಟಕ ಒಂದು ವಿಶಿಷ್ಟವಾದ ರಂಗ ಪ್ರಕಾರ. ಇತರೆ ಪ್ರಕಾರಗಳೊಂದಿಗೆ ಹೋಲಿಸಿ ಹೇಳುವುದಾದರೆ ಇದೊಂದು ಹೊಸ ಪ್ರಕಾರವೇ ಎನ್ನಬೇಕು. ಬಹುಶಃ ಇದೇ ಬೀದಿನಾಟಕದ ಕುರಿತು ಸಮಗ್ರ ಮಾಹಿತಿ ದೊರಕದಿರುವುದಕ್ಕೆ ಪ್ರಮುಖ ಕಾರಣ. ಬೀದಿ ನಾಟಕ ಇಂದಿನ ನಮ್ಮ ಎಲ್ಲ ಬಗೆಯ ಜನಾಂದೋಲನಗಳ ಅವಿಭಾಜ್ಯ ಅಂಗವಾಗಿದೆ. ಹೀಗಾಗಿ ಇದನ್ನು ಕುರಿತಾದ ವ್ಯಾಪಕ ಚರ್ಚೆ ಅನಿವಾರ್ಯವಾಗುವ ಹಂತವನ್ನು ನಾವಿಂದು ತಲುಪಿದ್ದೇವೆ. ಈ ಮಾಧ್ಯಮದ ಸ್ವರೂಪಲಕ್ಷಣಗಳ ಬಗೆಗೆ ಗಂಭೀರವಾದ ಚರ್ಚೆ ಏರ್ಪಡದಿರಲು ನಮ್ಮ ಅಕಾಡೆಮಿಕ್ ವಲಯಗಳಲ್ಲಿನ ಮಡಿವಂತಿಕೆಯೂ ಕಾರಣವಾಗಿರುವಂತೆ ತೋರುತ್ತದೆ. ಒಂದು ವಿಶಿಷ್ಟ ಸಂದರ್ಭದಲ್ಲಿ ಹುಟ್ಟಿಕೊಂಡ ಬೀದಿನಾಟಕದ ಹಿನ್ನೆಲೆ-ಮುನ್ನೆಲೆಗಳನ್ನು ಅರ್ಥಮಾಡಿಕೊಂಡು, ವ್ಯಾಖ್ಯಾನಿಸಿ, ಅದರ ಕುರಿತ ದಾಖಲೆ, ವಿವರಗಳನ್ನು ಹುಡುಕುವುದು ನಮ್ಮ ಸಾಂಪ್ರದಾಯಿಕ (Orthodox) ಸಾಹಿತ್ಯ ಸಂಶೋಧಕರಿಗೆ ಆಗದೇ ಹೋಯಿತು. ಅಥವಾ ಅದೊಂದು ತೀವ್ರ ಪ್ರಾಶಸ್ತ್ಯದ ಕೆಲಸವೆಂದು ಅವರು ಭಾವಿಸಲೇ ಇಲ್ಲ. ಬೀದಿನಾಟಕ ಕ್ಷೇತ್ರದಲ್ಲಿ ವಿಶೇಷ ಆಸಕ್ತಿವಹಿಸಿದ ಶ್ರೀಮತಿ ವಿಜಯಾ ಅವರು ಬೀದಿ ನಾಟಕಗಳನ್ನು ದಾಖಲೆಗೊಳಿಸುವಲ್ಲಿನ ವಿಫಲತೆಗೆ ಕಾರಣಗಳನ್ನು ಹುಡುಕುತ್ತ 'ಪ್ರಚಾರದ ಅಗತ್ಯವಿಲ್ಲ. ಅದಕ್ಕಾಗಿ ನಾವು ಕೆಲಸ ಮಾಡುತ್ತಿಲ್ಲ. ನಮಗೆ ಜನರಿಗೆ ಸಂವಹನವಾಗುವುದು ಮುಖ್ಯ' ಎಂಬ ಉದಾತ್ತ ಅನ್ನಿಸುವಂಥ ನಂಬಿಕೆಯೂ ಸಹ ಕೆಲವರು ಜನಮನದಲ್ಲಿ ಆಗುತ್ತಿರುವ ಕೆಲಸದ ಬಗ್ಗೆ ತಿಳಿಸದೇ ನಿಲ್ಲಲು ಕಾರಣವಾಗಿರಬಹುದು. ಒಟ್ಟಾರೆ

ಮ್ಮಲ್ಲಿ ಆಗುವ ಏಷ್ಟೋ ಕೆಲಸಗಳು ಸಮ್ಮಿಲ್ಲದೇ ತಣ್ಣಗಾಗಿ ಬಿಡುತ್ತವೆ' ಎನ್ನುತ್ತಾರೆ.[1] ಆದರೆ ಮುಂಬರುವ ದಿನಗಳಲ್ಲಿ ಹೀಗಾಗಲಿಕ್ಕಿಲ್ಲ. ಏಕೆಂದರೆ ಒಂದು ಕಡೆ ಬೀದಿನಾಟಕವನ್ನು ತುಳಿಯುವ ಮುಖಾಂತರ ಕಲಾವಿದರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೇ ಅಪಾಯ ತಂದಿಟ್ಟ ಸರಕಾರಗಳೇ ಇಂದು ಸಾಕ್ಷರತೆಗಾಗಿ, ಕುಟುಂಬಯೋಜನೆಯ ಪ್ರಚಾರಕ್ಕಾಗಿ, ಕೋಮು ಸೌಹಾರ್ದತೆಯ ಅಗತ್ಯವನ್ನು ಬಿಂಬಿಸುವುದಕ್ಕಾಗಿ, ಜನಪರ ಸಂಘಟನೆಗಳು ಮೊರೆಹೊಕ್ಕು ಬೀದಿ ನಾಟಕಗಳನ್ನು ಆಡಿಸುತ್ತಿವೆ. ಮತ್ತೊಂದು ಕಡೆ ಯಾವ ಜಾತಿವಾದಿ ಕೋಮುವಾದಿ ಪ್ರತಿಗಾಮಿ ಸಂಘಟನೆಗಳು ಈ ಮಾಧ್ಯಮದ ಮುಖಾಂತರ ಪ್ರತಿಭಟನೆ ಎದುರಿಸುತ್ತಿದ್ದವೋ, ಅವೇ ಸಂಘಟನೆಗಳಿಂದು ಜನ ಸಮೂಹದ ಮೇಲೆ ಬೀದಿ ನಾಟಕಗಳು ಬೀರುವ ಪ್ರಭಾವವನ್ನು ಅರಿತುಕೊಂಡು ಅವುಗಳನ್ನು ತಮ್ಮ ಉದ್ದೇಶಕ್ಕೆ ಬಳಸಿಕೊಳ್ಳಲು ಪ್ರಯತ್ನಿಸುತ್ತಿವೆ. ಹಾಗೂ ಕೆಲವು Advertising Agencyಗಳೂ ಸಹಿತ ವಿವಿಧ ಕಂಪನಿಗಳ ಸರಕು ಮಾರಾಟದ ಪ್ರಚಾರಕ್ಕೆ ಬೀದಿ ನಾಟಕದ ತಂತ್ರಗಳನ್ನೇ ಬಳಸಿಕೊಳ್ಳುತ್ತಿರುವುದನ್ನು ನೋಡಿದರೆ ಈ ಪ್ರಕಾರ ಮುಂಬರುವ ದಿನಗಳಲ್ಲಿ ಎಷ್ಟೊಂದು ವ್ಯಾಪಕವಾಗಿ ಸಮ್ಮಾನವಿಸಲಿದೆ ಎಂಬುದು ತಿಳಿದೀತು. ಸಂತೆಯಲ್ಲಿ ಕುಳಿತು ಹಲ್ಲುಪುಡಿ ಮಾರುವವರೂ, ಜೊಂಬಾಡುವವರೂ, ಹಾವಗಾರಾಟದವರೂ ಸಹ ಬೀದಿಯಲ್ಲಿನ ಜನರನ್ನು ಆಕರ್ಷಿಸುತ್ತಾರೆ. ಆದರೆ ಆ ಕುತೂಹಲ ಆ ಕ್ಷಣದ್ದು ಮಾತ್ರ. ಬೀದಿ ನಾಟಕದ ಕುರಿತಾದ ಕುತೂಹಲ ಹಾಗಲ್ಲ. ಅದು ಜನ ಸಾಮಾನ್ಯನೊಬ್ಬ ತನ್ನನ್ನುತಾನೇ ಅರಿಸುವ ನಿರಂತರ ಕುತೂಹಲ. ಆದ್ದರಿಂದ ಈ ಬೀದಿನಾಟಕ ಪ್ರಕಾರ ಸದ್ದಿಲ್ಲದೇ ತಣ್ಣಗಾಗಲಾರದು. ಅದು ಇಂದಲ್ಲ ನಾಳೆ ಮನೆ ಮನಗಳನ್ನು ಮುಟ್ಟುವಂತಹದ್ದೇ. ನಿಜವಾದ ಬೀದಿ ನಾಟಕ ಯಾವುದು ಎಂಬ ಚರ್ಚೆ ನಮ್ಮ ಇಂದಿನ ಸಾಂಸ್ಕೃತಿಕ ಅನಿವಾರ್ಯತೆಗಳಲ್ಲಿ ಒಂದು.

ಬೀದಿನಾಟಕ : ಏನು? ಏಕೆ? ಹೇಗೆ

ಕಾವ್ಯ ಭಾಷಣಗಳು ಬೀದಿಗೆ ಬಂದಂತೆಯೇ ನಾಟಕಗಳು ಕೂಡ ಬೀದಿಗೆ ಬಂದವು. ಕಾರಣ ಸ್ಪಷ್ಟ. ದಂತಗೋಪುರದೊಳಗೆ ಕುಳಿತು ಕಲೆಯನ್ನು ಪ್ರದರ್ಶಿಸುವುದರ ಔಚಿತ್ಯ ಪ್ರಶ್ನಿಸಲ್ಪಟ್ಟಿತ್ತು. ಒಂದು ಕಲೆ ಅಥವಾ ಸಾಹಿತ್ಯ ಪ್ರಕಾರ ಬೀದಿಗೆ ಬರುವುದೆಂದರೆ ಜನ ಸಮೂಹವನ್ನು ತಲುಪುವುದು ಎಂದರ್ಥ. ರಂಗಮಂದಿರಗಳಲ್ಲಿ ಆಡಲ್ಪಡುವ ನಾಟಕಗಳು ಹಲವಾರು ಸಂದರ್ಭಗಳಲ್ಲಿ ಒಂದು ರೀತಿಯ ಗ್ಲಾಮರ್ ಆಗಿ ಕೇವಲ ಮಧ್ಯಮ, ಮೇಲ್ಮಧ್ಯಮ, ಶ್ರೀಮಂತ ವರ್ಗದ ಮನರಂಜನೆಗಾಗಿ ಆಡಲ್ಪಡುವಂಥವು. ರಂಗಭೂಮಿ ಕೇವಲ ಮನರಂಜನೆಗಾಗಿ ಎಂಬ ಅಭಿಪ್ರಾಯ ಒಂದು ಕಾಲಕ್ಕೆ ಇತ್ತು. ಆದರೆ ಇತರೆ ಜನಪ್ರಿಯ ಮಾಧ್ಯಮಗಳಾದ ಸಿನಿಮಾ, ಟಿ. ವ್ಹಿ. ವಿಡಿಯೋಗಳಂತೆ ಕೇವಲ ಮನರಂಜನೆಯೇ ಪ್ರಮುಖ ಉದ್ದೇಶವಾದರೆ ರಂಗಭೂಮಿ ಅವುಗಳಿಗಿಂತ ಭಿನ್ನವಾದ ಸಾಧನೆಯನ್ನೇನು ಮಾಡಿ ಇರುತಿತ್ತು.? ಜನಪ್ರಿಯ ಸಮೂಹ ಸಂಸ್ಕೃತಿಗೆದುರಾಗಿ, ಜನತೆಗೆ ಪರ್ಯಾಯ ಸಂಸ್ಕೃತಿ ಯೊಂದನ್ನು ಹುಟ್ಟುಹಾಕುವಲ್ಲಿ ರಂಗಭೂಮಿ ಪ್ರಮುಖ, ಪರಿಣಾಮಕಾರಿ ಸಾಧನವಾಗ ಬಲ್ಲದೆಂದು ನಂಬಿದ ಹಲವು ಜನ ನಾಟಕಕಾರರು, ರಂಗಕರ್ಮಿಗಳು ತಮ್ಮ ಮಾಧ್ಯಮದ

---

[1] ಜೆ. ಎಸ್. ಪೋಹಸ್ಕರ 'ಸಮೂಹದಿಂದ ಸಮೂಹಕ್ಕೆ ಬೀದಿ ನಾಟಕ' ಪುಸ್ತಿಕೆಗೆ ಬರೆದ ವಿಜಯಾರ ಮನಸ್ಕರಿಯಲ್ಲಿ.

ಮುಖಾಂತರ ಸಾಮಾಜಿಕ ರಾಜಕೀಯ ಸ್ಥಿತ್ಯಂತರಗಳಿಗೆ ಪ್ರತಿಕ್ರಿಯಿಸತೊಡಗಿದರು. ಇದ
ಪುನರ್ರಚನೆಯಲ್ಲಿ, ಸಾಂಸ್ಕೃತಿಕ ಕ್ರಾಂತಿ ಒಂದು ಮುಖ್ಯವಾದ ಹಂತ. ಇದು ಜಾಗತಿ
ಗುರುತಿಸಲ್ಪಟ್ಟಿ ಸತ್ಯ. ಸಾಮಾಜಿಕ ರಾಜಕೀಯ ಆರ್ಥಿಕ ರಚನೆಗಳ ಪುನರ್ ನಿರ್ಮಾಣ
ಸಾಂಸ್ಕೃತಿಕ ಮಾಧ್ಯಮಗಳು ಜನರನ್ನು ಬದಲಾವಣೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳ
ಮಾಡುವಲ್ಲಿ ಪ್ರಮುಖ ಪಾತ್ರವಹಿಸಿವೆ. `ರಂಗಭೂಮಿಯಲ್ಲದ ರಂಗಭೂಮಿ'
ಬೀದಿನಾಟಕದ ಕಲ್ಪನೆ ಜಾಗತಿಕವಾಗಿ ಹುಟ್ಟಿಕೊಂಡದ್ದು ಈ ಶತಮಾನದ ಪ್ರಾರಂಭದಲ್ಲಿ
ಬೀದಿನಾಟಕಗಳು ವ್ಯವಸ್ಥೆಯ ಬದಲಾವಣೆಯ ನಿರ್ಣಾಯಕ ಹಂತದಲ್ಲಿಯೇ ಜನ
ಹೆಚ್ಚಾಗಿ ಕಂಡು ಬರುವುದನ್ನು ನೋಡಿದರೆ ಇವು ವ್ಯವಸ್ಥೆಯೊಂದರ ವಿರುದ್ಧ ಪ್ರತಿಭಟ
ಜನಗಳಾಗಿಯೇ ಕೆಲಸ ಮಾಡಿದ್ದು ವಿದಿತವಾಗುತ್ತದೆ. ಬೀದಿ ನಾಟಕಕ್ಕೆ ತನ್ನನ್ನು
ಅರ್ಪಿಸಿಕೊಂಡು ಅವುಗಳ ಕುರಿತೇ ವಿಶೇಷ ಸಂಶೋಧನೆ ಕೈಗೊಂಡಿದ್ದ ಖ್ಯಾತ ಅ
ವಿ. ಸಪ್ರೆ ಹಿಮ್ಮೆ `ರಂಗಭೂಮಿ ನನಗೆ ಪ್ರತಿಭಟನೆಯ ಪ್ರಬಲ ಮಾಧ್ಯಮ. ಅದರ ಮ
ಉದ್ವೇಶ ಹೋರಾಟ ಮಾಡುವುದು ಮತ್ತು ಜನರನ್ನು ಕಾರ್ಯೋನ್ಮುಖರನ್ನಾಗಿ ಮಾಡು
ರಂಗಭೂಮಿ ತನ್ನ ಪಾತಿಗೆ ತಾನು ಮಾತ್ರ ವಿನೂ ಸಾಧಿಸಲಾಗದು. ಆದರೆ
ಪ್ರಜಾಪ್ರಭುತ್ವಾವಿ ಆಂದೋಳನದ ಅವಿಭಾಜ್ಯ ಅಂಗವಾಗಿ ಕಾರ್ಯ ನಿರ್ವಹಿಸಬೇ
ಮಾಧ್ಯಮದಿಂದ ನಾವು ಹೊಸ ಜಾಗತಿಕ ದೃಷ್ಟಿಕೋನವನ್ನು ಬೆಳೆಸಬಹುದು. ಸಮಕ
ದಹದಹಿಸುತ್ತಿರುವ ಮತ್ತು ಶಾಶ್ವತವಾದ ಸಮಸ್ಯೆಗಳ ಕುರಿತು ಚರ್ಚಿಸಬಹು
ಎನ್ನುತ್ತಾರೆ. ನಮಗೆ ನಮ್ಮ ಸಮಸ್ಯೆಗಳನ್ನು ಅರ್ಥೈಸಿಕೊಳ್ಳಲು ಹಾಗೂ ಬಗೆ ಹರಿ
ಭಾಷಣಗಳು, ಪತ್ರಿಕಾವರದಿಗಳನ್ನು ಮೀರಿ, ಸಾಂಸ್ಕೃತಿಕ ಮಾಧ್ಯಮದ ಮುಖಾಂತರ ಬ
ತಲುಪಲು ಬೀದಿ ನಾಟಕಗಳು ಸಹಾಯಕಾರಿಯಾದವು.

ನಮ್ಮ ದೇಶದ ರಾಜಕೀಯ ಚರಿತ್ರೆಯ ಒಂದು ಘಟ್ಟದಲ್ಲಿ(ಅದನ್ನು ಬಹ
ರಂಗಭೂಮಿ ವಿಮರ್ಶಕರು ಆಂತರಿಕ ತುರ್ತು ಪರಿಸ್ಥಿತಿಯ ಕಾಲವೆಂದು ಗುರುತಿಸು
ಆಂದೋಲನಗಳು ರೂಪುಗೊಳ್ಳುತ್ತಿದ್ದ ಹಂತದಲ್ಲಿ ಇತರೆ ಸಾಹಿತ್ಯ ಪ್ರಕಾರಗಳನ್ನು ಹಾ
ಚಿಂತನೆ ಹೇಗೆ ಆಕ್ರಮಿಸಿತೋ ಹಾಗೆ ಅದಕ್ಕಿಂತ ದೊಡ್ಡ ಪ್ರಮಾಣದಲ್ಲಿ ರಂಗ
ಯನ್ನು ಆಕ್ರಮಿಸಿಕೊಂಡಿತು. ನಮ್ಮ ವ್ಯೋಮಿಂಯಂ ರಂಗಭೂಮಿಯು ಸಹ ಹಾ
ಆಯಾಮ ಪಡೆಯಿತು. ರಂಗಭೂಮಿ ಆಂದೋಲನವೊಂದರ ಭಾಗವಾಗುವ ಸಂದ
ಸಹಜವಾಗಿಯೇ ನಾಟಕದ ವಸ್ತು -ತಂತ್ರಗಳೂ ಬದಲಾಗಬೇಕಾಗುತ್ತದೆ ; ಆದ
ಆದರೂ ವ್ಯೋಮಿಂಯಂ ನಾಟಕಗಳು ಆಂದೋಲನದಲ್ಲಿ ಸಕ್ರಿಯವಾಗಬೇಕಿದ್ದ ಜನ
ವನ್ನು ಇನ್ನಿಯಾಗಿ ತಲುಪಲಾರದಾದವು. ಹಗಲು ಕೆತ್ತು ನಾಟಕನೋಡುವ ಸಾಮಾ
ಜನರ ರಾಜಕೀಯ ಪ್ರಜ್ಞೆ ಆಗ ವೃದ್ಧಿಸಿರಬಹುದೇ ವಿನಃ ಅದರಿಂದ ಆಗಿನ ಆಂದೋಳ
ವಿಶೇಷ ಉಪಯೋಗವೇನು ಆಗಲಿಲ್ಲ. ಬಹಳವೆಂದರೇ ಆ ವರ್ಗದ ಜನರಿಗೆ ಆ
ಅರ್ಥಪೂರ್ಣ ಮನರಂಜನೆಯಾಯಿತು ಅಷ್ಟೇ. ಹೀಗಾಗಿ ವ್ಯೋಮಿಂಯಂ ನಾ
ಸಂಖ್ಯಾತ ಜನರಿಂದ ದೂರವೇ ಉಳಿಯಿತು. ನಗರ ಪ್ರದೇಶದ ಕೆಲವೇ ಜನರ ಮೂ
ನಮ್ಮ ರಂಗಭೂಮಿ ದೇಶದ ಪ್ರಮುಖ ಸಾಂಸ್ಕೃತಿಕ ಶಕ್ತಿಯಾಗಿ ಬೆಳೆದು
ಇದರಿಂದಾಗಿ ದೇಶದ ಸಮಕಾಲೀನ ಸ್ಥಿತಿಗತಿಗಳನ್ನು ಬಿಂಬಿಸುವ `ಜನತಾ ರಂಗ

...ತ್ಯ ಕಂಡುಬಂತು. ಜನಸಾಮಾನ್ಯರಲ್ಲಿ ಹೊಸ ಸಾಮಾಜಿಕ ರಾಜಕೀಯ ಪ್ರಜ್ಞೆಯನ್ನುಂಟು ...ಮಾಡಲು ಬೇರೊಂದು ಮಾಧ್ಯಮದ ಶೋಧನೆ ಅನಿವಾರ್ಯವಾಯಿತು. ಈ ಹುಡುಕಾಟ ...ದಲ್ಲಿಯೇ ನಾಟಕಗಳು ರಂಗಮಂದಿರಗಳನ್ನು ಬಿಟ್ಟು ಬೀದಿಗೆ ಬರಲು ಪ್ರಯತ್ನಿಸಿದವು. ...ಸಾರು ಇದೇ ಹಂತದಲ್ಲಿಯೇ ಜನಸಾಮಾನ್ಯರು, ವಿಶೇಷವಾಗಿ ಅಕ್ಷರ ಮಾಧ್ಯಮ ...ತಿಳಿಯದವರು, ಇಂಥ ಒಂದು ಹೊಸ ಮಾಧ್ಯಮದಲ್ಲಿ ತಮ್ಮ ಸ್ವಂತ ಹುಡುಕಾಟವನ್ನು ...ಡಿಕೊಂಡಿದ್ದರು. ಅದರ ಪ್ರತಿಫಲವೇ ಬೀದಿನಾಟಕ ಸಾಹಿತ್ಯ. ಇದು ಹಣಕ್ಕೆ ಪ್ರತಿಯಾಗಿಯೇ ...ಬರೆಯಲ್ಪಡುವ ಸಾಹಿತ್ಯವಲ್ಲ. ಏಕೆಂದರೆ ಇದನ್ನು ಬಯಸುವವರು ಕೊಳ್ಳುವ ಶಕ್ತಿಯನ್ನು ...ಮಾಡಿಕೊಂಡವರು. ಆದರೆ ಮನರಂಜನೆಯ ಮುಖಾಂತರ ಸಂದೇಶದ ಸಾಂಗತ್ಯಕ್ಕಾಗಿ ...ಹೋರಾಡುವವರು. ದೇಶದ ಹಳ್ಳಿ, ಕೊಂಪೆ, ಕೊಳಗೇರಿ, ಓಣಿ, ಗುಡಿಸಲು ಗಳಲ್ಲಿನ ...ಪ್ರಾಂತರ ಜನ ಈ ಮಾಧ್ಯಮವನ್ನು ತೆರೆದ ಹೃದಯದಿಂದ ಸ್ವಾಗತಿಸಿದರು. ಪ್ರಾರಂಭಿಕ ...ಹಂತದಲ್ಲಿ ಬೀದಿನಾಟಕಗಳು ಕರಪತ್ರಗಳಂತೆ ಕಂಡಿದ್ದರೆ ಯಾರೂ ಅಚ್ಚರಿ ಪಡಬೇಕಾಗಿಲ್ಲ. ...ದಿಗಳೂ ಸಹ ಬೀದಿನಾಟಕ ಮುಖ್ಯವಾಗಿ ದಿನಪತ್ರಿಕೆಯೊಂದರ ಕಾರ್ಯ ವನ್ನು ...ನಿರ್ವಹಿಸುತ್ತದೆ ಎನ್ನುವವರಿದ್ದಾರೆ. ನಮ್ಮ ದಿನಪತ್ರಿಕೆಯ ಸಮಸ್ಯೆಗಳನ್ನು ಅರ್ಥಮಾಡಿ ...ಕೊಳ್ಳುವಲ್ಲಿ ಹಾಗೂ ಅವುಗಳ ವಿಶ್ಲೇಷಣೆಯನ್ನು ಅಕ್ಷರ ಬಲ್ಲವರಿಗೆ ತಲುಪಿಸುವ ...ಪತ್ರಿಕೆಗಳಂತೆ ಬೀದಿನಾಟಕಗಳು ಅನಕ್ಷರಸ್ಥರಿಗೆ ಗ್ರಾಮೀಣ ಮುಗ್ಧರಿಗೆ ಅವರ ಸಮಸ್ಯೆಗಳನ್ನು ...ತೋರಿಸಿದರೆ ಅದರಲ್ಲಿ ತಪ್ಪೇನಿದೆ? ಅದು ಸರಿಯೇ. ಆದರೆ ಬೀದಿನಾಟಕಗಳು ಒಂದು ...ಸಂದೇಶ ಸಾರುವ ಕರಪತ್ರಗಳು ಮಾತ್ರ ಎಂಬ ಆರೋಪಕ್ಕೆ ಉತ್ತರಿಸುತ್ತ ರಂಗವಿಮರ್ಶಕ ...ಎಸ್. ಮೋಹನರು, ಸಂದೇಶವನ್ನು ಹೊತ್ತ ಮಾತ್ರಕ್ಕೆ ಬೀದಿನಾಟಕ ಕರಪತ್ರ ...ವಾಗುವುದಿಲ್ಲವೆನ್ನುತ್ತಾರೆ. ಬೀದಿ ನಾಟಕಗಳನ್ನು ಪಕ್ಷಗಳು, ಸಂಘಟನೆಗಳು ಬಳಸಿಕೊಳ್ಳುತ್ತವೆ ...ಎಂದ ಮಾತ್ರಕ್ಕೆ ಅವುಗಳಿಂದ ದೂರವಿರಬೇಕು ಎನ್ನುವುದು ಬೀದಿನಾಟಕದ ಮೂಲಗುಣಕ್ಕೆ ...ಕೊಡಲಿ ಹಾಕಿದಂತೆ ಎನ್ನುತ್ತಾರೆ. ರಾಜಕೀಯವೇ ನಮ್ಮ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ...ಜೀವನವನ್ನು ನಿರ್ಧರಿಸುವುದರಿಂದ ರಾಜಕೀಯ ಪ್ರಶ್ನೆಗಳನ್ನು ಎದುರಿಸಲಾಗದ ಮಡಿವಂತಿಕೆ ...ಸತ್ವದ ಕಟುಸತ್ಯಗಳಿಂದ ಪಲಾಯನ ಮಾಡುವ ಪ್ರಯತ್ನವಾಗುತ್ತದೆಯೇ ಹೊರತು ...ಸ್ಯೆಗಳನ್ನೆದುರಿಸಿದಂತಾಗುವುದಿಲ್ಲ.

ಬೀದಿನಾಟಕ ಸಮೂಹದಿಂದ, ಸಮೂಹಕ್ಕಾಗಿ ಇರುವಂತಹುದೆನ್ನುತ್ತಾರೆ. ಬಿ. ಹಾಸ್ಮಿ, ...ಸುವುದು ಇದರ ಮುಖ್ಯ ಕೆಲಸವೆನ್ನುತ್ತಾರೆ. ತಿದ್ದುವುದು, ಎಚ್ಚರಿಸುವುದು ಎಂಬ ಅವರ ...ಕತೆಗಾಗಿ ಬಳಸಿದ ಶಬ್ದಗಳನ್ನೇ ಹಿಡಿದುಕೊಂಡು, ಬೀದಿನಾಟಕಗಳನ್ನಾಡುವವರು, ಜನರನ್ನು ...ವಾಗಿ ತಿಳಿಯುತ್ತಾರೆ ಅಥವಾ ದಡ್ಡರೆಂದುಕೊಳ್ಳುತ್ತಾರೆ ಎಂಬಂತಹ ಆರೋಪ, ...ಆರೋಪಗಳೂ ಕೇಳಿ ಬರುತ್ತವೆ. ಚರ್ಚೆ ಇನ್ನೂ ಜಾರಿಯಲ್ಲಿದೆ. ಅಲ್ಲದೆ ಅಕ್ಷರ ಬಲ್ಲ ...ವರನ್ನು ಅಕ್ಷರ ಮಾಧ್ಯಮದ ಮುಖಾಂತರ ತಿದ್ದುವುದು ನ್ಯಾಯಸಮ್ಮತವಾಗುವುದಾದರೆ ...ಕೊಳ್ಳಗಳಲ್ಲಿನ ಅರೆಸಾಕ್ಷರ- ಅನಕ್ಷರಸ್ಥರನ್ನು ಬೀದಿನಾಟಕದ ಮೂಲಕ ತಿದ್ದುವುದು ...ಸ ಪ್ರಶ್ನೆ ಮೂಡಿಸುವುದು ಯಾಕೆ ನ್ಯಾಯಸಮ್ಮತವಾಗಲಾರದು? ಎಂಬ ಪ್ರಶ್ನೆ ಬೀದಿ ...ನಾಟಕಕಾರರಿಂದ ಸಕಾರಣವಾಗಿಯೇ ಎತ್ತಲ್ಪಟ್ಟಿದೆ. ಹಾಗೆ ಪ್ರತಿಯಾಗಿ ಸಿದ್ದ ಪತ್ರ ಜನರನ್ನು ...ಬಿ ಅವರನ್ನು ತಿದ್ದಬಲ್ಲದು. ಹಾಗಾಗಿ ಕೆಯ ಉದ್ದೇಶವೇ ಇಲ್ಲದ ಬೀದಿನಾಟಕ ಪ್ರಕ್ರಿ

ಯಾಗಿ ಜನರನ್ನು ತಿದ್ದಬಲ್ಲುದಾದರೆ ಯಾವುದು ಮೇಲು ? ಪತ್ರಿಕೆ, ಬೀದಿನಾಟಕ ಎರಡೂ ಕೀಳಂತೂ ಅಲ್ಲ. ಆ ಪ್ರಶ್ನೆ ಬೇರೆ, ಆದರೆ ಬೀದಿನಾಟಕ ಕಲಾವಿದರೂ ಇತರ ನಾಟಕಗಳನ್ನಾಡಿ ಸುಲಭವಾಗಿ ಹಣಗಳಿಸಬಹುದು. ಅವರು ಸಾಮಾಜಿಕ ಪ್ರಗತಿಗೆ, ಬದಲಾವಣೆಗೆ ಶ್ರಮಿಸಲು ಬದ್ಧರಾಗಿರುವವರು. ಅವರ ಈ ಬದ್ಧತೆಯೇ ಎಷ್ಟೋಸಲ ಅವರಿಗೆ ಕಷ್ಟಗಳನ್ನು ತಂದೊಡ್ಡಿದೆ. ರಂಗನಾಟಕ ಎದುರಿಸದೇ ಇರುವ ಬೆದರಿಕೆ, ಹಲ್ಲೆಗಳನ್ನು ಬೀದಿನಾಟಕ ಎದುರಿಸಿದೆ. ಕಲಾವಿದ ಪ್ರೇಕ್ಷಕ ಸಂಬಂಧದ ಸ್ವರೂಪದ ಹಿನ್ನೆಲೆಯಲ್ಲಿ ಹೇಳುವುದಾದರೆ ಪ್ರೊಸೀನಿಯಂ ನಾಟಕ ಸುಲಭ, ಬೀದಿನಾಟಕ ಕಷ್ಟಕರ. ಏಕೆಂದರೆ ಬೀದಿನಾಟಕಗಳು ತಮ್ಮ ಪ್ರದರ್ಶನಗಳ ಕಾಲಕ್ಕೆ ಸಹಾನುಭೂತಿಪರ ಪ್ರೇಕ್ಷಕರ ಜೊತೆಗೆ, ಅಪರಿಚಿತ, ಕೆಲವೊಮ್ಮೆ ಸೈದ್ಧಾಂತಿಕವಾಗಿ ಕಡು ವಿರೋಧಿಗಳಾದ ಪ್ರೇಕ್ಷಕರನ್ನೂ ಎದುರಿಸಬೇಕಾಗುತ್ತದೆ. ಕೆಲವೊಮ್ಮೆ ಅವರ ಮಧ್ಯೆ ಚಕಮಕಿಗಳೂ ಆಗುವುದುಂಟು. ಬೀದಿನಾಟಕದ ವಿಶೇಷವಡಗಿರವುದು ಇಲ್ಲಿಯೇ. ಬೇರೆಲ್ಲ ಮಾಧ್ಯಮಗಳು ಜನರನ್ನು ಅವರ ನೈಜಸಮಸ್ಯೆಗಳಿಂದ ವಿಮುಖಗೊಳಿಸುತ್ತಿರುವಾಗ ಬೀದಿನಾಟಕ ಮಾತ್ರ ಜನರೊಂದಿಗೆ ಅತಿ ಸಮೀಪದಿಂದ ಬೆರೆತುಕೊಳ್ಳುವ ಸಂವಹನ ಸಾಮರ್ಥ್ಯದಿಂದಾಗಿ ಅವರನ್ನು ನೇರವಾಗಿ ಪ್ರಚೋದಿಸ ಬಲ್ಲದೆಂಬುದು ಅನುಭವದಿಂದ ಸಾಬೀತಾಗಿದೆ. ಇದೇ ಬೀದಿ ನಾಟಕದ ಹೆಗ್ಗಳಿಕೆ. ಈ ಮಾಧ್ಯಮಕ್ಕೆ ಅಪಾರ ಜನ ಸಮೂಹವನ್ನು ತಲುಪುವ ಸಾಧ್ಯತೆಯಿದೆ. ಆದ್ದರಿಂದಲೇ ಸ್ಥಾಪಿತ ವ್ಯವಸ್ಥೆಯ ಪ್ರತಿಪಾದಕರಿಗೆ (Status quoists) ಬೀದಿನಾಟಕಗಳೆಂದರೆ ಸಿಟ್ಟು ಬರುತ್ತದೆ. ಇಂದಿನ ಭ್ರಷ್ಟರಾಜಕೀಯ ವ್ಯವಸ್ಥೆಯನ್ನೂ, ರಾಜಕಾರಣಿಗಳನ್ನೂ ಕಲಾತ್ಮಕವಾಗಿ ವಿಡಂಬಿಸುವ ಹಲವಾರು ಬೀದಿನಾಟಕಗಳು ಜನಮನವನ್ನು ಸೂರೆಗೈದಿವೆ. ಈ ಪ್ರಕಾರ ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಕ್ರಿಯೆಯನ್ನು ಹುಟ್ಟುಹಾಕುವ ಶಕ್ತಿ ಪಡೆದಿರುವುದರಿಂದ ಪಟ್ಟಭದ್ರರಿಗೆ ಇದು ಬಿಸಿತುಪ್ಪವಾಗಿದೆ. ಹೋರಾಟಕ್ಕೊಂದು ಸಾಂಸ್ಕೃತಿಕ ಆಯಾಮಕೊಟ್ಟು ಜನಕೋಟಿಯನ್ನು ಸಂಮ್ಮೋಹನಗೊಳಿಸಬಲ್ಲ ಮಾಧ್ಯಮವಿದಾದ್ದರಿಂದಲೇ ಸರಕಾರ ಪೋಲೀಸರು ಎಷ್ಟೋ ಸಲ ಇದರ ಧ್ವನಿ ಅಡಗಿಸುವ ಪ್ರಯತ್ನ ಮಾಡಿದ್ದಾರೆ. ಇವುಗಳನ್ನು ನಿರ್ಬಂಧಿಸಲು ಸಧ್ಯಕ್ಕೆ ಯಾವುದೇ ಕಾನೂನುಗಳಿಲ್ಲವಾದ್ದರಿಂದ `ಸಂಚಾರಕ್ಕೆ ಅಡ್ಡಿ' ಎಂಬ ಕಾಯ್ದೆ ಹಚ್ಚಿ ಅಥವಾ ನಿಷೇಧಾಜ್ಞೆ ಹೇರಿ ಐದು ಜನಕ್ಕಿಂತ ಹೆಚ್ಚಿಗೆ ಜನ ಸೇರಿದ್ದಾರೆಂಬ ಕಾನೂನು ಲಾಗೂ ಮಾಡಿ ಬೀದಿನಾಟಕಕಾರರನ್ನು ಬಂಧಿಸಿದ ಉದಾಹರಣೆಗಳಿವೆ. ಮುಂಬೈ ಪೋಲೀಸರು 'ಭಿಕ್ಷುಕರ ನಿಯಂತ್ರಣ ಕಾಯ್ದೆ' ಹಚ್ಚಿ ಬೀದಿನಾಟಕ ಕಲಾವಿದರನ್ನು ಬಂಧಿಸಿ ಹೊಸದಾದ ವಿಚಿತ್ರ ದಾಖಲೆಯನ್ನೇ ಸ್ಥಾಪಿಸಿದ್ದಾರೆ. ಈ ಎಲ್ಲ ಕಾರಣಗಳಿಂದಲೇ ಬೀದಿನಾಟಕಕ್ಕೆ ಸಾಂಸ್ಕೃತಿಕ ರಂಗದಲ್ಲಿ ವಿಶೇಷ ಸ್ಥಾನಮಾನ ಲಭಿಸಿರುವುದು.

ಬೀದಿ ನಾಟಕ : ಸಾಹಿತ್ಯ ಹೌದು, ಅಲ್ಲ, ಚರ್ಚೆ, ಅದರ ಸ್ವರೂಪ:

ಶುದ್ಧ ಸಾಹಿತ್ಯ ಪ್ರತಿಪಾದಕರಾದ ಕೆಲವರು ಬೀದಿನಾಟಕವನ್ನು ಸಾಹಿತ್ಯ ಪ್ರಕಾರಗಳ ಲ್ಲೊಂದಾಗಿ ಪರಿಗಣಿಸಲಾಗದೆಂಬ ನಿಲುವನ್ನು ಇನ್ನೂ ತಳೆದಿದ್ದಾರೆ. `ಕಲೆಗಾಗಿ ಕಲೆ' ಎಂಬ ವಾದಕ್ಕಂಟಿಕೊಂಡ ಹಲವು ಜನ ಶಿಷ್ಟ ವಿಮರ್ಶಕರು ಬೀದಿನಾಟಕಕ್ಕೆ ರಂಗಭೂಮಿಯ ಸ್ಥಾನಮಾನ ಕೊಡಲು ಹಿಂದೇಟು ಹಾಕುವುದು ನಮಗೆ ಕಂಡುಬರುತ್ತದೆ. ತಮ್ಮದೇ ಆದ

ದಂತಗೋಪುರದೊಳಗೆ ಕುಳಿತು ತತ್ವಮಂಡಿಸುವವರು ಈ ಪ್ರಕಾರವನ್ನು ಹಗುರವಾಗಿ ಪರಿಗಣಿಸಲು ಕಾರಣಗಳನ್ನು ಹುಡುಕುವುದು ಕಷ್ಟದ ಕೆಲಸವೇನಲ್ಲ. ನಾಟಕ ಯಾವುದೇ ಪ್ರಕಾರವಿದ್ದಿರಲಿ ಅದರ ಸಾಹಿತ್ಯ ಎಷ್ಟೇ ಶ್ರೇಷ್ಠವಾದದ್ದಿರಲಿ, ಅದು ಜೀವ ಪಡೆಯುವದೇ ಪ್ರದರ್ಶನದ ಕ್ರಿಯೆಯ ಮುಖಾಂತರವೆನ್ನುವುದನ್ನು ಇವರು ಒಪ್ಪರು. ಒಂದು ನಾಟಕ ವಾಚನದ ದೃಷ್ಟಿಯಿಂದ ಎಷ್ಟೇ ಕಳಪೆಯಾಗಿದ್ದರೂ ಇಂದಿನ ರಂಗಭೂಮಿಯ ಹಲವು ಪರಿಕರಗಳ ಉಪಯೋಗದ ಸಾಧ್ಯತೆ, ಸಾಧನಗಳಿಂದಾಗಿ ಒಂದು ಅತ್ಯುತ್ತಮ ಪ್ರಯೋಗವಾಗಿ ಹೊರಹೊಮ್ಮಬಲ್ಲುದು. ಇದು ಕೆಲವೊಮ್ಮೆ ತಿರುವ ಮೂರುವು ಆಗುವ ಸಾಧ್ಯತೆಯೂ ಇದೆ. ಒಂದು ನಾಟಕ ಕೃತಿ ನಿರ್ದೇಶಕನ ಕೈ ತಲುಪುವ ಮೊದಲು ಮಾತ್ರ ನಾಟಕ ಕರ್ತೃವಿನ ಕಲ್ಪನೆಯ ಕೂಸಾಗಿರಬಲ್ಲದು. ಅನಂತರ ಅದು ನಿರ್ದೇಶಕ, ಕಲಾವಿದರ, ತಂತ್ರಜ್ಞರ ಹಾಗೂ ಪ್ರೇಕ್ಷಕರ ಆಸ್ತಿ. ಬೀದಿನಾಟಕದ ಕುರಿತಂತೆ ಹೇಳುವುದಾದರೆ ಸ್ಕ್ರಿಪ್ಟ್ ಎನ್ನುವುದೊಂದು ಸಾಮಾನ್ಯವಾಗಿ ರುತ್ತದೆ. ಅದು ಬಹಳಷ್ಟು ಪ್ರಸಂಗಗಳಲ್ಲಿ ಪ್ರಕಟಿತ ರೂಪದಲ್ಲಿರುವುದಿಲ್ಲ. ಹಸ್ತಪ್ರತಿಯೇ ಪ್ರಧಾನವಾಗಿರುತ್ತದೆ. ಹಸ್ತಪ್ರತಿ ತಯಾರಿಸಿದ ನಾಟಕಕಾರ ಒಂದರ್ಥದಲ್ಲಿ ರಬ್ಬರಿನಂತಹ ಸ್ಥಿತಿಸ್ಥಾಪಕ ಗುಣಹೊಂದಿದ ವ್ಯಕ್ತಿ. ಅವನ ನಾಟಕವನ್ನು ಪ್ರಸಂಗಕ್ಕನುಸಾರವಾಗಿ ಹೇಗೆ ಬೇಕಾದರೂ ಜಗ್ಗಾಡಬಹುದು. ಒಟ್ಟಿನ ಮೇಲೆ ತನ್ನ ನಾಟಕದ ಆಶಯ ಈಡೇರಿದರೆ ಆತ ತೃಪ್ತ. ಸಾಮಾನ್ಯವಾಗಿ ಕಲಾಭವನಗಳಲ್ಲಿ, ಕಲಾಕ್ಷೇತ್ರಗಳಲ್ಲಿ ಆಡಲ್ಪಡುವ ದೊಡ್ಡ ನಾಟಕ ಕಾರರ ನಾಟಕಗಳು, ಸಾಹಿತ್ಯ ಮತ್ತು ಪ್ರದರ್ಶನ ಎರಡೂ ಉದ್ದೇಶದಿಂದ ರಚಿಸಲ್ಪಟ್ಟವುಗಳು. ಇಲ್ಲಿ ಮೂಲ ಸ್ಕ್ರಿಪ್ಟನಲ್ಲಿರುವ ಎಲ್ಲಾ ಡೈಲಾಗುಗಳು ಯಥಾವತ್ತಾಗಿ ಉಚ್ಚರಿಸಲ್ಪಡುತ್ತವೆ. ಹಾಗೂ ಈ ನಾಟಕಗಳನ್ನು ನೋಡುವ ಮಧ್ಯಮವರ್ಗ, ಸಾಹಿತ್ಯ ಮತ್ತು ಪ್ರದರ್ಶನ ಗಳೆರಡನ್ನೂ ಆಸ್ವಾದಿಸುವ ಶಕ್ತಿಯುಳ್ಳದ್ದು ನಾಟಕ ನೀಡುವವರಾದರೋ ತಮ್ಮ ಪ್ರದರ್ಶನ ಜನರಿಗೆ ತಲುಪುತ್ತದೆಂದೇ ಅಂದುಕೊಂಡಿರುತ್ತಾರೆ. ನಾಟಕ ಎಷ್ಟೇ ಬೇಸರ ಹುಟ್ಟಿಸಿದರೂ ಸಂಭಾಷಣೆಗಳನ್ನು ಸಿಕ್ಕಾಪಟ್ಟೆ ಎಳೆದಾಡಿ ಜನರ ಮೇಲೆ ಎಸೆದರೂ ಅದನ್ನು ಸುಮ್ಮನೇ ಕುಳಿತು ತಾಳಿಕೊಳ್ಳುವ ಸುಸಂಸ್ಕೃತರು ಈ ಮಧ್ಯಮ ವರ್ಗದ ಪ್ರೇಕ್ಷಕರು. ಆದರೆ ಬೀದಿ ನಾಟಕ ಹಾಗಲ್ಲ. ಇಲ್ಲಿ ಸ್ಕ್ರಿಪ್ಟೊಂದು ಹೊಸೆಯಲ್ಪಟ್ಟಿದ್ದರೂ ಅದೇ ಕೊನೆಯಾಗ ಬೇಕಾಗಿಲ್ಲ. ಅದು ಬದಲಾವಣೆಗಳಿಗೆ ಒಗ್ಗಿಕೊಳ್ಳುವ ಸ್ಥಿತಿಸ್ಥಾಪಕ (Elasticity) ಶಕ್ತಿಯನ್ನು ಹೊಂದಿರಬೇಕಾಗುತ್ತದೆ. ಹಲವು ಸಂದರ್ಭಗಳಲ್ಲಿ ಬೀದಿನಾಟಕಕಾರರು ಸಮಾಜ ವಿಜ್ಞಾನ ಸಂಶೋಧಕರಂತೆ ಕೆಲಸ ಮಾಡಬೇಕಾಗುತ್ತದೆ. ಸಾಮಾಜಿಕ ಸಮಸ್ಯೆಯ ಅಧ್ಯಯನವೊಂದನ್ನು ಕೈಕೊಂಡ ಸಮಾಜ ವಿಜ್ಞಾನಿ ಅದರ ಆಳಗಲ-ಕಾರಣಗಳನ್ನು ಶೋಧಿಸುವ ದೃಷ್ಟಿಯಿಂದ ಜನರಿಗೆ ಕೇಳಲಿಕ್ಕಾಗಿ ಪ್ರಶ್ನಾವಳಿಯೊಂದನ್ನು ಸಿದ್ಧಪಡಿಸುತ್ತಾನೆ. ಅವನ ಪೂರ್ವಾನುಮಾನ (Hypothesis)ವನ್ನು ಪರೀಕ್ಷಿಸಲು ತನ್ನ ಪ್ರಶ್ನೆಗೆ ಪ್ರತಿಯಾಗಿ ಬರುವ ಉತ್ತರಗಳು ಅಧ್ಯಯನಕ್ಕೆ ಸಹಕಾರಿ ಎಂಬುದು ಅವನ ಊಹೆ. ಆದರೂ ತನ್ನ ಪ್ರಶ್ನೆಗಳ ಸಂಗತತೆಯನ್ನು ಪರೀಕ್ಷಿಸಲು ಅಂತಿಮ ಕ್ಷೇತ್ರಕಾರ್ಯಕ್ಕೆ ಪೂರ್ವಭಾವಿಯಾಗಿ ಸಣ್ಣ ಪ್ರಮಾಣದ ಸಮೀಕ್ಷೆಯೊಂದನ್ನು (Pilot Survey) ಕೈಕೊಳ್ಳುತ್ತಾನೆ. ಈ ಹಂತದಲ್ಲಿ ಅವನಿಗೆ ತಾನು ರೂಪಿಸಿದ ಪ್ರಶ್ನೆಗಳು ಪುನರ್ರೂಪಗೊಳ್ಳಬೇಕಾದುದರ ಅಗತ್ಯ ತಿಳಿಯುತ್ತದೆ. ತನ್ನ ಕೆಲ ಪ್ರಶ್ನೆಗಳು ಮೂಲರೂಪದಲ್ಲಿ ಸರಿಯೆಂದು ತೋರಲೂ ಬಹುದು. ಎಷ್ಟೊ ಪ್ರಶ್ನೆಗಳು ಅಸಂಗತವೆಂಬುದೂ ಗೊತ್ತಾಗುತ್ತದೆ. ಕೆಲವೊಮ್ಮೆ ಹೊಸ ಪ್ರಶ್ನೆಗಳನ್ನು ಎತ್ತಬೇಕಾದ

ಅಗತ್ಯವನ್ನೂ ಅವನು ಮನಗಾಣುತ್ತಾನೆ. ಈ ಎಲ್ಲ ಪ್ರಯೋಗಗಳ ನಂತರ ಅವನು ಅರ್ಥ ಪೂರ್ಣವಾದ ಕೊನೆಯ ಕಾರ್ಯಾಚರಣೆ ಕೈಕೊಳ್ಳಲು ಸಾಧ್ಯ. ಬೀದಿನಾಟಕವಾದರೂ ತನ್ನ ಆಶಯವನ್ನು ಕ್ರಿಯೆಗಿಳಿಸುವ ರೀತಿ ಹೆಚ್ಚು ಕಡಿಮೆ ಇದೇ ರೀತಿಯದಾಗಿರುತ್ತದೆ.

ಬೀದಿನಾಟಕಕಾರನೊಬ್ಬ ತಾನು ಕೈಗೆತ್ತಿಕೊಂಡ ಸಮಸ್ಯೆ ಯಾವುದು ? ಅದು ಯಾವ ಜನವರ್ಗವನ್ನು ಕಾಡುವ ಸಮಸ್ಯೆ ? ಎಂಬೆಲ್ಲ ಪ್ರಶ್ನೆಗಳಿಗೆ ಬೀದಿಗೆ ಹೋಗುವ ಮೊದಲೇ ಸಮಗ್ರವಾದ ಉತ್ತರ ಕೊಡುವ ಸ್ಥಿತಿಯಲ್ಲಿರಲಾರ. ತನಗೆ ಯಾವುದು ಜನರ ಸಮಸ್ಯೆಯೆಂದು ತೋರುವುದೋ ಆ ನಿಟ್ಟಿನಲ್ಲಿ ಸಾಹಿತ್ಯ ರಚಿಸುತ್ತಾನೆ. ಅವನ ಸಾಹಿತ್ಯ ಪ್ರಯೋಗಗೊಳ್ಳುವ ಹಂತದಲ್ಲಿ ಜನಸಮೂಹದ ನೈಜ ಸ್ಥಿತಿಗತಿಗಳಿಗೆ (Ground realities) ಸ್ಪಂದಿಸುತ್ತದೆಯೇ ಇಲ್ಲವೇ ಎಂಬುದನ್ನು ತೀರ್ಮಾನಿಸುವವರು ನಿರ್ದೇಶಕರು ಹಾಗೂ ನಟನಟಿಯರು. ಏಕೆಂದರೆ ಎಲ್ಲ ಸಮಸ್ಯಾ ಪ್ರಶ್ನೆಗಳೂ ಎಲ್ಲ ಜನವರ್ಗಗಳನ್ನು, ಏಕಪ್ರಕಾರವಾಗಿ ಕಾಡುವುದಿಲ್ಲ. ಕೆಲ ಸಮಸ್ಯೆಗಳನ್ನು ಎದುರಿಸುವುದು ಒಂದು ವರ್ಗಕ್ಕೆ ತ್ವರಿತ ಅಗತ್ಯವಾಗಿ ಕಾಣಬಹುದು. ಕೆಲಪ್ರಶ್ನೆಗಳನ್ನು ನಿಧಾನವಾಗಿ ಬಿಡಿಸಿದರೂ ಆದೀತು. ಜನರ ಸಮಸ್ಯೆಗಳನ್ನೇ ನಾಟಕದ ಮೂಲಕ ಬೀದಿಗೆ ತೆಗೆದುಕೊಂಡು ಹೋದಾಗ ಅವರು ಅದಕ್ಕೆ ಎಷ್ಟು ತೀವ್ರವಾಗಿ ಪ್ರತಿಕ್ರಿಯಿಸುತ್ತಾರೆ ಎಂಬುದು ಬಹುಮುಖ್ಯವಾಗುತ್ತದೆ. ಜನತೆಯ ಸಮಸ್ಯೆಯನ್ನು ಪ್ರಧಾನವಾಗಿ ಒಳಗೊಂಡ ಬೀದಿನಾಟಕ ಕೇರಿಗಳಲ್ಲಿನ, ಕೊಳಚೆ ಪ್ರದೇಶ, ಮೊಹಲ್ಲಾಗಳಲ್ಲಿನ ಜನರ ಬೌದ್ಧಿಕ ಮಟ್ಟ ಮತ್ತು ತಾಳ್ಮೆಯನ್ನು ಗಂಭೀರವಾಗಿ ತಿಳಿದುಕೊಳ್ಳಲು ಪ್ರಯತ್ನಿಸಬೇಕಾಗುತ್ತದೆ. ಬೀದಿ ನಾಟಕಗಳು ಪ್ರದರ್ಶನಕ್ಕೆ ಪ್ರಾಧಾನ್ಯಕೊಡುವ ದೃಷ್ಟಿಯಿಂದಲೇ ಬರೆಯಲ್ಪಟ್ಟವುಗಳು. ಅವುಗಳ ಪ್ರದರ್ಶನ ಸಮಯ ಒಂದು ತಾಸಿಗಿಂತ ಹೆಚ್ಚಾದರೆ ಪ್ರೇಕ್ಷಕರಿಗೆ ಅವು ಬೇಸವನ್ನುಂಟು ಮಾಡಬಲ್ಲವು. ಬೀದಿನಾಟಕವು ಸ್ವರೂಪದಲ್ಲಿ ಸರಳವಾಗಿರುತ್ತದೆ. ಜನಮನವನ್ನು ನೇರವಾಗಿ ಮುಟ್ಟಬಲ್ಲದು. (Short in length but strong in statement) ಇವುಗಳ ಪ್ರಯೋಗದಲ್ಲಿ ಗಿಮಿಕ್ಸ ಉಪಯೋಗಿಸಬಹುದಾದರೂ ಅವು ಜನರ ಮೇಲೆ ತಾತ್ವಿಕ, ತಾಂತ್ರಿಕ ಭಾರ ಹಾಕಬಾರದು. ಗಿಮಿಕ್ಸ ನಾಟಕದ ಉದ್ದೇಶಕ್ಕೆ ಪೂರಕವಾಗಿರಬೇಕು. ಅದೇ ಪ್ರಧಾನವಾಗಿರಬಾರದು. ತಂತ್ರಕ್ಕಾಗಿ ತಂತ್ರವೆಂಬ ಮಂತ್ರ ರಂಗನಾಟಕದಲ್ಲಿ ನಡೆದೀತು. ಆದರೆ ಬೀದಿನಾಟಕದಲ್ಲಿ ಸ್ಟೇಜಿಗಿರುವ ಪರಿಕರಗಳೆಲ್ಲ ಇರಲು ಸಾಧ್ಯವೇ ಇಲ್ಲದ ಕಾರಣ ಸಂವಹನಕ್ರಿಯೆ ಪರಿಣಾಮಕಾರಿಯಾಗಲು ಮಾತ್ರ ತಂತ್ರಗಳನ್ನು ಬಳಸಬಹುದು. ಇವು ಅಸ್ಪಷ್ಟ ಅಥವಾ ಅಸಂಗತವಾಗಿರಕೂಡದು. ಈ ತಂತ್ರಗಳು, ಸಂಭಾಷಣೆಯೆಲ್ಲ ನೇರವಾಗಿ ರಾಮಬಾಣದಂತೆ ನಾಟಿ ನಿರೀಕ್ಷಿತ ಪರಿಣಾಮ (Result Orientation) ಉಂಟಾಗುವಂತೆ ಮಾಡಬೇಕು.

ಬೀದಿನಾಟಕ ಸಾಹಿತ್ಯದ ಬಗೆಗೆ ಮೂಗು ಮುರಿಯುವವರು ನೆನಪಿಡಬೇಕಾದ ಸಂಗತಿಯೊಂದಿದೆ. ಹಲವಾರು ಜನ ಶ್ರೇಷ್ಠ ಸಾಹಿತಿ ನಾಟಕಕಾರ ನಾಟಕಗಳು ಈ ತಂತ್ರಕ್ಕೆ ಅಳವಡಿಸಲ್ಪಟ್ಟಿವೆ. ಬೆಂಗಳೂರಿನ ಚಿತ್ರಾ ತಂಡದವರಿಗಾಗಿ ವಿಜಯಾ ಅವರು ಕುವೆಂಪು ಅವರ `ಧನ್ವಂತರಿ ಚಿಕಿತ್ಸೆ ' ನಾಟಕವನ್ನು ಬೀದಿ ತಂತ್ರಕ್ಕೆ ಅಳವಡಿಸಿ ಕನ್ನಡ ಬೀದಿನಾಟಕಗಳಿಗೆ ಹೊಸ ಆಯಾಮ ಕೊಟ್ಟಿದ್ದಾರೆ. ಅದೇ ಚಿತ್ರಾ ತಂಡ ಕುವೆಂಪು ಅವರ `ಕರಿಸಿದ್ದ ಕಥನ ಕವನ, ' ಜಿ. ಎಸ್. ಶಿವರುದ್ರಪ್ಪನವರ `ಮುಂಬೈಜಾತಕ ' ವನ್ನು, ಸಹ ಬೀದಿಗೆ ತರಲು

ಪ್ರಯತ್ನಿಸಿದೆ. ಸಮುದಾಯಕ್ಕಾಗಿ ಬಸವಲಿಂಗಯ್ಯ ಬೈಕ್ಕರಂಥ ಶ್ರೇಷ್ಠ ಜಾಗತಿಕ ನಾಟಕಕಾರನ [೨] ಕಲಿಯಣ್ಣ ನೀ ಕಲಿಕಲಿ (In praise of learning) ಎಂಬ ಬೀದಿ ನಾಟಕ ನಿರ್ದೇಶಿಸಿದ್ದಾರೆ. ಸಮುದಾಯ ಬಹುಹಿಂದೆಯೇ ಕುವೆಂಪು ಅವರ `ಕಲ್ಕಿ' ಕವನವನ್ನು ಬೀದಿ ನಾಟಕವನ್ನಾಗಿಸಿದೆ. ಶ್ರೇಷ್ಠತಮ ಸಾಹಿತ್ಯವನ್ನೂ ಕೂಡ ಬೀದಿಗೆ ತರುವ ಸಾಧ್ಯತೆಯನ್ನು ಹಲವಾರು ಜನ ನಿಪುಣ ನಿರ್ದೇಶಕರು ತೋರಿಸಿ ಕೊಟ್ಟಿದ್ದಾರೆ. ಆದರೆ ಬೀದಿನಾಟಕದ ಸಾಹಿತಿಗಳಾಗಲಿ, ನಟರಾಗಲಿ ಶ್ರೇಷ್ಠತೆಯ ವ್ಯಸನದಿಂದ ಬಳಲುವವರಲ್ಲ. ಏಕೆಂದರೆ ಅವರಿಗೆ ತಮ್ಮ ಹೆಸರು ಮುಖ್ಯವಲ್ಲ. ಅವರಿಗೆ ಪ್ರದರ್ಶನದ ಮುಖಾಂತರ ಜನಸಮೂಹವನ್ನು ತಲುಪುವುದು ಮುಖ್ಯವಾಗುತ್ತದೆ.

ಕನ್ನಡದಲ್ಲಿ ಬೀದಿನಾಟಕ : ರಾಜಕೀಯ ಸಂಘಟನೆಗಳು ಹಾಗೂ ಬದ್ಧತೆ :

ಕರ್ನಾಟಕದ ಹಿನ್ನೆಲೆಯಲ್ಲಿ ಹೇಳುವುದಾದರೆ ೧೯೭೪ರಲ್ಲಿ ಚಿತ್ರಾ ತಂಡ `ಕಟ್ಟು' ನಾಟಕದ ಮೂಲಕ ಬೀದಿನಾಟಕವನ್ನು ಹುಟ್ಟುಹಾಕಿತು. ಇದು ದಾಖಲೆಯ ದೃಷ್ಟಿಯಿಂದ ಮೊದಲ ಪ್ರಯೋಗವಾದರೂ ನಾಟಕದ ಬಂಧ ಹಾಗೂ ಅನುಭವದ ದೃಷ್ಟಿಯಿಂದ ತುರ್ತು ಪರಿಸ್ಥಿತಿಯ ಸುತ್ತಮುತ್ತಲಿನ (೧೯೭೫-೭೬) ಅವಧಿಯಲ್ಲಿ ಅಸ್ಥಿತ್ವ ಕಂಡುಕೊಂಡ `ಸಮುದಾಯ' ಎಂಬ ಹೆಸರಿನ ಸಾಂಸ್ಕೃತಿಕ ಸಂಘಟನೆ ಸಾವಿರಾರು ಬೀದಿನಾಟಕಗಳನ್ನು ನೀಡುವ ಮುಖಾಂತರ ಈ ರಂಗ ಪ್ರಕಾರಕ್ಕೆ ನೈಜನಾಂದಿ ಹಾಡಿತು. ಕ. ವೆಂ. ರಾಜಗೋಪಾಲರು ಇದನ್ನು ಅರ್ಧರಾಜಕೀಯ ಸಂಸ್ಥೆಯೆಂದು ಕರೆದಿದ್ದಾರೆ.[೩] ವಿಜಯಾ ಅವರು ಚಿತ್ರಾ ತಂಡಕ್ಕಾಗಿ ಹಲವಾರು ನಾಟಕಗಳನ್ನು ರಚಿಸಿಕೊಟ್ಟರು ಹಾಗೂ ಕನ್ನಡದಲ್ಲಿ ಅತಿ ಹೆಚ್ಚು ಬೀದಿನಾಟಕ ಬರೆದ ಮೊದಲಿಗರಾಗಿ ಅವರು ಗುರುತಿಸಲ್ಪಡುತ್ತಾರೆ. ಅವರು ಬೀದಿನಾಟಕದ ಕುರಿತ ತಮ್ಮ ಚಿಂತನ ಮಂಥನಗಳಿಂದಾಗಿ ಆ ಪ್ರಕಾರದ ವಿನೂತನ ಪರಿಣಾಮಗಳಿಗೆ ಕಾರಣೀ ಭೂತರಾಗಿದ್ದಾರೆಂದು ರಾಗವಿಮರ್ಶಕ ಜಿ. ಎನ್. ಮೋಹನ್ ಅಭಿಪ್ರಾಯ ಪಡುತ್ತಾರೆ. ಅದೇ ರೀತಿ ಚಿತ್ರಾ ತಂಡದ ಎ. ಎಸ್. ಮೂರ್ತಿ ಬೀದಿ ರಂಗಭೂಮಿಯ ಬಹುಪಾಲು ಯಶಸ್ಸಿಗೆ ಕಾರಣರಾದವರಲ್ಲೊಬ್ಬರೆಂದು ಪರಿಗಮಿಸಲ್ಪಡುತ್ತಾರೆ. ಚಿತ್ರಾ `ಬೀದಿ ' ಎಂಬ ಪತ್ರಿಕೆ ಆರಂಭಿಸಿ ಬೀದಿನಾಟಕವನ್ನು ವಿಶ್ಲೇಷಿಸಿದ ಪ್ರಥಮ ಪ್ರಯತ್ನದ ಗೌರವವನ್ನೂ ತನ್ನ ಪಾಲಿಗಿರಿಸಿಕೊಂಡಿದೆ. ಬೆಂಗಳೂರಿನ `ರಾಗ್' ಎಂಬ ಗೆಳೆಯರ ತಂಡ ಹಲವು ಬೀದಿನಾಟಕಗಳನ್ನು ಪ್ರದರ್ಶಿಸಿ ಚಾಲ್ತಿಯಲ್ಲಿದೆ. ಸಮುದಾಯದ ಜೊತೆಗೆ, ಇಪ್ಟಾ, ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ, ಹಲವಾರು ವಿದ್ಯಾರ್ಥಿ ಯುವಜನರ ಪ್ರಗತಿಪರ ಸಂಘಟನೆಗಳು ಬೀದಿನಾಟಕಗಳನ್ನು ಸಂದರ್ಭಾನುಸಾರ ಪ್ರದರ್ಶಿಸುತ್ತಲೇ ಬಂದಿವೆ. ಬೆಂಗಳೂರಿನ ಹಲವಾರು ತಂಡಗಳಲ್ಲದೇ ರಾಜ್ಯಾದ್ಯಂತ ಎಷ್ಟೋ ಸಂಘ ಸಂಸ್ಥೆಗಳು ಬೀದಿನಾಟಕ ಪ್ರದರ್ಶನ ಸ್ಪರ್ಧೆಗಳನ್ನು ಏರ್ಪಡಿಸಿವೆ. ಲಾಯಿನ್ಸ್, ರೋಟರಿಗಳಂಥ ಸಂಸ್ಥೆಗಳೂ ಈ ವಿಷಯದಲ್ಲಿ ಹಿಂದೆ ಬಿದ್ದಿಲ್ಲ.

---

೨. ಅವರ ರಂಗಲೇಖನ `ಬೀದಿ ನಾಟಕ :ಒಂದು ಸಮೀಕ್ಷೆ' ಪಲ್ಲವಿ ಅಲರ ಸಂಸ್ಮರಣ ಸಂಚಿಕೆ, ಪ್ರಗತಿ ಕಲಾವೃಂದ, ಹುಬ್ಬಳ್ಳಿ.

ಸಮುದಾಯ ಅಸ್ಥಿತ್ವಕ್ಕೆ ಬಂದದ್ದು ಪ್ರಜಾಪ್ರಭುತ್ವವಾದಿ ಒಲವು ನಿಲುವುಳ್ಳವರು ತುರ್ತು ಪರಿಸ್ಥಿತಿಯ ವಿರುದ್ಧ ಪ್ರತಿಭಟಿಸುವ ಮುಖಾಂತರ ಒಗ್ಗೂಡಲು ಪ್ರಯತ್ನಿಸಿದ ಕಾಲದಲ್ಲಿ ಈ ಹಂತದಲ್ಲಿಯೇ ಸಾಂಸ್ಕೃತಿಕ ರಂಗದಲ್ಲಿಯೂ ತೀವ್ರ ಚಿಂತನೆಗೆ ಚಾಲನೆ ದೊರಕಿತು. ಪಾಶ್ಚಿಮಾತ್ಯ ಸಂಸ್ಕೃತಿ, ಸಾಹಿತ್ಯದ ಪ್ರಭಾವದ ಪರಿಣಾಮವಾಗಿ ರಂಗಭೂಮಿಯಲ್ಲಿಯೂ ವಸ್ತು ಮತ್ತು ರೂಪಗಳ ಕುರಿತಂತೆ ಹೊಸ ಪ್ರಯೋಗಗಳು ನಡೆಯಹತ್ತಿದವು. `ಕಲೆಗಾಗಿ ಕಲೆ' ಎಂಬ ಪ್ರತಿಗಾಮಿ ನಿಲುವಿಗೆ ಬದಲಾಗಿ ಸಾಮಾಜಿಕ ಬದ್ಧತೆಯುಳ್ಳ `ಬದುಕಿಗಾಗಿ ಕಲೆ'ಎಂಬ ಅರಿವಿನಿಂದಲೇ ತನ್ನ ಉದ್ದೇಶವನ್ನು ಸೃಷ್ಟಪಡಿಸಿ ಕೊಂಡ ಸಮುದಾಯ ಸಂಘಟನೆ ಅನತಿಕಾಲದಲ್ಲಿಯೇ ರಾಜ್ಯವ್ಯಾಪ್ತಿಯಾಗಿ ಬೆಳೆದುಬಂತು. ಅದು ತನ್ನ ತೀವ್ರ ಬೆಳವಣಿಗೆಗೆ ಬೀದಿನಾಟಕವನ್ನು ಪ್ರಮುಖ ಅಸ್ತ್ರವನ್ನಾಗಿಸಿತು. ಆ ಹಂತದಲ್ಲಿ ಬೀದಿನಾಟಕ ಸ್ಪಷ್ಟ ರೆಕ್ಕೆಪುಕ್ಕಗಳನ್ನು ಬೆಳೆಸಿಕೊಂಡದ್ದು ಸಮುದಾಯದ ಪ್ರಯತ್ನಗಳಿಂದಾಗಿ.

ಜಾಥಾಗಳಿಗೂ ಬೀದಿನಾಟಕಗಳಿಗೂ ಅವಿನಾಭಾವ ಸಂಬಂಧವಿದೆ ಎಂಬುದು ಒಂದು ಐತಿಹಾಸಿಕ ಸತ್ಯ. ಚೀನಾದ ಕ್ರಾಂತಿಯ ಸಂದರ್ಭದಲ್ಲಿ ಬೀದಿನಾಟಕಕಾರರು ಪ್ರದರ್ಶನ ನೀಡುತ್ತಾ ಜನಸಮೂಹ ಲಾಂಗ್ ಮಾರ್ಚನಲ್ಲಿ ಒಳಗೊಳ್ಳುವಂತೆ ಪ್ರೇರೇಪಿಸಿದ ಹೆಗ್ಗಳಿಕೆ ಬೀದಿನಾಟಕಕ್ಕಿದೆ. ಚಳುವಳಿ ಮತ್ತು ಬೀದಿನಾಟಕ ಪರಸ್ಪರ ಅದಲು ಬದಲಾಗಬಲ್ಲ ಶಬ್ದಗಳು ಅಥವಾ ಒಂದೇ ನಾಣ್ಯದ ಎರಡು ಮುಖಗಳೆಂಬುದು ಸಾಬೀತಾಗಿದೆ. ಗೋಕಾಕ ಚಳುವಳಿ, ರೈತ ಹೋರಾಟ, ಕೋಮುವಾದ ವಿರೋಧಿ ಹೋರಾಟ ಹೀಗೆ ಹಲವಾರು ಸಂದರ್ಭಗಳಲ್ಲಿ ಬೀದಿನಾಟಕಗಳು ಕರ್ನಾಟಕದ ಮೂಲೆ ಮೂಲೆಗಳಲ್ಲಿ ಹೋಗಿ ಆಡಲ್ಪಟ್ಟಿವೆ. ತನ್ಮೂಲಕ ಜನರನ್ನು ಹೋರಾಟಕ್ಕೆ ಸಜ್ಜುಗೊಳಿಸಿವೆ. ಹಲವಾರು ಸಮೂಹ ಸಂಘಟನೆಗಳು ಕರ್ನಾಟಕದಲ್ಲಿ ತಮ್ಮ ಉದ್ದೇಶಿತ ಸಂದೇಶಗಳನ್ನು ಬೀದಿನಾಟಕದ ಮುಖಾಂತರ ಜನರ ಬಳಿಗೆ ಕೊಂಡೊಯ್ದಿವೆ. ಆದರೆ ಬೀದಿನಾಟಕದ ನಿಜವಾದ ಪರಿಣಾಮ, ಪ್ರತಿಫಲದ ಅರಿವು ಉಂಟಾದದ್ದು ಸಮುದಾಯ ತನ್ನ ಪ್ರಾರಂಭಿಕ ಹಂತದಲ್ಲಿಯೇ ಸಂಘಟಿಸಿದ ಮೂರು ಚರಿತ್ರಾರ್ಹ ರಾಜ್ಯವ್ಯಾಪಿ ಸಾಂಸ್ಕೃತಿಕ ಜಾಥಾಗಳಿಂದಾಗಿ ಇವು ಬೀದಿ ನಾಟಕದ ಪ್ರಯೋಗ ಶಾಲೆಗಳಾದವು. ೧೯೭೮ರ ಸರ್ವಾಧಿಕಾರಿ ವಿರೋಧಿ ಜಾಥಾ, ೧೯೭೯ರ ಹೊಸ ಮೌಲ್ಯಗಳತ್ತ ಸಾಂಸ್ಕೃತಿಕ ಜಾಥಾ, ೧೯೮೦ ರೈತರೆಡೆಗಿನ ಜಾಥಾಗಳ ಕಾಲಕ್ಕೆ ಕನ್ನಡದ ಪ್ರಸಿದ್ಧ ನಾಟಕಕಾರರೆಲ್ಲ ಬೀದಿನಾಟಕಗಳನ್ನು ರಚಿಸಿಕೊಟ್ಟದ್ದುಂಟು. ಬೆಲ್ಚಿ, ಪತ್ರೆಸಂಗಪ್ಪನ ಪ್ರಸಂಗ, ನರಗುಂದ ಬಂಡಾಯ, ಬೆಳೆದವರು, ಹರಿಜನೋದ್ಧಾರ, ಬೆಲೆ ಏರಿಕೆ, ಹೊಸ ಬಾಳಿನೆಡೆಗೆ, ಕೂಲಿ ಹೆಣ್ಣು ಮುಂತಾದ ಬೀದಿ ನಾಟಕಗಳು ಚೌಕಗಳಲ್ಲಿ, ಆಟದ ಬಯಲುಗಳಲ್ಲಿ, ಬಸ್ ಸ್ಟ್ಯಾಂಡುಗಳಲ್ಲಿ ಅರಳಿಕಟ್ಟೆಗಳ ಮೇಲೆ ಎಲ್ಲೆಂದರಲ್ಲಿ ಸಾವಿರಾರು ಪ್ರಯೋಗಗಳನ್ನು ಕಂಡವು. `ಬೆಲ್ಚಿ'ಯಂತೂ ಜನಮನದಿಂದ ಅಳಿಸಿಹಾಕಲಾಗದ ಒಂದು ಅಪೂರ್ವ ಅನುಭವವಾಗಿ ಉಳಿದುಕೊಂಡಿತು. ಬಿಹಾರದ ಹಳ್ಳಿಯೊಂದರಲ್ಲಿ ಉತ್ತಮ ಕಾಳು ಕೇಳಿದ ದಲಿತರನ್ನು ಸುಟ್ಟುಹಾಕಿದ ದುರಂತವೇ ಈ ನಾಟಕದ ವಸ್ತು. ಈ ನಾಟಕದ ಪ್ರಭಾವವು ಕನ್ನಡದ ಬೀದಿ ನಾಟಕಗಳ ಮೇಲೆಲ್ಲ ಇನ್ನೂ ಇದೆ ಎಂಬುದು ರಂಗ ವಿಮರ್ಶಕರ ಅಭಿಪ್ರಾಯ. ಈ ಜಾಥಾಗಳ ಕಾಲಕ್ಕೆ ಮೊದಲಬಾರಿಗೆ ಜನಸಮುದಾಯ ತಮ್ಮನ್ನೇ ಕುರಿತಾದ ನಾಟಕ ನೋಡಿತು. ಕರ್ನಾಟಕದ ಮೂಲೆಗಳಲ್ಲೆಲ್ಲ ಬೆಟ್ಟ ಗುಡ್ಡಗಳನ್ನು ಸಾಗಿ ಹಳ್ಳಿ ಜನರ ನರನಾಡಿಯೊಂದಿಗೆ ಬೆರೆತು ಅವರ ಸಮಸ್ಯೆಗಳಿಗೊಂದು

ಸಾಂಸ್ಕೃತಿಕ ಧ್ವನಿಕೊಟ್ಟ ಸಮುದಾಯದ ಕಾರ್ಯಕರ್ತರು ತಮ್ಮ ಅನುಭವಗಳನ್ನು ಹಂಚಿ ಕೊಳ್ಳುತ್ತ (ಸಮುದಾಯ ವಾರ್ತಾ ಪತ್ರದಲ್ಲಿ) ಬೀದಿ ನಾಟಕ ಜನಮನ ಮುಟ್ಟಿದ ರೋಚಕ ವಿವರಗಳನ್ನು ನೋಡಿದರೆ ಎಂಥವರಿಗೂ ಆಶ್ಚರ್ಯವೆನಿಸುತ್ತದೆ. ಇಲ್ಲಿ ನಟರೂ ಪ್ರೇಕ್ಷಕರೂ ಹೊಂದುವ ಸಂಬಂಧವೇ ಒಂದು ಹೊಸ ಅನುಭವ. ಇದು ರಂಗಮಂದಿರದ ನಾಟಕ ಕಾಲಪಿದರಿಗೆ ಹೊರತಾದ ಅನುಭವವಾಗಿತ್ತೆಂದು ಕಾರ್ಯಕರ್ತರು ಹೇಳಿದ್ದಾರೆ. ಮೊದಲ ಯಶಸ್ವಿನಿಂದ ಜನ ಬೆಂಬಲ, ಸ್ಫೂರ್ತಿ ಪಡೆದ ಸಮುದಾಯ ಮತ್ತಷ್ಟು ಜಾಥಾಗಳನ್ನು ಯಶಸ್ವಿಯಾಗಿ ಸಂಘಟಿಸಿ ಬೀದಿನಾಟಕಗಳನ್ನು ಹೆಚ್ಚೆಚ್ಚು ಜನಪ್ರಿಯಗೊಳಿಸಿತು. ವಿಜ್ಞಾನ ಘೋಷಣೆಗಳೊಂದಿಗೆ ಜನಸಾಮಾನ್ಯರಲ್ಲಿ ವೈಜ್ಞಾನಿಕ ಮನೋಧರ್ಮ ಬೆಳೆಸುವಲ್ಲಿ ಬೀದಿನಾಟಕಗಳು ಮಾಡಿದ ಪ್ರಯತ್ನಗಳು ಮಹತ್ತರವಾದವು. ಸೀಮೆ ಎಣ್ಣೆ ಸಮಸ್ಯೆಯಿಂದ ಮೊದಲ್ಗೊಂಡು ಅಣುಯುದ್ಧದ ಭಯಾನಕ ಪರಿಣಾಮಗಳ ತನಕ ಎಷ್ಟೋ ವೈವಿಧ್ಯಮಯ ವಿಷಯಗಳು ಬೀದಿನಾಟಕಗಳ ವಸ್ತುವಾದವು. ಕೇವಲ ದಿನ ನಿತ್ಯದ ಜೀವನ ಸಮಸ್ಯೆ ಮಾತ್ರ ವಸ್ತುವಾಗದೇ ರಾಷ್ಟ್ರೀಯ ಅಂತರಾಷ್ಟ್ರೀಯ ಸಮಸ್ಯೆಗಳ ಕುರಿತಾದ ವಿಚಾರಗಳನ್ನೂ ಸಹ ಜನರಲ್ಲಿ ಬಿಂಬಿಸುವ ಪ್ರಯತ್ನಗಳನ್ನು ಸಮುದಾಯ ಯಶಸ್ವಿಯಾಗಿ ಮಾಡಿತು. ವಿಜ್ಞಾನ ಜಾಥಾದ ಸಂದರ್ಭದಲ್ಲಿ ಕರ್ನಾಟಕದ ಸಿ. ಬಸವಲಿಂಗಯ್ಯ, ರಘುನಂದನ್ (N.S.D. ಪದವೀಧರರು) ಅವರು ರಾಷ್ಟ್ರದ ವಿವಿಧ ಸಾಂಸ್ಕೃತಿಕ ತಂಡಗಳಿಗೆ ಜಾನಪದ ಶೈಲಿಯಲ್ಲಿ ಬೀದಿನಾಟಕದ ರಂಗತರಬೇತಿ ಶಿಬಿರದಲ್ಲಿ ಮಾರ್ಗ ದರ್ಶಕ ನಿರ್ದೇಶಕರಾಗಿ ಕೆಲಸ ಮಾಡಿದರೆಂಬುದು ಗಮನಾರ್ಹವಾದದ್ದು. ಇವರ ನಿರ್ದೇಶನದ `ಹೆಬ್ಬೆರಳು' ಹಾಗೂ `ಶಾಂತಿ' ಎಂಬ ಪ್ರಯೋಗಗಳು ತಮ್ಮ ವಿಶಿಷ್ಟ ಜಾನಪದ ಶೈಲಿಯಿಂದಾಗಿ ವಿಜ್ಞಾನ ಸಂದೇಶವನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿವೆ. ಇವರಲ್ಲದೇ `ಬೆಲ್ಚಿ' ಯ ನಿರ್ದೇಶಕರಾದ ಸಿ. ಜಿ. ಕೆ., ಎ. ಎನ್. ಮೂರ್ತಿ, ಪ್ರಸನ್ನ, ಎಂ. ಎಸ್. ಸತ್ಯ, ಗಂಗಾಧರ ಸ್ವಾಮಿ, ಮಾಲತಿ, ಸುರೇಶ ಆನಗಳ್ಳಿ, ಮಹೇಶ, ಬಾದರದಿನ್ನಿ, ಜನಾರ್ಧನ್, ಯತಿರಾಜು, ನಿರಂಜನಾರಾಧ್ಯ, ಲಿಂಗದೇವರು ಹಳೆಮನಿ, ಬಸವರಾಜ ಕುಂಬಾರ ಮುಂತಾದ ವರೆಲ್ಲ ಬೀದಿನಾಟಕದ ಇತಿಹಾಸ ಸೃಷ್ಟಿಗೆ ಕಾರಣಕರ್ತರಾಗುವುದರೊಂದಿಗೆ ಆ ಕ್ಷೇತ್ರದಲ್ಲಿ ಹೆಚ್ಚಾಗಿ ಗುರುತಿಸಲ್ಪಟ್ಟಿದ್ದಾರೆ.

ಪ್ರಯೋಗರಂಗ, ಭಾರತ ಯಾತ್ರಾ ಕೇಂದ್ರಗಳು ಬೆಂಗಳೂರಿನಲ್ಲಿ ಬೀದಿ ನಾಟಕೋತ್ಸವವನ್ನು ಏರ್ಪಡಿಸುವ ಮೂಲಕ ಹೊಸ ನಾಟಕಗಳ ಪ್ರದರ್ಶನಕ್ಕೆ ಶ್ರಮಿಸಿವೆ. `ಬಿಂಬ' ತಂಡದವರು ಸಹ ಬೀದಿನಾಟಕ ಸಪ್ತಾಹ (ವಸಂತೋತ್ಸವ) ನಡೆಸಿದ್ದಾರೆ. ಇವರು ಬೆಲ್ಚಿ, ಸಂಗಪ್ಪನ ಪ್ರಸಂಗ, ಪ್ರಜಾಪ್ರಭುತ್ವ, ಕೋತಿಯ ಕಥೆ, ತಬರನಕಥೆ, ಧನ್ವಂತರಿ ಚಿಕಿತ್ಸೆ, ಕೇಳಿರಪ್ಪೋ ಕೇಳಿರಿ ಮುತಾದ ಬೀದಿನಾಟಕಗಳನ್ನು ಕಲಾತ್ಮಕವಾಗಿ ಪ್ರದರ್ಶಿಸಿದ್ದಾರೆ. ಕರ್ನಾಟಕದಲ್ಲಿ ಪರಿಸರವಾದಿಗಳ ಚಳುವಳಿಯೂ ಪರಿಸರ ಪ್ರಜ್ಞೆ ಮೂಡಿಸುವಲ್ಲಿ `ಪಶ್ಚಿಮ ಘಟ್ಟ ಉಳಿಸಿ' ಆಭಿಯಾನದಲ್ಲಿ ಬೀದಿನಾಟಕದ ಮೂಲಕ ಸುಮಾರು ೧ ಲಕ್ಷ ೬೦ ಸಾವಿರ ಜನರನ್ನು ತಲುಪಿತು. ಬಿ. ಸುರೇಶ್ ಪರಿಸರ ಕಾಳಜಿಯ ಕುರಿತ ನಾಟಕಗಳನ್ನೆಲ್ಲದೇ ಚಂಪಾ ಅವರ ಚಿಂಗರ ಬುಡ್ಡಣ್ಣ ನಾಟಕಕ್ಕೆ ರಾಜಕೀಯ ಆಯಾಮ ನೀಡಿ ಹೊಸ ತಂತ್ರ ಬಳಸುವಲ್ಲಿ ಯಶಸ್ವಿಯಾಗಿದ್ದಾರೆ.

ವಿಜಯಾ ಅವರ `ಬಂದರೋ ಬಂದರು' ನಾಟಕಕ್ಕೆ ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿ ಬಂದಿದೆ. ಕನ್ನಡ ಬೀದಿನಾಟಕ ಸಾಹಿತ್ಯದ ಆರಂಭಕ್ಕೆ ಕಾರಣರಾದವರಲ್ಲಿ ಚಂದ್ರಶೇಖರ ಪಾಟೀಲರು ಪ್ರಮುಖರು. ಇವರ ನಾಟಕಗಳ ವಿಶೇಷವೆಂದರೆ ಅವು ಆಡುನಾಟಕಗಳಾಗಿ ಹೆಸರು ಮಾಡಿದಂತೆಯೇ ಓದುನಾಟಕಗಳಾಗಿಯೂ ಹೆಸರು ಗಳಿಸಿದವು. ಇವರ `ಸಂಕ್ರಮಣ' ಪತ್ರಿಕೆಯೂ ಈ ಪ್ರಕಾರದ ರಂಗ ಚಳುವಳಿಗೆ ಪೂರಕವಾಗಿ ಕೆಲಸ ಮಾಡುತ್ತಲೇ ಬಂದಿದೆ. ತುರ್ತು ಪರಿಸ್ಥಿತಿ ಹಾಗೂ ಚಿಕ್ಕಮಗಳೂರಿನ ಉಪಚುನಾವಣೆಯ ಕಾಲದಲ್ಲಿ ಇವರ `ಜಗದಂಬೆ ಬೀದಿ ನಾಟಕ', ಶ್ರೀರಂಗರ `ಉತ್ತಮ ಪ್ರಭುತ್ವ ತೊಳಲೊಟ್ಟೆ 'ಪ್ರಭು ಅವರ `ಬಕ', ಲಂಕೇಶರ `ಮುದ್ದು ಮಗನ ಕಾರು ಭಾರ' ನಾಟಕಗಳೂ ಹೆಸರು ಮಾಡಿದವು. ಬೀದಿ ನಾಟಕ ಇನ್ನೇನು ತನ್ನ ಗತ ವೈಭವವನ್ನೆಲ್ಲ ಕಳೆದುಕೊಂಡು ಕೇವಲ ಸಾಂದರ್ಭಿಕ ಚಟುವಟಿಕೆಯಾಗಿ ತೀರ ನಿಧಾನಗತಿಯಲ್ಲಿ ಸಾಗುತ್ತಿದೆ ಎಂಬಂತೆ ಭಾಸವಾಗುತ್ತಿರುವಾಗಲೇ ಸುಪ್ತಸಿದ್ದ ಬೀದಿ ರಂಗ ಕಲಾವಿದ ಸಫ್ದರ್ ಹಸ್ಮಿ ರಾಜಕೀಯ ಕಗ್ಗೊಲೆಗೀಡಾದರು. (೧೯೮೯) ಇವರ ಸ್ಮರಣಾರ್ಥವಾಗಿ ಸಮುದಾಯ ಬೆಂಗಳೂರಿನಲ್ಲಿ ಏರ್ಪಡಿಸಿದ ರಾಜ್ಯ ಮಟ್ಟದ ಬೀದಿ ನಾಟಕೋತ್ಸವದಲ್ಲಿ (ಸಮಗ್ರತಾ ಉತ್ಸವ) ವಿವಿಧ ವಸ್ತುಗಳೊಂದಿಗೆ ಹರಿದು ಬಂದ ಹತ್ತೊಂಭತ್ತು ನಾಟಕಗಳ ಮಹಾಪೂರ ಮತ್ತೊಮ್ಮೆ ಬೀದಿ ನಾಟಕಗಳಿಗೆ ಚಾಲನೆ ನೀಡಿತು. ಹತ್ತು ಹಲವಾರು ತಂತ್ರಗಳನ್ನು ಬಳಸಿಕೊಳ್ಳುವುದರೊಂದಿಗೆ ಈ ಪ್ರಕಾರದ ಬಹುಮುಖ ಸಾಧ್ಯತೆಗಳನ್ನು ಮತ್ತೊಮ್ಮೆ ಬಿಂಬಿಸುವಲ್ಲಿ ಬಹುಪಾಲು ನಾಟಕಗಳು ಯಶಸ್ವಿಯಾದವು. ಅಭಿವ್ಯಕ್ತಿ ಸ್ವಾತಂತ್ರ್ಯ ಹತ್ತಿಕ್ಕುವುದರ ವಿರುದ್ಧ ತೀವ್ರವಾಗಿ ಪ್ರತಿಕ್ರಿಯಿಸಿದ ಈ ನಾಟಕಗಳು ತಮ್ಮ ರಕ್ತಬೀಜಾಸುರನ ಗುಣವನ್ನು ಮತ್ತೊಮ್ಮೆ ತೋರಿಸಿಕೊಟ್ಟವು. ಹಸ್ಮಿಯವರ ಬಗ್ಗೆ ಸಾಧನೆಗಳ ಕುರಿತಂತೆ `ಒಂದು ಬೀದಿಯ ಕಥೆ ' ಎಂಬ ನಾಟಕವನ್ನು ರಚಿಸಿ ಹುಬ್ಬಳ್ಳಿ - ಧಾರವಾಡ ಸಮುದಾಯಕ್ಕೆ ಜಿ. ಎಚ್. ರಾಘವೇಂದ್ರ ಅವರು ನಿರ್ದೇಶಿಸಿದ್ದರು. ಈ ನಾಟಕ ತನ್ನ ಮೈಮ್ ತಂತ್ರ ಹಾಗೂ ಉತ್ತರ ಕರ್ನಾಟಕದ ಗಂಡು ಮೆಟ್ಟಿನ ಭಾಷೆಯ ಬಳಕೆಯಿಂದ ಸಮಗ್ರತಾ ಉತ್ಸವದಲ್ಲಿ ಪ್ರೇಕ್ಷಕರ ಹಾಗೂ ಪತ್ರಿಕೆಗಳ ವಿಶೇಷ ಗಮನ ಸೆಳೆಯಿತು. ಒಟ್ಟಾರೆ ಈ ಉತ್ಸವ ಬೀದಿನಾಟಕಗಳು ರಂಗಕರ್ಮಿಗಳ ಕ್ರಿಯಾತ್ಮಕ ಶಕ್ತಿಗೆ ಸವಾಲಾಗಬಲ್ಲ ಪ್ರಕಾರವಿದೆಂಬ ಕಲ್ಪನೆಯನ್ನು ಮತ್ತೊಮ್ಮೆ ನೆನಪಿಸಿಕೊಡುವಲ್ಲಿ ಯಶಸ್ವಿಯಾಯಿತು.

ಇತ್ತೀಚಿನ ಮತ್ತೊಂದು ಪ್ರಮುಖ ಬೆಳವಣಿಗೆಯೆಂದರೆ ಸಾಕ್ಷರತಾ ಆಂದೋಲನವು ಬೀದಿನಾಟಕವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಮ್ಮು. ಸರಕಾರವೇ ಸಂಪೂರ್ಣ ಸಾಕ್ಷರತೆ ಒಂದು ಜನಾಂದೋಲನವಾಗಬೇಕೆಂಬ ನಿಲುವು ತಳೆದು ಜನಪರ ಸಂಘಟನೆಗಳನ್ನೂ, ಕಾರ್ಯಕರ್ತರನ್ನೂ ಗುರುತಿಸಿ, ಅವರ ಆಂದೋಲನಕ್ಕೆ ಆರ್ಥಿಕ ನೆರವನ್ನೂ ನೀಡುತ್ತಿರುವ ಇಂದಿನ ಸಂದರ್ಭದಲ್ಲಿ ಬೀದಿನಾಟಕ ಪ್ರಕಾರ ಹಿಂತಿರುಗಿ ನೋಡುವ ಅಗತ್ಯವೇ ಉಳಿಯಲಿಲ್ಲ ವೆನ್ನಬಹುದು. ಭಾರತ ಜ್ಞಾನ ವಿಜ್ಞಾನ ಜಾಥಾವು (೧೯೯೦) ವಿವಿಧ ಜಿಲ್ಲಾ ಸಮಿತಿಗಳು ಸಾಕ್ಷರತಾ ಹಾಡುಗಳ ಹಾಗೂ ಬೀದಿನಾಟಕಗಳ ಪುಸ್ತಕಗಳನ್ನೂ ಹೊರತಂದಿವೆ. ಕರ್ನಾಟಕದ ಹಳ್ಳಿಗಳಲ್ಲೆಲ್ಲ ಇಂದು ಬೀದಿನಾಟಕಗಳು ಪರಿಚಿತವಾಗಿವೆ. ಕ್ರಿಯಾತ್ಮಕ ಸಾಕ್ಷರತೆ ಅಕ್ಷರಜ್ಞಾನ ನೀಡುವುದರೊಂದಿಗೆ ಜನರಿಗೆ ತಮ್ಮ ಪರಿಸರದ ಅರಿವು. ಅನಕ್ಷರತೆ ಅಜ್ಞಾನದಿಂದ

ಉಂಟಾಗುವ ಅವಗಢಗಳು, ಶೋಷಣೆ, ಮೂಢನಂಬಿಕೆ, ಕಂದಾಚಾರಗಳಿಂದುಂಟಾಗುವ ಅಚಾತುರ್ಯಗಳ ಕುರಿತ ಜ್ಞಾನವನ್ನೂ ನೀಡುವ ಹಿರಿಯಾಸೆಯೊಂದಿಗೆ ಪ್ರಾರಂಭವಾದ ಈ ಆಂದೋಲನ ತೀವ್ರಗತಿಯಲ್ಲಿ ಸಾಂಸ್ಕೃತಿಕ ಆಯಾಮ ಪಡೆದುಕೊಳ್ಳುವಲ್ಲಿ ಬೀದಿ ನಾಟಕಗಳ ಪಾತ್ರ ಬಹುದೊಡ್ಡದು. ಈ ಆಂದೋಲನ ಎಷ್ಟು ವ್ಯಾಪಕವಾಗಿ ಬೀದಿನಾಟಕಗಳನ್ನು ತಯಾರಿಸುತ್ತಿದೆಯೆಂಬುದರ ಉದಾಹರಣೆಯೊಂದನ್ನು ನೋಡುವುದು ಉಚಿತ. ಧಾರವಾಡ ಪಕ್ಕದ ಕ್ಯಾರಕೊಪ್ಪ ಗ್ರಾಮದಲ್ಲಿ ೧೯೯೩ರಲ್ಲಿ ಏರ್ಪಡಿಸಿದ ಬೀದಿನಾಟಕ, ಸಾಕ್ಷರತಾ ಹಾಡುಗಳ ೧೫ ದಿನಗಳ ಕಾರ್ಯಾಗಾರವೊಂದರಲ್ಲೇ ಸುಮಾರು ಎರಡುನೂರು ಜನ ಕಲಾವಿದರು ತರಬೇತಿ ಪಡೆದರು. ಜಿಲ್ಲೆಯ ವಿವಿಧ ಮಂಡಲಗಳನ್ನು ಪ್ರತಿನಿಧಿಸಿ ಬಂದಿದ್ದ ಇವರು ಈಗ ತಮ್ಮ ಊರುಗಳಲ್ಲಿ ಬೀದಿನಾಟಕ ತಂಡ ಕಟ್ಟಿಕೊಂಡು ಸ್ವತಂತ್ರವಾಗಿ ನಾಟಕವಾಡ ಬಲ್ಲವರಾಗಿದ್ದಾರೆ. ಅವರು ಈ ಮೊದಲೇ ಗ್ರಾಮೀಣ ಜನಪದ ಧಾಟಿಗಳನ್ನು ತಿಳಿದವರಾದ್ದರಿಂದ ಹೊಸ ಬೀದಿ ತಂತ್ರಗಳ ಪ್ರಾಥಮಿಕ ಜ್ಞಾನ ಕೊಡಲ್ಪಟ್ಟರೂ ನಾಟಕವಾಡ ಬಲ್ಲರು. ಹಲವಾರು ಜನ ಹಮ್ಮಾಸಿ ಅರೆವೃತ್ತಿ ಕಲಾವಿದರು ರಂಗತರಬೇತಿ ನೀಡಿದ ಈ ಶಿಬಿರ ಸಂಪೂರ್ಣ ಯಶಸ್ವಿಯಾಯಿತು. ಪ್ರೊ. ಸಂಪಿಗೆ ತೋಂಟದಾರ್ಯ, ಬಸವಲಿಂಗಯ್ಯ, ವಿಶ್ವೇಶ್ವರಿ ಹಿರೇಮಠ, ಸಿದ್ದನಗೌಡ ಪಾಟೀಲ, ಶಂಕರ ಹಲಗತ್ತಿ, ಶ್ರೀಶೈಲ ಹುದ್ದಾರರಂಥ ರಂಗತಜ್ಞರು ಸಂಘಟಿಕರು ಯಾವುದೇ ಪ್ರತಿಫಲದ ಅಪೇಕ್ಷೆ ಇಲ್ಲದೇ ಈ ಕಾರ್ಯಾಗಾರದಲ್ಲಿ ಸೇವೆ ಸಲ್ಲಿಸಿದ್ದಾರೆ. ಇದು ಸಾಮಾಜಿಕ ಬದ್ಧತೆಯಿಂದ ಮಾತ್ರ ಸಾಧ್ಯವಾಗುವ ಸೇವೆ. ಬೀದಿ ನಾಟಕಗಳು ಬಯಸುವುದೂ ಇದೇ ತರದ ಬದ್ಧತೆ. ಈ ಪ್ರಕಾರ ತನ್ನ ಪ್ರಗತಿಪರತೆ, ಸರಳತೆ ಹಾಗೂ ಕಡಿಮೆ ಖರ್ಚಿನಿಂದಾಗಿ ರಾಜ್ಯದಲ್ಲಿಂದು ಹೆಚ್ಚಿಚ್ಚು ಜನರನ್ನು ತಲುಪುತ್ತಿದೆ. ಎಲ್ಲ ಬಗೆಯ ಎಡ ಮತ್ತು ಪ್ರಜಾಪ್ರಭುತ್ವವಾದಿ ಸಂಘಟನೆಗಳನ್ನು ತಮ್ಮ ನಿಲುವಿಗನುಗುಣವಾಗಿ ಈ ಪ್ರಕಾರವನ್ನು ಉಪಯೋಗಿಸಿಕೊಳ್ಳುತ್ತಿವೆ. ಕಾರ್ಮಿಕರ ಹೋರಾಟ ದೀನ ದಲಿತರ, ಮಹಿಳೆಯರ ವಿಮೋಚನೆಗಾಗಿ, ವಿದ್ಯಾರ್ಥಿ-ಯುವ ಜನರನ್ನು ಕಾಡುವ ಶೈಕ್ಷಣಿಕ ನಿರುದ್ಯೋಗದ ಸಮಸ್ಯೆ ಹಾಗೂ ಎಲ್ಲ ಬಗೆಯ ಶೋಷಣೆ ಮತ್ತು ಅನ್ಯಾಯಗಳನ್ನು ಪ್ರತಿಭಟಿಸಲು ಬೀದಿ ನಾಟಕಗಳು ಆಡಲ್ಪಡುತ್ತವೆ. ಇವಕ್ಕೆ ಆರ್ಥಿಕ ತೊಂದರೆ ಇಲ್ಲವೆಂದಲ್ಲ. ಆದರೆ ಬೀದಿ ನಾಟಕವೊಂದು ಯಶಸ್ವಿಯಾಗಿ ಪ್ರದರ್ಶನಗೊಂಡ ಸಂದರ್ಭದಲ್ಲಿ ಬೀದಿ ನಿಧಿ ಸಂಗ್ರಹದ ಮೂಲಕವೇ ಪ್ರೇಕ್ಷಕರು ಕನಿಷ್ಠ ಅರ್ಧಪಾಲನ್ನಾದರೂ ಭರಿಸುತ್ತಾರೆಂಬುದು ಗೊತ್ತಾಗಿದೆ. ಆದರೂ ಇದೊಂದು ಮುಕ್ತಸಾಧನವಾಗಿ ಹೆಚ್ಚು ಜೀವಂತಿಕೆಯಿಂದ ಕೆಲಸ ಮಾಡಬೇಕಾದರೆ ಬೀದಿ ನಾಟಕ ಕಲಾವಿದರು ಹೊಸ ಸಂಪನ್ಮೂಲಗಳ ಮೂಲಗಳನ್ನು ಹುಡುಕಬೇಕಾದೀತು.

ಬೀದಿ ನಾಟಕದ ಜೀವಾಳ : ಸಂಗೀತ ಹಾಗೂ ಹಾಡುಗಳು:

ಎಲ್ಲಿಂದ ಬಂದಿರೆಂದು ಕೇಳಬಹುದು ನೀವು
ಜನರ ಸಡುವಿನಿಂದ ಎಂದು ಹೇಳುತ್ತೇವೆ ನಾವು
ಮತ್ತೆ ಪಯಣ ಎಲ್ಲಿಗೆಂದು ಕೇಳಬಹುದು ನೀವು
ತಿರುಗಿ ಮತ್ತೆ ಜನರ ಕಡೆಗೆ ಹೋಗುತ್ತೇವೆ ನಾವು

ಈ ಸಮುದಾಯ ಗೀತೆ ಬೀದಿನಾಟಕದ ಆರಂಭದಲ್ಲಿ ತನ್ನ ಉದ್ದೇಶ ವಿವರ
ವ್ಯಾಪಕವಾಗಿ ಉಪಯೋಗಿಸಲ್ಪಟ್ಟಿದೆ. ಸಂದರ್ಭಕ್ಕೆ ತಕ್ಕಂತೆ ಇದರ ಕೆಲವು ಸಾಲುಗಳನ್ನು ಬದ
ಹೇಳುವ ಸ್ವಾತಂತ್ರ್ಯವನ್ನೂ ವಿವಿಧ ತಂಡಗಳು ತೆಗೆದುಕೊಂಡಿವೆ. ಈ ಹಾಡಿನ ಮೂಲ ನರಗು
ರೈತ ಬಂಡಾಯದಷ್ಟು ಹಿಂದಿನದು. ಆಗ ಮುಂದಿನ ಕೆಲ ಸಾಲುಗಳನ್ನು ಈ ರೀತಿ ಹಾಡಲಾಗುತ್ತಿ

ಈಗ ಪಯಣ ಎಲ್ಲಿಗೆಂದು ಕೇಳಬಹುದು ನೀವು
ನರಗುಂದ ನವಲಗುಂದಕೆ ಹೋಗುತ್ತೇವೆ ನಾವು

ಸಾಕ್ಷರತಾ ಆಂದೋಲನದಲ್ಲಿ ಅದೇ ಸಾಲನ್ನು ಬದಲಿಸಿ `ಸಾಕ್ಷರತೆಯ ಬಿತ್ತ
ಹೋಗುತ್ತೇವೆ ನಾವು' ಎಂದು ಹಾಡುತ್ತಾರೆ. ವಿಶ್ವಶಾಂತಿಗಾಗಿ ಸಮುದಾಯ ಹಮ್ಮಿಕೊ
ಬಣ್ಣದ ನಡೆಯ ಜಾಥಾದಲ್ಲಿ ಮುಂದೆ ಪಯಣ ಎಲ್ಲಿಗೆಂದು ಕೇಳಬಹುದೋ ನೀವು ಆ
ಸಮರಕೆ ತಡೆಯನೊಡ್ಡಲು ಶಾಂತಿಯೆಡೆಗೆ ನಾವು ಎಂದು ಬದಲಿಸಿಕೊಳ್ಳಲಾಗಿತ್ತು. ಬೀ
ರಂಗಭೂಮಿ ಎಷ್ಟು ಆಶಾವಾದಿಯೆಂದರೆ ___

ಗೆಲುವು ನಮ್ಮದೋ, ಗೆಲುವು ನಮ್ಮದೋ
ಇಂದಿಗೂ ಎಂದೆಂದಿಗೂ ಗೆಲುವು ನಮ್ಮದೋ
ಬದುಕಿನುದ್ದಕೂ ಬದ್ಧವ ವೈರಿಗಳ ಗೆದ್ದೇ ಗೆಲುವೆವೋ
ನಾವು ಗೆದ್ದೆ ಗೆಲುವೆವೂ
ಇದು ನಮ್ಮ ಎದೆಯಾಳದ ನಿಶ್ಚಲ ನಂಬಿಕೆಯೋ

ಎಂದು ಖಡಾ ಖಂಡಿತವಾಗಿ ಘೋಷಿಸುವುದರ ಜೊತೆಗೇ___

ಒಂಟಿ ಒಬ್ಬಂಟಿ ನಾವಲ್ಲ
ಎಂದಿಗು ನಾವು ಒಂಟಿ ನಡೆಯುವ
ಪಯಣಿಗರೇ ಅಲ್ಲ

ಎಂದು ಹೇಳುವ ಮುಖಾಂತರ ಜನರ ಜೊತೆಯಾಗಿ ಸಾಗುವ ಎಲ್ಲರೊಳಗೊಂ
ಬದುಕುವ ತನ್ನ ಬದ್ಧತೆಯನ್ನು ಈ ಹಾಡು ಸ್ಪಷ್ಟಪಡಿಸಿತು. ಬೀದಿ ನಾಟಕಗಳಲ್ಲಿ ಬ
ಬಂಡಾಯ ಜಾತಿನ ಹಲವಾರು ಹಾಡುಗಳು ಜೊಕ್ಕ ಜಾನಪದ ಶೈಲಿಯಲ್ಲಿ ಹಾಡಲ್ಪಡುತ
ಇವುಗಳನ್ನು ಹಾಡುವಾಗ ಪ್ರಮುಖವಾಗಿ ಉಪಯೋಗಿಸುವ ವಾದ್ಯಗಳೆಂದರೆ ಹ
ತಪ್ಪಟಾಳ, ಢೋಲಕ್ ಹಾಗೂ ತಮಟೆಗಳು. ಕವಿ ಸಿದ್ದಲಿಂಗಯ್ಯನವರ ಹಲವಾರು ಹ
ಗಳು ಬೀದಿನಾಟಕದ ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳಾಗಿ ಹರಿದಿವೆ. ಅತಿ ಹೆ
ಹಾಡಲ್ಪಟ್ಟ ಅವರ ಹಾಡುಗಳ ಮೊದಲ ಕೆಲ ಸಾಲುಗಳು `ಯಾರಿಗೆ ಬಂತು ಎಲ್ಲಿಗೆ ಬ
ನಲವತ್ತೇಳರ ಸ್ವಾತಂತ್ರ್ಯ', "ದಲಿತರು ಬರುವರು ದಾರಿಬಿಡಿ, ದಲಿತರ ಕೈಗೆ ರಾಜ್ಯಕೊ
"ತುರ್ತು ಪರಿಸ್ಥಿತಿ ಕರಾಳ ರಾತ್ರಿಯ ಕತೆಯನು ಹೇಳ್ತಿವಿ", "ನೆನ್ನೆ ದಿನ ನನ್ನ ಜನ ಬೆಳ್ಳಿ
ಬಂದರು ", "ಹಸಿವಿನಿಂದ ಸತ್ತೋರು, ಸೈಜುಗಲ್ಲು ಹೊತ್ತೋರು ", "ದೊಡ್ಡಗೆ
ವಾಗಿಲಿಗೆ ನಮ್ಮ ಮೂಳೆಯ ತ್ಯಾರಣ' ಮುಂತಾದವು. ಕೋಮು ಸೌಹಾರ್ದದ ಸ
ಸಾರುವಲ್ಲಿ `ನಮ್ಮಲ್ಲಿಲ್ಲ ಹಿಂದೂ ರಕ್ತ, ನಮ್ಮಲ್ಲಿಲ್ಲ ಮುಸ್ಲಿಂ ರಕ್ತ, ನಮ್ಮಲ್ಲಿಲ್ಲ

ಕ್ಕೆ, ಸಮ್ಮಿಲಿರುವುದು ಮಾನವ ರಕ್ತ" - ಎಂಬ ಘೋಷಣೆಯ ರೂಪದ ಹಾಡು ಧ್ವನಿ ಪೂರ್ಣವಾಗಿ ಹೇಳಲ್ಪಡುತ್ತದೆ. "ಬರುತಿಹೆವು ನಾವು ಬರುತಿಹೆವು ಯುಗ ಯುಗಗಳಿಂದ ನೊವು ತುಳಿದ ಜನಗಳು " ಎಂಬ ಕೆ. ರಾಮಯ್ಯನವರ ಕವನ ಬಹು ಪರಿಣಾಮಕಾರಿಯಾಗಿ ಹೇಳಲ್ಪಡುತ್ತದೆ. ಸಮುದಾಯ ಶಾಂತಿ ಜಾಥಾದಲ್ಲಿ "ಉಸಿರಾಡುವೆ ನಿನ ನೆನೆದು ಓ ಗೆಳೆಯ" ರೆಕ್ಕೆ ಬಿಡಿಸಿ ಪಾರಿವಾಳಗಳ ಯುದ್ಧ ನಾಡಿನಲ್ಲಿ," " ಯುದ್ಧ ಅಣುಯುದ್ಧ ಸಾಕು ಸಾಕು," ' ಸರಹದ್ದಿಗಾಗಿ ಯುದ್ಧವಾಯಿತು. ನಗರ ಉಳಿಯಲಿಲ್ಲ ", "ತಲೆಗಳು ಉರುಳ್ಯಾವೊ ರಕ್ತದ ಕೋಡಿ ಹರಿದಾವೋ " ಮುಂತಾದ ಹಾಡುಗಳು ಬಿಡಿಷ್ ಶೈಲಿಯ ರಾಗಬದ್ಧತೆಯಿಂದ ಜನಮನ ತಲುಪಿ ಶಾಂತಿಯ ಸಂದೇಶ ಸಾರಿದವು. ಇತ್ತೀಚೆ ಕ್ರಾಂತಿ ಕವಿ, ಗಾಯಕ ಗದ್ದರ್ ಅವರು ಉಪಯೋಗಿಸುವ ಅವ್ವಟ ಹಳ್ಳಿಯ ಜನಪದೀಯ ಧಾಟಿಗಳನ್ನು ಬೀದಿ ನಾಟಕಗಳು ಧಾರಾಳವಾಗಿ ಬಳಸುತ್ತಿವೆ. ಅಲ್ಲದೇ ಕೋಲಾಟ, ಗೀಗೀಪದ, ದಾಸರ ಶೈಲಿ, ಯಕ್ಷಗಾನ, ದೊಣ್ಣಾಟ ಶೈಲಿಯ ಧಾಟಿಗಳನ್ನು ಬಳಸಿಕೊಳ್ಳುವುದಲ್ಲದೇ ಜಾನಪದವಾದ್ಯ, ಮೇಳಗಳನ್ನು ಬಳಸಿ ಕೊಂಡು ಬೀದಿನಾಟಕಗಳು ಜನರ ಹೃದಯಕ್ಕೆ ಲಗ್ಗೆ ಹಾಕಿವೆ.

ಬೀದಿನಾಟಕ ಪ್ರಕಾರದ ಸಾಫಲ್ಯ, ವೈಫಲ್ಯ :ಉಪಸಂಹಾರ

ಬೀದಿನಾಟಕದ ಉದ್ದೇಶವೇ ಜನಸಾಮಾನ್ಯರನ್ನು ತಲುಪುವುದು. ಎಷ್ಟೋ ಸಲ ಅದು ಕಲಾತ್ಮಕವಾಗಿ ತಲುಪುವುದೋ, ಹಸಿಹಸಿಯಾದ (Crude form) ರೀತಿಯಲ್ಲಿ ತಲುಪುವುದೋ ಹೇಳಲಿಕ್ಕಾಗದು. ಹಾಗಾದರೆ ಈ ಸಾಹಿತ್ಯ ಪ್ರಕಾರದ ಸಫಲತೆ ವಿಫಲತೆಗಳನ್ನು ನಿರ್ಧರಿಸುವ ಮಾನದಂಡ ಯಾವುದು ? ಎಷ್ಟೋ ಸಲ ಇಂತಹ ಸಾಹಿತ್ಯ ಪ್ರಕಾರದ ವಿಮರ್ಶೆ ಮಾಡುವಾಗ ಆಯಾ ವ್ಯಕ್ತಿಗಳ ಸೈದ್ಧಾಂತಿಕ ಹಿನ್ನೆಲೆ ಬದ್ಧತೆಗಳಿಗನುಗುಣವಾಗಿ ಅವರವರ ಅಭಿಪ್ರಾಯಗಳು ಭಿನ್ನವಾಗುತ್ತ ಹೋಗುತ್ತವೆ. ಈ ಮಾತು ಇತರ ಸಾಹಿತ್ಯ ಪ್ರಕಾರಗಳಿಗೂ ಅನ್ವಯಿಸುತ್ತದೆಯಾದರೂ, ಒಂದು ನಿರ್ದಿಷ್ಟ ಉದ್ದೇಶ ಹೊಂದಿದ ಬೀದಿನಾಟಕದಂತಹ ಪ್ರದರ್ಶನ ಸಾಹಿತ್ಯದ ವಿಷಯದಲ್ಲಿ ಹೆಚ್ಚು ಪ್ರಸ್ತುತವಾಗುತ್ತದೆ. ಹಲವಾರು ಜನ ರಂಗ ವಿಮರ್ಶಕರು, ನಾಟಕಕಾರರೂ ಇದರ ಸೋಲು ಗೆಲುವು ಹಾಗೂ ಇದರ ಮುಂದಿರುವ ಸವಾಲುಗಳ ಕುರಿತು ಮಾತಾಡಿದ್ದಾರೆ. `ಜೆಲ್ಲಿ ' ಯ ಸಿ. ಜಿ. ಕೃಷ್ಣಸ್ವಾಮಿ, ನಿಜವಾದ ಬೀದಿ ನಾಟಕ ಸಮ್ಮಿಲ್ಲಿ ಇನ್ನೂ ಬರಬೇಕಿದೆ ಎಂದು ಹೇಳಿದ್ದಾರೆ. ಕೇವಲ ಮಾತಿನ ಮಂಟಪ ಕಟ್ಟುತ್ತ, ಸೀಮೆ ಎಣ್ಣೆ, ಸಕ್ಕರೆ, ಹೆಗ್ಗಣ ಎನ್ನುತ್ತ ಸ್ಪಾಟ್ ಥಿಯೇಟರ್ ಮಾರಬಾರದೆಂದು ಹೇಳುತ್ತ ಬಾದಲ್ ಸರ್ಕಾರ್ ಬೀದಿಯಲ್ಲಿ `ಸ್ಪಾರ್ಟಕಸ್' ನಂತ ಗಂಭೀರ ಪ್ರಯೋಗವನ್ನು ಮಾಡಿದ್ದಾರೆಂದರೆ ನಮ್ಮದು ಇನ್ನೂ ಶೈಶವಾವಸ್ಥೆಯಲ್ಲಿಯೇ ಇರುವ ಬೀದಿನಾಟಕವೆಂಬುದು ಅವರ ಅಭಿಪ್ರಾಯ. ಆದ್ದರಿಂದ ಇನ್ನು ಹಲವಾರು ಸವಾಲುಗಳನ್ನೆದುರಿಸಬೇಕಿರುವ ಈ ಪ್ರಕಾರದ ಬಗೆಗೆ ರಂಗತಜ್ಞ ಡಾ. ಎಚ್. ಕೆ. ರಂಗನಾಥ್ `ಕಲೆಗಾಗಿ ಕಲೆ' ಎಂದು ತಯಾರಿಸುವ ನಾಟಕಗಳು ` ಮ್ಯೂಸಿಯಂ ವಸ್ತು ' ಆಗುವ ಸಾಧ್ಯತೆಗಳುಂಟು. ಆದರೆ ಬೀದಿ ನಾಟಕ ಹಾಗಾಗಬಾರದು. ಇದಕ್ಕೆ ರಂಗ ಪರಿಕರದ ಹೇರು ಇಲ್ಲ. ಹಾಗೆಂದ ಮಾತ್ರಕ್ಕೆ ಕಲಾವಂತಿಕೆಗೆ ಬಡತನವಿಲ್ಲ. ಇದರ ಸಾಧ್ಯತೆಗೆ ಸೀಮೆಯೇ ಇಲ್ಲ. ಇದು ಕಲಾವಿದನಿಗೆ ಒಂದು ಸವಾಲು ಎನ್ನುವ ಮುಖಾಂತರ ಇನ್ನೂ ಆಗಬೇಕಾದುದರ ಕಡೆಗೆ ಗಮನ ಸೆಳೆಯುತ್ತಾರೆ.

ರಂಗಭೂಮಿಯಲ್ಲಿ ಬೀದಿ ನಾಟಕ ಕಾಡುಕೊಂಡದ್ದು ವಿಫಲತೆಯನ್ನೇ ಎನ್ನುತ್ತಾರೆ ಖ್ಯಾತ ವೃತ್ತಿರಂಗಭೂಮಿ ಕಲಾವಿದ ಶ್ರೀ ಏಣಗಿ ಬಾಳಪ್ಪನವರು. ಪ್ರೇಕ್ಷಕನನ್ನು ಬೀದಿ ನಾಟಕ ನಾಟಕದ ದೃಷ್ಟಿಯಿಂದ ತೃಪ್ತಪಡಿಸಲು ಸಾಧ್ಯವಿಲ್ಲ. ನಾಟಕ ಎಂದರೆ ಅದಕ್ಕೆ ತನ್ನದೇ ಆದ ಒಂದು ಪ್ರತ್ಯೇಕ ಆವರಣವಿದೆ ಎಂಬ ಕಲ್ಪನೆ ಪ್ರೇಕ್ಷಕನಲ್ಲಿದೆ. ಸಂದೇಶ ಎಂದರೆ ಕ್ಲೈಮ್ಯಾಕ್ಸ್ ಮಾತ್ರಯಂತೆ. ಅದಕ್ಕೆ ಸಿಹಿಲೇಪ ಇರಲೇಬೇಕು. ಬಹುತಃ ಬೀದಿ ನಾಟಕದ ಮುಂದಿನ ಸ್ಥಿತಿ ಮನೆ ಮನೆಗೆ ನಾಟಕ ಆಗಿಬಿಡಬಹುದು. ಇವುಗಳನ್ನು ಸುಶಿಕ್ಷಿತರಿಗೆ ತಲುಪಿಸಲು ಸಾಧ್ಯವೇ ಹೊರತು ಸಾಮಾನ್ಯ ಪ್ರೇಕ್ಷಕನಿಗಲ್ಲ ಎಂದು ಪ್ರತಿಕ್ರಿಯಿಸುವ ಮುಖಾಂತರ ಬಾಳಪ್ಪನವರು ಬೀದಿ ನಾಟಕಗಳಿಗಿರಬಹುದಾದ ಸಿಹಿಲೇಪನದ ಕೊರತೆಯನ್ನು ಎತ್ತಿಹೇಳುತ್ತಾರೆ. ಆದರೆ ಈ ಸಿಹಿ ಲೇಪನವನ್ನು ಅತಿಯಾದ ಪ್ರಮಾಣದಲ್ಲಿ ಕೊಟ್ಟು ವೃತ್ತಿರಂಗಭೂಮಿಯ ಬಗೆಗೂ ಅವರಲ್ಲಿ ಆಳವಾದ ವಿಷಾದವಿದೆ. ಅವರಿಗೆ ಬಹುತಃ ಬೀದಿನಾಟಕದಲ್ಲಿನ ಸಿಹಿ ಲೇಪನದ ಕೊರತೆ ಅದರ ವಿಫಲತೆಯಂತೆ ತೋರುತ್ತಿದೆ. ಸುಶಿಕ್ಷಿತರಿಗೆ ಸಿಹಿಲೇಪನದ ಕೊರತೆಯುಂಟಾದರೂ ಅವರು ಬೀದಿನಾಟಕವನ್ನು ಸ್ವೀಕರಿಸಬಲ್ಲರೆನ್ನುವ ವಿಶ್ಲೇಷಣೆ ಅವರಿಂದ ಮೂಡಿ ಬಂದಿದೆ. ಆದರೆ ಸಾಮಾನ್ಯ ಪ್ರೇಕ್ಷಕರೇ ಬೀದಿನಾಟಕದ Target ಗಳಾದ್ದರಿಂದ ಬಾಳಪ್ಪನವರು ಹೇಳುವ ನಾಟಕದ ಪ್ರತ್ಯೇಕ ಆವರಣವನ್ನು ಇವುಗಳಿಗೆ ಕೊಡುವ ಸಾಧ್ಯತೆ ಇದೆ. ಮನರಂಜನೆಯ ಜೊತೆಗೆ ಬೀದಿನಾಟಕ ಆಡುವ ಪ್ರಯತ್ನಗಳು ಸಾಕಷ್ಟಾಗಿವೆ. ಮನರಂಜನೆಯ Doseನ್ನು ಮತ್ತೊಂದು ದೃಷ್ಟಿಕೋನದಿಂದ ನೋಡಿದ ಕೆ. ಮರುಳಸಿದ್ದಪ್ಪನವರು, ವಸ್ತು, ನಿರೂಪಣೆ, ನಿಲುವುಗಳ ಸ್ಪಷ್ಟವಾಗಿಲ್ಲದೇ ಮನರಂಜನೆಯೇ ಮುಖ್ಯವಾದಾಗ ಬೀದಿನಾಟಕ ಅವನತಿಯ ದಾರಿ ಹಿಡಿಯುತ್ತದೆ ಎನ್ನುತ್ತಾರೆ. ಸರಿಯಾದ ಮಾರ್ಗದಲ್ಲಿ ನಡೆದರೆ, ಕ್ರಿಯಾಶೀಲವೂ ಪ್ರಗತಿಪರವೂ ಆದ ಬೀದಿನಾಟಕ ಜಿಡ್ಡುಗಟ್ಟಿದ ರಂಗಭೂಮಿಗೆ ಮತ್ತು ಸಾರ್ವಜನಿಕ ಜೀವನಕ್ಕೆ ಹೊಸ ಸ್ವರೂಪವನ್ನು ಚೈತನ್ಯವನ್ನು ಕೊಡಲು ಸಾಧ್ಯವಿದೆ ಎನ್ನುವ ಮುಖಾಂತರ ಬೀದಿನಾಟಕದ ಪ್ರಗತಿ ಪರತೆಗೆ ಹೆಚ್ಚಿನ ಒತ್ತುಕೊಟ್ಟಿದ್ದಾರೆ. ಬೀದಿ ನಾಟಕ ಮನರಂಜನೆಯ ದೃಷ್ಟಿಯಿಂದ ಜನಪ್ರಿಯತೆಯ (Populism) ಜಾಡುಹಿಡಿದರೆ ಒದಗಬಹುದಾದ ಅಪಾಯವನ್ನು ಕುರಿತು ವಿಜಯೋರವರು ಹೇಳುತ್ತ ಬೀದಿನಾಟಕ ಆಡುವವರೆಲ್ಲ ತಾವು ಮಾಡಿದ ಜೋಕುಗಳಿಗೆ ಜನ ನಕ್ಕಿದ್ದನ್ನು ತಮ್ಮ ನಾಟಕದ ಯಶಸ್ಸು ಎಂದು ಕೊಳ್ಳುತ್ತಿರುವ ಸ್ಥಿತಿಯೊಂದು ಏರ್ಪಟ್ಟಿದೆ. ಇಂಥಲ್ಲಿ ಉದ್ದೇಶಗಳು ಗಂಭೀರವಾಗಿ ಪ್ರತಿಪಾದಿತವಾಗದೇ ಹೋದರೆ, ನಟನಿಗೆ ತಾನು ಹೇಳುವ ವಿಚಾರದ ಬಗ್ಗೆ ಸಂಪೂರ್ಣ ಅರಿವಿರದೇ ಕೇವಲ ಸಂದರ್ಭಕ್ಕೆ ಒದಗಿ ಅಭಿನಯಿಸುವ ಚಟುವಾದರೆ ಅದು ಪರಿಣಾಮ ಬೀರದೇ ಕಮರ್ಷಿಯಲ್ ಸಿನಿಮಾದ ಹಾಸ್ಯ ನಟನ ಕ್ಯಾರಿಕೇಚರ್ ಮಾತ್ರ ಆಗಬಲ್ಲದೆನ್ನುತ್ತಾರೆ. ಆದ್ದರಿಂದ ಬೀದಿನಾಟಕ ಲೈಟ್ ಆಗಿ ಆಡಲ್ಪಡುವಂತಹದಲ್ಲ. ಅದರ ಸಂವಹನ ಶಕ್ತಿ, ಅಪಾರವಾದುದರಿಂದ ಅದರ ಬಳಕೆಯಲ್ಲಿ ಆಗುವ ಅಪಾಯಗಳು ಹಾಗೂ ಇಲ್ಲಿ ಪ್ರೇಕ್ಷಕನೂ ಸಹ ಸ್ವೀಕರಿಸುವಲ್ಲಿ ಆಯ್ಕೆ ಮಾಡಿಕೊಳ್ಳಬೇಕಾದ್ದು ಏನನ್ನು ಎಂಬ ಬಗ್ಗೆ ಇನ್ನೂ ವ್ಯಾಪಕವಾಗಿ ಚರ್ಚೆ ಮಾಡಬೇಕಾಗಿದೆ ಎಂಬ ಅಭಿಪ್ರಾಯವನ್ನು ಮುಂದಿಡುತ್ತ ಬೀದಿ ನಾಟಕದಲ್ಲಿ ತೊಡಗಿಕೊಂಡವರೆಲ್ಲ ಈಗ ಮಾಡಬೇಕಾದ ಕೆಲಸ ಇದೇ ಅನ್ನುವುದನ್ನೆನ್ನುತ್ತಾರೆ.

---

೩ ಜಿ. ಎನ್. ಮೋಹನ್ ರವರ 'ಸಮೂಹದಿಂದ ಸಮೂಹಕ್ಕೆ ಬೀದಿ ನಾಟಕ' ಪುಸ್ತಕದ ಬರಹ ವಿಜಯೋರ ಮುನ್ನುಡಿಯಲ್ಲಿ.

ಬೀದಿನಾಟಕವನ್ನು ಪ್ರೊಸೀನಿಯಂ ರಂಗಭೂಮಿಯ ವಿರುದ್ಧ ಬಂಡೆದ್ದ ಪಾದರಿ ಎಂದು ಬಣ್ಣಿಸುವುದನ್ನು ಖಂಡಿಸಿದ ವಿ. ಹಸ್ಮಿ, ಪ್ರೊಸೀನಿಯಂ ರಂಗ ಕಲಾವಿದರು ಬೀದಿನಾಟಕವನ್ನು ನಾಟಕ ಕಲೆಯೇ ಅಲ್ಲ ಎಂದು ಮಾಡಿಸುವುದು ತಪ್ಪೆಂದು ಹೇಳುತ್ತ, ನಿಜವಾಗಿ ಅವೆರಡರ ನಡುವೆ ವೈರುಧ್ಯವೇ ಇಲ್ಲ, ವೈರುಧ್ಯವಿರುವುದು ಜನಪರ ಮತ್ತು ಜನವಿರೋಧಿ ರಂಗ ಭೂಮಿಗಳ ನಡುವೆ ಎಂದು, ಪ್ರತಿಗಾಮಿ ಪ್ರೊಸೀನಿಯಂ ನಾಟಕ, ಬೀದಿನಾಟಕ ಮತ್ತು ಕ್ರಾಂತಿಕಾರಿ ಪ್ರೊಸೀನಿಯಂ ನಾಟಕ, ಬೀದಿನಾಟಕಗಳು ಜೊತೆ ಜೊತೆಯಾಗಿಯೇ ಇರುವವುಗಳೆಂದು ಹೇಳುತ್ತಾರೆ. ಅಂದರೆ ಇವೆರಡೂ ಪ್ರಕಾರಗಳೂ ಜನಪರ ಹಾಗೂ ಜನವಿರೋಧಿ ನಿಲುವು ತಳೆಯಲು ಸಾಧ್ಯವೆಂದಾಯಿತು. ಈಗ ಆಗಬೇಕಾಗಿರುವುದು ಈ ಎರಡೂ ಪ್ರಕಾರಗಳನ್ನು ಜನಪರವಾಗಿಸುವ ಕೆಲಸ. ಬೀದಿನಾಟಕಗಳು ಕ್ರಾಂತಿಕಾರಿ ಪಾತ್ರಗಿದ್ದರೂ ಕೇವಲ ಪ್ರಚಾರದ ಘೋಷಣೆಗಳಾಗಬಾರದು ಎಂದು ಹಸ್ಮಿ ಬೀದಿನಾಟಕಕ್ಕೂ ತನ್ನದೇ ಆದ ಸೌಂದರ್ಯವಿದೆ, ಸಾಂಪ್ರದಾಯಿಕ ಪ್ರೊಸೀನಿಯಂ ರಂಗಭೂಮಿಯಂತೆಯೇ ಬೀದಿ ರಂಗಭೂಮಿಯೂ ಕಲೆಯನ್ನು ಅಭಿವ್ಯಕ್ತಗೊಳಿಸುವ ಒಂದು ಉತ್ತಮ ವಿಧಾನವೆಂದು ಪ್ರತಿಪಾದಿಸಿದರು. ಆದರೆ ಇಂದಿಗೂ ಬೀದಿನಾಟಕದ ಚೌಕಟ್ಟನ್ನು ಪರಿಗಣಿಸಿ, ನಾಟಕ ಪ್ರೇಕ್ಷಕ ಸಂಬಂಧವನ್ನು ಅರ್ಥಮಾಡಿಕೊಂಡು ಅದಕ್ಕೊಂದು ಹೊಸ ವ್ಯಾಕರಣ ಬರೆಯುವ ಕೆಲಸ ಪೂರ್ಣವಾಗಿಲ್ಲವೆಂದೇ ಹೇಳಬೇಕು. ಆದ್ದರಿಂದ ಇಂದಿಗೂ ಬಹಳಷ್ಟು ಸಂದರ್ಭಗಳಲ್ಲಿ ಪ್ರೊಸೀನಿಯಂ ನಾಟಕಗಳನ್ನೇ ಬೀದಿನಾಟಕಗಳೆಂದು ಅಭಿನಯಿಸುವ ಪರಿಸ್ಥಿತಿಯಿದೆ. ಆದ್ದರಿಂದಲೇ ಹಸ್ಮಿ "ಬಯಲಿನಲ್ಲಿ ಅಭಿನಯಿಸಿದ್ದೆಲ್ಲ ಬೀದಿನಾಟಕ ಎನ್ನುವುದು, ನಾಟಕದ ಕೊನೆಯಲ್ಲಿ ನಾಯಕ ಸತ್ತಿದ್ದನೆಲ್ಲಾ ದುರಂತನಾಟಕ ಎನ್ನುವಷ್ಟೇ ಮೂರ್ಖತನದ್ದು" ಎಂದು ತೀವ್ರವಾಗಿ ಪ್ರತಿಕ್ರಿಯಿಸಿದ್ದಾರೆ.

ಆಕರ ಸಾಮಗ್ರಿ

೧. ಸಮುದಾಯದಿಂದ ಸಮುದಾಯಕ್ಕೆ ಬೀದಿ ನಾಟಕ - ಜೆ. ಎಸ್. ಪೌಲ್ (೧೯೯೦)
೨. ಸಮುದಾಯ ರಂಗಮೇಳ -ಒಂದು ಸ್ಮರಣ ಸಂಚಿಕೆ (೧೯೮೮)
೩. ಸಂಸ್ಮರಣ ಸಂಚಿಕೆ. ಪಲ್ಲವಿ -ಒಂದು ಪ್ರಗತಿಶೀಲ ವೃಂದ ಹುಟ್ಟಿ ೬ (೧೯೮೮)
೪. ಸಮುದಾಯ ವಾರ್ತಾ ಪತ್ರ - ಎಸ್ ಗಾಯತ್ರಿಯವರ ಲೇಖನ (೧೯೮೧)
೫. ಸಮುದಾಯದ ಬೆಳ್ಳಿಹಬ್ಬ ಸಮಾರಂಭ ಸ್ಮರಣ ಸಂಚಿಕೆ (೧೯೮೬)
೬. ಅಲೆಲೀಲಾಕಾರ ವಿಮರ್ಶಕ್ರಿ ಮಾಸ ಪತ್ರಿಕೆ (೧೯೮೯)
ಹಸ್ಮಿಯವರೆ ರಾಜಕೀಯದ ಸುತ್ತಮುತ್ತ ಲೇ. ಶಿವಾನಂದ ಶೆಟ್ಟರ್
೭. ಸಮಗ್ರಕಾ ಉತ್ಸವ ಸ್ಮರಣ ಸಂಚಿಕೆ. ಸಮುದಾಯ. ಬೆಂಗಳೂರು (೧೯೮೯)
೮. ಅಮರ ಕಲಾವಿದ ಸಫ್ದರ್ ಹಸ್ಮಿ
ಹುಟ್ಟು - ಧಾರವಾಡ ಸಮುದಾಯದ ಪ್ರಕಟಣೆ (೧೯೮೯)
೯. ಸಮುದಾಯ ಸಾಂಸ್ಕೃತಿಕ ಅಭಿಯಾನ
(ಕೋಮು ಸೌಹಾರ್ದತೆ ಮತ್ತು ರಾಷ್ಟ್ರೀಯ ಸಮಗ್ರತೆಗಾಗಿ)
ಹುಟ್ಟು - ಧಾರವಾಡ ಸಮುದಾಯದ ಪ್ರಕಟಣೆ (೧೯೯೧)
೧೦. ಹಾದಿ ಬೀದಿ ಕಲಿಯೋಣ ಬನ್ನಿರಿ
ಪ್ರಕಟಣೆ. ಭಾರತ ಜ್ಞಾನ ವಿಜ್ಞಾನ ಜಾಥಾ (೧೯೯೦) ಬೆಂಗಳೂರು. ಗ್ರಾಮಾಂತರ ಜಿಲ್ಲೆ

ರೇಡಿಯೊ ನಾಟಕಗಳು

ಎನ್.

ರೇಡಿಯೊ ನಾಟಕವೂ ಒಂದು ಸಾಹಿತ್ಯದ ಪ್ರಕಾರವೆ. ಇಂದಿನ ವೈಜ್ಞಾನಿಕ ಬೆಳವಣಿಗೆಯ ಮೇರೆಗೆ ಇಲೆಕ್ಟ್ರಾನಿಕ್ ಮಾಧ್ಯಮವೂ ಬೆಳೆಯುತ್ತಿದೆ. ಪ್ರಭಾವಿಯಾದ ಸಮೂಹ ಮಾಧ್ಯಮಗಳಲ್ಲಿ ರೇಡಿಯೊ ಮತ್ತು ದೂರದರ್ಶನ ನಾಟಕಗಳು ಹೆಚ್ಚು ಪರಿಣಾಮಕಾರಿ. ಇಂದು ದೂರದರ್ಶನದಲ್ಲಿ ಧಾರವಾಹಿ ಸಾಹಿತ್ಯ ಪ್ರಕಾರವೆ ನಾಟಕ ಸಾಹಿತ್ಯಕ್ಕಿಂತ ಹೆಚ್ಚು ಜನಪ್ರಿಯ ವಾಗಿ ಬಿಟ್ಟಿದೆ. ಆದರೆ ರೇಡಿಯೊದಲ್ಲಿ ಮಾತ್ರ ಇಂತಹ ಧಾರಾವಾಹಿ ಇನ್ನೂ ಅಷ್ಟೊಂದು ಬೆಳೆದುಬಂದಿಲ್ಲ. ರೇಡಿಯೊ ನಾಟಕ ಸಾಹಿತ್ಯ ಮಾತ್ರ ಒಂದು ಉತ್ತಮ ಸಾಹಿತ್ಯ ಪ್ರಕಾರವಾಗಿ ಬೆಳೆದುಬರುತ್ತಿದೆ. ಇದೂ ಇತರ ಸಾಹಿತ್ಯದಂತೆ ರೇಡಿಯೊ ಸಾಹಿತ್ಯವೂ ಪಾಶ್ಚಾತ್ಯ ಪ್ರಭಾವದಿಂದಾಗಿಯೆ ಬೆಳೆದು ಬಂದಿರುವುದು

ರೇಡಿಯೊ ಸಾಹಿತ್ಯ ಎಂದರೇನು ? ಅದರ ಲಕ್ಷಣಗಳೇನು ? ಎಂಬುದನ್ನು ತಿಳಿಯಲು ನನ್ನದೆ ಒಂದು ಅನುಭವಪ್ರಸಂಗವನ್ನಿಲ್ಲಿ ನಿರೂಪಿಸಬೇಕು. ನಾನು ಆಕಾಶವಾಣಿ ಸೇವೆಯಲ್ಲಿದ್ದಾಗ ಒಮ್ಮೆ ಹೊರಾಂಗಣ ಕಾರ್ಯಕ್ರಮದ ಅಂಗವಾಗಿ ಒಂದು ಮಗುವಿನೊಂದಿಗೆ ಒಂದು ಪುಟ್ಟ ಸಂದರ್ಶನವನ್ನು ಧ್ವನಿ ಮುದ್ರಿಸಿಕೊಳ್ಳತ್ತಲಿದ್ದೆ.

`ನಿನಗೆಷ್ಟು ವರ್ಷ ಮಗು' ನಾನು ಕೇಳಿದ ಮೊದಲನೆಯ ಪ್ರಶ್ನೆ. ಮಗು ಸ್ವಲ್ಪ ನರ್ವಸ್ ಆಯಿತೊ ಏನೊ - ಉತ್ತರ ಕೊಡಲಿಕ್ಕಾಗದೆ ಮಗ್ಗುಲದಲ್ಲೇ ಒಂದು ಮೂಲೆಯಲ್ಲಿ ನಿಂತಿದ್ದ ತನ್ನ ತಾಯಿಯ ಮುಖ ನೋಡಿತು. ಉತ್ತರಕ್ಕಾಗಿ. ಆ ತಾಯಿ ನನ್ನ ಪ್ರಶ್ನೆಗೆ ಉತ್ತರ ರೂಪವಾಗಿ ನಾಲ್ಕು ಬೆರಳು ತೋರಿಸಿದಳು. ಸರಿ. ಈಗ ಮಗು ತನ್ನ ವಯಸ್ಸನ್ನು ಗ್ರಹಿಸಿತೆಂಬ ಭಾವನೆಯಿಂದ ಮತ್ತೊಮ್ಮೆ ಪ್ರಶ್ನೆ ಮಾಡಿದೆ.

`ಹೇಳಪ್ಪ ಮಗೂ ನಿನಗೆಷ್ಟು ವರ್ಷ ?'

ರೆಕಾರ್ಡಿಂಗ್ ಚಾಲೂ ಇತ್ತು. ಮಗು ತಮ್ಮ ತಾಯಿ ಸಂಜ್ಞೆ ಮಾಡಿ ತೋರಿಸಿದ ಹಾಗೆ ತಾನೂ ನಾಲ್ಕು ಬೆರಳೆತ್ತಿ ತೋರಿತು. ಆ ಚಿಕ್ಕ ಮಗುವೇ ನನಗೆ ರೇಡಿಯೊ ನಾಟಕ ಎಂದರೇನು ಎಂಬುದನ್ನು ಜೋಡಿಸಿದ ಬಾಲಕ ಗುರು ! ರೇಡಿಯೊ ನಾಟಕ ಶ್ರವ್ಯ- ಪ್ರಧಾನ ಎಂಬುದನ್ನು ತಿಳಿಸಿಕೊಟ್ಟ ಶ್ರೇಯಸ್ಸು ಆತನಲ್ಲದೆ. ರೇಡಿಯೊ ನಾಟಕ ಎಂದರೆ ಕುರುಡು ರಂಗಭೂಮಿ ! ಎಂದರೆ ಇಲ್ಲಿ ಎಲ್ಲ ಅಭಿನಯವೂ ಹಾವಭಾವವೂ ಶಬ್ದಮುಖೇನ ಮಾತ್ರ ಸಂವಹನೆಯಾಗಬೇಕು. `ಹೌದು' `ಅಲ್ಲ' ಅನ್ನಲಿಕ್ಕೆ ಬಂ ಗೋಣು ಹಾಕಿದರೆ ರೇಡಿಯೊ ನಾಟಕಕ್ಕೆ ಪ್ರಯೋಜನಬೀಳದು. ಮೌಖಿಕವಾಗಿಯೆ `ಹೌದು,' `ಅಲ್ಲಾ ' ಎಂ

...ಸುತ್ತದೆ. ರೇಡಿಯೊ ನಾಟಕ ಎಂದರೆ - 'It is a stage for the blind' define ಮಾಡಿದ್ದು ಸರಿ. ರೇಡಿಯೊ ನಾಟಕ ಅಂದರೆ ಶಬ್ದ ದೃಶ್ಯಸೃಷ್ಟಿ ! ಎಂದರೆ ... ನಾಟಕ ಅಭಿವ್ಯಕ್ತವಾಗುವುದು ಮಾತುಗಳ ಮೂಲಕ ಮಾತ್ರದಿಂದ ; [illegible] ...ಗಳಿಗೆ ಇಲ್ಲಿ ಸ್ಥಾನವಿಲ್ಲ. ಸಂಭಾಷಣೆ ಜೊತೆ ಸೌಂಡ್ ಎಫೆಕ್ಟ್ಸ್ ಎಂದರೆ ಧ್ವನಿ ... (ವಿಮಾನದ ಶಬ್ದ, ರೈಲು ಬಂಡಿ, [illegible], ಮಗುವಿನ ಅಳು, [illegible] ...ವುದು ಇತ್ಯಾದಿ) ಸಹಾಯಕವಾಗಿ ಬರುತ್ತವೆ. ಇದೆಲ್ಲಾ ರೇಡಿಯೊ ನಾಟಕದ Presen-...n and production ಭಾಗವಾಯಿತು. ಆದರೆ ಬರೆಹಗಾರನ ದೃಷ್ಟಿಯಿಂದ ರೇಡಿಯೊ ... ಒಂದು ಸಾಹಿತ್ಯ ಪ್ರಕಾರವೇ.

ಸಾಹಿತ್ಯವು ಕವಿಯ, ನಾಟಕಕಾರನ, ಕತೆಗಾರನ [illegible] ...ಕಥೆ ಕಾದಂಬರಿಗಳಂತೆ ನಾಟಕಗಳನ್ನು ಓದಿ ಅನುಭವಿಸಬಹುದು. ಆದರೆ ನಾಟಕದ ... ರಸಾನುಭವವುಂಟಾಗುವುದು ಅದನ್ನು ರಂಗಭೂಮಿಯ ಮೇಲೆ ಪ್ರದರ್ಶಿಸಿ...ದ್ದನ್ನು ನೋಡಿದಾಗ ; ಅಥವಾ ರೇಡಿಯೊ ನಾಟಕವಾದರೆ ಅದನ್ನು ರೇಡಿಯೊ ರಂಗದಲ್ಲಿ ...ವಾಗುವುದನ್ನು ಶ್ರವಣ ಮಾಡಿದಾಗ. ರಂಗನಾಟಕಕ್ಕೆ ದೃಶ್ಯಕಾವ್ಯ ಎಂದರೆ ರೇಡಿಯೊ ... ಶ್ರಾವ್ಯ ಕಾವ್ಯ ಎನ್ನಬಹುದು. ದೃಶ್ಯಕಾವ್ಯವಲ್ಲದೆ ಶಬ್ದ ಕಾವ್ಯಗಳನ್ನು ಬರಿ ಓದಿದ...ಕ್ಕೆ ರಸಾಸ್ವಾದ ಪೂರ್ತಿಗೊಳ್ಳಲಾರದು. ಅದನ್ನು ಗಮಕ ರೀತ್ಯಾ ಅಭ್ಯಸಿಸಿದಾಗ ಹೆಚ್ಚು ...ಗಿ ಪರಿಣಮಿಸುತ್ತದೆ. ಜನಸಾಮಾನ್ಯರಿಗೆ ಕಾವ್ಯ ಬರಿ ಓದಿಕೆಯಿಂದ ಮಾತ್ರಕ್ಕೆ ಸಮಗ್ರ...ವಾಗುವುದಿಲ್ಲ. ಕುಮಾರವ್ಯಾಸ ಭಾರತವನ್ನು ಒಬ್ಬ ಗಮಕಿಯ ಬಾಯಿಂದ ಕೇಳಿದರೆ ... ಸ್ವಾರಸ್ಯವು [illegible] ವೇದ್ಯವಾಗುತ್ತದೆ. [illegible] ... ಗಮಕವಾಚನ ಕೇಳಿ ರಸಗ್ರಹಣ ಮಾಡಲು ಸಮರ್ಥರಾಗುತ್ತಾರೆ. ...ವರಿಗೆ. ಕುರುಡನಿಗೆ ಗಮಕ ಹೇಗೋ ಒಬ್ಬ ರಸಿಕನಿಗೆ - ಅವನು ಕುರುಡನಿರಲಿ ಇರಲಿ. ... ಗ್ರಾಮೀಣನಿರಲಿ ಇರಲಿ - ರೇಡಿಯೊ ಹಾಗೆ. ರೇಡಿಯೊ ನಮಗೆ [illegible] ... ಶಬ್ದಮಾಧ್ಯಮದ ನಮ್ಮ ಹೃದಯವನ್ನು ತಲುಪುತ್ತದೆ. [illegible] ... ರೇಡಿಯೊ ನಾಟಕವೂ [illegible] ... ಹಾಸ್ಯವೊ, ಶೃಂಗಾರವೊ ಇತ್ಯಾದಿ ರಸಗಳನ್ನು [illegible] ... ದರ್ಶನವು ಅಸ್ತಿತ್ವದಲ್ಲಿ ಬಂದಮೇಲೆ ಶಬ್ದದೊಂದಿಗೆ ದೃಶ್ಯ [illegible] ... ಟಿ. ವಿ. [illegible] ... ಈಗೀಗ ಈ ಟಿ.ವಿ.ಯು ಒಂದು [illegible] ! ಆದರೆ ಒಂದು [illegible] ... ಟಿ. ವಿ. [illegible] ... ಟಿ. ವಿ. [illegible] ... ಆದರೆ ರೇಡಿಯೊ ನಾಟಕವನ್ನು [illegible] ... ರೇಡಿಯೊ ನಾಟಕವನ್ನು ಕೇಳಬೇಕಾಗಿದ್ದು [illegible]

ನಾವು ಒಂದು ರಂಗನಾಟಕವನ್ನು ನೋಡಬೇಕಾದರೆ ನಾಟ್ಯಗೃಹಕ್ಕೇ ಹೋಗಬೇಕು. ಟಿಕೇಟ್‌ಗಾಗಿ ಕ್ಯೂ ನಿಲ್ಲಬೇಕು. ನಮ್ಮ ಸ್ಥಳದಲ್ಲಿ ಕುಳಿತುಕೊಂಡು ನೋಡಬೇಕು. ರೇಡಿಯೊ ನಾಟಕದಲ್ಲಿಯೊ ರಂಗಭೂಮಿಯೆ ನಾವಿದ್ದಲ್ಲಿಗೆ ರೆಕ್ಕೆ ಹಚ್ಚಿಕೊಂಡು ಹಾರಿ ಬರುತ್ತದೆ. ಒಮ್ಮೊಮ್ಮೆ ರಂಗನಾಟಕದಲ್ಲಿ ಕಾಣಸಿಗದ ಅದ್ಭುತಗಳನ್ನು ರೇಡಿಯೊ ನಾಟಕ ಸಾಧ್ಯಮಾಡಿ ತೋರಿಸುತ್ತದೆ. ನಾಯಕನು ವಿದೇಶದಿಂದ ವಿಮಾನಿಸಿ ಬಂದಿಳಿಯುವ ಶಬ್ದ ಪರಿಣಾಮವನ್ನು ರೇಡಿಯೊ ಉಂಟುಮಾಡಬಲ್ಲುದು. ಈ ದೃಶ್ಯವನ್ನು ಸಿನಿಮಾ ತೆರೆಯು ತದ್ರೂಪವಾಗಿ ತೋರಿಸಬಲ್ಲದು. ಇಂದು ದೂರದರ್ಶನದಲ್ಲೂ ಅದನ್ನು ಕಾಣಬಹುದು. ಆದರೆ ರಂಗಭೂಮಿ ನಾಟಕಕ್ಕೆ ಈ ಸಾಧ್ಯತೆ ಅಳವಡದು. ರೇಡಿಯೊ ನಾಟಕದ (ಅ) ದೃಶ್ಯದಲ್ಲಿ ದೂರದಿಂದ ಸಮೀಪಕ್ಕೆ ಹಾರಿಬರುವ ವಿಮಾನದ ಧ್ವನಿವೇಷ, ಜನಸಮೂಹದ ಗುಜುಗುಂಪಲು ಈ ಶಬ್ದ ವಿಶೇಷಗಳಿಂದ ಅಪೇಕ್ಷಿತ ಭ್ರಮೆಯನ್ನುಂಟುಮಾಡಬಹುದು. ನಮ್ಮ ರಸಜ್ಞ ಶ್ರೋತೃಗಳಿಗೆ ಕಣ್ಣೇ ಇಲ್ಲ ಎಂದುಕೊಂಡು ಕೇವಲ ಶಬ್ದಮಾಧ್ಯಮದಿಂದಲೆ ಯಾವ ನಾಟಕವನ್ನು ಬರೆದು ಬಿತ್ತರಿಸಬಹುದೊ ಅದುವೆ ರೇಡಿಯೊ ನಾಟಕ ಅನಿಸಿಕೊಳ್ಳುತ್ತದೆ.

ವಿಜ್ಞಾನದ ಇಲೆಕ್ಟ್ರಾನಿಕ್ ಮಾಧ್ಯಮದ ಬೆಳೆವಣಿಗೆಯೊಂದಿಗೆ ಸಾಹಿತ್ಯದ ಸ್ವರೂಪ, ತಂತ್ರಗಳೂ ಬದಲಾಗುತ್ತಲಿವೆ. ಒಂದು ನಾಟಕವನ್ನು ರಂಗ ಪ್ರಯೋಗಕ್ಕಾಗಿ ಬರೆಯುವಾಗ ಪ್ರೇಕ್ಷಕರನ್ನು ಕಣ್ಣಮುಂದಿರಿಸಿಕೊಂಡು ರಚಿಸಲಾಗುತ್ತದೆ. ರೇಡಿಯೊ ನಾಟಕ ರಚನೆಯ ಕಾಲಕ್ಕೆ ಶ್ರೋತೃಗಳನ್ನು ಮಾತ್ರ ಕಣ್ಣಮುಂದಿರಿಸಿಕೊಳ್ಳಬೇಕಾಗುವುದು. ಎಂದರೆ ಕಣ್ಣಿನಿಂದ ನೋಡಿ, ತಿಳಿದು ಅನುಭವಿಸಬೇಕಾದ ಸಮಷ್ಟಿ ರಸಭಾವವನ್ನು ಕೇವಲ ಶ್ರೋತ್ರೇಂದ್ರಿಯದ ಮೂಲಕವೆ ಸವಿಯಲ್ಪಡುವಂತೆ ಅದರ ತಂತ್ರವನ್ನು ರೂಪಿಸಬೇಕಾಗುತ್ತದೆ. ಒಮ್ಮೊಮ್ಮೆ ರೇಡಿಯೊ ನಾಟಕದಲ್ಲಿ ಸಾಹಿತ್ಯಕ್ಕಿಂತ ತಾಂತ್ರಿಕತೆಯೆ ಹೆಚ್ಚು ಭಾರವಾಗಿ ಬಿಡಬಹುದೇನೊ ಎಂಬ ಭಯವೂ ಇದೆ. ರಂಗನಾಟಕವನ್ನು ರೇಡಿಯೊ ಮಾಧ್ಯಮದ ಮೂಲಕ ಪ್ರಸಾರ ಮಾಡಬೇಕಾದಾಗ ಕೆಲವೊಂದು ತಾಂತ್ರಿಕ ಮಾರ್ಪಾಡುಗಳನ್ನು ಮಾಡಿಕೊಳ್ಳಬೇಕಾಗಬಹುದು. ಮೂಗಿಗಿಂತ ಮೂಗುತಿಯೆ ಭಾರವಾಗದಂತೆ, ನಾಟಕದ ಸಾಹಿತ್ಯಾಂಶಕ್ಕೆ ವ್ಯತ್ಯಯ ಬಾರದಂತೆ ನೋಡಿಕೊಳ್ಳಬೇಕಾಗುತ್ತದೆ.

ಅದೇ ರೀತಿ ಒಂದು ಕಥೆ, ನೀಳ್ಗತೆ ಕಾದಂಬರಿಯನ್ನು ರೇಡಿಯೊ ನಾಟಕವನ್ನಾಗಿ ಪರಿವರ್ತಿಸಬಹುದಾಗಿದೆ. ಈ ಸಂದರ್ಭದಲ್ಲಿ ಮಾಸ್ತಿಯವರ 'ಸುಬ್ಬಣ್ಣ' ನೀಳ್ಗತೆ ರೇಡಿಯೋ ನಾಟಕವಾಗಿ(ಈ ಲೇಖಕನಿಂದ) ಮಾರ್ಪಟ್ಟ ವಿಧಾನವನ್ನು ಗಮನಿಸ ಬಹುದಾಗಿದೆ. ರೇಡಿಯೊ ರೂಪಾಂತರದಲ್ಲಿ ಹಣ್ಣಾದ ಮುಪ್ಪಿನ ಸುಬ್ಬಣ್ಣ ತನ್ನ ಮುಂಚಿನ ಹೀಚು ದಿನಗಳ ನಿರೂಪಣೆಯನ್ನು ನೀಡುತ್ತಾನೆ. ನಿರೂಪಣೆ ವೃದ್ಧ ಸುಬ್ಬಣ್ಣನ ದನಿಯಲ್ಲಿ ಒಂದು ಘಟ್ಟಕ್ಕೆ ಬಂದಾಗ ಆತನ ನೆನಪುಗಳೆಲ್ಲಾ ಫ್ಲಾಶ್‌ಬ್ಯಾಕ್‌ನಲ್ಲಿ ಬಂದು ನಾಟಕದ ದೃಶ್ಯಾವಳಿಗಳ ಸುರುಳಿಯಾಗಿ ಸುಳಿದುಹೋಗುತ್ತದೆ. ಸುಬ್ಬಣ್ಣನ ತಾರುಣ್ಯದ ನಾಟ್ಯ ಶಬ್ದ ಚಿತ್ರವೆಲ್ಲಾ ತರುಣ ಸುಬ್ಬಣ್ಣನ ಧ್ವನಿಯಲ್ಲಿ ಮೂಡಿನಿಲ್ಲುತ್ತದೆ. ಸುಬ್ಬಣ್ಣನಿಗೆ ಪತ್ನಿಗಿಂತಲೂ ಸುಳಿವ ಸಂಗಾತಿಯಾಗಿದ್ದ ಆ ಪಿಟೀಲು ಪ್ರಧಾನ ಪಾತ್ರವಹಿಸುತ್ತದೆ. ಮಕ್ಕಳ, ಪತ್ನಿಯ ಮರಣ ದಿಂದಾಗಿ ಬದುಕಿನ ಆಸಕ್ತಿಗಳನ್ನೆಲ್ಲ ಒಂದೊಂದಾಗಿ ಕಳೆದುಕೊಳ್ಳತೊಡಗಿದ ಸುಬ್ಬಣ್ಣ ಕಟ್ಟಕಡೆಯಾಗಿ

ಈ ಪಿಟೀಲಿನ ಮೋಹವಾದರೂ ಏಕೆ, ಎಂದುಕೊಂಡು ಅದನ್ನು ಪ್ರವಾಹದಲ್ಲಿ ತೇಲಿ ಬಿಡುತ್ತಾನೆ, ಅದರ ಬೋ ಸಹಿತ. ಪಿಟೀಲು ಪ್ರವಾಹಗುಂಟ ತೇಲಿ ಹೋಗುತ್ತದೆ. ಒಂದೆರಡು ದಿನಗಳ ತರುವಾಯ ಸುಬ್ಬಣ್ಣ ಒಂದು ಧರ್ಮಶಾಲೆಯ ಕಟ್ಟೆಯ ಮೇಲೆ ಕುಳಿತಾಗ, ನಟುವರ ಹುಡುಗನೊಬ್ಬನ ಕೈಗೆ ಪಿಟೀಲು ಮತ್ತು ಬೋ ಸಿಕ್ಕು ಆ ಮುಗ್ಧ ಹುಡುಗ ಅಪಶ್ರುತಿಯಲ್ಲಿ ಪಿಟೀಲು ನುಡಿಸುವುದು ಸುಬ್ಬಣ್ಣನ ಕಿವಿಗೆ ಬೀಳುತ್ತದೆ. ಕೆರಳಿದ ಸುಬ್ಬಣ್ಣ ಅಬ್ಬರಿಸಿ ಅತ್ತ ಧಾವಿಸಿ ಆ ಹುಡುಗನ ಕೈಯಿಂದ ಪಿಟೀಲು ಕಿತ್ತಿಕೊಳ್ಳುತ್ತಾನೆ. `ವಾದ್ಯ ನುಡಿಸಿದರೆ ಶಿಲೆಯೊಳಗಿನ ದೇವರು ಎದ್ದುಬರಬೇಕು ಕಣೋ, ಹೀಗೇನಾ ನುಡಿಸೋದು ?' ಎಂದು ನಿಜವಾಗಿಯೂ ಶಿಲೆಯೊಳಗಿನ ದೇವರು ಎದ್ದುಬರುವಂತೆಯೆ ಕಲೆಯ ಪೂಜಾರಿಯಾಗಿ ವಾದ್ಯ ನುಡಿಸುತ್ತಾನೆ. ಆದರೆ ಮರುಕ್ಷಣವೇ ಮತ್ತೆ ವೈರಾಗ್ಯಭಾವ ಮೂಡಿಬರುತ್ತದೆ. ಪಶ್ಚಾತ್ತಾಪಭಾವ ಆತನ ಅಂತರಂಗದ ಕದ ತಟ್ಟಿ ಹೇಳುತ್ತದೆ. ` ಇದೆಂತಹ ಅನಾಸಕ್ತಿ ' ಎಂದು ಅಣಕಿಸುತ್ತ. ಆಗ ಸುಬ್ಬಣ್ಣ ನುಡಿಯುತ್ತಾನೆ. ` ಸಂಸಾರದಲ್ಲಿ ಮಕ್ಕಳನ್ನು ಕಳೆದುಕೊಂಡು, ಹಿರಿಯರನ್ನು ಕಳೆದುಕೊಂಡು, ಹೆಂಡತಿಯನ್ನು ಕಳೆದುಕೊಂಡು ಇಷ್ಟೆಲ್ಲ ಜೀವಗಳನ್ನು ಕಳೆದುಕೊಂಡು ಅನಾಸಕ್ತನಂತಿದ್ದ ನನಗೆ ಈ ಪಿಟೀಲಿನ ಮೋಹವು ಇನ್ನೂ ಬಿಡಲಿಲ್ಲವಲ್ಲಾ ?' ಎಂದು ಪಶ್ಚಾತ್ತಾಪಪಡುತ್ತಾನೆ. ಕೊನೆಗೊಮ್ಮೆ ಎಲ್ಲಾ ಮೋಹವನ್ನು ತೊರೆದು ನಿಜವಾದ ವಿರಾಗಿಯಾಗಿ ತನ್ನ ಜೀವನ ನಾಟಕದ ಕೊನೆಯ ಅಂಕವನ್ನು ಮುಗಿಸುತ್ತಾನೆ. ಸುಬ್ಬಣ್ಣನ ಕೊನೆಕೊನೆಯ ಜೀವನವು ಓದುಗರ (ಇಲ್ಲಿ ಕೇಳುಗರ), ಕರುಳು ಹಿಂಡುವಷ್ಟು ಕರುಣಾಜನಕವಾಗಿದೆ.

`ಸುಬ್ಬಣ್ಣ' ಮಾಸ್ತಿಯವರ ಶ್ರೇಷ್ಠಕತೆ. ಅದರ ಸಾಹಿತ್ಯಗುಣ ಅಚ್ಚಳಿಯದಂತೆ ರೇಡಿಯೊ ರೂಪಾಂತರ ಪ್ರಸಾರಗೊಂಡುದೇ ಅದರ ಯಶಸ್ವಿನ ಗುಟ್ಟು. ರೇಡಿಯೊ ರೂಪಾಂತರದ ಒಂದು ವಿಶಿಷ್ಟ ಫ್ಲಾಶ್ ಬ್ಯಾಕ್‌ತಂತ್ರಕ್ಕೆ ಇದೊಂದು ಉತ್ತಮ ಉದಾಹರಣೆ. `ಸುಬ್ಬಣ್ಣ ' ನ ಜೀವನದ ಅನುಭವಗಳನ್ನು ಚಿತ್ರಿಸುವ ಈ ರೇಡಿಯೊ ರೂಪಾಂತರವು ಕಥೆ ಕಾದಂಬರಿಗಳನ್ನು ರೇಡಿಯೊ ನಾಟಕವನ್ನಾಗಿ ಪರಿವರ್ತಿಸುವ ಒಂದು ಪ್ರಕಾರವಿಶೇಷವೆಂದು ಹೇಳಬಹುದು. ಒಂದು ಕಾದಂಬರಿಯನ್ನು ರೇಡಿಯೊ ನಾಟಕವಾಗಿ ರೂಪಾಂತರಿಸಿರುವ ಕಾರ್ಯದಲ್ಲಿ ಬಹಳಷ್ಟು ಭಾಗವನ್ನು ಬಿಟ್ಟುಕೊಡಬೇಕಾಗುವದು.

ಇನ್ನು ಶ್ರೀ ಕೆ. ವಿ. ಅಯ್ಯರ ಅವರ `ಶಾಂತಲಾ,''ರೂಪದರ್ಶಿ,'ಈ ದಿಸೆಯಲ್ಲಿ ಎರಡು ಸುಂದರ ಉದಾಹರಣೆಗಳು. `ಶಾಂತಲಾ ' ಕಾದಂಬರಿಯಲ್ಲಿ ಬಹುಭಾಗವು ರಮ್ಯವಾದ ನಿರೂಪಣೆಯಲ್ಲಿ ಹೆಣೆದುಕೊಂಡಿದೆ. ನಾಟಕವು ಸಂಭಾಷಣಾತ್ಮಕವಾಗಿದ್ದು ಕಾದಂಬರಿಯ ಕಾವ್ಯವಾಗಿದೆ ನಿರೂಪಣೆ ನಾಟಕದಲ್ಲಿ ಬರುವುದು ಸಾಧ್ಯವಾಗುವುದಿಲ್ಲ. ಶಾಂತಲಾದ ಸೌಂದರ್ಯದ ಬಹುಭಾಗವು ರೇಡಿಯೋ ರೂಪಾಂತರಕ್ಕೆ ದೊರಕದೆ ಹೋಗಬಹುದಲ್ಲ. ಆದರೆ ರೇಡಿಯೊ ರೂಪಾಂತರ ಹಾಗಾಗಲಿಲ್ಲ. ರೂಪಾಂತರಕಾರ, ಡಾ. ಎಚ್. ಕೆ. ರಂಗನಾಥ ಅವರು ರೇಡಿಯೊ ತಂತ್ರದ ವಿಶಾಲ ವ್ಯಾಪ್ತಿಗೆ ಹೊಂದಿಕೆಯಾಗುವಂತೆ ಒಬ್ಬ `ಶತಮಾನ ಪುರುಷ'ನನ್ನು ನಿರ್ಮಿಸಿದರು. ಹೊಯ್ಸಳರ ವೈಭವದ ಕಾಲದಲ್ಲಿ ತನ್ನ ಕಣ್ಣಿಂದ ನೋಡಿದ ಸಾಕ್ಷಿ, ಈ ಶತಮಾನಪುರುಷ. ಆತನೂ ಒಂದು ಪಾತ್ರವಾಗಿ ಬರುತ್ತಾನೆ, ಈ ನಾಟಕದಲ್ಲಿ.

ಹೊಯ್ಸಳರ ರಾಜಧಾನಿಯನ್ನು ಅರಮನೆಯನ್ನು, ಅಂತಃಪುರವನ್ನು, ಸಭೆ ಸಭಾಂಗಣವನ್ನು ಖಿದ್ವಾಗಿ ನೋಡಿದವನು ಈತ. ಈ ಶತಮಾನ ಪುರುಷ ಚಿರಂಜೀವಿ ; ಅಮರನೆಂದೇ ಹೇಳಬಹುದು. ರೇಡಿಯೊ ತಂತ್ರದಲ್ಲಿ ಎಂತಹ ದಿಗಂತ ಊಹೆಗೂ ಕಲ್ಪಾಂತ ಕಲ್ಪನೆಗೂ ಅವಕಾಶವಿದೆ. ರೇಡಿಯೊ ರಂಗಭೂಮಿ ಸ್ವರ್ಗ, ಮರ್ತ್ಯ, ಪಾತಾಳಗಳನ್ನು ಒಂದೇ ಹಿಡಿಯಲ್ಲಿ ತಂದು ನಿಲ್ಲಿಸಬಹುದು. ಭೂತ, ವರ್ತಮಾನ, ಭವಿಷ್ಯಗಳನ್ನು ಒಂದೆ ಕಾಲಾವಸ್ಥೆಯಲ್ಲಿ ನಿಲ್ಲಿಸಿನೋಡಬಹುದು. ಭೂಮಿ ವ್ಯೋಮಗಳನ್ನು ಅಂತರಿಕ್ಷವನ್ನು ಒಂದೆ ತಲದಲ್ಲಿ ತಂದಿರಿಸಬಹುದು. ರೇಡಿಯೋ ವ್ಯಾಪ್ತಿಯಲ್ಲಿ ರಂಗಭೂಮಿಗೆ ದುಸ್ಸಾಧ್ಯ ಸಂಭಾವ್ಯ ವೆಂಬುದೆಲ್ಲಾ ಸಾಧ್ಯ. ಇದೇ ರೇಡಿಯೋ ಮಾಧ್ಯಮದ ಹೆಚ್ಚುಗಾರಿಕೆ. ಆದರೆ ರೇಡಿಯೋ ನಾಟಕದ ಒಂದೇ ಕೊರತೆಯೆಂದರೆ ಪ್ರೇಕ್ಷಕ ವರ್ಗವೆ ಇದಕ್ಕಿಲ್ಲ. ಅಂತೆಯೆ ಇದನ್ನು one way traffic ಎಂದು ಹೇಳುತ್ತಾರೆ. ಪ್ರೇಕ್ಷಕರಿಲ್ಲದಿದ್ದರೆ ಪ್ರತಿಕ್ರಿಯೆ ಹೇಗೆ ತಿಳಿಯ ಬೇಕು ? ಶ್ರೋತೃಗಳು ಕಾರ್ಯಕ್ರಮ ಕೇಳಿದ ಮೇಲೆ ಬರೆಯುವ ಪತ್ರಗಳೆ ಪ್ರತಿಕ್ರಿಯೆ.

ಈಗಿನ ಕಾಲದಲ್ಲಿ ಜನಸಾಮಾನ್ಯರ ಕಲ್ಪನಾ ವಿಲಾಸವನ್ನು ಆಕರ್ಷಿಸಬಲ್ಲ ರೇಡಿಯೊ ನಾಟಕವು ಮಕ್ಕಳಿಗಾಗಿ ಯಕ್ಷ ಯಕ್ಷಿಣಿಯರ ಕಥೆಗಳನ್ನು, ಭಾವುಕರಿಗಾಗಿ ದೇವದಾನವರ ಕಥೆಗಳನ್ನು, ಭಕ್ತಿರಸದ ಭಾಗವತ ಕಥೆಗಳನ್ನು, ಬುದ್ಧಿಜೀವಿಗಳಿಗೆ ವೈಚಾರಿಕ, ವೈಜ್ಞಾನಿಕ ಚಮತ್ಕಾರದ ಕಥಾನಕಗಳನ್ನು ಪ್ರಸಾರಿಸಲು ಸಮರ್ಥವಾಗಿದೆ.

ಕೆಲವು ರೇಡಿಯೋಜನಿಕ್ (Radio genic) ದ್ರವ್ಯವುಳ್ಳ ನಾಟಕಗಳಿರುತ್ತವೆ. ಅವು ಪ್ರಸಾರ ಸಾಧ್ಯತೆಗಳಿಂದ ಕೂಡಿರುವುದರಿಂದ ಹೆಚ್ಚು ಆಕರ್ಷಕವೂ ಪರಿಣಾಮಕಾರಿಯೂ ಆಗಿರುತ್ತವೆ. ಶ್ರೀರಂಗರ `ಸಂಪದ್ಭರ್ಮ' ಎಂಬ ನಾಟಕ ಇಂತಹ ಪ್ರಸಾರ ಸಾಧ್ಯತೆಯುಳ್ಳ ನಾಟಕ. ಊಹೆ, ಕಲ್ಪನೆಗಳಲ್ಲಿ ಉಯ್ಯಾಲೆಯಾಡುತ್ತ, ಪೌರಾಣಿಕ ಜೀವನದಲ್ಲೂ ವಾಸ್ತವಿಕ ಪ್ರಜ್ಞೆಯನ್ನು ಮಿಡಿಯುತ್ತದೆ. ಈ ತಾತ್ವಿಕ ನಾಟಕ. `ಬುಭುಕ್ಷಿತಃ ಕಿಂ ನ ಕರೋತಿ ಪಾಪಂ' ಎನ್ನುವುದಿಲ್ಲವೆ ಒಂದು ಲೋಕೋಕ್ತಿ ? ಹಾಗೆ ವಿಶ್ವಾಮಿತ್ರನೆ ಇಲ್ಲಿ ಬುಭುಕ್ಷಿತ. ಈ ಮಹಾತಪಸ್ವಿ ಇಂದ್ರನೆಸಗಿದ ದ್ವಾದಶ ವರ್ಷಗಳ ಕ್ಷಾಮದಲ್ಲಿ ಹಸಿರು, ಬೆಂದು ಬಸವಳಿದು ಹೊಲೆಯನೊಬ್ಬನ ಅನ್ನವಾಗಿದ್ದ ನಾಯಿಯ ಮಾಂಸವನ್ನು ತಾನು ಕಸಿದುಕೊಂಡು ತಿನ್ನುತ್ತಾನೆ. ಹೊಲೆಯನಿಗಿಂತ ತಾನು ಶ್ರೇಷ್ಠ. ತಾನು ಮೊದಲು ಬದುಕಬೇಕು ; ಅಂದರೆ ಲೋಕ ಬದುಕೀತು, ಹೊಲೆಯನೂ ಬದುಕಿಯಾನು ಎಂಬ ಅಭಿಪ್ರಾಯ ಈ ವಿಶ್ವಾಮಿತ್ರನದು. ಅದೇನೆ ಇರಲಿ ಮೊದಲು ಈ ಹಸಿದ ವಿಶ್ವಾಮಿತ್ರನು ಕುಲಗೆಟ್ಟು, ತನಗಿಂತ ತೀರ ಕೀಳಾತಿ ಯವನ ತುತ್ತನ್ನು ಕಸಿದು ತನ್ನ ತುತ್ತಿನ ಚೀಲವನ್ನು ತುಂಬಿಕೊಂಡನಲ್ಲ ಸಾಕು. ತನ್ನ ಪಾಪಕ್ಕೆ ಗೆಲವಾಯಿತು ಸಾಕು. ವಿಶ್ವಾಮಿತ್ರನನ್ನು ಘಟ್ಟು ಮಾಡಿದ್ದೆ ತನ್ನ ವೀರವಿಜಯ ಎಂದು ಉಬ್ಬಿ ಬೀಗಿ, ಇಂದ್ರ ``ಇನ್ನು ಬೇಕಾದಷ್ಟು ಮಳೆ ಸುರಿಸು, ಜಗತ್ತು ತೇಲಿ ಹೋಗುವಷ್ಟು ಮಳೆ ಸುರಿಸು '' ಎಂದು ವರುಣನಿಗೆ ಆದೇಶ ನೀಡುತ್ತಾನೆ. ಗುಡುಗು ಮಿಂಚುಗಳೊಡನೆ ಧಾರಾಕಾರವಾಗಿ ಪ್ರಳಯ ಕಾಲದಂತೆ ವರ್ಷಿಸುತ್ತದೆ, ಪ್ರಕೃತಿ !

ಮಹಾಭಾರತದ ಶಾಂತಿಪರ್ವದ ಈ ಮೂಲ ನಾಟಕವಸ್ತುವನ್ನು ಶ್ರೀರಂಗರು ಒಂದು ಪರಿಪೂರ್ಣ ರೇಡಿಯೊ ಜನಿಕ್ ಎಂಬಂತಹ ನಾಟಕವಾಗಿ ರೂಪಿಸಿದ್ದಾರೆ. ಇದ

ವಿಶ್ವಾಮಿತ್ರರ ಸ್ಪರ್ಧೆ, ದೇವೇಂದ್ರ ತಂದ ದ್ವಾದಶ ಕ್ಷಾಮ, ಅದರ ಹಾಹಾಕಾರ, ಜನ ದನ ನಾಮಶೇಷವಾಗುವ ದೃಶ್ಯ, ವಿಶ್ವಾಮಿತ್ರನ ಪಾತ್ರದೊಳಗಿಂದ ಅತನ ವಿವೇಕ ಪ್ರತ್ಯೇಕವಾಗಿ ಹೊರಬಂದು, ವಿಶ್ವಾಮಿತ್ರನ ಅಹಂಕಾರಕ್ಕೆ ಆ ವಿಶ್ವಾಮಿತ್ರನ ವಿವೇಕ ಪುರುಷಸಿಗೂ ನಡೆವ ಗಾಢ್ವಿಕ ಸಂವಾದ, ತಾನು ಶ್ರೇಷ್ಠ, ತ್ಸೆಂದಲೆ ಲೋಕ ಒದುಕುತ್ತದೆ ಎಂಬ ಹೆಮ್ಮೆ-ನುಡಿಲಗಳು ಅತನಿಂದ ನಾಯಿಯು ಮಾಂಸ ತಿನಿಸಿದ ಮೇಲೆ ಇಂದ್ರನ ವಿಟ್ಟಹಾಸದ ನಗೆ, ಪ್ರಳಯಾಂತಕವಾದ ಮಳೆ ! ಮುಖ್ಯವಾಗಿ ಈ ನಾಟ್ಯಪೂರ್ಣ ವಸ್ತುವಿನ ಇಂಗಿತ ಧ್ವನಿ, ಕೃದು-ಬುಭುಕ್ಷಿತಃ ಕಿಂ ನಕರೋತಿ ಪಾಪಂ (ಹಸಿದ ಮನುಷ್ಯ ಯಾವ ಪಾಪ ಕೃತ್ಯಕ್ಕೂ ಸಿದ್ಧನಿರುವುದಿಲ್ಲ)- ಈ ಎಲ್ಲ ಅಂಶಗಳಿಂದಾಗಿ ಇದೊಂದು ಸಮರ್ಥ ಪ್ರಸಾರನಾಟಕ ಎನಿಸಿದೆ.

ರೇಡಿಯೋ ನಾಟಕದಲ್ಲಿ ಒಂದು ಪಾತ್ರದ ಮನೋಭೂಮಿಕೆಯನ್ನು ಪೂರ್ಣಕವಾಗಿ ಅಭಿವ್ಯಕ್ತಿಸುವುದು ಸಾಧ್ಯವಾಗುತ್ತದೆ. ಕೆಲವೊಂದು ಪಾಶ್ಚಾತ್ಯ ರೇಡಿಯೊ ನಾಟಕಗಳಲ್ಲಿ ಪಾತ್ರದ ಮನಸ್ಸಿನ ಹೊಯ್ದಾಟವನ್ನು ನಿರ್ಮಿಸುವುದರಿಂದ ಪಾತ್ರದ ಮನಸ್ಸಿನ ಹೊಯ್ದಾಟವನ್ನು ಪರಿಣಾಮಕಾರಿಯಾಗಿ ಸೂಚಿಸಲು ಸಾಧ್ಯವಾಗುತ್ತದೆ.

ಜೀವನದಲ್ಲಿ ಜಿಗುಪ್ಸೆಪಟ್ಟುಕೊಂಡು ಹಡಗಿನಿಂದ ಸಮುದ್ರದಲ್ಲಿ ಧುಮುಕಿ ಮುಳುಗುವ ಅಸಹಾಯಕ ತರುಣನೊಬ್ಬನ ಮನಃ ಕ್ಷೋಭೆಯನ್ನು ಟಿ. ಗಜ್ಜಿ ಎಂಬ ರೇಡಿಯೊ ನಾಟಕಕಾರ ಪ್ರಭಾವಿಯಾಗಿ ಚಿತ್ರಿಸಿದ್ದಾನೆ. ಇಲ್ಲಿ ಶಬ್ದ ಚಿತ್ರಿತವಾಗಿರುವುದು ಸಮುದ್ರದ ಕಲ್ಲೋಲ ಮಾತ್ರ. ಅದು ತರುಣ ಮನಸ್ಸಿನ ಕಲೆಲ್ಲೋಲದ ಸಂಕೇತವಾಗುತ್ತದೆ. ಕೇವಲ ಮಾತಿನಿಂದ ಮನಸ್ಸಿನ ಹೊಯ್ದಾಟವನ್ನು ಮೂಡಿಸುವುದು ಅಸಾಧ್ಯವಾದಾಗ ರೇಡಿಯೊ ನಾಟಕದ ಹಿನ್ನೆಲೆ, ಶಬ್ದ ವಿಶೇಷಗಳು, ಸುತ್ತಲಿನ ವಾತಾವರಣಜನಕ ವಸ್ತುಗಳು ಇಚ್ಛಿತ ಪರಿಣಾಮವನ್ನುಂಟುಮಾಡುತ್ತವೆ. ಆ ತರುಣ ನೂರುವರ್ಷಗಳಲ್ಲಿ ಅಸುನೀಗುವ ಕಾಲದಲ್ಲಿ ತನ ಜೀವನ ನಾಟಕದ ಅಗು ಹೋಗುಗಳೆಲ್ಲಾ ಸುಳಿದುಹೋಗುತ್ತವೆ.

ಚಿದಂಬರಂಗರು ಬರೆದಿರುವ 'ಶವದಮನೆ' ಭಯಾನಕ ವಾತಾವರಣವನ್ನು ನಿರ್ಮಾಣ ಮಾಡುವ ರೇಡಿಯೊ ನಾಟಕ. ಯಾವುದೊ ಆಸ್ಪತ್ರೆಯಲ್ಲಿರುವ ಶವದ ಮನೆ. ಅನಾಥನೊಬ್ಬ ಶವದ ರಾಶಿಯಲ್ಲಿ ಬಿದ್ದಿದ್ದಾನೆ. ಆದರೆ ದುರ್ದೈವದಿಂದಲೊ ಸುದೈವದಿಂದಲೊ ಅತನು ಸತ್ತಿಲ್ಲ. ಅತನಲ್ಲಿ ಇನ್ನೂ ಉಸಿರಿದೆ. ಆತ ಶವಾಗಾರವೆಂದು ಆಸ್ಪತ್ರೆಯ ನೌಕರಿ ಆಗಿರುವ ಮಾರಪ್ಪನಿಗೆ ತಿಳಿಯುವುದಿಲ್ಲವೆಂದು ಶವದ ಮನೆಯಲ್ಲಿಟ್ಟುಬಿಡುತ್ತಾರೆ. ಆತ ಎಚ್ಚೆತ್ತಾಗ ಅಲ್ಲಿ ಇದ್ದೇನು ? ಆತನ ಮನಸ್ಸಿನಲ್ಲಿ ಮೂಡಿದ್ದೇನು ? ಮುಂದೆ ಆದದ್ದೇನು ? ತಾನು ಉಸಿರು ನಿಲ್ಲಿರುವುದಕ್ಕಿಂತ ಶವವಾಗಿದ್ದರೇ ಲೇಸಿತ್ತು - ಎಂಬ ಜೀವನ ನಿರಾಸೆ. ಜಿಗುಪ್ಸೆಗಳು ಭಯಾನಕ ವಾತಾವರಣದ ಹಿನ್ನೆಲೆಯಲ್ಲಿ ಈ ಶವದ ಮನೆ ನಾಟಕದ ಜೀವಂತಿಕೆ. ಈ ಹಿನ್ನೆಲೆಯನ್ನು ಸೆಲೊ ಇಲೆಕ್ಟ್ರಿಕ್ ಪಾದ್ಯಗಳ ಮಾಧ್ಯಮಿಕ ಪರಿಣಾಮಕಾರಿಯಾಗಿ ನಿರ್ಮಿಸಿದೆ.

ಬಾಹ್ಯಾಕಾಶ ನೌಕೆಗಳ ಆಗಾಧತೆ ಅಂತರಿಕ್ಷಯಾನ, ಕ್ಷಿಪಣಿಗಳ ವ್ಯಯೋಗ ಮುಂತಾದವೆಲ್ಲಾ ಉತ್ತಮ ರೇಡಿಯೊನಾಟಕಕ್ಕೆ ದ್ರವ್ಯ ಒದಗಿಸಬಲ್ಲವು. ಈಗ

ಇಪ್ಪತ್ತೈದು ವರ್ಷಗಳ ಹಿಂದೆ ಕೇಪ ಟೌನ್‌ನಲ್ಲಿ ಡಾ. ಬರ್ನಾರ್ಡ್ ಕ್ರಿಶ್ಚನ್ ಅವರು ನಡೆಸಿ
ಹೃದಯದ ಕಸಿ ಪ್ರಯೋಗ ಈ ಲೇಖಕನಿಗೆ ಒಂದು ಒಳ್ಳೆಯ ರೇಡಿಯೊ ನಾಟಕಕ್ಕೆ ಸಾಮಗ್ರಿ
ಒದಗಿಸಿತು. 'ಕಸಿ ಹೃದಯ ಕಣ್ಬೆರೆದಿತ್ತು' ಎಂಬ ಶೀರ್ಷಿಕೆಯ ಈ ಕನ್ನಡ ನಾಟಕ ೧೯೬೮ರಲ್ಲಿ
ರಾಷ್ಟ್ರೀಯ ನಾಟಕವಾಗಿ ಭಾರತದ ಎಲ್ಲ ಭಾಷೆಗಳಲ್ಲೂ ಪ್ರಸಾರವಾಯಿತು. ಈ ರೇಡಿಯೊ
ನಾಟಕ ಪ್ರಥಮತಃ ಹೃದಯದ ಶಸ್ತ್ರಚಿಕಿತ್ಸೆಯನ್ನೂ ಇವ್ಲ ದುರ್ಬಲ ಹೃದಯವನ್ನು
ತೆಗೆದು ಅದರ ಜಾಗದಲ್ಲಿ ಇನ್ನೊಂದು ಹೃದಯವನ್ನು ಕಸಿಮಾಡಿದಾಗ ಆ ಸುಟ್ಟ ಹೃದಯ
ಮಾತನಾಡತೊಡಗುವದನ್ನೂ ಚಿತ್ರಿಸುತ್ತದೆ. ಹೃದಯಾಘಾತ ಹೊಂದಿದ ಹೀರೊ ಪ್ರೊಫೆಸರ
ಪ್ರೇಮನಾಥ ಕಸಿಯಾಗಿ ಪಡೆದುದು ತನ್ನ ಪ್ರೇಯಸಿಯಾದ ಕಮಲೂನ ಹೃದಯವನ್ನೆ
ಕಮಲೂ ಅಪಘಾತಕ್ಕೆ ಗುರಿಯಾಗಿ ಅಸುನೀಗುವ ಕ್ಷಣದಲ್ಲಿ. ಆಕೆಯ ಹೃದಯವನ್ನು
ಮೂರನೆಯ ಸಲ ಹೃದಯಾಘಾತಕ್ಕೊಳಗಾದ ಪ್ರೇಮನಾಥನ ದುರ್ಬಲ ಹೃದಯದ
ಸ್ಥಾನದಲ್ಲಿ ಜೋಡಿಸಲಾಗುತ್ತದೆ. ಆಗ ಸಾಕ್ಷಾತ್ ಕಮಲೂನೆ ತನ್ನ ಪ್ರಿಯಕರನ ಹೃದಯವಾ
ನೆಲಸುತ್ತಾಳೆ. ಒಂದು ಪ್ರಣಯ ಕಥೆ, ಕಲೆ ಮತ್ತು ವಿಜ್ಞಾನಗಳ ಲಗ್ನವನ್ನು (marriage
of Art and Science) ಚಿತ್ರಿಸುವ ಒಂದು ಸಂಕೇತವಾಗುತ್ತದೆ. (ಈ ನಾಟಕ ರಾಷ್ಟ್ರೀಯ
ನಾಟಕವಾಗಿಯೇ ಎರಡು ಸಲ ಪ್ರಸಾರಗೊಂಡುದಲ್ಲದೆ ಪುಸ್ತಕರೂಪದಲ್ಲೂ ಪ್ರಕಟವಾಗಿ
ವುದರಿಂದ ಇದನ್ನಿಲ್ಲಿ ಹೆಚ್ಚು ವಿಸ್ತರಿಸಿಲ್ಲ) ಹೀಗೆ ಕೇವಲ ರೇಡಿಯೊ ತಂತ್ರಕ್ಕಾಗಿ
ರಚಿತವಾದ ಈ ರೇಡಿಯೊ ನಾಟಕ ಒಂದು ವಿಶಿಷ್ಟ ಮೈಲುಗಲ್ಲು ಎನಿಸುವಂತಾಯಿತ
ರೇಡಿಯೊ ನಾಟಕ ಉತ್ತಮ ಸಾಹಿತ್ಯಗುಣದಿಂದಲೂ ಅಷ್ಟೇ ಪರಿಣಾಕಾರಿ ತಾಂತ್ರಿಕ ಮೋಡ
ಯಿಂದಲೂ ಕೂಡಿದ್ದು ಒಂದು ಅಪರೂಪದ ಮಾದರಿಯೆನ್ನುವಂತಾಗಿದೆ.

ಭಾರತದ ಸ್ವಾತಂತ್ರ್ಯೋದಯದ ಹರುಷದ ಹಬ್ಬದ ಹಿಂದೆ ಭಾರತ ಇತ್ಯಾಗವ
ಸಂದರ್ಭ ಕೆಲವೊಂದು ಕರುಳು ಹಿಂಡುವಂತಹ ಕಣ್ಣೀರಿನ ನಾಟಕಗಳಿಗೂ ವಸ್ತು
ನ್ನೊದಗಿಸಿದೆ. ಮೆಲ್‌ವಿಲ್ ಡಿಮೆಲೊ ಅವರು ಪ್ರೊಡ್ಯೂಸ್ ಮಾಡಿದ ಬಾರಾಗುಂ
ದುರಂತದ ಚಿತ್ರಣ ತನ್ನ ವಾಸ್ತವತೆಯಿಂದಾಗಿಯೆ ಅತ್ಯಂತ ಪರಿಣಾಮಕಾರಿ ಶಬ್ದಚಿತ್ರವ
ಮೂಡಿಬಂತು. ೧೯೪೮ ಜನೆವರಿ ೩೦ರ ಮಹಾತ್ಮಾಜಿಯವರ ದುರಂತ ಕೊಲೆಯೂ ರೇಡಿ
ಜನಿಕ್ ವಸ್ತುಗಳನ್ನು ಒದಗಿಸಿದೆ.

ರೇಡಿಯೊ ನಾಟಕಗಳಿಗೆ ಕನ್ನಡದ ಉತ್ತಮ ಕಾದಂಬರಿಗಳೂ ಅಮೂಲ್ಯ ವ
ಒದಗಿಸಿವೆ. ಒಂದೇ ಉದಾಹರಣೆ ಕೊಡಬೇಕೆಂದರೆ ಈ ಮೇಲೆ ವಿವರಿಸಿದ ಶ್ರೀ ಕೆ.
ಐಯ್ಯರ್ ಅವರ 'ಹಾಸ್ಯಲಾ' ರೇಡಿಯೋ ನಾಟಕವಾಗಿ ಪರಿವರ್ತನೆಗೊಂಡು ಪ್ರಸಾರ
ಬಗೆ. ಮುನ್ನೂರು ಪುಟಗಳ ಕಾದಂಬರಿಯೊಂದನ್ನು ೪೫ ನಿಮಿಷಗಳ. ಬಹಳೆಂದರೆ ಒ
ತಾಸಿನ ರೇಡಿಯೊ ನಾಟಕವನ್ನಾಗಿ ಅಳವಡಿಸುವುದು ತುಂಬ ಕಷ್ಟವೆಂದೇ ಹೇಳಬೇಕು.

ಸಾಮಾಜಿಕ ಕಾದಂಬರಿಗಳಲ್ಲಿ ವ್ಯಾಸರಾಯ ಬಲ್ಲಾಳರ 'ಅನುರಕ್ತೆ' 'ನಾಟಕರೂಪ
ಬಾನುಲಿಗೆ ಅಳವಡಿಸಲ್ಪಟ್ಟದ್ದನ್ನು ಇಲ್ಲಿ ನೆನೆಯಬಹುದು. ಸುಮಿತ್ರಾ ಪದ್ಮಾ ಅಕ್ಕತಂಗಿಯ
ಆದರೆ ಕಸ್ಮಾತ್ಪರೀಕ್ಷೆಯಲ್ಲಿ ಮೊದಲು ತೇರ್ಗಡೆ ಹೊಂದಿದ ಪದ್ಮಾ ವಿವಾಹಿತೆಯಾಗು
ತಂಗಿಯ. ವಿವಾಹ ಮೊದಲು ನೆರವೇರಿದ್ದೆ ಅಕ್ಕ ಸುಮಿತ್ರಾನ ಜೀವನ ಕಷ್ಟಕಾ

ಳಿಗೆ ಮರ್ಯಾದಾಗಿ ಆಕೆಯು ಭವಿಷ್ಯ ಗಾಳಿಪಟವಾಗುವಂತೆ ಮಾಯುತ್ತದೆ. ಬಂದ ವರಗಳೆಲ್ಲ ಮಿತ್ರನನ್ನೇಕೆ ಅಲ್ಲಗಳೆಯುತ್ತಿದ್ದರು. ಪದ್ಮಾವಿವಾಹವಾದ ಮೇಲೆ ಪದ್ಮಾ ಇವ್ಳಲ್ಲಿಗೆ ಬಂದಿರುವಳಲ್ಲಿ) ಸುಮಿತ್ರಾ ನೌಕರಿ ಮಾಡಲಿಕ್ಕೆ ಹೋಗುತ್ತಾಳೆ. ಅಲ್ಲಿ ಪದ್ಮಾನ ಗಂಡ ಮಿತ್ರನನ್ನು ಹೇಗೆ ನಡೆಸಿಕೊಳ್ಳುತ್ತಾನೆ. ಪದ್ಮಾ ಗರ್ಭಿಣಿಯಾಗಿ ಆಸ್ಪತ್ರೆ ಸೇರಿದಾಗಲೆಲ್ಲಾ ಮಿತ್ರಾ ಮಾಡಿದ ಸೇವೆ, ಸ್ವಾರ್ಥತ್ಯಾಗಗಳೇನು, ಮುಂದೆ ಸುಮಿತ್ರಾನ ಆಫೀಸಿನಲ್ಲೇ ಒಬ್ಬ ಗುಣದಿಂದ ವಂಚಿತಳಾಗುವ ಬಗೆ, ಕೊನೆಗೆ ಪದ್ಮಾ ಒಂದು ಮಗುವನ್ನು ಬಿಟ್ಟು ರಣಹೇಡಿಯಂತೆ ಮೇಲೆ ಮುಂದೇನು ? ಪದ್ಮಾನ ಗಂಡನೇ ಸುಮಿತ್ರೆಯ ಕೈ ಹಿಡಿಯಬಹುದು ಎಂಬ ಸಮಸ್ಯಾ ಸಾದಾ ತರ್ಕ. ಆದರೆ ಪರಿಸ್ಥಿತಿ ಹಾಗಾಗಲಿಲ್ಲ. ಹೀಗೆ ಒಂದು ಸಂಕೀರ್ಣತೆಯಿಂದ ಇನ್ನೊಂದು ಸಂಕೀರ್ಣತೆಯತ್ತ ಒಯ್ದು ಈ 'ಅನುರಕ್ತಿ' ಯು ಕಥಾ ಕುತೂಹಲ ಇದರೊಡನೆ ಪದ್ಮಾ-ಸುಮಿತ್ರಾ, ಪದ್ಮಾನ ಗಂಡ, ಅತನ ತಂಗಿ, ಅತನ ಮಿತ್ರ, ಮೇಷ್ಟ್ರು ಈ ಎಲ್ಲ ಜೀವಂತ ಪಾತ್ರಗಳು ಇವುಗಳಿಂದಾಗಿ ಕಾದಂಬರಿ ಒಂದು ಅಯಾಮದಿಂದ ಇನ್ನೊಂದು ಅಯಾಮದತ್ತ ಗತಿ ಸಂಕೀರ್ಣತೆಯ ಮಾಲೆಯಾಗಿ ಮುಂದೇನು ಮುಂದೇನು ಎಂಬ Suspense ನಲ್ಲಿ ಮನಸ್ಸು ತೇಲಿಸುತ್ತ ಕೊಂಡೊಯ್ದು ಸುಂದರ ಶೈಲಿಯ ಕಾದಂಬರಿ ಇದು. ರೇಡಿಯೋ ನಾಟಕವಾಗಿ ಅತ್ಯುತ್ತಮ ಕೃತಿಯೆನಿಸಿ ಒಂದು ಮೈಲಿಗಲ್ಲೆನಿಸಿ ೨೫ ವರ್ಷಗಳ ಹಿಂದಿನ ಶ್ರೋತೃಗಳ ನೆನಪಿನಲ್ಲಿ ಇವನ್ನು ಮನೆಮಾಡಿಕೊಂಡಿದೆ. ಇಂಥ ಒಂದು ಉತ್ತಮ ಸಾಧ್ಯತೆಗಳಿಂದ ಕೂಡಿದ ಈ ಕಾದಂಬರಿಯನ್ನು ರೇಡಿಯೊಕ್ಕೆ ಒಳಪಡಿಸಿದ ಅಪೂರ್ವ ಯೋಗ ಈ ನಾಟಕವಾಗಿತ್ತು. 'ಅನುರಕ್ತಿ' ಮುಂದೆ ಚಿತ್ರೀಕರಣವನ್ನು ಹೊಂದಿತು. ಇದರಲ್ಲಿ ಅನುರಕ್ತಿ ಯಾರು ? ಪದ್ಮಾ ಅಂತರಂಗ ಕೈಹಿಡಿದ ಕಾಯುದೆಬಿದ್ದ ಹೆಂಡತಿಯಿ ; ಆಮೇಲೆ ಗಂಡನನ್ನು ಅವಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಾಳೆ. ಆದರೆ ಪದ್ಮಾಗಂಡ ಪ್ರಥಮದಲ್ಲಿ ಕನ್ಯೆಯನ್ನು ಮೆಚ್ಚಲು ಬಂದುದು ಸುಮಿತ್ರೆಯನ್ನೆ, ಆಕೆ ಅನುರಕ್ತಿಯನ್ನೇನೆನ್ನೋ ತೋರಿದಳು. ಆದರೆ ಕೈ ಹಿಡಿಯುವ ವ್ಯಸಂಗ ಬರಲಿಲ್ಲ. ಆದರೂ ತನ್ನ ಮನಃಪಟಲದಿಂದ ಅತನನ್ನು ಅಳಿಸಿ ಹಾಕಲಾಗಲಿಲ್ಲ. ಅಂತೆಯೆ ಈ 'ಅನುರಕ್ತಿ' ಎಂಬ ಶೀರ್ಷಿಕೆ ಕಾದಂಬರಿಗೆ ಹೆಚ್ಚು ಸಾರ್ಥಕ. ಮಾನವ ಕುಲದ ಸಂಕೀರ್ಣತೆಯ ಬೀಜ.

ಕನ್ನಡದಲ್ಲಿ ರೇಡಿಯೊ ನಾಟಕ, ಗಾತ್ರದ ಮಟ್ಟಿದಲ್ಲಾದರೂ ಗುಣಾಂಶವಾಗಿ ಬೆಳೆದು ಬಂದದ್ದು ಕಳೆದ ಸಾಲು ದಶಕಗಳಲ್ಲಿ. ಧಾರವಾಡ ಕೇಂದ್ರವು (೧೯೫೦) ಕ್ಕೆ ಮುಂಚೆ ಮೈಸೂರು, ಮುಂಬಯಿಗಳಲ್ಲಿ ಕನ್ನಡ ನಾಟಕಗಳೇನೊ ಪ್ರಸಾರವಾಗುತ್ತಿದ್ದವು. ಹಾಗೆ ನೋಡಿದರೆ ಕನ್ನಡ ರೇಡಿಯೊ ನಾಟಕ ರಂಗದ ಬಗ್ಗೆ ವ್ಯಸಾರಕ್ಕೆ ಕೊಡಿಸಲ್ಪಟ್ಟಿದ್ದು ಮೈಸೂರು ಆಕಾಶವಾಣಿಯಲ್ಲಿರಬೇಕು ಎನ್ನಬಹುದು. ಉತ್ತಮೋತ್ತಮ ಇಂಗ್ಲಿಷ್ ನಾಟಕಗಳ ಕನ್ನಡ ಅನುವಾದಗಳು ಮೊದಲು ಪ್ರಸಾರವಾದದ್ದು ಮೈಸೂರಿನಲ್ಲಿಯೆ. ಮೈಸೂರ 'ಸೂತ್ರದ ಬೊಂಬೆ ' (ಡಾಲ್ಸ್ ಹೌಸ್)ಯೆ ಮೊಟ್ಟಮೊದಲ ರೇಡಿಯೊ ನಾಟಕವೆಂದು ತಿಳಿದುಬರುತ್ತದೆ. ಶೆಕ್ಸಪಿಯರ್‌ನ 'ಮ್ಯಾಕ್‌ಬೆತ್' ನಾಟಕವನ್ನು ಬಿ. ಪಿ. ಜಿ. ಯವರು ಪ್ರಭಾವಯುತವಾಗಿ ಕನ್ನಡಿಸಿದ್ದಾರೆ. ಇದರ ಸಂಕ್ಷಿಪ್ತ ರೇಡಿಯೊ ರೂಪಾಂತರವನ್ನು ಮೈಸೂರಿನಿಂದಲೆ ಪ್ರಸಾರವಾಯಿತು. ಆರ್. ಕೆ. ನಾರಾಯಣರ 'ವೀರಗಂಟಮ್ಮನ ' ಸ್ವಯಂಸ್ಫೂರ್ತಿಯಾದ ಮೊದಲ ಮೌಲಿಕ ನಾಟಕ. ಇದರಲ್ಲಿಯ ವಾಸ್ತವತೆಯು ಮಾಸ್ತಿಯವರ ರೋಚಕ

ಎಂಜಿನ್‌ನ ಧ್ವನಿ ವಿಶೇಷ. ನೀರ ಗಂಟಿ ಮಾರನ ತ್ಯಾಗಮಯ ಜೀವನ ಶ್ರೋತೃಗಳ ಅಂತರಂಗವನ್ನು ಸ್ಪರ್ಶಿಸುತ್ತದೆ. ಮೈಸೂರಿನಲ್ಲಿ ಯಶಸ್ವಿಯಾದ ಇತರ ನಾಟಕಗಳಲ್ಲಿ ಕುವೆಂಪು ಅವರ `ಯಮನ ಸೋಲು,'` ಬಿರುಗಾಳಿ ',`ರಕ್ತಾಕ್ಷಿ' ಇವು ಮೆಚ್ಚುಗೆ ಗಳಿಸಿದ ಸಾಹಿತ್ಯ ಕೃತಿಗಳು. `ದುರಂತ,' `ವಿಷಕನ್ಯೆ',`ಅಮೃತವರ್ಷ' ಗಳಂತಹ ನಾಟಕಗಳನ್ನು ನೀಡಿದ ಡಾ. ಎಚ್. ಕೆ. ರಂಗನಾಥ ಅವರು ಗಣನೀಯ ಕೊಡುಗೆ ಸಲ್ಲಿಸಿದ್ದಾರೆ ರೇಡಿಯೊ ರಂಗಭೂಮಿಗೆ. ಮುಂದೆ ಧಾರವಾಡ- ಬೆಂಗಳೂರು ಕೇಂದ್ರಗಳಿಂದ ಕಾಲಕಾಲಕ್ಕೆ ಜರುಗಿದ ನಾಟಕ ಸಪ್ತಾಹ, ನಾಟಕ ಮಹೋತ್ಸವಗಳಿಂದಾಗಿ ಕೆಲವಾದರೂ ಸಾಹಿತ್ಯ ದೃಷ್ಟಿಯಿಂದಲೂ ರೇಡಿಯೊ ತಂತ್ರದ ದೃಷ್ಟಿಯಿಂದಲೂ ಉತ್ತಮ ಎಂಬಂತಹ ನಾಟಕಗಳು ಮೂಡಿಬಂದವು. ಇಂತಹ ಉತ್ತಮ ನಾಟಕಕಾರರಲ್ಲಿ ಸರ್ವಶ್ರೀ ಎಸ್. ಎನ್. ಶಿವಸ್ವಾಮಿ, ಇಟಗಿ ರಾಘವೇಂದ್ರ, ನಿರಂಜನ, ಚದುರಂಗ, ಸಿದ್ಧಲಿಂಗ ಪಟ್ಟಣಶೆಟ್ಟಿ, `ಚಂಪಾ', ಗಿರಡ್ಡಿ ಗೋವಿಂದರಾಜ, ವರದರಾಜ ಹುಯಿಲಗೋಳ, ರಂ. ಶ್ರೀ ಮುಗಳಿ, ವಿ. ಕೃ. ಗೋಕಾಕ್, ದ. ರಾ. ಬೇಂದ್ರೆ , ಅ. ನ. ಕೃ., ಎಂ. ವಿ. ಸೀತಾರಾಮಯ್ಯ, ವಿ. ಸೀ., ಬಿ. ಎಂ. ಶ್ರೀ, ಶಿವರಾಂ ಕಾರಂತ, ಡಿ. ಜಿ. ಕುಲಕರ್ಣಿ, ಡಾ. ಎಚ್. ಕೆ. ರಂಗನಾಥ, ಎನ್ಕೆ, ಜಡಭರತ, ಪರ್ವತವಾಣಿ, ಶ್ರೀರಂಗ, ಕೆ. ವಿ. ಅಯ್ಯರ್, ಬೀಚಿ, ರಾಜರತ್ನಂ, ಎ. ಕೆ. ರಾಮಾನುಜನ್- ಇವೇ ಮೊದಲಾದ ಹೆಸರುಗಳು ಪ್ರಮುಖವಾಗಿವೆ. ಕಂಪನಿ ನಾಟಕಗಳಲ್ಲಿ ರೇಡಿಯೊ ರೂಪಾಂತರಗಳಾಗಿ ಜನಪ್ರಿಯತೆಯನ್ನು ಗಳಿಸಿದ ನಾಟಕಗಳೆಂದರೆ ವಾಮನರಾವ್ ಮಾಸ್ತರರ `ಸಂತ ಸಖೂ ದೇವಿ', ಗರೂಡರ `ಪಾದುಕಾ ಪಟ್ಟಾಭಿಷೇಕ ,' ಕಂದಗಲ್‌ರ `ಬಡತನದ ಭೂತ' ಮತ್ತು `ದಶಾವತಾರ', ಎಂ. ಸಿ. ಮಹಾದೇವ ಸ್ವಾಮಿಯವರ `ರಾಜಾ ವಿಕ್ರಮ ' ಇವೇ ಮೊದಲಾದುವು. ಗೀತ ರೂಪಕಗಳಲ್ಲಿ ಪು. ತಿ. ನ. ಅವರ `ಹರಿಣಾಭಿಸರಣ,' ಸಿದ್ಧಯ್ಯ ಪುರಾಣಿಕರ `ಗಿರಿಜಾ ಕಲ್ಯಾಣ ', ಕೀರ್ತಿನಾಥ ಕುರ್ತಕೋಟಿ ಅವರ `ಸ್ವಪ್ನದರ್ಶಿ ', ಎನ್ಕೆ ಅವರ `ಕರ್ನಾಟಕ ದರ್ಶನ', ಕಣವಿ ಅವರ `ಸಂಕ್ರಮಣ', ಗಣಪತರಾವ್ ಪಾಂಡೇಶ್ವರರ `ಬಲಿವಾಮನ' ಇವು ಉಲ್ಲೇಖನಾರ್ಹ.

ಪಾಶ್ಚಾತ್ಯದೇಶಗಳಲ್ಲಿ ರೇಡಿಯೊ ನಾಟಕವು ಬಿ. ಬಿ. ಸಿ. ನಾಟಕಕಾರರಾದ ಗೀತ್‌ಗುಡ್, ಆರ್ಚಿಬಾಲ್ಡ್ ಮೊದಲಾದವರ ಕೊಡುಗೆಯಿಂದಾಗಿ ಸ್ವತಂತ್ರ, ರೂಪಾಂತರ ಎರಡೂ ಪ್ರಕಾರಗಳಲ್ಲಿ ಅತ್ಯುತ್ತಮ ಪ್ರಗತಿ ಸಾಧಿಸಿದೆ. ನಮ್ಮ ಪ್ರಸಾರ ನಾಟಕಗಳಲ್ಲಿ ಮೊದಲಿನಷ್ಟು ಮಡಿವಂತಿಕೆ ಈಗಿಲ್ಲವಾದ್ದರಿಂದ ವಾಸ್ತವಪೂರ್ಣ, ಹಾಸ್ಯಪ್ರಧಾನ ನಾಟಕಗಳು ಬರಲು ಹೆಚ್ಚಿನ ಆಸ್ಪದವುಂಟಾಗಿದ್ದರೂ ಉತ್ತಮ ಹಾಸ್ಯಪ್ರಧಾನ, ಮಣ್ಣಿನ ವಾಸನೆಯ ಬದುಕಿಗೆ ಕನ್ನಡಿ ಹಿಡಿಯುವಂಥ ನಾಟಕಕಾರರು ವಿರಳ. ಹೂಲಿ ಶೇಖರರ` ಹಾವು ಹರಿದಾಡತಾವು ' ಒಂದು ಸ್ಮರಣೀಯ ನಾಟಕ. ಇತ್ತೀಚಿನ ಭರವಸೆಯ ನಾಟಕಕಾರರಲ್ಲಿ ಪೊಲೀಸ ಪಾಟೀಲರು ಎದ್ದು ಕಾಣುತ್ತಾರೆ.

ಕಳೆದ ಕೆಲವಾರು ವರ್ಷಗಳಲ್ಲಿ ರಾಷ್ಟ್ರೀಯ ನಾಟಕಮಾಲೆಯಲ್ಲಿ ಪ್ರಸಾರವಾದ ಶಾಪಗ್ರಸ್ತ ಗಾಂಧಾರ (ಮೂಲ ಹಿಂದಿ) ಜಯವಂತ ದಳವಿ ಅವರು ` ಸ್ಪರ್ಶ,' ವಿಜಯ ತೇಂಡೂಲಕರರ `ಸಖಾರಾಂ ಬೈಂಡರ್', 'ಶಾಂತತಾ ಕೋರ್ಟ್ ಚಾಲೂ ಆಹೆ', ಪಂಜಾಬಿಯ `ವಂಶ', 'ಉರ್ದು ಭಾಷೆಯ' ನೀನು ನನ್ನ ಬಳಿ ಇರು ' ಮಲಯಾಳಂನ ', `ಕನ್ಯಾ' ,ವೀ. ಸ

ಖಾಂಡೇಕರರ `ಉಲ್ಕಾ', ಶ್ರೀರಂಗರ `ಕೇಳು ಜನಮೇಜಯ ', ಮೂಲ ಸಂಸ್ಕೃತ ಭಾಸ ಕವಿಯ `ಸ್ವಪ್ನವಾಸವದತ್ತಾ', ಹಿಂದಿಯ ಕನ್ನಡಾನುವಾದ `ನಾಯಿಕೊಡೆ,' `ಗರಂ ಕೋಟ', ಓಮಗೋಪುರ (ಹಿಂದಿ),ಸರ್ಕಸ್ ಕಂಪನಿಯ ಜೀವನವನ್ನು ಚಿತ್ರಿಸುವ `ತಂಬುವಿನ ಕೆಳಗೆ' (ಹಿಂದೀ ಅನುವಾದ) ಮೊದಲಾದ ನಾಟಕಗಳು ನಿಜವಾದ ಮೈಲುಗಲ್ಲುಗಳೆನಿಸಿವೆ. ಬಳಕೆದಾರರ ಹಕ್ಕನ್ನು ಪ್ರಸ್ತಾಪಿಸುವ `ಏಕ ಕಪ್ ಚಹಾ 'ದಲ್ಲಿ ರೇಲ್ವೆಸ್ಟಾಲ್ ಚಹಾವಾಲಾ ಎಲ್ಲರಿಗೂ ಒಂದು ಬೆರಳಿನಷ್ಟು ಕಡಿಮೆ ಚಹಾ ಕೊಡುತ್ತಿದ್ದನೆಂದು ಆತನ ಮೇಲೆ ವಿಚಾರಣೆ ನಡೆಸಲು ಇದೊಂದು ದೊಡ್ಡ ಸಾಮಾಜಿಕ ಅಪರಾಧ ಎಂದು ಸಿದ್ಧವಾಗುತ್ತದೆ. ಇದು ಒಳ್ಳೆ ಸಾಮಾಜಿಕ ಪ್ರಜ್ಞೆಯ ನಾಟಕ.

ಶಾಪಗ್ರಸ್ತ ಗಾಂಧಾರಿಯಲ್ಲಿ ಧೃತರಾಷ್ಟ್ರ ಕುರುಡನಾಗಿದ್ದನೆಂದು ಗಾಂಧಾರಿ ತಾನೂ ಕಣ್ಣಿಗೆ ಪಟ್ಟಿಕಟ್ಟಿಕೊಂಡು ಕೃತ್ರಿಮ ಕುರುಡುತನ ತಂದುಕೊಂಡೆ ಕುರುಕ್ಷೇತ್ರದ ದುರಂತಕ್ಕೂ ಕಣ್ಣು ಮುಚ್ಚಿಕೊಂಡೇ ಇದ್ದಾಗ, ಧೃತರಾಷ್ಟ್ರ ಒಂದು ಮಾತು ಹೇಳುತ್ತಾನೆ: ``ನಾನೇನೊ ಹುಟ್ಟು ಕುರುಡನಾದೆ. ಆದರೆ ನೀನು ಇದ್ದ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಕುರುಡುತನ ತಂದುಕೊಂಡೆ. ನಿನ್ನ ನೂರುಮಕ್ಕಳ ಬೆಳೆವಣಿಗೆ ನೋಡದೆ ಅವರ ಸಾವಿಗೆ ಸಾಕ್ಷಿಯಾಗಿ ಉಳಿದೆ. ನೀನು ಈ ಕೃತ್ರಿಮ ಕುರುಡುತನವನ್ನು ಆಮಂತ್ರಿಸದಿದ್ದರೆ ಬಹುಶಃ ಇಂತಹ ಅಭೂತಪೂರ್ವ ದುರಂತವನ್ನು ತಪ್ಪಿಸಬಹುದಿತ್ತು '' ಎಂದು. ನಿಜವಾಗಿಯೂ ಒಂದು ವಿಚಾರಣೀಯ ಅಂಶವಲ್ಲವೆ ಇದು ? ಹೀಗೆ ನಮ್ಮ ಪೌರಾಣಿಕ ವಸ್ತುವಿನ ಮೇಲೆ ಹೊಸ ಬೆಳಕು ಬೀರುವಂತಹ ನಾಟಕಗಳಲ್ಲಿ ಕಂಡುಬರುವ ವೈಚಾರಿಕತೆ ರೇಡಿಯೊ ನಾಟಕಗಳ ಒಂದು ವೈಶಿಷ್ಟ್ಯವೆಂದೇ ಹೇಳಬೇಕು.

ಗೀತನಾಟಕಗಳು

-ಬಸವರಾಜ ಮಲಶೆಟ್ಟಿ

`ಗೀತ ನಾಟಕ' ಅಥವಾ `ಗೀತರೂಪಕ ' ಇದು ನಮಗೆ ಪಾಶ್ಚಾತ್ಯರಿಂದ ಬಂದಿರುವ ಸಾಹಿತ್ಯಿಕ ರೂಪ (Form) ಆಗಿದೆ. ನವೋದಯದ ಸಂದರ್ಭದಲ್ಲಿ ನಮ್ಮ ಸಾಹಿತಿಗಳು ಪಾಶ್ಚಾತ್ಯ ಸಾಹಿತ್ಯದ ರೂಪಗಳಿಂದ ಪ್ರಭಾವಿತರಾಗಿ ಆ ಮಾದರಿಗಳನ್ನು ಕನ್ನಡದಲ್ಲಿ ಕಸಿಮಾಡಿದ್ದು ಐತಿಹಾಸಿಕ ಸತ್ಯ. ಭಾವಗೀತ ಸಣ್ಣಕತೆ ಕಾದಂಬರಿ ನಾಟಕ ಮೊದಲಾದ ರೂಪಗಳಂತೆ ಪಾಶ್ಚಾತ್ಯರ ಆಪೆರಾ ನಮ್ಮವರನ್ನು ಆಕರ್ಷಿಸಿತು. ಆಪೆರಾಗೆ ಸಂವಾದಿಯಾಗಿ ಅನೇಕ ಕೃತಿಗಳು ನಮ್ಮಲ್ಲಿ ರಚನೆಗೊಂಡವು. ಆದ್ದರಿಂದ ಕನ್ನಡ `ಗೀತನಾಟಕ' ಪ್ರಕಾರವು ಆಪೆರಾದ ಪ್ರೇರಣೆ ಪ್ರಭಾವದಿಂದ ಹುಟ್ಟಿಕೊಂಡಿತೆಂಬುದು ವಾಸ್ತವ ವಿಚಾರ.

ಗೀತನಾಟಕವೆಂದರೆ ಗೀತಗಳ ಮೂಲಕ ನಿರ್ಮಾಣಗೊಳ್ಳುವ ನಾಟಕ. ನಮ್ಮ ಪರಂಪರೆಯಲ್ಲಿ ಈ ನಾಟಕಗಳು ಇದ್ದಿರಲಿಲ್ಲವೇ ? ಇದ್ದಿದ್ದರೆ ಅವುಗಳ ವಿಶಿಷ್ಟ ಗುಣ ಲಕ್ಷಣಗಳಾವವು ? ಎಂಬ ಪ್ರಶ್ನೆಗಳು ಕುತೂಹಲ ಕೆರಳಿಸುತ್ತವೆ. ಗೀತಪ್ರಧಾನವಾದ ನಾಟಕಗಳ ಕಲ್ಪನೆ ಭಾರತೀಯರಿಗೆ ಇರಲಿಲ್ಲವೆಂದಲ್ಲ. ಆದರೆ ಆಪೆರಾದ ಖಚಿತ ಲಕ್ಷಣಗಳಿಗೆ ಹೊಂದುವಂಥ ರಚನೆಗಳು ಇದ್ದಿರಲಿಲ್ಲ ಅಷ್ಟೇ. ಸಂಸ್ಕೃತ ನಾಟಕಗಳಲ್ಲಿ ಪದ್ಯಗಳು ಗಣನೀಯ ಪ್ರಮಾಣದಲ್ಲಿದ್ದುದನ್ನು ನಾವು ನೋಡುತ್ತೇವೆ. ಜಯದೇವ ಕವಿಯ `ಗೀತಗೋವಿಂದ ' ದಲ್ಲಿ ಆಪೆರಾದ ಕೆಲವು ಲಕ್ಷಣಗಳು ಸ್ಪಷ್ಟವಾಗಿ ಗೋಚರಿಸುತ್ತವೆ. `ಗೀತಗೋವಿಂದ'ದ ಬಿಡಿಹಾಡುಗಳು ರಾಧೆ -ಕೃಷ್ಣ - ಸಖಿ ಈ ಮೂವರ ಸುತ್ತ ಹೆಣೆದ ತೆಳುವಾದ ಕಥಾ ಸೂತ್ರವನ್ನು ನಿರ್ಮಿಸಿವೆ. ನಂತರದ ಅವಧಿಯಲ್ಲಿ `ಗೀತಗೋವಿಂದ 'ದ ಮಾದರಿಯ ಅನೇಕ ಕೃತಿಗಳು ಸಂಸ್ಕೃತ ಹಾಗೂ ದೇಶೀಯ ಭಾಷೆಗಳಲ್ಲಿ ರಚನೆಗೊಂಡವು. ತ್ಯಾಗರಾಜರ ನೌಕಚರಿತ, ಪ್ರಹ್ಲಾದ, ಭಕ್ತಿ ವಿಜಯ, ಸೀತಾರಾಮ ವಿಜಯ (ಇವೆಲ್ಲ ತೆಲುಗು) ಮತ್ತು ಅರುಣಾಚಲ ಕವಿಯ ರಾಮನಾಟಕ (ತಮಿಳು) ಮುಂತಾದವು ಸೀಮಿತ ಅರ್ಥದಲ್ಲಿ ಗೀತನಾಟಕಗಳೇ. ಈ ಕವಿಗಳು ಮೂಲತಃ ಸಂಗೀತಗಾರರು. ಆದ್ದರಿಂದ ಅವರ ರಚನೆಗಳು ಇಂದಿನ ಗೀತನಾಟಕಗಳಾಗಲಾರವು. ಒಂದು ಕಥಾ ಸಂದರ್ಭವನ್ನು ನೃತ್ಯದ ಮೂಲಕ ನಿರೂಪಿಸುವ ನೃತ್ಯರೂಪಕಗಳ ಪರಂಪರೆ ನಮ್ಮಲ್ಲಿತ್ತು. ಅವು ಆಪೆರಾದ ಕೆಲವು ಲಕ್ಷಣಗಳನ್ನು ಹೊಂದಿದ್ದವು. ನಮ್ಮ ಜಾನಪದ ರಂಗಪ್ರಕಾರಗಳಾದ ಯಕ್ಷಗಾನ, ಡಪ್ಪಿನಾಟ, ಗೊಂಬೆಯಾಟಗಳು ಒಂದರ್ಥದಲ್ಲಿ ಗೀತನಾಟಕಗಳೇ. ಇವು ಮೂಲತಃ ಗೀತಗುಚ್ಛಗಳು. ಅಶು ಸಂಭಾಷಣೆಗಳನ್ನು ಸಾಂದರ್ಭಿಕವಾಗಿ ಸೇರಿಸಲಾಗುತ್ತದೆ. ಏನಿದ್ದರೂ ಗೀತನಾಟಕದ ಮಾದರಿ ನಮಗೆ ಆಪೆರಾದಿಂದ ಬಂದಿರುವುದು ಸ್ಪಷ್ಟವಿದೆ.

ಪಾಶ್ಚಾತ್ಯರು ಆಪೆರಾದ ಮೂಲವನ್ನು ಗ್ರೀಕ್ ನಾಟಕಗಳಲ್ಲಿ ಕಂಡುಕೊಳ್ಳವುದುಂಟು. ಆಪೆರಾ ನಿಖರವಾಗಿ ಜನ್ಮತಾಳಿದ್ದು ಇಟಲಿಯಲ್ಲಿ. ಅಲ್ಲಿ ಕ್ರಿ. ಶ. ೧೫೯೭ರಲ್ಲಿ ರಂಗಭೂಮಿಗೆ ಬಂದ `ಜಾಕೊಪೊ ಪೆರಿಯದಾಫ್ನೆ ' ಎಂಬುದು ಮೊದಲನೆಯ ಆಪೆರಾ. ೧೭ನೆಯ ಶತಮಾನದ ಮಾಂಟೆ ವರ್ದಿ ಎಂಬವನು ಈ ರಂಗಪ್ರಕಾರವನ್ನು ಅಚ್ಚುಕಟ್ಟಾಗಿ ವ್ಯವಸ್ಥೆಗೊಳಿಸಿ ಸ್ಥಿರಗೊಳಿಸಿದನು. ಕ್ರಿ.ಶ. ೧೬೩೭ರಲ್ಲಿ ವೆನಿಸ್‌ನಲ್ಲಿ ಆಪೆರಾ ಭವನವೊಂದು ನಿರ್ಮಿಸಲ್ಪಟ್ಟಿತು. ನಂತರ ಇಟಲಿಯಿಂದ ಯುರೋಪಿನ ತುಂಬ ಆಪೆರಾ ಪ್ರಸರಣಗೊಂಡಿತು. ಅಲ್ಪಾವಧಿಯಲ್ಲಿ ಜನಪ್ರಿಯವಾಯಿತು. ೧೯ನೇ ಶತಮಾನದ ಆರಂಭದಲ್ಲಿ ಯುರೋಪಿಯನ್ ಆಳರಸರ ಮನರಂಜನೆಗಾಗಿ ಆಪೆರಾ ಭಾರತವನ್ನು ಪ್ರವೇಶಿಸಿತು. ಮುಂಬಯಿಯಲ್ಲಿರುವ ಅತ್ಯಂತ ಹಳೆಯ ರಂಗಮಂದಿರದ ಹೆಸರು Royal Opera House ಎಂದಿದೆ.

ಬ್ರಿಟಾನಿಕಾ ವಿಶ್ವಕೋಶದಲ್ಲಿ ಆಪೆರಾದ ಲಕ್ಷಣ ಹೀಗೆ ಹೇಳಲಾಗಿದೆ.:``Opera a dramatic work in which the words instead of being spoken in verse or prose are wholly or partly sung to an instrumental accompaniment almost always assigned to an orchestra"[1]

ಪ್ರಯೋಗದ ದೃಷ್ಟಿಯಿಂದ ಆಪೆರಾವನ್ನು ಮೂರು ಪ್ರಕಾರಗಳಲ್ಲಿ ವಿಂಗಡಿಸುತ್ತಾರೆ. (೧) ಮೂಕರೂಪಕ - ಹಿನ್ನೆಲೆಯ ಹಾಡಿಗೆ ತಕ್ಕಂತೆ ಪಾತ್ರಗಳು ರಂಗದ ಮೇಲೆ ಅಭಿನಯಿಸುವುದು (೨) ಛಾಯಾರೂಪಕ - ಪಾತ್ರಗಳು ತಮ್ಮ ಅಭಿನಯವನ್ನು ಪರದೆಯ ಮೇಲೆ ನೆರಳಿನ ಮೂಲಕ ತೋರಿಸುವ ವಿಧಾನ (೩) ನೃತ್ಯರೂಪಕ - ನೃತ್ಯದ ಮೂಲಕ ಭಾವಾಭಿವ್ಯಕ್ತಿಯ ಪ್ರದರ್ಶನ.

ನಾವು ಗೀತನಾಟಕವೆಂದು ಕರೆಯುವ ಆಪೆರಾ ಪೂರ್ತಿ ಸಂಗೀತಕ್ಕೆ ಅಳವಡಿಸಿರುವ ನಾಟಕ. ನಾಟಕಕ್ಕೂ ಸಂಗೀತಕ್ಕೂ ಇರುವ ಅನ್ಯೋನ್ಯ ಸಂಬಂಧ ಅತ್ಯಂತ ಪ್ರಾಚೀನ ವಾದುದು. ಆದರೆ ಸಂಗೀತದಿಂದೊಡಗೂಡಿರುವ ನಾಟಕಗಳೆಲ್ಲ ಗೀತನಾಟಕಗಳೆನಿಸಲಾರವು. ಅಂಥವುಗಳನ್ನು ಸಂಗೀತ ನಾಟಕಗಳೆಂದು ಕರೆಯಬಹುದು. ಅವುಗಳಲ್ಲಿ ಸಂಭಾಷಣಾ ಗದ್ಯದ ಪ್ರಮಾಣ ಹೆಚ್ಚಿಗಿರುತ್ತದೆ. ಹಾಡುಗಳು ಶಾಸ್ತ್ರೀಯ ಸಂಗೀತದ ಭಾರದಿಂದ ಹೊಯ್ದಾಡುತ್ತಿರುತ್ತವೆ. ಗೀತನಾಟಕದ ಸಂಗೀತ ಹಿತಮಿತವಾಗಿದ್ದು ಗದ್ಯದ ಬಳಕೆ ತೀರಾ ಕಡಿಮೆ.ಗದ್ಯದ ತುಂಡುಗಳು ಚಿಕ್ಕ ಸಂಭಾಷಣೆಯಾಗಿಯೋ ಕಥಾನಿರೂಪಣಾ ವಾಕ್ಯಗಳಾಗಿಯೋ ಸೇರಿಕೊಂಡಿರುತ್ತವೆ ಅಷ್ಟೇ.

ಒಂದು ದೃಷ್ಟಿಯಿಂದ ಯಶಸ್ವೀಗೀತನಾಟಕ ಏಕಕೃತವಲ್ಲ. ಇದು ಸಾಹಿತಿ-ಸಂಗೀತಗಾರ-ನಿರ್ದೇಶಕ ಇವರೆಲ್ಲರ ಸಂಯುಕ್ತ ಪ್ರಯತ್ನದ ಫಲವಾಗಿದೆ. ಗೀತನಾಟಕವನ್ನು ರಚಿಸುವವನು ಮಾಮೂಲಿ ಸಾಹಿತಿಯಾಗಿದ್ದರೆ ಸಾಲದು. ಅವನಿಗೆ ಸಂಗೀತದ ತಿಳುವಳಿಕೆ ಸಾಕಷ್ಟಿರಬೇಕು. ಅವನು ಸಂಗೀತಜ್ಞ ಸಾಹಿತಿಯೋ ಅಥವಾ ಸಾಹಿತ್ಯಜ್ಞ ಸಂಗೀತಕಾರನೋ ಆಗಿರಬೇಕು. ಗೀತ ನಾಟಕದ ಹಾಡುಗಳು ಕಾವ್ಯಲಕ್ಷಣ ಶಾಸ್ತ್ರದ ಬಂಧನಕ್ಕೊಳಗಾಗಿರಬೇಕಾದ

---

1. Encyclopeadia Britanica -Vol. 16 - P 979

ಅವಶ್ಯಕತೆಯಿಲ್ಲ.ಅವು ಸಂಗೀತಕ್ಕೆ ಹೊಂದಿಕೊಂಡು ರಸಭಾವಗಳ ಅಭಿವ್ಯಕ್ತಿಗೆ ಮಾಧ್ಯಮವಾಗುವಂಥ ರಚನೆಗಳಾಗಿರಬೇಕು. ಗಂಭೀರ ಕವಿತೆಗಳಾಗಿರದೆ ತಾಳ ಲಯ ಲಾಲಿತ್ಯಗಳನ್ನೊಳಗೊಂಡಿರಬೇಕು.

ಗೀತನಾಟಕದ ಗೀತೆಗಳಿಗೆ ಸಂಯೋಜಿಸುವ ಸಂಗೀತ ಶಾಸ್ತ್ರೀಯತೆಯ ಜಡತನವನ್ನು ಮೀರಿರಬೇಕು. ಯಾವುದೇ ಮಡಿತನ ಇರಬಾರದು. ಮಾರ್ಗದೇಶಿ ಸಂಗೀತ ಶೈಲಿಗಳನ್ನು ಸಂಕೋಚವಿಲ್ಲದೆ ಬಳಸಿಕೊಳ್ಳಬೇಕು. ಇನ್ನು ನೃತ್ಯದ ವಿಷಯ. ಅದೂ ಕೂಡ ಹಿತಮಿತ ವಾಗಿರಬೇಕು. ಪೂರ್ತಿ ಶಾಸ್ತ್ರೀಯ ನೃತ್ಯವನ್ನು ಸಂಯೋಜಿಸಿದರೆ ಅದು ಗೀತನಾಟಕದ ಬದಲಾಗಿ ಬ್ಯಾಲೆ ಆಗುವ ಅಪಾಯವಿರುತ್ತದೆ. ಪಾತ್ರಗಳ ಭಾವಾಭಿವ್ಯಕ್ತಿಗೆ ಪೂರಕವಾಗುವ ರೀತಿಯಲ್ಲಿ ನೃತ್ಯವನ್ನು ಬಳಸಿಕೊಳ್ಳಬೇಕು. ಕೇವಲ ಸಾಹಿತ್ಯಕೃತಿಯಾಗದ, ಸಂಗೀತದ ಆಧಿಕ್ಯದಿಂದ ಗಾಯನ ಕಚೇರಿಯಾಗದ, ನೃತ್ಯದ ಬಹುಳತೆಯಿಂದ ಬ್ಯಾಲೆಯಾಗದ ಆದರೆ ಇವನ್ನೆಲ್ಲ ಸಮಪ್ರಮಾಣದಲ್ಲಿ ಭಾವಪುಷ್ಟಿ ರಸಪುಷ್ಟಿಗಳಿಗೆ ನೆರವಾಗುವಂತೆ ಕರಾರುವಾಕ್ಕಾಗಿ ಉಪಯೋಗಿಸಿಕೊಂಡು ಪ್ರಯೋಗಿಸುವ ಗೀತನಾಟಕ ಮಾತ್ರ ಯಶಸ್ವೀ ಪ್ರಯೋಗ ವಾಗಬಲ್ಲದು.

ಗೀತನಾಟಕದ ಇನ್ನೊಂದು ಮಹತ್ವದ ಅಂಗವೆಂದರೆ ಅದರ ಹಿಮ್ಮೇಳ ಮತ್ತು ವಾದ್ಯಮೇಳ. ಗೀತೆಗಳನ್ನು ಹಿಮ್ಮೇಳ ಇಂಪಾಗಿ ಹಾಡುತ್ತಿರುವಂತೆಯೇ ಆ ಹಾಡುಗಳಿಗ ನುಸಾರವಾಗಿ ಪಾತ್ರಗಳ ಅಭಿನಯ - ನೃತ್ಯ ಸಾಗಬೇಕು. ಹಾಡುಗಳಿಗೆ ಮತ್ತು ಸನ್ನಿವೇಶಗಳಿಗೆ ಹೆನ್ನೆಲೆಯಾಗಿ ಬಳಸುವ ಸಂಗೀತ ವಾದ್ಯಗಳ ಆಯ್ಕೆ ನಿರ್ದೇಶಕನಿಗೆ ಸೇರಿದ್ದು. ಅವು ಇಂಪಾಗಿರಬೇಕು. ಹಾಡಿನ ರಸ ಭಾವಗಳಿಗೆ ಹೊಂದುವಂಥವಿರಬೇಕು. ಯಾವುದೋ ಒಂದು ವಾದ್ಯ ಪ್ರಧಾನವಾಗಿ ಇನ್ನುಳಿದವುಗಳ ನಾದವನ್ನೆಲ್ಲ ನುಂಗುವಂತಿರಬಾರದು. ಅಲ್ಲದೆ ವಾದ್ಯದ ವಾದನಕಾರರು ತಮ್ಮ ವಿದ್ವತ್ತಿನ ಪ್ರದರ್ಶನದ ಭರಾಟೆಯಲ್ಲಿ ಗೀತದ ಮೇಲೆ ಅನವಶ್ಯಕ ಆಕ್ರಮಣ ಮಾಡಬಾರದು.

ಬಹುಮುಖ ಪ್ರತಿಭೆಯ ಡಾ. ಶಿವರಾಮ ಕಾರಂತರು ಕನ್ನಡ ಗೀತನಾಟಕಗಳ ಪ್ರಥಮ ಲೇಖಕರು. ಕಾರಂತರ ಪ್ರಯೋಗಶೀಲ ಪ್ರವೃತ್ತಿ ಆಪೆರಾ ಮಾದರಿಯ ಗೀತನಾಟಕಗಳ ರಚನೆಗೆ ಕಾರಣವಾಗಿದೆ. ``ಹಲವು ವರ್ಷಗಳಿಂದ ನಾನು ಮಾಡುತ್ತ ಬಂದಿರುವ ಕೆಲವೊಂದು ಪ್ರಯೋಗಗಳ ಫಲವೇ ಗೀತನಾಟಕಗಳು ''[೨] ಎಂದು ಅವರು ಹೇಳಿಕೊಂಡಿದ್ದಾರೆ. ಸ್ವಭಾವತಃ ಕವಿಯಲ್ಲದ ಕಾರಂತರನ್ನು ಈ ರಂಗಪ್ರಕಾರ ಆಕರ್ಷಿಸಲು ಕಾರಣವೇನೆಂದರೆ ಅದರಲ್ಲಿರುವ ಭಾವಾಭಿವ್ಯಕ್ತಿಯ ಸಾಮರ್ಥ್ಯ. ``ಸಾಮಾನ್ಯ ನಾಟಕಗಳು ಕೇವಲ ಸಾಹಿತ್ಯಾತ್ಮಕವಾದುವು. ಅವನ್ನು ನಮ್ಮ ಪೂರ್ವಿಕರು ಶ್ರವ್ಯಕಾವ್ಯ ದೃಶ್ಯಕಾವ್ಯವಾಗಿ ವಿಭಾಗಿಸಿದ್ದಾರೆ. ನಾಟಕದ ಉದ್ದೇಶ ಕೇವಲ ಶ್ರವಣವಾದರೆ ಆ ಕೆಲಸವನ್ನು ಅದಕ್ಕಿಂತ ಸಹಜ ಸುಂದರವಾಗಿ ಕಾದಂಬರಿ ಮಾಡಲಾರದೇ ? ಅದು `ನಾಟಕ ' ಎಂಬ ಹೆಸರಿಗೆ ತಕ್ಕುದಾಗಲು ಚಿತ್ರಣ ರೀತಿಯೂ ಚಿತ್ರಿತ ವಿಷಯಗಳೂ ಕಣ್ಮುಂದೆ ನಲಿದು ನಟಿಸಿ ಮಾತನಾಡುವಂತೆ ಕಂಡರೇನೇ ಸೊಗಸು. ನಾಟಕ ದೃಶ್ಯ ಪ್ರಯೋಗಕ್ಕೆ ಅನುಕೂಲವಾಗಿರಬೇಕೆಂಬುದು ನನ್ನ ಮತ. ''[೩] ಹೀಗೆ ಅಭಿಪ್ರಾಯ

---

೨. ಗೀತನಾಟಕಗಳು - ಪ್ರಸ್ತಾವನೆ- ಪು V ೩. ಅದೇ

ಪಡುವ ಕಾರಂತರು ಯಶಸ್ವೀ ರಂಗಪ್ರಯೋಗದ ಬಗ್ಗೆ ಒತ್ತುಕೊಡುವುದನ್ನು ಗಮನಿಸಬೇಕು. ಸ್ವತಃ ನಟರೂ ಸಂಗೀತಜ್ಞರೂ ನಿರ್ದೇಶಕರೂ ಆಗಿರುವ ಕಾರಂತರು ಹಲವು ಗೀತನಾಟಕಗಳನ್ನು ರಚಿಸಿ ಅವನ್ನೆಲ್ಲ ಸಮರ್ಥರೀತಿಯಿಂದ ಪ್ರಯೋಗಿಸಿ ತೋರಿಸಿರುವುದು ಅವರ ಪ್ರಯೋಗ ಪರಿಣತಮತಿಗೆ ಸಾಕ್ಷಿಯಾಗಿದೆ.

ಕಾರಂತರ ಪ್ರಥಮ ಗೀತನಾಟಕ `ಮುಕ್ತದ್ವಾರ' (೧೯೩೦). ಮಾನವನ ಚರಿತ್ರೆಯಲ್ಲಿ ಉಂಟಾದ ಯುಗಗಳ ಬದಲಾವಣೆ, ಮತಧರ್ಮಗಳ ಆವಿರ್ಭಾವ, ದಾರ್ಶನಿಕರ ಸಂದೇಶ, ಅಂಧ ಶ್ರದ್ಧೆ, ವಿಜ್ಞಾನದ ಹುಟ್ಟು ಮುಂತಾದ ಅಂಶಗಳನ್ನು ಈ ಗೀತನಾಟಕ ಒಳಗೊಂಡಿದೆ. ಕಾಲಪುರುಷನು ಆಗಾಗ ಬಂದು ಕುಣಿದು ಯುಗಗಳ ಬದಲಾವಣೆಯನ್ನು ಸೂಚಿಸುತ್ತಾನೆ. ಯಾಜ್ಞವಲ್ಕ್ಯ, ಕೃಷ್ಣ, ಬುದ್ಧ, ಏಸುಗಳು ಬಂದು ಸಂದೇಶ ಸಾರುತ್ತಾರೆ. ನಂತರ ಪಾದ್ರಿ, ಬ್ರಾಹ್ಮಣ, ಮೌಲ್ವಿ, ಭಿಕ್ಷುಗಳಿಗೆ ಧರ್ಮವು ಒಂದು ಶೋಷಣೆಯ ಮಾರ್ಗವಾಗುತ್ತದೆ. ಇವರು ಧರ್ಮದ ನೈಜ ಸ್ವರೂಪವನ್ನು ವಿಕೃತಗೊಳಿಸಿ ಅಂಧಶ್ರದ್ಧೆಯನ್ನು ಬೆಳೆಸುತ್ತಾರೆ. ತಮ್ಮ ತಮ್ಮ ಮತಗಳನ್ನು ಪ್ರಚಾರಗೊಳಿಸಲು `` ರಕುತದ ಹೊಳೆಗಳ ಹರಿಸುತ ಬರುವರು. ಸುಳ್ಳಿನ ನೀರಿಗೆ ಮೀನಂತಿಹರು ''. ಆಮೇಲೆ ಅಂಧಶ್ರದ್ಧೆಯನ್ನು ತಿರಸ್ಕರಿಸುವ ಮತ್ತು ಸ್ವಸಾಮರ್ಥ್ಯದ ಮೇಲೆ ಇರುವ ವಿಜ್ಞಾನಿ ಬಂದು ಸಾಂಪ್ರದಾಯಿಕ ಧಾರ್ಮಿಕ ನಂಬುಗೆಯ ಬೇರನ್ನೇ ಅಲ್ಲಾಡಿಸುವಂತೆ -

ಧರುಮವದೆಂಬುದು ಕಳ್ಳರ ನೆಲೆಯು
ಮೂಢ ಪ್ರಪಂಚಕೆ ಮಾಯದ ಬಲೆಯು
ಮನದ ಪ್ರವಾಹಕೆ ಹೇಸಿನ ತಡೆಯು

ಎಂದು ಉದ್ಘೋಷಿಸುತ್ತಾನೆ. ಕಾಲಪುರುಷ ಎಲ್ಲವನ್ನು ಅಳಿಸಿಹಾಕಿ ಹಲವು ಬಣ್ಣ ಬೆಡಗುಗಳ ನವಯುಗ ಸೃಷ್ಟಿಸುತ್ತಾನೆ. ಆಗ ಎಲ್ಲರಿಗೂ `` ಮುಕ್ತದ್ವಾರದಾಚೆ ಆನಂದದನುಭವ ಸೂಸುತಿಹುದು'' ಕಾಣುತ್ತದೆ. ಯುಗಯುಗಗಳನ್ನು ಚಾಚಿನಿಂತು ಮಾನವತೆಯ ನೈಜ ಅಸ್ತಿತ್ವದ ನೆಲೆಯನ್ನು ತಿಳಿಸಿಕೊಡುವ ಈ `ಮುಕ್ತದ್ವಾರ '`` ಒಂದು ಭವ್ಯ ಭೌಮ ರೂಪಕ ''[೪]ವಾಗಿದೆ.

`ಬದುಕಬಹುದು ' ಗೀತನಾಟಕವನ್ನು ಯುರೋಪಿನ `ದಿ ಮಿಕಾಡೊ ' ಎಂಬ ಆಪೆರಾ ನೋಡಿ ಅದರ ಪ್ರೇರಣೆಯಿಂದ ರಚಿಸಿರುವುದಾಗಿ ಕಾರಂತರು ಹೇಳಿಕೊಂಡಿದ್ದಾರೆ [೫]. ಅವಧೂತ ನೊಬ್ಬ ತಾನು ಅರ್ಥೈಸಿದ ಚಿರಂತನ ಸತ್ಯವನ್ನು ಸಾರಿ ಹೇಳುತ್ತ ಬರುತ್ತಾನೆ. ಎದುರಿಗೆ ಬಂದ ನವಗುರುವಿಗೆ -

ನೀಲವಾಗಿಹುದು ಆಕಾಶ
ಮುಗಿಲ ಕುಣಿತವು ಮಿಗುವ ತೋಷ
ಬರಿದು ಆಗಿಹುದು ನಿನ್ನ ದೇಶ
ಇದುವೆ ಲಾಲಿಸು ನಿನಗೆ ಉಪದೇಶ

---

೪. ಗೌರೀಶ ಕಾಯ್ಕಿಣಿ - ಗುಣಗೌರವ - ಪು ೭೧

೫. ಗೀತನಾಟಕಗಳು - ಪ್ರಸ್ತಾವನೆ - ಪು viii

ಎಂದು ಉಪದೇಶಿಸುತ್ತಾನೆ. ಇದರಿಂದ ಪುಳಕಿತನಾದ ನವಗುರು `ನಿಜದ ಸತ್ಕವ ಒರೆವ
ಬನ್ನಿರೆಂದು ಜಗದ ಜನರನ್ನು ಕರೆಯುತ್ತಾನೆ. ಫಲ್ಗುಣ ಹೇಮಂತರು ಬರುತ್ತಾರೆ. ಫಲ್ಗುಣ
ತನ್ನ ಬೆಳೆದುನಿಂತ ಮಗಳ ಮದುವೆ ಮಾಡುವ ಚಿಂತೆ. ಹೇಮಂತನಿಗೆ ತನ್ನ ಆಸ್ತಿ ಮೂರು
ಯೋಜನೆ. ಇಬ್ಬರೂ ಹೊರಡುತ್ತಾರೆ.

ಫಲ್ಗುಣ ಅಳಿಯನನ್ನು ಹುಡುಕಿ ಬೇಸರಿಸುತ್ತಾನೆ. ಯಾರೂ ಸಿಗುವುದಿಲ್ಲ. ಇತ್ತ
ಫಲ್ಗುಣನ ಮಗಳಾದ ಚೈತ್ರಳು ತನ್ನ ಪ್ರಿಯತಮ ವಸಂತನನ್ನು ನಿರೀಕ್ಷಿಸುತ್ತಿದ್ದಾಳೆ. ಫಲ್ಗು
ತನ್ನ ಮಗಳನ್ನು ಸ್ವೀಕರಿಸುವಂತೆ ನವಗುರುವನ್ನು ಕೇಳಿಕೊಳ್ಳುತ್ತಾನೆ. ಅಷ್ಟರಲ್ಲಿ ವಸಂ
ಬಂದು ಚೈತ್ರವನ್ನು ವರಿಸುತ್ತಾನೆ. ಇವನ್ನು ಆಕ್ಷೇಪಿಸಿದ ನವಗುರುವಿಗೆ ಚೈತ್ರ

ಆಸೆ ಬಿಟ್ಟಿಹ ಜನಕೆ ನರಕವಿಹುದು
ಆಸೆ ಉಳಿಸಿಹ ಜನರು ಬದುಕಬಹುದು

ಎಂದು ಹೇಳುತ್ತಾಳೆ. ಚೈತ್ರ ವಸಂತರು `ಆನಂದ ರಾಜ್ಯವನ್ನು ಆಹ್ಲಾದ ರಾಜ್ಯವನ್ನು,
ಎಂದು ಹಾಡುತ್ತಿರುವಂತೆ ನಾಟಕ ಮುಗಿಯುತ್ತದೆ.

`ಕಿಸಾಗೋತಮಿ ' ಬುದ್ಧನಿಂದ ಅರಿವನ್ನು ಪಡೆದ ಒಬ್ಬ ಮುಗ್ಧ ಸಾಧ್ವಿಯ ಕತೆ
ಕಾರಂತರ ಗೀತನಾಟಕಗಳಲ್ಲೆಲ್ಲ ಇದು ಹೆಚ್ಚು ಸಲ ಪ್ರಯೋಗಗೊಂಡು ಜನಪ್ರಿಯವಾಗಿದ
ಮಗುವನ್ನು ಕಳೆದುಕೊಂಡು ಅಳುತ್ತಿರುವ ಗೋತಮಿಯನ್ನು ಬುದ್ಧನ ಶಿಷ್ಯ ಆನಂದ ಬುದ್ಧ
ಹತ್ತಿರ ಕರೆತರುತ್ತಾನೆ. ತನ್ನ ಮಗುವನ್ನು ಬದುಕಿಸಿಕೊಡಬೇಕೆಂದು ಗೋತಮಿ ಬುದ್ಧನನ
ಕೇಳಿಕೊಳ್ಳುತ್ತಾಳೆ. ಬುದ್ಧ ``ಸಾವು ಕಾಣದ ಮನೆಯ ಸಾಸುವೆಯ ತಾರವ್ವ '' ಎಂದು ಹೇ
ಕಳಿಸುತ್ತಾನೆ. ಗೋತಮಿ ಮನೆ ಮನೆ ತಿರುಗಿ ಸಾಸುವೆ ಕೇಳುತ್ತಾಳೆ. ಸಾವು ಕಾಣದ ಮ
ಒಂದೂ ಸಿಗುವುದಿಲ್ಲ. ನಿರಾಶೆಯಿಂದ ಮರಳಿ ಬಂದ ಅವಳಿಗೆ ಬುದ್ಧನು

ಸಾವಿಲ್ಲದೆಡೆಯಿಲ್ಲ ನೋವಿಲ್ಲದೆಡೆಯಿಲ್ಲ
ಸಾವು ಜೀವಕೆ ನಂಟು ಅದನು ತಪ್ಪಿಸ ಬಲ್ಲ.
ಸಾವಿನೊಳು ಮರುಗದಿರು
ಜೀವವೊಳು ಹಿಗ್ಗದಿರು

ಎಂದು ಸಾರ್ವಕಾಲಿಕ ಸತ್ಯವನ್ನು ತಿಳಿಸಿ ಸಮಾಧಾನ ಹೇಳುತ್ತಾನೆ. ಹೀಗೆ ಈ ಕಿಸಾಗೋತ
ಸಾವಿನ ಸ್ವರೂಪವನ್ನು ಒಂದು ಸರಳ ಕಥೆಯ ಮೂಲಕ ಅತ್ಯಂತ ಮನೋಜ್ಞವಾಗಿ ಚಿತ್ರಿಸಿ

`ಸೋಮಿಯ ಸೌಭಾಗ್ಯ ' ದಕ್ಷಿಣ ಕನ್ನಡ ಜಿಲ್ಲೆಯ ಹೊಲೆಯರ ಜೀವನದ ಸ
ಹೆಗೆಯಲಾದ ಗೀತನಾಟಕ. ಇದರಲ್ಲಿ ಹೆಚ್ಚಾಗಿ ತುಳು ಜಾನಪದ ಗೀತೆಗಳ ಮಾದರಿಗಳ
ಅಳವಡಿಸಲಾಗಿರುವುದರಿಂದ ವಸ್ತು - ಭಾಷೆ - ಭಾವ - ಗೇಯತೆಗಳ ಅನ್ಯೋ
ಸಾಮರಸ್ಯವನ್ನು ಗಮನಿಸಬಹುದು. ಸೋಮಿ ಗುರುವನ ಮಗಳು. ಬಾಲ್ಯದ ಒಡನಾ
ಚಿನಿಯನೊಂದಿಗೆ ಅವಳ ಪ್ರೇಮ ಬೆಳೆದಿದೆ. ಅವರ ಗುಪ್ತ ಪ್ರೇಮವನ್ನರಿಯದ ಗುರು
ಸೋಮಿಯನ್ನು ಬಿತನಿಗೆ ಮದುವೆ ಮಾಡಿಕೊಡುತ್ತಾನೆ. ಚಿನಿಯ ವೃಥೆಪಡುವನು.

ಮರುದಿನ ದುಃಖದಲ್ಲಿ ಮುಳುಗುತ್ತಾಳೆ. ಆತ ಅವಳನ್ನು "ಮಾಮ್ಮ ಸೊಂಪಿ ಗಾಯಮ್ಮ ಇಮ್ಮ ಪರ್ಮಾಕೂ ನಗಲೆಯಲ್ಲಿ" ಎಂದು ದುಂಬಾಲು ಬಿದ್ದು ಕೇಳುತ್ತಾನೆ. ಮಿಕಿಸೆಯಿಂದನ್ನು ಹೆಕ್ಕಿ ಗಂಡನ ಕೈಗಿಟ್ಟು ತನ್ನ ಅಳಲನ್ನೆಲ್ಲ ತೋಡಿಕೊಂಡು ಅಕ್ಕ ಳ. ಸೋಮಿ ಚಿಣ್ಣರ ಬಾಲ್ಯದಾಟಗಳು ಮದುವಾಗುವ ವರ್ಣನೆಗಳು ಇದರ ಅಕರ್ಷಕ ಗಳಾಗಿವೆ.

'ಯಾರೋ ಅಂದರು' ಜನರ ನಾಲಿಗೆಗೆ ಆಹಾರವಾದ ಸುದ್ದಿ ಯಾವ ಯಾವ ರೂಪ ವಿವಗಳನ್ನು ಪಡೆದು ಪ್ರಸಾರಗೊಳ್ಳುತ್ತದೆಯೆಂಬುದನ್ನು ಅರ್ಥವತ್ತಾಗಿ ತಿಳಿಸುತ್ತದೆ.

ಚೋಮು- ಯಾರೋ ಅಂದರು
ದೂಮ -ಏನಂತೆ ?
ಚೋಮು -ನೀರಿಗೆ ಹೋಗಾಗ ಸೂರಕ್ಕ ಪೊಸ್ಸೆ
ಜಾರೀ ಬಿದ್ದಳಂತೆ ! ನೀರಿಗೆ
ಜಾರೀ ಬಿದ್ದಳಂತೆ

ಹೀಗೆ ಸುದ್ದಿ ಹರಡುತ್ತ ಹರಡುತ್ತ -

ಬೈಲಿನ ಸೂರಕ್ಕ ಪೊಸ್ಸೆ
ಜಾರೀ ಆದ್ಕಂತೆ ಗಂಡ
ಹಾರೀಲಿ ಕೊಂದನಂತೆ
ಹೆಂಡ್ತಿನ ಕೊಂದವ ಬೀರ್ಣಣ್ಣನಂತೆ
ಬಿರ್ಮನ ತಿಂದವ ಸುಬ್ರಾಯನಂತೆ

ಯು ಏಳೆಸೊ ಆಕಾರ ಪಡೆದುಕೊಳ್ಳುತ್ತದೆ. ಜನರು ಯಾರ ಬಗ್ಗೆ ಹೀಗೆ ಮಾತಾಡುತ್ತಿ ವರೋ ಆ ದಂಪತಿಗಳು ಸಿಗುತ್ತ ಬಂದಾಗ ಬಿಲ್ಲಿರೂ ದಂಗಾಗುತ್ತಾರೆ. ಇದರಲ್ಲಿ ಕಥೆಯ ಬಿಚ್ಚಿ ತಕ್ಕಂತಿರುವ ಕಿರು ಸಂಭಾಷಣೆಗಳು ಚುರುಕಾಗಿವೆ.

'ಕತ್ತಾನ ಸಾಂತ್ರಿ' ಮತ್ತು 'ಲವಕುಶ' ಪೌರಾಣಿಕ ವಸ್ತುವಿನ ಪುನರಾವರ್ತನೆಗಳೆಂದು ಗುರುತಿಸಬಹುದು. ಮೂಲ ಕತೆಯಲ್ಲಿ ವ್ಯತ್ಯಾಸವೇನೂ ಗೋಚರಿಸುವುದಿಲ್ಲ. ಆದರೆ ಪ್ರಯೋಗದ ದೃಷ್ಟಿಯಿಂದ 'ಲವಕುಶ' ವಿಶಿಷ್ಟವಾದುದು. ಇದನ್ನು ಮೂಕಾಭಿನಯವಾಗಿ, ಛಾಯಾಭಿನಯವಾಗಿ ಮತ್ತು ಮಾತಿನಿಂದ ಹಾಡಿ ಅಭಿನಯಿಸಿ ಹೀಗೆ ಬೇರೆ ಬೇರೆ ರೀತಿಯಿಂದ ಪ್ರಯತ್ನಿಸಿರುವುದಾಗಿ ಪ್ರಯೋಗಶೀಲತೆಯನ್ನು ಸಂತರು ಹೇಳಿದ್ದಾರೆ. 'ಬಿಡ್ಡೆಬ್ಬರು' ಸಿದ್ಧಾರ್ಥನು ರಾಜ್ಯಭಾರಕ್ಕೆ ತ್ಯಜಿಸಿ ತಪೋವನಾಭ್ಯಾಸಕ್ಕೆ ಅಣಿಯಾದ ಘಟನೆಯನ್ನು ಸರಳ ಸುಂದರವಾಗಿ ಚಿತ್ರಿಸುತ್ತದೆ. 'ಸುತಿಯಂತೆ' ಎಂಬ ಪದಗಳಿಂದ ಸಿದ್ಧಾರ್ಥನ ವಿಷಯ ಸಂಬಂಧವನ್ನು ತಿಳಿಸುತ್ತದೆ. ಜನರಿಗೆ ಒಮ್ಮೆ ಸಂತೋಷವನ್ನು ಮಾಡಿಸುವ ಇದು ಮತ್ತೊಮ್ಮೆ ಅವರ ಬೇಸರವನ್ನು ಸಾಕಷ್ಟಾಗಿಸುತ್ತದೆ. "ಮಕ್ಕಳ ಮುತಿಗೆ ಕೆ ಬಡಿಸುವ ಮಳೆ ಮತ್ತೆನ್ನೆ" ಅವರ ಬೇಸರವನ್ನು ಸಾಕಷ್ಟಾಗಿಸುತ್ತದೆ. "ಮಕ್ಕಳ ಮುತಿಗೆ ಕೆ ಬಡಿಸುವ ಮಳೆ ಮತ್ತೆನ್ನೆ" ಎಂದು ವ್ಯಾಖ್ಯಾನಿಸಿಕೊಂಡಾಗ ದೈವ ಸಮಾನವಾಗಿ ಬರುವ ನಟ್ಟಿನ ಪೂಜೆಯ ಮಾಯಮಂತ್ರ ಎಂದು ಸೂಚಿಸುತ್ತದೆ.

ಕಾರಂತರು ತಮ್ಮ ಗೀತನಾಟಕಗಳಿಗೆ ಆಯ್ಕೆ ಮಾಡಿಕೊಂಡಿರುವ ವಸ್ತು ವೈವಿಧ್ಯಮಯವಾಗಿದೆ. ಹುಟ್ಟು ಸಾವು ಬದುಕು ಇತಿಹಾಸ ನಿಸರ್ಗ ಧರ್ಮ - ಹೀಗೆ ಎಲ್ಲವನ್ನೂ ವಿಷಯ ವಸ್ತುವನ್ನಾಗಿಸಿದ್ದಾರೆ. ಕಾರಂತರ ರಚನೆಗಳಲ್ಲಿ ಗೀತನಾಟಕದ ಖಚಿತತೆ ಸ್ಪಷ್ಟವಾಗಿ ಗೋಚರಿಸುತ್ತದೆ. ಏಕೆಂದರೆ ಅವರ ರಚನೆಗಳೆಲ್ಲ ಪ್ರಯೋಗದ ಉದ್ದೇಶದಿಂದ ರಚನೆಗೊಂಡಂಥವು. ಎಲ್ಲವೂ ಯಶಸ್ವಿಯಾಗಿ (ಕೆಲವು ಹೆಚ್ಚು ಸಲ) ರಂಗಭೂಮಿಯ ಮೇಲೆ ಪ್ರಯೋಗಗೊಂಡಿವೆ. `` ಈ ಎಲ್ಲ ನಾಟಕಗಳನ್ನು ರಂಗಭೂಮಿಗೆ ತಂದುದರಿಂದ ಅವು ಕೇವಲ ಆರಾಮಾಸನದ ಕನಸುಗಳೆಂದು ಯಾರೂ ತಿಳಿಯಬಾರದು ''[೭] ಎಂದು ಕಾರಂತರು ಹೇಳಿದುದನ್ನು ಗಮನಿಸಬೇಕು.

ಕಾರಂತರು ಮೂಲತಃ ಕವಿಗಳಲ್ಲ. ಆದರೆ ಅವರ ಗೀತನಾಟಕಗಳ ಹಾಡುಗಳನ್ನು ನೋಡಿದಾಗ ಅವರಲ್ಲಿ ಕವಿತ್ವದ ಪ್ರತಿಭೆ ಅಡಗಿರುವುದು ಕಂಡುಬರುತ್ತದೆ. ಸಾಹಿತ್ಯಿಕ ದೃಷ್ಟಿಯಿಂದ ಅಷ್ಟೊಂದು ಗಮನಾರ್ಹವಲ್ಲದ ಈ ಗೀತನಾಟಕಗಳಿಗೆ ನಾಟಕೀಯ ದೃಷ್ಟಿಯಿಂದ ಸಾಕಷ್ಟು ಮಹತ್ವವಿದೆ. ಪಾತ್ರ ಸನ್ನಿವೇಶಕ್ಕೆ ತಕ್ಕಂತೆ ಹಾಗೂ ಸಂಗೀತಕ್ಕೆ ಅಳವಡುವಂತೆ ಹಾಡುಗಳನ್ನು ರಚಿಸುವ ಜಾಣ್ಮೆ ಕಾರಂತರಲ್ಲಿದೆ.

ತಮ್ಮ ಗೀತನಾಟಕಗಳ ಸಂಗೀತದ ಬಗ್ಗೆ ಕಾರಂತರಿಗೆ ತಮ್ಮವೇ ಆದ ಕೆಲವು ವಿಚಾರಗಳಿವೆ. ಅವರು ಸಂಗೀತವನ್ನು ಮಾರ್ಗ- ದೇಸಿ, ಉತ್ತರಾದಿ- ದಕ್ಷಿಣಾದಿ ಈ ಹಂಗು ಇಲ್ಲದೆ ಮುಕ್ತವಾಗಿ ಬಳಸಿದ್ದಾರೆ. ಮಾರ್ಗಸಂಗೀತದ ರಾಗಗಳನ್ನು ಬಳಸುವಾಗ ಶಾಸ್ತ್ರೀಯತೆಯ ಬಿಗಿಯನ್ನು ಮೀರಿರುವುದು ಮತ್ತು ಪಾತ್ರಗಳಿಗೆ ತಕ್ಕಂತೆ ಜಾನಪದ ಲಯಗಳನ್ನು ಉಪಯೋಗಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಕಾರಂತರು ತಮ್ಮ ಗೀತನಾಟಕಗಳಿಗೆ ತಾವೇ ಸಂಗೀತ ಜೋಡಿಸಿ ಪರಿಣಾಮಕಾರಿಯಾಗಿ ಹಾಡಿ ಪ್ರಯೋಗಿಸಿದ್ದಾರೆ. ``ಈ ಗೀತ ನಾಟಕಗಳನ್ನು ಮಾತ್ರೆಗಳನ್ನೆಣಿಸಿ ತಾಳಕ್ಕೆ ತಕ್ಕಂತೆ ಬಡಿದು ಜಜ್ಜಿ ತುಂಡರಿಸಲು ಬಂದರೂ ಆ ರೀತಿ ಹಾಡುವುದರಿಂದ ವಿಚಾರ ಭಾವನೆಗಳ ಪ್ರತಿಪಾದನೆ ಮಾತ್ರ ಆಗುವಂತೆ ಕಾಣೆ. ''[೮] ಕಾರಂತರ ಈ ಮಾತು ಗೀತನಾಟಕದಲ್ಲಿರಬೇಕಾದ ಸಂಗೀತದ ಸ್ವರೂಪವೇನೆಂಬುದನ್ನು ಸ್ಪಷ್ಟಗೊಳಿಸುತ್ತದೆ. ಕಾರಂತರ ಪ್ರಯೋಗಗಳನ್ನು ಪ್ರಯೋಗ ಸಿದ್ಧತೆಗಳನ್ನು ಸಮೀಪದಿಂದ ಬಲ್ಲವರಾದ ಶ್ರೀ ಶ್ರೀನಿವಾಸ ಉಡುಪ ಅವರು ``ಅವರು (ಕಾರಂತರು) ಹಾಡಿಕೆಯಲ್ಲಿ ರಸಭಾವಗಳಿಗೆ ಮಾತ್ರ ಪ್ರಾಧಾನ್ಯತೆ ಕೊಟ್ಟು ರಾಗ ತಾಳಗಳನ್ನು ಸ್ಥೂಲರೂಪದಲ್ಲಿ ಮಾತ್ರ ಹೊಂದಿಸಿಕೊಳ್ಳುತ್ತಾರೆ. ಗೀತಗಳನ್ನು ಸ್ವರಸಂಯೋಜನೆಗೆ ಒಳಪಡಿಸುವುದಿಲ್ಲ. ಭಾವಕ್ಕನುಗುಣವಾದ ರಾಗವನ್ನು ಆರಿಸಿಕೊಂಡ ಬಳಿಕ ಆ ರಾಗದ ಭಾವ ಕೆಡದಂತೆ ತಮ್ಮ ಮನೋಧರ್ಮಾನುಸಾರವಾಗಿ ತಾವು ಹಾಡುತ್ತಾರೆ. ನಟರೂ ಹಾಡಬೇಕೆಂದು ನಿರೀಕ್ಷಿಸುತ್ತಾರೆ''[೯] ಎಂದು ಹೇಳಿರುವ ಮಾತುಗಳು ಗಮನಾರ್ಹವಾಗಿವೆ.

---

೬. ಗೀತನಾಟಕಗಳು -ಪ್ರಸ್ತಾವನೆ - ಪು VIII
೭. ಗೀತ ನಾಟಕಗಳು - ಪ್ರಸ್ತಾವನೆ - ಪು VIII
೮. ಕಾರಂತರ ಪ್ರಪಂಚ - ಪು - ೨೯೪ - ಗುಂಡ್ಮಿ

ಡಾ. ಪುತಿನ ಅವರು ತಮ್ಮ ಕವಿತೆಗಳಿಂದ ಕನ್ನಡ ಕಾವ್ಯವನ್ನು ಶ್ರೀಮಂತಗೊಳಿಸಿದಂತೆ ಹಲವು ಶ್ರೇಷ್ಠ ದರ್ಜೆಯ ಗೀತನಾಟಕಗಳನ್ನೂ ನೀಡಿ ಈ ಪ್ರಕಾರಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ಅವರ `ಹಂಸದಮಯಂತಿ ಮತ್ತು ಇತರ ರೂಪಕಗಳು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಿದೆ. ಈ ಸಂಗ್ರಹದ `ಹಂಸ ದಮಯಂತಿ' ಸುಂದರ ರಚನೆಯಾಗಿದೆ. ನಳ ದಮಯಂತಿಯರ ಕತೆ ಹಳೆಯದಾದರೂ ಪುತಿನ ಅವರು ಅದರಲ್ಲಿ ನಾವೀನ್ಯತೆ ಮೂಡಿಸಿದ್ದಾರೆ. ನಳನಿಗೆ ಕೇಳಿ ಬರುವ ಹಂಸಧ್ವನಿಯನ್ನು

ನೀರಿನೆಳೆಯ ತಂಬೂರಿ ಮೀಟುತ
ಶ್ರುತಿಯ ನುಡಿಸುವ ಪಾದಗಳೆಲ್ಲಿ
ಕೊರಳ ಬಳುಕಿನೊಳೆ ತಾಳವ ನಂಕಿಸಿ
ನಡೆದು ತೋರ್ವ ಬಿನದಗಳೆಲ್ಲಿ

ಹೀಗೆ ನಾನಾ ವಿಧವಾಗಿ ಚಿತ್ರಿಸಿರುವ ಪುತಿನ ಅವರ ಕಲ್ಪಕತೆ ಅಮೋಘವಾಗಿದೆ. ``ಈ ಹಂಸಧ್ವನಿಯಲ್ಲಿ ಮಾಧುರ್ಯವಿದೆ. ಅಚ್ಚೊದ ಸರಸ್ಸಿನ ಸ್ವಚ್ಛತೆಯಿದೆ. ಹಂಸವಿಹಾರದ ಸ್ವಚ್ಛಂದವಿದೆ''[೯]. ನಳನು ಒಂದು ಹಂಸವನ್ನು ಹಿಡಿದುಕೊಳ್ಳುತ್ತಾನೆ. ಅದು ``ಗಂಡು ಜಾತಿಯೊಳಿಲ್ಲ ನಿನ್ನ ತೆರ '' ಎಂದು ನಳನನ್ನು ಹೊಗಳಿದಾಗ : ಅವನು ``ಎಲೆ ಹಂಸೆ ನನ್ನ ಸಮನಿಹರೆಂಬೆಯಾ ಹೆಂಗಳೊಳಗೆ''ಎಂದು ಪ್ರಶ್ನಿಸುತ್ತಾನೆ. ಹಂಸ ದಮಯಂತಿಯ ಸೌಂದರ್ಯ ವರ್ಣಿಸುತ್ತದೆ. ನಳನು ಮನಸೋಲುತ್ತಾನೆ. ಆ ಪ್ರಣಯ ದೂತ ಹಂಸ ದಮಯಂತಿಯಲ್ಲಿಗೆ ಬರುತ್ತದೆ. ``ಬಿಳಿಮುಗಿಲು ಬೆಳ್ಳಿ ಮುಗಿಲು ಹರಣವ ಕೊಂಡಿಹುದೋ '' ಎಂಬಂತಿದ್ದ ಅದನ್ನು ದಮಯಂತಿ ಹಿಡಿದು ಕೊಳ್ಳುತ್ತಾಳೆ. ಆಗ ಹಂಸ ``ಎಷ್ಟು ಒರಟೇ ನಿನ್ನ ಕೈ. ಆತನದು ಎಷ್ಟು ಮೃದು '' ಎಂದು ಸೂಚ್ಯವಾಗಿ ನಳನ ವಿಷಯ ಪ್ರಸ್ತಾಪಿಸುತ್ತದೆ. ದಮಯಂತಿಯ ಕುತೂಹಲವನ್ನು ಇನ್ನಷ್ಟು ಕೆರಳಿಸಿ

ಹರಳಿನ ಬಿಳುಪನು ಹೂವಿನ ಮೆಲಪನು
ಒಂದೆ ಹಿಡಿಯೊಳೆ ಹಿಡಿದವನ
ಶಕ್ತಿಪುಷ್ಟಿ ಸೌಷ್ಟವ ಸರ್ವಾಂಗದಿ
ಕಟ್ಟುವಡೆದ ಮೈಕಟ್ಟಿನವನನು
ಕಂಡೆ ಕಮಲಮುಖಿ

ಹೀಗೆ ನಳನನ್ನು ವರ್ಣಿಸುತ್ತದೆ. ``ನೀನೀ ಪರಿ ನಲ್ನುಡಿವ ಪುರುಷ ಅವನಾರೇ, ಎಲ್ಲಿಹನೇ '' ಎಂದು ಕೇಳಿದ ದಮಯಂತಿಗೆ ನಳನ ವಿವರ ತಿಳಿಸಿದ ಹಂಸ ತನ್ನ ಗುಂಪಿನೊಂದಿಗೆ ಆಕಾಶಕ್ಕೆ ಹಾರುತ್ತದೆ.

`ಹರಿಣಾಭಿಸರಣ '- ಸೀತೆ ಸ್ವರ್ಣಮೃಗಕ್ಕೆ ಮನಸೋತ ಸನ್ನಿವೇಶದ ನಿರೂಪಣೆಯಾಗಿದೆ. ತೀರ ಸಣ್ಣದೊಂದು ಘಟನೆ ಮುಂದೆ ಎಂತಹ ದುರಂತಕ್ಕೆ ಕಾರಣವಾಯಿತೆಂಬ ಅಭಿಪ್ರಾಯವನ್ನು ಕವಿ ``ಶ್ರೀ ರಾಮನ ಸತಿಗಾಗಲು ಮಾಯಾ ಮೃಗದೀಹೆ ಶ್ರೀ ರಾಮಾಯಣವಾಯಿತು ಮುನಿಕರುಣೆಯ ಗಾಹೆ'' ಎಂದು ಸಾಂದೀ ಶ್ಲೋಕದಲ್ಲಿ ಹೇಳಿದ್ದಾರೆ.

---

೯. ಚಂಪ್ರಶೇಖರ ಐತಾಳ -ಪ್ರಬುದ್ಧ ಕರ್ನಾಟಕ -ಚಿನ್ನಪ ಸಂಚಿಕೆ ಸಾಹಿತ್ಯ ಸಂಪುಟ -ಪು. ೧೨೨೭

ಗೋದಾವರಿ ತೀರದಲ್ಲಿ ಉಲ್ಲಸಿತ ಮನಸ್ಕಳಾಗಿ ನಿಂತಿರುವ ಸೀತೆಯು ಕಣ್ಣಿಗೆ ಸ್ವರ್ಣಮೃಗ ಗೋಚರಿಸುತ್ತದೆ. ರಾಮನನ್ನು ಕರೆದು ತೋರಿಸುತ್ತಾಳೆ. ಅವರಿಬ್ಬರೂ ಅದಕ್ಕೆ ಮನಸೋಲುತ್ತಾರೆ. ರಾಮನು ಲಕ್ಷ್ಮಣನ ಸಂಶಯ ಎಚ್ಚರಿಕೆಗಳಿಗೆ ಕಿವಿಗೊಡದೆ ಸ್ವರ್ಣ ಮೃಗವನ್ನು ಹಿಡಿದು ತರಲು ಮುಂದಾಗುತ್ತಾನೆ.

ಹಿಡಿಯೆ ದೊರೆಯದಿರೆ ನಡುವೆನು ಬಾಣವ
ಒಡೆವೆನಿದರ ಮರ್ಮ
ತರುವೆ ಸ್ವರ್ಣ ಚರ್ಮ

ಎಂದು ಸೀತೆಗೆ ಭರವಸೆ ನೀಡಿ ಹೋಗುತ್ತಾನೆ. ಲಕ್ಷ್ಮಣ ``ಪೊರೆಯಲೆಮ್ಮನು ನಮ್ಮ ಪೂರ್ವಜರ ಸುಕೃತ '' ಎಂದು ಹಾರೈಸುತ್ತಾನೆ. ರಾಮನ ಆರ್ತನಾದ ಕೇಳಿದ ಸೀತೆ ಗಾಬರಿಗೊಂಡು ಲಕ್ಷ್ಮಣನನ್ನು ಕಳಿಸಲು ಪ್ರಯತ್ನಿಸುತ್ತಾಳೆ. ಅವನು ಏನೇ ಸಮಾಧಾನ ಹೇಳಿದರೂ ``ಇಂಥ ವೇಳೆಯನರಿಯೇ ಬನಕೆ ಬಂದೆ ! ಅಣ್ಣ ಸಾವೊಡೆ ನಿನಗೆ ನಾ ದೊರೆವೆನೆಂದೆ '' ಎಂದು ಆಡಬಾರದ್ದನ್ನೆಲ್ಲ ಆಡುತ್ತಾಳೆ. ನಿರ್ವಾಹವಿಲ್ಲದೆ ಲಕ್ಷ್ಮಣ ಅತ್ತ ಹೋದಕೊಡಲೆ ಸನ್ಯಾಸಿ ವೇಷದ ರಾವಣ ಬರುತ್ತಾನೆ. ಸೀತೆ ``ಅತಿಥಿ ನೀ ದೇವಸಮ '' ಎಂದು ಅವನನ್ನು ಸತ್ಕರಿಸುತ್ತಾಳೆ. ಅವಳ ಮುಗ್ಧ ಮಾತು ಸತ್ಕಾರಗಳು ರಾವಣನ ಮನದಲ್ಲಿ ಕನಿಕರ ಹುಟ್ಟಿಸುತ್ತವೆ.

ಎಂತವಳ ಲಾವಣ್ಯ ಉನ್ಮಾದಗೊಳಿಸುತಿವೆ
ಇಲ್ಲದಿರೆ ಕನಿಕರಕೆ ತಕ್ಕಳಿವಳು
ಈಕೆ ಕುಗ್ಗಿರುವಂದೆ ಈ ಪರಿಯೊಳಿಸವುತಿರೆ
ಹರ್ಷದೊಳಗೀ ಚೆಲುವೆಗೆಂಥ ಹುರುಳು

ಎಂದು ಭಾವಿಸುತ್ತಾನೆ. ಅವನ ಕನಿಕರ ಮತ್ತು ಉನ್ಮಾದಗಳ ದ್ವಂದ್ವ ಮನಸ್ಥಿತಿಯನ್ನು ಪ್ರತಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ತನ್ಮಯತೆಯಿಂದ ಸೀತೆಯ ಸೌಂದರ್ಯ ಸವಿಯುತ್ತಿರು ರಾವಣನನ್ನು ಅವಳು ``ಏಕೆ ಮುನಿ ಹುಣ್ಣು ಮೆಲ್ಲುವುದ ಬಿಟ್ಟೆ ? '' ಎಂದು ಕೇಳುತ್ತಾಳೆ ಅವಳ ಮುಗ್ಧತೆಯ ಮುಂದೆ ಅವನ ಕಪಟ ಕರಗಿ ನೀರಾಗುತ್ತದೆ. ತನ್ನ ನೈಜ ರೂಪದಿಂದಲೇ ಅವಳನ್ನು ಅಪಹರಿಸುತ್ತಾನೆ. ಇಲ್ಲಿ ರಾವಣನ ಪಾತ್ರದ ನಿರೂಪಣೆಗೆ ಹೊಸಕಳೆ ಬೆರೆತಿದೆ.

`ವಸಂತ ಚಂದನ ' ವಸಂತ ಋತುವಿನ ಸೌಂದರ್ಯವನ್ನು ವಿವರಿಸುವ ಕೃತಿ. ಇ ಕಥೆಯಲ್ಲ. ಇದು ಭಾವುಕ ಸಹಚರಿ ಪ್ರೇಮಿಗಳು ಹಳ್ಳಿಗರು ಹಾಡುವ ಹಾಡುಗಳ ಸಂಗ್ರಹ ದುತ್ತ ಭಾವುಕ ವಸಂತದ ಸೊಬಗನ್ನು ವಿವಿಧ ರೀತಿಯಲ್ಲಿ ವಿವರಿಸುತ್ತಾನೆ. ಈ ವಸಂತೋತ್ಸವ ಕಾರಣವಾದ ಚಂದನೋತ್ಸವವನ್ನು

ವಸಂತ ಚಂದನ
ನಂದನ ಗಂಧವ ನಿಂದಿಸುತಿದೆ ಆ
ನಂದಮೊಳಜಲಿಯೊಳು ಕೊಳುವಲಿನ

ಎಂದು ವರ್ಣಿಸಲಾಗಿದೆ.

ಬಾನ ಬಣ್ಣವ ಮಾಗಿಸಿ ಶಶಿ
ಮೂಡುತಿಹನಿಗೊ
ಸಂಜೆಹೂವ ಬೆಲ್ಲಿಸಾರ
ನಮ್ರವಾಗಿ ಹಾರೆ ತೋರೆ
ಸರಸದಿರುಳ ಕರವ ಹಿಡಿದು
ತೋರುತಿಹನಿಗೊ

ದು ಚಂದ್ರೋದಯದ ವರ್ಣನೆ. ಎಲ್ಲರೂ ಈ ಲೌಕಿಕ ಆನಂದವನ್ನು ಸವಿಯುತ್ತ ಅಲೌಕಿಕ ನುಭವದಿತ್ತರಕ್ಕೆ ಧಾಪಿಸುತ್ತ `` ಮೇಲಿನ ಮೇಲೆ ತೇಲುವಿಂಥ ಕಾಲ ಬಾರದೆ " ಎಂದು ನರ್ಮಿಸುತ್ತಾರೆ. ಬೆಳದಿಂಗಳಲ್ಲಿ `` ತನ್ನ ಮಂದಸ್ಮಿತವನ್ನು ಹರಡುತ್ತಿರುವ ಸಕಲಾಂತರ್ಯಾಮಿ ಯನ್ನು ಕಂಡು " ನಲಿಯುತ್ತಾರೆ.

`ವರ್ಷ -ಹರ್ಷ ' ದ ವಸ್ತುವಿನ ಬಗ್ಗೆ ಪ್ರತಿನ ಅವರು `` ಮಳೆಗಾಲದಲ್ಲಿ ನಾವು ನೋಡುವಲೆಗಳ ಕಾಡುಗಳಲ್ಲಿ ಅಲೆದಾಡಿದರೆ ಕಾಣುವ ಚೆಂದದ ನೋಟಗಳನ್ನೂ ನುಭವಿಸುವ ಆನಂದವನ್ನು ಈ ಸಂಗೀತ ಚಿತ್ರ ರೂಪಿಸುತ್ತದೆ " ಎಂದು ಹೇಳಿದ್ದಾರೆ. ಶ್ರಾವಣ ಭಾದ್ರಪದ ಮಾಸಗಳಲ್ಲಿ ಭಾವುಕನ ಮನಸ್ಸು ಅನುಭವಿಸುವ ನಾನಾ ವಿಧದ ನುಭಾವಗಳ ಚಿತ್ರಣ ಇದರಲ್ಲಿದೆ. ಇಲ್ಲಿಯ ತರುಣ ತರುಣಿಯರ ಸಂಭಾಷಣೆಗಳಲ್ಲಿ ನವುರು ಹಾಸ್ಯ ಒಡಮೂಡಿದೆ. ಮಳೆಯಲ್ಲಿ ನೆನೆದು ಬಂದ ತರುಣನನ್ನು ಸತ್ಕರಿಸಿದ ತರುಣಿ ಒಂದು ಕೇಡಿಯೋ ಇದ್ದರೆ ಒಳ್ಳೆಯದಿತ್ತೆಂದು ತಿಳಿಸುತ್ತಾಳೆ.

ಕೈಗೆ ಕೈ ಹಾಕಿ
ಮೈಗೆ ಮೈ ಸೋಕಿ
ನಮ್ಮೊಳಗೆ ನೀನು ಬಾರೆ
ಹರಣವೊಂದಾಗಿ ಸೇರೆ
ಆಗ ಕೀಳಿಸುವೆ ರೇಡಿಯೋ

ಎಂದು ತರುಣ ಭಾವುಕತೆಯಿಂದ ಹೇಳುತ್ತಾನೆ. ಅವರು ಮೋಡದ ಮೇಲೇರಿ ತಿಳಿಬಾನು ಸುಳಿಗಾಳಿಗಳಲ್ಲಿ ದಿನದಗಳನ್ನನುಭವಿಸಿ ಕಿಳಗಿಳಿಯುತ್ತಾರೆ. ಜೋಗಿಯೊಬ್ಬ ಏಕದಾರಿ ಹಿಡಿದು ಹಾಡುತ್ತಾನೆ. ಕಿನ್ನರರು ಗೌರಿ ಗಣಪತಿ ಎಲ್ಲರೂ ಬಂದು ಸೇರುತ್ತಾರೆ. `` ಈ ವರ್ಷ ಹರ್ಷದಿಂದ ಸುಹೃದಗಕ್ಕೆ ಹರ್ಷವರ್ಷ " ಎಂಬ ಹಾರ್ಯಕೆಯೊಂದಿಗೆ ಈ ರೂಪಕ ಮುಗಿಯುತ್ತದೆ.

`ಶರದ್ವಿಲಾಸ ' ಶರತ್ಕಾಲದ ವೈಭವದ ಚಿತ್ರಣ. ಇದರಲ್ಲಿಯೂ ಭಾವುಕ ಹಾಗೂ ಸಹಚರಿಯರೇ ಪ್ರಧಾನ ಪಾತ್ರಗಳು. `` ಕೆರೆಯಲ್ಲಿ ಚೆಂದಾವರೆ ತೊರೆಯಲ್ಲಿ ತಿಳಿನೀರು, ತಿಳಿಬಾನಲ್ಲಿ ಬಳಿಮೋಡ, ಮರೆಯಲ್ಲಿ ಬನ, ಬನಕ್ಕೆ ಹಸುರಿನ ಪೆಂಪು, ಹೋರು ಹೊದರಿಗೂ ಹೂವು, ಹೊಲಗದ್ದೆಗಳಲ್ಲಿ ಪೈರಿನ ಸಿರಿ, ಶರತ್ಕಾಲದ ಇರುಳಂತೂ ಸರಿಯೇ ಸರಿ " ಎಂದು ಭಾವುಕನು ವರ್ಣಿಸಿದರೆ ಸಹಚರಿಯೂ ಹಿತವಾಗಿರುವ ಶರತ್ಸಮಯವನ್ನು ಮೆಚ್ಚಿ ಹೊಗಳುತ್ತಾಳೆ.

`ದೀಪಲಕ್ಷ್ಮಿ ' ದೀಪಾವಳಿಯನ್ನು ಕುರಿತು ರಚಿಸಿದ ಸಂಗೀತ ಚಿತ್ರ. ಇವಲ್ಲದೆ `ರಾಮೋದಯ ''ಸೀತಾಪರಿಣಯ 'ಇವುಗಳ ಕತೆ ಸುಪ್ರಸಿದ್ಧವಾದುದು. ಪುತಿನ ಅವರ `ಗೋಕುಲ ನಿರ್ಗಮನ ' ಗಾತ್ರದಲ್ಲಿ ದೊಡ್ಡದಾಗಿರುವ ಕೃತಿಯಾಗಿದೆ. ಇದರಲ್ಲಿ ಅಕ್ರೂರಾಗಮನ ಮತ್ತು ವೇಣು ವಿಸರ್ಜನೆ ಎಂದು ಎರಡು ಭಾಗಗಳಿವೆ. ತಿಂಗಳ ಬೆಳಕು ವೃಂದಾವನದಲ್ಲಿ ಹಬ್ಬಿದೆ. ಕೃಷ್ಣನು ನಾಳೆ ಮಧುರೆಗೆ ಹೋಗುವವನಿದ್ದಾನೆ. ಕೊನೆಯದಾಗಿ ಮೈ ಮರೆತು ಕೊಳಲೂದುತ್ತಿದ್ದಾನೆ. ಅವನ ವೇಣುನಾದಕ್ಕೆ ಮನಸೋತ ಗೋಪಾಲಕರು, ಗೋಪಿಕಾ ಸ್ತ್ರೀಯರು, ಅಕ್ರೂರ ಎಲ್ಲರೂ ಕೃಷ್ಣನನ್ನು ಹುಡುಕಿ ಕಂಡು ಧನ್ಯರಾಗುತ್ತಾರೆ. ರಾಧೆ ``ಅಡು ಬಾ ಮುದವೂಡು ಬಾ ಭಯದೂಡು ಬಾ ಒಲವೆ '' ಎಂದು ಹಾಡುತ್ತಾಳೆ. ಕೃಷ್ಣ ``ಎದೆಗೆ ಬರುತಿದೆ ಮುದ, ಕುಣಿದಲ್ಲದೆ ನಾ ತಾಳೆನಿದ '' ಎಂದು ರಾಧೆಯೊಂದಿಗೆ ಮೈಮರೆತು ಕುಣಿಯುತ್ತಾನೆ. ಬಲರಾಮ ಎಷ್ಟು ಎಚ್ಚರಿಸಿದರೂ ಕೃಷ್ಣನ ಹಾಡು ಕುಣಿತಗಳು ನಿಲ್ಲುವುದಿಲ್ಲ. ಅವನ ಕೈಯಲ್ಲಿರುವ ಕೊಳಲನ್ನು ಕಿತ್ತೆಸೆಯುತ್ತಾನೆ. ಆಗ ಕೃಷ್ಣ ``ನನ್ನಂಗವೊಂದನೀ ಬಿವುಟಿ ತೆಗೆದಂದದೊಳು ಕೊಳಲ ಕಿತ್ತೊಗೆದೆಯಣ್ಣ '' ಎಂದು ಹಂಬಲಿಸುತ್ತ `` ಕೊಳಲು ಬನದೊಳಗಿರಲಿ ಹೋಗಿ ಬರುವೆ ಮುರಲಿ '' ಹೀಗೆ ಹೇಳಿ ಮಧುರೆಗೆ ಹೊರಡುತ್ತಾನೆ. ರಾಧೆ ಕೃಷ್ಣನ ಕೊಳಲನ್ನು ಕೈಯಲ್ಲಿ ಹಿಡಿದುಕೊಂಡು ದುಃಖಿಸುತ್ತಾಳೆ.

`ಶಬರಿ ' ರಾಮಭಕ್ತಿಗೆ ಪ್ರತೀಕವಾಗಿರುವ ಗೀತರೂಪಕ. ರಾಮನ ಬರವನ್ನು ಹಾರೈಸಿ ಕಾದು ಕುಳಿತ ಮುಗ್ಧ ಭಕ್ತಳಾದ ಶಬರಿ ರಾಮನನ್ನು ಕಂಡು ಅತ್ಯಂತ ಸಂತೋಷದಿಂದ ಹಾಡಿ ಕುಣಿಯುತ್ತಾಳೆ.

ಬ್ರಹ್ಮರಾಮದೊಳೆನ್ನ ವಿರಾಮ
ಪರಂಧಾಮವೇ ನನ್ನಯ ಧಾಮ
ಜಪ ತೀರಿತು ತಪ ತೀರಿತು
ಕಣ್ಗಳವಚ್ಚಿದ ನೀ ಪ್ರಮಾಣ

ಎಂದು ಹೇಳುತ್ತ ರಾಮನೆದುರಿಗೆ ಪ್ರಾಣ ಬಿಡುತ್ತಾಳೆ.

`ಅಹಲ್ಯೆ ' ಗುಣ ಮತ್ತು ಗಾತ್ರಗಳೆರಡರಲ್ಲಿ ಹಿರಿದಾದ ರಚನೆ .ಪುರಾಣದ ಅಹಲ್ಯೆಯನ್ನು ಕವಿ ಭಾವಪೂರ್ಣವಾಗಿ ಚಿತ್ರಿಸಿದ್ದಾರೆ. ಉಗ್ರ ತಪಸ್ಸಿನಲ್ಲಿ ಮೈಮರೆತ ಗೌತಮನ ಎಳೆವರೆಯ ಮುಗ್ಧ ಪತ್ನಿ ಅಹಲ್ಯೆ ಪತಿಪ್ರೇಮ ವಂಚಿತಳಾಗಿದ್ದಾಳೆ. ಗೌತಮನ ತಪಸ್ಸು ಕೆಡಿಸಲು ಬಂದ ಇಂದ್ರ ಅಹಲ್ಯೆಯ ರೂಪಕ್ಕೆ ಮರುಳಾಗುತ್ತಾನೆ. ಅವಳ ಮನಸ್ಸೂ ಚಂಚಲವಾಗುತ್ತದೆ. ``ಇಂದ್ರನ ವ್ಯಾಮೋಹವನ್ನು ತನ್ನ ಸತೀತ್ವದ ಜ್ವಾಲೆಯಿಂದ ಸುಟ್ಟು ಬಿಡುವ ಶಕ್ತಿ ಅಹಲ್ಯೆಗೆ ಉಳಿದಿಲ್ಲ. ಭೋಗಾಪೇಕ್ಷೆಯ ಹಸಿ ಅವಳ ಹೃದಯದಲ್ಲಿ ಇದ್ದಿ ಇತ್ತು. ಪತಿಯ ಉಪೇಕ್ಷೆ ಅದನ್ನು ಇನ್ನಷ್ಟು ಹೆಚ್ಚಿಸಿತು. ಇದರ ಜೊತೆಗೆ ಸಮಸ್ತರೂ ಅರ್ಚಿಸಿ ಆರಾಧಿಸುತ್ತಿದ್ದ ಇಂದ್ರನ ಸಿರಿ ಅವಳ ಮನಸ್ಸನ್ನು ಮರುಳುಗೊಳಿಸುತ್ತದೆ ''[೧೦] ಅವಳಿಗೆ ತನ್ನ ತಪ್ಪಿನ ಅರಿವಾದಾಗ

೧೦. ತೀನಂಶ್ರೀ : ಅಹಲ್ಯೆ - ಪ್ರಸ್ತಾವನೆ -ಪು xi

ಮುಟ್ಟಲೊಡೆಯುವ ನೀರ ಹೊಳೆಗುಳ್ಳಿಯಂತೆ
ಮೋದವೆಂತಾಯಿತಹ ಅದೆ ವಿಭ್ರಾಂತೆ

ಂದು ಪಶ್ಚಾತ್ತಾಪ ಪಡುತ್ತಾಳೆ. ಗೌತಮನ ಶಾಪಕ್ಕೆ ಗುರಿಯಾಗಿ ಮುಂದೆ ರಾಮನಿಂದ ಶಾಪಮುಕ್ತಿ ಪಡೆಯುತ್ತಾಳೆ. ಆಗ ಧನ್ಯತೆಯಿಂದ

ಬಯಸುವೆನಾ ಗಂಗೆಯ ತೆರ
ಪದದಿ ಕರಗಿ ಹರಿಯೆ
ಇಲ್ಲದಿರಲು ಹಗುರವಾಗಿ
ಕಂಬನಿಂತೆ ಸರಿಯೆ.

ಹೀಗೆ ಹಾಡುತ್ತಾಳೆ.`ದೋಣಿ ಬಿಸದ 'ಪ್ರಕೃತಿ ದೇವಿಯ ನಿರ್ಲಿಪ್ತತೆಯನ್ನು ೋರಿಸುವ ಗೀತನಾಟಕ. ಅನಾಥ ಯುವಕನೊಬ್ಬ ಸಾವನ್ನು ಅರಸುತ್ತ ಹೋದಾಗ ಲದೇವಿಯರು ``ಸಮ್ಮಾಲಿಂಗನ ಬಲು ಇಂಪು , ಪ್ರಾಣಕೆ ತಂಪು '' ಎಂದು ಕರೆಯುತ್ತಾರೆ. ಅವನು ತನ್ನ ಪ್ರೇಯಸಿಯೊಂದಿಗೆ ಸುಖವಾಗಿರುವಾಗ ಶುಭ ಹಾರೈಸುತ್ತಾರೆ. ಬದುಕಿನ ದೋಣಿ ಯಣದ ಸಂದರ್ಭದಲ್ಲಿ ಮುಳುಗಿಸುವ ತೇಲಿಸುವ ಶಕ್ತಿ ಹೆಣ್ಣಿಗಿರುವುದನ್ನು ಇಲ್ಲಿ ಸಿಚ್ಕ್ಕವಾಗಿ ಹೇಳಲಾಗಿದೆ. `ಕವಿ' ವಿಶಿಷ್ಟ ರಚನೆಯಾಗಿದೆ. ಇಲ್ಲಿ ಕವಿ ಮತ್ತು ನಿಸರ್ಗ ಿಳೆಯರಾಗಿದ್ದಾರೆ. ಪ್ರಕೃತಿಯ ಮಡಿಲಲ್ಲಿ ಹೆಚ್ಚಿನ ವೇಳೆ ಕಳೆಯುವ ಕವಿಯ ಬಗ್ಗೆ ಹೆಂಡತಿಗೆ ಿಸಮಾಧಾನವಿದೆ. ಅವಳ ಪಾತ್ರ ಅನುಕಂಪ ಹುಟ್ಟಿಸುವಂತಿದೆ. `ವಿಕಟ ಕವಿ ವಿಜಯ ' ಪುತಿನ ಅವರ ದಿವ್ಯ ದೃಷ್ಟಿಯನ್ನು ಎತ್ತಿ ತೋರಿಸುವ ಕೃತಿಯಾಗಿದೆ. ಸ್ವಾತಂತ್ರ್ಯ ನಂತರದ ಬದಲಾವಣೆಗಳನ್ನು ಒಂದು ಸಂಸ್ಥಾನದ ರಾಜಕೀಯದ ಹಿನ್ನೆಲೆಯಲ್ಲಿ ಪರಿಣಾಮಕಾರಿಯಾಗಿ ತಿಳಿಸಿದ್ದಾರೆ. ` ಸತ್ಯಾಯನ ಹರಿಶ್ಚಂದ್ರ'ದಲ್ಲಿ ಹರಿಶ್ಚಂದ್ರನ ಕತೆಯನ್ನು ರಸಮಯ ಗೀತೆಗಳ ರೂಪದಲ್ಲಿ ವಿವರಿಸಲಾಗಿದೆ.

ಮೂಲತಃ ಕವಿಯಾಗಿರುವ ಪುತಿನ ಅವರ ಗೀತನಾಟಕದಲ್ಲಿ ಕಾವ್ಯಾಂಶದ ಸಮೃದ್ಧತೆಯನ್ನು ಕಾಣಬಹುದಾಗಿದೆ. " ಪುತಿನ ಅವರ ಕಾವ್ಯಗಳಲ್ಲಿ ಕವಿತಾಶಕ್ತಿಯೊಡನೆ ದಿವ್ಯ ದರ್ಶನವೊಂದು ಸಂಗಮವಾಗಿ ಬೆಳುದಿಂಗಳಿನಂತಹ ಭಾವ ಹೂವಿನಂತಹ ಮಾತು ತಂಗಾಳಿಯಂತಹ ಸನ್ನಿವೇಶಗಳು ಸೃಷ್ಟಿಯಾಗಿವೆ "[೧೧] ಈ ಅಭಿಪ್ರಾಯ ಪುತಿನ ಅವರ ಗೀತನಾಟಕಗಳಿಗೂ ಅನ್ವಯಿಸುತ್ತದೆ. ಪ್ರತಿಭಾವಂತ ಕವಿಗಳಾಗಿರುವ ಪುತಿನ ಗೀತಗೋವಿಂದ, ಭಾಗವತ, ಕಾಳಿದಾಸ, ಭವಭೂತಿಗಳನ್ನು ಅಳವಾಗಿ ಅಭ್ಯಸಿಸಿದ್ದಾರೆ. ಅಂಥ ಅಧ್ಯಯನ ಫಲಗಳು ಅವರ ಗೀತನಾಟಕಗಳಲ್ಲಿ ಸ್ಪಷ್ಟವಾಗಿ ಗೋಚರಿಸಿವೆ. ಭಾವಪೂರ್ಣ ಸನ್ನಿವೇಶಗಳನ್ನು ಸಂಯೋಜಿಸುವಲ್ಲಿ, ಚುಟುಕು ಮಾತಿಗೆ ಅಪೂರ್ವ ಕಾವ್ಯಾಂಶವನ್ನು ತೊಡಿಸುವುದರಲ್ಲಿ ಾವನ್ನೆಲ್ಲ ಕಾಣಬಹುದು. ಪುತಿನ ಅವರ ಪದಲಾಲಿತ್ಯ ತುಂಬಾ ವೈಶಿಷ್ಟ್ಯಪೂರ್ಣವಾದುದು. ಾವೆಲ್ಲವುಗಳಿಂದಾಗಿ ಅವರ ಗೀತ ನಾಟಕಗಳು ಕನ್ನಡದ ಅಪರೂಪದ ಆಸ್ತಿಗಳೆನಿಸಿವೆ. ಸಂಸ್ಕೃತ ಸಾಹಿತ್ಯದ ಗಮನಾರ್ಹ ಅಂಶಗಳನ್ನು ಸ್ವೀಕರಿಸಿಯೂ ಸಾಂಪ್ರದಾಯಿಕವಾಗದ, ಅಪೇರಾದ ಪ್ರಭಾವಕ್ಕೆ ಒಳಗಾಗಿದ್ದರೂ ಕೃತಕ ಅನುಕರಣೆಯಾಗದ ಪಕ್ಕಾ ಕನ್ನಡತನದ ಚೌಕಟ್ಟನ್ನು ಅವರು

---

೧೧. ತ ಸು ಶ್ಯಾಮರಾಯ - ಕನ್ನಡ ನಾಟಕ - ಪು - ೪೩೮

ಗೀತನಾಟಕಗಳಿಗೆ ನೀಡಿದ್ದಾರೆ. ಕನ್ನಡದಲ್ಲಿ ಅವರಂಥ ಗೀತನಾಟಕಗಳನ್ನು ಯಾರೂ ಬರೆಯಲಿಲ್ಲ. ಅವರೇ ಮೊದಲು, ಅವರೇ ಕೊನೆ.

ಪುತಿನ ಅವರ ಗೀತನಾಟಕಗಳನ್ನು ಗೀತಸಂಗ್ರಹಗಳೆಂದು ಕರೆದರೆ ತಪ್ಪಿಲ್ಲ. ಅವರು ಮೊದಲು ಗೀತನಾಟಕಗಳನ್ನು ಬರೆದುದು ಆಕಾಶವಾಣಿಗಾಗಿ. ಅವರ ಈ ರಚನೆಗಳು ಪ್ರಸಾರ ಪ್ರಚಾರ ಪಡೆದುದು ಆಕಾಶವಾಣಿಯಿಂದಲೇ ಎಂದು ಪುತಿನ ಹೇಳಿದ್ದಾರೆ. [೧೨] ಇವರ ಬಹಳಷ್ಟು ಗೀತನಾಟಕಗಳಿಗೆ ಸಂಗೀತ ಸಂಯೋಜನೆ ಮಾಡಿರುವ ಹಿರಿಯ ಸಂಗೀತಗಾರ ಡಾ. ವೀಣೆ ದೊರೆಸ್ವಾಮಿ ಅಯ್ಯಂಗಾರರು ಪುತಿನ ಅವರ ಗೀತನಾಟಕಗಳಿಗೆ "ಸಾಹಿತ್ಯ ಕೃತಿಯಾಗಿ ಮಾತ್ರವಲ್ಲದೆ ಸಂಗೀತ ಕೃತಿಯಾಗಿಯೂ ಉಳಿದುಕೊಳ್ಳುವ ಸಾಮರ್ಥ್ಯವಿದೆ "[೧೩] ಎಂದು ಹೇಳಿದ್ದಾರೆ. ಪುತಿನ ಅವರು ``ಒಂದು ಹಾಡನ್ನು ಮಾಡುವ ಮೊದಲು ಸಂಗೀತದ ಮಟ್ಟುವನ್ನು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು ಅನಂತರ ಅದಕ್ಕೆ ಹೊಂದುವ ಸಾಹಿತ್ಯವನ್ನು ಕಲ್ಪಿಸುತ್ತೇನೆ "[೧೪] ಎನ್ನುತ್ತಾರೆ. ಅವರ ಬಹಳಷ್ಟು ಗೀತನಾಟಕಗಳ ಪಠ್ಯಗಳಿಗೆ ಸಂಗೀತಶಾಸ್ತ್ರೀತ್ಯಾ ಸ್ವರಪ್ರಸ್ತಾರ ಹಾಕಿ ಮುದ್ರಿಸಲಾಗಿದೆ. ಈ ಎಲ್ಲ ಅಂಶಗಳು ಪುತಿನ ಅವರ ಗೀತನಾಟಕಗಳು ಸಂಗೀತ ಪ್ರಧಾನ ರಚನೆಗಳೆಂಬುದನ್ನು ಸಾರಿಹೇಳುತ್ತವೆ. ಅವು ರಂಗಭೂಮಿಯ ಮೇಲೆ ಪ್ರಯೋಗಗೊಂಡ ಬಗ್ಗೆ ಅವರಿಗೇ ಸಂಶಯವಿದೆ. ಆದ್ದರಿಂದ ``ಪುತಿನ ಅವರ ಕಾವ್ಯನಾಟಕಗಳು ಅತ್ಯಂತ ಪ್ರಿಯ ಮಧುರವಾದ ಶ್ರವ್ಯಕಾವ್ಯಗಳಾಗಿಯೇ ಉಳಿದುಬಿಟ್ಟಿವೆ "[೧೫] ಎಂಬ ಅಭಿಪ್ರಾಯ ಸೂಕ್ತವಾಗಿದೆ. ಕಾರಂತರ ಗೀತನಾಟಕಗಳು ಕಾವ್ಯಾಂಶದಲ್ಲಿ ಸೊರಗಿ ರಂಗಪ್ರಯೋಗದಲ್ಲಿ ಪುಷ್ಟವಾಗಿ ಕಂಡಿವೆ. ತದ್ವಿರುದ್ಧವಾಗಿ ಪುತಿನ ಅವರ ಗೀತನಾಟಕಗಳು ಸಂಗೀತನಿಷ್ಠ ಗೀತಗುಚ್ಛಗಳಾಗಿ ರಂಗಪ್ರಯೋಗಕ್ಕೆ ಅಳವಡದೆ ಶ್ರಾವ್ಯಮಟ್ಟದಲ್ಲಿ ನಿಂತಿವೆ. ``ಪುತಿನ ಅವರ ಗೀತನಾಟಕಗಳಲ್ಲಿ ಸಾಹಿತ್ಯಾಂಶ ಕಾವ್ಯಾಂಶ ಗೀತಾಂಶ ಹೆಚ್ಚು, ನಾಟಕಾಂಶ ಬಹಳ ಕಡಿಮೆ. ಕೆಲವು ಕಡೆಗಳಲ್ಲಿ ನಾಟಕಾಂಶ ಇಲ್ಲವೇ ಇಲ್ಲ ಎನ್ನುವಷ್ಟು ಸೊರಗಿರುವುದೂ ಉಂಟು. ಕಾರಂತರು ಗೀತನಾಟಕಗಳನ್ನು ರಂಗಭೂಮಿಯ ಮೇಲೆ ಪ್ರಯೋಗಿಸುವುದಕ್ಕೆಂದೇ ಬರೆದಿದ್ದಾರೆ. ರಂಗಭೂಮಿಯ ಆಗುಹೋಗುಗಳನ್ನು ನಟನಾಗಿ ನಿರ್ಮಾಪಕನಾಗಿ ನಿರ್ದೇಶಕನಾಗಿ ಅರಿತಿದ್ದ ಕಲಾವಿದರವರು. ಪುತಿನ ಅವರಾದರೊ ರಂಗಭೂಮಿಯ ಪರಿವೆ ಇಲ್ಲದ ಅದರ ಯಾವ ವಾಸನೆಯನ್ನೂ ತಿಳಿಯದೆ ಕಾವ್ಯಮಯವಾಗಿ ಗೀತನಾಟಕ ರಚಿಸಿದ ಕವಿ ಎಂದು ಹೇಳಿದರೆ ಇವರಿಬ್ಬರ ವ್ಯತ್ಯಾಸ ಸ್ಪಷ್ಟವಾಗುತ್ತದೆ "[೧೬]

ಕಾರಂತ ಮತ್ತು ಪುತಿನ ಅವರು ಪ್ರಾರಂಭಿಸಿದ ಗೀತನಾಟಕ ಪರಂಪರೆ ಕನ್ನಡದಲ್ಲಿ ಸಮೃದ್ಧವಾಗಿ ಬೆಳೆಯಲಿಲ್ಲ. ಆದರೂ ಹಲವರು ಈ ಕ್ಷೇತ್ರದಲ್ಲಿ ಕೃಷಿ ಮಾಡದೇ ಬಿಟ್ಟಿಲ್ಲ. ಸಿದ್ಧಯ್ಯ ಪುರಾಣಿಕ, ಕುರ್ತಕೋಟಿ, ಮಾಸ್ತಿ, ಗೌರೀಶ ಕಾಯ್ಕಿಣಿ ಮುಂತಾದವರ ರಚನೆಗಳು ಗಮನಾರ್ಹವೆನಿಸಿವೆ. ಸಿದ್ಧಯ್ಯ ಪುರಾಣಿಕರು ರಚಿಸಿದ ಗೀತನಾಟಕಗಳು ಹೈದ್ರಾಬಾದ್ ಮತ್ತು ಬೆಂಗಳೂರು ಆಕಾಶವಾಣಿಗಳಿಂದ ಪ್ರಸಾರಗೊಂಡಿವೆ.

---

೧೨. ಹಂಸದಮಯಂತಿ ಮತ್ತು ಇತರ ರೂಪಕಗಳು : ಅರಿಕೆ - ಪು vii
೧೩. ಅದೇ ಪು. xii
೧೪. ಅದೇ ಪು. xii
೧೫. ಡಾ. ಎಚ್. ಕೆ. ರಂಗನಾಥ - ಕರ್ನಾಟಕ ರಂಗಭೂಮಿ - ಪು - ೩೮೧
೧೬. ಎಸ್. ಅನಂತ ನಾರಾಯಣ - ಕನ್ನಡ ನಾಟಕ : ಪರಂಪರೆ ಮತ್ತು ಪ್ರಯೋಗ - ಪು - ೧೫೨

`ರಜತರೇಖೆ ',`ಗಿರಿಜೆಯ ಗೆಲವು ', `ಮಧುಮಹೋತ್ಸವ ',` ಮೋಹನ ಮಂತ್ರ' ಮೊದಲಾದ ಗೀತನಾಟಕಗಳಲ್ಲಿ ಕಾಮ್ಯಾನಂದರ ಕಾವ್ಯ ಪ್ರತಿಭೆ ನಿಚ್ಚಳವಾಗಿ ಗೋಚರಿಸಿದೆ. ಇಲ್ಲಿಯ ಹಾಡುಗಳು ಸ್ವತಂತ್ರ ಭಾವಗೀತೆಗಳಂತೆ ಆಕರ್ಷಕವಾಗಿವೆ. ಕುರ್ತುಕೋಟಿಯವರು `ಸ್ವಪ್ನದರ್ಶ',`ಶಬರಿ ',`ರಾಮಭಾರ ', `ಸ್ವಪ್ನಶಾಕುಂತಲಾ ',`ಅಭಿಸಾರಿಕೆ ' ಮೊದಲಾದ ಗೀತನಾಟಕಗಳನ್ನು ಬರೆದಿದ್ದಾರೆ. ಅವರು ಸರಳ ರಗಳೆಯಲ್ಲಿ ರಚಿಸಿರುವ ಪದ್ಯಭಾಗಗಳು ರಾಗಸಂಯೋಜನೆಗೆ ಅಷ್ಟೊಂದು ಅನುಕೂಲವಾಗಿಲ್ಲ. ಅಲ್ಲದೆ ಕೇವಲ ಸರಳರಗಳೆಯೊಂದೇ ಇರುವುದರಿಂದ ಏಕತಾನತೆ ಉಂಟಾಗುತ್ತದೆ. ಮಾಸ್ತಿಯವರ `ತಿರುಪಾಣಿ' ಗೀತನಾಟಕ ಪ್ರಕಾರಕ್ಕೆ ಸೇರಬಹುದಾದ ರಚನೆಯಾಗಿದೆ. ಗೌರೀಶ ಕಾಯ್ಕಿಣಿಯವರು `ರಂಗ ಪಂಚಮಿ ' `ಕಾಮದಹನ' `ಚೈತ್ರ ಚಿತ್ರ'' ಪರ್ಷಾಗಮನ '' ರಾಮನವಮಿ '' ಯಶೋಧರಾ' ಮುಂತಾದ ಗೀತನಾಟಕಗಳನ್ನು ರಚಿಸಿದ್ದಾರೆ. ಇವರಲ್ಲದೆ ಮುಗಳಿ, ಕಟ್ಟೀಮನಿ, ಜಿ. ಎಸ್. ಸಿದ್ಧಲಿಂಗಯ್ಯ, ಬಿ. ಸಿ. ರಾಮಚಂದ್ರ ಶರ್ಮ, ಕೆ. ವಿ. ಸುಬ್ಬಣ್ಣ, ಬಿ. ಎ. ಸನದಿ, ಎನ್. ಸುಬ್ಬರಾವ್, ಸಮೇತನಹಳ್ಳಿ ರಾಮರಾವ್ ಮೊದಲಾದವರು ಬರೆದಿರುವ ಗೀತನಾಟಕಗಳು ಗಮನಾರ್ಹವಾಗಿವೆ.

ಪ್ರವಾಸ ಸಾಹಿತ್ಯ

- ಜೆ. ಎಸ್. ಕಾಪ

ಚೀನದ ಪ್ರವಾಸಿ ಹುಯೆನತ್ಸಾಂಗನು ಭಾರತಕ್ಕೆ ಬಂದಿದ್ದುದು ಒಂದು ಸಾಹಸ
ಕಥೆ. ಅದು ಏಳನೆಯ ಶತಮಾನ ; ಉತ್ತರ ಭಾರತದಲ್ಲಿ ಹರ್ಷವರ್ಧನ ವೈಭವದಿಂ
ರಾಜ್ಯವಾಳುತ್ತಿದ್ದ ಕಾಲ. ಅಲ್ಲಿಗಲ್ಲಿಗೆ ರಾಜರು ಆಳುತ್ತಿದ್ದ. ಒಂದು ರಾಜ್ಯದಿಂದ ಇನ್ನೊಂದ
ರಾಜ್ಯಕ್ಕೆ ಹೋಗುವಾಗ ಆದಳಿತ ವ್ಯವಸ್ಥೆಯ ತೊಡಕುಗಳಿಗೆ ಸಿಕ್ಕಿಹಾಕಿಕೊಳ್ಳಬೇಕಾಗಿದ್ದ. ರಾ
ಮಾರ್ಗಗಳ ಕೊರತೆಯಿದ್ದ. ಕಾಡುಮೇಡುಗಳನ್ನು, ನೀರಿಲ್ಲದ ಸಹರಾಗಳನ್ನು ದಾ
ಬರಬೇಕಾಗಿದ್ದ. ಕಳ್ಳಕಾಕರರ, ಕಾಡುಜನರ ಕೈಗೆ ಬೀಳಬೇಕಾಗಿದ್ದ ಸಂದರ್ಭದಲ್
ಹುಯೆನತ್ಸಾಂಗ ಮಾಡಿದ ಪ್ರವಾಸ ಅದ್ಭುತವೂ ರೋಮಾಂಚಕಾರಿಯೂ ಆಗಿದೆ. ಆತ
ಕಾಶ್ಮೀರವನ್ನು ಪ್ರವೇಶಿಸಿ, ಜಲಂಧರ, ಕುಲು, ಮಥುರಾ ನೋಡಿಕೊಂಡು ಹರ್ಷವರ್ಧನ
ರಾಜಧಾನಿಯಾದ ಕನೋಜಕ್ಕೆ ಬಂದು, ಅಲ್ಲಿಯ ವೈಭವವನ್ನು ಕಣ್ಣಾರೆ ಕಂಡ
ಗಂಗಾನದಿಯನ್ನು ದಾಟಿ ಬೌದ್ಧ ಧರ್ಮದ ಪವಿತ್ರ ಸ್ಥಳಗಳಲ್ಲೊಂದಾಗ ಶ್ರಾವಸ್ತಿಗೆ ತಲುಪ
ಪೂರ್ವದಲ್ಲಿ ಅನು ಭವಿಸಿದ ಒಂದು ಘಟನೆಯನ್ನು ವಿವರಿಸುತ್ತಾನೆ. ದುರ್ಗಾಮಾತೆ
ಪೂಜಕರಾದ ಸಮುದ್ರಗಳ್ಳರು ಹುಯೆನ್‌ತ್ಸಾಂಗ ದೋಣಿಯಲ್ಲಿ ಗಂಗಾನದಿಯನ
ದಾಟುತ್ತಿರುವ ಸಮಯದಲ್ಲಿ ಆ ವರ್ಷ ತಾವು ದುರ್ಗಾಮಾತೆಗೆ ಅರ್ಪಿಸಬೇಕಾದ ಬಲಿ
ಬಗ್ಗೆ ಯೋಚನೆ ಮಾಡುತ್ತಾರೆ. ಎದುರಿಗೆ ಕಂಡ ಹುಯೆನ್‌ತ್ಸಾಂಗನನ್ನು ನೋಡಿ ತಮ್ಮೊ
ಮಾತಾಡಿ ಕೊಳ್ಳುತ್ತಾರೆ. ``ಈತ ಸುಂದರನಿದ್ದಾನೆ, ಇವನನ್ನು ಬಲಿಕೊಡೋಣ, ಖಂ
ನಮಗೆ ಅದೃಷ್ಟ ತರೆಯುತ್ತಿದ '' ಎಂದುಕೊಳ್ಳುತ್ತಾರೆ. ಈ ಸಂಗತಿ ತಿಳಿದ ಹುಯೆನ್‌ತ್ಸಾ
ಹೇಳುತ್ತಾನೆ. ``ನೀವು ನನ್ನನ್ನು ಕೊಲ್ಲಬಹುದು. ಆದರೆ ಇದು ನಿಮಗೆ ಅದೃಷ್ಟವ
ತರುವುದಿಲ್ಲ. ದುರಾದೃಷ್ಟವನ್ನೇ ತರುತ್ತದೆ. ನಾನು ಬಹುದೂರದಿಂದ ಬೋಧಿವೃಕ್ಷದ ಕೆ
ಕುಳಿತು ಬುದ್ಧನನ್ನು ಪೂಜಿಸಲು ಬಂದಿದ್ದೇನೆ..... ನಾನು ಇಂಡಿಯಾಕ್ಕೆ ಯಾವ ಆಸೆ ಹೊ
ಬಂದಿದ್ದೇನೋ ಅದಿನ್ನೂ ಪೂರೈಸಿಲ್ಲ. ಮಹಾನುಭಾವರುಗಳೇ, ನೀವು ನನ್ನ ಶರೀರವ
ಕೊಲ್ಲಬಹುದು, ಆದರೆ ಇದು ದುರಾದೃಷ್ಟವನ್ನೇ ತಂದಿತು ಎಂಬ ಹೆದರಿಕೆ ನನಗಿದೆ
ಮಾತಿಗೆ ಆ ಕಳ್ಳರು ಬೆಲೆ ಕೊಡಲಿಲ್ಲ. ಆಗ ಹುಯೆನ್‌ತ್ಸಾಂಗ ನೀತಲ್ಲಿಯೇ ಪ್ರಾರ್ಥ
ಮಾಡಿದ, ಇದ್ದಕ್ಕಿದ್ದಂತೆ ಬಿರುಗಾಳಿ ಬೀಸಿತು. ನದಿಯಲ್ಲಿ ಅಲ್ಲೋಲಕಲ್ಲೊ
ಉಂಟಾಯಿತು. ಸಮುದ್ರಗಳ್ಳರು ಭಯಭೀತರಾದರು. ಆದರೆ ಹುಯೆನ್‌ತ್ಸಾಂಗ
ಪ್ರಾರ್ಥನೆಯಲ್ಲಿ, ಧ್ಯಾನದಲ್ಲಿ ತನ್ಮಯನಾಗಿದ್ದ. ಅವನ ಮುಖ ಶಾಂತವಾಗಿತ್ತು, ಪ್ರ
ವಾಗಿತ್ತು. ಸಮುದ್ರಗಳ್ಳರು ಆ ಸ್ಥಿತಿಯಲ್ಲಿ ಆತನ ಪ್ರಸನ್ನತೆಗೆ ಬೆರಗಾಗಿ ಹುಯೆನ್‌ತ್ಸಾಂ

ಮಿಯಾಚಿಸಿ, ಪೊರೆಹೊಕ್ಕರು. ತಾವು ಸುಲಿಗೆ ಮಾಡಿದ್ದನ್ನು ಮರಳಿ ಕೊಟ್ಟರು. ಕೆಲವರು ಮನ ಅನುಯಾಯಿಗಳೂ ಆದರು. ಇದು ಕತೆಯಂತೆ, ಚಲನಚಿತ್ರದ ಸನ್ನಿವೇಶದಂತೆ ಆದರೂ ಹುಯೆನ್‌ತ್ಸಾಂಗನ ಪ್ರವಾಸದ ಒಂದು ಅನುಭವಕಥನ.

ಈಚೆಗೆ ಪೂರ್ಣಚಂದ್ರ ತೇಜಸ್ವಿಯವರು ಬರೆದ 'ಅಲೆಮಾರಿ ಅಂದಮಾನ್ ಮತ್ತು ಮಹಾನದಿ ನೈಲ' ಎಂಬ ಪ್ರವಾಸ ಕಥನದ ಪುಸ್ತಕದಲ್ಲಿ ಮಹಾನದಿ ನೈಲಿನ ಉಗಮಸ್ಥಳ ಪತ್ತೆಹಚ್ಚಿಯಲು ಪಾಶ್ಚಾತ್ಯ ಪ್ರವಾಸಿಗಳು ಮಾಡಿದ ಸಾಹಸ, ಹುಯೆನ್‌ತ್ಸಾಂಗನ ಪ್ರವಾಸದಷ್ಟೇ ಅದ್ಭುತವಾಗಿದೆ. ನೈಲ ನದಿಯ ಉಗಮದ ಶೋಧ ನಡೆದದ್ದು ಕಳೆದ ಎರಡು ಶತಮಾನಗಳಲ್ಲಿ. ಅಂದರೆ ೧೭೭೦ ರಿಂದ ೧೯೫೨ರ ಕಾಲಾವಧಿಯಲ್ಲಿ. ಆ ಶೋಧ ಮಾಡುವುದು ತುಂಬಾ ಭಯಾನಕವಾದದ್ದೂ ಹೌದು. `` ನೈಲ್ ನದಿಯ ಅಂಕುಡೊಂಕಿನ ಪ್ರಪಾತಮಯವಾದ ಹಾದಿ, ಅದರ ಇಕ್ಕೆಲಗೂ ಏಲುಕಮ್ಮು ವಿಸ್ತಾರವಾದ ಜವುಗು ಪ್ರದೇಶ, ಭಯಂಕರವಾದ ಅರಣ್ಯಗಳು, ನರಭಕ್ಷಕ ಕಾಡುಜನರ ಸಮುದಾಯ, ಉಗ್ರಗಾಮಿ ಕಾಡುಮೃಗಗಳು, ವಿಷಸರ್ಪಗಳು, ದಟ್ಟ ಕ್ರಿಮಿಕೀಟಕಗಳು, ಮಲೇರಿಯಾ ಮುಂತಾದ ರೋಗಗಳು, ಜೊತೆಗೆ ಅರಬ್ ಗುಲಾಮ ವ್ಯಾಪಾರಿಗಳ ಹಾವಳಿ ಇವೆಲ್ಲವುಗಳಿಂದ ನೈಲ ನದಿಯ ಮೂಲ ಹುಡುಕುವುದೆಂದರೆ ಒಂದು ಅಸಾಧಾರಣ ಸಾಹಸವಾಗಿ ಪರಿಣಮಿಸಿತು. ನೈಲ ನದಿಯ ಮೂಲವಾದ ಮಧ್ಯ ಆಫ್ರಿಕಾದ ಕಗ್ಗತ್ತಲೆಯಿಂದ ಒಂದೊಂದು ಹೆಜ್ಜೆ ಮುಂದಿಡುವುದೂ ಸಾವು ಬದುಕಿನ ಪ್ರಶ್ನೆಯಾಗಿತ್ತು. "(ಅಲೆಮಾರಿ ಅಂದಮಾನ್ ಮತ್ತು ಮಹಾನದಿ ನೈಲ ಪು ೧೫೯ -೬೦) ಇಂಥ ಪ್ರದೇಶದಲ್ಲಿ ಶೋಧಕ ಪ್ರವಾಸಿಗಳಾಗಿ ಬರ್ಟನ್, ಸ್ಪೀಕ್, ಬೇಕರ, ಲಿವಿಂಗ ಸ್ಟೋನ್, ಸ್ಟಾನ್ಲಿ -ಇವರೆಲ್ಲ ನಡೆಸಿದ ಅನ್ವೇಷಣೆ ಅತ್ಯಂತ ರೋಮಾಂಚನಕಾರಿಯಾಗಿದೆ.

ಧಾರ್ಮಿಕ ದೃಷ್ಟಿಯಿಂದ ಹುಯೆನ್‌ತ್ಸಾಂಗ ಮಾಡಿದ ಪ್ರವಾಸಕ್ಕೂ, ಭೌಗೋಳಿಕ ದೃಷ್ಟಿಯಿಂದ ಆಫ್ರಿಕದ ಕಗ್ಗಾಡಿನಲ್ಲಿ ಬರ್ಟನ್ ಮೊದಲಾದವರು ಮಾಡಿದ ಪ್ರವಾಸಕ್ಕೂ ತುಂಬ ವ್ಯತ್ಯಾಸವಿದೆ. ಹಾಗಿದ್ದರೂ ಅವರ ಸಾಹಸಗಳು ಬೆರಗುಗೊಳಿಸುವಂತಹವು. ಪ್ರವಾಸ ಇಪ್ಪತ್ತನೆಯ ಶತಮಾನದವರೆಗೂ ಒಂದು ಸಾಹಸದ ಕಾರ್ಯವೇ ಆಗಿತ್ತು. ಬ್ರಿಟಿಷರು ವಿಶ್ವವ್ಯಾಪಿಯಾಗಿ ಪಸರಿಸಿದ ಮೇಲೆ, ಸಮುದ್ರಯಾನ, ಆನಂತರ ಆಕಾಶಯಾನ ಸುಲಭ ಗೊಳಿಸಿದ ಮೇಲೆ ವಿದೇಶ ಪ್ರವಾಸ ಅನುಕೂಲಕರವಾಯಿತು. ದೇಶದ ಉದ್ದಗಲಕ್ಕೂ ರೈಲು ಸಂಚಾರಗಳು ಪ್ರಾರಂಭವಾದ ನಂತರ, ದೇಶದ ವಿವಿಧ ಭಾಗಗಳಿಗೆ ಹೋಗಿ ಬರುವುದೂ ಸುಲಭವಾಯಿತು. ಒಂದು ಕಾಲಕ್ಕೆ ಕಾಶಿ, ರಾಮೇಶ್ವರ, ಶ್ರೀಶೈಲದಂಥ ಕ್ಷೇತ್ರಗಳಿಗೆ ಯಾತ್ರಾರ್ಥಿಗಳು ತಿಂಗಳುಗಟ್ಟಲೆ ಕಾಲುನಡಿಗೆಯಿಂದಲೇ ಗುಂಪು ಗುಂಪಾಗಿ ಪ್ರವಾಸ ಮಾಡುತ್ತಿದ್ದರು. ಈ ಶತಮಾನದ ಆದಿಭಾಗದಲ್ಲಿಯೂ ಈ ರೀತಿಯ ಪ್ರವಾಸವೇ ಪ್ರಚಲಿತವಾಗಿತ್ತು. ಸ್ವಾತಂತ್ರ್ಯಾನಂತರ ಸಾರಿಗೆ ವ್ಯವಸ್ಥೆಯಲ್ಲಿ ಬಹಳಷ್ಟು ಸುಧಾರಣೆ ಯಾಗಿದ್ದರಿಂದ ಪ್ರಯಾಣಕ್ಕೆ ಅತಂಕಗಳು ಕಡಿಮೆಯಾದವು. ಪ್ರವಾಸದ ಕಾಲಾವಧಿಯೂ ಕಡಿಮೆಯಾಯಿತು.

ಪ್ರಾಚೀನ ಕಾಲದ ಪ್ರವಾಸಗಳು ಹೆಚ್ಚಾಗಿ ಯಾತ್ರಾ ಸ್ವರೂಪದವಾಗಿದ್ದವು. ಪುಣ್ಯಕ್ಷೇತ್ರಗಳನ್ನು ಸಂದರ್ಶಿಸುವುದು ಜೀವನದ ಒಂದು ಭಾಗವೆಂದು ಆ ಕಾಲದ ಜನರು

ಭಾವಿಸಿದ್ದರು. ಆನಂತರ ವ್ಯಾಪಾರವು ಪ್ರವಾಸಕ್ಕೆ ಒಂದು ಮಹತ್ವದ ಕಾರಣವಾಯಿತು. ಭಾರತಕ್ಕೆ ಬ್ರಿಟೀಷರು ಬಂದದ್ದು ಮೂಲತಃ ವ್ಯಾಪಾರದ ಉದ್ದೇಶದಿಂದ ಎಂಬುದೀಗ ಹಳೆಯ ಕಥೆ. ಭೌಗೋಲಿಕ ದೃಷ್ಟಿಯೂ ಅಂದರೆ ಹೊಸ ಹೊಸ ಭೂಪ್ರದೇಶಗಳನ್ನು ಕಂಡುಹಿಡಿಯುವ ದೃಷ್ಟಿಯೂ ಪಾಶ್ಚಾತ್ಯರದೇ.

ಭಾರತೀಯರಲ್ಲಿ ತೀರ್ಥಕ್ಷೇತ್ರ ಯಾತ್ರೆಗಳಲ್ಲಿ ವ್ಯಾಪಾರೋದ್ದಿಮೆಗಳ ದೃಷ್ಟಿಗಿಂತ ಭಿನ್ನವಾದ ಅನ್ವೇಷಣೆ ದೃಷ್ಟಿ ಮತ್ತು ಅಧ್ಯಯನ ದೃಷ್ಟಿ ಬೆಳೆದದ್ದು ಈ ಶತಮಾನದಲ್ಲಿಯೇ. ಅದು ಪಾಶ್ಚಾತ್ಯರ ಪ್ರೇರಣೆಯಿಂದ ಎಂದು ಹೇಳಬಹುದು. `ದೇಶ ನೋಡು, ಕೋಶ ಓದು ' ಎಂಬ ಗಾದೆ ಕನ್ನಡದಲ್ಲಿದ್ದರೂ ಈ ಎರಡೂ ಬಗೆಯ ಸಾಹಸ ಮಾಡಿದ ಕನ್ನಡಿಗರ ಸಂಖ್ಯೆ ಇತ್ತೀಚಿನವರೆಗೆ ತೀರ ವಿರಳವಾಗಿತ್ತು. ಸ್ವಾತಂತ್ರ್ಯಪೂರ್ವದಲ್ಲಿ ಬೇರೆ ಬೇರೆ ಕಾರಣಗಳ ನಿಮಿತ್ತ ಆಗೊಬ್ಬರು ಈಗೊಬ್ಬರು ವಿದೇಶಕ್ಕೆ ಹೋಗಿದ್ದುದು ಕಂಡುಬರುತ್ತದೆ. ಅವರಲ್ಲಿ ಓದಲಿಕ್ಕೆಂದು ಹೋದವರೇ ಹೆಚ್ಚು ಜನ. ಗಾಂಧಿ, ನೆಹರು, ಅರವಿಂದ ಇತ್ಯಾದಿ ಮಹನೀಯರನ್ನು ಇಲ್ಲಿ ಹೆಸರಿಸಬಹುದು. Foreign returned ಎನ್ನುವುದು ಒಂದು ಅಗ್ಗಳಿಕೆಯೂ ಆಗಿತ್ತು. ಅದೇನೇ ಇರಲಿ, ಪ್ರವಾಸವು ಒಂದು ಹವ್ಯಾಸವಾಗಿ ಕಂಡುಬರುವುದು ಇತ್ತೀಚಿನ ದಿನಗಳಲ್ಲಿ.

ಪ್ರವಾಸದ ಅನುಭವ, ನೋಡಿದ ಜನ-ಸ್ಥಳಗಳ ಪರಿಚಯ, ಸಾಂಸ್ಕೃತಿಕ ವಿಶೇಷತೆಗಳು ಕಲೆಯ ವೈಶಿಷ್ಟ್ಯ ಇತ್ಯಾದಿ ವಿಷಯಗಳನ್ನು ಕುರಿತು ಬರೆದ ಗ್ರಂಥ ಪ್ರವಾಸ ಕಥನವೆನಿಸುತ್ತದೆ. ಪ್ರವಾಸ ಸಾಹಿತ್ಯ ಸಾಮಾನ್ಯವಾಗಿ ಕಂಡ ದೃಶ್ಯಗಳ ವಿವರಣೆಯಿಂದ ಕೂಡಿರುತ್ತದೆ. ಡಾ. ವಿ. ಕೃ. ಗೋಕಾಕರು ಪ್ರವಾಸ ಸಾಹಿತ್ಯವನ್ನು ವ್ಯಾಖ್ಯಾನಿಸಿದ್ದು ಹೀಗೆ : `` ಪ್ರವಾಸ ಸಾಹಿತಿಯು ತಾನು ಕಂಡ ಜಗತ್ತನ್ನೆಲ್ಲ ಸ್ಪಷ್ಟವಾಗುವಂತೆ ತನ್ನ ಶಬ್ದ ಚಿತ್ರದಲ್ಲಿ ಮೂಡಿಸಬೇಕು. ಸ್ವಂತದ ದೃಷ್ಟಿಯನ್ನು ಆ ನವೀನ ದೃಷ್ಟಿಯ ಮೇಲೆ ಆರೋಪಿಸಿದ ರೀತಿಯು ಎಲ್ಲೆಡೆಗೆ ಸ್ಫುಟವಾಗಿರಬೇಕು. ಇದು ಸಾಧಿಸಿದಲ್ಲಿ ರಸಾನುಭವ, ಮನೋರಂಜನೆ, ಉಪಯುಕ್ತತೆ ಮೊದಲಾದ ಗುರಿಗಳೆಲ್ಲ ಸಫಲವಾಗುವವು " (ಸಮುದ್ರದಾಚೆಯಿಂದ ಪು. ೩) ಈ ವ್ಯಾಖ್ಯಾನದನ್ವಯ ಕನ್ನಡದಲ್ಲಿ ಬಂದ ಪ್ರವಾಸ ಸಾಹಿತ್ಯ ಕೃತಿಗಳು ಅವಲೋಕನೀಯವಾಗುತ್ತವೆ. ಒಂದು ವಿಶೇಷವೆಂದರೆ ಕನ್ನಡದಲ್ಲಿ ಡಾ. ಶಿವರಾಮ ಕಾರಂತ, ದಿನಕರ ದೇಸಾಯಿ, ರಾ. ಶಿ., ದೇ. ಜ. ಗೌ., ಜಿ. ಎಸ್. ಶಿವರುದ್ರಪ್ಪ, ರಾ. ಯ. ಧಾರವಾಡಕರ, ಕೃಷ್ಣಾನಂದ ಕಾಮತ, ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ ಇತ್ಯಾದಿ ಲೇಖಕರು ತಮ್ಮ ಪ್ರವಾಸದ ಅನುಭವಗಳನ್ನು ಬರೆದಿರುವುದು. ಅದರಿಂದಾಗಿ ಕನ್ನಡದಲ್ಲಿ ಪ್ರವಾಸ ಸಾಹಿತ್ಯವೂ ಒಂದು ಪ್ರಕಾರವಾಗಿ ಬೆಳೆದುಬಂದಿತು.

ಕನ್ನಡ ಪ್ರವಾಸ ಸಾಹಿತ್ಯವನ್ನೆಲ್ಲ ಎದುರಿಗಿಟ್ಟು ನೋಡಿದರೆ ದೇಸೀಯ (ಭಾರತದ ಅಥವಾ ಕನ್ನಡ ನಾಡಿನ) ಪ್ರವಾಸಕ್ಕಿಂತ ವಿದೇಶಿ ಪ್ರವಾಸ ಕಥನವೇ ವಿಶೇಷವಾಗಿ ಬೆಳೆದದ್ದು ಕಂಡುಬರುತ್ತದೆ. ಸಂತೋಷದ ಸಂಗತಿಯೆಂದರೆ ಈಗ ತಿಳಿದ ಮಟ್ಟಿಗೆ ಕನ್ನಡದಲ್ಲಿ ಮೊದಲು ಪ್ರಕಟವಾದ ಪ್ರವಾಸ ಕಥನದ ಕೃತಿ `ದಕ್ಷಿಣ ಭಾರತ ಯಾತ್ರೆ ' ಎಂಬುದು (೧೮೮೫) ಇದರ ಲೇಖಕರು ಸೂರಿ ವೆಂಕಟರಮಣ ಶಾಸ್ತ್ರಿಗಳು.

ಕನ್ನಡದಲ್ಲಿ ಬಂದ ಪ್ರವಾಸ ಸಾಹಿತ್ಯವನ್ನು ಡಾ. ಎಸ್. ವಿದ್ಯಾಶಂಕರ ಅವರು ಸಮಗ್ರವಾಗಿ ಅವಲೋಕಿಸುವ ಪ್ರಯತ್ನ ಮಾಡಿರುವುದನ್ನು ಇಲ್ಲಿ ನೆನೆಯಬಹುದು. ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ ' (೧೯೯೧) ಎಂಬ ಅವರ ಕೃತಿ ತುಂಬ ಅಭ್ಯಾಸಪೂರ್ಣವಾಗಿದೆ. ಅವರು ವಿಶ್ವಪರ್ಯಟನ ಸಾಹಿತ್ಯ, ಬಿಡಿ ಬಿಡಿ ದೇಶಗಳ ಪ್ರವಾಸ ಸಾಹಿತ್ಯ. ಭರತಖಂಡದ ಪ್ರವಾಸ ಸಾಹಿತ್ಯ, ತೀರ್ಥಯಾತ್ರಾ ಸಾಹಿತ್ಯ, ಕರ್ನಾಟಕ ಪ್ರವಾಸ ಸಾಹಿತ್ಯ ಮತ್ತು ಅನುವಾದ ಪ್ರವಾಸ ಸಾಹಿತ್ಯವೆಂದು ಆರು ವಿಧವಾಗಿ ವಿಂಗಡಿಸಿ ಸಮೀಕ್ಷೆ ಮಾಡಿದ್ದು ನಿಜಕ್ಕೂ ಮೆಚ್ಚುವಂತಹದಾಗಿದೆ. ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಮಾಹಿತಿಯೂ ಉಪಯುಕ್ತವಾಗಿದೆ. ಸುಮಾರು ಮೂರುವರೆ ನೂರು ಪುಟಗಳ ಅವರ ಗ್ರಂಥ ಕನ್ನಡದಲ್ಲಿಯ ಪ್ರವಾಸ ಸಾಹಿತ್ಯದ ಎಲ್ಲ ಮಗ್ಗಲುಗಳನ್ನು ಪರಿಚಯಿಸಿಕೊಡುತ್ತದೆ.

ಪ್ರಸ್ತುತದಲ್ಲಿ ಕನ್ನಡದಲ್ಲಿಯ ಪ್ರವಾಸ ಸಾಹಿತ್ಯವನ್ನು ಮೂರು ಹಂತಗಳಲ್ಲಿ ಗುರುತಿಸಬಹುದೆನಿಸುತ್ತದೆ: ೧ ಕನ್ನಡ ನಾಡಿನ ಪ್ರವಾಸ ಸಾಹಿತ್ಯ, ೨ ಭಾರತದ ಪ್ರವಾಸ ಸಾಹಿತ್ಯ, ೩ ವಿದೇಶ ಪ್ರವಾಸ ಸಾಹಿತ್ಯ.

ಕನ್ನಡ ನಾಡಿನ ಪ್ರವಾಸ ಸಾಹಿತ್ಯವೆಂದರೆ ಕರ್ನಾಟಕದಲ್ಲಿರುವ ಪ್ರೇಕ್ಷಣೀಯ ಸ್ಥಳಗಳ ಸಂದರ್ಶನದ ಸಾಹಿತ್ಯ. ಈ ಸಾಹಿತ್ಯ ವಿಪುಲವಾದದ್ದೇನೂ ಆಗಿಲ್ಲ. ನಿಜವಾಗಿ ಪ್ರವಾಸ ಮಾಡಿ ಬರೆದ ಕೃತಿಗಳು ಕೆಲವಾದರೆ, ಅಧ್ಯಯನದಿಂದ ಸ್ಥಳ ಪರಿಚಯ ಮಾಡಿಕೊಟ್ಟ ಕೃತಿಗಳು ಹಲವಾಗಿವೆ. ವಿ. ಸೀ. ಅವರ `ಪಂಪಾಯಾತ್ರೆ' ಒಂದು ಸೊಗಸಾದ ಪ್ರವಾಸಕಥನ. ವಿಜಯನಗರದ ರಾಜಧಾನಿ, ಭಗ್ನಾವಶೇಷಗಳ ಕುರುಹಾದ ಹಂಪಿಯ ದರ್ಶನವನ್ನು ಈ ಕೃತಿ ಅರ್ಥಪೂರ್ಣವಾಗಿ ಮಾಡಿಕೊಡುತ್ತದೆ. " ಎಂತಹ ಕಲಾಪ್ರೇಮಿಯಾಗಲಿ ಎಂತಹ ಇತಿಹಾಸ ಪ್ರೇಮಿಯಾಗಲಿ ಎಂತಹ ರಸಾಭಿಜ್ಞನಾಗಲಿ `ಪಂಪಾಯಾತ್ರೆ 'ಯ ಪಠನಾನಂತರದಲ್ಲಿ ಹೊಸ ಒಂದು ಸಂಸ್ಕೃತಿಯ ಕಾಂತಿಯಿಂದ ದೀಪ್ತವುಳ್ಳ ಮನಸ್ಸುಳ್ಳವನಾಗುತ್ತಾನೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ " ಎಂದು ಪ್ರೊ. ಎಸ್. ವಿ. ಪರಮೇಶ್ವರ ಭಟ್ಟರು ನುಡಿದದ್ದು `ಪಂಪಾಯಾತ್ರೆ 'ಗೆ ಹಿಡಿದ ಕನ್ನಡಿಯಾಗಿದೆ. ಹಂಪೆಯ ಹಿಂದಿನ ವೈಭವವನ್ನು ಅದರ ಸಾಂಸ್ಕೃತಿಕ ಔನ್ನತ್ಯವನ್ನು ತಿಳಿಸುವದರ ಜೊತೆಗೆ ಇಂದಿನ ದುರ್ದೆಸೆಯನ್ನು ಹೃದಯಂಗಮವಾಗಿ ಚಿತ್ರಿಸುವ ಈ ಕೃತಿ ಒಂದು ಕಾಲದಲ್ಲಿ ತುಂಬ ಪ್ರಸಿದ್ಧಿಯನ್ನು ಪಡೆದಿತ್ತು. ಇಂದಿಗೂ ಅದೊಂದು ವಿಶಿಷ್ಟ ಕೃತಿಯೇ ಆಗಿದ್ದು, ವಿ. ಸೀ. ಅವರ ಭಾವಗೀತದ ಸಂವೇದನೆಯಿಂದ ಅದು ಓದುಗರನ್ನು ಸೆರೆಹಿಡಿಯುತ್ತದೆ.

ಮಾನ್ವಿ ನರಸಿಂಹರಾವ್‌ರ `ಕನ್ನಡಯಾತ್ರೆ' . ಮು. ನ. ಮೂರ್ತಿಯವರ `ನಮ್ಮ ಪ್ರವಾಸ ', ಕೆ.ಬಿ. ಪ್ರಭು ಪ್ರಸಾದರ `ದೇಗುಲಗಳ ದಾರಿಯಲ್ಲಿ', ಗುಂಡ್ಮಿ ಚಂದ್ರಶೇಖರ ಐತಾಳರ `ಸೌಂದರ್ಯದ ಸಾನ್ನಿಧ್ಯದಲ್ಲಿ ' ಇತ್ಯಾದಿ ಕೃತಿಗಳು ಕನ್ನಡ ನಾಡಿನ ಸಂಸ್ಕೃತಿ, ಕಲೆಗಳನ್ನು ಸಾರ್ಥಕವಾಗಿ ಪರಿಚಯಿಸಿಕೊಡುತ್ತವೆ. ಕೆ. ಬಿ. ಪ್ರಭುಪ್ರಸಾದರ ಕಾವ್ಯಾತ್ಮಕವಾದ ಭಾಷೆ, ಐತಾಳರ ಶಿಲ್ಪಕಲಾ ವೈಭವದ ವರ್ಣನೆ ನಮ್ಮನ್ನು ಮೈಮರೆಸುತ್ತವೆ. ಕನ್ನಡ ನಾಡಿನ ವಿವಿಧ ಪ್ರದೇಶಗಳನ್ನು ಪ್ರವಾಸಿಗಳಿಗೆ ಕೈಪಿಡಿಯಾಗುವಂತೆ ಅನೇಕ ಸ್ಥಳ ಪರಿಚಯದ ಗ್ರಂಥಗಳೂ ಬಂದಿವೆ. ಆದರೆ ಅವೆಲ್ಲ ನೇರವಾದ ಪ್ರವಾಸ ಕಥನಗಳಲ್ಲ.

ಭಾರತದ ವಿವಿಧ ಸ್ಥಳಗಳನ್ನು ಸಂದರ್ಶಿಸಿ ಬರೆದ ಪ್ರವಾಸ ಕಥನಗಳು ಕನ್ನಡಿಗರಿಗೆ ಹೊಸ ಅನುಭವವನ್ನು ನೀಡುತ್ತವೆ. ಶಿವರಾಮ ಕಾರಂತರ `ಅಬೂವಿನಿಂದ ಬರಾಮಕ್ಕೆ' ಸಿದ್ಧವ್ವನಹಳ್ಳಿ ಕೃಷ್ಣಶರ್ಮರ `ವರ್ಧಾಯಾತ್ರೆ,' ಕೃಷ್ಣಾನಂದ ಕಾಮತರ `ವಂಗದರ್ಶನ', ಮಿರ್ಜಿ ಅಣ್ಣಾರಾಯರ `ನಾನು ಕಂಡ ನಾಡು ', ಗುರುನಾಥ ಜೋಶಿಯವರ `ಕಾಶ್ಮೀರ ಪ್ರವಾಸ' ಮುಂತಾದವುಗಳು ಅವಲೋಕನೀಯವಾಗಿವೆ. ಶಿವರಾಮ ಕಾರಂತರು ವಾಸ್ತು ಶಿಲ್ಪದಲ್ಲಿ ಆಸಕ್ತರು. ಹಾಗೆಯೇ ಚಿತ್ರ, ಸಂಗೀತ, ನೃತ್ಯ ಇತ್ಯಾದಿ ಕಲೆಗಳಲ್ಲಿ ತುಂಬ ಅಭಿರುಚಿಯುಳ್ಳವರು. ಅವರ ಪ್ರವಾಸದ ಪ್ರಮುಖ ಉದ್ದೇಶವೇ ಕಲಾಭ್ಯಾಸ. ಹೀಗಾಗಿ ಅವರ ಕೃತಿಯಲ್ಲಿ ಕಲೆಯ ಪರಿಚಯ ಇದ್ದೇ ಇರುತ್ತದೆ. ``ಜೊತೆಗೆ ನಿಸರ್ಗ ಪ್ರೀತಿ, ಜೀವನ ಪ್ರೀತಿಗಳು ಸಮ್ಮಿಳಿತವಾಗಿ ಬರುವುದರಿಂದ ಇಡೀ ಕೃತಿ ಲವಲವಿಕೆಯನ್ನು ಹುಟ್ಟಿಸುತ್ತದೆ. ಪ್ರಸ್ತುತ ಪ್ರವಾಸಕಥನದಲ್ಲಿ ಆತ್ಮೀಯವಾದ ನಿರೂಪಣೆಯಿರುವುದಕ್ಕೆ ಅವರ ಸಹ ಪ್ರವಾಸಿ ಮಿತ್ರ ಶ್ರೀಪತಿಯವರ ಹಾಸ್ಯ ಉಕ್ಕಿಸುವ ನಡವಳಿಯೂ ಒಂದು ಕಾರಣವಾಗಿದೆ. ಹಾಗೆ ನೋಡಿದರೆ ಕಾರಂತರು ಗಂಭೀರ ಚಿಂತಕರಾಗಿರುವಂತೆ ವಿನೋದಪ್ರಿಯರೂ ಆಗಿರುವುದು ಗಮನಿಸತಕ್ಕ ಅಂಶವಾಗಿದೆ. ಭಾರತದ ಬಹುಪ್ರದೇಶವನ್ನು ಸಂದರ್ಶಿಸಿದ ಕಾರಂತರು ಅಬೂ, ಅಜ್ಮೀರ, ದಿಲ್ಲಿ, ಸಿಮ್ಲಾಗಳನ್ನು, ಆಗ್ರಾ, ಕಾಶಿ, ಜಯಪುರಗಳನ್ನು ತೋರಿಸುವುದರ ಜೊತೆಗೆ ಕಲಕತ್ತೆಯಂಥ ಮಹಾನಗರದ ಪರಿಚಯವನ್ನೂ ಮಾಡಿಕೊಡುತ್ತಾರೆ.

ಸಿದ್ಧವ್ವನಹಳ್ಳಿ ಕೃಷ್ಣಶರ್ಮರ `ವರ್ಧಾಯಾತ್ರೆ' ಒಂದು ಸೀಮಿತವಾದ ಉದ್ದೇಶವನ್ನು ಹೊಂದಿದೆ. ವರ್ಧಾ ಗಾಂಧೀಜಿಯ ಆಶ್ರಮದ ನಿಮಿತ್ತ ಪ್ರಸಿದ್ಧವಾದ ಸ್ಥಳ. ವಿಶೇಷವಾಗಿ ಭಾರತೀಯ ಶಿಕ್ಷಣ ವ್ಯವಸ್ಥೆಗೆ ಹೊಸ ಆಯಾಮ ನೀಡಲು ಗಾಂಧೀಜಿ ವರ್ಧಾ ಆಶ್ರಮದ ಮೂಲಕ ಯತ್ನಿಸಿದರು. ವೃತ್ತಿಮೂಲ ಶಿಕ್ಷಣದ ಹೊಳಹು ಮೂಡಿದ್ದು ಇಲ್ಲಿಯೇ. ಅಲ್ಲಿ ಒಂದು ತರಬೇತಿ ಕೇಂದ್ರವೂ ಇದೆ. ಸಿದ್ಧವ್ವನಹಳ್ಳಿ ಕೃಷ್ಣಶರ್ಮರು ಗಾಂಧೀಜಿಯವರ ಅನುಯಾಯಿಗಳಲ್ಲಿ ಒಬ್ಬರು. ಆದ್ದರಿಂದ ವರ್ಧಾ ಆಶ್ರಮದ ಜೀವನವನ್ನು ಕಣ್ಣಿಗೆ ಕಟ್ಟುವಂತೆ ನಿರೂಪಿಸುತ್ತಾರೆ. ಇದು ಪ್ರವಾಸ ಪರಿಚಯವೆನ್ನುವುದಕ್ಕಿಂತ ಸ್ಥಳಪರಿಚಯವೆನ್ನುವುದು ಹೆಚ್ಚು ಸಮಂಜಸ. ಕೃಷ್ಣಾನಂದ ಕಾಮತರ `ವಂಗದರ್ಶನ'ವೂ ಒಂದು ನಿರ್ದಿಷ್ಟ ಪ್ರದೇಶದ ಪರಿಚಯ ಮಾಡಿಕೊಡುತ್ತಿದ್ದರೂ ಸಿದ್ಧವ್ವನಹಳ್ಳಿ ಕೃಷ್ಣಶರ್ಮರ ವಸ್ತುವಿಗಿಂತ, ಇಲ್ಲಿಯ ವಸ್ತು ವ್ಯಾಪಕವಾಗಿದೆ. ಇದು ಕಾರಂತರಂತೆ ನಿಸರ್ಗ ಮತ್ತು ವಾಸ್ತುಶಿಲ್ಪದಂಥ ಕಲೆಗಳನ್ನಾಗಲಿ, ಸಿ. ಕೃಷ್ಣಶರ್ಮರಂತೆ ಗಾಂಧೀಜಿಯ ಬದುಕು ಸಿದ್ಧಾಂತಗಳನ್ನಾಗಲಿ ಗಮನಿಸುವುದಿಲ್ಲ. ಬಂಗಾಲದ ಜನಜೀವನ, ರಾಜಕೀಯ ಸಂಘರ್ಷ ಇತ್ಯಾದಿಗಳನ್ನು ಚಿತ್ರಿಸುತ್ತದೆ. ನಕ್ಸಲೀಯರ ಚಟುವಟಿಕೆ, ಕಮ್ಯುನಿಷ್ಟರ ತೀವ್ರತರವಾದ ಚಳುವಳಿಗಳು ಇಲ್ಲಿ ವಿಶೇಷ ಸ್ಥಾನವನ್ನು ಪಡೆದಿವೆ. ರವೀಂದ್ರರ ಶಾಂತಿನಿಕೇತನದ ಬಗ್ಗೆ, ರಾಮಕೃಷ್ಣ ಪರಮಹಂಸರ ದಕ್ಷಿಣೇಶ್ವರದ ಬಗ್ಗೆ ನಮಗೆ ತಿಳಿದು ಬರುವುದು ತೀರ ಅಲ್ಪವೇ. " ಪಶ್ಚಿಮ ಬಂಗಾಲದ ರಾಜಕೀಯ ಸಾಮಾಜಿಕ ಜೀವನದ ಅಧ್ಯಯನವೇ ಈ ಕೃತಿಯಲ್ಲಿ ಪ್ರಧಾನವಾಗಿ ಬಂದಿರುವುದರಿಂದ, ಇದನ್ನು ಪ್ರವಾಸ ಕಥನವೆಂದು ಕರೆಯುವುದು ಎಷ್ಟರಮಟ್ಟಿಗೆ ಸರಿ ? " ಎಂದು ಪ್ರಶ್ನೆ ಎತ್ತಿದ್ದಾರೆ, ಡಾ. ಎಸ್. ವಿದ್ಯಾಶಂಕರ. ಆದ್ದರಿಂದ ಇದು ಸಾಮಾಜಿಕ ಜೀವನದ ಅಧ್ಯಯನಕ್ಕೆ ಸಂಬಂಧಿಸಿದ ಕೃತಿಯಾಗಿ ಉಳಿಯುತ್ತದೆ.

ಕೃಷ್ಣಾನಂದ ಕಾಮತರ `ಕಾಲರಂಗ' ಎಂಬ ಇನ್ನೊಂದು ಕೃತಿಯೂ ಇದೆ. ಅದು ಕೂಡ ಪ್ರವಾಸಕಥನವೇ ಆಗಿದ್ದು ಮಧ್ಯಪ್ರದೇಶವನ್ನು ವಿವರವಾಗಿ ಪರಿಚಯಿಸುತ್ತದೆ. ಹಲವು ವಿಷಯಗಳನ್ನು ಕೈಗೆಟಗಿಸಿಕೊಂಡು ಮಧ್ಯಪ್ರದೇಶದ ಸಮಗ್ರವಾದ ಹಾಗೂ ಸ್ಪಷ್ಟವಾದ ಚಿತ್ರವನ್ನು ಕೊಡಲು ಕಾಮತರು ಈ ಕೃತಿಯಲ್ಲಿ ಯತ್ನಿಸಿದ್ದು ಗಮನಾರ್ಹವಾಗಿದೆ. `ಕಾಲರಂಗ'ದಲ್ಲಿ ಉಲ್ಲೇಖನಾರ್ಹವಾದ ಹಲವು ಅಂಶಗಳಿವೆ. ಮಧ್ಯಪ್ರದೇಶದ ಜನಜೀವನ, ಶಿಕ್ಷಣ ವ್ಯವಸ್ಥೆ, ಆಡಳಿತ ವ್ಯವಸ್ಥೆ ರಾಜಕಾರಣ ಇತ್ಯಾದಿಗಳನ್ನು ಒಳಗೊಂಡಿರುವ ಈ ಕೃತಿ ಹಲವು ದೃಷ್ಟಿಯ ಅಧ್ಯಯನಗಳಿಗೆ ಮಾರ್ಗಮಾಡಿಕೊಡುತ್ತದೆ. ಇಂಗ್ಲೀಷ ಕವಿ ವೆರಿಯರ್ ಎಲ್ವಿನ್ ಮಧ್ಯಪ್ರದೇಶದ ಆದಿವಾಸಿ ಜನಾಂಗದೊಂದಿಗೆ ನಿಂತು ಮಾಡಿದ ಅಧ್ಯಯನ, ಮಧ್ಯಪ್ರದೇಶದ ಪ್ರಾಣಿಪ್ರಪಂಚ, ಕಲಾಕಾರರು, ಖಜುರಾಹೊ ಕಾಮಿನಿಯರು, ಮೂರ್ತಿಕಾರರು ಇತ್ಯಾದಿ ಇತ್ಯಾದಿ ವಿಷಯಗಳ ಪರಿಚಯದಲ್ಲಿ ಸಂಶೋಧನಾತ್ಮಕ ಅಧ್ಯಯನವೂ ಇದೆ, ವಿಮರ್ಶಾತ್ಮಕ ವಿಶ್ಲೇಷಣೆ ಮತ್ತು ಕಾದಂಬರಿ ತರಹದ ನಿರೂಪಣೆಗಳೂ ಇವೆ. ಉದಾಹರಣೆಗಾಗಿ ಬಾರಸೂರ ಹಳ್ಳಿಯಲ್ಲಿ ಕಂಡ ಪ್ರಾಚೀನ ದೇವಾಲಯಗಳ ಪರಿಚಯವನ್ನು ಗಮನಿಸಬಹುದು : ``ಊರತುಂಬ ಶಿಲ್ಪಗಳು, ದೇವಾಲಯಗಳು ಇವೆಯೆಂದು ಎಲ್ಲರೂ ಒಪ್ಪಿದರೂ, ಅವುಗಳ ಬಗ್ಗೆ ಖಚಿತವಾದ ಮಾಹಿತಿ ಯಾರಿಂದಲೂ ಪಡೆಯಲಾಗಲಿಲ್ಲ. ಹೀಗಾಗಿ ಹಳ್ಳಿಗನೊಬ್ಬನನ್ನು ಮಾರ್ಗದರ್ಶಕನನ್ನಾಗಿ ಪಡೆದು ಹೊರಟೆ. ಹಾಳುಬಿದ್ದ ಚಿಕ್ಕದೇವಾಲಯದ ಪ್ರಾಕಾರದ ಮೇಲೆ ಒಂದೆರಡು ಕಾಮಕ್ರೀಡೆಯ ಶಿಲ್ಪಗಳಿದ್ದರೂ ಅವುಗಳಲ್ಲಿ ಅಶ್ಲೀಲವೆಂದು ತೋರುವಂತಹದು ಏನೂ ಇರಲಿಲ್ಲ. ಗುಡಿಯ ಬಳಿ ಪೌಳಿಯಲ್ಲಿ ಎಲ್ಲ ಕಡೆಯಿಂದಲೂ ತಂದು ರಾಶಿ ಹಾಕಿದ ಶಿಲ್ಪಗಳಿವೆ. ಅವು ವೈಶಿಷ್ಟ್ಯಪೂರ್ಣವಾಗಿದ್ದು ರಚನೆಯಲ್ಲಿ ದಕ್ಷಿಣ ಸಂಪ್ರದಾಯದ ಛಾಯೆ ಎದ್ದುಕಾಣಿಸುತ್ತಿತ್ತು. `ಮಾಮಾ -ಭಾಚಾ' ದೇವಾಲಯಗಳು ಒಂದು ಕಾಲ ಜೋಡಿಯಾಗಿ ನಿಂತರೂ, ಇಂದು ಮಾಮಾ ದೇವಾಲಯ ಸಂಪೂರ್ಣ ನಾಶವಾಗಿ, ಅದರಲ್ಲಿಯ ಪೂಜಾವಿಗ್ರಹ ಹತ್ತಿರದ ಕೆರೆಯಲ್ಲಿದೆಯಂತೆ. ಭಾಚಾ ದೇವಸ್ಥಾನ ಮಾತ್ರ ತನ್ನ ಅಸ್ತಿತ್ವ ಕಾದುಕೊಂಡಿದೆ. ಅದನ್ನು ನೋಡಿದಾಗ ಬಾದಾಮಿ ಚಾಲುಕ್ಯರ ಪಟ್ಟದಕಲ್ಲಿನ ವಾಸ್ತುಶಿಲ್ಪ ಕಣ್ಣೆದುರಿಗೆ ಬರುತ್ತದೆ. ಮೆಟ್ಟಿಲ ಹತ್ತಿರ ನಿಲ್ಲಿಸಿದ ಶಿಲಾಶಾಸನ ಹಳೆ ಕನ್ನಡ ಲಿಪಿಯಲ್ಲಿ ಇದ್ದದ್ದು ನೋಡಿ, ನಮ್ಮವರು ಇಲ್ಲಿಯೂ ತಮ್ಮ ವಿಜಯಪತಾಕೆ ಹಾರಿಸಿದ್ದರೆಂದು ತಿಳಿದು ಹೆಮ್ಮೆಯೆನಿಸಿತು. ಹಾಳುಬಿದ್ದ ಶಿವಾಲಯದ ಕಂಬಗಳೂ ದಕ್ಷಿಣ ಶೈಲಿಯನ್ನು ನೆನಪಿಗೆ ತರುತ್ತವೆ.... ಇನ್ನೊಂದು ದೇವಾಲಯದಲ್ಲಿ ಕಡಲೆ ಮತ್ತು ಸಾಸಿವೆಕಾಳು ಗಣಪತಿಯನ್ನು ಹೋಲುವಂತಹ ಬೃಹತ್ ಕೃತಿಗಳನ್ನು ಕಟೆದು ನಿಲ್ಲಿಸಲಾಗಿದೆ. ಗಣೇಶನ ನೂರಾರು ಭಂಗಿಗಳನ್ನು ಶಿಲ್ಪದಲ್ಲಿ ನೋಡಬೇಕಿದ್ದರೆ ಬಾರಸೂರಿಗೆ ಬರಬೇಕು. ಹಿಂದೆ ಕಟ್ಟಿದ ದೇವಾಲಯಗಳು ನಾಶವಾದ್ದರಿಂದ ಮನೆಯಂತಹ ಕಟ್ಟಡದಲ್ಲಿ ಲಕ್ಷ್ಮೀ, ವಿಷ್ಣು, ಮಹಿಷಾಸುರ ಮರ್ದಿನಿಯರ ಮೂರು ಭವ್ಯ ವಿಗ್ರಹಗಳನ್ನು ಇಟ್ಟಿದ್ದಾರೆ. ಅಲ್ಲದೆ ಹೊರಾಂಗಣದಲ್ಲಿ ಚಿಕ್ಕ ದೊಡ್ಡ ಅನೇಕ ವಿಗ್ರಹಗಳನ್ನು ಒಟ್ಟಿದ್ದಾರೆ. ಇವುಗಳನ್ನೇ ಆಳವಾಗಿ ಅಭ್ಯಸಿಸಿ, ಗ್ರಂಥವೊಂದನ್ನು ಬರೆದರೆ, ಯಾವ ವಿಶ್ವವಿದ್ಯಾಲಯವೂ ಡಾಕ್ಟರೇಟ ಪದವಿ ಕೊಡುವಷ್ಟು ವಿಷಯ ಸಂಗ್ರಹವಿದೆ. '' ಹೀಗೆ ಕೃಷ್ಣಾನಂದ ಕಾಮತರ ಪ್ರವಾಸ ಕಥನ ಮೌಲಿಕ ವಿಷಯಗಳನ್ನು ನಿರೂಪಿಸುವುದರಲ್ಲಿ ತನ್ಮಯವಾಗಿರುವುದರಿಂದ ಓದುಗನನ್ನು ಮೈಮರೆಸುತ್ತದೆ ; ಆತನ ಜ್ಞಾನದ ಕ್ಷಿತಿಜವನ್ನು ವಿಸ್ತರಿಸುತ್ತದೆ.

ಕನ್ನಡದ ಹಿರಿಯ ಲೇಖಕರಲ್ಲೊಬ್ಬರಾದ ಸ. ಸ. ಮಾಳವಾಡರ `ಸಂಚಾರ ಸಂಗಮ ' ಕರ್ನಾಟಕ, ಭಾರತ ಹಾಗೂ ವಿದೇಶಗಳ ಪರಿಚಯವನ್ನು ಭಾಗಶಃ ಮಾಡಿ ಕೊಡುತ್ತದೆ. ಕು. ಶಿ. ಹರಿದಾಸಭಟ್ಟರ `ಜಗದಗಲ 'ವೂ ಇದೇ ಮಾದರಿಗೆ ಸೇರಿದುದು. ಮಾಳವಾಡರು ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ದೃಷ್ಟಿಯಿಂದ ತಮ್ಮ ಪ್ರವಾಸ ಕಥನ ಬರೆದಿದ್ದರೆ, ಹರಿದಾಸಭಟ್ಟರು ಆ ಎಲ್ಲ ದೃಷ್ಟಿಗಳ ಜೊತೆಗೆ ಸಾಮಾಜಿಕ, ಆರ್ಥಿಕ ದೃಷ್ಟಿಕೋನದಿಂದಲೂ ಪ್ರದೇಶಗಳನ್ನು ನೋಡಿದ್ದಾರೆ.

ಯಾತ್ರಾರ್ಥಿಗಳಾಗಿ ಭಾರತದ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿದವರು ಬರೆದ ಪ್ರವಾಸ ಕಥನಗಳಲ್ಲಿ ಶ್ರದ್ಧೆ ಮುಖ್ಯವಾಗಿರುವಂತೆ, ಮಾನವ ಸಹಜವಾದ ಕುತೂಹಲ ನೋಟಗಳೂ ಇವೆ. ಸ್ವಾಮಿ ಸೋಮನಾಥಾನಂದರ `ಹೈಮಾಚಲ ಸಾನ್ನಿಧ್ಯದಲ್ಲಿ ', ` ಅಮರನಾಥ ಯಾತ್ರೆ 'ಗಳಲ್ಲಿ ಪವಿತ್ರ ಕ್ಷೇತ್ರಗಳಿಗೆ ಸಂಬಂಧಿಸಿದ ಚರಿತ್ರೆ, ಸ್ಥಳ ಪುರಾಣಗಳ ವಿವರಣೆಯಿರುವಂತೆ ಹಿಮಾಲಯ ಪರ್ವತದಂಥ ಸ್ಥಳಗಳ ಕಾವ್ಯಮಯವಾದ ವರ್ಣನೆಯೂ ಇದೆ. ಕುವೆಂಪು ಬರೆದಂತೆ ಇವು `ಪವಿತ್ರಯಾತ್ರೆಯ ತೀರ್ಥಸಾಹಿತ್ಯ '. ಸ್ವಾಮಿ ಜ್ಞಾನಾನಂದರ `ಕೈಲಾಸ - ಮಾನಸ- ಸರೋವರ ಯಾತ್ರೆ ' ಕೂಡ ತೀರ್ಥ ಸಾಹಿತ್ಯದಲ್ಲಿ ಸಮಾವೇಶಗೊಳ್ಳುವ ಕೃತಿ. ಜಿ. ಎ. ನರಸಿಂಹಮೂರ್ತಿಯವರ `ಆಸೇತು ಹೀಮಾಚಲಯಾತ್ರೆ ' ಭಾರತದ ಮಹತ್ವದ ತೀರ್ಥಕ್ಷೇತ್ರಗಳ ಪರಿಚಯ ಮಾಡಿಕೊಡುವುದರೊಂದಿಗೆ ಪ್ರಯಾಣಕ್ಕೆ ಅಗತ್ಯವಿರುವ ಹಲವು ಸಲಹೆಗಳನ್ನು ನೀಡುತ್ತದೆ. ಭೌಗೋಲಿಕ ಕ್ಷೇತ್ರಮಾನವನ್ನು ತಿಳಿಸಿಕೊಡುತ್ತದೆ. ಅಲ್ಲಿರುವ ನಕಾಶೆ ತುಂಬ ಉಪಯುಕ್ತವೂ ಆಗಿದೆ. ಹೀಗಾಗಿ ಇದು ಪ್ರವಾಸಿಗರಿಗೆ ಒಂದು ಮಾರ್ಗದರ್ಶಕ ಕೈಪಿಡಿಯಾಗಿ ನಿಲ್ಲುತ್ತದೆ.

ಶ್ರೀಮತಿ ಶಾಂತಾದೇವಿ ಮಾಳವಾಡರ `ಶ್ರೀಗಿರಿಯಿಂದ ಹಿಮಗಿರಿಗೆ ' ಕರ್ನಾಟಕದ ಬಾದಾಮಿ, ಮಹಾಕೂಟ, ಐಹೊಳೆಗಳನ್ನಲ್ಲದೆ ಮಹಾರಾಷ್ಟ್ರದ ಭಾರತದ ಇತರೆಡೆಗಳಲ್ಲಿಯ ಶ್ರೀಶೈಲ, ಶ್ರೀನಗರ ಇತ್ಯಾದಿಗಳನ್ನು ಪರಿಚಯಿಸುತ್ತದೆ.

ಕನ್ನಡದ ಮಹತ್ವದ ಕವಿಗಳಲ್ಲೊಬ್ಬರಾದ ಡಾ. ಜಿ. ಎಸ್. ಶಿವರುದ್ರಪ್ಪನವರ `ಗಂಗೆಯ ಶಿಖರಗಳಲ್ಲಿ ' ಯಾತ್ರಾ ಸ್ಥಳಗಳನ್ನೇ ಪರಿಚಯಿಸುತ್ತಿದ್ದರೂ ಭಾವುಕತೆಯನ್ನು ಮೀರಿದ, ವೈಚಾರಿಕತೆಯ ಮೇಲೆ ಒತ್ತುಕೊಟ್ಟಿರುವ, ಕವಿತ್ವದ ಸಂವೇದನಾಶೀಲತೆಯಿಂದ ಕೂಡಿದ ಒಂದು ವಿಶಿಷ್ಟ ಪ್ರವಾಸಕಥನವಾಗಿದೆ. ಪೌರಾಣಿಕ, ಸಾಹಿತ್ಯಿಕ ದಾಖಲೆಗಳನ್ನೆಲ್ಲ ತಿರುವಿ ಹಾಕುತ್ತ, ಭೌಗೋಲಿಕ ಲೆಕ್ಕಾಚಾರಗಳನ್ನು ಗಮನಿಸುತ್ತ ಗಂಗೋತ್ರಿಯನ್ನು ಚಿತ್ರೀಕರಿಸಿದ್ದು ಅಪ್ಯಾಯಮಾನವಾಗಿದೆ. ``ಎರಡೂ ಕಡೆಗೆ ಬೃಹದಾಕಾರವಾಗಿ ಚಾಚಿಕೊಂಡ ಗಿರಿಶ್ರೇಣಿಗಳ ಮೇಲೆ ಸೊಂಪಾಗಿ ಬಿಸಿಲು ಹಬ್ಬಿಕೊಂಡಿತ್ತು. ನಿರಂತರವಾಗಿ ಗುಡುಗಿಕೊಂಡು ಹರಿಯುವ ಗಂಗೆಯ ಘೋಷವನ್ನಾಲಿಸುತ್ತಾ ಉತ್ತರದ ಎತ್ತರದ ಹಿಮಧವಳ ಶೃಂಗಗಳನ್ನು ವೀಕ್ಷಿಸುತ್ತಾ ಇರುವಾಗ, ಗಂಗೋತ್ರಿಯ ಶಿಖರ ಸಮುಚ್ಚಯಗಳು, ಒಂದರ ಜತೆಗೊಂದು ಸ್ಪರ್ಧಿಸುತ್ತಾ ಆಕಾಶವನ್ನು ರೇಖಿಸಿದ್ದವು. ಧೀರವಾದ ಆ ಮಹಾಪರ್ವತಗಳು, ಧ್ಯಾನದಲ್ಲಿ ತೊಡಗಿದ ದೇವತಾತ್ಮಗಳಂತೆ ಶೋಭಿಸುತ್ತಿದ್ದವು. ನಿರಭ್ರವಾದ ನೀಲಿಯ ಹಿನ್ನೆಲೆಯಲ್ಲಿ ಹಾಲ ಬಿಳಿಮಂಜಿನ ಶಿಖರಗಳನ್ನು ಚಾಚಿಕೊಂಡ ಏರಿಳಿತಗಳ ಮಧ್ಯ ಗಂಗೆ ಉಗಮಿಸುವ

ಶಿವಲಿಂಗ ಎಂಬ ಶಿಖರ, ಭಸ್ಮೋದ್ಧೂಳಿತವಾದ ಶಿವನಂತೆ ಧ್ಯಾನಮಗ್ನವಾಗಿತ್ತು. ಆ ಶಿವಲಿಂಗ ಶಿಖರ, ಅಕ್ಕಪಕ್ಕದ ಮಹಾಪರ್ವತಾವಳಿಗಳು, ಇವುಗಳ ಕಡೆಯಿಂದ ಹರಿದು ಬರುತ್ತಿದ್ದ ಗಂಗಾಪ್ರವಾಹವನ್ನು ನೋಡಿದರೆ, ಭಗೀರಥನ ತಪಸ್ಸಿಗೆ ಒಲಿದು ಹರನ ಜಟಾಜೂಟದಿಂದ ಗಂಗೆ ಇಳಿದು ಬಂದಳೆಂಬುದು ಒಂದು ಪುರಾಣ ಕಥೆಯಾಗದೆ, ಈ ಪುರಾಣದಾಚೆಯ ಪ್ರಾಚೀನ ವಾಸ್ತವವೇ ಆಗಿ ಪರಿಣಮಿಸಿತು. " ಜಿ. ಎಸ್. ಎಸ್. ಅವರು ಪ್ರಕೃತಿ ವಿರಾಟ್ ದರ್ಶನವನ್ನು ಮಾಡಿಕೊಡುವಾಗ ರುದ್ರರಮಣೀಯತೆಗಳೆರಡನ್ನೂ ಸಾಂಗತ್ಯಗೊಳಿಸಿದ್ದು, ವಾಸ್ತವ ಸೌಂದರ್ಯಕ್ಕೆ ಪುರಾಣಕಲ್ಪನೆ ಹೇಗೆ ಬೆಸೆದುಕೊಂಡಿತೆಂದು ವಿವರಿಸಿದ್ದು, ಒಂದು ಸಾರೆ ನಮಗೂ ಗಂಗೆಯ ಶಿಖರಗಳನ್ನು ಕಾಣುವ ಹೆಬ್ಬಯಕೆಯನ್ನು ಹುಟ್ಟಿಸುತ್ತವೆ.

ಭಾರತದ ಪ್ರವಾಸ ಕಥನಗಳಲ್ಲಿ ಸಾಹಿತ್ಯಿಕ ಅಧ್ಯಯನದ ಕೆಲವು ಕೃತಿಗಳು ಕನ್ನಡದಲ್ಲಿ ಬಂದಿದ್ದುದನ್ನು ಮರೆಯುವಂತಿಲ್ಲ. ಈ ಅಧ್ಯಯನಕ್ಕೆ ಅವಕಾಶ ಮಾಡಿಕೊಡುವ ಯೋಜನೆಯೊಂದನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ರೂಪಿಸಿಕೊಂಡಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯಲ್ಲಿಯೂ ಇಂಥ ಒಂದು ಯೋಜನೆಯಿಲ್ಲದಿಲ್ಲ. ಕನ್ನಡ ಲೇಖಕರು ಹೊರ ರಾಜ್ಯಗಳಿಗೆ ಹೋಗಿ ಅಲ್ಲಿಯ ಸಾಹಿತ್ಯಿಕ ಸ್ವರೂಪ, ಬೆಳವಣಿಗೆ, ವಿಶೇಷತೆಗಳನ್ನು ಅಭ್ಯಸಿಸುವ ದೃಷ್ಟಿ ಹೊಂದಿದ ಈ ಯೋಜನೆಯ ಅಡಿಯಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರತಿವರ್ಷವೂ ಐವರು ಲೇಖಕರನ್ನು ಭಾರತದ ಬೇರೆ ಬೇರೆ ರಾಜ್ಯಗಳಿಗೆ ಕಳಿಸಿಕೊಡುತ್ತದೆ, ಜೊತೆಗೆ ಅಂಥ ಲೇಖಕರಿಂದ ಪುಸ್ತಕವೊಂದನ್ನು ಬರೆದುಕೊಡಲು ಅಪೇಕ್ಷಿಸುತ್ತದೆ ಹಾಗೂ ಒತ್ತಾಯಿಸುತ್ತದೆ. ಡಾ. ಜಿ. ಎಸ್. ಶಿವರುದ್ರಪ್ಪನವರು ಅಧ್ಯಕ್ಷರಾಗಿದ್ದ ಕಾಲಾವಧಿಯಲ್ಲಿ ಬೇರೆ ರಾಜ್ಯಗಳಿಗೆ ಸಾಹಿತ್ಯ ಅಧ್ಯಯನ ಪ್ರವಾಸ ಕೈಕೊಂಡ ಐವರು ಲೇಖಕರು ಬರೆದ ಕೃತಿಗಳು ನಮಗಿಂದು ಉಪಲಬ್ಧವಾಗಿವೆ. ೧ ಕೇರಳದಲ್ಲಿ ಹದಿನೈದ ದಿನಗಳು (ಫಕೀರ ಮುಹಮ್ಮದ್ ಕಾಟ್ಪಾಡಿ) ೨ ಜನಗಣಮನ (ಎಚ್. ಎಸ್. ರಾಘವೇಂದ್ರರಾವ್), ೩ ಶಾಲ್ಮಲೆಯಿಂದ ಗೋದಾವರಿಯವರೆಗೆ (ಜಿ. ಎಸ್. ಕಾಪಸೆ), ೪ ನೀಲಾಚಲಗಳ ನಾಡಿನಲ್ಲಿ (ಜಿ. ಪಿ. ಬಸವರಾಜು), ೫ ಮೂಡಲ ಪಯಣ (ಅ. ರಾ. ಸೇ). ಇವು ಕ್ರಮವಾಗಿ ಕೇರಳ, ಪಶ್ಚಿಮ ಬಂಗಾಲ, ಮಹಾರಾಷ್ಟ್ರ, ಆಸಾಮ, ಆಂಧ್ರಪ್ರದೇಶಗಳ ಪ್ರವಾಸ ಕಥನಗಳಾಗಿವೆ. `ಜನ ಗಣಮನ' `ನೀಲಾಚಲಗಳ ನಾಡಿನಲ್ಲಿ 'ಈ ಕೃತಿಗಳಲ್ಲಿ ಸಾಮಾನ್ಯ ಪ್ರವಾಸ ಸಾಹಿತ್ಯದ ಹಲವು ಲಕ್ಷಣಗಳು ಕೂಡಿಕೊಂಡಿರುವುದನ್ನು ಕಾಣಬಹುದು. `ಶಾಲ್ಮಲೆಯಿಂದ ಗೋದಾವರಿಯವರೆಗೆ' ಕೃತಿಯಲ್ಲಿ ಸಾಹಿತ್ಯಿಕ ಚರ್ಚೆಯೇ ವಿಶೇಷವಾಗಿರುವುದನ್ನು ಗುರುತಿಸಬಹುದು. ಒಟ್ಟಾಗಿ ಬೇರೆ ಬೇರೆ ರಾಜ್ಯಗಳಲ್ಲಿ ನಡೆದ, ನಡೆಯುತ್ತಿರುವ ಸಾಹಿತ್ಯಿಕ ಚಟುವಟಿಕೆಗಳ ಅಧ್ಯಯನ ಇಲ್ಲಿರುವುದರಿಂದ ಕನ್ನಡ ಸಾಹಿತ್ಯದ ಸ್ಥಾನವನ್ನು, ವಿಶೇಷತೆಯನ್ನು ರಾಷ್ಟ್ರಮಟ್ಟದಲ್ಲಿ ತೌಲನಿಕವಾಗಿ ಗುರುತಿಸಲು ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಇವುಗಳಿಗಿರುವ ಮಹತ್ವ ಗಮನಾರ್ಹವಾದದ್ದು.

ಗಣ್ಯ ಮರಾಠಿ ಲೇಖಕರೊಬ್ಬರು ಕರ್ನಾಟಕಕ್ಕೆ ಬಂದು, ಇಲ್ಲಿಯ ಸಾಹಿತ್ಯದ ಅಧ್ಯಯನ ಮಾಡಿ ಬರೆದ ಕೃತಿಯೊಂದು ಮರಾಠಿಯಲ್ಲಿ ಪ್ರಕಟವಾಗಿದ್ದು, ಅದನ್ನು ಕುರಿತು

ಪ್ರಸ್ತಾಪಿಸುವುದು ಈ ಸಂದರ್ಭದಲ್ಲಿ ಸೂಕ್ತವಾಗಿ ತೋರುತ್ತದೆ. ಆ ಕೃತಿಯ ಹೆಸರು `ಬೆಂಗಳೂರತೆ ಬದಾಮಿ' (ಬೆಂಗಳೂರಿನಿಂದ ಬಾದಾಮಿಯವರೆಗೆ), ಪ್ರಕಟನ ವರ್ಷ ೧೯೯೦. ಲೇಖಕರು ರಮೇಶ ಮಂತ್ರಿ. ಎರಡು ವರ್ಷಗಳ ಹಿಂದೆ ಅಖಿಲ ಭಾರತ ಮರಾಠಿ ಸಾಹಿತ್ಯ ಸಮ್ಮೇಲನ ಅಧ್ಯಕ್ಷರೂ ಆಗಿದ್ದರು. ಇಂಥ ದೊಡ್ಡ ಲೇಖಕರ ಕೃತಿ ಮೌಲಿಕವಾಗಿರಬೇಕೆಂದು ಅನಿಸುವುದು ಸಹಜವಾಗಿದೆ. ಆದರೆ ರಮೇಶ ಮಂತ್ರಿ ಮರಾಠಿಯಲ್ಲಿ ಸುಪ್ರಸಿದ್ಧ ವ್ಯಂಗ್ಯ ವಿನೋದ ಲೇಖಕರಾಗಿದ್ದರಿಂದಲೋ ಏನೋ ಈ ಗ್ರಂಥ ಹಾಸ್ಯಾಸ್ಪದವೆನಿಸುವ ಮಾಹಿತಿ ನೀಡಿದ್ದು ಕನ್ನಡಿಗರಾದವರಿಗೆ ಬೇಸರವನ್ನೂ ನೋವನ್ನೂ ಉಂಟುಮಾಡುವಂತಹದಾಗಿದೆ. ಕವಿಗಳ ಕೃತಿಗಳ ಹೆಸರುಗಳನ್ನೇ ಅವರು ಸರಿಯಾಗಿ ಗುರುತಿಸಿಕೊಂಡಿಲ್ಲದಿರುವುದು ತತ್‌ಕ್ಷಣಕ್ಕೆ ಕಂಡುಬರುವ ಸಂಗತಿಯಾಗಿದೆ. ಅವರು ಬೆಂಗಳೂರಿಗೆ ಬಂದು ಮೊದಲು ಸಂದರ್ಶಿಸಿದ ಲೇಖಕರಲ್ಲಿ ಡಾ. ರಂ. ಶ್ರೀ. ಮುಗಳಿ ಮತ್ತು ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರರ ಹೆಸರುಗಳಿವೆ. ಮುಗಳಿಯವರ `ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು' ಪ್ರಭನ್ನ ಕನ್ನಡ ಸಾಹಿತ್ಯ ರೂಪಗಳು ಎಂದಾಗಿದ್ದರೆ. ಗೊರೂರವರ ಹೆಸರೇ ಹೊಸರೂಪ ತಾಳಿದೆ. ಅದು `ಜೋರುಸ್ವಾಮಿ ಅಯ್ಯಂಗಾರ' ಎಂದಾಗಿದ್ದುದು ವಿಷಾದನೀಯ. ಅವರ ಕೃತಿ `ನಮ್ಮೂರಿನ ರಸಿಕರು' `ನಮ್ಮ ಓಟಿನ ರಸಿಕರು' ಎಂದಾಗಿದೆ. ಆಡಿಗರು ನವ್ಯಕಾವ್ಯದ ಬಗ್ಗೆ ಮಾತಾಡುತ್ತ ಕನ್ನಡದ ತರುಣ ಕವಿಗಳನ್ನು ಕುರಿತು ಹೇಳುವಾಗ `ಈ ನವ್ಯಕವಿಗಳು ನವ್ಯ ಶಬ್ದ ರಚನೆ ಮಾಡುತ್ತಾರೆ. ಅವರಲ್ಲಿ ಕೆಲವರು ಚೆನ್ನಾಗಿದ್ದಾರೆ. ಆದರೆ ಶ್ರೇಷ್ಠ ದರ್ಜೆಯ ಒಬ್ಬ ಕವಿಯೂ ಅಲ್ಲಿಲ್ಲ' ಎಂದಿದ್ದುದನ್ನು ದಾಖಲಿಸಿದ್ದಾರೆ. ಕವಿರಾಜಮಾರ್ಗವನ್ನು ಪ್ರಾಚೀನ ಗ್ರಂಥವೆಂದು ಹೇಳಿ `ಈ ಮಹಾಕಾವ್ಯದಿಂದ ಆ ಕಾಲದ ಸಂಸ್ಕೃತಿಯ ಕಲ್ಪನೆ ಬರುತ್ತದೆ' ಎಂದಿದ್ದಾರೆ. ದೇವನೂರ ಮಹಾದೇವರ ಹೆಸರು ದೇವನ್ ಮಹಾದೇವ ಆಗಿದ್ದರೆ, ಸಿದ್ಧಲಿಂಗಯ್ಯ ಸಿದಲಿಂಗಪ್ಪ ಆಗಿದ್ದಾರೆ. `ದೇವನೂರು' ಕಥಾ ಸಂಗ್ರಹ `ಅವನುರು' ಎಂದೂ ಆಗಿದ್ದುಂಟು. ಡಾ. ಹಾ. ಮಾ. ನಾಯಕ ಅವರು ಬೆಂಗಳೂರಿನ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಎಂದೂ ಅವರು ಕಾವ್ಯ ಇತ್ಯಾದಿ ಕ್ಷೇತ್ರಗಳಲ್ಲಿ ಬಹಳ ಕಾರ್ಯ ಮಾಡಿರುವರೆಂದೂ ಬರೆಯಲಾಗಿದೆ.

ಕರ್ನಾಟಕ ರಾಜ್ಯ ಉದಯವಾದ ಮೇಲೆ ಕರ್ನಾಟಕದ ಮುಖ್ಯಮಂತ್ರಿಗಳು ಯಾರು ಯಾರು ಆಗಿ ಹೋದರು ಎಂಬುದನ್ನು ಹೆಸರಿಸುತ್ತ ``ಶ್ರೀ ನಿಜಲಿಂಗಪ್ಪ ಇವರು ಕರ್ನಾಟಕದ ಮೊದಲನೆಯ ಕಾಂಗ್ರೆಸ್ ಮುಖ್ಯಮಂತ್ರಿಗಳಾದರು. ಆ ನಂತರ ಬಸವ ಜತ್ತಿ ಇವರು ಮುಖ್ಯಮಂತ್ರಿಯಾದರು. ಮತ್ತೆ ಪುನಃ ಶ್ರೀನಿಜಲಿಂಗಪ್ಪನವರು ಮತ್ತು ಅನಂತರ ಶ್ರೀ ವೀರೇಂದ್ರ ಪಾಟೀಲ ಇವರು ಮುಖ್ಯಮಂತ್ರಿ ಆದರು. ಕಳೆದ ಚುನಾವಣೆಯಲ್ಲಿ ಜನತಾ ಪಕ್ಷ ವಿಜಯಪತಾಕೆ ಹಾರಿಸಿ ಶ್ರೀರಾಮಕೃಷ್ಣ ಹೆಗಡೆ ಮುಖ್ಯ ಮಂತ್ರಿಯಾದರು.'' (ಇದು ರಮೇಶ ಮಂತ್ರಿಯವರು ಬರೆದ ವಾಕ್ಯಗಳಿಯ ಕಬ್ಬಡ ಅನುವಾದ) ಈ ವಿವರಣೆಯಲ್ಲಿ `ಶ್ರೀ' ಎಂದು ಶ್ರೀಜತ್ತಿಯವರ ಹೆಸರಿನ ಹಿಂದೆ ಸೇರಿಸಿಲ್ಲ. ಅದಿರಲಿ ಶ್ರೀದೇವರಾಜ ಅರಸು, ಶ್ರೀ ಆರ್. ಗುಂಡೂರಾವ್ ಇವರ ಹೆಸರುಗಳು ಇಲ್ಲವೇ ಇಲ್ಲ. ಗ್ರಂಥದುದ್ದಕ್ಕೂ ಇಂಥ ನಿರೂಪಣೆಯಿರುವುದನ್ನು ಕಾಣಬಹುದು. ಬೇರೆ ರಾಜ್ಯಗಳ ಬಗ್ಗೆ ಪರಿಚಯ ನೀಡುವ ಕನ್ನಡ ಲೇಖಕರು ಇಷ್ಟೊಂದು ಬೇಜವಾಬ್ದಾರಿಯವರಲ್ಲವೆಂಬುದು ಸಮಾಧಾನದ ಸಂಗತಿ. ರಮೇಶ

ಕ್ರಿಯಾವರ ಪ್ರವಾಸ ಕಥನ ಮರಾಠಿ ಓದುಗರಿಗೆ ದಿಕ್ಕೆತಪ್ಪಿಸುವಂತಹದಾಗಿದ್ದರೆ, ಕನ್ನಡ ಓದುಗರನ್ನು ಕಿರಕುಳುವಂತಹುದು ಆಗಿದೆ.

ಕನ್ನಡ ನಾಡನ್ನು, ಭಾರತದ ವಿವಿಧ ಪ್ರದೇಶಗಳನ್ನು ಅರ್ಥಪೂರ್ಣವಾಗಿ ಕಟ್ಟಿಕೊಡುವ ಕನ್ನಡ ಲೇಖಕರು ವಿದೇಶದ ಅನುಭವಗಳನ್ನು ವಸ್ತುನಿಷ್ಠವಾಗಿಯೇ ಚಿತ್ರಿಸಿದ್ದು ಬಹಳ ವಿರಳ. ಬೇರೆ ಬೇರೆ ಕಾರಣಗಳಿಂದ ವಿದೇಶ ಪ್ರವಾಸ ಮಾಡಿದ ಕನ್ನಡ ಲೇಖಕರು ತಾವು ಕಂಡುಣ್ಣುವುದನ್ನು ಸಾಧ್ಯವಿದ್ದಷ್ಟು ವಿವರವಾಗಿ ಚಿತ್ರಿಸಿರುವುದರಿಂದ ಓದುಗರಿಗೆ ಮುಖ್ಯವಾಗಿ ವಿದೇಶಗಳ ಬದುಕು, ಸಂಸ್ಕೃತಿಗಳನ್ನು ತಿಳಿದುಕೊಳ್ಳಲು ಸಾಧ್ಯವಾಗಿದೆ. ಶಿವರಾಮ ಕಾರಂತರ 'ಅಪೂರ್ವ ಪಶ್ಚಿಮ,' ಗೊರೂರರ 'ಅಮೆರಿಕದಲ್ಲಿ ಗೊರೂರು', ಜಿ. ಎಸ್. ಶಿವರುದ್ರಪ್ಪ ರವರ 'ಅಮೆರಿಕದಲ್ಲಿ ಕನ್ನಡಿಗ' ಇತ್ಯಾದಿ ಪ್ರವಾಸ ಕಥನಗಳು ಅವೇಕ್ಷ ಮುಖವಾಗಿ ನಮ್ಮ ಜ್ಞಾನದ ಕ್ಷಿತಿಜವನ್ನು ವಿಸ್ತರಿಸುತ್ತವೆ. ಕಾರಂತರು ಪ್ರಕೃತಿ ಸೌಂದರ್ಯ, ಕಲೆ, ಪ್ರಪಂಚದ ಜನರ ಬದುಕು, ಅವರ ಸುಖಿಮಯ ಬದುಕಿಗೆ ಅವಶ್ಯಕವಾಗಿರುವ ಅಮೂಲ್ಯ ಅಂಶಗಳನ್ನು ಪ್ರಧಾನವಾಗಿ ತಮ್ಮ ಪ್ರವಾಸ ಕಥನದಲ್ಲಿ ಅಭ್ಯಸಿಸಿದರೆ "ಗೊರೂರರು" ಬಂದಿದ್ದಾರೆ. ರಾ. ವಿದ್ಯಾಶಂಕರರು. 'ಅಮೇರಿಕದಲ್ಲಿ ಗೊರೂರರು' ಕೃತಿ ಒಂದು ಅಕಾಡೆಮಿಯಿಂದ ಬಹುಮಾನ ಪಡೆದ ಮಹತ್ವದ ಕೃತಿ. ಅಮೇರಿಕ ಶ್ರೀಮಂತ ದೇಶ. ಅಲ್ಲಿ ಸೌಕರ್ಯಗಳಿಗೆ ಕೊರತೆಯಿಲ್ಲ. ಗಾಂಧಿವಾದಿಯಾದ ಗೊರೂರರು ಅಮೇರಿಕೆಯ ಸಮಗಳನ್ನು ಸೂಕ್ಷ್ಮ ಪ್ರಮಾಣದಲ್ಲಿ ಗುರುತಿಸಿದರೂ ತಮ್ಮ ದೇಶದ ಶ್ರೇಷ್ಠತೆಯನ್ನು ಕಳೆದುಕೊಳ್ಳಲಿಲ್ಲ. ಬಂದೆರಡು ಸಂದರ್ಭಗಳನ್ನು ಇಲ್ಲಿ ಸೂಚಿಸಬಹುದು. ಗೊರೂರರ ಬಿಡಿಲ್ಲಿಯಾಕ್ಕಿ ಸಂದರ್ಶನವಿತ್ತ ಸಂದರ್ಭದಲ್ಲಿ ಬೆಂಜಮಿನ್ ಫ್ರಾಂಕ್ಲಿನ್‌ರ ವ್ಯಕ್ತಿತ್ವವನ್ನು ಕುರಿತ "ಬೆಂಜಮಿನ್ ಫ್ರಾಂಕ್ಲಿನ್‌ನ ಸ್ವಾತಂತ್ರ್ಯ ಹೋರಾಟ, ಫಿಲಡೆಲ್ಫಿಯಾ ಸ್ವಾತಂತ್ರ್ಯ ಘೋಷಣೆಯ ಕೇಂದ್ರವಾಗಿತ್ತು, ಬ್ರಿಟಿಷ್ ವಸ್ತುಗಳ ಬಹಿಷ್ಕಾರ, ಅರ್ಥಿಕರಂಗದಲ್ಲಿ ಸ್ವಾವಲಂಬನೆ ಈ ಎಲ್ಲ ಕಾರ್ಯಗಳಲ್ಲಿಯೂ ಜನತೆಯ ಪೂರ್ಣ ಸಹಕಾರಗಿತ್ತ ಇವುಗಳನ್ನು ಫ್ರಾಂಕ್ಲಿನ್ ಸಾಧಿಸಿದನು. ಬಹುಶಃ ವಸ್ತುಗಳ ಬಹಿಷ್ಕಾರವನ್ನು ರಾಜಕೀಯ ಅಸ್ತ್ರವಾಗಿ ಬಳಸಿದ್ದು ಇಲ್ಲಿ ಪ್ರಥಮವಾಗಿದ್ದರಿಂದ ಬೆಂಜಮಿನ್ ಫ್ರಾಂಕ್ಲಿನ್ ಇರಬೇಕು. ಗಾಂಧೀಜಿ ಈ ಬ್ರಿಟಿಷ್ ಸರಕಾರದೆಂದಿಗೆ ತಮ್ಮ ಹೋರಾಟದಲ್ಲಿ ಬ್ರಿಟಿಷ್ ವಸ್ತುಗಳ ಬಹಿಷ್ಕಾರವನ್ನು ಪ್ರಧಾನವಾಗಿ ಬಳಸಿದರು. "ಫ್ರಾಂಕ್ಲಿನ್‌ನ ಜೀವನಕ್ಕೆ ಗಾಂಧೀಜಿಯನ್ನು ಸ್ಮರಿಸುವ ಗೊರೂರರವರು ವಿಶ್ವದ ವಿಸ್ಮಯಗಳಲ್ಲಿಲ್ಲಿಂದಾದ ನಯಾಗರ ಜಲಪಾತದ ವೈಭವವನ್ನು ವೈಜ್ಞಾನಿಕವಾಗಿ ನಮ್ಮ ಗೇರುಸೊಪ್ಪೆ ಜಲಪಾತವನ್ನು ಹೋಲಿಸಿಕೊಳ್ಳುತ್ತಾರೆ. "ನಯಾಗರ ಜಲಪಾತವನ್ನು ಜಗತ್ತಿನ ಒಳ ಅದ್ಭುತಗಳಲ್ಲಿ (ವೈಚಿತ್ರ್ಯಗಳಲ್ಲಿ) ಒಂದೆಂದು ಸಾಮಾನ್ಯವಾಗಿ ಹೇಳುತ್ತಾರೆ. ಇದಕ್ಕೆ ಬಲವಾತ ಪ್ರಾಕೃತಿಕ ಮಹತ್ ಘೋಷ ಮತ್ತು ಮಾನವ ನಿರ್ಮಿತ ಮುಖ್ಯ ವಿಷಯಗಳು ಜೊತೆಗೂಡಿರುವುದು ವಾತಾವರಣ ಸ್ವಾವೇಶ ಬರಲು ಕಾರಣವಾಗಿದೆ. ರತದ ಪ್ರಕೃತಿ ವೈಚಿತ್ರ್ಯ, ಸೊಬಗು, ಭಾಗಾದತೆ, ವೈವಿಧ್ಯ ಅಮೆರಿಕಕ್ಕಿಂತ ಹೆಚ್ಚು ಪಾದಾಕಾರ. ಅದೆಂದರೆ ತರದ ಸೊಗಸು, ಅದೆಂದರೆ ತರದ ಸೊಗಸು. ನಮ್ಮ ಗೇರುಸೊಪ್ಪೆ ಜಲಪಾತ ನಯಾಗರ ಜಲಪಾತಕ್ಕಿಂತ ಹೆಚ್ಚಾಗಿ, ಕಿಕ್ಕಿಕ್ಕಿ ನೋಡುವುದಕ್ಕೆ ಸಾಧ್ಯವಾಗದ ವಿಶ್ವರೂಪದ ಚಿತ್ರಣಗಳಿರುವ ಬಂಡೆಗಳ ಮೇಲೆ, ಭುಗಿಲುಗುಟ್ಟಿ ಬಿದ್ದು ಒಟ್ಟಾಗಿ ಕಳಕ್ಕಿ ಬೀಳುತ್ತದೆ" ಈ

ಬಗೆಯ ಭಾರತೀಯ ರಾಷ್ಟ್ರೀಯ ಜಾಗೃತ ಪ್ರಜ್ಞೆ ಗೊರೂರವರಂಥ ಕೆಲವರಲ್ಲಿ ಮಾತ್ರ ಕಂಡುಬರುತ್ತದೆ. ನಮ್ಮ ಲೇಖಕರಲ್ಲಿ ವಿದೇಶಿ ವೈಭವಕ್ಕೆ ಮೈಮರೆತು, ತಮ್ಮ ಕೊರತೆಗಳಿಗೆ ಮರುಗುವವರೇ ಹೆಚ್ಚಾಗಿ ಕಂಡುಬರುವರು. ಒಂದು ಸನ್ನಿವೇಶದಲ್ಲಿ ಗೊರೂರ ಹೇಳುತ್ತಾರೆ. ``ಮನುಷ್ಯ ಸ್ವಭಾವ ಎಲ್ಲೆಡೆಯೂ ಒಂದೆ. ವ್ಯಾಪಾರಿಗಳು ಎಲ್ಲಿಯೂ ಮೋಸಮಾಡುತ್ತಾರೆ.'' ಇಡೀ ಪುಸ್ತಕದಲ್ಲಿ ಗೊರೂರವರ ಪರಿಪಕ್ವ ಮನಸ್ಸು ತುಡಿಯುತ್ತಿದ್ದು, ಅಲ್ಲಿಗಲ್ಲಿಗೆ ಅವರದೇ ಆದ ವಿನೋದ ಮಿಂಚುತ್ತದೆ. ಈ ಬಗೆಯ ಅಥವಾ ಇದಕ್ಕಿಂತ ಒಂದಿಷ್ಟು ಭಿನ್ನವಾದ ಹಾಸ್ಯ ಡಾ.ರಾ.ಯ.ಧಾರವಾಡಕರರ ಬರೆಹದಲ್ಲಿಯೂ ಕಾಣುತ್ತೇವೆ. ಕಾವ್ಯಾತ್ಮಕವಾಗಿದ್ದೂ ಅಕಡೆಮಿಕ ಶಿಸ್ತಿನಿಂದ ಪ್ರವಾಸದ ಅನುಭವಗಳನ್ನು ಹೇಳುವವರು ಡಾ. ಜಿ. ಎಸ್. ಶಿವರುದ್ರಪ್ಪನವರು. ಅಮೆರಿಕೆ ಕುರಿತು ಈ ಮಹತ್ವದ ಲೇಖಕರ ಪ್ರವಾಸ ಕಥನಗಳು ಕನ್ನಡ ಪ್ರವಾಸ ಸಾಹಿತ್ಯದ ಪ್ರಕಾರಕ್ಕೆ ಮೌಲಿಕ ಕೊಡುಗೆಗಳಾಗಿವೆ.

ವಿದೇಶ ಪ್ರವಾಸ ಸಾಹಿತ್ಯದಲ್ಲಿ ಅಮೇರಿಕಾ ಕುರಿತು ಬಂದ ಸಾಹಿತ್ಯವೇ ಹೆಚ್ಚು. ಅಲ್ಲಿಗೆ ಬೇರೆ ಬೇರೆ ಕೆಲಸಕ್ಕಾಗಿ ಭಾರತೀಯ ಯುವಕರು ಹೋಗುತ್ತಲೇ ಇರುವುದರಿಂದ ಅವರ ಹಿರಿಯರು, ಸಂಬಂಧಿಕರು ಅಲ್ಲಿಗೆ ಪ್ರವಾಸ ಕೈಕೊಳ್ಳುವುದು ಸಹಜವಾಗಿದೆ. ವಿದ್ಯಾಭ್ಯಾಸ ಕ್ಕೆಂದು ವೈದಕೀಯ ಚಿಕಿತ್ಸೆಗೆಂದೂ ಅಲ್ಲಿಗೆ ಹೋಗುವವರೂ ಇದ್ದಾರೆ. ಬಿ ಜಿ. ಎಲ್.ಸ್ವಾಮಿ ವಿದ್ಯಾರ್ಥಿಯಾಗಿ ಅಮೇರಿಕಕ್ಕೆ ಹೋಗಿ `ಅಮೇರಿಕದಲ್ಲಿ ನಾನು' ಎಂಬ ಕೃತಿ ಬರೆದರು. ರೇಖಾಚಿತ್ರಗಳನ್ನೊಳಗೊಂಡ, ರಮ್ಯ ವಿನೋದದ ಸಂಗತಿಗಳಿಂದ ಕೂಡಿದ ಈ ಕೃತಿ ತುಂಬ ಆಕರ್ಷಕವಾಗಿದೆ. ಎಸ್. ಆರ್. ಗೌತಮ್ ಅವರು ತಮ್ಮ ಮಗಳ ಚಿಕಿತ್ಸೆಗಾಗಿ ಅಮೇರಿಕೆಗೆ ಹೋಗಿ, ಅಲ್ಲಿಯ ವೈದ್ಯಕೀಯ ಸೌಲಭ್ಯ, ಹೃದಯಕ್ಕೆ ಸಂಬಂಧಿಸಿದ ಶಸ್ತ್ರಚಿಕಿತ್ಸೆ, ಡಾಕ್ಟರ ಮನೋಧರ್ಮ, ಶಿಸ್ತು-ಇತ್ಯಾದಿಗಳನ್ನು ಕುರಿತು `ನಯಾನಗರಕ್ಕೆ ಐನೂರು ಮೈಲಿ' ಎಂಬ ಪುಸ್ತಕದಲ್ಲಿ ಬರೆದಿರುವರು. `ಇದು ಶುದ್ಧಾಂಗವಾಗಿ ಪ್ರವಾಸ ಕಥನವಲ್ಲ ' ಎಂದು ಅವರೇ ಹೇಳಿಕೊಂಡಿದ್ದರೂ ಪ್ರವಾಸ ಸಾಹಿತ್ಯದ ವಿಪುಲ ಸಾಮಗ್ರಿ ಅದರಲ್ಲಿದೆ.

ಅಮೇರಿಕಾ ಪ್ರವಾಸ ಸಾಹಿತ್ಯದ ನಂತರ ನಾವು ವಿಶೇಷವಾಗಿ ಕಾಣುವುದು, ರಷ್ಯಾ ಪ್ರವಾಸ ಕಥನವನ್ನು. ಸಾಮ್ಯವಾದದ ವ್ಯವಸ್ಥೆ, ಅದರ ಅನುಕೂಲತೆಗಳು ಇತ್ಯಾದಿಗಳ ಒಂದು ಕಾಲದಲ್ಲಿ ಭಾರತೀಯರ ಗಮನವನ್ನು ಸೆಳೆದಿದ್ದವು. ಭಾರತಕ್ಕೂ ಸೋವಿಯೆತ್ ದೇಶಕ್ಕೂ ನಿಕಟ ಬಾಂಧವ್ಯ ಇತ್ತು. ದೇ. ಜ. ಗೌ. ಅವರ `ವಿದೇಶದಲ್ಲಿ ನಾಲ್ಕುವಾರ', ಬಸವರಾಜ ಕಟ್ಟೀಮನಿಯವರ `ನಾನು ಕಂಡ ರಶಿಯಾ', ಜಿ. ಎಸ್. ಶಿವರುದ್ರಪ್ಪನವರ `ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ ', ಪಾಟೀಲ ಪುಟ್ಟಪ್ಪನವರ `ಸೋವಿಯತ್ ದೇಶ ಕಂಡೆ' ಇತ್ಯಾದಿ ಗ್ರಂಥಗಳು ರಶಿಯವನ್ನು ಯಥಾವತ್ತಾಗಿ ಪರಿಚಯಿಸುವ ಗ್ರಂಥಗಳು.

ಇಂಗ್ಲಂಡ, ಜರ್ಮನಿ ಮುಂತಾದ ಪಾಶ್ಚಾತ್ಯದೇಶಗಳನ್ನು ಕುರಿತು ಬರೆದ ಕೆಲ ಪ್ರವಾಸ ಪ್ರಬಂಧಗಳು ದೊರೆಯುತ್ತವೆ. ಶಿಷ್ಯವೇತನದ ಮೂಲಕ, ಸರಕಾರದ ಸಹಾಯ ಧನದ ಮೂಲಕ ಅಥವಾ ಬೇರೆ ಬೇರೆ ಸಮಿತಿಗಳ ಪ್ರತಿನಿಧ್ಯ ಪಡೆಯುವುದರ ಮೂಲ ಪ್ರವಾಸ ಮಾಡಿದವರೇ ಹೆಚ್ಚು. ಪ್ರವಾಸವ ಹವ್ಯಾಸವಿರಿಸಿಕೊಂಡವರು ವಿರಳ. ದ. ರಾ. ಕು. `ತಿರುಗಲ ತಿಪ್ಪ' ಎಂದು ಬಿರುದು ನೀಡಿದ ಶಿವರಾಮ ಕಾರಂತ, ಪ್ರವಾಸದ ಹವ್ಯಾಸ

ಜಿ. ಎಸ್. ಶಿವರುದ್ರಪ್ಪ ಮತ್ತು ಕೃಷ್ಣಾನಂದ ಕಾಮತ ಈ ಬೆರಳೆಣಿಕೆಯ ಕೆಲವರು
ದ ಪ್ರವಾಸ ಮತ್ತು ಪ್ರವಾಸ ಕಥನ ಹೆಚ್ಚು ಅಭ್ಯಸನೀಯವೆನಿಸುತ್ತದೆ.

ಕನ್ನಡದಲ್ಲಿ ಪ್ರವಾಸ ಸಾಹಿತ್ಯ ಇತ್ತೀಚಿನ ಬೆಳೆ. ಅದು ಸಮೋದಯ, ನವ್ಯ, ಬಂಡಾಯ
ಧೋರಣೆಗಳನ್ನು ಮೀರಿದ, ಎಲ್ಲ ಮನೋಭಾವಗಳನ್ನು ಒಳಗೊಂಡ, ಪ್ರಕೃತಿ
ಂಚಿಗಳನ್ನು ಕಲೆ- ವಿಜ್ಞಾನಗಳನ್ನು, ಅನಾಗರಿಕ-ನಾಗರಿಕ ಜಗತ್ತುಗಳನ್ನು ಪ್ರತ್ಯಕ್ಷ
ನದ, ಅನುಭವದ ಆಧಾರದಿಂದ ಚಿತ್ರಿಸುವ, ವಿಶ್ಲೇಷಿಸುವ ವಿಶಿಷ್ಟವಾದ ಸಾಹಿತ್ಯ
ರ. ಪ್ರೀತಿ, ಅನುಕಂಪ, ಕುತೂಹಲ, ವಿನೋದ, ಆಶ್ಚರ್ಯ ಮೊದಲಾದ ಭಾವಗಳನ್ನು
ೀಪನ ಗೊಳಿಸುವ ಸಾಹಿತ್ಯವೂ ಆಹುದು. ಅದು ಒಮ್ಮೆ ಲಲಿತ ಪ್ರಬಂಧದಂತೆ,
ಮ್ಮೆ ಕಾದಂಬರಿಯ ಕತೆಯಂತೆ, ಮತ್ತೊಮ್ಮೆ ವಿಜ್ಞಾನಿಯ ಅನ್ವೇಷಣೆಯಂತೆ ವಿವಿಧ
ರೂಪಗಳನ್ನು ತಾಳುತ್ತ ಸಾಗುತ್ತದೆ. ಅದರ ವಸ್ತು ಜಗತ್ತಿನಷ್ಟೇ ವಿಸ್ತಾರವಾದದ್ದು.

ಅದರ ವೈವಿಧ್ಯ ಕೂಡ ಹಾಗೆಯೇ. ಇದ್ದರಿಂದ ಪ್ರವಾಸ ಸಾಹಿತ್ಯಕ್ಕೆ ತನ್ನದೇ ಆದ
ತ್ವ ಹಾಗೂ ಮೌಲಿಕತೆ ಇರುವುದನ್ನು ಯಾರೂ ಒಪ್ಪಿಕೊಳ್ಳಬಹುದು.

ಡಾ. ಜಿ. ಎಸ್. ಶಿವರುದ್ರಪ್ಪನವರು 'ಜನ ಗಣ ಮನ' ಕೃತಿಗೆ ಮುನ್ನುಡಿ ಬರೆಯುತ್ತ
ಪ್ರವಾಸ ಸಾಹಿತ್ಯ' ಇತ್ತೀಚಿಗೆ ಕನ್ನಡದಲ್ಲಿ ರೂಪಗೊಳ್ಳುತ್ತಿರುವ ಒಂದು ವಿಶಿಷ್ಟ ಸಾಹಿತ್ಯ
ಾರವಾಗಿದೆ. ತುಂಬ ಆಕರ್ಷಕವಾದ ಈ ಪ್ರಕಾರ, ಈಗಾಗಲೇ ಹಲವರ ಕೈಯಲ್ಲಿ ಕೇವಲ
ಬೆಯಾಗುತ್ತ, ವಿಧವಾ ದೈನಂದಿನ ಅನುಭವ, ಅನಿಸಿಕೆಗಳ ವರದಿಯಾಗುತ್ತ, ಇಲ್ಲವೆ
ರಸ ಉಪನ್ಯಾಸವಾಗುತ್ತ ನಡೆದಿದೆ ಎಂಬುದು ಅಪರಿಚಿತವಾದ ಸಂಗತಿಯೇನಲ್ಲ "
ದಿದ್ದಾರೆ. ಹರಟೆ, ವರದಿ, ನೀರಸ ಉಪನ್ಯಾಸಗಳಿಂದ ಭಿನ್ನವಾದ ಅನೇಕ ಕೃತಿಗಳು
ಡದಲ್ಲಿ ಬಂದಿರುವುದನ್ನು ನಾವು ಬಲ್ಲೆವು. ಪ್ರವಾಸ ಮಾನವನ ಮೂಲ ಪ್ರವೃತ್ತಿಗಳಲ್ಲಿ
ದಾಗಿರುವುದರಿಂದ, ಪ್ರವಾಸದ ಸೌಲಭ್ಯಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದರಿಂದ,
ಸ ಹೊಸ ದೃಷ್ಟಿಕೋನದ ಲೇಖಕರು ಬೆಳೆಯುತ್ತಿರುವುದರಿಂದ ಕನ್ನಡದಲ್ಲಿ ಪ್ರವಾಸ
ಂತ್ಯ ಬೆಳೆಯುವ ಸಾಧ್ಯತೆ ಇದ್ದೇ ಇದೆ. ಅಮೇರಿಕೆ, ಯುರೋಪ ಈ ಪಾಶ್ಚಾತ್ಯ ಹಾಗೂ
ಚಿತ ದೇಶಗಳ ಸಾಹಿತ್ಯಕ್ಕಿಂತ ಭಿನ್ನವಾದ ಆಫ್ರಿಕಾ, ಆಸ್ಟ್ರೇಲಿಯಾ ಇತ್ಯಾದಿ ಅಪರಿಚಿತವೆನಿಸುವ
ವಾ ಅಲ್ಪಪರಿಚಿತವೆನಿಸುವ, ಇರಾಣ, ಇರಾಕ ದೇಶಗಳನ್ನು ನೋಡಿಯೇ ಇಲ್ಲವೆನ್ನುವ
ಜ್ಞೆಗೊಳಗಾದ ದೇಶಗಳ ಸಾಹಿತ್ಯವೂ ಬರಬೇಕಾಗಿದೆ. ನಮ್ಮಲ್ಲಿಯೇ ಇರುವ ಸುಂದರ
ದ ಕೊಡಗನ್ನು ಸುತ್ತಾಡಿ, ಬೀದರ-ಕಲ್ಯಾಣಗಳನ್ನು ಕಂಡು ಬರೆಯಬೇಕಾದದ್ದೂ ಇದೆ.
ನ್ನ ದೇಶದಲ್ಲಿಯೂ ಇನ್ನೂ ಅಜ್ಞಾತವಾಗಿರುವ ಗ್ರಾಮೀಣ ಸೆಲೆಗಳೂ ಇಲ್ಲದಿಲ್ಲ.
ಸಾಜಿಕ, ಸಾಂಸ್ಕೃತಿಕ ಅಧ್ಯಯನಕ್ಕೆ ಒಪ್ಪುವಂಥ ಸಾಮಗ್ರಿ ಪ್ರವಾಸ ಸಾಹಿತ್ಯದಿಂದಲೂ
ರೆಯುವುದರಿಂದ ಈ ಬಗೆಯ ಸಾಹಿತ್ಯ ಬೆಳೆಯಬೇಕಾದ ಅಗತ್ಯ ಸಾಕಷ್ಟಿದೆಯೆಂದು
ಳಬಹುದು.

ಆತ್ಮಚರಿತ್ರೆಗಳು

- ಪಿ. ವಿ. ತಿರು

ನಮ್ಮ ಬಾಳ್ವೆಗು ಘನತೆ ಬರಲಪ್ಪುದೆಂದು
ಘನವಂತರಾ ಬಾಳ್ವೆ ನೆನಹು ಕೊಡುತಿಹುದು
ಬೀಳ್ಕೊಂಡ ಅವರು ಬಿಟ್ಟಿಹರು ಹಿಂದೆ ಇಲ್ಲಿ
ಹೆಜ್ಜೆ ಗುರುತುಗಳ ಕಾಲವೆಂಬಾ ಮಳಲಿನಲ್ಲಿ

-ಎಚ್. ಡಬ್ಲೂ. ಲಾಂಗಫೆಲೆ

ಜೀವನಚರಿತ್ರೆ ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯನ್ನು ಕುರಿತು ಬರೆಯಲ್ಪ
ಬರವಣಿಗೆಯಾದರೆ, ಆತ್ಮಚರಿತ್ರೆ ಒಬ್ಬ ವ್ಯಕ್ತಿ ತನ್ನನ್ನು ಕುರಿತು ತಾನೇ ಬರೆದುದು. ಲಿ
ಸ್ಟ್ರಾಚಿ ಹೇಳುವ ಹಾಗೆ ``ಒಂದು ಒಳ್ಳೆಯ ಜೀವನ ಚರಿತ್ರೆಯನ್ನು ಬರೆಯುವುದು ಬಹ
ಒಳ್ಳೆಯ ಜೀವನವನ್ನು ನಡೆಸಿದಷ್ಟೇ ಕಷ್ಟ''. ಅಂದಾಗ, ಆತ್ಮಸಾಕ್ಷಿಯಾಗಿ ಬರೆಯಬೇ
ಆತ್ಮಚರಿತ್ರೆ ಇನ್ನೂ ಕಷ್ಟತಮವಾದುದು ಎಂಬುದು ಇದರಿಂದ ಸಿದ್ಧವಾಗುತ್ತದೆ. ಒಬ್ಬ
ತಾನು ಜೀವನದಲ್ಲಿ ಕಂಡ ಸ್ವಾರಸ್ಯ, ಉಂಡ ಅನುಭವ, ಮಾಡಿದ ಕಾರ್ಯ, ತಾಳಿದ ನಿ
ಮೊದಲಾದವನ್ನು ಆತ್ಮನಿಷ್ಠವಾಗಿ, ನೂಲಿನ ಮೇಲೆ ನಡೆದಷ್ಟು ಜಾಗ್ರತೆಯಿಂದ
ನಿರೂಪಣೆ ಮಾಡಬೇಕಾಗುತ್ತದೆ. ಇಲ್ಲಿ ಅವನು ಹೆಮ್ಮೆ ಹೆಬ್ಬೊಗಳೆಗಳಿಗೆಲ್ಲ ಅ
ಸಾಕ್ಷಿಯಾಗಿರುವುದರಿಂದ ಜಾನ್‌ಸನ್ ``ಒಬ್ಬ ವ್ಯಕ್ತಿಯ ಜೀವನ ಚರಿತ್ರೆಯನ್ನು ಬರೆ
ಅವನಷ್ಟು ಅರ್ಹತೆ ಬೇರಾರಿಗೂ ಇಲ್ಲ'' ಎಂದಿದ್ದಾನೆ.

``ಪ್ರತಿಯೊಬ್ಬನ ಬಾಳಿನ ಕತೆಯೂ ಒಂದು ಅತ್ಯುತ್ತಮ ಚರಿತ್ರೆಯಾಗು
ಬರೆಯುವ ಹದವನ್ನು ಬಲ್ಲವನಿಗೆ ಬಾಳೇ ಒಂದು ಕಲೆ. ಅದನ್ನು ಮಸಿಯಲ್ಲಿ ಮೂಡಿಸು
ಸೂಕ್ಷ್ಮಕಲೆ. ಕುಸುರಿನ ಕೆಲಸ. ಒಬ್ಬ ಲಕ್ಷಾಧೀಶನ ಜೀವನ ಒಂದು ಕತೆಯಾಗಬಹುದ
ಒಬ್ಬ ಭಿಕ್ಷುಕನ ಬಾಳು ಇನ್ನೂ ಹೆಚ್ಚು ಸ್ವಾರಸ್ಯಕರವಾದ ಕತೆಯಾಗುವುದರಲ್ಲಿ ಸಂಶಯವಿ
ಆದರೆ ಆ ಕಥೆಯನ್ನು ಸ್ವಾರಸ್ಯಕರವಾಗಿಸುವಲ್ಲಿ ಆತ್ಮಚರಿತ್ರೆಕಾರನಿಗೆ ``ವಿಷಯಗ
ಸಂಯೋಜಿಸುವ, ಗ್ರಹಿಸುವ, ಆತ್ಮಶೋಧನೆ ಮಾಡಿಕೊಳ್ಳುವ ಶಕ್ತಿಯಿರಬೇಕು. [೧]

---

೧. ಬೀಚಿ, ಭಯಾಗ್ರಫಿ, ಮೆಚ್ಚುಲೇರುವ ಮುನ್ನ, ; ಪು. ೩

ವಾದ ವಾಸ್ತವಿಕ ಕಲಾ ಪ್ರವೃತ್ತಿ, ಅಲಿಪ್ತತೆ, ಕುತೂಹಲ ಈ ಗುಣಗಳನ್ನು ಅವನು ಡಿರಬೇಕು.[3]

ಕೆಲವರು ಆತ್ಮಕಥೆಯೆಂದರೆ ಒಂದು ಬಗೆಯ ಸ್ವಪ್ರತಿಷ್ಠಾಪ್ರಚಾರ ಎಂದು ಸುವದುಂಟು ಅಲ್ಲಿ ಅವರು ವಾಸ್ತವವಾಗಿ ಕಾಣುವದಕ್ಕಿಂತ ದೊಡ್ಡವರಾಗಿ ಕಾಣಲು ಪ್ನಪಡುತ್ತಾರೆ. ಇಂಥ, ಸತ್ಯಸಂಧನಲ್ಲದ ಆತ್ಮಕಥೆಗಾರ ವಿಷಯವನ್ನು ಮರೆಮಾಚ ದು ಇಲ್ಲದ್ದನ್ನು ಸೇರಿಸಬಹುದು. ಇದ್ದದ್ದನ್ನು ವಿರೂಪ ಮಾಡಬಹುದು ಅಥವಾ ಮಾಡಬಹುದು. ಎಲ್ಲ ಆತ್ಮಕಥೆಗಾರರೂ ತಮ್ಮ ವಿಚಾರದಲ್ಲಿ ನಿಷ್ಪಕ್ಷಪಾತಿಗಳಾಗಿ ವಿಲ್ಲ. ತಮ್ಮನ್ನು ತಾವೇ ದಂಡಿಸಿಕೊಳ್ಳುವ ಮನೋಭಾವದವರಿರುತ್ತಾರೆ, ಸ್ವಪ್ರತಿಷ್ಠೆ ವರಿರುತ್ತಾರೆ, ವಿಷಯಲೋಲುಪರಿರುತ್ತಾರೆ. ಅನೇಕ ಸಂದರ್ಭಗಳಲ್ಲಿ ಆತ್ಮಕಥೆಯನ್ನು ಯುವವನ ಭಾವೋದ್ರೇಕದಿಂದ ಆತನ ಕೃತಿ ದೋಷಯುಕ್ತವಾಗುತ್ತದೆ. ಅವನ ಜೀವನದ ಚಿತ್ರ ಸಿಗದೆ, ತನ್ನದು ಹೇಗಿರಬೇಕಿತ್ತು ಎಂದು ಅವನು ಆಶಿಸಿದ್ದನೋ ಅಂಥ ಜೀವನ ತವಾಗಿರುತ್ತದೆ"[4] ಈ ದೋಷವನ್ನು ನಿವಾರಿಸಲು ಕೆಲವರು ಪ್ರಾಮಾಣಿಕ ಪ್ರಯತ್ನ ಪಡುದೂ ಉಂಟು. ಉದಾಹರಣೆಗೆ ಆಲೂರು ವೆಂಕಟರಾಯರು "ಈ ಜೀವನ ಯನ್ನು ಬರೆಯುವಾಗ ಅಹಂಕಾರಾತಿರೇಕದಿಂದ ಉಬ್ಬಿಯೂ ಹೋಗಬಾರದೆಂದು, ನಾತಿರೇಕದಿಂದ ನಿಷ್ಕಾರಣವಾಗಿ ತಗ್ಗಿಯೂ ಹೋಗಬಾರದೆಂದು ನಿಶ್ಚಯ ಮಾಡಿದ್ದೇನೆ" ದ್ದಾರೆ.[5] ಈ ಕಾರಣದಿಂದಲೇ ಈ ಕೃತಿ ಸಂಪೂರ್ಣ ಯಶಸ್ವಿಯಾಗಿದೆಯೆಂಬುದಕ್ಕೆ ಈ ಪುಸ್ತಕದ ಬೆಲೆ ಏನಿದ್ದರೂ ಅದರ ಪ್ರಾಮಾಣಿಕತೆಯಲ್ಲಿ" ಎಂಬ ಮಾತು ಯಾಗಿದೆ.[6]

ಮತ್ತೆ ಕೆಲವರಿಗೆ ಈ ಆತ್ಮಚರಿತ್ರೆಯು, ಭರತನು ವೃಷಭಾಚಲದಲ್ಲಿ ತನ್ನ ವಿಜಯ ಸ್ತಿ ಬರೆಸ ಹೊರಟು "ಕೊಳಗೊಂಡ ಗರ್ವರಸ ಸೋರಿ ಹೋದಂತೆ" ಆತ್ಮ ಕ್ಷಣೆಯ ಸಾಧನವಾಗಿರುವುದೂ ಉಂಟು. ಜಿ. ಪಿ. ರಾಜರತ್ನಂ ಅವರು "ಹತ್ತು ವರುಷದ ೆಗಳನ್ನು ಬರೆದು ಬರೆದು ಹಾಕಿದ ಹಾಗೆಲ್ಲಾ ನನ್ನ ಅಂತರಂಗದಲ್ಲಿ ಕಟ್ಟಿಕೊಂಡಿದ್ದ ಬಗಳು ಕಿತ್ತುಕೊಂಡು ಹೋಗಿ, ಮನಸ್ಸು ಹಿತವಾದ ಸಮಾಧಾನ ಅನುಭವಿಸಿತು" ದ್ದಾರೆ.[7] ಬೇಟೆಯವರು "ನಾಗ್ರಂಥವನ್ನು ಬರೆಯುತ್ತಿರುವುದು ಲೋಕಕ್ಕೆ ಒಂದು ಪಕಾರವನ್ನು ಮಾಡಲಿಕ್ಕಲ್ಲ. ಆಗಾಗ ನನ್ನ ತಲೆಯಲ್ಲೇಳುವ ಬಿರುಗಾಳಿ. ನನ್ನ ಯದಲ್ಲಿ ಮೇಲಿಂದ ಮೇಲೆ ಸಂಭವಿಸುವ ವಿಪ್ಲವ, ನನ್ನ ಅಂತರಂಗದ ಗೊಣಗು ಕ್ಕೆಲ್ಲ ಒಂದು ಶಾಂತಿ ಮಾಡಬೇಡವೇ ? ಆ ಪ್ರಯತ್ನದ ಫಲವೇ ಈ ಭವಾಗ್ರಜಿ" ದ್ದಾರೆ.[8] ಆತ್ಮಕಥೆಯಲ್ಲಿ ಆ ವ್ಯಕ್ತಿಯು ಚಿತ್ರವು ಮೂಡಿರುವುದರ ಜೊತೆಗೆ ಆತನ

ಷದ ವಿಶ್ವಕೋಶ ಸಂ. ೧ ಪು. ೨೩೩ ೩ ಅಲೆಯ
ದೆ
ನ್ನ ಜೀವನ ಸ್ಮೃತಿಗಳು. ಪು. ೫
ದೇ ಮಾನ್ಯ೩ ಪು. xvii
ತ್ತು ವರುಷ. ನಾನು ಹತ್ತು ವರುಷ ಬರೆದದ್ದು, ಬಿ.ಕೆ ಪು
ವಾಗ್ರಜಿ ಮೆಟ್ಟಿಲೇರುವ ಮುನ್ನ, ಪು. ೧೨.

ದೇಶ, ಕಾಲ, ಪರಿಸರ, ಅದರೊಂದಿಗೆ ಆತ ಸ್ಪಂದಿಸಿದ ರೀತಿ ಮೊದಲಾದವು ಮೂಡಿ
ಬರುತ್ತಿವೆ. ಇದನ್ನು ಅ. ನ. ಕೃ. ಈ ರೀತಿ ನಿರೂಪಿಸಿದ್ದಾರೆ : " ನನ್ನ ಆರು ದಶಕಗಳ ಬಾಳ್ವೆ
ನಮ್ಮ ನಾಡಿನ ಅತಿ ಮಹತ್ವದ ಕಾಲದೊಂದಿಗೆ ಹಾಸುಹೊಕ್ಕಾಗಿ ಹೊಂದಿಕೊಂಡಿದೆ
ಭಾರತದ ಸ್ವಾತಂತ್ರ್ಯ ಸಂಗ್ರಾಮ. ಕನ್ನಡ ಚೇತನ ವಿಕಾಸ, ಭಾರತದ ಏಕೀಕರಣ, ಕನ್ನಡ
ರಾಜ್ಯೋದಯಗಳೆಲ್ಲಾ ಈ ಕಾಲಾವಧಿಯಲ್ಲಿ ನಡೆದಿರುವ ಘಟನೆಗಳು ಇವುಗಳಿಗೆ ಸಂಬಂಧ
ಪಟ್ಟ ಕೆಲವು ವ್ಯಕ್ತಿಗಳನ್ನು ನಾನು ನಿಕಟವಾಗಿ ಬಲ್ಲೆ. ಕೆಲವರನ್ನು ಹತ್ತಿರದಿಂದ ನೋಡಿದ್ದೇನೆ
ಇವರ ವ್ಯಕ್ತಿತ್ವ, ಸೇವೆಗಳ ಬಗ್ಗೆ ಬರೆಯುವುದು ನನಗೆ ತುಂಬಾ ಸಂತೋಷದ ಕೆಲಸ. "[೮]
ಹೀಗಾಗಿ ಇವರ ಆತ್ಮಚರಿತ್ರೆ ಅಂದಿನ ಆ ಎಲ್ಲ ಘಟನೆಗಳ ಪ್ರತಿಬಿಂಬವಾಗಿ ನಿಲ್ಲುತ್ತಿದೆ
ಅದೇ ರೀತಿ ಮಹಾತ್ಮಾ ಗಾಂಧಿ ಅವರ ಆತ್ಮಚರಿತ್ರೆಯೆಂದರೆ ಭಾರತ ಸ್ವಾತಂತ್ರ್ಯ ಸಂಗ್ರಾಮದ
ಚರಿತ್ರೆಯಾಗುತ್ತದೆ. ಆಲೂರು ವೆಂಕಟರಾಯರ ಚರಿತ್ರೆಯೆಂದರೆ ಕರ್ನಾಟಕದ ಆ ಕಾಲದ
ಇತಿಹಾಸವಾಗುತ್ತದೆ. ಮಾಳವಾಡರ ಆತ್ಮಕಥೆಯೆಂದರೆ, ಸುಮಾರು ಅರವತ್ತು ವರ್ಷಗಳ
ಅವಧಿಯ ಕರ್ನಾಟಕದ ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ಜನಜೀವನಗಳ ಚರಿತ್ರೆಯಾಗುತ್ತದೆ.

ಅವರು ಎದುರಿಸಿದ ಸಮಸ್ಯೆಗಳಲ್ಲಿ ಕೆಲವಾದರೂ ಸರ್ವಕಾಲೀನ ಸಮಸ್ಯೆ
ಗಳಾಗಿರುವುದರಿಂದ, ಆ ಹಾದಿಯಲ್ಲಿ ನಡೆಯ ಬಯಸುವ ಮುಂದಿನ ಪೀಳಿಗೆಗೆ ಅವರ
ಆತ್ಮಚರಿತ್ರೆಗಳು ದೀಪಸ್ತಂಭದಂತೆ ತೋರುವುದು ಸಹಜ. ಉದಾಹರಣೆಗೆ ತ. ಸು.
ಶಾಮರಾಯರು `` ಇಲ್ಲಿರುವ ನನ್ನ ಅನುಭವಗಳು ಜೀವನದಲ್ಲಿ ಕಾಲಿಡುತ್ತಿರುವ ಯುವಕರಿ
ಸ್ವಲ್ಪ ಮಟ್ಟಿನ ಮಾರ್ಗದರ್ಶನ ನೀಡಬಹುದೆಂದು ಭಾವಿಸಿದ್ದೇನೆ "[೯] ಎಂದಿದ್ದ
`ಬದುಕುಮೆಲುಕು' ಪುಸ್ತಕಕ್ಕೆ ಮುನ್ನುಡಿ ಬರೆಯುತ್ತ ದೇಜಗೌ ಅವರು `` ರಾಜಕೀಯದ
ಪ್ರವೇಶಿಸಬೇಕೆನ್ನುವ ತರುಣರು ಇದನ್ನು ಅವಶ್ಯವಾಗಿ ಓದಿ ಪಾಠಕಲಿತು ಮುಂದೆ
ಹೆಜ್ಜೆಯಿಡುವುದೊಳಿತು "[೧೦] ಎಂದಿದ್ದಾರೆ.

ಆತ್ಮಚರಿತ್ರೆಯನ್ನು ಬರೆಯುವವರಿಗೆ ಮುಖ್ಯವಾಗಿ ಬೇಕಾದುದು ಒಳ್ಳೆಯ ನೆನಪಿನ ಶ
ಮತ್ತು ಆತ್ಮಸ್ಥೈರ್ಯ. `` ಹಳೆಯ ನೆನಪುಗಳನ್ನು ಮೆಲುಕು ಹಾಕುವುದು ಒಂದು ಆನಂದಾನುಭ
ವಾಗುತ್ತದೆ. ಅದರಲ್ಲಿಯೂ ಬಾಳಿನಲ್ಲಿ ಅನೇಕ ಕಷ್ಟ ಸುಖಗಳನ್ನನುಭವಿಸಿ ಯಶಸ್ವಿಯಾಗಿ ಜೀವ
ಗುರಿಯನ್ನು ಮುಟ್ಟಿದ ಮಾಗಿದ ಜೀವವೊಂದು ವೃದ್ಧಾಪ್ಯದಲ್ಲಿ ಹಳೆಯ ನೆನಪುಗಳನ್ನು ಮೆಲು
ಹಾಕುವಾಗ ತೃಪ್ತಿ ಮೂಡುತ್ತದೆ. ತಮಗಾದ ಆನುಭವವನ್ನು ಇತರರೊಡನೆ ಹಂಚಿಕೊಂಡ
ಅದು ಬಹುಗುಣವಾಗುತ್ತದೆ. ಬೇರೊಬ್ಬರ ಅನುಭವಗಳು ತಮ್ಮವೇ ಆಗಬಹುದಾ
ಸಾಧ್ಯತೆಯಿರುವುದರಿಂದ ಅವುಗಳನ್ನು ಕೇಳುವ ಅಥವಾ ಓದುವ ಭಾವುಕರ ಚೇ
ಹಿಗ್ಗಲವಕಾಶವುಂಟು. ಈ ಅನುಭವ ಪರಂಪರೆಯೇ ಆತ್ಮಕಥೆ. "[೧೧]

---

೮. ಬರಹಗಾರನ ಬದುಕು ಮುನ್ನುಡಿ ಪು vii
೯. ಹಾ. ಮಾ. ನಾಯಕ ದಾರಿಸಾಗಿದೆ. ಹಿನ್ನುಡಿ
೧೦. ನೆನಪಿನ ಅಲೆಗಳು ಲೇಖಕರು ಬಿನ್ನಹ.
೧೧. ಬದುಕು ಮೆಲಕು ಮುನ್ನುಡಿ ಪು. III
೧೨. ದೇಜಗೌ ಬದುಕು ಮೆಲುಕು, ಮುನ್ನುಡಿ ಪು. III

ಆತ್ಮಚರಿತ್ರೆಯನ್ನು ಬರೆಯ ಹೊರಟ ವ್ಯಕ್ತಿ ತನ್ನ ಗೆಲುವಿನೊಂದಿಗೆ ಸೋಲನ್ನೂ, ಒಳ್ಳೆಯ ಕೃತ್ಯಗಳೊಂದಿಗೆ ಕೆಟ್ಟಪಗಳನ್ನೂ ಬಯಲಿಗಿಡಬೇಕಾಗುತ್ತದೆ. ತನ್ನ ಮನಸ್ಸಿನ ಎಳತೋಟಿಯನ್ನು ಬಿಚ್ಚಿ ತೋರಬೇಕಾಗುತ್ತದೆ. ಆಂದಾಗಲೆ ಅದೊಂದು ಒಳ್ಳೆಯ ಆತ್ಮ ಚರಿತ್ರೆಯಾಗಲು ಸಾಧ್ಯ. ಇದನ್ನೇ ಶಿವರಾಮ ಕಾರಂತ ಅವರು ``ನೀವು ನನ್ನನ್ನು ಕೊಲ್ಲಬೇಕಿಲ್ಲ, ನನ್ನ ಆತ್ಮಹತ್ಯೆಯನ್ನು ನಾನೇ ಮಾಡಿಕೊಳ್ಳುತ್ತೇನೆ.''[೧೩] ಎಂದು ವಿಡಂಬನ ರೂಪದಲ್ಲಿ ಹೇಳಿದ್ದಾರೆ. ಅವರೇ ಮುಂದುವರಿದು "ಮನುಷ್ಯನಿಗೆ ಅನುಭವಗಳನ್ನು ದೊರಕಿಸಿಕೊಡುವು ದರಲ್ಲಿ ಸೋಲು ಗೆಲುವಿನಷ್ಟೇ ಮುಖ್ಯ ಅಥವಾ ಅದಕ್ಕಿಂತಲೂ ಪ್ರಯೋಜನಕಾರಿ. ಏಕೆಂದರೆ ಸೋತವನಿಗೆ ತಿರುಗಿ ತಿರುಗಿ ಕೆಲಸ ಮಾಡಲು ಅವಕಾಶವಿದೆ, ಗೆದ್ದವನಿಗೆ ಆ ಕೆಲಸ ಮುಗಿದಂತೆಯೇ"[೧೪] ಎಂದಿದ್ದಾರೆ. ಹೀಗೆ ಸೋಲು ಗೆಲವುಗಳನ್ನು, ಒಳ್ಳೆಯ ಕೆಟ್ಟ ಗುಣಗಳನ್ನು ಇದ್ದಕ್ಕಿದ್ದ ಹಾಗೆಯೇ, ಧೈರ್ಯದಿಂದ ಹೇಳುವುದು ಪ್ರಾಮಾಣಿಕ ವ್ಯಕ್ತಿಗೆ ಮಾತ್ರ ಸಾಧ್ಯ. ಅವನು ಆ ಎಲ್ಲ ತನ್ನ ಅನುಭವಗಳಿಂದ ``ಹೊರಬಂದು, ದೂರ ನಿಂತು, ಅಂದಿನ ತನ್ನನ್ನೇ ನೋಡಿಕೊಳ್ಳಬೇಕು, ನಿಷ್ಪಕ್ಷ ಬುದ್ಧಿಯಿಂದ ಟೀಕಿಸಬೇಕು. ಇದನ್ನು ಮಾಡಲಾರೆ ಎನ್ನುವವರು ಆತ್ಮಚರಿತ್ರೆಗೆ ಕೈ ಹಾಕುವುದು ವ್ಯರ್ಥ."[೧೫]

ನೆನಪುಗಳಿಗೆ ಮೂಲಸಾಮಗ್ರಿ ಒದಗಿಸುವವು ಪ್ರಮುಖವಾಗಿ ದಿನವಹಿಗಳು ; ಅನುಷಂಗಿಕವಾಗಿ ಟಿಪ್ಪಣಿಗಳು, ಪತ್ರವ್ಯವಹಾರಗಳು, ದಿನಪತ್ರಿಕೆಯ ತುಂಡುಗಳು. ಆದರೆ ಬಹಳಷ್ಟು ಜನರಿಗೆ ದಿನವಹಿಯನ್ನು ಬರೆಯುವ ; ಪತ್ರಗಳನ್ನು, ಪತ್ರಿಕೆಗಳನ್ನು ಕಾಯ್ದಿಡುವ ಚಟವೇ ಇರುವುದಿಲ್ಲ. ಇಂಥವರು ``ನನಗೆ ಸಂಬಂಧಪಟ್ಟವರು ನೆನಪು ಮಾಡಿಕೊಟ್ಟು ಎಲ್ಲರೂ ಸಹಾಯ ಮಾಡಿ ನನ್ನಿಂದ ಈ ಕಾರ್ಯವನ್ನು ಪೂರ್ಣಮಾಡಿಕೊಳ್ಳಬೇಕೆಂದು ವಿಜ್ಞಾಪನೆ"[೧೬] ಎಂಬ ಸಹಾಯವನ್ನು ಯಾಚಿಸಬೇಕಾಗುತ್ತದೆ. ಇಲ್ಲವೆ ಆ ಘಟನೆ ನೆನಪಿಲ್ಲ ವೆಂದು ಕೈ ಬಿಡಬೇಕಾಗುತ್ತದೆ. ಹೀಗಾಗಿರುವುದನ್ನು ಮುಂದಿನ ಹಲವಾರು ಆತ್ಮಚರಿತ್ರೆಗಳಲ್ಲಿ ಕಾಣುತ್ತೇವೆ.

``ಬಹುಮಟ್ಟಿಗೆ ಯುರೋಪಖಂಡದಲ್ಲಿ ಆತ್ಮಕಥೆಯ ಹುಟ್ಟು ಮತ್ತು ಬೆಳವಣಿಗೆ ಆಗುವುದಕ್ಕೆ ಒಂದು ಕಾರಣ ಕ್ರೈಸ್ತ ಮತದ ಮುಖ್ಯ ಅಂಶಗಳಲ್ಲೊಂದಾದ ಪಾಪನಿವೇದನೆ. ಇದರಿಂದ ಆತ್ಮಪರಿಶೋಧನೆಯ ಸ್ವಭಾವ ಬೆಳೆದು, ಯುರೋಪಿನಲ್ಲಿ ಬಹಳ ಹಿಂದೆಯೇ ಆತ್ಮಚರಿತ್ರಾಂಶವುಳ್ಳ ಅನೇಕ ಕೃತಿಗಳು ಬರೆಯಲ್ಪಟ್ಟವು. ನಮಗೆ ದೊರಕಿರುವ ಗ್ರಂಥಗಳ ಆಧಾರದ ಮೆಲೆ ಕ್ರಿ. ಪೂ. ೧೩೧ - ೯೦ ರಲ್ಲಿ ಜೀವಿಸಿದ್ದ ಮಾರ್ಕಸ್ ಅರೀಲಿಯಸ್ ಎಂಬ ರಾಜನ ಮೆಡಿಟೇಷನ್ಸ್ ಎಂಬ ಕೃತಿಯೇ ಆತ್ಮಕಥೆಯ ಗುಂಪಿಗೆ ಸೇರಿದ ಬರವಣಿಗೆಗಳಲ್ಲಿ ಅತ್ಯಂತ ಹಳೆಯದು. ಮುಂದೆ ಸೇಂಟ್ ಆಗಸ್ಟೀನ್ (ಕ್ರಿ. ಶ. ೩೫೫-೪೩೦) ಬರೆದ ಕನ್‌ಫೆಷನ್ಸ್ ಎಂಬ ಕೃತಿ ಈ ಮಾರ್ಗದಲ್ಲಿ ಒಂದು ಮುಖ್ಯ ಮೈಲುಗಲ್ಲು."[೧೭]

---

೧೩. ಹುಚ್ಚು ಮನಸ್ಸಿನ ಹತ್ತು ಮುಖಗಳು. ಮುನ್ನುಡಿ
೧೪. ಅಲ್ಲೇ
೧೫. ಬೀಚಿ, ಭಯಾಗ್ರಫಿ ಪು. ೮೪.
೧೬. ಅಲೂರು ವೆಂಕಟರಾಯರು ನನ್ನ ಜೀವನ ಸ್ಮೃತಿಗಳು. ಪು. ೬
೧೭. ಕನ್ನಡ ವಿಶ್ವಕೋಶ ಸಂ. ೧, ಪು. ೬೩೨

ತರುವಾಯ ಈ ಸಾಹಿತ್ಯ ಪ್ರಕಾರ ೧೮, ೧೯ ಮತ್ತು ೨೦ನೆಯ ಶತಮಾನಗಳಲ್ಲಿ ಅಧಿಕವ
ಬೆಳೆದು ಬಹುಜನಪ್ರಿಯವಾಗಿದೆ. ಈ ಅವಧಿಯಲ್ಲಿ ಬಂದ ನೂರಾರು ಕೃತಿಗಳಲ್ಲಿ ಫ್ರಾಂಕ್ಲಿ
ರೂಸೊ, ಎಡ್ಮಂಡಗಾಸ್, ಮಿಲ್, ಟ್ರೊಲೋಪ್, ಟಾಲ್‌ಸ್ಟಾಯ್ ಮೊದಲಾದ
ಆತ್ಮಕಥೆಗಳು ಪ್ರಸಿದ್ಧವಾಗಿವೆ.

ಬಾಣಭಟ್ಟನು ಮರಣಕ್ಕಂಜುತ್ತಿರಲಿಲ್ಲ, ಕೀರ್ತಿಕಲಂಕಕ್ಕೆ ಅಂಜುತ್ತಿದ್ದನಂತೆ.
ಸಂಪ್ರದಾಯದಲ್ಲಿ ಬಂದ ಭಾರತೀಯರು ತಮ್ಮ ಆತ್ಮಸ್ತುತಿಗೆ ಹೆಚ್ಚಿನ ಪ್ರಾಧಾನ್ಯತೆಯ
ಯಲಿಲ್ಲ. ಆದರೂ ಸಂಸ್ಕೃತದಲ್ಲಿ ೭ನೆಯ ಶತಮಾನದ ಸುಮಾರಿಗೆ ಬಾಣಭಟ್ಟ ಬ
ಹರ್ಷ ಚರಿತ್ರೆ, ದಂಡಿ ಬರೆದ ಅವಂತೀಸುಂದರಿಗಳಲ್ಲಿ, ಕನ್ನಡದಲ್ಲಿ ೧೦ನೆಯ ಶತಮಾ
ಸುಮಾರಿಗೆ ಪಂಪ, ರನ್ನರು ಬರೆದ ಕೃತಿಗಳಲ್ಲಿ ಅವರ ಆತ್ಮಚರಿತ್ರೆಯ ಛಾಯೆಯ
ಕಾಣುತ್ತೇವೆ. ಆದರೆ ೧೯ನೆಯ ಶತಮಾನದ ಮಧ್ಯದವರೆಗೂ ಭಾರತೀಯ ಸಾಹಿತ್ಯದ
ಇಂದು ಆತ್ಮಚರಿತ್ರೆಯೆಂದು ಪರಿಗಣಿಸುವ ಪರಿಪೂರ್ಣ ಮಾದರಿ ಇರಲೇ ಇಲ್ಲ. ಮು
ಆತ್ಮಚರಿತ್ರೆ ಪಾಶ್ಚಾತ್ಯ ಮಾದರಿ ಪ್ರಚಲಿತವಾಗಿ, ಪ್ರತಿಯೊಂದು ಭಾಷೆಯಲ್ಲಿಯ
ಆತ್ಮಚರಿತ್ರೆ ಪ್ರಕಾರ ಸಮೃದ್ಧವಾಗಿ ಬೆಳೆಯಿತು.

``ಕನ್ನಡ ಆತ್ಮಚರಿತ್ರೆಗೆ ದಾರಿ ಹಾಕಿ ಕೊಟ್ಟ ಗ್ರಂಥಗಳು ಅನ್ಯ ಭಾಷೆಗಳ
ಭಾಷಾಂತರಗೊಂಡವು. ಇವುಗಳಲ್ಲಿ ಸರ್ವ ಜನಾದರಣೀಯವಾಗಿ ಪ್ರಮುಖವಾದದ್ದು ಎ
ನಿಟ್ಟೂರು ಶ್ರೀ ನಿವಾಸರಾವ್ ದಂಪತಿಗಳು `ಸತ್ಯಶೋಧನೆ' ಎಂಬ ಹೆಸರಿನಿಂದ ಕನ್ನಡಿಸಿ
ಗಾಂಧೀಜಿ ಅವರ ಆತ್ಮಕಥೆ ''[೧೪]

ಕನ್ನಡದಲ್ಲಿ ಮೊಟ್ಟಮೊದಲ ಬಾರಿ ಸ್ವತಂತ್ರ ಆತ್ಮಚರಿತ್ರೆ ಬರೆದವರು ಹರ್ಡೇ
ಮಂಜಪ್ಪನವರು. ಅವರ ``ನನ್ನ ಮೂವತ್ತು ವರುಷಗಳ ಕಾಣಿಕೆ '' ೧೯೩೬
ಪ್ರಕಟವಾಯಿತು. ಮಹಾತ್ಮಾ ಗಾಂಧೀಜಿ ಅವರ ದಟ್ಟ ಪ್ರಭಾವಕ್ಕೆ ಒಳಗಾಗಿದ್ದ ಅ
ಗಾಂಧೀಜಿ, ಅವರ ಆತ್ಮ ವೃತ್ತಾಂತದ ಪ್ರೇರಣೆಯ ಮೇರೆಗೆ ಈ ಕೃತಿ ಬರೆದಂತಿದೆ.
ಆ ಬಗ್ಗೆ ಅವರು ಇಲ್ಲಿ ಏನನ್ನೂ ಹೇಳಿಲ್ಲ. ಇಲ್ಲಿ ಅವರು ತಮ್ಮ ಪೂರ್ವ ವೃತ್ತಾಂತ
ಸಂಕ್ಷೇಪವಾಗಿ ಹೇಳಿ, ಹೆಚ್ಚಿನ ಭಾಗವನ್ನು ೧೯೦೬ರಿಂದ ಆರಂಭಗೊಂಡ ತಮ್ಮ ಸಾರ್ವ
ಜೀವನದ ವಿವರಣೆಗೇ ಮೀಸಲಿಟ್ಟಿದ್ದಾರೆ. ಅಲ್ಲಿ ಅವರು ತಮ್ಮ ಬೆಂಬಿಡದ ಬಡತನವ
ಅದರ ಮಧ್ಯದಲ್ಲಿಯೇ ನಡೆಸಿದ ಅಚಲವಾದ ಹೋರಾಟವನ್ನೂ, ಸ್ವಜನರೇ ವಿರೋಧಿ
ನಿಂತ ಪ್ರಸಂಗಗಳನ್ನೂ ಬಹು ಮಾರ್ಮಿಕವಾಗಿ ವಿವರಿಸಿದ್ದಾರೆ.

೧೯೫೮-೬೦ರಲ್ಲಿ ಪ್ರಕಟವಾದ ಜಿ. ಪಿ. ರಾಜರತ್ನಂ ಅವರ `ಹತ್ತು ವ
ಕನ್ನಡದಲ್ಲಿ ಬಂದ ಎರಡನೆಯ ಆತ್ಮಚರಿತ್ರೆ. ಅಲ್ಲಿ ಅವರು ೧೯೨೦ರಿಂದ ೧೯
ವರೆಗಿನ ತಮ್ಮ ಸಾಹಿತ್ಯ ಚಟುವಟಿಕೆಗಳನ್ನು ಕುರಿತು ಬರೆದಿದ್ದಾರೆ. ಇದು ಪ್ರಕಟವ
`ಹತ್ತು ವರುಷಕ್ಕೆ ಬಂದು ನಿಕೆಲ್ ನುಣಿಲಿಯೂ ಆಗುವುದಿಲ್ಲ. ಇಷ್ಟು ಚಿಕ್ಕ

---

೧೪. ಎ. ವಿ. ಸೀತಾರಾಮಯ್ಯ, ಕನ್ನಡ ಜೀವನ ಚರಿತ್ರೆಗಳು, ಪು. ೧೬೨

ಯುವುದು?' ಎಂದು ಶಿವರಾಮ ಕಾರಂತರೆ ತಮಾಷೆ ಮಾಡಿದ್ದರಂತೆ. ಅದಕ್ಕೆ ಉತ್ತರವಾಗಿ
ಬಿ. ರಾಜರತ್ನಂ ಅವರು `ಇದನ್ನು ಒರೆದಾಗ ನಾನು ಪ್ರಸ್ಪರೇಟ ಆಗಿದ್ದೆ ' ಒರೆದು
ಗಿಸಿದ ಮೇಲೆ `ಮನಸ್ಸು ಹಿತವಾದ ಸಮಾಧಾನವನ್ನನುಭವಿಸಿತು' ಎಂದಿದ್ದಾರೆ. ಇಲ್ಲಿ
ೀಶ, ಜಿ. ಬಿ. ರಾಜ [ರತ್ನಂ] ಅಯ್ಯಂಗಾರ್, ಹತ್ತು ವರುಷಕ್ಕೆ ಹಿಂದೆ ಮೊದಲಾದ
ನಾರು ಪ್ರಕರಣಗಳಿವೆ. ಅವುಗಳಲ್ಲಿ ರಾಜರತ್ನಂ ಅವರು ಅನುಭವಿಸಿದ ಕಷ್ಟ ನಷ್ಟ,
ವು ನಲಿವು, ಕಾವ್ಯಕ್ಕೆ ದೊರೆತ ಪ್ರೇರಣೆ ಮೊದಲಾದವುಗಳ ವಿವರವಿದೆ. ಎಂ. ಎ.
ನ ಮುಗಿಸಿಯೂ ೧೯೩೧ - ೩೮ರ ವರೆಗೆ ಸರುದ್ಯೋಗಿಯಾಗಿ ಅಲೆದ ಪ್ರಸಂಗ, ತಂದೆ
ಕೊಂಡಾಗ ಎಂಟರಾರನೆ ಸಹಕರಿಸದೆ ಶವವನ್ನು ಜಟಕಾದಲ್ಲಿ ಒಯ್ದು ಸಂಸ್ಕರಿಸಿದ
ಸಂಗಗಳನ್ನು ಓದಿದಾಗ ಯಾರಿಗಾದರೂ ನೋವಾಗದೆ ಇರದು. ಹೆಂಡತಿಯನ್ನು
ಚಿತ್ರೆಗೆ ಸೇರಿಸಿ, ಹಿಂದಿರುಗುವಾಗ ಕಂಡ ಹೆಂಡದಂಗಡಿಯ ದೃಶ್ಯ `ರತ್ನನ ಪದಗಳು'ಸೃಷ್ಟಿಗೆ
ಣವಾಯಿತು ಎಂಬುದನ್ನು ಕೇಳಿದಾಗ ಆಶ್ಚರ್ಯವಾಗುತ್ತದೆ. ಆದರೆ ಇದು ಹತ್ತೇ ವರುಷದ
ನುಭವವಾಗಿರುವುದು ದೊಡ್ಡ ಕೊರತೆಯೆನ್ನಿಸುತ್ತದೆ.

೧೯೪೦ರಲ್ಲಿ ಅಲೂರು ವೆಂಕಟರಾಯರು ಜಯಕರ್ನಾಟಕ ಪತ್ರಿಕೆಯ ಸಂಪಾದಕರ ವಿನ್ನಹದ
ಂತೆ `` ನನ್ನ ಜೀವನ ಸ್ಮೃತಿಗಳು '' ಆತ್ಮಚರಿತ್ರೆಯನ್ನು ಬರೆದುಕೊಡಲು ಒಪ್ಪಿಕೊಂಡರು.
ಮು ಆ ಪತ್ರಿಕೆಯು ಲೇಖನಮಾಲೆಯಾಗಿ ಒಂದೂವರೆ ವರುಷ ಪ್ರಕಟವಾಯಿತು. ಅದು
೧೯೪೦ರಲ್ಲಿ, ಪೂರ್ವರಂಗ, ೧೯೪೧ರಲ್ಲಿ ಉತ್ತರ ರಂಗ ಎಂಬ ಎರಡು ಭಾಗಗಳಾಗಿ ೧೯೭೪ರಲ್ಲಿ
ಯವಾಗಿ ಪುಸ್ತಕ ರೂಪದಲ್ಲಿ ಪ್ರಕಟವಾಯಿತು. ಅಲ್ಲಿ ಅವರು ಹೇಳಿಕೊಂಡಿರುವ ಹಾಗೆ `` ನನ್ನ
ಸ್ಮೃತಿಗಳು ಸಾಮಾನ್ಯ ಜನರಿಗೆ ಮಹಾತ್ಮಾ ಗಾಂಧಿ, ಲೋಕಮಾನ್ಯ ಟಿಳಕ ಮುಂತಾದ ಐದ್ವಿತೀಯ
ಕ್ತಿಗಳ ಚರಿತ್ರೆಗಿಂತಲೂ ಹೆಚ್ಚಿಗೆ ಉಪಯುಕ್ತವಾದವುಗಳು. ಏಕೆಂದರೆ ನಮ್ಮ ನಿಮ್ಮಂತೆಯೇ
ರುವ ವ್ಯಕ್ತಿಯ ನಮ್ಮ ನಿಮ್ಮ ಅನುಭವಕ್ಕೆ ಬರುವ ಸ್ಮೃತಿಗಳು ಇವು. ಅವತಾರ ಅಥವಾ ಆದರ್ಶ
ರುಷರ ಚರಿತ್ರೆಗಳಿಗೆ ಒಂದು ತರಹದ ಮಹತ್ವವಿದ್ದರೆ ಸಾಮಾನ್ಯ ಪುರುಷರ ಚರಿತ್ರೆಗೆ ಮತ್ತೊಂದು
ರದ ಮಹತ್ವವಿರುತ್ತದೆ. ''[೧] ಅಲೂರು ವೆಂಕಟರಾಯರ ಸಾರ್ವಜನಿಕ ಚಟುವಟಿಕೆಗಳೆಲ್ಲ
ರ್ನಾಟಕದ ಹೊಸ ಇತಿಹಾಸದ ಒಂದು ಜೀವಂತ ಅಂಶವಾದುದರಿಂದ ಅವರ ಈ ಆತ್ಮಚರಿತ್ರೆ
ಕಾಲದ ಕರ್ನಾಟಕದ ಚರಿತ್ರೆಯನ್ನು ತಿಳಿಯಲು ಬಹಳ ಅಮೂಲ್ಯವಾದ ಸಾಮಗ್ರಿ
ನ್ನೊದಗಿಸುತ್ತದೆ.

೧೯೪೬ರಲ್ಲಿ ಮಂಚಿನಬಲೆ ಕಾರ್ಯಾಲಯದಿಂದ ಪ್ರಕಟವಾದ ೧೫೦ ಪುಟದ
ಸಾಹಿತ್ಯಜ್ಞರ ಆತ್ಮಕಥನ ' ಗೋವಿಂದ ಪೈ, ಆರ್. ಎ. ಜಾಗೀರದಾರ್, ದೇವುಡು, ರಂ.
ಶ್ರೀ. ಮುಗಳಿ, ಸಿ. ಕೆ. ವೆಂಕಟರಾಮಯ್ಯ, ಪಿ. ಕೃ. ಗೋಕಾಕ, ಚೆನ್ನಪ್ಪ ಉತ್ತಂಗಿ, ವೆಟಗೇರಿ
ಷ್ಣಶರ್ಮ, ಎ. ಆರ್. ಕೃಷ್ಣಶಾಸ್ತ್ರಿ, ದ.ರಾ. ಬೇಂದ್ರೆ ಹೀಗೆ ಹನ್ನೊಂದು ಸಾಹಿತಿಗಳ ಆತ್ಮ
ರಿತ್ರೆಯನ್ನೊಳಗೊಂಡಿದೆ. ಭಿನ್ನಾನುಭವಗಳಿಂದ ವೈವಿಧ್ಯಮಯವೂ ಸ್ವಾರಸ್ಯ ಪೂರ್ಣವೂ
ದ ವಿವಿಧ ಸಾಹಿತಿಗಳ ಪರಿಚಯವನ್ನೊಳಗೊಂಡಿರುವ ಈ ಕೃತಿ ವಿಶಿಷ್ಟವಾದುದಾಗಿದೆ.

---

೧. ನನ್ನ ಜೀವನ ಸ್ಮೃತಿಗಳು

ಇಲ್ಲಿಂದ ಮುಂದೆ, ಅಂದರೆ ೧೯೪೭ ರಿಂದ ೧೯೭೨ರ ವರೆಗೆ ಕನ್ನಡದಲ್ಲಿ ಬಂದ ಆತ್ಮಚರಿತ್ರೆಗಳು ೫೫.[೨೦] ಆ ಮೇಲೂ ಹಲವಾರು ಆತ್ಮಚರಿತ್ರೆಗಳು ಕಾಣಿಸಿಕೊಂಡಿವೆ. ಅವುಗಳಲ್ಲಿ ಕೆಲವನ್ನು ಈಗ ನೋಡಬಹುದು.:

ಶಿವರಾಮ ಕಾರಂತರ ಬಹುಮುಖ ವ್ಯಕ್ತಿತ್ವಕ್ಕೆ ಕನ್ನಡಿ ಹಿಡದಂತಿರುವ `ಹುಚ್ಚು ಮನಸ್ಸಿನ ಹತ್ತು ಮುಖಗಳು', ಅವರ ಬಾಳಿನ ೨೦-೩೦ ವರುಷಗಳ ಸಾರ್ವಜನಿಕ ಜೀವನದ ಅದ್ಭುತ ಚಿತ್ರಣವನ್ನೀಯುತ್ತದೆ. ಕಾರಂತರು ಆ ವೇಳೆಯಲ್ಲಿ ಗುರುವಿಲ್ಲದೆ, ಗುರಿಯಿಲ್ಲದೆ ಹುಚ್ಚು ಮನಸ್ಸು ತೋರಿದ ದಿಕ್ಕಿನಲ್ಲಿ ನಡೆದು, ಬಹಳಷ್ಟು ಸಲ ಕೈ ಸುಟ್ಟುಕೊಂಡು, ಕೆಲವು ಸಲ ಯಶಸ್ವಿಯಾದ ಪ್ರಸಂಗಗಳ ಸ್ವಾರಸ್ಯಪೂರ್ಣವಾದ ವಿವರಣೆ ಇಲ್ಲಿದೆ. ಅವರೇ ಹೇಳುವ ಹಾಗೆ ವಿಷ್ಣುವಿಗೆ ಹತ್ತು ಅವತಾರಗಳಾದರೆ, ಅವರ ಧ್ಯೇಯಗಳು ಹಲವಾರು ಅವತಾರ ತಾಳಿವೆ. ರಾಷ್ಟ್ರಭಕ್ತಿ, ಸ್ವದೇಶಿ ಚಳುವಳಿ, ವ್ಯಾಪಾರ, ಪತ್ರಿಕೋದ್ಯಮ, ಅಧ್ಯಾತ್ಮ ಸಾಧನೆ ಕಲೆಯ ಭಿನ್ನಮುಖಗಳ ಪ್ರಯೋಗಗಳು ಫೋಟೋಗ್ರಾಫಿ, ನಾಟಕ, ನೃತ್ಯ, ಚಿತ್ರ, ವಾಸ್ತು ಸಂಗೀತ, ಚಲನ ಚಿತ್ರ, ಸಮಾಜ ಸುಧಾರಣೆ, ಗ್ರಾಮೋದ್ಧಾರ ಮೊದಲಾದ `ಇಷ್ಟೊಂದು ವ್ಯಾಪಕ ಹವ್ಯಾಸವುಳ್ಳ ಬೇರೊಬ್ಬ ಕನ್ನಡ ಸಾಹಿತಿಯನ್ನು ಹೆಸರಿಸುವುದು ಕಷ್ಟ.'[೨೧] ಈ ಹವ್ಯಾಸಗಳನ್ನು ಪರಿಚಯಿಸುವುದರೊಂದಿಗೆ ಆಯಾ ಕ್ಷೇತ್ರಗಳಿಗೆ ಸಂಬಂಧಿಸಿದ ವ್ಯಕ್ತಿಗಳ ಸುಂದರವೂ ಉಜ್ವಲವೂ ಆದ ವ್ಯಕ್ತಿಚಿತ್ರಣವನ್ನು ಕೊಡುವುದೂ ಇಲ್ಲಿಯ ವೈಶಿಷ್ಟ್ಯವೆನ್ನಿಸಿದೆ. ಇದರ ಮುಂದುವರಿದ ಭಾಗವಾಗಿ `ಸ್ಮೃತಿಪಟಲದಿಂದ' ಎಂಬ ಮೂರು ಸಂಪುಟ ಬಂದಿವೆ. `ಇದು ವಿಷಯಗಳ ದೃಷ್ಟಿಯಿಂದ ನನ್ನ ಅನುಭವಗಳನ್ನು, ವಿಚಾರಸರಣಿಯನ್ನು ನಿಮ್ಮ ಮುಂದಕ್ಕಿರಿಸಲು ಮಾಡಿರುವ ಪ್ರಯತ್ನವಾಗಿದೆ 'ಎಂದು ಆರಂಭದಲ್ಲಿ ಕಾರಂತರೇ ಹೇಳಿದ್ದಾರೆ.

ಕನ್ನಡದ ಆತ್ಮಚರಿತ್ರೆಗಳಲ್ಲಿಯೇ ಡಿ. ವಿ. ಜಿ. ಅವರು ಎಂಟು ಸಂಪುಟಗಳಲ್ಲಿ ಹೊರತಂದಿರುವ `ಜ್ಞಾಪಕ ಚಿತ್ರಶಾಲೆ' ಒಂದು ಅಪೂರ್ವ ಸಾಧನೆಯಾಗಿದೆ. ಇದನ್ನು ಬರೆಯಲು ಆರಂಭಿಸಿದಾಗ (೧೯೬೭-೭೪) ಅವರಿಗೆ ಎಪ್ಪತ್ತಕ್ಕೂ ಹೆಚ್ಚಿನ ವಯಸ್ಸು. ಅವರೇ ತಮ್ಮ ಕೃತಿಯನ್ನು ಕುರಿತು ``ಛಾಯಾಬಿಂಬವನ್ನು ತೆಗೆಯುವ ಫಲಕದ ಮೆಲೆ ಪ್ರತಿಫಲಿಸಿದ ರೇಖೆಗಳು ಕಾಲಕ್ರಮದಲ್ಲಿ ಬಣ್ಣ ತೇಲುತ್ತವೆ, ಮಾಸಿ ಹೋಗುತ್ತವೆ. ಸ್ಪಷ್ಟತೆಯಲ್ಲಿ ಕಡಿಮೆಯಾಗುತ್ತದೆ. ಇಷ್ಟೆಲ್ಲ ನ್ಯೂನತೆಗಳಿದ್ದರೂ ಛಾಯಾಬಿಂಬವು ಹೆಗ್ಗುರುತನ್ನಾದರೂ ಉಳಿಸಿರುತ್ತದೆ. ಅಷ್ಟು ಮಾತ್ರವಾದರೂ ಪೂರ್ವಿಕರ ಸ್ವರೂಪದ ಛಾಯೆ ಉಳಿದಿದೆಯೆ ಎಂದು ಸಂತೋಷಪಡುವ ನವೀನರು ಕೆಲಮಂದಿ ಇರಬಹುದೆಂದು ನಂಬಿ ಈ ಚಿತ್ರಗಳನ್ನು ಗುರುತು ಹಾಕಿದೆ '' ಎಂದಿದ್ದಾರೆ. ಇದು ೧೯ನೆಯ ಶತಮಾನದ ಕಡೆಯ ದಶಕಗಳ ಹಾಗೂ ಈ ಶತಮಾನದ ಪೂರ್ವಾರ್ಧಕಾಲದ ಹಳೆಯ ಮೈಸೂರಿನ ಸಾಂಸ್ಕೃತಿಕ, ಬೌದ್ಧಿಕ ವಿವರವಾದ ಮತ್ತು ಜೀವಂತವಾದ ಕಥನವನ್ನೊಳಗೊಂಡಿದೆ.

---

೨೦. ಕನ್ನಡ ಜೀವನ ಚರಿತ್ರೆಗಳು ಪು. ೨೧೪ -೧೫

೨೧. ಕನ್ನಡ ವಿಶ್ವಕೋಶ ಸಂ. ೩. ಪು. ೭೧೦.

ಶಕ್ತರಾದ ಮಂತ್ರಿಗಳು, ಶ್ರೀಮಂತರೂ ಪ್ರಭಾವಿಗಳೂ ಆದ ವರ್ತಕರು, ಪಂಡಿತರು, ಕಲಾವಂತರು, ಬಡಕಸಬುದಾರರು ಮತ್ತು ಉಪಾಧ್ಯಾಯರು ಹೀಗೆ ಜೀವನದ ಎಲ್ಲ ಕ್ಷೇತ್ರಗಳಿಗೂ ಸೇರಿದ ಸ್ತ್ರೀ ಪುರುಷರ ಕಣ್ಣಿಗೆ ಕಟ್ಟಿದಂತಿರುವ ಅಸಂಖ್ಯಾತ ಶಬ್ದಚಿತ್ರಗಳು ಇಲ್ಲಿವೆ. ಆದರೆ ಅವು ಕೆಲವು ಸಲ ಕೇವಲ ಚಿತ್ರಶಾಲೆಗಳೇ ಆಗುವುದುಂಟು. ಅವುಗಳಿಗೂ ಲೇಖಕರಿಗೂ ನೇರವಾದ ಸಂಬಂಧವೇನು ಎಂಬುದು ವೇದ್ಯವಾಗದೆ ಹೋಗುವುದುಂಟು. ಆದರೂ ಡಿ. ವಿ. ಜಿ. ``ಅವರು ತಮ್ಮ ತೀರ್ಪುಗಾರಿಕೆಯಲ್ಲಿ ಮೃದುಸ್ವಭಾವ, ದಯಾದ್ರತೆ, ಪ್ರಕೃತಿ ಮತ್ತು ಹೃದಯ ವೈಶಾಲ್ಯ, ಧಾರಾಳತನ, ನಿರಾಡಂಬರವಾದ ಹಾಸ್ಯ ಪ್ರವೃತ್ತಿ, ಜೀವನದಲ್ಲಿನ ನೋವು ಅನ್ಯಾಯಗಳನ್ನು ಗುರುತಿಸಿ, ಜೀವನದಲ್ಲಿನ ಸೌಂದರ್ಯ ಮತ್ತು ಸಂಪದ್ಯುಕ್ತತೆಯ ಬಗ್ಗೆ ಕೃತಜ್ಞತಾಭಾವಗಳೊಡನೆ ಅವುಗಳ ಸುಮಧುರ ಸಂಯೋಜನೆ ಗೊಳಿಸಿರುವುದು. ಈ ಅಂಶಗಳು ಈ ಕೃತಿಯನ್ನು ಗಮನಾರ್ಹವಾದುದನ್ನಾಗಿ ಮಾಡಿದೆ. "[೨೨]

ನವರತ್ನ ರಾಮರಾವ್ ಅವರ ``ಕೆಲವು ನೆನಪುಗಳು '' ಕೃತಿ ಸುಮಾರು ೪೫೦ ಪುಟಗಳಿಗೂ ಮೀರಿದ ಬೃಹತ್ ಕೃತಿ. ಅವರು ಕೆಲಸಕ್ಕೆ ಸೇರಿದಾಗಿನಿಂದ (೧೯೦೮) ರಿಟೈರ ಆಗುವವರೆಗಿನ (ಸುಮಾರು ೧೯೩೭ - ೩೮) ಹಿಂದಿನ ಮೈಸೂರು ಸರ್ಕಾರದ ಆಡಳಿತ ವಿಶೇಷಗಳನ್ನು ಜವಾನರಿಂದ ಹಿಡಿದು ದಿವಾನರವರೆಗಿನ ವ್ಯಕ್ತಿ ವಿಶೇಷಗಳನ್ನು, ಜನ ಬದುಕು, ಕಳ್ಳಕಾರರು, ಒಳ್ಳೆಯ ಅಧಿಕಾರಿ, ಆರಾಮ್ ಅಧಿಕಾರಿಗಳು, ಅರಮನೆ ಗೌರವ ಮರ್ಯಾದೆಗಳ ರೀತಿ ನೀತಿ ಇವನ್ನೆಲ್ಲ ಅದ್ಭುತವಾಗಿ ಕಾಣಿಸಿದ್ದಾರೆ. ಅಂದಿನ ಆಗು -ಹೋಗು, ವ್ಯಕ್ತಿಗಳನ್ನು ಅತ್ಯಂತ ಗಂಭೀರವಾಗಿ ಚಿತ್ರಿಸಿದ್ದರೂ ಬೇಕಾದಷ್ಟು ಹಾಸ್ಯ- ವ್ಯಂಗ್ಯ ತುಂಬಿ ತುಳುಕಾಡುತ್ತದೆ. ಇಂಗ್ಲೀಷ ಅಧಿಕಾರಿಗಳ ನಡವಳಿಕೆ ನಿರ್ಧಾರಗಳು, ಗ್ರಾಮ ಮಟ್ಟದ ಶ್ಯಾನುಭೋಗರು, ಪಟೇಲರು ಮೊದಲಾದವರ ಗತ್ತು ನಿಷ್ಠೆ ಇವುಗಳನ್ನೆಲ್ಲ ಅತ್ಯಂತ ಸ್ವಾರಸ್ಯವಾಗಿ ನಿರೂಪಿಸಿದ್ದಾರೆ. ಮುಖ್ಯವಾಗಿ ಮೈಸೂರು ಜಿಲ್ಲೆಯ ತಾಲೂಕುಗಳು, ಜನಬದುಕು, ಊರಿಂದೂರಿಗೆ ಓಡಾಟದ ರೀತಿ, ರೋಗರುಜಿನಗಳು, ಅಧಿಕಾರದ ಕೆಲಸಗಳು ಇವೆಲ್ಲ ಇತಿಹಾಸವಾಗಬಲ್ಲಂಥ ಸಮಾಚಾರಗಳು ಇಲ್ಲಿ ಚಿತ್ರಣಗೊಂಡಿವೆ.

೧೯೬೮ -೬೯ ರಲ್ಲಿ ಪ್ರಕಟವಾದ ಮಾಸ್ತಿ ಅವರ ``ಭಾವ '' ಮೂರು ಸಂಪುಟ, ೧೩೫೦ ಪುಟಗಳನ್ನೊಳಗೊಂಡಿದೆ. ಮೊದಲನೆಯ ಸಂಪುಟ ಬಾಲ್ಯದಿಂದ ಕೌಮಾರ್ಯ ದವರೆಗಿನ, ಎರಡನೆಯ ಭಾಗ ಅಧಿಕಾರವಧಿಯನ್ನು, ಮೂರನೆಯ ಭಾಗ ಅವರ ವಿಶ್ರಾಂತಿ ಕಾಲದ ಬದುಕಿನ ಚಿತ್ರಣವನ್ನೊಳಗೊಂಡಿದೆ. ಹೀಗಾಗಿ ಇದು ಗಾತ್ರದಲ್ಲಿ ಮಾತ್ರವಲ್ಲ, ಪಾತ್ರದಲ್ಲಿಯೂ ತನ್ನ ಹಿರಿತನವನ್ನು ಉಳಿಸಿಕೊಂಡಿರುವ ಕೃತಿ ಎನ್ನಿಸಿದೆ. ಇಲ್ಲಿ ಮಾಸ್ತಿಯವರು ತಮ್ಮ ಸಾರ್ಥಕ ಬಾಳಿನ ೫೩೦ ಪ್ರಸಂಗಗಳನ್ನು ಹಿಡಿದಿಡಲು ಪ್ರಯತ್ನಿಸಿದ್ದಾರೆ. ಅವರು ತಮ್ಮ ಕೃತಿಯ ಪ್ರಾರಂಭದಲ್ಲಿ ಎಲ್ಲ ಆತ್ಮ ಚರಿತ್ರಕಾರರ ಹಾಗೆ ``ನನ್ನ ಜೀವನ ಒಂದು ಚರಿತ್ರೆಗೆ ಪಸ್ತು ಆಗಬಲ್ಲದೆಂದು ನನಗೆ ಕಾಣಲಿಲ್ಲ '' ಎಂದು ಹೇಳಿ, "ಆದರೆ ಅದನ್ನು ಕುರಿತು ನನ್ನ ಮನಸ್ಸಿನಲ್ಲಿ ಅನೇಕ ಭಾವಗಳುಂಟು. ಚರಿತ್ರೆಯನ್ನಲ್ಲ, ಇವನ್ನು ಬೇಕಾದರೆ

---

೨೨. ಭಾರತೀಯ ಸಾಹಿತ್ಯ ಸಮೀಕ್ಷೆ, ; ಪು. ೧೦೧೦-೧೧

ಬರೆಯಬಹುದು ಎಂದು ಕಂಡಿತು, ಬರದೆ "[೨೩] ಎಂದು ಹೇಳಿಕೊಂಡಿದ್ದಾರೆ. " ಈ ಗ್ರಂಥದಲ್ಲಿ ಅನೇಕ ಭಾವಗಳು ಹೆಣೆದುಕೊಂಡಿವೆ. ಉಪಕಾರ ಮಾಡಿದವರಲ್ಲಿ ಆತ್ಮ ಪ್ರತ್ಯಯವುಳ್ಳ ವಿನಯ ಭಾವ ; ಆರ್ತರಲ್ಲಿ, ಅರ್ಥಿಗಳಲ್ಲಿ ಕನಿಕರದ ಭಾವ, ಒಟ್ಟಿನಲ್ಲಿ ಬದುಕಿನಲ್ಲಿ `ಧನ್ಯೋಸ್ಮಿ ' ಎಂಬ ಭಾವ, ಹೀಗೆ ಈ ಭಾವದ ಎಳೆಗಳು ಅನೇಕ ಸೇರಿ, ಗ್ರಂಥದ ಭಾವಪೂರವನ್ನು ಸಮೃದ್ಧಗೊಳಿಸಿದೆ.[೨೪] ಈ ಎಲ್ಲಾ ಭಾವಗಳಲ್ಲಿ ಅಂದಿನ ಕಾಲದ ಸಮಾಜ, ರೀತಿ ರಿವಾಜು, ಜನಜೀವನ ಮೊದಲಾದವು ಹಾಸುಹೊಕ್ಕಾಗಿ ಬಂದಿವೆ. ``ತಮ್ಮ ವಿಚಾರವೇ ಆಗಲಿ, ಇತರರ ಚಾರವೇ ಆಗಲಿ ಸಮಭಾವದಿಂದ, ಉದ್ವೇಗಗೊಳ್ಳದೆ, ನಡೆನುಡಿಯನ್ನು ಕುರಿತು ಹೀಗೆಯೇ ಸರಿ ಎಂದು ನಿರ್ಣಾಯಿಸಿ ಹೇಳುವ ವ್ಯಕ್ತಿ ವಿಮರ್ಶೆ ಒಪ್ಪುವಂತಿದೆ.... ಒಟ್ಟು ನಿರೂಪಣೆಯಲ್ಲಿ ವ್ಯಕ್ತಪಡುವ ಇವರ ಅಂತರ್ಭಾವ ಅಚ್ಛೋದ ಸರೋವರದಂತೆ ನಿರ್ಮಲ. ಅದರಲ್ಲಿ ಮಿಂದ ಓದುಗನ ಮನಸ್ಸು ವಿಚಾರಕ್ಕೆ ಒಳ ಗಾಗುವುದಿಲ್ಲ "[೨೫]

``ಕನ್ನಡದ ವಿರಳ ಸಂಖ್ಯೆಯ ಆತ್ಮಕಥೆಗಳಲ್ಲಿ ದೇ. ಜವರೇಗೌಡರ ' ಹೋರಾಟದ ಬದುಕು ' ಗಮನಾರ್ಹವಾದುದು. "[೨೬] ಹುಟ್ಟಿದ್ದು ಕುರಿಮಂದೆಯ ನಡುವೆ, ಬೆಳೆದದ್ದು ದನದ ಕೊಟ್ಟಿಗೆಯಲ್ಲಿ. ತಂದೆ ತಾಯಿಯರೋ ನಿರಕ್ಷರ ಕುಕ್ಷಿಗಳು... ತಿಂದದ್ದು ಕರಿಚಿಕ್ಕು, ಕುಡಿದದ್ದು ಅಂಬಲಿ, ಉಟ್ಟಿದ್ದು ಚಿಂದಿ, ಇದು ದೇ.ಜ. ಗೌ. ಅವರ ಬಾಲ್ಯ. ಇಂಥ ಒಬ್ಬ ಹುಡುಗ ಮೈಸೂರು ವಿಶ್ವವಿದ್ಯಾಲಯದ ಅಧ್ಯಾಪಕ, ಪ್ರಾಧ್ಯಾಪಕ ಕಡೆಗೆ ಇಲಾಖೆಯ ಮುಖ್ಯಸ್ಥನಾಗಿ, ಕನ್ನಡದ ಒಬ್ಬ ಪ್ರಸಿದ್ಧ ಲೇಖಕನಾಗಿ ರೂಪುಗೊಂಡ ಬಗೆಯನ್ನು ೫೦ ವರುಷ ತುಂಬಿದ ದೇ. ಜ. ಗೌ. ನನ್ನ ಬಾಳೇ ಒಂದು ಪವಾಡ, ಬಡತನದ ಬಸಿರಲ್ಲಿ ಬೆಳಕು, ಗೊತ್ತು ಗುರಿಯಿಲ್ಲದ ಪಯಣ ಮೊದಲಾದ ೧೨ ಭಾಗಗಳಲ್ಲಿ ನಿರೂಪಿಸಿದ್ದಾರೆ. ಈ ಕೃತಿಯ ವಿಶೇಷತೆ ಇರುವುದು ಅದರ ಭಾಷಾ ಶೈಲಿಯಲ್ಲಿ ``ಬಂದದ್ದನ್ನು ಬಿಡಲಿಲ್ಲ. ಬಾರದ್ದಕ್ಕೆ ಬಾಯಾರಲಿಲ್ಲ, ಮುಂದುಹೋಕರನ್ನು ನೋಡಿ ಕರುಬಲಿಲ್ಲ. ಆಸರೆ ಸಿಕ್ಕಿದಾಗ ನೇಸರು ಮರೆಯಲಿಲ್ಲ. ಗುರಿಯೆಟುಕಿದಾಗ ಏಣಿ ಒದೆಯಲಿಲ್ಲ. ತಾರಸಿಮನೆಯ ವಾಸ ದೊರಕಿಕೊಂಡಾಗ ಗುಡಿಸಲು ಬೇಸರವಾಗಲಿಲ್ಲ. ಪದವಿ ಲಭಿಸಿ ಹಣ ಕೂಡಿ ಸುಖ ಸಮನಿಸಿದಾಗ ಸೋಮಾರಿತನವನ್ನು ವರಿಸಲಿಲ್ಲ, ಕೊಟ್ಟಿಗೆಯನ್ನು ಮರೆಯಲಿಲ್ಲ ಬಡತನವನ್ನು ಹೇಸಲಿಲ್ಲ. (ಪು. ೧) ಎಂದು ಹೇಳಿರುವ ಮಾತಿನಲ್ಲಿ ಎಳ್ಳಷ್ಟೂ ಅತಿಶಯೋಕ್ತಿ ಇಲ್ಲವೆನ್ನಿಸುತ್ತಿದೆ. ಅವರೇ ಮತ್ತೊಂದೆಡೆಗೆ ``ವಿರೋಧಿ ಶಕ್ತಿಗಳಿಲ್ಲದಿದ್ದರೆ ಬಾಳಿನಲ್ಲಿ ಹೋರಾಟವೂ ಇಲ್ಲ, ರುಚಿ ಶುಚಿಗಳೂ ಇಲ್ಲ. ಚಿಕ್ಕಂದಿನಲ್ಲಿ ಗೌಡ ಶ್ಯಾನುಭೋಗರ ಪಾಳೆಯಗಾರಿಕೆ ವಿರುದ್ಧ ದಾಳಿ ನಡೆಸ ಬೇಕಾಯಿತು. ವಿದ್ಯಾರ್ಥಿದೆಸೆಯಲ್ಲಿ ಹಾಗೂ ನೌಕರಿಯ ಪ್ರಾರಂಭಾವಸ್ಥೆಯಲ್ಲಿ ಜಾತಿ ಭೂತವನ್ನೆದುರಿಸಬೇಕಾಯಿತು. ಮಧ್ಯವಯಸ್ಸಿನಲ್ಲಿ ಕನ್ನಡ ವಿರೋಧಿಗಳೊಡನೆ ಕಾದಾಡ ಬೇಕಾಯಿತು `` (ಪು. ೩) ಎಂದು ತಮ್ಮ ಹೋರಾಟದ ಬದುಕನ್ನು ಬಹುರಮ್ಯವಾಗಿ

---

೨೩. ಭಾವ ಸಂ. ೧ ಮುನ್ನುಡಿ ಪು. III

೨೪. ಎ. ವಿ. ಸೀತಾರಾಮಯ್ಯ, ಕನ್ನಡ ಜೀವನ ಚರಿತ್ರೆಗಳು, ಪು. ೧೮೪.

೨೫. ಅಲ್ಲೇ

೨೬. ಅಲ್ಲೇ ಪು. ೧೮೫

ವಿಶ್ಲೇಷಿಸಿದ್ದಾರೆ. ``ಒಟ್ಟಿನಲ್ಲಿ ಧ್ಯೇಯವಂತ, ಧೀಮಂತ, ತಾಯ್ನುಡಿಯ ಸೇವಕನೊಬ್ಬನ ಈ ಆತ್ಮವೃತ್ತಾಂತ ಆತ್ಮಕಥಾ ಸಾಹಿತ್ಯಕ್ಕೆ ಒಂದು ಮಹತ್ತರ ಕೊಡುಗೆಯಾಗಿದೆ. ಇಲ್ಲಿನ ಗದ್ಯದ ಗತ್ತು ಮತ್ತು ಗ್ರಾಮೀಣ ಪದಗಳ ಸೊಗಸು ಹೆಚ್ಚು ಆಕರ್ಷಣೀಯವೂ ಮನೋಜ್ಞವೂ ಆಗಿದ್ದು ಶೈಲಿಯ ಹೊಸದೊಂದು ಮಾದರಿಗೆ ಬುನಾದಿಯಾಗಿದೆ."[೨೭]

ಕನ್ನಡರಂಗಭೂಮಿ ನಡೆದು ಬಂದ ದಾರಿಯ ಮೇಲೆ ಬೆಳಕನ್ನು ಚೆಲ್ಲುತ್ತಿರುವ ಹಲವಾರು ಆತ್ಮಚರಿತ್ರೆಗಳು ಕನ್ನಡದಲ್ಲಿ ಬಂದಿವೆ. ಅವುಗಳಲ್ಲಿ `ಕನ್ನಡದ ಆತ್ಮಕಥಾ ಸಾಹಿತ್ಯ ಪ್ರಕಾರಕ್ಕೊಂದು ಶ್ರೀಮಂತ ಕೊಡುಗೆ ' ಎನ್ನಿಸಿಕೊಂಡ ಕೃತಿ ಗುಬ್ಬಿ ವೀರಣ್ಣನವರ ' ಕಲೆಯೇ ಕಾಯಕ. [೨೮] ವೀರಣ್ಣನವರು ಬರೆದ ಈ ಆತ್ಮಚರಿತ್ರೆಯಲ್ಲಿ ಅಂದಿನ ಕಲಾವಿದನ ಸ್ಥಿತಿಗತಿ, ಹೋರಾಟದ ಬದುಕು, ನಾಟಕಗಳು ತಮ್ಮ ಅಸ್ತಿತ್ವಕ್ಕಾಗಿ ನಡೆಸುತ್ತಿದ್ದ ಹೋರಾಟ ಮೊದಲಾದವುಗಳ ಎಳೆಎಳೆತ್ತಾದ ಚಿತ್ರಣವಿದೆ. ' ಈ ಚರಿತ್ರೆಯನ್ನು ಓದುವಾಗ ಕಳೆದು ಹೋದ ದಿನಗಳು ಸ್ಮೃತಿ ಪಟಲದ ಮೇಲೆ ಮತ್ತೆ ಮೂಡಿಬರುತ್ತಿವೆ. ಓರ್ವ ಉತ್ತಮ ಕಲಾವಿದನ ದೃಷ್ಟಿ ತನ್ನ ರಸವಂತಿಕೆಯನ್ನು ಈ ಚಿತ್ರಣದ ಮೇಲೆಲ್ಲಾ ಹಾಯಿಸಿದೆ ' ಎಂದು ಎ. ಕೃ. ಗೋಕಾಕ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ (ಹಿನ್ನುಡಿ). ಆದರೆ ಈ ಪುಸಕ್ತಕ್ಕೆ ಮುನ್ನುಡಿ ಬರೆದ ಎಚ್. ಕೆ. ರಂಗನಾಥ ಅವರು ಈ ``ಪುಸ್ತಕದ ಕೆಲವು ಪುಟಗಳಲ್ಲಿ ಯಾವುದೋ ಸಂಕೋಚ ತಲೆದೋರಿ ಅವರ ಲೇಖಣಿಕೆಯನ್ನು ಅಲ್ಲಲ್ಲಿ ತಡೆದಿಟ್ಟುಬಿಟ್ಟಿದೆ ಯೆಂಬ ಭಾವನೆ ಬರುತ್ತದೆ. ಕೆಲವೊಂದು ಸಂಗತಿಗಳನ್ನು ಹೇಳಬಹುದೋ ಬೇಡವೋ ಎಂಬ ಹೋಯ್ದಾಟದ ಹೊಳಪು ಎದ್ದೆದ್ದು ತೋರಿಕೊಳ್ಳುತ್ತದೆ. ಈ ಎಲ್ಲಾ ಸಂದೇಹ ಸಂಕೋಚಗಳನ್ನು ಮೂಲೆಗೊತ್ತಿ ಅವರು ಮತ್ತೊಂದು ಪುಸ್ತಕವನ್ನು ಬರೆಯಬೇಕು, (ಪು `viii ') ಎಂದು ಹಾರೈಸಿದ್ದಾರೆ.

ಎರಡು ಸಂಪುಟದ ಸು. ೧೯೦೦ ಪುಟದ ಕೆ. ಪಿ. ಪುಟ್ಟಪ್ಪನವರ ``ನೆನಪಿನ ದೋಣಿಯಲ್ಲಿ '' ಕನ್ನಡದ ಆತ್ಮಚರಿತ್ರೆಗಳಲ್ಲಿಯೇ ಅತ್ಯಂತ ದೊಡ್ಡದು ಮತ್ತು ಉತ್ಕೃಷ್ಟವಾದದ್ದು. ಕುವೆಂಪು ಅವರನ್ನು ಅಭ್ಯಾಸಮಾಡಬೇಕು ಎನ್ನುವವರಿಗೆ ಕೈಪಿಡಿ ಯಂತಿರುವ ಈ ಕೃತಿಯಲ್ಲಿ ಕುವೆಂಪು ಅವರು ತಮ್ಮ ಬಾಲ್ಯದಿಂದ ಕುಲಪತಿಯವರೆಗಿನ ಅವಧಿಯ ಅನುಭವಗಳನ್ನು ಮೊದಲನೆಯ ಸಂಪುಟದಲ್ಲಿಯೂ ಮದುವೆ ಮೊದಲಾದ ಉಳಿದ ಅನುಭವಗಳನ್ನು ಎರಡನೆಯ ಸಂಪುಟದಲ್ಲಿಯೂ ಹಿಡಿದಿಟ್ಟಿದ್ದಾರೆ. ಮೊದಲನೆಯ ಸಂಪುಟದಲ್ಲಿ ಚಿಕ್ಕದು ದೊಡ್ಡದು ಅಲ್ಪ ಅನಲ್ಪ ಎನ್ನದೆ ಡೈರಿಯಲ್ಲಿರುವುದನ್ನೆಲ್ಲ ಕೊಟ್ಟಿದ್ದಾರೆ, ಎರಡನೆಯ ಸಂಪುಟದಲ್ಲಿ ಜೀವನದ ಪ್ರಮುಖ ಘಟ್ಟಗಳನ್ನು ಇಡಿಇಡಿಯಾಗಿ ವಿವರಿಸಿದ್ದಾರೆ. ಕುವೆಂಪು ಅವರದು ಸೀಮಿತ ಪ್ರಪಂಚ. ಆ ಪ್ರಪಂಚದ ಕೇಂದ್ರ ವ್ಯಕ್ತಿಯಾಗಿ ನಿಂತು ತಾವು ಅನುಭವಿಸಿದ ಅನುಭವಗಳಿಗೆ ಉಳಿದವರು ಪ್ರತಿಕ್ರಿಯಿಸಿದ ರೀತಿಯನ್ನು ಮಾತ್ರ ಹೇಳುತ್ತ ಹೋಗುತ್ತಾರೆ. ಹೀಗಾಗಿ ಉಳಿದವರ ಸಮಗ್ರ ಚಿತ್ರ ಸಮಗಿಲ್ಲಿ ದೊರೆಯುವುದಿಲ್ಲ. ಅವರು

---

೨೭. ಕನ್ನಡ ವಿಶ್ವಕೋಶ, ಸಂ.೩. ಪು ೭೧೧

೨೮. ಇದೇ ಕಾಲಕ್ಕೆ ಸುಧಾ, ಕರ್ಮವೀರ ಪ್ರಜಾವಾಣಿ ಮೊದಲಾದ ಪತ್ರಿಕೆಗಳು ನಾಗರತ್ನಮ್ಮ, ಕೊಟ್ಟೂರಪ್ಪ ಮೊದಲಾದ ಕಲಾವಿದರ ಆತ್ಮಚರಿತ್ರೆ ಪ್ರಕಟಿಸಿದವು.

ಆಗಾಗ ಇಲ್ಲಿ ಮಿಂಚಿನಂತೆ ಹೊಳೆದು ಹೋಗುವುದೇ ಹೆಚ್ಚು. ಕುವೆಂಪು ಅವರು ಇಲ್ಲಿ ತಮಗೆ ದೊರೆತ ಕಾವ್ಯ ಪ್ರೇರಣೆ ಮೊದಲಾದವುಗಳನ್ನು ವಿವರಿಸಿದ್ದಾರೆ. ಈ ವರೆಗೆ ಪ್ರಕಟವಾಗದೆ ಉಳಿದ ಹಲವಾರು ಕಾವ್ಯಗಳನ್ನು ಉದ್ಧರಿಸುತ್ತಾರೆ. ಜೊತೆಗೆ ಆಗಾಗ ವಿಮರ್ಶಕರು ಇವರ ಬಗ್ಗೆ ಎತ್ತಿದ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾರೆ. ಟೀಕೆ ಟಿಪ್ಪಣಿಗಳನ್ನು ಖಂಡಿಸುತ್ತಾರೆ. ಅವಕ್ಕೆ ಸಂಬಂಧಿಸಿ ಗೆಳೆಯರಿಂದ ಅಪ್ತರಿಂದ ಬಂದ ಪತ್ರಗಳನ್ನು, ಪತ್ರಿಕಾವರದಿಗಳನ್ನು ಉದ್ಧರಿಸುತ್ತಾರೆ. ಇವುಗಳೊಂದಿಗೆ ಮಲೆನಾಡಿನ ಬದುಕಿನ ಸಾಂಸ್ಕೃತಿಕ ಚಿತ್ರಣವೂ ಇಲ್ಲಿ ಕಂಡು ಬರುತ್ತಿದೆ. ಹಸ್ತ ಪ್ರತಿಗಳನ್ನು ಕಾಯ್ದಿಡುತ್ತಿದ್ದ ಓರಣಗೊಳಿಸುತ್ತಿದ್ದ ಪದ್ಧತಿ, ಚೊಚ್ಚಲ ತಾಯಿ ಮಗುವನ್ನು ಹೊತ್ತುಕೊಂಡು ಬರುವಾಗಿನ ಚಿತ್ರ ಮೊದಲಾದವು ಕಣ್ಣಿಗೆ ಕಟ್ಟುವ ಹಾಗೆ ಚಿತ್ರವಾಗಿವೆ.' ಹೀಗೆ ಕವಿಯ ಬದುಕಿನ ವೈವಿಧ್ಯಮಯ ಲೋಕಾನುಭವಗಳ ಪರಿಚಯಕ್ಕೆ ಸಾವಿರಾರು ಗವಾಕ್ಷಗಳು ತೆರೆದುಕೊಳ್ಳುತ್ತವೆ ಅಲ್ಲಿ '(ಪು ೯೨೦). ತಂದೆಯ ಅನಾರೋಗ್ಯ, ಮರಣದ ಭಾಗವನ್ನು ಓದುತ್ತಿದ್ದಂತೆ ಕುವೆಂಪು ಅವರಿಗಾದ ನೋವಿನ ಕಲ್ಪನೆ ಉಂಟು ಮಾಡುತ್ತಿವೆ. ಹೆಮ್ಮಲಗನ ಘಟನೆ, ಕೊಟ್ಟರಾಹು ಬಿಟ್ಟ ಪ್ರಸಂಗ ಮೊದಲಾದವು ಕುವೆಂಪು ಅವರ ವಿನೋದಪ್ರಿಯತೆಯನ್ನು ಎತ್ತಿ ತೋರುತ್ತಿವೆ. ಬಾಲ್ಯದ ಅನುಭವಗಳನ್ನು ಎಷ್ಟೋ ಆತ್ಮಚರಿತ್ರೆಕಾರರು ನೆನಪಿಲ್ಲ ಎಂದು ಬಿಟ್ಟುಬಿಟ್ಟಿದ್ದರೆ ಕುವೆಂಪು ಅವರು ಸುಮಾರು ೨೦೦ ಪುಟಗಳ ವರೆಗೆ ಆ ಅನುಭವಗಳನ್ನು ಇಲ್ಲಿ ಪುಂಕಾನುಪುಂಕವಾಗಿ ತುಂಬಿ ಅಂದಿನ ತಮ್ಮ ಬದುಕಿನ ಸಮಗ್ರ ಚಿತ್ರವನ್ನೀಯತ್ತಿದ್ದಾರೆ. ಆ ಅನುಭವಗಳು ಒಂದರಂತೆ ಮತ್ತೊಂದಿಲ್ಲ. ಕೆಲವೊಂದು ಹಾಸ್ಯದ ಹೊನಲನ್ನು ಹರಿಸಿದರೆ, ಇನ್ನು ಕೆಲವು ದುಃಖದ ಕೋಡಿಯನ್ನು ತೆರೆಯುತ್ತಿವೆ. ಇವನ್ನೆಲ್ಲ ಕುವೆಂಪು ಅವರು ತಮ್ಮ ಸಹಜ ಸುಂದರ ಕಾವ್ಯಶೈಲಿಯಲ್ಲಿ ಬಣ್ಣಿಸಿದ್ದು ಆ ಶೈಲಿ ಎಲ್ಲಿಯೂ ಗ್ರಂಥಕ್ಕೆ ಭಾರವೆನ್ನಿಸಿಲ್ಲ. ಬದಲಿಗೆ ಆ ಪ್ರಸಂಗಗಳ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲಲು ಸಹಾಯಕವಾಗುತ್ತಿವೆ. ಉದಾಹರಣೆಗೆ 'ಬ್ರಾಹ್ಮಣರಲ್ಲಿ ಶೂದ್ರವರ್ಗದವರು ಆ ಪರೀಕ್ಷೆಗ (ಲೋ. ಸೆ. ಪರೀಕ್ಷೆ) ಕೂರುವುದೆಂದರೆ (ತೇರ್ಗಡೆ ಹೊಂದುವ ಮಾತಿರಲಿ) ವಿಶ್ವಾಮಿತ್ರನಿಗೆ ಬ್ರಹ್ಮರ್ಷಿ ಪಟ್ಟವಯಪಾಲಿಸಿದಷ್ಟೇ ಮಹತ್ವ ದ್ದಾಗಿತ್ತು (ಪು. ೯೨). ಇಂಥ ನೂರಾರು ಮಾತುಗಳು ಇಲ್ಲಿ ಬರುತ್ತಿವೆ.

ಆತ್ಮಚರಿತ್ರೆಗಳು ಪ್ರತ್ಯೇಕವಾಗಿ ಗ್ರಂಥರೂಪದಲ್ಲಿ ಮೂಡಿಬಂದಿರುವಂತೆ, ಹಲವಾರು ಸಂಭಾವನಾ ಗ್ರಂಥಗಳ ಭಾಗಗಳಾಗಿಯೂ ಕಾಣಿಸಿಕೊಂಡಿವೆ. ಉದಾಹರಣೆಗೆ `ವಚನ ಪಿತಾಮಹ' ದಲ್ಲಿ ಫ. ಗು. ಹಳಕಟ್ಟಿ ಅವರೂ, ನಾಗವಲ್ಲಿಯಲ್ಲಿ ಎಚ್. ಎಲ್. ನಾಗೇಗೌಡ ಅವರೂ, `ಆಸ್ವಾದ 'ದಲ್ಲಿ ಎಂ.ವಿ. ಸೀತಾರಾಮಯ್ಯ ಅವರೂ, `ಗೌರವ' ದಲ್ಲಿ ಎಸ್. ಎಸ್. ಭೂಸನೂರಮಠ ಅವರೂ, `ಲೋಕಮಿತ್ರ' ದಲ್ಲಿ ಕು. ಸಿ. ಹರಿದಾಸ ಭಟ್ಟ ಅವರೂ ತಮ್ಮ ಆತ್ಮಚರಿತ್ರೆಯನ್ನು ಬರೆದಿದ್ದಾರೆ. ಆದರೆ ಇವೆಲ್ಲ ಪುಟಗಳ ಮಿತಿಯಲ್ಲಿದ್ದರೆ ಸಿದ್ಧಯ್ಯ ಪುರಾಣಿಕ ಅವರು " ಕಾವ್ಯಾನಂದ " ದಲ್ಲಿ ಬರೆದ " ನನ್ನ ನಿನ್ನೆಗಳೊಂದಿಗೆ ಕಣ್ಣುಮುಚ್ಚಾಲೆ ಆತ್ಮಚರಿತ್ರೆ ಸ್ವತಂತ್ರ ಗ್ರಂಥವಾಗಬಲ್ಲ ೩೬೩ ಪುಟದ ವ್ಯಾಪ್ತಿಯಲ್ಲಿ ಹಬ್ಬಿದೆ. ಅವರೂ ಇದನ್ನು ಎಲ್ಲಾ ಆತ್ಮಚರಿತ್ರಕಾರರ ಹಾಗೆ,' ಬರೆಯುವಂಥ ದೇನಿದೆ ಈ ಸಾಮಾನ್ಯ ಜೀವನದಲ್ಲಿ, ಎಂದು ಪ್ರಾರಂಭಿಸಿ, ಬರೆದು ಮುಗಿಸಿದ ಮೇಲೆ `ಈಗ ಇನ್ನೂ, ಇದರ ಹತ್ತರಷ್ಟು ಬರೆಯುವುದು ಉಳಿದುಬಿಟ್ಟಿತೆನಿಸಿದ ' ಎಂದಿದ್ದಾರೆ.

ಜೊತೆಗೆ 'ನನಗೆ ಕಹಿಯೆನಿಸಿದುದರ ಕಣ್ಣು ನಾನು ಮುಚ್ಚಿರಹುದು, ನನ್ನ ಕಣ್ಣನ್ನು ಮರವೆ ಮುಚ್ಚಿರಬಹುದು. ಅಂತೂ ಇಲ್ಲಿ ಬಂದಿರುವುದೆಲ್ಲ ಮಹತ್ವವಾದುದೇನಲ್ಲ. ಇಲ್ಲಿ ಬರದಿದ್ದುದೆಲ್ಲ ಮಹತ್ವವಿಲ್ಲದುದೇನಲ್ಲ' ಎಂದು ಹೇಳಿ ತಾವು ಬಾಲ್ಯದಲ್ಲಿ ಓದಲು ಪಟ್ಟ ಶ್ರಮ, ದೊರೆತ ಪ್ರೇರಣೆ, ಅಧಿಕಾರಿಯಾಗಿ ಅನುಭವಿಸಿದ ಸಿಹಿ ಕಹಿ ಪ್ರಸಂಗಗಳು, ಕನ್ನಡಕ್ಕಾಗಿ ನಡೆಸಿದ ಹೋರಾಟ ಮೊದಲಾದವನ್ನು ಸುದೀರ್ಘವಾಗಿ ಪ್ರಸ್ತಾಪಿಸಿದ್ದಾರೆ. ಸರಳ ನಿರೂಪಣೆ, ಸುಂದರ ಭಾಷೆಯಿಂದ ಇದು ಓದುಗನನ್ನು ಆಕರ್ಷಿಸುತ್ತಿದೆ. ಅವರು ಅಧಿಕಾರಿಯಾಗಿ ಮೇಲಿನವರೊಂದಿಗೆ ನಡೆದು ಕೊಂಡ ಕೆಲವು ಘಟನೆಗಳು ಪುರಾಣಿಕರ ಕೆಚ್ಚನ್ನೂ ಪ್ರಾಮಾಣಿಕತೆಯನ್ನೂ ಎತ್ತಿ ಹೇಳುತ್ತಿವೆ.

ಒಟ್ಟಾರೆ ಈ ಎಲ್ಲ ಆತ್ಮಚರಿತ್ರೆಗಳು ತೀರ್ಥಂಕರರ ಪಂಚಕಲ್ಯಾಣೋತ್ಸವಗಳ ವರ್ಣನೆಯ ಹಾಗೆ ಆಯಾ ವ್ಯಕ್ತಿಯ ಊರು, ತಂದೆ ತಾಯಿ, ಬಂಧುಬಳಗ, ಪರಿಸರ, ಜನನ, ಬಾಲ್ಯ, ವಿದ್ಯಾಭ್ಯಾಸ, ಪ್ರಭಾವ ಬೀರಿದ ಮಾರ್ಗದರ್ಶಕರಾದ ಗುರುಗಳು, ಹಿರಿಯರು, ನೌಕರಿ, ಅದು ಸಿಕ್ಕ ಸನ್ನಿವೇಶ, ಅದರ ಪ್ರಥಮ ಅನುಭವ, ಆ ಮೇಲಿನ ಅನುಭವ, ದಾಂಪತ್ಯ ಆಯಾ ಕ್ಷೇತ್ರದಲ್ಲಿ ಮಾಡಿದ ಸಾಧನೆ, ಅದಕ್ಕೆ ಒದಗಿದ ಆತಂಕ, ಅದನ್ನು ಎದುರಿಸಿದ ರೀತಿ ಮೊದಲಾದ ವಿಭಾಗಗಳಲ್ಲಿ ಮೂಡಿ ಬಂದಿರುವುದನ್ನು ಕಾಣುತ್ತೇವೆ. ಆದರೆ ಅವುಗಳ ವೈಶಿಷ್ಟ್ಯವೆನಿದ್ದರೂ ವ್ಯಕ್ತಿಯ ಅನುಭವ ಮತ್ತು ಅಭಿವ್ಯಕ್ತಿಗಳ ಮೇಲೆ. ಅನುಭವ ವಿಶಾಲವಾದಷ್ಟೂ ಆ ಆತ್ಮಚರಿತ್ರೆಗೆ ಹೆಚ್ಚಿನ ಬೆಲೆ ಪ್ರಾಪ್ತವಾಗುತ್ತದೆ. ಅಭಿವ್ಯಕ್ತಿಯ ಸೊಗಸಿನಿಂದ ಸಹೃದಯರ ಮನಸ್ಸನ್ನಾಕರ್ಷಿಸುತ್ತಿದೆ. ಇಂಥ ಕೆಲವು ಆತ್ಮಚರಿತ್ರೆಗಳನ್ನು ಮೇಲೆ ಉಲ್ಲೇಖಿಸಿದೆ. ಹೀಗೆ ಹಲವಾರು ಆತ್ಮಚರಿತ್ರೆಗಳು ಕನ್ನಡದಲ್ಲಿ ಬಂದಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಟ್ಟಿದೆ. :[೧]

೧) ನನ್ನ ಕಳೆದ ಮೂವತ್ತು ವರುಷಗಳು : ಹರ್ಡೇಕರ ಮಂಜಪ್ಪ, ೧೯೩೬
೨) ಹತ್ತು ವರುಷ : ಜಿ. ಪಿ. ರಾಜರತ್ನಂ, ೧೯೩೯, ೧೯೭೨, ನಿರ್ಜಯಾಗ್ರಫಿ - ಎಂಟು ಕಂತುಗಳಲ್ಲಿ ಪ್ರಕಟ
೩) ನನ್ನ ಜೀವನ ಸ್ಮೃತಿಗಳು : ಆಲೂರು ವೆಂಕಟರಾಯ ; ೧೯೪೦, ೧೯೭೩
೪) ಸಾಹಿತ್ಯಜ್ಞರ ಆತ್ಮಕಥನ : ಮಿಂಚಿನಬಳ್ಳಿ ಪ್ರಕಾಶನ ೧೯೪೬
೫) ಹುಚ್ಚು ಮನಸ್ಸಿನ ಹತ್ತು ಮುಖಗಳು : ೧೯೪೮ ಸ್ಮೃತಿ ಪಟಲದಿಂದ : ಮೂರು ಸಂಪುಟ, ೧೯೭೮ ° ಶಿವರಾಮ ಕಾರಂತ
೬) ಕೆಲವು ನೆನಪುಗಳು : ನವರತ್ನ ರಾಮರಾಯ, ೧೯೫೦
೭) ಜ್ಞಾಪಕ ಚಿತ್ರಶಾಲೆ : ಡಿ. ವಿ. ಜಿ., ೧೯೬೨ - ೭೪
೮) ಕಲೆಯೇ ಕಾಯಕ : ಗುಬ್ಬಿ ವೀರಣ್ಣ, ೧೯೬೨
೯) ಭಾವ : ಮಾಸ್ತಿ ವೆಂಕಟೇಶ ಅಯ್ಯಂಗಾರ, ೧೯೬೮
೧೦) ಹೋರಾಟದ ಬದುಕು : ದೇ. ಜ. ಗೌ. ೧೯೬೮, ಕುಲಪತಿಯ ದಿನಚರಿ, ೧೯೭೩

---

೧ ೧೯೪೭ ರಿಂದ ೧೯೭೨ ರ ವರೆಗೆ ಕನ್ನಡದಲ್ಲಿ ಬಂದ ಆತ್ಮಚರಿತ್ರೆಗಳು ೫೫ (ಕ. ಜಿ. ಚ. ಪು. ೨೧೫)

೧೦) ನಟಸಾರ್ವಭೌಮ : ರಾಜಕುಮಾರ. ೧೯೭೦
೧೨) ಬರಹಗಾರನ ಬದುಕು : ಅನಕೃ, ೧೯೭೨
೧೩) ಎನ್. ಸಿ. ಸಿ. ದಿನಗಳು : ಜಿ. ಟಿ. ನಾರಾಯಣರಾವ್, ೧೯೭೨
೧೪) ಸಾಹಿತಿಯ ಆತ್ಮಜಿಜ್ಞಾಸೆ : ಶ್ರೀರಂಗ, ೧೯೭೩
೧೫) ಬದುಕು ಮೆಲುಕು : ಎಚ್. ಕೆ. ವೀರಣ್ಣಗೌಡ. ೧೯೭೪
೧೬) ಇದು ನನ್ನ ಕಥೆ : ಆರ್ ನಾಗೇಂದ್ರರಾವ್, ೧೯೭೪
೧೭) ಅಭಿನಯ ಶಾರದ : ಮುಳವಳ್ಳಿ ಸುಂದರಮ್ಮ, ೧೯೭೫
೧೮) ಕುಂದರನಾಡಿನ ಕಂದ : ೧೯೭೬, ಕಾದಂಬರಿಕಾರನ ಕಥೆ : ೧೯೮೧
ಬಸವರಾಜ ಕಟ್ಟೀಮನಿ
೧೯) ಭಯಾಗ್ರಫಿ : ಬೀಚಿ, ೧೯೭೬
೨೦) ಜೇಲಿನ ದಿನಚರಿ : ಸ್ನೇಹಲತಾ ರಡ್ಡಿ - ೧೯೭೭
೨೧) ೨೬ ದಿನಗಳ ರಾತ್ರಿ : ಚಂಪಾ, ೧೯೭೯
೨೨) ನಂದೇ ನಾನೋದಿದೆ : ಜೋಳದರಾಶಿ ದೊಡ್ಡನಗೌಡ. ೧೯೭೯
೨೩) ಅಭಿನೇತ್ರಿ : ಬಿ. ಜಯಮ್ಮ, ೧೯೭೯
೨೪) ನೆನಪಿನ ದೋಣಿಯಲ್ಲಿ : ಕುವೆಂಪು, ೧೯೮೦
೨೫) ದಾರಿ ಸಾಗಿದೆ : ಸ. ಸ. ಮಾಳವಾಡ, ೧೯೮೯
೨೬) ಸಂಜೆಗಣ್ಣಿನ ಹಿನ್ನೋಟ : ಎ. ಎನ್. ಮೂರ್ತಿರಾವ್, ೧೯೯೦
೨೭) ಮೂರು ತಲೆಮಾರು : ೧೯೯೦, ನೆನಪಿನ ಅಲೆಗಳು : ೧೯೯೧, ತ. ಸು. ಶಾಮರಾಯ
೨೮) ಪ್ರಾಂಶುಪಾಲನಾಗಿ ೨೦ ವರ್ಷ : ಟಿ. ನ. ಮಂಗಳ, ೧೯೯೧
೨೯) ಕೋಟುಮನೆ : ಸಮೇತನಹಳ್ಳಿ ರಾಮರಾಯ, ೧೯೯೧
೩೦) ನಿವೇದನ : ಕು. ಶಿ. ಹರಿದಾಸ ಭಟ್ಟ. ೧೯೯೨
೩೧) ಬದುಕಿ ಫಲವೇನು : ಪರ್ಲ ಕೃಷ್ಣಭಟ್ಟ, ೧೯೯೪
೩೨) ನಾನೊಬ್ಬ ಸಾರ್ವಜನಿಕ : ಕೆ. ಚೆನ್ನಬಸವಗೌಡ. ೧೯೯೪

ಅಂಕಣ ಸಾಹಿತ್ಯ

-ಪದಾನಂದ ಕನವಳ್ಳಿ

ಇತ್ತೀಚಿನ ದಿನಗಳಲ್ಲಿ ಯಾವುದೇ ಭಾಷೆಯ ದಿನಪತ್ರಿಕೆ, ನಿಯತಕಾಲಿಕೆಯಲ್ಲಿ ಅಂಕಣ ಬರಹ ಇದ್ದೇ ಇರುವುದನ್ನು ಗಮನಿಸಬಹುದು. ಇದು ಅಂಕಣಬರಹದ ಜನಪ್ರಿಯತೆಯನ್ನು ತೋರಿಸುತ್ತದೆ. ಓದುಗರು ಇಷ್ಟೊಂದಾಗಿ ಇಷ್ಟಪಡದಿದ್ದರೆ ಅಂಕಣಬರಹ ಇಷ್ಟೊಂದು ವ್ಯಾಪಕವಾಗಿ ಪ್ರಕಟಗೊಳ್ಳುತ್ತಿತ್ತೇ ? ಅಂಕಣ ಬರಹ ಎಷ್ಟೊಂದು ವ್ಯಾಪಕವಾಗಿದೆಯೆಂದರೆ ಅದು ಯಾವುದೇ ಪತ್ರಿಕೆಯ ಅವಿಭಾಜ್ಯ ಅಂಗವಾಗಿ ಬಿಟ್ಟಿದೆ. ಅದೊಂದು ಸಾಹಿತ್ಯ ಪ್ರಕಾರವೆಂದೇ ಗುರುತಿಸಲ್ಪಟ್ಟಿದೆ.

ಅಂಕಣಬರಹವೆಂದರೆ ಒಂದು ಪತ್ರಿಕೆಯಲ್ಲಿ ನಿರ್ದಿಷ್ಟ ಸ್ಥಳಾವಕಾಶದಲ್ಲಿ ಪ್ರತಿ ಸಂಚಿಕೆಯಲ್ಲೂ ಒಂದಿಲ್ಲೊಂದು ವಿಷಯ ಕುರಿತು ಬರೆಯುವುದು. ಇದರಲ್ಲಿ ಎರಡು ವಿಧ. ಒಂದು, ವಿಷಯದ ಬೇರೆ ಬೇರೆ ಸಮಸ್ಯೆಗಳನ್ನು ಕುರಿತು ಬರೆಯುವಂಥದು. ಉದಾಹರಣೆಗೆ, ಕ್ರೀಡೆ, ಆರೋಗ್ಯ, ಶಿಕ್ಷಣ, ಕೃಷಿ, ಸಾಹಿತ್ಯ, ಸಂಸ್ಕೃತಿ, ರಾಜಕಾರಣ, ಸಾಮಾಜಿಕ ಸಮಸ್ಯೆಗಳು, ಆರ್ಥಿಕ ಚಿಂತನೆ, ವಿಷ್ಣುನ ಇತ್ಯಾದಿ. ಕ್ರೀಡಾ ಅಂಕಣಕಾರ ಪ್ರತಿ ಸಂಚಿಕೆಯಲ್ಲಿ ಕ್ರೀಡೆ ಕುರಿತೇ ಬರೆಯುವುದು. ಕೃಷಿ ಅಂಕಣಕಾರ ಕೃಷಿ ಕುರಿತೇ ಬರೆಯುವುದು ಇತ್ಯಾದಿ. ಇನ್ನೊಂದು, ಅಂಕಣಕಾರನಿಗೇ ವಿಷಯದ ಆಯ್ಕೆಯ ಸ್ವಾತಂತ್ರ್ಯ ನೀಡುವುದು. ಅಂದರೆ, ಅಂಕಣಕಾರ ತನ್ನದೇ ಪ್ರಚಲಿತ ಸಮಸ್ಯೆ, ಸಾಹಿತ್ಯ, ಸಾಂಸ್ಕೃತಿಕ ವಿದ್ಯಮಾನ ಅಥವಾ ಯಾವುದೇ ಮಹತ್ವದ ವಿಷಯವನ್ನು ತನ್ನ ಬೇಕಿನದ ವಸ್ತುವಾಗಿಸಿಕೊಳ್ಳಬಹುದು. ಎರಡನೆಯ ವಿಧದಲ್ಲಿ ಅಂಕಣಕಾರ ಎಲ್ಲ ವಿಷಯಗಳ ಬಗೆಗೂ ತಿಳಿದಿರಬೇಕಾಗುತ್ತದೆ. ಇಲ್ಲವೆ ತಿಳಿದುಕೊಳ್ಳಬೇಕಾಗುತ್ತದೆ. ಒಂದನೆಯ ವಿಧಕ್ಕೆ ತನ್ನ ಕ್ಷೇತ್ರದಲ್ಲಿ ಮಾತ್ರ ಪಳಿಯಿದ್ದರೆ ಆಯಿತು. ಎರಡನೆಯದಕ್ಕೆ ಧಾರಾಳ ಓದು, ವಿಧವಿಧ ಲೋಕಾನುಭವ ಅಗತ್ಯ. ಒಂದನೆಯದನ್ನು ಆಯಾ ಕ್ಷೇತ್ರದಲ್ಲಿ ಆಸಕ್ತಿ ಇದ್ದವರು ಮಾತ್ರ ಓದಿದರೆ ಎರಡನೆಯದನ್ನು ಸಾಮಾನ್ಯ ಆಸಕ್ತಿ ಇದ್ದವರೆಲ್ಲ ಓದುವರು. ಉದಾಹರಣೆಗೆ, ಆರ್ಥಿಕ ವಿಷಯ ಕುರಿತ ಅಂಕಣವನ್ನು ಆರ್ಥಿಕ ಕ್ಷೇತ್ರದಲ್ಲಿ ಆಸಕ್ತಿ ಹೊಂದಿದವರು ಮಾತ್ರ ಓದುವರು. ಆದರೆ, ಅಂಕಣಕಾರ ಶ್ರೀ ಸಾಮಾನ್ಯನನ್ನು ತಟ್ಟುವ ರೀತಿಯಲ್ಲಿ ಬರೆದರೆ ಸಾಮಾನ್ಯ ಓದುಗನೂ ಆ ಅಂಕಣವನ್ನು ಓದಿಯಾನು.

ಅಂಕಣಬರಹ ಯಾವ ಸಾಹಿತ್ಯ ಪ್ರಕಾರಕ್ಕೆ ಸೇರಿದ್ದು ? ಎಂಬ ಪ್ರಶ್ನೆಗೆ ಪ್ರಬಂಧ, ಹರಟೆ ಪ್ರಕಾರಕ್ಕೆ ಸೇರಿದ್ದು ಎಂದೇ ಉತ್ತರ ಹೇಳಬೇಕಾಗುತ್ತದೆ. ಪ್ರಬಂಧಕಾರನಂತೆ

ಅಂಕಣಕಾರನೂ ತಾನು ಆಯ್ದುಕೊಂಡ ವಿಷಯದ ನಾನಾ ಮಗ್ಗಲುಗಳನ್ನು ತಾರ್ಕಿಕವಾಗಿ ವಿವೇಚಿಸಬೇಕಾಗುತ್ತದೆ. ಕ್ರಮಬದ್ಧವಾಗಿ ಹೆಣೆಯಬೇಕಾಗುತ್ತದೆ. ಆಕರ್ಷಕವಾಗಿ ನಿರೂಪಿಸ ಬೇಕಾಗುತ್ತದೆ. ಪ್ರಬಂಧಕಾರನಿಗೆ ಸ್ಥಳಮಿತಿ ಇರುವುದಿಲ್ಲ. ಆದರೆ, ಅಂಕಣಕಾರ ಸ್ಥಳಮಿತಿ ಯಿಲ್ಲದೆ ಬರೆಯಲು ಪತ್ರಿಕೆಯ ಪುಟ ಸೀಮಿತಿಯಲ್ಲಿ ಅವಕಾಶ ದೊರೆಯದು. ಪತ್ರಿಕೆಯಲ್ಲಿ ನಾನಾ ವಿಷಯಗಳನ್ನು ಕುರಿತ ಲೇಖನಗಳಿರುವುದರಿಂದ ಅವೆಲ್ಲಕ್ಕೂ ಅದರ ಒಟ್ಟು ಪುಟ ಸಂಖ್ಯೆಯ ಮಿತಿಯಲ್ಲಿಯೆ ಅವಕಾಶವುಂಟು. ಅಂತೆಯೆ, ಅಂಕಣಕ್ಕೂ ಇಂತಿಷ್ಟು ಶಬ್ದಗಳು ಎಂಬ ಮಿತಿ ಇರುತ್ತದೆ. ಆ ಮಿತಿಯೊಳಗೇ ಅಂಕಣಕಾರ ತನ್ನ ಜಾಣ್ಮೆ ತೋರಬೇಕಾಗುತ್ತದೆ. ಹೀಗಾಗಿ, ಪ್ರಬಂಧಕಾರನಿಗಿದ್ದ ಸ್ಥಳಾವಕಾಶ ಸ್ವತಂತ್ರ್ಯ ಅಂಕಣಕಾರನಿಗೆ ಇಲ್ಲದಿರುವುದರಿಂದ ಅವನ ಕಾರ್ಯ ಕಷ್ಟಕರ. ಹತ್ತು ಪುಟಗಳಲ್ಲಿ ಹೇಳುವುದನ್ನು ಒಂದೋ ಎರಡೋ ಪುಟಗಳಲ್ಲಿ ಹೇಳಬೇಕಾಗುತ್ತದೆ. ಅಲ್ಲದೆ, ಪ್ರಬಂಧಕಾರ ತನಗೆ ಮೂಡು ಬಂದಾಗ ಲೇಖನಿ ಎತ್ತಿ ಕೊಳ್ಳಬಹುದು, ವಿಚಾರಲಹರಿ ಮುಂದುವರಿಯುವವರೆಗೂ ಬರೆಯಬಹುದು. ಬೇಸರ ಬಂದರೆ ಲೇಖನಿ ಕೆಳಗಿಡಬಹುದು. ಮತ್ತೆ ಯಾವಾಗಲೊ ಮೂಡು ಮರಳಿದಾಗ ಪುನಃ ಬರಹ ಮುಂದುವರಿಸಬಹುದು. ಅಂಕಣಕಾರನಿಗೆ ಸಮಯ ಸ್ವಾತಂತ್ರ್ಯವಿಲ್ಲ. ಅವನು ಮೂಡಿಗಾಗಿ ಕಾಯುವಂತಿಲ್ಲ. ಸದಾ ಮೂಡಿನಲ್ಲಿದ್ದು ಬರೆಯಲು ಸನ್ನದ್ಧನಾಗಿರಬೇಕು. ನಿರ್ದಿಷ್ಟ ಸಮಯಕ್ಕೆ ಅಂಕಣ ಬರಹ ಕಳಿಸಲೇಬೇಕು. ಆದುದರಿಂದ, ಅಂಕಣಕಾರ ಹೆಚ್ಚು ಬರಹಶಿಸ್ತು, ಕಟ್ಟು ನಿಟ್ಟು ಮೈಗೂಡಿಸಿಕೊಳ್ಳಬೇಕಾಗುತ್ತದೆ.

ಪರಂಪರೆ:

ಕನ್ನಡ ಅಂಕಣ ಸಾಹಿತ್ಯಕ್ಕೆ ಸುದೀರ್ಘ ಪರಂಪರೆಯಿದೆ. ಹಾಗೆ ನೋಡಿದರೆ, ಅದು ಕನ್ನಡ ಪತ್ರಿಕೋದ್ಯಮ ಹುಟ್ಟಿದಂದಿನಿಂದಲೆ ಆರಂಭಗೊಂಡಿದೆ. ಪ್ರಥಮ ಕನ್ನಡ ಪತ್ರಿಕೆ `ಮಂಗಳೂರು ಸಮಾಚಾರ' ಜುಲೈ ೧, ೧೮೪೩ ರಂದು ಉದಯಿಸಿತು. ಅಂದಿನಿಂದಲೆ ಅದರ ಸಂಪಾದಕ ಹರ್ಮನ್ ಮೊಗ್ಲಿಂಗ್ `ನೈತಿಕ ವಿಚಾರಗಳು' ಎಂಬ ಅಂಕಣ ಬರೆಯಲಾ ರಂಭಿಸಿದರು. ಅವರ ನೈತಿಕ ವಿಚಾರಗಳು ಕ್ರೈಸ್ತ ಧರ್ಮದ ಪ್ರಚಾರವೇ ಆಗಿದ್ದವೆಂದು ಬೇರೆ ಹೇಳಬೇಕಿಲ್ಲ. ಆಷ್ಟೇ ಪ್ರಾಚೀನವಾದುದು ಮಂಗಳೂರಿನ `ಕಂಠೀರವ' ಪತ್ರಿಕೆಯಲ್ಲಿ ಹುರಳೀ ಭೀಮರಾಯರು ಬರೆಯುತ್ತಿದ್ದ ಅಂಕಣ. `ರಾಷ್ಟ್ರಬಂಧು'ವಿನಲ್ಲಿ ಕಡೆಂಗೋಡ್ಲು ಶಂಕರ ಭಟ್ಟರು `ಅಲ್ಲಲ್ಲಿ ಇಷ್ಟಿಷ್ಟು' ಎಂಬ ಅಂಕಣವನ್ನು ಬರೆಯುತ್ತಿದ್ದರು. ಅದೇ `ರಾಷ್ಟ್ರಬಂಧು' ವಿನಲ್ಲಿ ಸನಾತನಿ ಎಂಬ ಕಾವ್ಯನಾಮದಿಂದ ವಾಸುದೇವ ಉಪಾಧ್ಯಾಯ ಹಾಸ್ಯಚಟಾಕಿಯ ಅಂಕಣ ಬರೆಯುತ್ತಿದ್ದರು. `ಜಯಂತಿ'ಯಲ್ಲಿ ಶ್ರೀರಂಗರು ಬರೆಯುತ್ತಿದ್ದ `ಮಂಗನ ಮಲ್ಲಿನಾಥಿ ' ರಾಜಕೀಯ ವಿಷಯ ಕುರಿತದ್ದು. ಶ್ರೀರಂಗರ ವ್ಯಂಗ್ಯ, ಟೀಕೆ ಅಂಕಣಬರಹಕ್ಕೆ ಹೊಸ ಆಯಾಮ ಒದಗಿಸಿತು.

ಅಂಕಣ ಬರಹಕ್ಕೆ ಸ್ವಾನಗೌರವ ತಂದುಕೊಟ್ಟವರು ಸಿದ್ದವನಹಳ್ಳಿ ಕೃಷ್ಣಶರ್ಮರು ಮತ್ತು ನಿರಂಜನರು. ಕೃಷ್ಣಶರ್ಮರು `ವಾಹಿನಿ'ಯಲ್ಲಿ `ಮಾತಿನ ಮಂಟಪ' ಅಂಕಣವನ್ನು ೧೯೪೨ರಿಂದ ೧೯೪೬ರ ವರೆಗೂ ಬರೆದರು. ಅದರೊಂದಿಗೆ ಅವರು ಎಷ್ಟೊಂದು ತಾದಾತ್ಮ್ಯ ಹೊಂದಿದ್ದರೆಂದರೆ ಅದನ್ನು ನಿಲ್ಲಿಸಿದ ನಂತರ ಹಲವಾರು ವರ್ಷ ಬರವಣಿಗೆಯನ್ನೆ ನಿಲ್ಲಿಸಿಬಿಟ್ಟರು. ಪುನಃ ೧೯೬೦ರ ದಶಕದಲ್ಲಿ `ಸಂಯುಕ್ತ ಕರ್ನಾಟಕ', `ಕರ್ಮವೀರ'ಗಳಲ್ಲಿ

`ಮಾತಿನ ಮಂಟಪ ' ಕಟ್ಟಿದರು. ಕೆಲ ಕಾಲ `ಪ್ರಜಾವಾಣಿ'ಯಲ್ಲೂ `ಚಿಂತನ ಮಂಥನ' ಬರೆದರು. ಅವರದು ಅದರ್ಶಮಯ ಮಾತುಗಳು, ಅನನುಕರಣೀಯ ಶೈಲಿ. ಚಿಕ್ಕ ಚಿಕ್ಕ ಪಾಕ್ಯಗಳು, ಉದಾಹರಣೆಗೆ " ರವೀಂದ್ರರದು ಕಾವ್ಯಕರ್ಮವಾದರೆ ಗಾಂಧೀಜಿಯವರದು ಕರ್ಮಕಾವ್ಯ " .

ಅದೇ ಸುಮಾರಿಗೆ ನಿರಂಜನರು `ಪ್ರಜಾವಾಣಿ' ಯಲ್ಲಿ `ಬೇವು -ಬೆಲ್ಲ', `ಜನಪ್ರಗತಿ' ಯಲ್ಲಿ `ಸುದಿನ ಸಂಚಿಯ 'ಅಂಕಣಗಳಲ್ಲದೆ `ಚಿತ್ರಗುಪ್ತ' ದಲ್ಲೂ ` ಐದು ನಿಮಿಷ' ಎಂಬ ಒಂದು ಅಂಕಣ ಬರೆಯುತ್ತಿದ್ದರು. ಅವರವರ ವಿಚಾರಧಾರೆಗಳಿಂದ ಸಿದ್ಧವನಹಳ್ಳಿ ಕೃಷ್ಣ ಶರ್ಮರು ಗಾಂಧಿವಾದಿಗಳೆಂಬುದನ್ನೂ ನಿರಂಜನರು ಮಾರ್ಕ್ಸ್‌ವಾದಿಯೆಂಬುದನ್ನೂ ಸುಲಭವಾಗಿ ಗುರುತಿಸಬಹುದಾಗಿತ್ತು. ೬೦ರ ದಶಕದಲ್ಲಿ ನಿರಂಜನರು `ಕರ್ಮವೀರ 'ದಲ್ಲಿ `ನನ್ನ ಅಂಕಣ' ಎಂಬ ಬೆಂಗಳೂರು ಪತ್ರವನ್ನು `ಜನಪ್ರಗತಿ'ಯಲ್ಲಿ `ಕಾಲಕ್ಷೇಪ' ಅಂಕಣವನ್ನೂ ಬರೆಯುತ್ತಿದ್ದರು. ಅವು ಕೇವಲ ಕಾಲಕ್ಷೇಪವಾಗಿರದೆ ವಿಚಾರ ಪ್ರಚೋದಕವಾಗಿದ್ದವು.

ದೊಡ್ಡ ದೊಡ್ಡ ಕನ್ನಡ ಸಾಹಿತಿಗಳ ದಂಡೇ ಅಂಕಣಬರಹ ನಿರತರಾಗಿದ್ದುದು ಗಮನಾರ್ಹ ಸಂಗತಿ. ಎಲ್. ಎಸ್. ಶೇಷಗಿರಿರಾಯರು `ಪ್ರಜಾಮತ' ದಲ್ಲಿ `ಸಹಚಿಂತನ' ಅಂಕಣವನ್ನು ದೀರ್ಘ ಕಾಲ ಬರೆದರು. ಪಿ. ಎಂ. ಇನಾಮದಾರರು `ಸುಧಾ'ದಲ್ಲಿ `ಸಾಹಿತ್ಯ ವಿಹಾರ 'ಅಂಕಣವನ್ನು ಬಹುಕಾಲ ಬರೆದರು. ಹೆಸರೇ ಸೂಚಿಸುವಂತೆ ಅವು ಸಾಹಿತ್ಯ ಕುರಿತ ಬರಹಗಳಾಗಿದ್ದವು. ಶೇಷಗಿರಿರಾಯರದೂ ಹಾಗೆಯೆ, ಸಾಹಿತ್ಯ-ಸಂಸ್ಕೃತಿ ಕುರಿತದ್ದು. `ಕರ್ಮವೀರ 'ದಲ್ಲಿ ಬಸವರಾಜ ಕಟ್ಟೀಮನಿಯವರ `ಶಾಸಕ ಸಾಹಿತಿಯ ಸಂಪುಟದಿಂದ' ಬಹುಕಾಲ ಪ್ರಕಟಗೊಂಡಿತು. ಸಾಹಿತ್ಯಿಕ ವಿಷಯಗಳಿಗಿಂತ ತಮ್ಮ ಅನುಭವಕ್ಕೇ ಹೆಚ್ಚು ಪ್ರಾಧಾನ್ಯ ನೀಡಿದರು. ವೈಯಕ್ತಿಕ ರಾಗರೋಷಗಳು ಸಿಂಹಪಾಲು ಪಡೆದಿದ್ದವು. ಕಟ್ಟೀಮನಿಯವರು `ಪ್ರಜಾಮತ'ದಲ್ಲೂ `ಮಾನಸ ಸರೋವರ' ಎಂಬ ಅಂಕಣ ಬರೆದದ್ದಿದೆ. ಎಷ್ಟೋ ವರ್ಷಗಳಿಂದ ಕು. ಶಿ. ಹರಿದಾಸಭಟ್ಟರು `ಉದಯವಾಣಿ' ಯಲ್ಲಿ ಅದರ ಆರಂಭದಿಂದಲೂ `ಲೋಕಾಭಿರಾಮ' ಅಂಕಣವನ್ನು ಒಂದು ವ್ರತವೆಂಬಂತೆ ನಿರಂತರವಾಗಿ ವಾರವಾರವೂ ಬರೆಯುತ್ತಿದ್ದಾರೆ. ಸಾಹಿತ್ಯ, ಶಿಕ್ಷಣ, ಸಾಮಾಜಿಕ ವಿಷಯಗಳನ್ನೆತ್ತಿಕೊಂಡು ಚಿಂತಿಸುತ್ತಿದ್ದಾರೆ. `ವಾಹಿನಿ' ಯಲ್ಲಿ ತ. ರಾ. ಸು. `ತೋಚಿದ್ದು ಗೀಚಿದ್ದು' ಅಂಕಣ ಬರೆಯುತ್ತಿದ್ದರು. ವಸ್ತು, ಮನಸ್ಸಿಗೆ ಹೊಳೆದ ಯಾವುದಾದರೂ ಇರಬಹುದೆಂಬುದನ್ನು ಶೀರ್ಷಿಕೆಯೆ ಸೂಚಿಸುತ್ತದೆ. ಜಿ. ಪಿ. ರಾಜರತ್ನಂ `ಸುಧಾ' ದಲ್ಲಿ `ಭ್ರಮರ' ` ಪ್ರಜಾಮತದಲ್ಲಿ 'ದಲ್ಲಿ `ವಿಚಾರ ಸರಣಿ' ಎಂಬ ಅಂಕಣ ಬರೆದರು. ಗಾತ್ರದಲ್ಲಿ ಚಿಕ್ಕದಾದರೂ ಪಾತ್ರದಲ್ಲಿ ಹಿರಿದಾಗಿದ್ದ ಅಂಕಣವದು. ಅವೆಲ್ಲ ಸಂಕಲನಗೊಂಡು ಗ್ರಂಥರೂಪದಲ್ಲಿ ಪ್ರಕಟಿತವಾಗಿವೆ. `ಸಂಯುಕ್ತ ಕರ್ನಾಟಕ'ದಲ್ಲಿ ಕೆ. ಟಿ. ಪಾಂಡುರಂಗಿಯವರು ಬರೆದ `ವಿಚಾರ ಜ್ಯೋತಿ' ಮತ್ತು `ಕಸ್ತೂರಿ'ಯಲ್ಲಿ ಬರೆದ `ಜೀವನ ದರ್ಶನ' ಅಂಕಣಗಳೂ ಇದೇ ಮಾದರಿಯವು.

ಪತ್ರಿಕೆಗಳಲ್ಲಿ ಹಾಸ್ಯ ಬರಹಗಳಿಗೆ ಅಪಾರ ಬೇಡಿಕೆಯಿದೆ. ಹಾಸ್ಯ ಯಾರಿಗೆ ತಾನೆ ಇಷ್ಟವಲ್ಲ ! ಬೀಚಿ ಸಂಯುಕ್ತ ಕರ್ನಾಟಕದಲ್ಲಿ `ಬೀಚಿದ್ದು ಗೀಚಿದ್ದು ' ಅಂಕಣವನ್ನು ಕೆಲಕಾಲ ಬರೆದರು. ಪ್ರಜಾಮತದಲ್ಲಿ ` ಎನಗೆ ನಗೆಯು ಬರುತಿದೆ ' ಅಂಕಣ ಬರೆದರು. ಮಯೂರ

ದಲ್ಲಿ `ಮರೆಯಲಾಗದ ಮಹಾನುಭಾವ ' ಬರೆದರು. ಹಾಸ್ಯದ ಹೊನಲು ಹರಿಸಿದರು. ಕೆ
ವರ್ಷ ಸುಧಾದ `ನೀವು ಕೇಳಿದಿರಿ' ಎಂಬ ಓದುಗರ ಪ್ರಶ್ನೆಗಳ ಅಂಕಣದಲ್ಲಿ ಉತ್ತರಗಳನ್ನು
ನೀಡಿದರು. ಅದು `ಉತ್ತರಭೂಪ' ಗ್ರಂಥವಾಗಿಯೂ ಪ್ರಕಟಿತಗೊಂಡಿತು. ರಾವಬಹಾದ್ದೂ
ತಾವೇ ಸಂಪಾದಕರಾಗಿದ್ದ `ಕಲ್ಯಾಣ ಡೈಜೆಸ್ಟ್ ' ನಲ್ಲಿ ದೇಭ (ದೇಶಭಕ್ತ) ನ ಉಪಾಚ
ಎಂಬ ಹಾಸ್ಯಭರಿತ ಅಂಕಣ ಬರೆದರು. ಒಂದು ಅತ್ಯುತ್ತಮವಾದ ದೇಭ ಪಾತ್ರವನ
ಸೃಷ್ಟಿಸಿದರು. ಉದಾಹರಣೆಗೆ, ದೇಭ ದಿಲ್ಲಿಗೆ ಬಂದಿರುತ್ತಾನೆ. ಅದು ಸಿಂಡಿಕೇಟ
ಇಂಡಿಕೇಟ್‌ಗಳಲ್ಲಿ ಕಾಂಗ್ರೆಸ್ ಇಬ್ಭಾಗವಾಗಿದ್ದ ದಿನಗಳು. ವಿಮಾನ ನಿಲ್ದಾಣದಲ್ಲಿ ದೇಭನನ
ಸ್ವಾಗತಿಸಿ ತಮ್ಮ ತಮ್ಮ ಗುಂಪಿಗೆ ಸೇರಿಸಿಕೊಳ್ಳಲು ಎರಡೂ ಬದಿಯವರು ಪೈಪೋ
ನಡೆಸಿದ್ದರು. ದೇಭನೊ ಊಸರವಳ್ಳಿ. ಸಿಂಡಿಕೇಟೋ ಇಂಡಿಕೇಟೋ ತಿಳಿಯದು. ಆ ಬಗೆ
ಯಾರೊ ಪ್ರಶ್ನಿಸಿದರು. ದೇಭ ಉತ್ತರಿಸಿದ :``ನಾನು ಉಂಡಿಕೇಟು '', ತಿನ್ನಲು ಹೆಚ್ಚು ಯಾ
ಕಡೆ ಲಭ್ಯವೊ ಆ ಕಡೆಯವನು ಎಂಬ ಇಂಗಿತ ವ್ಯಕ್ತಪಡಿಸಿದ. ಇತ್ತೀಚೆಗೆ ನವುರಾ
ಹಾಸ್ಯಭರಿತ ಅಂಕಣ ಬರೆದವರು ಎನ್ಕೆ. `ಪ್ರಜಾಮತ ' ದಲ್ಲಿ `ಕರ್ಮವೀರ' ದಲ್ಲಿ `ಎನ್ಕೇ
ಪ್ರಕಾರೇಣ ' ಎಂದು ಅಂಕಣಕ್ಕೆ ಹೆಸರಿಟ್ಟಿದ್ದುದು ಅವರ ಹಾಸ್ಯಪ್ರಿಯತೆಯ ದ್ಯೋತ
`ವಿಕಟ ವಿನೋದಿನಿ', `ಉಷಾ',`ಕಥಾಂಜಲಿ 'ಮೊದಲಾದ ಪತ್ರಿಕೆಗಳಲ್ಲಿ ಸುಪ್ರಸಿದ್ಧ ಹಾ
ಸಾಹಿತಿಗಳಾದ ಜಿ. ನಾರಾಯಣ, ನಾಡಿಗೇರ ಕೃಷ್ಣರಾಯರು, ಟಿ. ಸುನಂದಮ್ಮ, ಬೀ
ನರಸಿಂಹಮೂರ್ತಿ ಮೊದಲಾದವರು ಅಂಕಣ ಬರೆದಿದ್ದಾರೆ. ಹಾಸ್ಯಕ್ಕೇ ಮೀಸಲಾ
`ಕೊರವಂಜಿ ' ಯಲ್ಲಿ ರಾ. ಸಿ. (ಡಾ. ಎಂ. ಶಿವರಾಂ) ` ತಿಂಗಳ ತಿಳಿಗಾಳಿ ' ಅಂಕಣ ಬರೆಯು
ಓದುಗರನ್ನು ಬಿದ್ದುಬಿದ್ದು ನಗುವಂತೆ ಮಾಡುತ್ತಿದ್ದರು.

ಇನ್ನು, ಹವ್ಯಾಸಿ ಯಾ ವೃತ್ತಿನಿರತ ಪತ್ರಕರ್ತರು ಅನೇಕ ಅಂಕಣಗಳನ
ಬರೆದಿರುವುದು, ಬರೆಯುತ್ತಿರುವುದು ಉಂಟು. `ಪ್ರಜಾಮತ' ದಲ್ಲಿ ಹಾಗೂ `ಸಂಯು
ಕರ್ನಾಟಕ' ದಲ್ಲಿ ಕೋ. ಚನ್ನಬಸಪ್ಪ, `ಸಂಯುಕ್ತ ಕರ್ನಾಟಕ' ದಲ್ಲಿ ಎಸ್. ಜಿ. ಮೈಸೂರವ
ಮೊದಲಾದವರನ್ನು ಇಲ್ಲಿ ಹೆಸರಿಸಬಹುದು. ಕೆಲಕಾಲ `ಸಂಯುಕ್ತ ಕರ್ನಾಟಕ'
ಸಂಪಾದಕರಾಗಿದ್ದು ಆ ವೃತ್ತಿ ಬಿಟ್ಟಮೇಲೆ ಕೆ. ಜನಾರ್ದನ `ತರಂಗ' ದಲ್ಲಿ `ವಿಧ
ವೀದಿಯಿಂದ ' ಅಂಕಣ ಬರೆದರು. ಕರ್ನಾಟಕದ ರಾಜಕೀಯ ವಿದ್ಯಮಾನಗಳ ವಿಶ್ಲೇಷ
ಅವರ ವಸ್ತು. ಇದೇ ಮಾದರಿಯ ಅಂಕಣವನ್ನು `ಸುಧಾ'ದಲ್ಲಿ ಆರ್. ಪಿ. ಜಗದೀ
ಬರೆಯುತ್ತಿದ್ದಾರೆ. `ಸುಧಾ 'ದಲ್ಲಿ ಎಚ್ಚೆಸ್ಕೆ ಅವರ `ವಾರದ ವ್ಯಕ್ತಿ' ಸಮದರ್ಶಿಯ
`ಸುದ್ದಿಯ ಹಿನ್ನೆಲೆ',`ಪ್ರಜಾವಾಣಿ'ಯಲ್ಲಿ ಎಚ್ಚೆಸ್ಕೆ ಅವರ ಪ್ರತಿ ಸೋಮವಾರ ವ್ಯಕ್ತವಾಗ
`ಆರ್ಥಿಕ ಚಿಂತನೆ 'ಜನಪ್ರಿಯ ಅಂಕಣಗಳು. `ವಾರದ ವ್ಯಕ್ತಿ ' ಚುಟುಕಾದ ವ್ಯಕ್ತಿ ಚ
ನೀಡಿದರೆ, `ಆರ್ಥಿಕ ಚಿಂತನೆ ' ಗಹನವಾದ ಆರ್ಥಿಕ ಸಮಸ್ಯೆಗಳನ್ನು ಸುಲಲಿತವ
ಬಿಚ್ಚಿಡುತ್ತದೆ. ಐ. ಕೆ. ಜಾಗೀರದಾರ `ಪ್ರಜಾಮತ' ದಲ್ಲಿ `ವಿಚಾರ ಸರಣಿ' ಅಂಕಣವ
ಕೆಲಕಾಲ ನಡೆದು ನಂತ ತಮ್ಮದೇ `ಸಂಕೇತ'ದಲ್ಲಿ `ಹಕೀಕತ್' ಅಂಕಣವನ್ನು ಬರೆದ
`ಹಕೀಕತ್' ನಲ್ಲಿ ವಿಶ್ಲೇಷಣೆ ಚನ್ನಾಗಿರುತ್ತಿತ್ತು. ವೈಕುಂಠರಾಜು ತಮ್ಮದೇ `ವಾರಪ
ಯಲ್ಲಿ `ಚುಚ್ಚು ಮದ್ದು' ಅಂಕಣದಲ್ಲಿ ಚುಚ್ಚುವ ಕೆಲಸವನ್ನು ಚನ್ನಾಗಿ
ನಿರ್ವಹಿಸುತ್ತಿದ್ದಾರೆ. ಪಾಟೀಲ ಪುಟ್ಟಪ್ಪ ತಮ್ಮ `ಪ್ರಪಂಚ'ದಲ್ಲಿ `ನನ್ನ ಹೃದಯದಿಂದ ನ

ಹೃದಯಕ್ಕೆ ', `ಪ್ರಜಾವಾಣಿ'' ಯಲ್ಲಿ ನಮ್ಮ ನಾಡು ನಮ್ಮ ನುಡಿ'ಬರೆದಿದ್ದಾರೆ, ಬರೆಯುತ್ತಿದ್ದಾರೆ. ಇತ್ತೀಚೆಗೆ `ತರಂಗ' ದಲ್ಲಿ `ಪಾಪು ಪ್ರಪಂಚ' ಅಂಕಣ ಬರೆಯುತ್ತಿದ್ದಾರೆ. ವ್ಯಕ್ತಿಗಳ ಘಟನೆಗಳ ಒಳನೋಟ ಇವುಗಳಲ್ಲಿ ದೊರೆಯುತ್ತದೆ. ಈ ಬರಹಗಳು ನಂತರ ಪುಸ್ತಕರೂಪದಲ್ಲಿಯೂ ಪ್ರಕಟಿತವಾಗಿವೆ. ಅದೇ ರೀತಿ ಲಂಕೇಶರು `ಲಂಕೇಶ ಪತ್ರಿಕೆ 'ಯಲ್ಲಿ ಬರೆಯುತ್ತಿರುವ `ಸಂಪಾದಕನ ಟಿಪ್ಪಣಿಗಳು' ಪುಸ್ತಕರೂಪದಲ್ಲಿ ಪ್ರಕಟಿತಗೊಂಡಿವೆ. ಸಂತೋಷ ಕುಮಾರ ಗುಲ್ವಾಡಿ `ತರಂಗ'ದಲ್ಲಿ ಬರೆಯುತ್ತಿರುವ `ಅಂತರಂಗ ಬಹಿರಂಗ ' ಎಂಬ ಸಂಪಾದಕೀಯಗಳೂ ಅದೇ ಹೆಸರಿನಲ್ಲಿ ಗ್ರಂಥರೂಪದಲ್ಲಿ ಪ್ರಕಟಿತಗೊಂಡಿವೆ. `ಸುಧಾ'ದಲ್ಲೂ ಈ ಮಟ್ಟದ ಸಂಪಾದಕೀಯಗಳಿರುವುದಾದರೂ ಅವಕ್ಕೆ ಅಂಕಿತ ಇರುವುದಿಲ್ಲ. ಯಾರು ಬರೆದುದೆಂಬುದು ಗೊತ್ತಿದ್ದರೂ ಶ್ರೇಯಸ್ಸು ನೀಡಲುಬಾರದು. ಇಲ್ಲಿಯೂ ಒಂದೆರಡು ಗಮನಾರ್ಹ ಹಾಸ್ಯ ಅಂಕಣಗಳು ಮಿಂಚಿವೆ. `ಕರ್ಮವೀರ' ದಲ್ಲಿ ಸಂಪಾದಕ ಪಾ. ವೆಂ. ಆಚಾರ್ಯರು ಲಾಂಗೂಲಾಚಾರ್ಯ ಕಾವ್ಯನಾಮದಿಂದ ಬರೆಯುತ್ತಿದ್ದ `ಓದುಗರೊಡನೆ ಹರಟೆ ' ಮತ್ತು `ಪ್ರಜಾವಾಣಿ' ಯಲ್ಲಿ ಸಂಪಾದಕ ಟಿ. ಎಸ್. ಆರ್. (ಟಿ. ಎಸ್. ರಾಮಚಂದ್ರರಾವ್) ಅವರ `ಫೂಬಾಣ' ಅಂಕಣಗಳು ಓದುಗರಿಗೆ ಕಚಗುಳಿ ಇಟ್ಟಿವೆ. ಇಬ್ಬರವೂ ಅನನುಕರಣೀಯ ಶೈಲಿ. ಅವರ ನಂತರ ಆ ಅಂಕಣಗಳು ಕಣ್ಮುಚ್ಚಿರುವುದೇ ಇದಕ್ಕೆ ಸಾಕ್ಷಿ.

ಮಹತ್ವ, ಪ್ರಭಾವ :

ಅಂಕಣಸಾಹಿತ್ಯಕ್ಕೆ ಇಂದು ಹಿಂದೆಂದಿಗಿಂತ ಮಹತ್ವ ಪ್ರಾಪ್ತವಾಗಿದೆ. ಅಂತಲೆ, ಪ್ರತಿಯೊಂದು ಪತ್ರಿಕೆಯೂ ಆಕರ್ಷಕ ಅಂಕಣಕಾರರನ್ನು ನಿಯೋಜಿಸುತ್ತದೆ. ಸಾಹಿತ್ಯಕೃತಿಯನ್ನು ಕೆಲವು ಸಾಹಿತ್ಯಾಸಕ್ತರು ಮಾತ್ರ ಓದುತ್ತಾರೆ. ಆದರೆ, ಅಂಕಣಬರಹವನ್ನು ಲಕ್ಷಾಂತರ ಓದುಗರು ಓದುತ್ತಾರೆ. ಹೀಗಾಗಿ, ಪತ್ರಿಕೆಯಲ್ಲಿ ಬರೆಯುವವರನ್ನು ಬಹುಜನರು ಗುರುತಿಸುತ್ತಾರೆ. ಕತೆ, ಕವನ, ನಾಟಕ, ಕಾದಂಬರಿ ಬರೆದವರಿಗಿಂತ ಅಧಿಕ ಜನಪ್ರಿಯತೆ ದೊರೆಯುತ್ತದೆ. `ಪಾಚಕರ ವಾಣಿ' ಯಲ್ಲಿ ಒಂದು ಪತ್ರ ಪ್ರಕಟವಾದರೆ ಅದು ಸಾವಿರಾರು ಓದುಗರ ಅಭಿಪ್ರಾಯವನ್ನು ಪ್ರತಿನಿಧಿಸುತ್ತದೆ ಎಂದೇ ಲೆಕ್ಕ. ಏಕೆಂದರೆ, ಹಾಗೆ ವಿಚಾರ ಮಾಡುವವರು ಅನೇಕರಿದ್ದಂತೆ ಆ ವಿಚಾರವನ್ನು ಬರಹಕ್ಕಿಳಿಸುವವರು ಒಬ್ಬರೋ ಇಬ್ಬರೋ ಮಾತ್ರ ಇರುತ್ತಾರೆ. ಅದೇ ರೀತಿ ಅಂಕಣಕಾರನ ವಿಚಾರಗಳು ಜನಮನದಲ್ಲಿ ಸಾರ್ವಜನಿಕ ಅಭಿಪ್ರಾಯ ರೂಪಿಸುವ ಶಕ್ತಿ ಹೊಂದಿರುತ್ತವೆ.

ಇತ್ತೀಚೆಗೆ ಗಮನ ಸೆಳೆದ ಅಂಕಣಕಾರರೆಂದರೆ ಕೀರ್ತಿನಾಥ ಕುರ್ತಕೋಟಿ. ಅವರು `ಪ್ರಜಾವಾಣಿ' ಯಲ್ಲಿ ಹದಿನೈದು ದಿನಕ್ಕೊಮ್ಮೆ ಬರೆಯುತ್ತಿರುವ `ಸಮ್ಮುಖ'ಅಂಕಣ ಬರಹಗಳು `ಉರಿಯ ನಾಲಗೆ' ಶೀರ್ಷಿಕೆಯಡಿ ಗ್ರಂಥರೂಪದಲ್ಲಿ ಹೊರಬಂದಿವೆ. ಅವರ ವಸ್ತು ಸಾಮಾನ್ಯವಾಗಿ ಸಾಹಿತ್ಯ ಮತ್ತು ಸಂಸ್ಕೃತಿ. ಅಂಕಣಬರಹಕ್ಕೆ ದೊಡ್ಡ ಹೆಸರು, ಗೌರವ ತಂದುಕೊಟ್ಟವರೆಂದರೆ ಹಾ.ಮಾ.ನಾ. ಅವರಷ್ಟು ಅಂಕಣಕೃಷಿ ಮಾಡಿದವರು ಇನ್ನೊಬ್ಬರಿಲ್ಲ. ತಮ್ಮೆಲ್ಲ ಬುದ್ಧಿಶಕ್ತಿಯನ್ನು ಅಂಕಣ ಬರಹಕ್ಕೆ ಮೀಸಲಾಗಿಟ್ಟಿರುವರೇನೊ ಎನ್ನುವಷ್ಟು ಹಾ.ಮಾ.ನಾ. ಅದರೊಂದಿಗೆ ಅವಿಭಾಜ್ಯವಾಗಿದ್ದಾರೆ. ಅಂಕಣ ಬರಹದೊಂದಿಗೆ ಅವರ ನಂಟು

೧೯೫೦ರಷ್ಟು ಹಳೆಯದು. ಆಗ ಅವರು ಇಂಟರ್ ಮೀಡಿಯೆಟ್ ವಿದ್ಯಾರ್ಥಿ. ಶಿವಮೊಗ್ಗೆಯಿಂದ ಹೊರಡುತ್ತಿದ್ದ `ನಂದಿನಿ' ಮಾಸಪತ್ರಿಕೆಯಲ್ಲಿ `ಪೂರ್ಣಿಮೆಗೆ ಪತ್ರಗಳು' ಎಂಬ ಅಂಕಣ ಬರೆದರು. ಪುಸ್ತುತ `ತರಂಗ'ದಲ್ಲಿ ಅವರ `ಸ್ವರ್ಗ'ಅಂಕಣ ಮುನ್ನಡೆದಿದೆ. ಹಲವಾರು ಪತ್ರಿಕೆಗಳಲ್ಲಿ ಅವರ ಅಂಕಣ ಬರಹ ಕುಡಿಯೊಡೆದಿದೆ. `ಕನ್ನಡ ಪ್ರಭ' ದಲ್ಲಿ `ಸಾಹಿತ್ಯ ಸಲ್ಲಾಪ', `ಪ್ರಜಾಮತ' ದಲ್ಲಿ `ಹಾ.ಮಾ.ನಾ. ಬರೆಯುತ್ತಾರೆ', `ಪ್ರಜಾವಾಣಿ'ಯಲ್ಲಿ `ಸಂಪ್ರತಿ' ಅಲ್ಲದೆ `ಇಂಚರ',` ಪುಸ್ತಕ ಪ್ರಪಂಚ',` ಗ್ರಂಥಲೋಕ' ಪತ್ರಿಕೆಗಳಲ್ಲೂ ಅವರು ಅಂಕಣ ಬರೆದದ್ದಿದೆ. ಏಕಕಾಲಕ್ಕೆ ಮೂರು ಪತ್ರಿಕೆಗಳಲ್ಲಿ ಅಂಕಣ ಬರೆದ ಹಿರಿಮೆ ಅವರದು. `ಸಂಪ್ರತಿ' ಅಂಕಣವನ್ನು ವಾರಕ್ಕೊಮ್ಮೆಯಂತೆ ಐದು ವರ್ಷ ಎಂಟು ತಿಂಗಳು ಬರೆದುದು ದಾಖಲೆ. ಒಟ್ಟು ೨೮೭ ಲೇಖನಗಳು. ಅವೇ ಮೂರು ಸಂಪುಟಗಳಾಗಿ ಹೊರಬಂದಿವೆ. ಹಾ.ಮಾ.ನಾ. ಅವರ ಎಲ್ಲ ಅಂಕಣಬರಹಗಳು ಹದಿಮೂರು ಪುಸ್ತಕಗಳಾಗಿ ಸಂಕಲಿತವಾಗಿರುವುದು ಅಚ್ಚರಿ, ಹೆಮ್ಮೆ ಮೂಡಿಸುತ್ತದೆ. ಇಷ್ಟು ವ್ಯಾಪಕವಾಗಿ, ವಿಪುಲವಾಗಿ, ವೈವಿಧ್ಯಮಯವಾಗಿ ಬರೆದಿರುವ ಹಾ.ಮಾ.ನಾ. ಅವರದು ದೈತ್ಯ ಸಾಧನೆ.

`ಸಂಪ್ರತಿ 'ಯಲ್ಲಿ ಹಾಮಾನಾ ಅವರ ಪ್ರಥಮ ಲೇಖನ `ಮಾತಿನ ಮಾಲಿನ್ಯ' ಕ್ಕೆ ಪ್ರತಿಕ್ರಿಯಿಸುತ್ತ ಐವತ್ತು ಓದುಗರು ಮೆಚ್ಚುಗೆ ಪತ್ರ ಬರೆದಿದ್ದರು. ಅದರ ಮೇಲೆ ಅಂಕಣಬರಹದ ಜನಪ್ರಿಯತೆಯ ಅಂದಾಜು ಕಟ್ಟಬಹುದು. ಕ್ಯಾನಡಾ, ಅಮೆರಿಕೆಗಳಿಂದಲೂ ಮೆಚ್ಚುಗೆ ಪತ್ರಗಳು ಬಂದುದಿವೆ. ಪಾಂಡಿತ್ಯ ಹೊರೆಯಾಗದಂತೆ, ಎಲ್ಲ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಿ, ಕಲಾತ್ಮಕವಾಗಿ ನಿರೂಪಿಸುವುದರಲ್ಲಿಯೆ ಹಾ.ಮಾ.ನಾ. ಅವರ ಅಂಕಣಬರಹದ ಶ್ರೇಷ್ಠತೆ ಅಡಗಿದೆ.`` ಈ ಬರಹಗಳಲ್ಲಿ ನಾನು ಯಾವತ್ತೂ ಒಂದು ಸ್ವಂತ ದೃಷ್ಟಿಕೋನವನ್ನು ಬಿಂಬಿಸಲು ಯತ್ನಿಸಿದ್ದೇನೆ. ಬರಹಗಳು ವಿಪುಲ ಮಾಹಿತಿಯನ್ನು ಒಳಗೊಂಡಿರುತ್ತವೆ ಅಂಕಣಕಾರನ ಅಭಿಪ್ರಾಯಗಳನ್ನು ಒಳಗೊಂಡಿರುತ್ತವೆ. ಇದನ್ನು ಎಷ್ಟರಮಟ್ಟಿಗೆ ಸುಂದರವಾಗಿ, ಕಲಾತ್ಮಕವಾಗಿ, ಪರಿಣಾಮಕಾರಿಯಾಗಿ ಹೇಳಬಹುದೆಂಬುದನ್ನು ತೋರಿಸಲು ಪ್ರಯತ್ನಿಸಿದ್ದೇನೆ.... ಕನ್ನಡ ಓದುಗರಿಗೆ ಸುಲಭವಾಗಿ ದೊರೆಯದ ಸಂಗತಿಗಳನ್ನು ಪರಿಚಿಸಬೇಕು, ವಿಶ್ಲೇಷಿಸಬೇಕು ಎಂಬ ಆಸೆಯಿಂದ ನಾನು ಈ ಕೆಲಸ ಮಾಡಿದ್ದೇನೆ. ನಮ್ಮ ಜನರ ದೃಷ್ಟಿ ವಿಶಾಲವಾಗಬೇಕು ; ಅವರಲ್ಲಿ ಚಿಂತನಶೀಲತೆ ವೃದ್ಧಿಸಬೇಕು ಎಂಬುದೇ ನನ್ನ ಅಪೇಕ್ಷೆ. ಅದಕ್ಕಾಗಿ ನನ್ನ ಬರವಣಿಗೆಯಲ್ಲಿ ಒಂದು ಹೊಸ ಮಾರ್ಗವನ್ನು ಹಿಡಿದಿದ್ದೇನೆ ಅಂದರೆ, ಹೇಳುವುದನ್ನೇ ಆದಷ್ಟು ಆಕರ್ಷಕವಾಗಿ ಹೇಳಬೇಕೆಂಬುದು ", ಎಂದು ಹಾ.ಮಾ.ನಾ. ತಮ್ಮ ಅಂಕಣ ಸಾಹಿತ್ಯದ ಆಶಯ, ಉದ್ದೇಶಗಳನ್ನು ಗುರುತಿಸಿಕೊಂಡಿದ್ದಾರೆ. ಈ ತೆರನ ಹದವರಿತ ಅಂಕಣಸಾಹಿತ್ಯ ಮಾದರಿಯಾಗಬಲ್ಲಂತಹದು. ಆದರೆ ಸುಲಭ ಸಾಧ್ಯವಾದುದೇನೂ ಅಲ್ಲ.

ಜೀವನದ ಮೇಲೆ ಅಂಕಣಸಾಹಿತ್ಯದ ಪ್ರಭಾವದ ಪ್ರಶ್ನೆ ಕ್ಲಿಷ್ಟವಾದುದು. ಸಾಹಿತ್ಯ ಜೀವನದ ಮೇಲೆ ಪ್ರಭಾವ ಬೀರುತ್ತದೆಯೆ ಎಂಬ ಪ್ರಶ್ನೆಗೆ ಹೌದು, ಇಲ್ಲ ಎರಡನ್ನೂ ಎನ್ನಬೇಕಾಗುತ್ತದೆ. ಫ್ರೆಂಚ್ ಕ್ರಾಂತಿಗೆ ಪ್ರೇರಣೆ ಒದಗಿಸಿದ ರೂಸೋನ `ಸೋಶಿಯಲ್ ಕಾಂಟ್ರ್ಯಾಕ್ಟ್' ಮತ್ತು ಗುಲಾಮಗಿರಿಯ ನಿರ್ಮೂಲನವನ್ನು ಕಲ್ಪನೆ ನೀಡಿದ ರುಸ್ಸೋನ

'ಅಂಟು ದಿಸ್ ಲಾಸ್ಟ್ ' ಮೊದಲಾದ ಕೆಲವು ಸಾಹಿತ್ಯಕೃತಿಗಳನ್ನು ಜೀವನದ ಮೇಲೆ ನೇರ ಪ್ರಭಾವದ ಉದಾಹರಣೆಯಾಗಿ ಮುಂದಿಡಬಹುದಾದರೂ ಒಟ್ಟಾರೆ ಸಾಹಿತ್ಯ ನೇರ ಪ್ರಭಾವ ಮಾಡಿದುದು ಕಡಿಮೆಯೆ. ಲಂಕಣಲೇಖನಗಳೂ ನೇರ ಪ್ರಭಾವ ಬೀರಿದ ಪ್ರಸಂಗಗಳುಂಟು. ಆದರೆ, ಯಾವುದೊಂದು ಸಾಮಾಜಿಕ ಕ್ರಿಯೆಗೆ ಅದೊಂದೇ ಪ್ರೇರಕವಾಗಿದ್ದಿತೆ ಇಲ್ಲವೆ ಇನ್ನೂ ಅನೇಕ ಅನ್ಯ ಕಾರಣಗಳಿದ್ದವೆ ಹೇಳುವುದು ಕಷ್ಟಕರ. ಆದಾಗ್ಯೂ, ಲಂಕಣ ಸಾಹಿತ್ಯಕ್ಕೆ ಜನಮನ ರೂಪಿಸುವ ಶಕ್ತಿಯಿದೆ. ಬಂದೆರಡು ನಿದರ್ಶನ ಕೊಡಬಹುದು. ಸಂಸ್ಕೃತದಿಂದ ಕನ್ನಡಕ್ಕೆ ಆಗುತ್ತಿದ್ದ ಅನ್ಯಾಯವನ್ನು ಹಾ.ಮಾ.ನಾ. 'ಪ್ರಜಾಮತ' ದ ತಮ್ಮ ಲಂಕಣದಲ್ಲಿ 'ಸಂಸ್ಕೃತ -ಸಂಸ್ಕೃತಿ' - ವಿಜ್ಞಾಪ', 'ಸಂಸ್ಕೃತದ ಗತಿ ', 'ಶಾಪ ಹಿಡಿದ ಕನ್ನಡ ' ಮೊದಲಾದ ಲೇಖನಗಳ ಮೂಲಕ ಖಂಡಿಸಿದರು. ಕನ್ನಡಿಗರನ್ನು ಎಚ್ಚರಿಸಿದರು, ಹುರಿದುಂಬಿಸಿದರು. ಅವರ ಲೇಖನಗಳು ಗೋಕಾಗ ಸಮಿತಿಯ ನೇಮಕಕ್ಕೆ ಕಾರಣೀಭೂತವಾದವು. ಜ್ಞಾನಪೀಠ ಪ್ರಶಸ್ತಿ, ಕಾಳಿದಾಸ ಸಮ್ಮಾನ ಮಾದರಿಯಲ್ಲಿ ಕರ್ನಾಟಕ ಸರಕಾರ ಸಂಗೀತಗಾರರಿಗೆ ಪುರಂದರ ಪ್ರಶಸ್ತಿ, ಸಾಹಿತಿ ಗಳಿಗೆ ಪಂಪಪ್ರಶಸ್ತಿ ಆರಂಭಿಸಬಹುದೆಂದೂ ಹಾ.ಮಾ.ನಾ. 'ಸಂಪ್ರತಿ' ಲಂಕಣದಲ್ಲಿ ಬರೆದರು. ಕರ್ನಾಟಕ ಸರಕಾರ ಹಾ.ಮಾ.ನಾ. ಸಲಹೆ ಒಪ್ಪಿ ಪುರಂದರಪ್ರಶಸ್ತಿ, ಪಂಪಪ್ರಶಸ್ತಿ ಸ್ಥಾಪಿಸಿದೆ. ನಮ್ಮ ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣ ಮಾಡುವುದರಲ್ಲೂ ಹಾ.ಮಾ.ನಾ. ಅವರ ಲಂಕಣ ಬರಹ ಕಾರಣವಾಯಿತು. ಪ್ರತ್ಯೇಕ ಕನ್ನಡ ವಿಶ್ವವಿದ್ಯಾಲಯದ ಅವಶ್ಯಕತೆಯಿಲ್ಲ, ಕರ್ನಾಟಕದಲ್ಲಿರುವ ಎಲ್ಲ ವಿಶ್ವವಿದ್ಯಾಲಯಗಳೂ ಕನ್ನಡ ವಿಶ್ವವಿದ್ಯಾಲಯ ಗಳಾಗಬೇಕು ಎಂದು ಹಾಮಾನಾ ಬರೆದರು. ಸರಕಾರವೇನೊ ಕನ್ನಡ ವಿಶ್ವವಿದ್ಯಾಲಯವನ್ನು ಸ್ಥಾಪಿಸಿತು. ಆದರೆ, ಅದರ ಸ್ವರೂಪ ಧ್ಯೇಯೋದ್ದೇಶಗಳ ಬಗ್ಗೆ ಪತ್ರಿಕೆಗಳಲ್ಲಿ ವ್ಯಾಪಕ ಚರ್ಚೆ ಏರ್ಪಟ್ಟಿತು.

ಹಾ.ಮಾ.ನಾ. ಅವರ ಲಂಕಣ ಬರಹಗಳ ಪ್ರಥಮ ಸಂಕಲನ 'ಸಂಪ್ರತಿ -೧' ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ೧೯೮೯ರ ಪ್ರಶಸ್ತಿ ಬಂತು. ಇದು ಯಾವುದೆ ಭಾರತೀಯ ಭಾಷೆಯಲ್ಲಿ ಲಂಕಣ ಬರಹಕ್ಕೆ ಬಂದ ಪ್ರಥಮ ರಾಷ್ಟ್ರೀಯ ಪ್ರಶಸ್ತಿ. ಆ ಸಂದರ್ಭದಲ್ಲಿ ಲಂಕಣ ಬರಹ ಸಾಹಿತ್ಯವೇ ಅಲ್ಲ, ಸಾಹಿತ್ಯವೆಂದರೂ ಅದು ಕಳಪೆ ದರ್ಜೆಯ ಸಾಹಿತ್ಯ ಎಂದು ಮೂಗು ಮುರಿದವರು ಹಲವಾರು ಕನ್ನಡ ಸಾಹಿತಿಗಳು, ಆಗ ಎದ್ದು ಕುಳಿತು ಇದು ನಿಜವೆ ಎಂದು ಗಮನಿಸಬೇಕಾಯಿತು. ಕಾವ್ಯ, ಸಾಹಿತ್ಯ ಎಂದರೇನೆಂದು ಕರಾರುವಾಕ್ಕಾಗಿ ವ್ಯಾಖ್ಯಾನಿಸಲು ಸಾಧ್ಯವಾಗಿಲ್ಲ. ಕಾಲಕಾಲಕ್ಕೆ ಇವುಗಳ ಅರ್ಥ ಹಿಗ್ಗುತ್ತ ಬಂದಿದೆ. ಒಂದು ಕಾಲಕ್ಕೆ ಕಾವ್ಯ ವೆಂದರೆ ಮಹಾಕಾವ್ಯ ಮಾತ್ರ ಎಂಬ ಭಾವನೆ ಇತ್ತು. ಕಾವ್ಯವೆಂದು ಮನ್ನಣೆ ಪಡೆಯಲು ಭಾವಗೀತೆ ಹೆಣಗಬೇಕಾಯಿತು. ಇಂದು ಭಾವಗೀತೆ ಕಾವ್ಯ ಹೌದೊ ಅಲ್ಲವೊ ಎಂದೂ ಯಾರೂ ಚರ್ಚಿಸುವುದಿಲ್ಲ. ಅದಕ್ಕೆ ಕಾವ್ಯ ಮನ್ನಣೆಯ ಮುದ್ರೆ ಬಿದ್ದಿದೆ. ಕಾವ್ಯವೆಂದರೆ ಭಾವಗೀತೆಯೆ ಎನ್ನುವಷ್ಟರ ಮಟ್ಟಿಗೆ ಬಂದಿದೆ.

ಯಾವುದೆ ಹೊಸ ಸಾಹಿತ್ಯ ಪ್ರಕಾರಕ್ಕೆ ಮನ್ನಣೆ ಕೂಡಲೆ ದೊರೆಯುವುದಿಲ್ಲ. ಮಾನವನ ಮನಸ್ಸಿನಲ್ಲಿ ಹೊಸದಕ್ಕೆ ವಿರೋಧವಿರುತ್ತದೆ. ಭೂಮಿ ದುಂಡಗಿದೆಯೆಂದು ಗ್ಯಾಲಿಲಿಯೊ ಹೇಳಿದರೆ, ಅವನನ್ನು ಸೆರೆಮನೆಗೆ ಅಟ್ಟಲಿಲ್ಲವೆ ? ಇಂದು ಭೂಮಿ

ಚಪ್ಪಟೆಯಾಗಿದೆ ಎನ್ನುವವರನ್ನು ಹುಚ್ಚರ ಆಸ್ಪತ್ರೆಗೆ ಸೇರಿಸಬೇಕಾದೀತು. ಅಂತ
ಸಾಹಿತ್ಯವನ್ನು ಸಾಹಿತ್ಯವೆಂದು ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಲಾಗುತ್ತಿದೆ. ಅದು ಒಂದ
ಸಾಹಿತ್ಯ ಪ್ರಕಾರವೆಂಬುದು ನಿರ್ವಿವಾದ. ಸಾಹಿತ್ಯದಲ್ಲಿ ಸೃಜನಶೀಲ, ಸೃಜನೇತ
ವಿಭಾಗಗಳನ್ನು ಕಲ್ಪಿಸಿರುವುದರಿಂದ ಯಾವುದು ವ್ಯರ್ಥವಾದ ವರ್ಗಕ್ಕೆ ಸೇರಿದ್ದು ಯಾವುದು ಉ
ಎಂಬ ಬಗೆಗೆ ವೃಥಾ ಗೊಂದಲ ಸೃಷ್ಟಿಯಾಗಿದೆ. ಪ್ರಬಂಧ ಲಲಿತ ಪ್ರಬಂಧಕ್ಕೂ ಮನ್ನು
ತಡವಾಗಿಯಾದರೂ ಬಂದಿದ್ದು. ಒಂದು ಮಾತು: ಪ್ರಬಂಧ, ಸಾಹಿತ್ಯವೆಂದಾದರೆ ಅಂಕಣಬರಹವ
ಸಾಹಿತ್ಯವೆ. ಏಕೆಂದರೆ, ಅಂಕಣಬರಹ ಪ್ರಬಂಧ ಸಾಹಿತ್ಯದ ವಿಸ್ತರಣೆಯೇ.

ಪತ್ರಿಕಾ ಸಾಹಿತ್ಯ

-ಸುರೇಂದ್ರ ದಾನಿ

ಕನ್ನಡದಲ್ಲಿ ಗದ್ಯ ಸಾಹಿತ್ಯ ಬಹು ಪ್ರಾಚೀನ ಸಾಕಷ್ಟು ಹಳೆಯದಾದರೂ ಅದನ್ನೊಂದು ...ಷಾ ಮಾಧ್ಯಮದ ಸಾಧನವನ್ನಾಗಿ ಸಮರ್ಥವಾಗಿ ಬಳಸಿದ ಮತ್ತು ಬೆಳೆಸಿದ ಶ್ರೇಯಸ್ಸು ...ಕಾ ಪ್ರಪಂಚಕ್ಕೇ ಸಲ್ಲುತ್ತದೆ. ಹಳೆಗನ್ನಡ ಮತ್ತು ನಡುಗನ್ನಡಗಳಲ್ಲಿ ಗದ್ಯದ ಬಳಕೆಯೇ ...ಮೆಂದು ಹೇಳಲಿಕ್ಕಾಗದಿದ್ದರೂ ಅದಕ್ಕೆ ಸಾಹಿತ್ಯದಲ್ಲಿ ಒಂದು ನಿಶ್ಚಿತ ಸ್ಥಾನವಿರಲಿಲ್ಲ. ...ನೇ ಶತಮಾನದ ಮಧ್ಯಭಾಗದಿಂದ ಮೊದಲ್ಗೊಂಡು ಇಂದಿನವರೆಗಿನ ಗದ್ಯ ಸಾಹಿತ್ಯದ ...ದ ವಿಸ್ತಾರವಾಗಿದ್ದರೂ ವೈವಿಧ್ಯಮಯವಾಗಿಲ್ಲ. ಹನ್ನೆರಡನೇ ಶತಮಾನದ ವಚನಗಳು ... ಸಾಹಿತ್ಯದ ಪ್ರಕಾರಗಳೆಂದು ಗುರುತಿಸಲ್ಪಟ್ಟರೂ ಅವುಗಳ ರಚನೆಯಲ್ಲಿಯ ಲಯ ಮತ್ತು ...ಸಾಳ ಛಾಪಿನಿಂದ ಅವುಗಳಿಗೆ ಬಂದ ರಾಗಗಳನ್ನು ಹಚ್ಚಿದ ಮೂಲಕ ಅವುಗಳಿಗೆ ...ದ ಮಾದರಿಯನ್ನೇ ಒತ್ತಿದ ಪ್ರಯತ್ನ ಇತ್ತೀಚಿನಂತಹ ಬಹಳ ಸ್ಪಷ್ಟವಾಗಿ ಕಂಡು ...ತ್ತದೆ. ಆದರೆ ಗದ್ಯವನ್ನು ಪದ್ಯದ ವೈಶಿಷ್ಟ್ಯಪೂರ್ಣ ಲಕ್ಷಣಗಳಿಂದ ಬೇರ್ಪಡಿಸಿ ಸ್ವತಂತ್ರ ...ವನ್ನು ನೀಡಿ ಬೆಳೆಸಿದ ಶ್ರೇಯಸ್ಸಿನ ಹೆಚ್ಚಿನ ಪಾಲು ಪತ್ರಿಕಾ ಸಾಹಿತ್ಯಕ್ಕೆ ಸಲ್ಲುತ್ತದೆಂದರೆ ...ಶಯೋಕ್ತಿ ಅಲ್ಲ. ಗದ್ಯದ ಪ್ರಕಾರದಲ್ಲಿ ಬೇರೆ ಬೇರೆ ವರ್ಗಗಳನ್ನು ಮತ್ತು ಶೈಲಿಗಳನ್ನು ...ರೂಪಿಸುವಂತಾದರೂ ಅವುಗಳಲ್ಲಿ ಪತ್ರಿಕಾ ಸಾಹಿತ್ಯ ಗಾತ್ರದಲ್ಲಿ ಮತ್ತು ಪ್ರಮಾಣದಲ್ಲಿ ...ಷ್ಟು ಮಹತ್ವದ್ದಾಗಿದೆ. ಹೊಸಗನ್ನಡದ ಚರಿತ್ರೆಯಲ್ಲಿ ಪತ್ರಿಕಾ ಸಾಹಿತ್ಯಕ್ಕೆ ಹಿರಿದಾದ ...ನವಾಗಿದೆ.

೧೯ನೇ ಶತಮಾನವನ್ನು ಹೊಸಗನ್ನಡದ ಉದಯಕಾಲವೆಂದು ಗುರುತಿಸಲಾಗುತ್ತದೆ. ...ದರೆ ಅದನ್ನು ಹೆಚ್ಚು ನಿಖರವಾಗಿ ಗುರುತಿಸಲು ಆ ಶತಮಾನದ ಉತ್ತರಾರ್ಧಕ್ಕೇ ...ರಬೇಕಾಗುತ್ತದೆ. ಆಗ ನಮ್ಮ ನಾಡಿನಲ್ಲಿ ಬಳಕೆಗೆ ಬಂದ ಮುದ್ರಣಯಂತ್ರ ...ಹಿತ್ಯಕ್ಷೇತ್ರದಲ್ಲಿ ಒಂದು ಕ್ರಾಂತಿಯನ್ನೇ ಉಂಟು ಮಾಡಿ ಅದಕ್ಕೊಂದು ಹೊಸ ...ಯನ್ನೇ ನೀಡಿತು. ಈ ಮುದ್ರಣ ಕಲೆ ಆವಿಷ್ಕಾರದ ಫಲವೇ ಪತ್ರಿಕಾ ಪ್ರಪಂಚ. ...ದ್ರಣ ಯಂತ್ರ ಮತ್ತು ಕಾಗದದ ಬಳಕೆ ಪತ್ರಿಕಾ ಸಾಹಿತ್ಯದ ತಾಯ್ಬೇರುಗಳೆಂದರೆ ...ತ್ಯವನ್ನೇ ಒತ್ತಿ ಹೇಳಬೇಕಾಗುತ್ತದೆ.

ಪತ್ರಿಕೆಗಳು ಹುಟ್ಟಿಕೊಳ್ಳುವ ವರೆಗೆ ಸಾಹಿತ್ಯ ಬಹುಮಟ್ಟಿಗೆ ಪದ್ಯದಲ್ಲಿ, ಗದ್ಯಕ್ಕೆ ಅವಕಾಶ ...ವಿರಲಿಲ್ಲ. ಪದ್ಯ ರಚನೆಯಾದರೇನೇ ಸಾಹಿತ್ಯ ಎಂಬ ದೃಢವಾದ ಭಾವನೆ ...ದಿಯಾಗಿದ್ದಿತ್ತು. ಆದರೆ ಕಾವ್ಯಗಳಲ್ಲಿ ಪದ್ಯಗಳಿಗೆ ಅಳವಡದ ಅಭಿವ್ಯಕ್ತಿಗಾಗಿ...

ಎರಡು ಪದ್ಯಗಳ ನಡುವಿನ ಕೊಂಡಿಯೆಂದೋ ಗದ್ಯದ ಬಳಕೆ ಬರುತ್ತಿತ್ತೇ ಹೊರತು ಅದಕ್ಕೊಂದು ಸ್ವತಂತ್ರ ಸ್ಥಾನವಿರಲಿಲ್ಲ. ಸಾಹಿತ್ಯವೆಂದರೆ ಕಾವ್ಯ ಅಥವಾ ಪದ್ಯರೂಪ ವೆಂಬುದೊಂದೇ ಬಳಕೆಯಲ್ಲಿತ್ತು. ಚಂಪೂಕಾವ್ಯಗಳಲ್ಲಿ ವಚನ ಎಂದು ಹೇಳಿಕೊಳ್ಳುವ ಶೈಲಿಯು ಕೇವಲ ಕೃತ್ರಿಮವಾಗಿದ್ದು ಗ್ರಂಥಸ್ಥವಾಗಲಿಕ್ಕೇ ಅದು ಯೋಗ್ಯವೆನ್ನಬಹುದು. * ಅದನ್ನು ರಚಿಸುವವರು ಹೆಚ್ಚಿನ ವಿದ್ವತ್ತು ಪಾಂಡಿತ್ಯಗಳನ್ನುಗಳಿಸಿಕೊಳ್ಳ ಬೇಕಾಗುತ್ತಿತ್ತು. ಅದನ್ನು ಓದುವದು ಸಹ ಶ್ರೀಸಾಮಾನ್ಯನಿಗೆ ಸಾಧ್ಯವಿರಲಿಲ್ಲ. ಕಾವ್ಯಕರ್ತೃಗಳು ತಮ್ಮ ಪ್ರತಿಭಾ ಪ್ರದರ್ಶನಕ್ಕಾಗಿ ಅಲ್ಲಲ್ಲಿ ಸೇರಿಸುತ್ತಿದ್ದ ಕೆಲ ಭಾಗಗಳಂತೂ ಸಾಮಾನ್ಯ ಓದುಗನಿಗೆ ದೊಡ್ಡ ಸವಾಲಾಗೇ ಪರಿಣಮಿಸುತ್ತಿದ್ದವು. ಅಲ್ಲದೇ ಕಾವ್ಯಗಳು ಸಾಮಾನ್ಯವಾಗಿ ಪುರಾಣ ಪುಣ್ಯ ಕಥೆಗಳಿಗೋ ಆಧ್ಯಾತ್ಮ ವಿವೇಚನೆಗೋ ಮಾತ್ರ ಮೀಸಲಾಗಿರಬೇಕೆಂಬ ಭಾವನೆಯೂ ಪ್ರಚಲಿತವಾಗಿತ್ತು.

೧೯ನೇ ಶತಮಾನದೊಡನೆಯೇ ಕನ್ನಡದ ನೆಲದಲ್ಲಿ ನೆಲೆಯೂರಿದ ಇಂಗ್ಲೀಷರ ಆಳ್ವಿಕೆ ಇಲ್ಲಿಯ ಜನಜೀವನದಲ್ಲಿ ಉಂಟುಮಾಡಿದ ಕ್ರಾಂತಿ ಪತ್ರಿಕಾಸಾಹಿತ್ಯಕ್ಕೆ ಮೂಲ ಹೂರಣವಾದ ಗದ್ಯಸಾಹಿತ್ಯ ರಚನೆಗೂ ಕಾರಣವಾಯಿತು. ಪತ್ರಿಕೆಗಳು ಪ್ರಾರಂಭವಾದಾಗ ಕೆಲ ಪತ್ರಿಕೆಗಳು ಪದ್ಯರೂಪದಲ್ಲೇ ಹೊರಡುತ್ತಿದ್ದ ಉದಾಹರಣೆಗಳೂ ಇವೆ. ಆದರೆ ಇಂಗ್ಲಂಡಿನಿಂದ ಬಂದ ಆಡಳಿತಗಾರರು ಮತ್ತು ಧರ್ಮಪ್ರಸಾರಕ್ಕಾಗಿ ಬಂದ ಮಿಶನರಿಗಳು ಶ್ರೀಸಾಮಾನ್ಯನೊಡನೆ ಸಂಪರ್ಕ ಇಟ್ಟುಕೊಳ್ಳಲು ಗದ್ಯದ ಅವಶ್ಯಕತೆ ಉಂಟಾಯಿತು. ಇದು ಕಾವ್ಯಶೈಲಿಯಲ್ಲಿ ಸಾಧ್ಯವೇ ಇರಲಿಲ್ಲ. ಗದ್ಯಸಾಹಿತ್ಯದ ಬಳಕೆಗೆ ಮತ್ತು ಬೆಳವಣಿಗೆಗೆ ಇದು ಒಂದು ಮುಖ್ಯ ಪ್ರೇರಣೆಯಾಗಿ ಪರಿಣಮಿಸಿತು. ಅಲ್ಲಿಂದ ಇಲ್ಲಿಗೆ ಬಂದು ತಮ್ಮ ವ್ಯವಹಾರವನ್ನು ಮುಗಿಸಿಕೊಂಡು ಹೋಗುವ ಇವರಿಗೆ ಇಲ್ಲಿ ಭಾಷೆಯ ಜ್ಞಾನ ಕೇವಲ ವ್ಯವಹಾರದ ಮಟ್ಟಿಗೆ ಸಾಕಾಗಿತ್ತು. ಆದ್ದರಿಂದ ಅವರು ಗದ್ಯವನ್ನೇ ಆರಿಸಿಕೊಂಡರು. ಇದರೊಡನೆ ನಮ್ಮ ದೇಶದಲ್ಲಿ ಪ್ರಾರಂಭವಾದ ಪಾಶ್ಚಾತ್ಯ ಶಿಕ್ಷಣ ಪದ್ಧತಿಯೂ ಗದ್ಯ ಸಾಹಿತ್ಯ ರಚನೆಗೆ ವಿಶೇಷ ಪ್ರೋತ್ಸಾಹಕವಾಗಿ ಪರಿಣಮಿಸಿತು. ಆಧುನಿಕ ಶಿಕ್ಷಣಪಡೆದವರು ಗದ್ಯ ಸಾಹಿತ್ಯಕ್ಕೆ ದೊಡ್ಡ ಪ್ರಮಾಣದಲ್ಲಿ ಕಾರಣರಾದರು. ಮುದ್ದಣನನ್ನು ನಾವು ಹೊಸಗನ್ನಡ ಗದ್ಯದ ಮೂಲಪುರುಷನೆಂದು ಹೇಳುವೆವಾದರೂ ನಂತರ ಇದನ್ನು ಕೃಷಿ ಮಾಡಿದವರಿಗೆ ಇದರ ಶ್ರೇಯಸ್ಸು ಹೆಚ್ಚಾಗಿ ಸೇರುತ್ತದೆ. ಹೊಸ ಶಿಕ್ಷಣಕ್ರಮದಿಂದ ಪ್ರಭಾವಿತರಾದ ಹೊಸ ಪೀಳಿಗೆಯ ಜನ ಕನ್ನಡ ಸಾಹಿತ್ಯದ ಹೊಸ ಸ್ವರೂಪಕ್ಕೆ ಮುಖ್ಯವಾಗಿ ಕಾರಣಕರ್ತರಾದರು. ಹೀಗೆ ಕನ್ನಡದಲ್ಲಿ ಹೊಸತನವನ್ನು ತರಲು ದೀಕ್ಷೆ ತೊಟ್ಟ ಕೆಲವರು ಪತ್ರಿಕೆಗಳನ್ನು ತಮ್ಮ ಮಾಧ್ಯಮವನ್ನಾಗಿ ಆರಿಸಿಕೊಂಡದ್ದು ಒಂದು ಮಹತ್ವದ ಅಂಶ. ಕೆಲವು ವಿದ್ಯಾವಂತರು ಪತ್ರಿಕೋದ್ಯಮದತ್ತ ಮನಸ್ಸುಗೊಟ್ಟುದು ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಮಹತ್ವದ ಹೆಜ್ಜೆಯಾಗಿದೆ. ಪ್ರಚಲಿತ ವಿಷಯಗಳನ್ನು ಕುರಿತ ಗದ್ಯಬರವಣಿಗೆಯು ಇಲ್ಲಿಂದಲೇ ಮೊದಲಾಯಿತು. *

---

* ಡಾ. ದ. ರಾ. ಬೇಂದ್ರೆ ಸಾಹಿತ್ಯ ಸಂಶೋಧನೆ ಪುಟ. ೧೪೮

* ಡಾ. ಶ್ರೀನಿವಾಸ ಹಾವನೂರ ಹೊಸಗನ್ನಡದ ಅರುಣೋದಯ ಪುಟ ೨೭೫

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ನೆಲಸಿದ ಜರ್ಮನ್ ಮಿಶನರಿಗಳು ಪ್ರಾರಂಭಿಸಿದ (೧೮೪೩) `ಕಂನಡ ಸಮಾಚಾರ 'ವೇ ಕನ್ನಡದ ಪ್ರಥಮ ಪತ್ರಿಕೆಯೆಂದು ಗುರುತಿಸಲ್ಪಡುತ್ತದೆ. ಅದರ ಕನ್ನಡ ಶೈಲಿಯ ಉದಾಹರಣೆ ಇಲ್ಲಿದೆ.

``ಈ ದೇಶವೆಂಬ ಮನೆಯಲ್ಲಿ ವಾಸಿಸುವ ಜನರು ಇಂದಿನ ಪರಿಯಂತರ ಹೊರಗಿನ ದೇಶಸ್ಥರ ಸಮಾಚಾರ ಮಾರ್ಗ ಮರ್ಯಾದೆಗಳನ್ನು ತುಳಿಯದೆ ಕಿಟಕಿಯಿಲ್ಲದ ಬಿಡಾರದಲ್ಲಿ ವುಳಕೊಳ್ಳುವವರ ಹಾಗೆಯಿರುತ್ತ ಬಂದರು. ಅದು ಕಾರಣ ಹೊರಗಿನ ಕಾರ್ಯಗಳನ್ನು ಕಾಣುವ ಹಾಗೆಯೂ ನಾಲ್ಕೂ ದಿಕ್ಕಿಗೆ ಕಿಟಕಿಗಳನ್ನು ಮಾಡುವ ಈ ಸಮಾಚಾರ ಕಾಗದವನ್ನು ಪಕ್ಷಕ್ಕೆವೊಂದು ಸಾರಿ ಸಿದ್ಧಮಾಡಿ ಅದನ್ನು ಓದಬೇಕೆಂದಿರುವೆಲ್ಲರಿಗೆ ಕೊಟ್ಟರೆ ಕಿಟಕಿಗಳನ್ನು ಮಾಡಿದ ಹಾಗಾಗುವದು "

ಮುಂದೆ ಕೆಲವೇ ವರ್ಷಗಳಲ್ಲಿ ಅಂದರೆ ೧೮೪೯ರಲ್ಲಿ ಬೆಳಗಾವಿಯಿಂದ ಪ್ರಾರಂಭವಾದ ``ಸುಬುದ್ಧಿ ಪ್ರಕಾಶ " ದ ಶೈಲಿ ಇಲ್ಲಿದೆ.

``ಶ್ರೀಮಂತರಾದ ಶ್ರೀ ರಾಜೀಸಾಹೇಬ ಚಂದ್ರಚೂಡ ಇವರು ತಾರೀಖು ೧೪ನೇ ಸಪ್ಟೆಂಬರ ದಿವಸ ಮರಣ ಹೊಂದಿದರು. ಇವರ ಮಾತೋಶ್ರೀಯವರ ಹೆಸರ್ಲೆ ೩೦ ಸಾವಿರ ರೂಪಾಯಿ ಜಾಹೀರ ನಡೆದಿದೆ "

ಇವು ಕನ್ನಡ ಪತ್ರಿಕಾ ಪ್ರಪಂಚ ಹುಟ್ಟಿದಾಗ ಹೊತ್ತುಕೊಂಡು ಬಂದ ಶೈಲಿಯ ಮಾದರಿಯಾಗಿವೆ. ಇವೆರಡೂ ಸಾಮಾನ್ಯ ಓದುಗನನ್ನು ಕಣ್ಮುಂದೆ ಇಟ್ಟುಕೊಂಡು ಕೇವಲ ಸಮಾಚಾರ ಪ್ರಚಾರದ ಉದ್ದೇಶದಿಂದ ಬಂದ ಪತ್ರಿಕೆಗಳು. ಆದರೂ ಕನ್ನಡವೇ ಮಾತೃ ಭಾಷೆಯನ್ನಾಗಿ ಹೊಂದಿದವರು ಬರೆದ ಶೈಲಿಗೂ ವಿದೇಶೀಯರು ಇಲ್ಲಿಗೆ ಬಂದು ಕನ್ನಡ ಕಲಿತು ಬರೆದ ಶೈಲಿಗೂ ವ್ಯತ್ಯಾಸ ಇರುವದನ್ನು ಸುಲಭವಾಗಿ ಗುರುತಿಸಬಹುದು.

ಕನ್ನಡ ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ನೋಡುವದಾದರೆ ೧೮೬೫ರಲ್ಲಿ ಧಾರವಾಡದಲ್ಲಿ ಡೆಪ್ಯೂಟಿ ಚನ್ನಬಸಪ್ಪನವರು ಪ್ರಾರಂಭಿಸಿದ `ಮಠಪತ್ರಿಕೆ' ಗೆ ಮಹತ್ವದ ಸ್ಥಾನವಿದೆ. ಇದು ಕನ್ನಡ ಭಾಷೆ ಮತ್ತು ಭಾವನೆಗಳ ಸುಧಾರಣೆಯ ವ್ರತವನ್ನೇ ಕೈಗೆತ್ತಿ ಕೊಂಡಿತ್ತು. ಮುಖ್ಯವಾಗಿ ಶಿಕ್ಷಕವರ್ಗವನ್ನು ಉದ್ದೇಶಿಸಿ ಹೊರಟ ಪತ್ರಿಕೆ ಇದ್ದುದರಿಂದ ಇದು ಭಾಷಾಶುದ್ಧಿಗೂ ವ್ಯಾಕರಣಕ್ಕೂ ಕನ್ನಡ ಪ್ರಚಾರಕ್ಕೂ ಸಾಕಷ್ಟು ಲಕ್ಷ್ಯಕೊಟ್ಟಿತು.

ಮಠಪತ್ರಿಕೆಯ ೧೮೬೯ರ ಒಂದುಸಂಚಿಕೆಯಲ್ಲಿ ಪ್ರಕಟವಾದ ಡೆಪ್ಯೂಟಿ ಚನ್ನಬಸಪ್ಪನವರ ಒಂದು ಆದೇಶ ಹೀಗಿದೆ.

``ಧಾರವಾಡ ಜಿಲ್ಹೆಯೊಳಗಿನ ಯಾವತ್ತೂ ಸ್ಕೂಲ್ ಮಾಸ್ತರರು ಮತ್ತು ಅಸಿಸ್ಟಂಟ ಮಾಸ್ತರರು ಈ ಕೆಳಗೆ ಬರೆದಿರುವದಂನೆಲ್ಲಾ ಮನಸ್ಸುಗೊಟ್ಟು ಓದಿನೋಡಿ ತಾವು ಇತ್ತಕಡಿಗೆ ಕಳುಹಿಸುವ ಕಾಗದ ಪತ್ರಗಳನ್ನು ಎಚ್ಚರದಿಂದ ಬರೆದು ಕಳುಹಿಸುತ್ತಹೋಗಬೇಕು.

೧. ಓದಲಿಕ್ಕೆ ಬರುವ ಹಾಗೆ ಸ್ಪಷ್ಟವಾಗಿ ಬರೆಯಬೇಕು.

೨. ಅಶುದ್ಧ ಬರಿಯಬಾರದು.

೩. ತಮ್ಮ ಕೈಲಾದ ಮಟ್ಟಿಗೆ ಶ್ರಮಬಟ್ಟು ಛಾಪಿಸಿದ ಅಕ್ಷರಗಳಂತೆ ಅಕ್ಷರಗಳನ್ನು ಬರೆಯಲಿಕ್ಕೆ ಕಲಿಯಬೇಕು. ಕಟೇರಿ ತರದ ಅಕ್ಷರಗಳನ್ನು ಅಗಾಪಿ ಬರಿಯಬಾರದು.

೪. ಬರವೆನ್ನೆಲ್ಲಾ ವ್ಯಾಕರಣದ ನೇಮಕ್ಕೆ ತಪ್ಪದ ಹಾಗೆ ಬರಿಯುವವಕ್ಕೆ ಕಲಿಯಬೇಕು.

ಇದರ ಪರಿಣಾಮ ಕನ್ನಡ ಭಾಷೆಯ ಅದರಲ್ಲೂ ಗದ್ಯ ಶೈಲಿಯ ಬೆಳವಣಿಗೆಯ ಮೇಲೆ ಸಾಕಷ್ಟು ಆಯಿತೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಕನ್ನಡದ ಅಭಿಮಾನ ಕನ್ನಡ ಭಾಷೆಯ ಬಗ್ಗೆ ಪ್ರಜ್ಞಾವಂತ ನಿಷ್ಠೆ ಇವುಗಳ ಉಗಮವನ್ನು ಇಲ್ಲಿ ಕಾಣಬಹುದಾಗಿದೆ. ಈ ಪ್ರಜ್ಞೆಯೇ ಮುಂದೆ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆಗೂ ಕಾರಣವಾಯಿತು.

೧೮೬೧ರಲ್ಲಿ ಬೆಳಗಾವಿಯಲ್ಲಿ ಪ್ರಾರಂಭವಾದ `ಕನ್ನಡ ಜ್ಞಾನಬೋಧಕ' ಎಂಬ ಪತ್ರಿಕೆ ಕನ್ನಡ ಸುಧಾರಣೆಯ ದಿಸೆಯಲ್ಲಿ ಪ್ರಾರಂಭವಾದ ಪ್ರಥಮ ಪ್ರಯತ್ನ ಎನ್ನಬಹುದು. ಇದು ಮಾಸಪತ್ರಿಕೆಯಾಗಿತ್ತು. ಇದರ ಶೈಲಿ ಹೀಗಿದೆ :

``ಯೀ ಮಂಡಳಿಯ ಉದ್ದೇಶಕ್ಕೆ ಅನುಕೂಲವಾಗಿರುವ ಗೃಹಸ್ಥರು ಕಾಸಿಕೆ ಕೊಡುವದರಿಂದಲೂ ವರ್ಗಣಿ ಕೊಡುವದರಿಂದಲೂ ಪೂರ್ಣ ಕ್ರಯಕ್ಕೆ ಪುಸ್ತಕಗಳನ್ನು ಕೊಂಡು ಓದುವದರಿಂದಲೂ ಈ ಮನೋದಯವನ್ನು ಅಲ್ಲಿಗೆ ವಯ್ಯುಬೇಕು.

ಯಾವದೇ ಗ್ರಂಥ ಅಥವಾ ತತ್ಸಮಾನ ಕೃತಿಗಳಿಂದ ಮಾಡಲಾಗದ ವಿಶಿಷ್ಟ ಕಾರ್ಯವನ್ನು ಪತ್ರಿಕೆಗಳು ಹುಟ್ಟಿನೋಡನೆಯೇ ಎತ್ತಿಕೊಂಡವೆಂಬುದನ್ನು ನಾವು ಗಮನಿಸಬೇಕು. ಪ್ರಾರಂಭಕ್ಕೆ ಬಿತ್ತಿದ ಈ ಬೀಜವೇ ಮುಂದಿನ ಕನ್ನಡದ ಸರ್ವಾಂಗೀಣ ಅಭಿವೃದ್ಧಿಗೆ ಕಾರಣವಾಯಿತು.

ಪತ್ರಿಕಾ ಕ್ಷೇತ್ರದ ಮುಖಾಂತರವೇ ಕನ್ನಡದ ಸೇವೆಯನ್ನು ಗೈದ ಪ್ರಥಮ ಪುಣ್ಯ ಪುರುಷರ ಸಾಲಿನಲ್ಲಿ ವೆಂಕಟ ರಂಗೋ ಕಟ್ಟಿಯವರ (೧೮೩೩-೧೯೦೯) ಹೆಸರು ಚಿರಸ್ಥಾಯಿಯಾದದ್ದು. ಡಾ. ದ. ರಾ. ಬೇಂದ್ರೆಯವರು ಇವರ ಬಗ್ಗೆ ಬರೆಯುತ್ತ ``ವೆಂಕಟ ರಂಗೋ ಕಟ್ಟಿಯವರು ಉತ್ತರ ಕರ್ನಾಟಕದ ಇಂದಿನ ಗದ್ಯಶೈಲಿಗೆ ರೂಪಕೊಟ್ಟವರಲ್ಲಿ ಒಬ್ಬರು. ಇವರು ಶಿಕ್ಷಣ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಮನಸ್ಸುಳ್ಳವರು. ರಸೆಲ್‌ರವರ ಸೇನಾನಿಗಳಾಗಿ ಕನ್ನಡ ಚಳವಳಿಗೆ ಕಳೆತಂದವರು'' ಎಂದು ಹೇಳಿದ್ದಾರೆ.

`ಜ್ಞಾನಬೋಧಕ' ದಲ್ಲಿಯ ಬಹುಭಾಗದ ಲೇಖನಗಳನ್ನು ಕಟ್ಟಿಯವರೆ ಬರೆಯುತ್ತಿದ್ದರಂತೆ. ಅಲ್ಲದೆ `ತೋಧಕ' ಮತ್ತು `ಲೋಕ ಶಿಕ್ಷಕ' ಎಂಬ ಪತ್ರಿಕೆಗಳನ್ನು ಇವರು ಸ್ವತಃ ಹೊರಡಿಸಿದರು. `ಕರ್ನಾಟಕ ಪತ್ರ' ಮತ್ತು `ಚಂದ್ರೋದಯ' ಎಂಬ ಪತ್ರಿಕೆಗಳ ಹೊಣೆಯನ್ನು ಕೆಲಕಾಲ ವಹಿಸಿಕೊಂಡಿದ್ದರು. `ಕರ್ನಾಟಕ ವೃತ್ತ' ದೊಡನೆಯೂ ಇವರಿಗೆ ನಿಕಟ ಸಂಬಂಧವಿದ್ದಿತು. ಇದನ್ನೆಲ್ಲ ನೋಡಿದರೆ ಆಗಿನ ಮುಂಬೈಯ ಕರ್ನಾಟಕ ವಿಭಾಗದ ಪತ್ರಿಕಾರಂಗದ ಮೇಲಿನ ಮುಖ್ಯ ಪ್ರಭಾವ ವೆಂಕಟ ರಂಗೋ ಕಟ್ಟಿಯವರದೆನ್ನಲಡ್ಡಿಯಿಲ್ಲ. ವೆಂಕಟ ರಂಗೋ ಕಟ್ಟಿ ಕೈಕೊಂಡ ಪತ್ರಿಕಾ ವ್ಯವಸಾಯವು ಕನ್ನಡ ಸಾಹಿತ್ಯದ ಒಂದು ವಿಶೇಷ ಕಾಣಿಕೆ. ಶಿಕ್ಷಣದ ಮಹತ್ವವನ್ನರಿತಿದ್ದ ಅವನು ಕನ್ನಡ ಜನತೆಯ ಬೌದ್ಧಿ

ವಿಕಾಸವಾಗಬೇಕು. ಬಿಡಿಸಾಹಿತ್ಯ ಮುಂತಾದವುಗಳಲ್ಲಿಯೂ ಹೊಸ ಬರಹಗಳನ್ನು ಬರೆಯಬೇಕು. ಎಂಬ ದೃಷ್ಟಿಯಿಂದ ಅವರು ಪತ್ರಿಕಾರಂಗಕ್ಕೆ ಇಳಿದರು.* ಇವರ 'ಶೋಧಕ' ಪತ್ರಿಕೆಯ ಪ್ರಥಮ ಸಂಪಾದಕೀಯ ಮತ್ತು ಶೈಲಿಯ ಮಾದರಿ ಇಲ್ಲಿದೆ.

"ಮಹಾರಾಷ್ಟ್ರದಲ್ಲಿ ಒಂಭತ್ತಕ್ಕಿಂತ ಹೆಚ್ಚು ದರ್ಪಣ ಪತ್ರಗಳು ಸುಮಾರು ೨೦ ಮಾಸಿಕ ಪುಸ್ತಕಗಳೂ ಹದ್ಯಕ್ಕೆ ನಡೆಯುತ್ತಿವೆ. ಕರ್ನಾಟಕ ಭಾಷೆಯಲ್ಲಿ ಯಾರಷ್ಟಕ್ಕಿಂತ ಹೆಚ್ಚು ದರ್ಪಣಪತ್ರಗಳಿಲ್ಲ. ಅವು ಬೆಂಗಳೂರು ಸೀಮೆಯ ಹೊರಗೆ ಯಾರಿಗೂ ಗೊತ್ತಿಲ್ಲ. ಮಾಸಿಕ ಪುಸ್ತಕವು ಇರುತ್ತದೆಂದು ಅಕ್ಕ ಮಾಡಲಿಕ್ಕೆ ಮಾತ್ರ ಒಂದುಂಟು. ಅದು ಹುಟ್ಟಿಪೊಂದು ವರ್ಷವು ಇನ್ನೂ ಪೂರ್ಣವಾಗಿರುವದಿಲ್ಲ."

೧೮೬೭ರಲ್ಲಿ ಬೆಂಗಳೂರಿನಲ್ಲಿ ಪ್ರಾರಂಭವಾಗಿ ನಂತರ ಮೈಸೂರಿಗೆ ಸ್ಥಳಾಂತರ ಹೊಂದಿದ 'ವೃತ್ತಾಂತ ಪತ್ರಿಕೆ' ಎಂಬ ವಾರ ಪತ್ರಿಕೆಯನ್ನು ಪ್ರೆಸ್ ಪೇಗ್ ಎಂಬ ಕ್ರಿಶ್ಚಿನ್ ವಾಮ್ರಿ ಹುಟ್ಟು ಹಾಕಿದರು. ಕ್ರಿಶ್ಚಿನ್ ಧರ್ಮ ಪ್ರಸಾರಕ್ಕಾಗಿಯೇ ಮೀಸಲಾದ ಈ ಪತ್ರಿಕೆಯ ಭಾಷಾ ಶೈಲಿಯ ಉದಾಹರಣೆ ಇಲ್ಲಿದೆ.

"ನಮ್ಮ ವರ್ತನೆಯು ಸದಾ ಏಸು ಪ್ರಭುವಿನ ಬೋಧನೆಗೆ ಪೂರ್ಣಾನುಗುಣವಾಗಿ ಇರಬೇಕೆಂಬುದೇ ನಮ್ಮ ಅಭಿಲಾಷೆ. ನಮ್ಮ ಪತ್ರಿಕೆಯು ಒಂದು ಪುಟದಲ್ಲಿ ಯೇಸುಪ್ರಭುವಿನ ಬೋಧನೆಗೆ ಸಂಬಂಧಪಟ್ಟ ಒಂದು ವಿಷಯವನ್ನು ಪ್ರತಿವಾರದಲ್ಲೂ ಬರೆಯುತ್ತಾ ಬರುವುದು ಮಾತ್ರವೇ ಅಲ್ಲದೆ, ನಾವು ಸಂಗ್ರಹಿಸುವ ವರ್ತಮಾನಗಳೂ ಅವುಗಳ ಮೇಲೆ ನಾನು ಬರೆಯುವ ವಿವರಣೆಗಳೂ ಇವೆಲ್ಲಾ ಯೇಸುಪ್ರಭುವಿಗೆ ಮೆಚ್ಚಿಗೆಯಾಗಿರಬೇಕೆಂಬುದೇ ನಮ್ಮ ಉದ್ದೇಶ."

೧೮೮೬ರಲ್ಲಿ ಉಡುಪಿಯಲ್ಲಿ ಪ್ರಾರಂಭವಾದ 'ಸುದರ್ಶನ' ಎಂಬ ಪತ್ರಿಕೆಯಲ್ಲಿ ಪ್ರಕಟವಾದ ಒಂದು ಸುದ್ದಿಯ ಶೈಲಿ ಹೀಗಿದೆ :

"ಮಹಾರಾಜೆಯವರ ಜುಬಿಲಿ ಸಂಬಂಧ ಕಲ್ಕತ್ತೆಯಲ್ಲಿ ಬಾರಿನಿಡು ಸರುವಾಗ್ಗೆ ಬೆಂಕಿ ಹಚ್ಚಿದ್ದ ಬೆಲೂನ್ ಎಂಬ ಬಿಮಾನವು ಒಂದು ಮುಳಿ ಮಾಡಿನ ಮೇಲೆ ಬಿದ್ದು ೧೫ ಗುಡಿಸಲುಗಳೂ ೨೦೦೦ರೂಪಾಯಿಯಷ್ಟು ಸೊತ್ತು ನಾಶವಾಯಿತು."

ಮಂಗಳೂರಿನಲ್ಲಿ ೧೮೮೩ರಲ್ಲಿ ಪ್ರಾರಂಭವಾದ 'ಕರ್ನಾಟಕ ವೈಭವ' ವಾರ ಪತ್ರಿಕೆಯ ಶೈಲಿಯ ಇನ್ನೊಂದು ಮಾದರಿ ಇಲ್ಲಿದೆ :

"ಕನ್ನಡ ಭಾಷೆಯು ಬಗ್ಗೆ ನಮ್ಮ ಮನಸ್ಸಿನೊಳಗೆ ಯಾವಾಗಲೂ ಕುದಿಯುವ ಏನು ಮಾಡಿದರೆ ಹೊರಬೀಳುವುದು ? ಎಂಬ ಪ್ರಶ್ನೆಗೆ ಪ್ರತ್ಯುತ್ತರವಾಗಿ ಹೀಗೆ ಹೇಳಬಹುದಲ್ಲಾ ಸಂಸಾರದ ತೊಂದರೆಗಳಲ್ಲಿ ಬೇಸತ್ತು ಬಾಯಿಬಿ ವೈರಾಗ್ಯವನ್ನು ತಾಳುತ್ತಾರೆಂದರೆ ನಾವು ಯಾವ ತರದ ವೈರಾಗ್ಯವನ್ನು ಸ್ವೀಕರಿಸಬೇಕೆಂಬುದು ತಿಳಿಯುವದಿಲ್ಲ."

---

* ಡಾ. ಶ್ರೀನಿವಾಸ ಹಾವನೂರ ಹೊಸಗನ್ನಡದ ಬರಹಗಾರರು ಪುಟ ೨೦೩

೧೮೯೬ರಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘವು ಪ್ರಾರಂಭಿಸಿದ `ವಾಗ್ಭೂಷಣ' ವು ಭಾಷೆ ಮತ್ತು ಸಾಹಿತ್ಯದ ದೃಷ್ಟಿಯನ್ನು ಕಣ್ಮುಂದೆ ಇಟ್ಟುಕೊಂಡು ನಡೆದ ಪ್ರಯತ್ನಗಳಲ್ಲಿ ಮಹತ್ವದ ಹೆಜ್ಜೆಯಾಗಿದೆ.

ಹಿಂದಿನ ಮೈಸೂರು ಸಂಸ್ಥಾನದಲ್ಲಿ ಪತ್ರಿಕಾ ಪ್ರಪಂಚದ ಭೀಷ್ಮರೆಂದು ಹೆಸರು ಪಡೆದ ವೆಂಕಟಕೃಷ್ಣಯ್ಯ (ತಾತಯ್ಯ)ನವರು `ಸಾಧ್ವಿ' ಎಂಬ ವಾರಪತ್ರಿಕೆಯನ್ನು ಪ್ರಾರಂಭಿಸಿದ್ದು ೧೮೯೯ರಲ್ಲಿ.

೧೯ನೇ ಶತಮಾನದ ಕೊನೆಯ ದಶಕವೆಂದರೆ ಭಾರತದಲ್ಲಿ ರಾಷ್ಟ್ರೀಯ ಜಾಗೃತಿಯ ಬೀಜಾರೋಪಣವಾದ ಕಾಲ. ಇಪ್ಪತ್ತನೇ ಶತಮಾನದ ಆರಂಭದಿಂದಲೇ ಅದು ತನ್ನ ವಿವಿಧ ಮುಖಗಳನ್ನು ವ್ಯಕ್ತಪಡಿಸಲಾರಂಭಿಸಿತು. ಈ ವಿಕಸನಕ್ಕೆ ಅತ್ಯಂತ ಮಹತ್ವದ ಸಾಧನ ಮತ್ತು ಮಾಧ್ಯಮವಾಗಿ ಪರಿಣಮಿಸಿದ್ದು ಪತ್ರಿಕಾ ಪ್ರಪಂಚ. ರಾಷ್ಟ್ರೀಯ ಮತ್ತು ಸ್ಥಳೀಯ ನಾಯಕರು ತಮ್ಮ ಈ ಉದ್ದೇಶ ಸಾಧನೆಗೆ ಪತ್ರಿಕೆಗಳನ್ನು ಒಳ್ಳೇ ಸಮರ್ಥ ರೀತಿಯಲ್ಲಿ ಬಳಸಿಕೊಂಡರು. ಮಾಸ ಪತ್ರಿಕೆಗಳಿಗೆ ಮತ್ತು ಸಾಹಿತ್ಯಕ್ಷೇತ್ರಕ್ಕೆ ಮೀಸಲಾಗಿದ್ದ ಪತ್ರಿಕಾ ಪ್ರಪಂಚವನ್ನು ವಾರ ಪತ್ರಿಕೆಗಳಿಗೆ ಮತ್ತು ದಿನಪತ್ರಿಕೆಗಳಿಗೆ ವಿಸ್ತರಿಸಿದರು. ನಂತರ ಕನ್ನಡ ಪತ್ರಿಕಾ ಸಂತಾನ ವೈವಿಧ್ಯಮಯವಾಗಿ ಬೆಳೆಯಿತೆಂದು ಹೇಳಬಹುದಾದರೂ ಅದರ ಮುಖ್ಯ ಶಕ್ತಿ ಮತ್ತು ಊರುಗೋಲು ರಾಷ್ಟ್ರೀಯ ಜಾಗೃತಿಯೇ ಆಗಿತ್ತು. ಕನ್ನಡದಲ್ಲಿ ಮಾತ್ರವಲ್ಲ. ಸಮಗ್ರ ಭಾರತದ ಪತ್ರಿಕಾ ಪ್ರಪಂಚದ ಮೇಲೆಯೇ ನಮ್ಮ ರಾಷ್ಟ್ರೀಯ ಹೋರಾಟದ ಪ್ರಭಾವ ಬಹಳ ಆಳವಾದದ್ದು.

೧೯೧೭ರಲ್ಲಿ ಮೈಸೂರಿನಲ್ಲಿ ಪ್ರಾರಂಭವಾದ `ಸತ್ಯವಾದಿ'( ಎಂ. ವಿ. ಸುಬ್ಬರಾವ್) ೧೯೨೦ರಲ್ಲಿ ಧಾರವಾಡದಲ್ಲಿ ಪ್ರಾರಂಭವಾದ `ಕರ್ಮವೀರ' (ರಂ. ರಾ. ದಿವಾಕರ) ೧೯೨೫ರಲ್ಲಿ ಬೆಂಗಳೂರಿನಲ್ಲಿ ಪ್ರಾರಂಭವಾದ ವಿಶ್ವಕರ್ನಾಟಕ (ತಿ. ತಾ. ಶರ್ಮ) ೧೯೨೭ರಲ್ಲಿ ಬೆಂಗಳೂರಿನಲ್ಲಿ ಪ್ರಾರಂಭವಾದ ತಾಯಿನಾಡು (ಎ. ಆರ್. ರಾಮಯ್ಯ) ೧೯೩೩ರಲ್ಲಿ ಬೆಳಗಾವಿಯಲ್ಲಿ ಪ್ರಾರಂಭವಾದ ಸಂಯುಕ್ತ ಕರ್ನಾಟಕ (ಶೇಷಾಚಾರ್ಯ ಕಟ್ಟಿ) ಇವೆಲ್ಲ ರಾಷ್ಟ್ರೀಯ ಜಾಗೃತಿಯ ಜ್ಯೋತಿಯನ್ನು ಒಳ್ಳೆ ಜಾಜ್ವಲ್ಯಮಾನವಾಗಿ ಬೆಳಗಿಸಿದ ಪತ್ರಿಕೆಗಳು.

ವಾರಪತ್ರಿಕೆಗಳು ಮತ್ತು ದಿನಪತ್ರಿಕೆಗಳು ಪ್ರಾರಂಭವಾಗಿ ರಾಜಕೀಯ ಸುದ್ದಿ ಸಮಾಚಾರಗಳಿಗೆ ಪ್ರಾಶಸ್ತ್ಯ ಕೊಡತೊಡಗಿದರೂ ಇತರ ನಿಯತಕಾಲಿಕೆಗಳ ಮಹತ್ವ ಕಡಿಮೆಯಾಗಲಿಲ್ಲ. ಸದ್ಬೋಧಚಂದ್ರಿಕೆಯ ಗಳಗನಾಥರು, ಜಯಕರ್ನಾಟಕದ ಆಲೂರ ವೆಂಕಟರಾಯರು, ಜಯಂತಿಯ ಬೆಟಗೇರಿ ಕೃಷ್ಣಶರ್ಮರು, ಕರ್ನಾಟಕದ ಡಿ. ವಿ. ಗುಂಡಪ್ಪ ನವರು ವೀರಕೇಸರಿ ಸೀತಾರಾಮ ಶಾಸ್ತ್ರಿಗಳು, ಸುವಾಸಿನಿಯ ಬೆನಗಲ್ ರಾಮರಾಯರು, ರಾಷ್ಟ್ರಬಂಧುವಿನ ಕಡೆಂಗೋಡ್ಲು ಶಂಕರಭಟ್ಟರು, ವಸಂತದ ಶಿವರಾಮ ಕಾರಂತರು, ಚಿತ್ರಗುಪ್ತದ ನಿರಂಜನರು, ಕಸ್ತೂರಿಯ ಪಾ.ವೆಂ. ಆಚಾರ್ಯರು, ಜೀವನದ ಮಾಸ್ತಿ ವೆಂಕಟೇಶ ಅಯ್ಯಂಗಾರರ ಮೊದಲಾದವರು ಪತ್ರಿಕಾ ಮಾಧ್ಯಮದ ಮೂಲಕ ಕನ್ನಡ ಸಾಹಿತ್ಯ ಸೇವೆಯನ್ನು ಮಾಡಿದ್ದು ಅತ್ಯಂ ಮಹತ್ವದ ಅಂಶವಾಗಿದೆ. ಇವೆಲ್ಲ ಗ್ರಂಥಸ್ಥ ಭಾಷೆಯಲ್ಲಿ ಏಕರೂಪತೆಯನ್ನು ಸಾಧಿಸಲು ಮಾಡಿ ಅನುಪಮವಾದ ಸೇವೆಯಾಗಿದೆ.

ನಮ್ಮ ದೈನಿಕ ಪತ್ರಿಕೆಗಳು ಕನ್ನಡ ಭಾಷಾ ಸಂಪತ್ತನ್ನು ಶ್ರೀಮಂತಗೊಳಿಸಲು ವಿಶಿಷ್ಟ ಕಾಣಿಕೆ ಸಲ್ಲಿಸಿರುವವೆಂದು ಹೇಳಬಹುದು. ದಿನಪತ್ರಿಕೆಗಳು ಸಂಗ್ರಹಿಸುವ ಸುದ್ದಿಯ ಮೂಲದ ಬಹುಪಾಲು ಇಂಗ್ಲೀಷಿನಲ್ಲಿ ಇರುವದರಿಂದ ಅದನ್ನು ಭಾಷಾಂತರಿಸುವಾಗ ಬರುವ ಕೆಲ ವಿಶಿಷ್ಟ ಇಂಗ್ಲೀಷ ಪದಗಳಿಗೆ ಸಮಾನಾರ್ಥದ ಕನ್ನಡ ಪದಗಳನ್ನು ವಿಲಂಬವಿಲ್ಲದೆ ಸೃಷ್ಟಿಸುವ ಸಂದರ್ಭ ಅನೇಕ ಸಲ ಬರುತ್ತದೆ. ಕೆಲವು ಸಲ ಹೊಸ ಹೊಸ ಶಬ್ದಗಳೇ ಆವಿಷ್ಕಾರ ಹೊಂದುತ್ತವೆ. ಅಧುನಿಕ ವಿಜ್ಞಾನದ ವಿಳವಣಿಗೆಯಿಂದಾಗಿ ಇಂಗ್ಲೀಷಿನಲ್ಲಿಯೇ ನಿಘಂಟುವಿಗೆ ಎಟುಕದ ಹೊಸ ಹೊಸ ಶಬ್ದಗಳ ಸೃಷ್ಟಿಯಾಗುತ್ತದೆ. ಅಂಥ ಎಲ್ಲ ಶಬ್ದಗಳಿಗೂ ತತ್‌ಕ್ಷಣ ಸಮಾನಾರ್ಥ ಪದವನ್ನು ಹುಟ್ಟಿಸುವದು, ದಿನಪತ್ರಿಕೆಯಲ್ಲಿಯ ಉಪಸಂಪಾದಕನ ಹೊಣೆಯಾಗಿರುತ್ತದೆ. ಹೀಗೆ ತತ್‌ಕ್ಷಣ ಸ್ಫೂರ್ತಿಯಿಂದ ಬಂದ ಪದಗಳೇ ಬಳಕೆಯಲ್ಲಿ ನಿಂತು ಹೋದ ಉದಾಹರಣೆಗಳುಂಟು. ಉದಾ. ೧೯೩೦ರಲ್ಲಿ Round Table conferance ಎಂಬ ಪದ ಒಮ್ಮೆಲೇ ಭಾರತದ ರಾಜಕೀಯದಲ್ಲಿ ಪ್ರಯೋಗಕ್ಕೆ ಬಂತು. ಅದನ್ನು ಕೆಲ ಪತ್ರಿಕೆಗಳು ``ದುಂಡು ಮೇಜಿನ ಪರಿಷತ್ತು'' ಎಂದು ವಿವರಿಸಿದವಾದರೂ ತಿ. ತಾ. ಶರ್ಮರು ಅದಕ್ಕೆ `ಚಕ್ರಗೋಷ್ಠಿ' ಎಂದು ಬಳಸಿದ ಪದ ಅನೇಕರಿಗೆ ಬಹಳ ಸಮರ್ಪಕವೆನಿಸಿತು. Atom Bomb ಮೊದಮೊದಲು ಅಣುಬಾಂಬ್ ಎಂದೇ ಪತ್ರಿಕೆಗಳಲ್ಲಿ ಪ್ರಯೋಗಿಸಲ್ಪಟ್ಟಿತು. ಆದರೆ ಇತ್ತೀಚೆಗೆ ಅದು `ಪರಮಾಣು ಬಾಂಬ್' ಎಂಬ ಸರಿಯಾದ ಪದಕ್ಕೆ ಹೊಂದಿಕೊಂಡಿದೆ. ದಿನಪತ್ರಿಕೆಗಳ ಕಚೇರಿಗಳೆಂದರೆ ಒಂದು ರೀತಿಯಲ್ಲಿ ಹೊಸ ಹೊಸ ಶಬ್ದಗಳ ಟಂಕಸಾಲೆ ಗಳೆಂದೇ ಹೇಳಬಹುದು. ಆದರೆ ಆ ಶಬ್ದಗಳನ್ನು ಸರಿಯಾಗಿ ತೂಗಿ ಯೋಗ್ಯ ಅರ್ಥ ನೀಡಿ ಸಮರ್ಪಕ ರೀತಿಯಲ್ಲಿ ಸಿದ್ಧಪಡಿಸಿ ಹೊರಗೆ ಬಿಡುವಷ್ಟು ವ್ಯವಧಾನ ಇರುವದಿಲ್ಲ. ಸಮಯದ ಒತ್ತಡದಿಂದಲೋ ತತ್ಕಾಲೀನ ಉಪಸಂಪಾದಕನ ಪರಿಮಿತ ಜ್ಞಾನದಿಂದಲೋ ಒಮ್ಮೊಮ್ಮೆ ತಪ್ಪು ಪದಗಳೂ ಜಾರಿಗೆ ಬರುವದುಂಟು. ಹಾಗೆ ಬಂದವುಗಳು ಸರಿಯಾದ ಪದಗಳಿಗೆ ಬರಲು ಅವಕಾಶ ಕೊಡದೆ ತಾವೇ ನಿಂತು ಹೋದ ಉದಾಹರಣೆಗಳೂ ಇವೆ. ಉದಾ. ಅಂತರಾಷ್ಟ್ರೀಯ ಎಂಬ ಪದ ಅಶುದ್ಧವಾಗಿದ್ದರೂ ರೂಢಿಯಲ್ಲಿ ನಿಂತು ಹೋಗಿದೆ. ಅದರಂತೆಯೇ ಕೈಗಾರಿಕಾ ಕ್ರಾಂತಿ, ಚುನಾವಣಾ ಕ್ಷೇತ್ರ, ಪತ್ರಿಕಾ ಹೇಳಿಕೆ ಇವೆಲ್ಲ ವ್ಯಾಕರಣದ ಬರೆಗೆ ಹತ್ತುವ ಪದಗಳಲ್ಲ. ಅದೇ ರೀತಿ ಹಿಂದೀಮೇತರ ಪದವಿಯೋತ್ತರ ಮೊದಲಾದವುಗಳನ್ನು ಅಶುದ್ಧ ಪ್ರಯೋಗಗಳೆಂದೇ ಹೇಳಬಹುದು. ಆದರೆ ಇವು ರೂಢಿಯ ಮುದ್ರೆಯನ್ನು ಪಡೆದು ಶಾಸ್ತ್ರಸ್ಥವೇ ಎಂದೆ ಹಾಕಿವೆ.

ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಪತ್ರಿಕಾ ಪ್ರಪಂಚದ ಸ್ವರೂಪ ಬದಲಾಗಿದೆ. ಹಿಂದೆ ಕೇವಲ ವೈಯಕ್ತಿಕ ಸಾಹಸ ಮತ್ತು ವೃತ್ತಿ ಪ್ರೇಮವನ್ನೇ ಅಧರಿಸಿದ್ದ ಅದು ಈಗ ಒಂದು ಉದ್ಯಮೆಯಾಗಿ ಪರಿವರ್ತನೆ ಹೊಂದಿದೆ. ಅದರ ಪರಿಣಾಮವೆಂದರೆ ಪತ್ರಿಕೆಗಳ ಸಾಮೂಹಿಕ ವ್ಯಾಯತ್ತದ ಫಲವಾಗಿದೆ. ಈಗ ಸಂಪಾದಕನಾದವನು ಕೇವಲ ತನ್ನ ಒರಹಿನ ವೈಶಿಷ್ಟ್ಯದಿಂದಾಗಿ ಒಂದು ಪತ್ರಿಕೆಯನ್ನು ಯಶಸ್ವಿ ಮಟ್ಟಕ್ಕೆ ಏರಿಸಲಾರ. ಆದರೆ ಹೊರಗಿನ ಲೇಖಕರ ಹೆಸರನ್ನು ಪಡೆಯುವಿಕೆಯಾಗುತ್ತವಲ್ಲದೆ ಸಮರ್ಥ ಉಪಸಂಪಾದಕರ ಪಡೆಯನ್ನು ಸಂಪಾದಕನಾಗುತ್ತದೆ. ಈ ಸಂಘಟನಾ ಶಕ್ತಿಯನ್ನು ಯಶಸ್ವಿಯಾಗಿ ವ್ಯವಹರಿಸುವವನೇ ಯಶಸ್ವಿ

ಪತ್ರಕರ್ತನೆನಿಸುತ್ತಾನೆ. ದಿನಪತ್ರಿಕೆಗಳಿರಲಿ, ವಾರ ಮತ್ತು ಮಾಸಪತ್ರಿಕೆಗಳು ಸಹ ಈ ವೈಯಕ್ತಿಕ ಸಾಹಸದ ಸೀಮೆಯಲ್ಲಿ ಉಳಿದಿಲ್ಲ. ವ್ಯವಸ್ಥಾಪನೆ ವಿಭಾಗದಲ್ಲಿ ಮಾತ್ರವಲ್ಲ; ಸಂಪಾದಕೀಯ ವಿಭಾಗವೂ ಸಾಮೂಹಿಕ ಪ್ರಯತ್ನವನ್ನು ಬೇಡುತ್ತದೆ. ಇದರಿಂದಾಗಿ ಪತ್ರಿಕೆಗಳು ವೈವಿಧ್ಯಮಯವಾಗಿ ನಾನಾ ತರದ ರುಚಿ ಅಭಿರುಚಿಗಳಿಗೆ ಅನುಗುಣವಾಗಿ ಹೊರಬರುವದು ಸಾಧ್ಯವಾಗಿದೆಯಾದರೂ ಕೆಲ ಸಮರ್ಥ ಮತ್ತು ಬುದ್ಧಿವಂತ ಪತ್ರಕರ್ತರು ಸಂಬಳದ ಸೇವಕರಾಗಿಯೇ ಉಳಿದು ತಮ್ಮ ಹೆಸರಿಗೆ ಸಲ್ಲಬೇಕಾದ ಶ್ರೇಯಸ್ಸನ್ನು ತ್ಯಾಗಮಾಡಬೇಕಾಗಿ ಬಂದಿದೆ. ಇದು ಆಧುನಿಕ ಔದ್ಯಮೀಕರಣದ ಅನಿವಾರ್ಯ ಶಾಪ ಎಂದು ತೋರುತ್ತದೆ.

ಪತ್ರಿಕಾ ಪ್ರಪಂಚ ಅಸ್ತಿತ್ವಕ್ಕೆ ಬಂದ ಮೇಲೆ ಸಾಹಿತ್ಯಕ್ಕೆ ಒಂದು ಹೊಸ ಅಂಗವನ್ನೇ ಸೇರಿಸಿದೆ. ಅದೆಂದರೆ ಪತ್ರಿಕಾ ವರದಿಗಳು. ಮೊದ ಮೊದಲು ಸಭೆ ಸಮ್ಮೇಳನಗಳ ಅಥವಾ ಘಟನೆಗಳ ನೀರಸ ನಿರೂಪಣೆಯಾಗಿದ್ದ ಈ ವಿಭಾಗ ಕ್ರಮೇಣ ವಿಕಾಸಗೊಳ್ಳುತ್ತ ಈಗ ಅದೊಂದು ಕಲೆಯಾಗಿ ಪರಿಣಮಿಸಿದೆ. ಸಂಯುಕ್ತ ಕರ್ನಾಟಕದ ಆರ್. ಕೆ. ಜೋಶಿ, ಪ್ರಜಾವಾಣಿಯ ಎಸ್. ವ್ಹಿ. ಜಯಶೀಲರಾವ್, ಡೆಕ್ಕನ್ ಹೆರಾಲ್ಡ್‌ದ ಎಸ್. ಜಿ. ಮೈಸೂರಮಠ ಮತ್ತು ಸಿ. ವಿ. ರಾಜಗೋಪಾಲ, ಇಂಡಿಯನ್ ಎಕ್ಸ್‌ಪ್ರೆಸ್‌ನ ವಿ. ಎನ್. ಸುಬ್ಬರಾವ್, ಹಿಂದೂದ ಸಿ. ಎಂ. ರಾಮಚಂದ್ರ ಮೊದಲಾದವರು ತಮ್ಮ ವರದಿಗಳಿಂದಲೇ ಪತ್ರಿಕೆಗಳಿಗೆ ಹೆಸರು ತಂದರಲ್ಲದೆ ಪತ್ರಿಕಾ ವರದಿಗಳಿಗೆ ಒಂದು ಮಟ್ಟವನ್ನು ಸ್ಥಾಪಿಸಿದರು. ಇವರಲ್ಲಿ ಕೆಲವರು ತಮ್ಮ ಸೇವಾವೃತ್ತಿಯಿಂದ ನಿವೃತ್ತರಾಗಿದ್ದರೂ ವಿವಿಧ ಪತ್ರಿಕೆಗಳಲ್ಲಿ ಅಂಕಣಕಾರರಾಗಿ ರಾಜಕೀಯ ಮತ್ತು ವಿವಿಧ ವಿದ್ಯಮಾನಗಳನ್ನು ಕುರಿತು ವಿವರಣೆ ಮತ್ತು ವಿಶ್ಲೇಷಣೆಗಳನ್ನು ನೀಡುತ್ತ ಪತ್ರಿಕಾಕ್ಷೇತ್ರದಲ್ಲಿ ಇದ್ದಾರೆ. ಪ್ರಜಾವಾಣಿಯಲ್ಲಿ ಬಹುಕಾಲ ಸಂಪಾದಕರಾಗಿದ್ದು ಅದರ ಅಭಿವೃದ್ಧಿಗೆ ಕಾರಣರಾದ ಟಿ. ಎಸ್. ರಾಮಚಂದ್ರರಾವ್, ಮೊದಲು ವಿವಿಧ ಪತ್ರಿಕೆಗಳಲ್ಲಿ ಸೇವೆ ಸಲ್ಲಿಸಿ ಕನ್ನಡಪ್ರಭ ಪತ್ರಿಕೆಯ ಸಂಪಾದಕರಾಗಿದ ಖಾದ್ರಿ ಶಾಮಣ್ಣ, ಪ್ರಜಾವಾಣಿಯಲ್ಲಿ ಬಹುಕಾಲ ಸೇವೆ ಸಲ್ಲಿಸಿ ಈಗ ಕನ್ನಡಪ್ರಭದ ಸಂಪಾದಕರಾಗಿರುವ ವೈ. ಎನ್. ಕೃಷ್ಣಮೂರ್ತಿ, ತರಂಗ ವಾರಪತ್ರಿಕೆ ಸಂಪಾದಕರಾಗಿರುವ ಸಂತೋಷಕುಮಾರ ಗುಲ್ವಾಡಿ ತಮ್ಮ ತಮ್ಮ ಬರಹದ ಶೈಲಿಯಿಂದಲೇ ಸಂಪಾದಕ ಹುದ್ದೆಯನ್ನು ಅಲಂಕರಿಸಿ ಸಾಹಿತ್ಯ ಕ್ಷೇತ್ರಕ್ಕೆ ಸೇವೆ ಸಲ್ಲಿಸಿದವರು. ಕಸ್ತೂರಿ ಮಾಸಪತ್ರಿಕೆಯ ಹೊಣೆಯನ್ನು ಪ್ರಾರಂಭದಿಂದಲೂ ವಹಿಸಿಕೊಂಡು ಅದಕ್ಕೆ ಪತ್ರಿಕಾ ಪ್ರಪಂಚದಲ್ಲಿ ಮಾತ್ರವಲ್ಲದೆ ಸಾಹಿತ್ಯ ಕ್ಷೇತ್ರದಲ್ಲೂ ಒಂದು ಮಟ್ಟ ಮಹತಿಯನ್ನು ತಂದುಕೊಟ್ಟ ಪಾ. ವೆಂ. ಆಚಾರ್ಯರದು ಒಂದು ದೊಡ್ಡ ಹೆಸರು. ಅವರು ಅವರೆಗೆ ನಡೆದು ಬಂದ ಮಾಸಪತ್ರಿಕೆಗಳ ಜಾಡನ್ನು ಬಿಟ್ಟು ಹೊಸ ಮಾರ್ಗವನ್ನೇ ತುಳಿದು ತಮ್ಮ ಪ್ರತಿಭೆಯನ್ನು ಮೆರೆದರು.

ಇತ್ತೀಚೆಗೆ ಅಂಕಣ ಸಾಹಿತ್ಯವೊಂದು ಸಾಹಿತ್ಯಕ್ಷೇತ್ರಕ್ಕೆ ಸೇರಿಕೊಂಡಮ್ಮ ಪತ್ರಿಕಾ ಸಾಹಿತ್ಯದ ಕೊಡುಗೆಯೆಂದೇ ಹೇಳಬೇಕು. ಇದರಲ್ಲಿ ಕೆಲವು ಅವರವರು ಕಂಡ ಅನುಭವದ ಫಲಗಳಾದರೆ ಇನ್ನು ಕೆಲವು ಅವರು ಪ್ರಚಲಿತ ವಿಷಯಗಳನ್ನು ನೋಡುವ ದೃಷ್ಟಿಕೋನಗಳಾಗಿವೆ. ಇಂಥ

ಅಂಕಣಕಾರರಲ್ಲಿ ಎನ್ಕೆ, ಹಾ.ಮಾ.ನಾಯಕ, ಎಚ್ಚೆಸ್ಕೆ, ಕೆ. ಎಸ್. ನಿರಂಜನ, ಪಾಟೀಲ ಪುಟ್ಟಪ್ಪ, ಕು. ಶಿ. ಹರಿದಾಸ ಭಟ್ಟ, ಜಿ. ವೆಂಕಟಸುಬ್ಬಯ್ಯ ಇವರನ್ನು ವಿಶೇಷವಾಗಿ ಹೆಸರಿಸಬಹುದು.

ವಾರಪತ್ರಿಕೆಗಳು, ಮಾಸಪತ್ರಿಕೆಗಳು ಮತ್ತು ಇತರ ನಿಯತಕಾಲಿಕೆಗಳು ಸಾಹಿತ್ಯದ ವಿವಿಧ ವಿಭಾಗಗಳಿಗೆ ವಿಶೇಷ ಗಮನಕೊಡುತ್ತಿರುವದು ಮತ್ತು ದಿನಪತ್ರಿಕೆಗಳು ಸಹ ತಮ್ಮ ಸಾಪ್ತಾಹಿಕ ಪುರವಣಿಯಲ್ಲಿ ಸಾಹಿತ್ಯಕ ವಿಷಯಗಳಿಗೇ ವಿಶೇಷ ಪ್ರಾಶಸ್ತ್ಯ ಕೊಡುವದು ಸಾಹಿತ್ಯದ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಪ್ರೋತ್ಸಾಹವಾಗಿ ಪರಿಣಮಿಸಿದೆ. ಕತೆ, ಕವಿತೆ, ಕಾದಂಬರಿ, ಹರಟೆ, ವಿಮರ್ಶೆ, ಪ್ರಬಂಧ ಮೊದಲಾದ ಜನಪ್ರಿಯ ಸಾಹಿತ್ಯ ಪ್ರಕಾರಕ್ಕಂತೂ ಪ್ರಥಮ ಪ್ರಕಟಣೆಗೆ ಪತ್ರಿಕೆಗಳೇ ಅವಕಾಶ ಕೊಡುತ್ತವೆಂದರೆ ಅತಿಶಯೋಕ್ತಿ ಅಲ್ಲ. ವಿಜ್ಞಾನ, ಕಲೆ, ವಾಸ್ತುಶಿಲ್ಪ ಅರ್ಥಶಾಸ್ತ್ರ ಮೊದಲಾದ ವಿಶಿಷ್ಟ ಜ್ಞಾನದ ಕ್ಷೇತ್ರಗಳು ಕೂಡ ತಮ್ಮ ತಮ್ಮ ಕ್ಷೇತ್ರಕ್ಕೇ ಮೀಸಲಾದ ನಿಯತಕಾಲಿಕೆಗಳಿಗೆ ಮೊರೆ ಹೋಗುತ್ತಿರುವದು ಸಾಹಿತ್ಯ ಪ್ರಚಾರಕ್ಕೆ ಮತ್ತು ನಿರ್ಮಾಣಕ್ಕೆ ಪತ್ರಿಕೆಗಳು ಎಷ್ಟೊಂದು ಸಮರ್ಥ ಮಾಧ್ಯಮಗಳಾಗಿ ಪರಿಣಿಸಿವೆ ಎಂಬುದನ್ನು ಎತ್ತಿತೋರಿಸುತ್ತದೆ.

ಒಟ್ಟಿನಲ್ಲಿ ಹೇಳಬೇಕೆಂದರೆ ಪತ್ರಿಕಾ ಸಾಹಿತ್ಯ ಕೇವಲ ಒಂದು ಪ್ರಕಾರದ ಸಾಹಿತ್ಯವೆಂದು ತನ್ನ ಸ್ಥಾನವನ್ನು ನಿರ್ಮಿಸಿಕೊಂಡಿರುವದಲ್ಲದೆ ಪರಂಪರಾಗತ ಮತ್ತು ಹೊಸ ಎಲ್ಲ ಪ್ರಕಾರದ ಸಾಹಿತ್ಯಕ್ಕೂ ಪ್ರೇರಕ ಮತ್ತು ಪ್ರೋತ್ಸಾಹಕ ಕ್ಷೇತ್ರವಾಗಿ ಕೆಲಸ ಮಾಡುತ್ತಿದೆ.

●

ಸಾಹಿತ್ಯ ವಿಮರ್ಶೆ

- ಜಿ. ಎಂ. ಹೆಗಡೆ

ಹೊಸಗನ್ನಡ ಸಾಹಿತ್ಯ ಪ್ರಪಂಚದಲ್ಲಿ ಸಾಹಿತ್ಯ ವಿಮರ್ಶೆಗೆ ಅನನ್ಯವಾದ ಸ್ಥಾನವಿದೆ. ಸಾಹಿತ್ಯದ ಗುಣ -ದೋಷಗಳ ಪೃಥಕ್ಕರಣ ಮಾಡಿ ಉತ್ತಮ ಸಾಹಿತ್ಯದ ಸತ್ವಸ್ವರೂಪಗಳನ್ನು ನಿರ್ದೇಶಿಸುವ ವಿಮರ್ಶೆ ಶ್ರೇಷ್ಠ ಸಾಹಿತ್ಯದ ನಿರ್ಮಿತಿಗೆ ಪ್ರೇರಣೆ ನೀಡುತ್ತದೆ. ಸಾಹಿತ್ಯದ ಇತರ ಪ್ರಕಾರಗಳಂತೆ ವಿಮರ್ಶೆಗೂ ನಿರ್ಮಾಣಶಕ್ತಿ (Creativity) ಇರುವುದರಿಂದ ಅದು ಸೃಜನಶೀಲವಾದದ್ದಾಗಿದೆ. ಶ್ರೇಷ್ಠವಾದ ಸಾಹಿತ್ಯದಂತೆ ವಿಮರ್ಶೆಯೂ ಜೀವನ ವಿಮರ್ಶೆಯನ್ನು ಮಾಡಿ ಸಂಸ್ಕೃತಿಯ ವಿಭಿನ್ನ ಆಯಾಮಗಳನ್ನು ಅರಿಯಲು ಪ್ರೇರಿಸುತ್ತದೆ. ಸಾಹಿತ್ಯದ ಉತ್ಕರ್ಷಕ್ಕೆ ವಿಮರ್ಶೆ ಭದ್ರವಾದ ನೆಲೆಯನ್ನು ಒದಗಿಸುತ್ತದೆ.

ಕನ್ನಡದಲ್ಲಿ ವಿಮರ್ಶೆಯ ಪ್ರಕಾರದ ವಿಕಾಸಕ್ಕೆ ಪಾಶ್ಚಾತ್ಯ ಸಾಹಿತ್ಯ ಸತ್ವ ವಿಚಾರಗಳ ಪ್ರೇರಣೆ ಮುಖ್ಯ ಕಾರಣವಾಗಿದೆ. ಇಪ್ಪತ್ತನೆಯ ಶತಮಾನದ ಮೊದಲ ಭಾಗದಲ್ಲಿ ನವೋದಯ ಸಾಹಿತ್ಯ ರೂಪು ಪಡೆಯುತ್ತಿದ್ದ ಸಂದರ್ಭದಲ್ಲಿ ವಿಮರ್ಶೆಯೂ ಕಾಲಿಟ್ಟಿತು. ಹಾಗಿದ್ದರೆ ಹಳೆಯ ಸಾಹಿತ್ಯದಲ್ಲಿ ವಿಮರ್ಶೆ ಇರಲಿಲ್ಲವೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ನಮ್ಮ ಪ್ರಾಚೀನ ಸಾಹಿತ್ಯ ಸಾವಿರಾರು ವರ್ಷಗಳ ಸುದೀರ್ಘ ಪರಂಪರೆಯನ್ನೊಳಗೊಂಡಿದೆ. ಪ್ರಾಚೀನ ಸಾಹಿತ್ಯದಲ್ಲಿ ಕವಿಗಳು ಕಾವ್ಯಾರಂಭದಲ್ಲಿ ಕುಕುವಿ ನಿಂದೆ, ಸುಕವಿ ಪ್ರಶಂಸೆ, ಕಾವ್ಯದ ಆಶಯಗಳಿಗೆ ಸಂಬಂಧಿಸಿದ ಅನೇಕ ಮಾತುಗಳನ್ನು ಹೇಳಿರುವದನ್ನು ಗಮನಿಸುವಾಗ ವಿಮರ್ಶೆಯ ಧೋರಣೆ ಅವರಲ್ಲಿತ್ತೆಂಬುದು ತಿಳಿಯುವದಾದರೂ ವಿಮರ್ಶೆ ಎಂಬ ಸಾಹಿತ್ಯ ಪ್ರಕಾರ ಬೆಳೆದದ್ದು ಆಧುನಿಕ ಸಾಹಿತ್ಯದಲ್ಲಿಯೇ.

ಕನ್ನಡ ವಿಮರ್ಶೆ ಕಳೆದ ಎಪ್ಪತ್ತೈದು ವರ್ಷಗಳಲ್ಲಿ ವಿಭಿನ್ನ ನೆಲೆಗಳಲ್ಲಿ ಬೆಳವಣಿಗೆ ಹೊಂದಿದೆ. ನಮ್ಮ ಸಾಂಸ್ಕೃತಿಕ ಪುನರುಜ್ಜೀವನದ ಸಂದರ್ಭದಲ್ಲಿ ಕಾಲಿರಿಸಿದ ವಿಮರ್ಶೆ ಸಾಹಿತ್ಯ ನಿರ್ಮಾಣಕ್ಕೆ ಪ್ರೇರಕಶಕ್ತಿಯಾಗಿದೆ. ಕನ್ನಡ ವಿಮರ್ಶೆ ಬೇರೆ ಬೇರೆ ವಿಚಾರಧಾರೆ, ತತ್ವಪ್ರಣಾಲಿಗಳ ಆಶಯಗಳನ್ನು ತನ್ನದಾಗಿಸಿಕೊಂಡು ರೂಪವೈವಿಧ್ಯವನ್ನೂ ವೈಚಾರಿಕ ನೆಲೆಗಟ್ಟನ್ನೂ ಪಡೆದುಕೊಂಡಿದೆ. ಸಾಕ್ಷ್ಯಾಧಾರ ಪ್ರಮಾಣಗಳಿಂದ ಕೂಡಿರುವ ಸಪ್ರಮಾಣ ವಿಮರ್ಶೆ, ಸಾಹಿತ್ಯದಲ್ಲಿ ಸತ್ವಪೂರ್ಣ ಕೃತಿಗಳ ಬೆಳಕಿನಲ್ಲಿ ಮಾನದಂಡವಾದ ಸಪ್ರಮೇಯ ವಿಮರ್ಶೆ, ಅನ್ಯ ಸಾಹಿತ್ಯದ ಕವಿ ಕೃತಿಗಳ ಜೊತೆಗೆ ಹೋಲಿಸಿ ಕೃತಿಯ ಬೆಲೆಗಟ್ಟುವ ತೌಲನಿಕ ವಿಮರ್ಶೆ, ಕೃತಿಯ ಸಾಮಾಜಿಕ ಸಾಂಸ್ಕೃತಿಕ ಆಯಾಮದಲ್ಲಿ ಮೌಲ್ಯಮಾಪನ ಮಾಡುವ ಕೃತಿನಿಷ್ಠ ವಿಮರ್ಶೆ, ಹಾಗೆಯೆ ತಂತ್ರನಿಷ್ಠ ವಿಮರ್ಶೆ, ಪ್ರಾಯೋಗಿಕ ವಿಮರ್ಶೆ ಇತ್ಯಾದಿ

ವಿಮರ್ಶೆಯ ವಿಧಾನಗಳು ಬೆಳೆದುಬಂದಿವೆ. ಸಾಹಿತ್ಯ ವಿಮರ್ಶೆಯ ವೈಚಾರಿಕ ಹರಹೂ ವಿಶಾಲವಾದದ್ದು. ಸಾಹಿತ್ಯ ಮತ್ತು ಸಮಾಜ ವಿಜ್ಞಾನ, ಸಾಹಿತ್ಯ ಮತ್ತು ಮನೋವಿಜ್ಞಾನ ಸಾಹಿತ್ಯ ಮತ್ತು ಮಾರ್ಕ್ಸವಾದ, ಸಾಹಿತ್ಯ ಮತ್ತು ಅಸ್ತಿತ್ವವಾದ ಹೀಗೆ ಸಾಹಿತ್ಯದ ಮೇಲೆ ವಿವಿಧ ತತ್ವ ವಿಚಾರಧಾರೆಗಳ ಪ್ರಭಾವ, ಸಂಬಂಧ ಬೆಳೆದು ಬಂದುದರ ಪರಿಣಾಮವಾಗಿ ಕನ್ನಡ ವಿಮರ್ಶೆ ವಿಭಿನ್ನ ನಿಲುವು, ಧೋರಣೆಗಳನ್ನು ಪಡೆದುಕೊಂಡಿದೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ ಸಾಹಿತ್ಯ ಪರಂಪರೆಯನ್ನು ವಿಮರ್ಶಿಸುವಂತೆ, ಸಾಹಿತ್ಯ ವಿಮರ್ಶೆಯ ಪರಂಪರೆಯನ್ನು ಪರಿಮಿತವಾದ ನೆಲೆಯಲ್ಲಿ ಅನುಸಂಧಾನ ಮಾಡುವದು ಇಲ್ಲಿ ಸಾಧ್ಯವಾಗುತ್ತದೆ.

ಕನ್ನಡದಲ್ಲಿ ವಿಮರ್ಶೆ ಆರಂಭವಾದದ್ದು ನವೋದಯ ಸಾಹಿತ್ಯ ಸಂದರ್ಭದಲ್ಲಿ. ನಮಗೆ ತಿಳಿದಿರುವ ಹಾಗೆ ಮಾಸ್ತಿಯವರು ೧೯೧೭ರಷ್ಟೊತ್ತಿಗೆ ಮಂಗಳೂರಿನ `ಕೃಷ್ಣಸೂಕ್ತಿ' ಯಲ್ಲಿ ಬರೆದ ಸತಿಹಿತೈಷಿಣಿ ಗ್ರಂಥಮಾಲೆಯ ವಿಮರ್ಶೆ ಕನ್ನಡದ ಮೊದಲ ಕೃತಿ ವಿಮರ್ಶೆ ಯಾಗಿದೆ. ಅದರಲ್ಲಿ ತಿರುಮಲಾಂಬಾ ಅವರ ಕಾದಂಬರಿಗಳನ್ನು ತೀಕ್ಷ್ಣವಾಗಿ ವಿಮರ್ಶಿಸಿದ್ದು, ಒಂಬತ್ತು ವರ್ಷಗಳ ನಂತರ ಅವುಗಳ ಬಗೆಗೆ ತಮ್ಮ ವಿಮರ್ಶೆ ಕಟುವಾಯಿತೆಂದು ಸ್ವತಃ ಮಾಸ್ತಿಯವರಿಗೆ ಅನ್ನಿಸಿದ್ದನ್ನು ವಿಮರ್ಶೆ ೧ರಲ್ಲಿ ಉಲ್ಲೇಖಿಸಿದ್ದಾರೆ. ಇಂದು ನಾವು ಕಾಣುತ್ತಿರುವ ಬಿಚ್ಚು ಮನಸ್ಸಿನ ವಸ್ತುನಿಷ್ಠ ವಿಮರ್ಶೆ ಕನ್ನಡ ವಿಮರ್ಶೆಯ ಆರಂಭದಲ್ಲಿ ಪ್ರಕಟವಾದದ್ದು ಮುಖ್ಯವಾದ ಸಂಗತಿಯಾಗಿದೆ. ನವೋದಯ ಸಾಹಿತ್ಯದ ಆರಂಭದಲ್ಲಿ ಪಾಶ್ಚಾತ್ಯ ಕವಿ ಲೇಖಕರ ಪ್ರಭಾವ ಕನ್ನಡ ಲೇಖಕರ ಮೇಲೆ ಆದದ್ದು ವಿಮರ್ಶೆಯ ಸಂದರ್ಭದಲ್ಲೂ ಗಮನಿಸುವ ಅಂಶವಾಗಿದೆ. ಆಂಗ್ಲ ರಮ್ಯಸಂಪ್ರದಾಯದ ಕವಿಗಳಾದ ವರ್ಡ್ಸವರ್ತ, ಶೆಲ್ಲಿ, ಕೀಟ್ಸ ಮೊದಲಾದ ಕವಿಗಳ ಕಾವ್ಯತತ್ವದ ಜೊತೆಗೆ ಆಂಗ್ಲ ವಿಮರ್ಶನ ಪರಂಪರೆಯ ವಿಚಾರಧಾರೆಯೂ ಕನ್ನಡದ ಹೊಸ ಲೇಖಕರ ಮನಸೂರೆ ಗೊಂಡಿತು. ಬಿ.ಎಂ. ಶ್ರೀಯವರು ಪಾಶ್ಚಾತ್ಯ ವಿಮರ್ಶನ ರೀತಿ ನೀತಿಗಳನ್ನು ತಮ್ಮ ಶಿಷ್ಯ ಪರಂಪರೆಯಲ್ಲಿ ಆಲೋಚಿಸುವಂತೆ ಮಾಡಿದರು. ವಿಮರ್ಶೆಯ ಸ್ವರೂಪ ಹಾಗೂ ಸಾಹಿತ್ಯದ ಜಿಜ್ಞಾಸೆ ನವೋದಯ ಸಾಹಿತ್ಯ ವಿಮರ್ಶೆಯಲ್ಲಿ ಬೆಳೆದು, ಕನ್ನಡದಲ್ಲಿ ತಾತ್ವಿಕ ವಿಮರ್ಶೆಯ ನೆಲಗಟ್ಟು ಸಿದ್ಧವಾಯಿತು. ನವೋದಯ ಸಾಹಿತ್ಯ ಮೀಮಾಂಸೆಯ ವಿಶಿಷ್ಟತೆಯನ್ನು ಇಲ್ಲಿ ಅವಲೋಕಿಸಬಹುದಾಗಿದೆ.

೧೯೨೪ ರಷ್ಟೊತ್ತಿಗೆ ಮಾಸ್ತಿಯವರು `ಸಾಹಿತ್ಯದಲ್ಲಿ ವಿಮರ್ಶೆಯ ಕಾರ್ಯ' ಎಂಬ ವಿಸ್ತಾರವಾದ ಲೇಖನದಲ್ಲಿ ವಿಮರ್ಶೆ ಎಂದರೇನು, ವಿಮರ್ಶೆಯ ಸ್ವರೂಪ, ಕೃತಿಪರಿಶೀಲನೆ, ಕವಿಗೂ ವಿಮರ್ಶಕನಿಗೂ ಇರುವ ಸಂಬಂಧ, ವಿಮರ್ಶೆಯ ರೂಪಭೇದಗಳು ಇತ್ಯಾದಿ ವಿಮರ್ಶೆಯ ತತ್ವವಿವೇಚನೆಯನ್ನು ಮಾಡಿದರು. ಅದೇ ವರ್ಷ ಪ್ರಕಟವಾದ `ಸಾಹಿತ್ಯ' ಎಂಬ ಗ್ರಂಥದಲ್ಲಿ ಸಾಹಿತ್ಯ ಸ್ವರೂಪವನ್ನು ಕುರಿತು ಮಾಸ್ತಿಯವರು ಪ್ರಕಟಿಸಿದ ವಿಚಾರ ಧಾರೆ ಹೊಸ ಸಾಹಿತ್ಯದ ಸಂದರ್ಭದಲ್ಲಿ ಮಹತ್ವಪೂರ್ಣವಾದುದು. ಡಿ. ವಿ. ಜಿ. ಅವರು `ಸಾಹಿತ್ಯಶಕ್ತಿ', `ಜೀವನ ಸೌಂದರ್ಯ ಹಾಗೂ ಸಾಹಿತ್ಯ' ಗ್ರಂಥಗಳಲ್ಲಿ ಜನತೆಯ ಬದುಕಿನಲ್ಲಿ ಸಾಹಿತ್ಯದ ಔನ್ನತ್ಯವನ್ನು ವಿದಿತಪಡಿಸಿದರು. ಪಿ. ಸೀ. ಅವರು `ಕವಿ ಕಾವ್ಯದೃಷ್ಟಿ' ಸಾಹಿತ್ಯ

ವಿಮರ್ಶೆಯಲ್ಲಿ ಅರ್ಥ ಮತ್ತು ಮೌಲ್ಯ ' ಎಂಬ ಗ್ರಂಥಗಳಲ್ಲಿ ಸಾಹಿತ್ಯ ವಿಮರ್ಶೆಯ ವೈಚಾರಿಕ ನೆಲಗಟ್ಟಿನ ಬಗ್ಗೆ ವಿವೇಚಿಸಿದರು. ಇದೇ ಸಂದರ್ಭದಲ್ಲಿ ಬೇಂದ್ರೆ, ಕುವೆಂಪು, ಪು.ತಿ.ನ. ಅವರು ಭಾರತೀಯ ಹಾಗೂ ಪಾಶ್ಚಾತ್ಯ ಸಾಹಿತ್ಯ ಮೀಮಾಂಸೆಯ ಸಮನ್ವಯದ ವಿಚಾರಗಳನ್ನು ತಮ್ಮ ಗ್ರಂಥಲೇಖನಗಳಲ್ಲಿ ಪ್ರತಿಪಾದಿಸಿದರು. ಬೇಂದ್ರೆಯವರ `ಸಾಹಿತ್ಯದ ವಿರಾಟ್ ಸ್ವರೂಪ ' ಕುವೆಂಪು ಅವರ `ರಸೋವೈಸಃ ' ಪು.ತಿ.ನ. ಅವರ `ಕಾವ್ಯ ಕುತೂಹಲ' ಕೃತಿಗಳು ಈ ಮಾತಿಗೆ ಸಾಕ್ಷಿಯಾಗಿವೆ. ಗೋಕಾಕರ `ಸಾಹಿತ್ಯ ವಿಮರ್ಶೆಯ ಕೆಲವು ತತ್ವಗಳು' ಹಾಗೂ ಮುಗಳಿಯವರ `ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು ' ಶಿವರುದ್ರಪ್ಪನವರ `ವಿಮರ್ಶೆಯ ಪೂರ್ವಪಶ್ಚಿಮ' ,ಗ್ರಂಥಗಳಲ್ಲಿ ಸಾಹಿತ್ಯ ಹಾಗೂ ವಿಮರ್ಶನ ತತ್ವಗಳ ಸ್ವರೂಪ ವಿವೇಚನೆಯನ್ನು ನಾವು ಕಾಣುತ್ತೇವೆ. ತೀ. ನಂ. ಶ್ರೀ.ಯವರ `ಭಾರತೀಯ ಕಾವ್ಯ ಮೀಮಾಂಸೆ ' ಭಾರತೀಯ ಸಾಹಿತ್ಯ ಪರಂಪರೆಯ ಭದ್ರ ನೆಲಗಟ್ಟಾದ ಕಾವ್ಯಮೀಮಾಂಸೆಯ ಸ್ವರೂಪವನ್ನು ವಿವೇಚಿಸಿದರೆ, ವಿ. ಎಂ. ಇನಾಮದಾರರ `ಪಾಶ್ಚಾತ್ಯ ಕಾವ್ಯಮೀಮಾಂಸೆ' ಪಾಶ್ಚಾತ್ಯ ಕಾವ್ಯ ವಿಚಾರಧಾರೆಯನ್ನು ತುಂಬ ಸಮರ್ಥವಾಗಿ ಪ್ರಚುರಪಡಿಸಿದೆ. ನವೋದಯ ಸಂದರ್ಭದಲ್ಲಿ ಕಾವ್ಯಮೀಮಾಂಸೆಯ ಬೆಳವಣಿಗೆಯೂ ಮುಖ್ಯವಾದದ್ದು. ಡಾ. ಕೆ. ಕೃಷ್ಣಮೂರ್ತಿಯವರ ಭಾರತೀಯ ಕಾವ್ಯಮೀಮಾಂಸೆಗೆ ಸಂಬಂಧಿಸಿದ ಗ್ರಂಥಗಳು ಹಾಗೂ ಅವುಗಳ ಅನುವಾದ, ವಿವೇಚನೆ ಒಂದು ಮುಖವಾದರೆ, ಸಿ. ಪಿ. ಕೆ. ಅವರ `ಸಾಹಿತ್ಯ ಪ್ರವೇಶ', `ಪಾಶ್ಚಾತ್ಯಕಾವ್ಯ ಚಿಂತನ', `ಎಲಿಯಟ್ಟಿನ ಉಪನ್ಯಾಸ ಗಳು, ' ಹಲವಾರು ಅನುವಾದಿತ ಗ್ರಂಥಗಳು ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ವಿಚಾರವನ್ನು ಕನ್ನಡ ವಿಮರ್ಶೆ ಪಡೆದುಕೊಳ್ಳುವಂತೆ ಮಾಡಿದ್ದು ಇನ್ನೊಂದು ಮುಖ.

ಸೌಂದರ್ಯಶಾಸ್ತ್ರದ ನೆಲೆಯಲ್ಲಿ ಸಾಹಿತ್ಯದ ಸಮೀಕ್ಷೆಯನ್ನು ನಡೆಸುವ ತತ್ವ ವಿಚಾರವನ್ನು ಮಂಡಿಸುವ ಪರಿಯು ನವೋದಯ ವಿಮರ್ಶೆಯ ವಿಶೇಷತೆಯಾಗಿದೆ. ಗೋಕಾಕರ `ಸೌಂದರ್ಯ ಮೀಮಾಂಸೆ ', ಶಿವರುದ್ರಪ್ಪನವರ `ಸೌಂದರ್ಯ ಸಮೀಕ್ಷೆ', ಕುವೆಂಪು ಬೇಂದ್ರೆಯವರ ಲೇಖನಗಳಲ್ಲಿ ಸೌಂದರ್ಯ ಚರ್ಚೆಯನ್ನು ಕಾಣುತ್ತೇವೆ. ಅನ್ಯ ಸಾಹಿತ್ಯದ ಅನುವಾದಗಳಲ್ಲಿ ಎನ್. ಬಾಲಸುಬ್ರಹ್ಮಣ್ಯ ಅವರ `ಅರಿಸ್ಟಾಟಲನ ಕಾವ್ಯಮೀಮಾಂಸೆ',ಕೆ. ವೆಂಕಟರಾಮಪ್ಪನವರ ಪ್ಲೇಟೋನ `ರಿಪಬ್ಲಿಕ್', ವಿಶಿಷ್ಟವಾದುವು.

ತೌಲನಿಕಕಾವ್ಯ ಮೀಮಾಂಸೆಯ ಚಿಂತನಧಾರೆ ನವೋದಯ ವಿಮರ್ಶನ ಪರಂಪರೆಯಲ್ಲಿ ಎದ್ದುಕಾಣುವ ಅಂಶವಾಗಿದೆ. ಶಿವರುದ್ರಪ್ಪನವರ `ಕಾವ್ಯಾರ್ಥಚಿಂತನ', `ಮಹಾಕಾವ್ಯದ ಸ್ವರೂಪ ', ಎಚ್. ತಿಪ್ಪೇರುದ್ರಸ್ವಾಮಿ ಅವರ `ತೌಲನಿಕ ಕಾವ್ಯವಿಮಾಂಸೆ' ಗ್ರಂಥಗಳು, ಬಿ. ಎಚ್. ಶ್ರೀಧರರ `ಕಾವ್ಯಸೂತ್ರ 'ಈ ನಿಟ್ಟಿನಲ್ಲಿ ಮಹತ್ವದ ಕೃತಿಗಳಾಗಿವೆ. ಮಹಾಕಾವ್ಯ ಪರಂಪರೆಯ ತಾತ್ವಿಕ ಹಿನ್ನೆಲೆಯನ್ನು ಟಿ. ವಿ. ವೆಂಕಟಾಚಲ ಶಾಸ್ತ್ರಿಗಳ `ಮಹಾಕಾವ್ಯ ಲಕ್ಷಣ' ಭಾರತೀಯ ಸಂದರ್ಭದಲ್ಲಿ ವಿದಿತಪಡಿಸುತ್ತದೆ. ನವೋದಯದ ಹಿರಿಯ ಕವಿಗಳ ಕಾವ್ಯಮೀಮಾಂಸೆಯ ವಿವೇಚನೆಯು ನಡೆದಿದೆ. ಶಂಕರ ಮೊಕಾಶಿ ಪುಣೇಕರರ `ಬೇಂದ್ರೆಯವರ ಕಾವ್ಯಮೀಮಾಂಸೆ ', ಸಿ. ಪಿ. ಕೆ. ಅವರ `ಕುವೆಂಪು ಅವರ ಕಾವ್ಯ ಮೀಮಾಂಸೆ' ಹಾಗೂ 'ಪು.ತಿ.ನ. ಕಾವ್ಯಮೀಮಾಂಸೆ ' ಕೃತಿಗಳು ಇದಕ್ಕೆ ನಿದರ್ಶನಗಳಾಗಿವೆ.

ಎಲ್. ಎಸ್. ಶೇಷಗಿರಿರಾಯರ `ಕಾದಂಬರಿ ಹಾಗೂ ಸಾಮಾನ್ಯ ಮನುಷ್ಯ' ಕಥನ ಸಾಹಿತ್ಯ ಸ್ವರೂಪವನ್ನು ವಿವೇಚಿಸಿದೆ.

ನವೋದಯ ಸಾಹಿತಿಗಳು ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಲ್ಲಿ ತಮ್ಮ ಪ್ರತಿಭೆಯನ್ನು ಪ್ರಕಟಿಸುತ್ತಿದ್ದ ಸಂದರ್ಭದಲ್ಲಿ ವಿಮರ್ಶೆಯ ವ್ಯವಸಾಯವನ್ನೂ ನಡೆಸಿದರು. ಅವರ ಮುಂದೆ ಸಂಸ್ಕೃತ ಸಾಹಿತ್ಯ, ಸಾವಿರಾರು ವರ್ಷಗಳ ಪ್ರಾಚೀನ ಕನ್ನಡ ಸಾಹಿತ್ಯ ಪರಂಪರೆಯಿತ್ತು. ಅವುಗಳನ್ನು ಸಹೃದಯತೆಯಿಂದ ರಸಾಸ್ವಾದ ಮಾಡುವ, ಮೌಲ್ಯಮಾಪನ ಮಾಡುವ ಅವಶ್ಯಕತೆ ಇತ್ತು. ಆದುದರಿಂದ ಭಾರತೀಯ ಹಾಗೂ ಪ್ರಾಚೀನ ಕನ್ನಡ ಸಾಹಿತ್ಯ ವಿಮರ್ಶೆಯನ್ನು ನವೋದಯ ಸಾಹಿತ್ಯ ವಿಮರ್ಶಕರು ಕೈಕೊಂಡರು. ಅದರ ಪರಿಣಾಮವಾಗಿ ಬಂದ ವಿಮರ್ಶನ ಕೃತಿಗಳು ವಿಶಿಷ್ಟವಾಗಿವೆ.

ಭಾರತೀಯ ಸಾಹಿತ್ಯದ ಮೇರುಕೃತಿಗಳಾದ ರಾಮಾಯಣ ಮಹಾಭಾರತಗಳ ವಿಮರ್ಶೆಯಲ್ಲಿ ಮಾಸ್ತಿಯವರ `ಆದಿಕವಿ ವಾಲ್ಮೀಕಿ',`ಭಾರತತೀರ್ಥ' ಕೃತಿಗಳು ನಮ್ಮ ಅಭಿಜಾತ ಸಾಹಿತ್ಯದ ವಿಶಿಷ್ಟತೆಗಳನ್ನು ಸಾಂಸ್ಕೃತಿಕ ಅಧ್ಯಯನದ ನೆಲೆಯಲ್ಲಿ ಅರಿಯುವ ಅಗತ್ಯವನ್ನು ತಿಳಿಸುತ್ತವೆ. ಈ ನಿಟ್ಟಿನಲ್ಲಿ ವಿ.ಸೀ. ಅವರ `ವಾಲ್ಮೀಕಿ ರಾಮಾಯಣ' ವು ಗಮನಾರ್ಹವಾದುದು. ಭಾರತೀಯ ರಂಗಭೂಮಿಗೆ ವಿಶಿಷ್ಟ ಕಾಣಿಕೆ ನೀಡಿದ `ಸಂಸ್ಕೃತ ನಾಟಕಗಳು' ವಿಮರ್ಶೆಯನ್ನು ಎ.ಆರ್. ಕೃಷ್ಣಶಾಸ್ತ್ರಿಗಳು ತಮ್ಮ ಅಧ್ಯಯನದಲ್ಲಿ ತೋರಿಸಿಕೊಟ್ಟಿದ್ದಾರೆ. ಡಾ. ಕೆ. ಕೃಷ್ಣಮೂರ್ತಿ ಅವರು `ಸಂಸ್ಕೃತ ಕಾವ್ಯ' ಕೃತಿಯಲ್ಲಿ ಸಂಸ್ಕೃತ ಕವಿಗಳ ಕೊಡುಗೆಯನ್ನು ವಿವರಿಸಿದ್ದಾರೆ. ಮಾಸ್ತಿಯವರು ಕಾಳಿದಾಸನ ಮೇಘ ಸಂದೇಶದ ಬಗೆಗೆ ಬರೆದ ವಿಮರ್ಶೆ, ಎಸ್. ವಿ. ಪರಮೇಶ್ವರ ಭಟ್ಟರ ಭಾಷಾಂತರ ವೃಕ್ಷಕ್ಕೆ ಬೀಜವಾಯಿತೆಂಬುದೂ ಮಾಸ್ತಿಯವರ `ಆದಿಕವಿ ವಾಲ್ಮೀಕಿ' ವಿಮರ್ಶನ ವಿಚಾರಗಳು ಕುವೆಂಪು `ರಾಮಾಯಣ ದರ್ಶನಂ' ಕೃತಿಯ ಸನ್ನಿವೇಶಗಳಿಗೆ ಪ್ರೇರಕವಾಯಿತೆಂಬುದೂ, ಕನ್ನಡ ನವೋದಯ ವಿಮರ್ಶೆ ಸೃಜನಶೀಲ ಸಾಹಿತ್ಯಕ್ಕೆ ಬೀರಿದ ಪ್ರಭಾವದ ನಿದರ್ಶನಗಳಾಗಿವೆ. ಎ. ಆರ್. ಕೃಷ್ಣಶಾಸ್ತ್ರಿಗಳ ಕನ್ನಡ ಸಂಸ್ಕೃತಗಳ ಅದ್ಭುತ ಪಾಂಡಿತ್ಯದ ಫಲವಾಗಿ ಮೂಡಿಬಂದ `ಭಾಸಕವಿ', `ವಚನ ಭಾರತ ಪ್ರಸ್ತಾವನೆ',`ಭಾಷಣಗಳು ಮತ್ತು ಲೇಖನಗಳು' ಅವರ ರಸಜ್ಞತೆಯ ಪ್ರತೀಕಗಳಾಗಿವೆ. ಕೃಷ್ಣಶಾಸ್ತ್ರಿಗಳ `ಬಂಕಿಮಚಂದ್ರ' ಬಂಗಾಳಿ ಭಾಷೆಯಲ್ಲೂ ಅಪರೂಪವಾದ ವಿಮರ್ಶನ ಗ್ರಂಥವಾಗಿದೆ. ಎಸ್. ವಿ. ರಂಗಣ್ಣನವರ `ಕಾಳಿದಾಸನ ನಾಟಕಗಳ ವಿಮರ್ಶೆ' ಹಾಗೆಯೇ ಶ್ರೀರಂಗರ `ಕಾಳಿದಾಸ' ವಿಮರ್ಶೆಯ ಗ್ರಂಥ ವಿ. ಸೀ. ಅವರ `ಸಾಹಿತ್ಯಾಲೋಕನ' ಎ. ಎನ್. ಮೂರ್ತಿರಾಯರ `ಸೀತಾ ಪರಿತ್ಯಾಗ ಪ್ರಸಂಗಗಳು' ಸಂಸ್ಕೃತ ಸಾಹಿತ್ಯದ ಬಗೆಗೆ ನಮ್ಮ ನವೋದಯ ವಿಮರ್ಶಕರ ರಸಜ್ಞತೆಯನ್ನು, ಆಳವಾದ ಅನುಸಂಧಾನವನ್ನು ವ್ಯಕ್ತಪಡಿಸುತ್ತವೆ. ಪ್ರಾಚೀನ ಕವಿ ಕೃತಿಗಳ ವಿಮರ್ಶೆಯಲ್ಲೂ ನವೋದಯ ವಿಮರ್ಶಕರ ಅದ್ಭುತ ಪ್ರತಿಭೆ ಕಾರ್ಯಮಾಡಿದೆ. ಬಿ. ಎಂ. ಶ್ರೀಕಂಠಯ್ಯನವರ ಲೇಖನಗಳು, ಕುವೆಂಪು, ಬೇಂದ್ರೆ, ರಂಗಣ್ಣ, ಗೋಕಾಕ, ಮುಗಳಿ, ತೀ. ನಂ. ಶ್ರೀ ಮೊದಲಾದವರ ವಿಮರ್ಶನ ಗ್ರಂಥ-ಲೇಖನಗಳು ಇದಕ್ಕೆ ಸಾಕ್ಷಿಯಾಗಿವೆ.

ಕುವೆಂಪು ವಿಮರ್ಶೆ ಭಾರತೀಯ ಹಾಗೂ ಪಾಶ್ಚಾತ್ಯ ವಿಮರ್ಶನ ವಿಚಾರಗಳ ಸಮನ್ವಯದ ಫಲವಾಗಿದೆ. `ಕಾವ್ಯವಿಮರ್ಶೆಯಲ್ಲಿ ಪೂರ್ಣದೃಷ್ಟಿ, '' ಮಹೋಪಮೆ', `ಪ್ರತಿಮಾ ಮತ್ತು ಪ್ರತಿಕೃತಿ ', ಕವಿಯಲ್ಲಿ ಅನನ್ಯ ಪರತಂತ್ರತೆ' ಯ ಕುರಿತು ವಿವೇಚಿಸಿದ ಕುವೆಂಪು `ಕುಮಾರವ್ಯಾಸನ ಕರ್ಣ', ಲಕ್ಷ್ಮೀಶನ `ಸೀತಾ ವನವಾಸ', 'ಮಹಾಶ್ವೇತೆಯ ತಪಸ್ಸು', `ತಪೋನಂದನ.', 'ದ್ರೌಪದಿಯ ಶ್ರೀಮುಡಿ', `ಪಂಪನಲ್ಲಿ ಭವ್ಯತೆ ' ಮೊದಲಾದ ವಿಮರ್ಶೆಯ ಲೇಖನಗಳಲ್ಲಿ ವರ್ಣನಾತ್ಮಕ ಹಾಗೂ ಆನ್ವಯಿಕ ವಿಮರ್ಶೆಯನ್ನು ನೀಡಿದ್ದಾರೆ. `ದರ್ಶನ ವಿಮರ್ಶೆ' ಎಂಬುದು ಕುವೆಂಪು ಪರಿಚಯಿಸಿದ ವಿಮರ್ಶಾ ವಿಧಾನ ಗಳಲ್ಲೊಂದಾಗಿದೆ.

ಬೇಂದ್ರೆಯವರು ಸಾಹಿತ್ಯ ಮೀಮಾಂಸೆಯ ವಿಪುಲ ಲೇಖನಗಳ ಜೊತೆಗೆ ಸಂಸ್ಕೃತ, ಕನ್ನಡ ಸಾಹಿತ್ಯ ವಿಮರ್ಶೆಯ ಲೇಖನಗಳಲ್ಲಿ ಕವಿಕಾವ್ಯ ವಿಮರ್ಶೆಯ ಒಳನೋಟಗಳನ್ನು ನೀಡಿದ್ದಾರೆ. `ಕುಮಾರವ್ಯಾಸನ ಉತ್ತರಕುಮಾರ ', ' ನಾದಲೋಲ ಕವಿಲಕ್ಷ್ಮೀಶ ', 'ಸಾಹಿತ್ಯದ ವಿರಾಟ್ ಸ್ವರೂಪ 'ದಲ್ಲಿರುವ ಬೇರೆ ಬೇರೆ ವಿಮರ್ಶೆಯ ಲೇಖನಗಳು ಇದಕ್ಕೆ ಸಾಕ್ಷಿಯಾಗಿವೆ. ಪಾಶ್ಚಾತ್ಯ ವಿಮರ್ಶನ ವಿಚಾರಗಳನ್ನು ತಮ್ಮದಾಗಿಸಿಕೊಂಡಿದ್ದರೂ ಬೇಂದ್ರೆ ಯವರು ನಮ್ಮ ಪ್ರಾಚೀನ ಸಾಹಿತ್ಯವನ್ನು ಭಾರತೀಯ ಕಾವ್ಯಮೀಮಾಂಸೆಯ ನೆಲೆಯಲ್ಲೇ ವಿಮರ್ಶಿಸುವ ವಿಧಾನವನ್ನು ತೋರಿಸಿಕೊಟ್ಟಿದ್ದಾರೆ.

ಪ್ರಾಚೀನ ಸಾಹಿತ್ಯ, ಕವಿ ಕೃತಿಗಳನ್ನು ಮೌಲ್ಯಮಾಪನ ಮಾಡಿ ಅವುಗಳನ್ನು ನಿಷ್ಪಕ್ಷಪಾತ ವಿಮರ್ಶೆಗೆ ಒಳಪಡಿಸಿರುವದು ನವೋದಯ ವಿಮರ್ಶೆಯಲ್ಲಿ ಕಂಡುಬರುತ್ತದೆ. ಎಸ್. ವಿ. ರಂಗಣ್ಣನವರು ಕನ್ನಡದ ಮಹತ್ವದ ಕವಿಗಳ ಶೈಲಿಯನ್ನು ಕುರಿತು ವಿಮರ್ಶಿಸಿದ `ಶೈಲಿ' ಹಾಗೂ `ಹೊನ್ನಶೂಲ' ದ ಅವರ ವಿಚಾರಧಾರೆ ಇದಕ್ಕೆ ನಿದರ್ಶನವಾಗಿದೆ. ಮುದ್ದಣನನ್ನು ಅತಿ ಪ್ರಶಂಸೆ ಮಾಡುವ ಸಂದರ್ಭದಲ್ಲಿ ಅತನ ರಾಮಾಶ್ವಮೇಧದ ಬಗೆಗೆ ರಂಗಣ್ಣನವರು `ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು ' ಎಂದು ತೀಕ್ಷ್ಣವಾಗಿ ಪ್ರತಿಕ್ರಯಿಸಿದ್ದಾರೆ. ರಂಗಣ್ಣನವರು `ಪಾಶ್ಚಾತ್ಯ ಗಂಭೀರ ನಾಟಕಗಳು' ಬೃಹತ್ ಕೃತಿಯಲ್ಲಿ ತೋರಿದ ವಿಮರ್ಶನ ಪ್ರತಿಭೆ ಅನ್ಯಾದೃಶವಾದದ್ದು.

ಸಾಹಿತ್ಯಕೃತಿಗಳನ್ನು ವಿಮರ್ಶಿಸುವಾಗ ತೀರ್ಪು ನೀಡುವ ಪ್ರಯತ್ನವೂ ನಡೆದಿದೆ. ಮುಗಳಿಯವರ ವಿಮರ್ಶೆ ಸಮನ್ವಯ ಸಮತೂಕದಿಂದ ಕೂಡಿರುವ ವಿಮರ್ಶೆಗೆ ಹತ್ತಿರ ವಾದದ್ದು. ಮುಗಳಿಯವರ `ಸಾಹಿತ್ಯೋಪಾಸನೆ,' `ವಿಮರ್ಶೆಯ ವ್ರತ',`ರನ್ನನ ಕೃತಿ ರತ್ನ', 'ಬೇಂದ್ರೆ ಕಾವ್ಯ 'ಮೊದಲಾದವುಗಳಲ್ಲಿ ಮುಗಳಿಯವರ ವಿಮರ್ಶನ ಪ್ರತಿಭೆ ಈ ರೀತಿಯಲ್ಲಿ ಕಾರ್ಯಮಾಡಿದೆ. ಮುಗಳಿಯವರ ವಿಮರ್ಶೆ ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯದ ಕಡೆಗೂ ಸಮಾನವಾದ ಆಸಕ್ತಿಯಿಂದ ಕೂಡಿರುವಂಥದ್ದಾಗಿದೆ.

ನವೋದಯಸಾಹಿತ್ಯ ವಿಮರ್ಶಕರು ಪ್ರಾಚೀನ ಕನ್ನಡ ಕವಿ ಕೃತಿಗಳ ಬಗೆಗೆ ನಿಷ್ಠೆ ಆಸಕ್ತಿ ಇರುವ ಮೌಲಿಕ ವಿಮರ್ಶೆಯನ್ನೂ ಹಾಗೆಯೇ ಆಧುನಿಕ ಸಾಹಿತ್ಯದ ವಿಮರ್ಶೆಯನ್ನೂ ಸಮಾನವಾದ ಆಸಕ್ತಿ ಸಹೃದಯತೆಯಿಂದ ನಡೆಸಿರುವದು ಕಂಡುಬರುತ್ತದೆ. ಕುರ್ತಕೋಟಿ

ಯವರ `ಕುಮಾರವ್ಯಾಸ' ಹಾಗೂ ಬೇಂದ್ರೆ ಕಾವ್ಯಾಧ್ಯಯನ ಗ್ರಂಥ `ಬಾರೋ ಸಾಧನಕೇರಿಗೆ' ಇದಕ್ಕೆ ಸಾಕ್ಷಿಯಾಗಿದೆ. ಹಾಗೆಯೇ ಶಿವರುದ್ರಪ್ಪನವರ `ಪರಿಶೀಲನ ,'` ಗತಿಬಿಂಬ,' 'ನವೋದಯ' ಕೃತಿಗಳೂ ಕಣವಿ ಅವರ `ಸಾಹಿತ್ಯ ಚಿಂತನ,' `ಕಾವ್ಯಾನುಸಂಧಾನ' ಸಮಾಹಿತ, ಗ್ರಂಥಗಳೂ, ಸಿ.ಪಿ.ಕೆ. ಅವರ 'ಪರಿವೀಕ್ಷಣೆ' `ಸಮಾವೇಶ',`ಉಪಚಯ ,' ಕಾವ್ಯಗೌರವ ' ಸುಜನಾ ಅವರ `ಹೃದಯ ಸಂವಾದ' ಇತ್ಯಾದಿ ಕೃತಿಗಳು ಈ ನಿಟ್ಟಿನಲ್ಲಿ ಗಮನಾರ್ಹವಾಗಿವೆ.

ನವೋದಯ ಸಾಹಿತ್ಯ ವಿಮರ್ಶೆಯಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯ ಅಧ್ಯಯನದ ವಿವಿಧ ಗ್ರಂಥಗಳು, ವಿಮರ್ಶನ ವಿಚಾರಗಳು ಮುಖ್ಯವಾಗಿ ಪ್ರಕಟವಾಗಿವೆ. ರಂ. ಶ್ರೀ. ಮುಗಳಿ ಅವರ `ಕನ್ನಡ ಸಾಹಿತ್ಯ ಚರಿತ್ರೆ ', `ಕನ್ನಡ ಸಾಹಿತ್ಯದ ಇತಿಹಾಸ ' ಮರಿಯಪ್ಪ ಭಟ್ಟರ ' ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ ' ತ.ಸು.ಶ್ಯಾಮರಾಯರ `ಜನಪ್ರಿಯ ಕನ್ನಡ ಸಾಹಿತ್ಯಚರಿತ್ರೆ' ಗಳಲ್ಲದೆ ಬೆಂಗಳೂರು ವಿಶ್ವವಿದ್ಯಾಲಯದ `ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ' ಸಂಪುಟಗಳು, `ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ' ಸಂಪುಟಗಳು, ಮೈಸೂರು, ವಿ. ವಿ.` ಕನ್ನಡ ಅಧ್ಯಯನ ಸಂಸ್ಥೆಯ ಸಾಹಿತ್ಯ ಚರಿತ್ರೆ'ಯ ಸಂಪುಟಗಳು ಪ್ರಾಚೀನ ಸಾಹಿತ್ಯದ ವಿಮರ್ಶೆ ಮೌಲ್ಯಮಾಪನದಲ್ಲಿ ಮುಖ್ಯ ಪಾತ್ರವಹಿಸಿವೆ. ಸಿ. ವೀರಣ್ಣನವರ `ಕನ್ನಡ ಸಾಹಿತ್ಯದ ಚಾರಿತ್ರಿಕ ಬೆಳವಣಿಗೆ ' ಪ್ರಗತಿಶೀಲ ವಿಚಾರಧೋರಣೆಯ ಸಾಹಿತ್ಯ ಚರಿತ್ರೆಯಾಗಿದೆ.

ಆಧುನಿಕ ಕನ್ನಡ ಸಾಹಿತ್ಯದ ವಿಮರ್ಶೆಯಲ್ಲಿ ಕೀರ್ತಿನಾಥ ಕುರ್ತಕೋಟಿ ಅವರ `ಯುಗಧರ್ಮ ಹಾಗೂ ಸಾಹಿತ್ಯದರ್ಶನ' ಒಂದು ಮಹತ್ವಪೂರ್ಣ ಗ್ರಂಥ. ಹೊಸಗನ್ನಡದ ವಿವಿಧ ಸಾಹಿತ್ಯ ಪ್ರಕಾರಗಳಾದ ಕಾವ್ಯ, ನಾಟಕ, ಸಣ್ಣಕಥೆ, ಕಾದಂಬರಿ, ಸಾಹಿತ್ಯ ವಿಮರ್ಶೆಯ ವಿಕಾಸದ ಅಧ್ಯಯನ ಕನ್ನಡ ವಿಮರ್ಶೆಯಲ್ಲಿ ನವೀನ ಪ್ರಣಾಲಿಯನ್ನೇ ನಿರ್ಮಿಸಿದೆ. ಆಳವಾದ ಸಾಹಿತ್ಯಾಭ್ಯಾಸ, ವಿಮರ್ಶೆಯ ಹೊಸ ಪರಿಭಾಷೆಯನ್ನು ರೂಪಿಸಿದ ಕುರ್ತುಕೋಟಿಯವರು ಕನ್ನಡ ವಿಮರ್ಶನ ಪರಂಪರೆಯಲ್ಲಿ ಹೊಸ ಆಯಾಮವನ್ನು ಕಲ್ಪಿಸಿದ್ದಾರೆ. ಅವರು ಎತ್ತಿದ ವಿವಿಧ ವಿಷಯಗಳ ಚರ್ಚೆ ಎಲ್ಲರಿಗೂ ಒಪ್ಪಿತವಾಗಿವೆ ಎಂದು ಹೇಳಲಾಗದಿದ್ದರೂ ಆಧುನಿಕ ಸಾಹಿತ್ಯದ ಬೆಳವಣಿಗೆಯಲ್ಲಿ ಆಸಕ್ತರಾದವರು ಆ ನಿಟ್ಟಿನಲ್ಲಿ ಚಿಂತಿಸಲು ಸಾಧ್ಯವಾಗಿದೆ. ನವೋದಯ ಸಾಹಿತ್ಯಕ್ಕೆ ಪ್ರೇರಣೆ ಇಂಗ್ಲೀಷ್ ಸಾಹಿತ್ಯದಿಂದ ದೊರಕಿದೆ. ಅದರ ವಿಸ್ತಾರ ವಿವೇಚನೆ ಎಸ್. ಅನಂತನಾರಾಯಣರ `ಹೊಸಗನ್ನಡ ಕವಿತೆಯ ಮೇಲೆ ಇಂಗ್ಲೀಷ್ ಕಾವ್ಯದ ಪ್ರಭಾವ, ಕೃತಿಯಲ್ಲಿ ನಡೆದಿದೆ. ಹೊಸಗನ್ನಡ ಕಾವ್ಯದ ಪ್ರಮುಖ ಕಾವ್ಯ ಪ್ರಕಾರವಾದ `ಕನ್ನಡದಲ್ಲಿ ಭಾವಗೀತೆಗಳು ' ಅಧ್ಯಯನವನ್ನು ಪ್ರಭುಶಂಕರ ನೀಡಿದ್ದಾರೆ. ನವೋದಯ ಸಾಹಿತಿಗಳ ಸಮಗ್ರ ಸಾಹಿತ್ಯದ ವಿಮರ್ಶೆಯೂ ನಡೆದಿದೆ. ಬೇಂದ್ರೆಯವರ ಸಮಗ್ರ ಅಧ್ಯಯನದ ಜಿ. ಎಸ್. ಆಮೂರರ `ಭುವನದ ಭಾಗ್ಯ ' ಕನ್ನಡ ವಿಮರ್ಶೆಯಲ್ಲಿ ಒಂದು ಮಾದರಿಯ ಅಧ್ಯಯನವಾಗಿದೆ. ಜಿ. ಎಸ್. ಆಮೂರ ಅವರ `ಕೃತಿ ಪರೀಕ್ಷೆ', `ಕಥನ ಸಾಹಿತ್ಯ ಕಾದಂಬರಿ ' ಹಾಗೂ ಇತರ ವಿಮರ್ಶನ ಲೇಖನಗಳಲ್ಲಿ ತುಂಬ ಅಗತ್ಯವಾಗಿ ಆಗಬೇಕಾದ ಕನ್ನಡ ಕಥನ ಸಾಹಿತ್ಯದ ವಿಮರ್ಶೆ ವ್ಯಾಪಕವಾಗಿ ನಡೆಸಿದ್ದು ಕಂಡುಬರುತ್ತದೆ. ಹಾ.ಮಾ.ನಾಯಕರ `ಸಮೀಕ್ಷೆ',`ಸಂದರ್ಭ' ಮೊದಲಾದ ವಿಮರ್ಶೆ ಹಾಗೂ ಮುನ್ನುಡಿ ಗ್ರಂಥಗಳಲ್ಲಿ ಸಹೃದಯ ವಿಮರ್ಶೆ ಇದೆ.

ನವೋದಯ ಸಾಹಿತ್ಯ ವಿಮರ್ಶೆಯ ವೈಶಿಷ್ಟ್ಯಗಳಲ್ಲಿ ತೌಲನಿಕ ವಿಮರ್ಶೆಯೂ ಒಂದಾಗಿದೆ. ಇದು ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯ ಮತ್ತು ಅನ್ಯಭಾಷಾ ಸಾಹಿತ್ಯದ ಹಿನ್ನೆಲೆಯಲ್ಲಿ ನಡೆದಿದೆ. ಟಿ.ವಿ. ವೆಂಕಟಾಚಲ ಶಾಸ್ತ್ರಿಗಳ ಕನ್ನಡ ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ ' ಸಿ. ಪಿ. ಕೆ. ಯವರ 'ಕರ್ನಾಟಕ ಕಾದಂಬರಿಯ ತೌಲನಿಕ ವಿಮರ್ಶಾತ್ಮಕ ಅಧ್ಯಯನ ' ಅದೇ ರೀತಿಯಲ್ಲಿ ಡಿ.ಆರ್. ನಾಗರಾಜರ `ಶಕ್ತಿ ಶಾರದೆಯ ಮೇಳ'. ಎಚ್. ಎಸ್. ರಾಘವೇಂದ್ರರಾಯರ, ಕುವೆಂಪು, ಬೇಂದ್ರೆ, ಪು. ತಿ. ನ. ಕಾವ್ಯದ ತುಲನಾತ್ಮಕ ಅಧ್ಯಯನ, ಜಿ. ಎಸ್. ಆಮೂರರ ತೌಲನಿಕ ವಿಮರ್ಶೆಯ ಲೇಖನಗಳು ವಿಶಿಷ್ಟವಾದುವು. ಶೇಷಗಿರಿರಾಯರ ಸಂಪಾದಕತ್ವದಲ್ಲಿ ಬಂದ `ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ'ಅಪರೂಪದ ಅಧ್ಯಯನವಾಗಿದೆ.

ನವೋದಯ ಸಾಹಿತ್ಯ ವಿಮರ್ಶೆಯನ್ನು ಒಟ್ಟಾಗಿ ನೋಡಿದಾಗ ಕೆಲವು ವೈಶಿಷ್ಟ್ಯಗಳು ಗೋಚರವಾಗುತ್ತವೆ. ಸಾಹಿತ್ಯ ಮೀಮಾಂಸೆಯ ಅಧ್ಯಯನವನ್ನು ವಿಪುಲವಾಗಿ ನೀಡಿರುವದು, ಸಂಸ್ಕೃತ ಹಾಗೂ ಭಾರತೀಯ ಸಾಹಿತ್ಯ. ಕನ್ನಡದ ಪ್ರಾಚೀನ ಸಾಹಿತ್ಯದ ರಸಾತ್ಮಕ, ವರ್ಣನಾತ್ಮಕ, ತೌಲನಿಕ ವಿಮರ್ಶೆಯನ್ನು ವ್ಯಾಪಕವಾಗಿ ನಡೆಸಿದ್ದು, ಭಾರತೀಯ ಹಾಗೂ ಪಾಶ್ಚಾತ್ಯ ಕಾವ್ಯಮೀಮಾಂಸೆಯ ಸಮನ್ವಯದ ಪ್ರಯತ್ನವನ್ನು ಪ್ರತಿಪಾದಿಸಿದ್ದು, ಸೃಜನ ಸಾಹಿತ್ಯದ ರಚನೆ ಮಾಡುತ್ತಲೇ ವಿಮರ್ಶೆಯ ವ್ಯವಸಾಯವನ್ನೂ ನಡೆಸಿದ್ದು, ಸಾಹಿತ್ಯ ವಿಮರ್ಶೆಯ ಪರಂಪರೆಯನ್ನು ಅವಿರಳವಾಗಿ ಮುಂದುವರಿಸಿದ್ದು, ಸಮಕಾಲೀನ ಸಾಹಿತ್ಯದ ಬಗೆಗೆ ಸಹೃದಯತೆಯನ್ನು, ವಿವೇಕವನ್ನು ಬೆಳೆಸಿದ್ದು, ಹಳೆಯ ಪರಂಪರೆಗೆ ಮೌಲ್ಯನಿಷ್ಠೆಯನ್ನು ತೋರಿಸುತ್ತ ಸಾಹಿತ್ಯದ ಹೊಸರೂಪ ಗುಣ ವಿಧಾನಗಳಿಗೆ ಆದರಭಾವವನ್ನು ನಿರ್ಮಾಣ ಮಾಡಿದ್ದು - ಇವೇ ಮುಂತಾದ ಅಂಶಗಳನ್ನು ನಾವು ನವೋದಯ ಸಾಹಿತ್ಯ ವಿಮರ್ಶೆಯಲ್ಲಿ ಕಾಣುತ್ತೇವೆ. ನವೋದಯ ಸಾಹಿತ್ಯದ ಹಿರಿಯ ಲೇಖಕರು ಸಮಕಾಲೀನ ಕವಿ ಕೃತಿಗಳಿಗೆ ಬರೆದ ಮುನ್ನುಡಿಗಳೂ ಶ್ರೇಷ್ಠ ವಿಮರ್ಶೆಯೆನಿಸಿವೆ. ಮಾಸ್ತಿಯವರು ಬೇಂದ್ರೆಯವರ `ನಾದಲೀಲ'ಗೆ ಬರೆದ ಮುನ್ನುಡಿ ಉತ್ಕೃಷ್ಟ ವಿಮರ್ಶೆಗೆ ನಿದರ್ಶನವಾಗಿದೆ. ನವೋದಯ ಸಾಹಿತ್ಯ ವಿಮರ್ಶೆಯಲ್ಲಿ ಬೇರೆ ಬೇರೆ ಕವಿಕೃತಿಗಳ ಕುರಿತಾದ ಪಿಎಚ್.ಡಿ. ಮಹಾಪ್ರಬಂಧಗಳು ವಿಶಿಷ್ಟ ಅಧ್ಯಯನಗಳಾಗಿವೆ.

ಕನ್ನಡದಲ್ಲಿ ನವ್ಯ ಸಾಹಿತ್ಯದ ಆವಿಷ್ಕಾರ ೧೯೫೦ರಷ್ಟೊತ್ತಿಗೆ ಆಯಿತು. ಮುಂಬೈ ಸಾಹಿತ್ಯ ಸಮ್ಮೇಳನದಲ್ಲಿ ಗೋಕಾಕರು ಕನ್ನಡದಲ್ಲಿ ನವ್ಯತೆಯ ಅಗತ್ಯವನ್ನು ಪ್ರತಿಪಾದಿಸಿ ಕಾವ್ಯ ಹೊಸ ಮಾರ್ಗದ ಶೋಧನೆಯತ್ತ ಧಾವಿಸುವದು ಅನಿವಾರ್ಯವೆಂದರು. ಯುಗಧರ್ಮ ಬದಲಾದಾಗ, ಸಂವೇದನೆ ಬದಲಾದಾಗ ಅಭಿವ್ಯಕ್ತಿ, ಸಾಧ್ಯತೆಗಳೂ ಬದಲಾಗಬೇಕಾಗುತ್ತದೆ. ವಿಮರ್ಶನ ಬುದ್ಧಿಯೂ ಪ್ರಖರವಾಗುತ್ತದೆ, ಹೀಗೆ ನವ್ಯತೆ ಕಾವ್ಯದಲ್ಲಿ ಬಂದಂತೆ ವಿಮರ್ಶೆಯಲ್ಲೂ ಬದಲಾವಣೆಯಾಯಿತು. ಗೋಪಾಲಕೃಷ್ಣ ಅಡಿಗರ `ಚಂಡೆಮುದ್ದಳೆ ', ರಾಮಚಂದ್ರಶರ್ಮರ `ಏಳುಸುತ್ತಿನ ಕೋಟೆ' ಗೋಕಾಕರ `ನವ್ಯಕವಿತೆಗಳ' ಮುನ್ನುಡಿಗಳಲ್ಲಿ ನವ್ಯ ವಿಮರ್ಶೆಯ ವಿಚಾರಗಳು ಮೊದಲಿಗೆ ಪ್ರತಿಪಾದಿತವಾದವು.

ನವ್ಯಲೇಖಕರು ನವ್ಯಸಾಹಿತ್ಯ ಜಿಜ್ಞಾಸೆಯನ್ನು ತಮ್ಮ ಗ್ರಂಥ ಲೇಖನಗಳಲ್ಲಿ ವಿಶದ ಪಡಿಸಿದ್ದು ಮುಖ್ಯವಾದ ಸಂಗತಿ. ಗೋಕಾಕರ `ನವ್ಯತೆ ಹಾಗೂ ಕಾವ್ಯ ಜೀವನ ' ಅಡಿಗರ

`ಮಣ್ಣಿನ ವಾಸನೆ' ಇವುಗಳಲ್ಲಿ ಮುಖ್ಯವಾದುವು. `ಸಾಕ್ಷಿ',`ಸಂಕ್ರಮಣ ',`ಮನ್ವಂತರ ' `ಕವಿತಾ ''ಸಮೀಕ್ಷಕ' ಮೊದಲಾದ ಪತ್ರಿಕೆಗಳಲ್ಲಿ ನವ್ಯವಿಮರ್ಶೆಯ ತಾತ್ವಿಕ ಹಾಗೂ ಪ್ರಾಯೋಗಿಕ ವಿಮರ್ಶನ ಲೇಖನಗಳು ವಿಪುಲವಾಗಿ ಪ್ರಕಟವಾಗಿವೆ. ನವೋದಯ ಸಾಹಿತ್ಯ ಸಂದರ್ಭದಲ್ಲಿ ಪ್ರಬುದ್ಧ ಕರ್ನಾಟಕ, ಜಯಕರ್ನಾಟಕ ಜಯಂತಿ, ಜೀವನ ಪತ್ರಿಕೆಗಳಂತೆ, ಪತ್ರಿಕೆಗಳು ಕನ್ನಡ ನವ್ಯವಿಮರ್ಶೆಯ ಬೆಳವಣಿಗೆಯಲ್ಲಿ ಮುಖ್ಯ ಪಾತ್ರ ವಹಿಸಿವೆ. ಈಗಲೂ ವಾರಪತ್ರಿಕೆಗಳ ಪುರವಣಿಗಳಲ್ಲಿ ಪುಸ್ತಕ ವಿಮರ್ಶೆಯ ಅಂಕಣ ಮುಂದುವರಿದಿದೆ.

ಅಡಿಗರು ಸಾಕ್ಷಿಯ ಮೊದಲ ಸಂಚಿಕೆಯ ಮುನ್ನುಡಿಯಲ್ಲಿ ಸಾಹಿತ್ಯ ವಿಮರ್ಶೆಯ ಬಗೆಗೆ ಹೇಳಿದ ಮಾತುಗಳು ಇಂದಿಗೂ ಅರ್ಥಪೂರ್ಣವಾಗಿವೆ : ``ವಿಮರ್ಶೆಯ ಮೊದಲನೆಯ ಕೆಲಸ ಕೃತಿಯ ಆಮೂಲಾಗ್ರವಾದ ಅಭ್ಯಾಸ. ಈ ಅಭ್ಯಾಸಕ್ಕೆ ತಕ್ಕ ಊಹಾಶಕ್ತಿ, ಭಾಷಾಜ್ಞಾನ, ವಿನಯ ಮತ್ತು ತಾಳ್ಮೆ ಅತ್ಯಗತ್ಯ. ಕೃತಿ ಒಂದು ಸ್ವತಂತ್ರ ವಸ್ತು. ಈವರೆಗಿನ ನಮ್ಮ ವಿಮರ್ಶೆ ಸ್ನೇಹಿತರ ಬಗ್ಗೆ ದಾಕ್ಷಿಣ್ಯ, ದೊಡ್ಡವರ ಬಗ್ಗೆ ಭಯ, ಮೂರನೆಯವರ ಬಗ್ಗೆ ಔದಾಸೀನ್ಯ ಅಥವಾ ನಿಷ್ಕಾರಣ ವಿರೋಧ ಇವುಗಳಿಂದ ಸಾಮಾನ್ಯವಾಗಿ ಮಲಿನವಾಗಿದೆ ಎಂದರೆ ವಿಮರ್ಶಕನ ಕಾರ್ಯ ವ್ಯಕ್ತಿನಿಷ್ಠವಾಗಿತ್ತೇ ಹೊರತು ಕೃತಿನಿಷ್ಠವಾಗಿರಲಿಲ್ಲ. ಒಟ್ಟಿನಲ್ಲಿ ಪ್ರಾಮಾಣಿಕವಾದ ಕೃತಿ ವಿಮರ್ಶೆಗೆ ತಕ್ಕ ವಾತಾವರಣ ನಮ್ಮಲ್ಲಿ ಸಿದ್ಧವಾಗದೆ ಹೋಯಿತು. ವಸ್ತುನಿಷ್ಠ ಯೋಚನೆ ವ್ಯವಹಾರಗಳಿಲ್ಲದೆ ಕೃತಿನಿಷ್ಠ ವಾಚನ ವಿಮರ್ಶನ ಗಳಿಲ್ಲದೆ ಬುದ್ಧಿ ಜೀವನ ವಿಕಾಸವಾಗುವದಿಲ್ಲ. ಹೃದಯ ಶುದ್ಧವಾಗುವದಿಲ್ಲ. ಬದಲಾಗಿ ಬುದ್ಧಿ ದಾರಿದ್ರ್ಯ ಹೃದಯಕಾರ್ಪಣ್ಯ ಇವು ಹುಟ್ಟುತ್ತವೆ.'' ಹೀಗೆ ನವ್ಯ ವಿಮರ್ಶೆ ವಸ್ತು ನಿಷ್ಠವಾದ ಆಲೋಚನೆಯನ್ನೂ ಕೃತಿನಿಷ್ಠವಾದ ವಿಮರ್ಶೆಯನ್ನೂ ನಿರ್ಮಿಸಲು ಮುಂದಾಯಿತು. ನವ್ಯ ವಿಮರ್ಶನ ಪರಂಪರೆಯಲ್ಲಿ ಉತ್ಕೃಷ್ಟ ವಿಮರ್ಶೆಯ ಕೃತಿಗಳು ಬಂದಿವೆ. ಯು. ಆರ್. ಅನಂತಮೂರ್ತಿ ಅವರ ಪ್ರಜ್ಞೆ ಮತ್ತು ಪರಿಸರ ಮಾರ್ಕ್ಸ್‌ವಾದ ಹಾಗೂ ಅಸ್ತಿತ್ವ ವಾದದ ನೆಲೆಯಲ್ಲಿ ವಿಚಾರವನ್ನು ಮಂಡಿಸುತ್ತದೆ. ಬದಲಾಗುತ್ತಿರುವ `ಕನ್ನಡ ಕಾವ್ಯ ಮಾರ್ಗ'``ಅಡಿಗರ `ಭೂಮಿಗೀತ'`` ಭಾರತೀಯ ಸಂಸ್ಕೃತಿ ಮತ್ತು ಲೇಖಕ' ಇತ್ಯಾದಿ ಲೇಖನಗಳು ಮುಖ್ಯವಾಗಿವೆ.

ಅನಂತಮೂರ್ತಿಯವರ `ಸಮಕ್ಷಮ'``ಪೂರ್ವಾಪರ 'ದಲ್ಲೂ ನವ್ಯ ವಿಮರ್ಶೆಯ ಲೇಖನಗಳಿವೆ. ಎಂ. ಜಿ. ಕೃಷ್ಣಮೂರ್ತಿ ಅವರ `ಆಧುನಿಕ ಭಾರತೀಯ ಸಾಹಿತ್ಯ ' ಹಾಗೂ `ಕೃತಿ ಸಂಸ್ಕೃತಿ ' ಕೃತಿನಿಷ್ಠ ವಿಮರ್ಶೆಯ ಆಶಯವನ್ನು ಸತ್ವಶಾಲಿ ವಿಚಾರಗಳ ಮೂಲಕ ಪ್ರತಿಪಾದಿಸುತ್ತವೆ. ಅಡಿಗರ `ಭೂಮಿಗೀತ' ಅನಂತಮೂರ್ತಿ ಅವರ `ಸಂಸ್ಕಾರ,' ಕುವೆಂಪು ಅವರ 'ಕಾನೂರಸುಬ್ಬಮ್ಮ ಹೆಗ್ಗಡತಿ' , ಮಾಸ್ತಿಯವರ ' ಸಣ್ಣಕಥೆಗಳು' , ರಾವಬಹಾದ್ದೂರರ ' ಗ್ರಾಮಾಯಣ' ಮೊದಲಾದ ಲೇಖನಗಳಲ್ಲಿ ಎಂ. ಜಿ. ಕೆ. ಅವರ ಹೊಸ ಆಲೋಚನೆಯಿದೆ. ಕೀರ್ತಿನಾಥ ಕುರ್ತಕೋಟಿ ಅವರ `ನವ್ಯಕಾವ್ಯ ಪ್ರಯೋಗ' ಸಾಹಿತ್ಯದಲ್ಲಿ ವೈಚಾರಿಕತೆ, 'ಅಸಂಗತ ನಾಟಕಗಳು ' ನವ್ಯ ವಿಮರ್ಶೆಗೆ ಹೊಸ ಆಯಾಮ ಒದಗಿಸಿವೆ. `ವಿಮರ್ಶೆಯ ವಿನಯ' ದ ಸಂಪುಟಗಳಲ್ಲೂ `ಸಮ್ಮುಖ ' ದ ಅಂಕಣಗಳಲ್ಲೂ ಕನ್ನಡದ ಮಹತ್ವದ ಕವಿ ಲೇಖಕ ಕೃತಿಗಳ ಮೌಲ್ಯಮಾಪನ, ನೂತನ ವಿಮರ್ಶನ ವಿಚಾರಧಾರೆಯನ್ನು ನೀಡಿದ್ದಾರೆ. ಜಿ. ಎಸ್. ಆಮೂರ ಅವರು `ಅರ್ಥಲೋಕ', ` ವಿಮರ್ಶೆಯ ವ್ಯವಸಾಯ'ದ ಹಾಗೂ

ಇತರ ವಿಮರ್ಶೆಯ ಲೇಖನಗಳಲ್ಲಿ ಕಥನ ಸಾಹಿತ್ಯಕ್ಕೆ ಸಂಬಂಧಿಸಿದ ವಸ್ತುನಿಷ್ಠ ವಿಮರ್ಶೆಯನ್ನು ಮಾಡಿದ್ದಾರೆ.

ಗಿರಡ್ಡಿ ಗೋವಿಂದರಾಜರ `ಸಣ್ಣ ಕಥೆಯ ಹೊಸ ಒಲವುಗಳು ,'` ನವ್ಯ ವಿಮರ್ಶೆ', `ಕಾದಂಬರಿ ವಸ್ತು ಮತ್ತು ತಂತ್ರ ''ಸಾತತ್ಯ ' ವಿಮರ್ಶೆಯ ಗ್ರಂಥಗಳು ನವ್ಯ ವಿಮರ್ಶೆಯ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆಗಳಾಗಿವೆ. ಗಿರಡ್ಡಿಯವರ ಪ್ರಮುಖ ಆಸಕ್ತಿ ಕಥನ ಸಾಹಿತ್ಯದ ಕಡೆಗೆ ವಿಶೇಷವಾದದ್ದಾಗಿದೆ. ಬುದ್ದಣ್ಣ ಹಿಂಗಮಿರೆ ಅವರ `ಹೊಸಕಾವ್ಯ ಹೊಸದಿಕ್ಕು ' ನವ್ಯ ಕಾವ್ಯದ ವಿಮರ್ಶೆಯಲ್ಲಿ ಮಹತ್ವಪೂರ್ಣವಾದದ್ದು. `ಹೊಸ ಜನಾಂಗದ ಕವಿತೆಗಳು ' `ಅಕ್ಷರ ಹೊಸಕಾವ್ಯ 'ದ ಪ್ರಸ್ತಾವನೆಗಳು ನವ್ಯಕಾವ್ಯದ ವಿಮರ್ಶೆಯಾಗಿವೆ. ಶಾಂತಿನಾಥ ದೇಸಾಯಿಯವರ `ಸಾಹಿತ್ಯ ಮತ್ತು ಭಾಷೆ'` ನವ್ಯ ಸಾಹಿತ್ಯ ದರ್ಶನ 'ಗಳಲ್ಲಿ ನವ್ಯ ಸಾಹಿತ್ಯದ ವ್ಯಾಪಕ ವಿಮರ್ಶೆ ಇದೆ. ಜಿ. ಎಚ್. ನಾಯಕ ಅವರ `ಅನಿವಾರ್ಯ ''ನಿಜದನಿ ' ಹಾಗೆಯೆ ಲಂಕೇಶರ` ಪ್ರಸ್ತುತ' `ನಾಟಕಗಳಲ್ಲಿ ನವ್ಯತೆ ' ಮೊಕಾಶಿ ಅವರ `ಸಾಹಿತ್ಯ ಮತ್ತು ಅಭಿರುಚಿ' ರಾಮಚಂದ್ರ ಶರ್ಮ ಅವರ `ಪ್ರತಿಭಾ ಸಂದರ್ಶನ' ಎಚ್. ಎಸ್. ರಾಘವೇಂದ್ರರಾಯರ `ನಿಲುವು'` ವಿಶ್ಲೇಷಣೆ'` ಪ್ರಗತಿಶೀಲತೆ ' ಬಿದರಕುಂದಿ ಅವರ ವಿಮರ್ಶೆಯ ಲೇಖನಗಳು ಈ ಎಲ್ಲ ಗ್ರಂಥಗಳಲ್ಲಿ ನವ್ಯ ವಿಮರ್ಶೆಯ ಪರಂಪರೆಯನ್ನು ನಾವು ಕಾಣುತ್ತೇವೆ. ಟಿ. ಪಿ. ಅಶೋಕ ಅವರ ವ್ಯಾಪಕ ಅಧ್ಯಯನ ಒಳನೋಟಗಳನ್ನು ಅವರ `ಸಾಹಿತ್ಯ ಸಂದರ್ಭ'`ನವ್ಯ ಕಾದಂಬರಿಯ ಪ್ರೇರಣೆಗಳು ''ಪುಸ್ತಕ ಪ್ರೀತಿ ''ಕಾರಂತರ ಕಾದಂಬರಿಗಳಲ್ಲಿ ಆಧುನೀಕರಣದ ಪ್ರಕ್ರಿಯೆ ' ಮೊದಲಾದ ವಿಮರ್ಶೆಯ ಗ್ರಂಥಗಳಲ್ಲಿ ಕಾಣುತ್ತೇವೆ. ಎಲ್. ಎಸ್. ಶೇಷಗಿರಿರಾಯರ `ಸಾಹಿತ್ಯ ವಿಶ್ಲೇಷಣೆ ' ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ `ಅನುಸಂಧಾನ' ಮಾಧವ ಕುಲಕರ್ಣಿ ಅವರ `ತುಡಿತ''ಜೀವಂತ ಧೋರಣೆಗಳು ' ನವ್ಯ ಸಾಹಿತ್ಯ ವಿಮರ್ಶೆಯ ಮುಂದುವರಿಕೆಗಳಾಗಿವೆ. ಎಲ್. ಎಸ್. ಶೇಷಗಿರಿರಾಯರ `ಪಾಶ್ಚಾತ್ಯ ಸಾಹಿತ್ಯ ವಿಹಾರ ' `ಇಂಗ್ಲೀಷ ಭಾಷೆಯಲ್ಲಿ ಆಧುನಿಕ ಸಾಹಿತ್ಯ ವಿಮರ್ಶೆ' ಹಾಗೂ ಎಸ್. ಬಿ. ಮಿಣಜಗಿ ಅವರ ಟಿ. ಎಸ್. ಎಲಿಯಟ್ ಗ್ರಂಥಗಳು, ಪಾಶ್ಚಾತ್ಯ ವಿಮರ್ಶನ ತತ್ವಗಳ ,ತಾತ್ವಿಕ ಭೂಮಿಕೆಯನ್ನು ವಿದಿತಪಡಿಸುತ್ತವೆ. ಓ. ಎಲ್. ನಾಗಭೂಷಣಸ್ವಾಮಿಯವರ `ವಿಮರ್ಶೆಯ ಪರಿಭಾಷೆ' ಒಂದು ಅಪೂರ್ವ ಗ್ರಂಥ. ಸಿ. ಪಿ. ಕೆ. ಅವರ ಸಾಹಿತ್ಯ ಮತ್ತು ಮನೋವಿಜ್ಞಾನ, ಅವೆರಡರ ಸಂಬಂಧದ ಸ್ವರೂಪವನ್ನು ಚರ್ಚಿಸುತ್ತದೆ.

ನವ್ಯ ವಿಮರ್ಶೆಯಲ್ಲಿ ನವೋದಯ ಸಾಹಿತ್ಯದಂತೆ ಕಾವ್ಯ ವಿಮರ್ಶೆ ಹೆಚ್ಚಾಗಿ ಆದದ್ದು ಕಂಡುಬರುತ್ತದೆ. ಲಕ್ಷ್ಮೀನಾರಾಯಣ ಭಟ್ಟರ `ಹೊರಳು ದಾರಿಯಲ್ಲಿ ಕಾವ್ಯ ',` ಕಾವ್ಯ ಶೋಧನ' ದಲ್ಲಿ ಅಡಿಗರ ಕಾವ್ಯದ ವಿಸ್ತಾರ ವಿಮರ್ಶೆ ಇದೆ. ನವ್ಯಕಥೆಗಾರರಾದ ಯಶವಂತ ಚಿತ್ತಾಲರು `ಸೃಜನಶೀಲತೆ ಮತ್ತು ನಾನು ' ಗ್ರಂಥದಲ್ಲಿ ಸಾಹಿತ್ಯ ಜಿಜ್ಞಾಸೆ ಮಂಡಿಸಿದ್ದಾರೆ. ಇದೇ ಮಾದರಿಯಲ್ಲಿ ಭೈರಪ್ಪನವರ `ಸಾಹಿತ್ಯ ಮತ್ತು ಪ್ರತೀಕ''` ನಾನೇಕೆ ಬರೆಯುತ್ತೇನೆ ' ಗ್ರಂಥಗಳು ಸೃಜನಶೀಲ ಲೇಖಕನ ವೈಚಾರಿಕ ನಿಲುವುಗಳನ್ನು ತಿಳಿಸುತ್ತವೆ. ಅಡಿಗರ ಸಮಗ್ರ ಗದ್ಯದ ವಿಮರ್ಶೆ ವೈಚಾರಿಕ ಸಂಪನ್ನತೆಯ ಪ್ರತೀಕವಾಗಿದೆ.

ಕನ್ನಡ ವಿಮರ್ಶೆಯಲ್ಲಿ ಆನ್ವಯಿಕ ವಿಮರ್ಶೆಯೂ ಬೆಳವಣಿಗೆ ಹೊಂದಿದೆ. ಕವಿಯ ಕವಿತೆಯನ್ನು ಇಟ್ಟುಕೊಂಡು ಅದರ ಪ್ರಾಯೋಗಿಕ ವಿಮರ್ಶೆ ಮಾಡುವದರ ಮೂಲಕ ಹೊಸ ಆಲೋಚನೆಯನ್ನು ಪ್ರಸ್ತುತಪಡಿಸಲು ಸಾಧ್ಯವಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದ `ಪ್ರಾಯೋಗಿ ವಿಮರ್ಶೆ' ಯಲ್ಲಿ ಇದಕ್ಕೆ ಸಂಬಂಧಿಸಿದ ತಾತ್ವಿಕ ವಿವೇಚನೆ ಇದೆ. ಸಿ. ಪಿ.ಕೆ. ಅವರ `ಆಲೋಚನ ', 'ಸಾಹಿತ್ಯ ಮನನ' `ಕಲಾಪ ' ಮೊದಲಾದವುಗಳ ಲೇಖನಗಳು ಗಮನಾರ್ಹವಾದದ್ದು. ಡಿ. ಆರ್. ನಾಗರಾಜ ಅವರ `ಅಮೃತ ಮತ್ತು ಗರುಡ', ಎಚ್. ಎಸ್. ವೆಂಕಟೇಶಮೂರ್ತಿಯವರ `ನೂರು ಮರ ನೂರು ಸ್ವರ' , ಪು. ನ. ಜವರಯ್ಯನವರ `ಪ್ರತಿಪಾದನೆ' ಶಿವರಾಮು ಕಾಡನಕುಪ್ಪೆ ಅವರ `ಸಂವಹನ' ಎಸ್. ಶಿವಾನಂದ ಅವರ `ವಿಮರ್ಶೆಯ ಸವಾಲುಗಳು ' ನವ್ಯ ವಿಮರ್ಶೆಯ ದಾರಿಯಲ್ಲಿ ಹೊಸ ಆಲೋಚನೆಗಳನ್ನು ಪ್ರಸ್ತುತಪಡಿಸಿವೆ. ಸಿದ್ಧಲಿಂಗ ಪಟ್ಟಣಶೆಟ್ಟಿಯವರ ಕನ್ನಡ ನಾಟಕ ರಂಗಭೂಮಿಗೆ ಸಂಬಂಧಿಸಿದ ಲೇಖನಗಳೂ ಗಮನಾರ್ಹವಾದದ್ದು.

ಪ್ರತಿಮೆ, ಸಂಕೇತ, ಆಡುಮಾತುಗಳ ಬಳಕೆಯ ಆಶಯಗಳನ್ನು ಹೊತ್ತ ನವ್ಯಸಾಹಿತ್ಯ, ವಿಮರ್ಶೆಯಲ್ಲೂ ಅನೇಕ ವಿಶಿಷ್ಟತೆಗಳನ್ನು ಸಾಧಿಸಿದೆ. ಸಾಹಿತಿಯ ವ್ಯಕ್ತಿತ್ವ, ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆಗಿಂತ ಆತನ ವ್ಯಕ್ತಿತ್ವದ ನಿಜವಾದ ಪ್ರತಿಫಲನ ಆತನ ಕೃತಿಯ ಮೂಲಕವೇ ಆದುದರಿಂದ ಸಾಹಿತ್ಯಕೃತಿಗಳನ್ನು ವಸ್ತುನಿಷ್ಠವಾಗಿ, ಕೃತಿನಿಷ್ಠ ನಿಲುವುಗಳ ಮೂಲಕ ಅವಲೋಕಿಸಿ ವಿಮರ್ಶಿಸುವದರ ಜೊತೆಗೆ ಕೃತಿಯ ಅಂತಸ್ಸತ್ವವನ್ನು ವಿವೇಚಿಸುವ ಧೋರಣೆಯನ್ನು ಪ್ರಕಟಿಸಿದ್ದು ಎದ್ದುಕಾಣುವ ಅಂಶ. ಬಹಳ ಮುಖ್ಯವಾದದ್ದು ವಿಮರ್ಶೆಯಲ್ಲಿ ಹೊಸ ಮಾತು, ಶಬ್ದಾರ್ಥಗಳ ಬಳಕೆ ಮಾಡಿರುವದಾಗಿದೆ.

ನವ್ಯ ವಿಮರ್ಶೆ ರೊಮ್ಯಾಂಟಿಕ್ ಸಾಹಿತ್ಯಕ್ಕೆ ವಿಮರ್ಶೆಗೆ ಪ್ರತಿಕ್ರಿಯೆಯ ರೂಪದಲ್ಲಿ ಪ್ರಕಟವಾದದ್ದಲ್ಲದೆ ಪಾಶ್ಚಾತ್ಯ ವಿಚಾರ ತತ್ವಪ್ರಣಾಲಿಗಳ ಪ್ರಭಾವದಿಂದ ಅದರಲ್ಲೂ ಮುಖ್ಯವಾಗಿ ಮಾರ್ಕ್ಸವಾದ, ಅಸ್ತಿತ್ವವಾದದ ನಿಲವುಗಳ ಮೂಲಕ ಬದ್ಧತೆಯನ್ನು ಪಡೆದುಕೊಂಡಿದೆ.

ಎಪ್ಪತ್ತರ ದಶಕದಲ್ಲಿ ಆರಂಭವಾದ ದಲಿತಸಾಹಿತ್ಯ ಚಳುವಳಿಯ ಸಂದರ್ಭದಲ್ಲಿ ಸಾಹಿತ್ಯ ಸಾಮಾನ್ಯ ಮನುಷ್ಯನನ್ನು ಕೇಂದ್ರವಾಗಿಟ್ಟುಕೊಳ್ಳಬೇಕೆಂಬ ಚರ್ಚೆ ಮುಖ್ಯ ಧ್ವನಿಯಾಯಿತು. ಅದೇ ಸಂದರ್ಭದಲ್ಲಿ ಪ್ರಗತಿ ಪಂಥದ ಸಮಾವೇಶವೂ ಜರುಗಿತು. ದಲಿತ ಸಾಹಿತ್ಯದ ಚರ್ಚೆಯ ಪರಿಣಾಮ ಸಾಹಿತ್ಯವಿಮರ್ಶೆಯಲ್ಲೂ ಧ್ವನಿತವಾಯಿತು. ದಲಿತ ಲೇಖಕರ ಕೃತಿಗಳು ವಿಮರ್ಶಕರ ಚಿಂತನೆಗೆ ವಸ್ತುವಾದವು. ದೇವನೂರು ಮಹಾದೇವ, ಸಿದ್ಧಲಿಂಗಯ್ಯ ಮೊದಲಾದವರ ಕೃತಿಗಳ ವಿಮರ್ಶೆ ಇದಕ್ಕೆ ಸಾಕ್ಷಿಯಾಗಿವೆ. ರಂಜಾನ ದರ್ಗಾ ಅವರ `ಸಾಹಿತ್ಯ ಮತ್ತು ಸಮಾಜ ' ಸಾಮಾಜಿಕ ಆಶಯವನ್ನು ಒತ್ತಿ ಹೇಳಿದ್ದು ಇಲ್ಲಿ ಗಮನಾರ್ಹ.

ಸಮಾಜವಾದಿ ನಿಲುವು ಆಶಯಗಳನ್ನು ಪಡೆದುಕೊಂಡ ಬಂಡಾಯ ಸಾಹಿತ್ಯ ತನ್ನದೆ ಆದ ವಿಮರ್ಶನ ನಿಲುವುಗಳನ್ನು ಹೊಂದಿದೆ. `ಬಂಡಾಯ ಸಾಹಿತ್ಯ ವಿಶೇಷಾಂಕ ' ದಲ್ಲಿಯ

ಚಂದ್ರಶೇಖರ ಪಾಟೀಲ, ಎಸ್. ಶಿವಾನಂದ, ಜಿ. ರಾಮಕೃಷ್ಣ ಮೊದಲಾದವರ ಲೇಖನಗಳಲ್ಲೂ ಪುರುಷೋತ್ತಮ ಬಿಳಿಮಲೆ ಅವರ `ಬಂಡಾಯ ಸಾಹಿತ್ಯದ ತಾತ್ವಿಕ ನೆಲೆಗಳು' ಹಾಗೂ ಬಸವರಾಜ ಸಬರದರ `ಹೊಸದಿಕ್ಕು'ಗಳಲ್ಲಿ ಬಂಡಾಯ ಸಾಹಿತ್ಯದ ವಿಮರ್ಶನ ವಿಚಾರ ಧಾರೆಯಿದೆ. ಬಿ. ರಾಜಶೇಖರ ಅವರು `ರುಜುವಾತು' ದಲ್ಲಿ ಬರೆದ ಲೇಖನಗಳು, ಕೆ. ವಿ. ನಾರಾಯಣರ `ಸಾಹಿತ್ಯ ಮತ್ತು ಸಾಮಾಜಿಕ ನಿಲುವುಗಳು', ಬರಗೂರು ರಾಮಚಂದ್ರಪ್ಪನವರ ವಿಮರ್ಶನ ಲೇಖನಗಳು ಬಂಡಾಯ ಸಾಹಿತ್ಯ ಸಂಘಟನೆಯ ವಿವಿಧ ಪ್ರಕಟನೆಗಳಲ್ಲಿ ಬಂಡಾಯ ಸಾಹಿತ್ಯ ವಿಮರ್ಶೆ ಚೆಲ್ಲವರಿದಿದೆ. ಡಿ. ಆರ್. ನಾಗರಾಜ, ಮ. ನ. ಜವರಯ್ಯ, ಚನ್ನಣ್ಣ ವಾಲೀಕಾರ, ಸಿ. ವೀರಣ್ಣ, ವಿಜಯಾ ದಬ್ಬೆ, ಕಿ. ರಂ. ನಾಗರಾಜ, ಜಿ. ಎಸ್. ಅವಧಾನಿ, ಅರವಿಂದ ಮಾಲಗತ್ತಿ, ಮಲ್ಲಿಕಾ ಘಂಟಿ, ಬಿಳಿಮಲೆ, ಕೆ. ಎಸ್. ಭಗವಾನ್, ಸಿದ್ಧಾಶ್ರಮ, ಬಸವರಾಜ ಸಬರದ, ಚಂಪಾ, ಬರಗೂರ ರಾಮಚಂದ್ರಪ್ಪ ಮೊದಲಾದವರು ಬಂಡಾಯ ವಿಮರ್ಶೆಯ ತಾತ್ವಿಕ ನೆಲೆಗಳನ್ನೂ ಕೃತಿ ವಿಮರ್ಶೆಯನ್ನು ಭದ್ರಗೊಳಿಸಲು ಶ್ರಮಿಸಿದ್ದಾರೆ. ಪತ್ರಿಕಾ ವಿಮರ್ಶೆಯಲ್ಲಿ ಮುರಳೀಧರ, ಉಪಾಧ್ಯ, ಹಿರಿಯಡ್ಕ, ಕೇಶವ ಶರ್ಮ, ಮಲ್ಲೇಪುರಂ, ನರಹಳ್ಳಿ ಬಾಲಸುಬ್ರಹ್ಮಣ್ಯ, ಬಿ. ವಿ. ಆರ್ತಿಕಚೆ ಮೊದಲಾದವರ ವಿಮರ್ಶೆಗಳು ಗಂಭೀರ ಪ್ರಯತ್ನಗಳಾಗಿವೆ.

ಆಧುನಿಕ ಕನ್ನಡದ ಇತ್ತೀಚಿನ ವಿಮರ್ಶೆಯಲ್ಲಿ ಸ್ತ್ರೀವಾದಿ ಧೋರಣೆಯೂ ಪ್ರಮುಖ ಆಶಯವಾಗಿದೆ. ಪಾಶ್ಚಾತ್ಯ ದೇಶಗಳಲ್ಲಿ ಸ್ತ್ರೀವಾದಿ ಚಳುವಳಿ ಹೆಣ್ಣಿನ ಸ್ವಾತಂತ್ರ್ಯ, ಸಮಾನತೆ, ಅಭಿವ್ಯಕ್ತಿಯ ಸಾಧ್ಯತೆಗಳಿಗೆ, ಹಕ್ಕುಗಳಿಗೆ ಹೋರಾಟ ನಡೆಸಿದ ಅಲೆಯ ಪರಿಣಾಮವು ಭಾರತದಲ್ಲಿ, ಕನ್ನಡದಲ್ಲಿ ಆದದ್ದನ್ನು ನಾವು ನೋಡುತ್ತೇವೆ. ಕನ್ನಡದ ಮಹಿಳಾ ಸಾಹಿತ್ಯ ವಿಪುಲವಾಗಿದ್ದರೂ ಅದನ್ನು ಸಾಹಿತ್ಯ ವಿಮರ್ಶಕರು ಸರಿಯಾದ ಚಿಂತನೆಗೆ ವಿಮರ್ಶೆಗೆ ಒಳಪಡಿಸದ್ದರಿಂದ ಸ್ತ್ರೀ ಸಾಹಿತ್ಯವನ್ನು ಸ್ತ್ರೀವಾದಿ ನೆಲೆಯಲ್ಲಿ ವಿಮರ್ಶಿಸುವ ಧೋರಣೆ ಹುಟ್ಟಿಕೊಂಡಿದೆ. ತೇಜಸ್ವಿನಿ ಹಾಗೂ ಸೀಮಂತಿನಿ ನಿರಂಜನ ಸಂಪಾದಿಸಿದ `ಸ್ತ್ರೀವಾದಿ ಸಾಹಿತ್ಯ ವಿಮರ್ಶೆ ' ಈ ದಿಶೆಯಲ್ಲಿ ತಾತ್ವಿಕ ವಿಚಾರವನ್ನು ಮಂಡಿಸುತ್ತದೆ. ವಿಜಯಾ ದಬ್ಬೆ ತಮ್ಮ ಲೇಖನಗಳಲ್ಲಿ ಮಹಿಳಾ ಸಾಹಿತ್ಯವನ್ನು ಗಂಭೀರ ವಿಮರ್ಶಗೆ ಒಳಪಡಿಸುವ ಅಗತ್ಯವನ್ನು ಪ್ರತಿಪಾದಿಸಿದ್ದಾರೆ. ದಲಿತ ಬಂಡಾಯ ಸಾಹಿತ್ಯ ಚಳುವಳಿ ಸ್ತ್ರೀಯ ಅಂತಃಪ್ರಜ್ಞೆಯನ್ನು ಜಾಗೃತಗೊಳಿಸಿ ಸಮಾನತೆ, ಅಭಿವ್ಯಕ್ತಿಸ್ವಾತಂತ್ರ್ಯದತ್ತ ಹೋರಾಟ ನಡೆಸಲು ಪ್ರೇರಣೆ ನೀಡಿರುವ ಅಂಶದ ಹಿನ್ನೆಲೆಯಲ್ಲಿ ಸ್ತ್ರೀವಾದಿ ಸಾಹಿತ್ಯ ಹಾಗೂ ಅದರ ವಿಮರ್ಶೆ ಬೆಳೆಯಬೇಕಾಗಿದೆ. ಕಥೆ ಕಾವ್ಯ ಕಾದಂಬರಿ ರಚನೆಯಲ್ಲಿ ತೊಡಗಿರುವ ಲೇಖಕಿಯರು ಈಗ ಸಂಶೋಧನೆ ಹಾಗೂ ವಿಮರ್ಶೆಯ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಿದ್ದಾರೆ.

ಕನ್ನಡ ವಿಮರ್ಶೆಯ ಬೆಳವಣಿಗೆಯಲ್ಲಿ ವಿಶ್ವವಿದ್ಯಾಲಯ, ಅಕಾಡಮಿಗಳ ಪಾತ್ರವೂ ವಿಶೇಷವಾದದ್ದು. ಬೆಂಗಳೂರು ವಿಶ್ವವಿದ್ಯಾಲಯದ ವಿಚಾರ ಸಂಕಿರಣ ಗ್ರಂಥಗಳು, ಸಾಹಿತ್ಯ ವಾರ್ಷಿಕ ಸಂಪುಟಗಳು, ಮೈಸೂರು ವಿಶ್ವವಿದ್ಯಾಲಯದ ಪ್ರಕಟನೆಗಳು ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ಪ್ರಕಟನೆಗಳು, ಗುಲ್ಬರ್ಗಾ, ಮಂಗಳೂರು, ಕನ್ನಡ ವಿಶ್ವವಿದ್ಯಾಲಯಗಳ ಹೊತ್ತಿಗೆಗಳು, ಹಾಗೆಯೆ ವಿವಿಧ ವಿಶ್ವವಿದ್ಯಾಲಯಗಳ ಪಿ. ಎಚ್ಡಿ. ಮಹಾಪ್ರಬಂಧಗಳು, ಸಾಹಿತ್ಯ ಅಕಾಡಮಿ, ಪರಿಷತ್ತು ನಡೆಸಿದ ವಿಚಾರ ಸಂಕಿರಣ ಪ್ರಬಂಧಗಳು

ಕನ್ನಡ ವಿಮರ್ಶೆಯ ಪುರೋಭಿವೃದ್ಧಿಗೆ ಸಹಾಯಕವಾಗಿವೆ. ಇವುಗಳಲ್ಲಿ ಸಾಹಿತ್ಯದ ಪುನರ್ ಮೌಲ್ಯೀಕರಣ ಹಾಗೆಯೆ ಸಾಹಿತ್ಯ ವಿಮರ್ಶೆಯ ಸಾಂಸ್ಕೃತಿಕ ಜವಾಬ್ದಾರಿ, ವಿಮರ್ಶೆಯ ಶೈಕ್ಷಣಿಕ ಶಿಸ್ತು, ಸಾಹಿತ್ಯ ಪರಂಪರೆ ಹಾಗೂ ಸಾಹಿತಿಗಳ ಸಾಧನೆಯತ್ತ ಸಮಗ್ರ ದೃಷ್ಟಿ ಹರಿಸಿರುವದು, ವಸ್ತುನಿಷ್ಠ ಆಲೋಚನೆಯನ್ನು ಬೆಳೆಸಿರುವದು ಇವೇ ಮುಂತಾದ ಅಂಶಗಳು ಎದ್ದು ಕಾಣುತ್ತವೆ.

ಕನ್ನಡ ಸಾಹಿತ್ಯ ವಿಮರ್ಶೆಯ ಪರಂಪರೆ ವಿಶಾಲವಾದದ್ದು. ನವೋದಯ ಪರಂಪರೆಯಲ್ಲಿ ಸಾಹಿತ್ಯ ಮೀಮಾಂಸೆಯ ಕೊಡುಗೆ ವಿಶಿಷ್ಟ ಪ್ರಯತ್ನವಾಗಿ ಕಂಡುಬಂದರೆ ಕೃತಿನಿಷ್ಠ ವಿಮರ್ಶೆ ನವ್ಯ ವಿಮರ್ಶೆಯ ಕೊಡುಗೆಯಾಗಿದೆ. ವಸ್ತುನಿಷ್ಠತೆ ಹಾಗೂ ಸಾಂಸ್ಕೃತಿಕ ಆಶಯಗಳನ್ನು ತನ್ನದಾಗಿಸಿಕೊಂಡು ಕನ್ನಡ ವಿಮರ್ಶೆ ಬೆಳೆಯುತ್ತಿರುವದು ಅದಕ್ಕಿರುವ ಆಶಾದಾಯಕ ಭವಿಷ್ಯದ ಸಂಕೇತವಾಗಿದೆ. ವಿಮರ್ಶೆಯ ವ್ಯವಸಾಯಕ್ಕಾಗಿ ತಮ್ಮ ಪ್ರತಿಭೆ ಪಾಂಡಿತ್ಯಗಳನ್ನು ನಿರಂತರ ಕ್ರಿಯಾಶೀಲವಾಗಿಸಿದ ಕುರ್ತಕೋಟಿ, ಜಿ. ಎಸ್. ಆಮೂರ, ಟಿ. ಪಿ. ಅಶೋಕ, ಎಚ್. ಎಸ್. ರಾಘವೇಂದ್ರ, ಡಿ. ಆರ್. ನಾಗರಾಜ, ಕಿ. ರಂ. ನಾಗರಾಜ, ಸಿ.ಪಿ. ಕೆ., ಗಿರಡ್ಡಿ, ಹಾಗೆಯೇ ಹಳೆ ಹೊಸ ಪೀಳಿಗೆಯ ಅನೇಕ ವಿಮರ್ಶಕರ ವಿಚಾರಧಾರೆ ಸಾಹಿತ್ಯದ ಉತ್ಕರ್ಷಕ್ಕೆ ಕಾರಣವಾಗಿದೆ. ಸಾಹಿತ್ಯವನ್ನು ಸತ್ವಶಾಲಿಯಾಗಿಸುವದರ ಜೊತೆಗೆ ಸಾಮಾಜಿಕನ ಬುದ್ಧಿ ಭಾವಗಳನ್ನು ಅರಳಿಸಿ, ಸಾಹಿತ್ಯಿಕ ಸಂಸ್ಕೃತಿ ನಿರ್ಮಾಣ ಮಾಡುವಲ್ಲಿ ಕನ್ನಡ ವಿಮರ್ಶೆ ಮಹತ್ವದ ಕಾರ್ಯ ಮಾಡಿದೆ.

●

ಸಂಶೋಧನ ಸಾಹಿತ್ಯ

-ಬಿ. ಆರ್. ಹಿರೇಮಠ

ಪಾಶ್ಚಿಮಾತ್ಯರ ಆಗಮನದಿಂದ ಭಾರತದಲ್ಲಿಯ ಹಳೆಯ ಜ್ಞಾನಶಾಖೆಗಳು ಹೊಸ ಆವಿಷ್ಕಾರ ಪಡೆದವು. ಜೊತೆಗೆ ಹೊಸಜ್ಞಾನಶಾಖೆಗಳು ಹುಟ್ಟಿಕೊಂಡವು. ಭಾರತದಲ್ಲಿ ಹೊಸಜ್ಞಾನಶಾಖೆಗಳು ಅಸ್ತಿತ್ವಕ್ಕೆ ಬರಲು ಪಾಶ್ಚಿಮಾತ್ಯರ ಆಗಮನ ಕಾರಣವಾಯಿತೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಹೀಗೆ ಹದಿನೆಂಟನೆಯ ಶತಮಾನದಲ್ಲಿ ಭಾರತದಲ್ಲಿ ಅಸ್ತಿತ್ವವನ್ನು ಹೊಂದಿದ ಹೊಸಜ್ಞಾನ ಶಾಖೆಗಳಲ್ಲಿ `ಸಂಶೋಧನೆ' ಅತ್ಯಂತ ಪ್ರಮುಖ ಜ್ಞಾನಶಾಖೆಯಾಗಿದೆ.

ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಈ ಹೊಸ ಜ್ಞಾನಶಾಖೆಯನ್ನು ಆರಂಭಿಸಿದ ಅಗ್ರಶ್ರೇಯಸ್ಸು ವಿದೇಶಿ ವಿದ್ವಾಂಸರಿಗೆ ಸಲ್ಲುತ್ತದೆ. ವಿದೇಶಿ ವಿದ್ವಾಂಸರೇ ಕನ್ನಡ ಸಂಶೋಧನೆಯ ಆದ್ಯ ಪ್ರವರ್ತಕರು. ಹೀಗೆ ಕರ್ನಾಟಕದಲ್ಲಿ ಕನ್ನಡ ಸಂಶೋಧನೆ ವಿದೇಶಿ ವಿದ್ವಾಂಸರಿಂದಲೇ ಅನಾವರಣಗೊಂಡಿರುವುದು ಚರಿತ್ರೆಯಿಂದ ತಿಳಿದುಬರುತ್ತದೆ.

೧೭೮೩ರಲ್ಲಿ ಕರ್ನಲ್ ಮೆಕೆಂಝಿ ಶಾಸನಗಳ ಕ್ಷೇತ್ರಕಾರ್ಯ, ಸಂಗ್ರಹ ಮಾಡುವುದರ ಮೂಲಕ ಸಂಶೋಧನ ಕ್ರಿಯೆಯನ್ನು ಚಾಲನೆಗೊಳಿಸಿದ. ಇದರಂತೆ ಸರ್ ವಿಲಿಯಂ ಜೋನ್ಸ್ ೧೭೮೪ರಲ್ಲಿ ಕಲಕತ್ತೆಯಲ್ಲಿ `ಏಸಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್' ಹೆಸರಿನ ಸಂಸ್ಥೆಯನ್ನೂ ೧೭೮೮ರಲ್ಲಿ `ಏಸಿಯಾಟಿಕ್ ರೀಸರ್ಚಸ್ ' ಪತ್ರಿಕೆಯನ್ನೂ ಪ್ರಾರಂಭಿಸುವುದರ ಮೂಲಕ ಭಾರತಶಾಸ್ತ್ರ (Indology)ದ ಅಧ್ಯಯನ, ಸಂಶೋಧನೆಗಳಿಗೆ ಪ್ರಮುಖ ಅವಕಾಶವನ್ನು, ಕರ್ನಾಟಕಶಾಸ್ತ್ರ(Karnatakology)ದ ಸಂಶೋಧನೆಗೆ ಪಾಕ್ಷಿಕ (Partial) ಪ್ರವೇಶವನ್ನು ಕಲ್ಪಿಸಿಕೊಟ್ಟ. ಹೀಗೆ `ಸಂಶೋಧನೆ ' ಭಾರತ ಮತ್ತು ಕರ್ನಾಟಕ ಗಳಲ್ಲಿ ಕುಡಿಬಿಟ್ಟು ಹಬ್ಬಲು ಕರ್ನಲ್ ಮೆಕೆಂಝಿ, ಸರ್ ವಿಲಿಯಂ ಜೋನ್ಸ್ ಕಾರಣೀಭೂತರೆನಿಸಿದರು. `ಏಸಿಯಾಟಿಕ್ ರೀಸರ್ಚಸ್ ' ಪತ್ರಿಕೆಯ ಮೂರನೆಯ ಸಂಪುಟ (೧೭೯೩) ದಲ್ಲಿ ಪ್ರಕಟವಾದ ವಿಜಯನಗರ ಅರಸರ ಶಾಸನವೇ ಕನ್ನಡ ಸಂಶೋಧನೆಯ ಪ್ರಪ್ರಥಮ ಪ್ರಕಟನೆಯಾಗಿದೆ. ಹೀಗೆ ಕನ್ನಡ ಸಂಶೋಧನೆ ಏಕಕಾಲಕ್ಕೆ ಕ್ಷೇತ್ರಕಾರ್ಯ, ಸಂಗ್ರಹ ಹಾಗೂ ಪ್ರಕಟನೆಗಳ ರೂಪದಲ್ಲಿ ಆರಂಭಗೊಂಡುದು ವ್ಯಕ್ತವಾಗುತ್ತದೆ. ಇವಲ್ಲದೆ ಕನ್ನಡ ಸಂಶೋಧನೆ ಶಾಸನಗಳಿಂದಲೇ ಪ್ರಾರಂಭವಾದುದು ಒಂದು ವೈಶಿಷ್ಟ್ಯವೆಂದೇ ಹೇಳಬೇಕು.

ಕನ್ನಡ ಸಾಹಿತ್ಯ ಪ್ರಕಾರಗಳಾದ ಕಾವ್ಯ, ಕಾದಂಬರಿ, ಸಣ್ಣಕತೆ, ನಾಟಕ, ವಿಮರ್ಶೆಗಳಂತೆ 'ಸಂಶೋಧನೆ 'ಯೂ ಒಂದು ಸ್ವತಂತ್ರ ಅಧ್ಯಯನ ಕ್ಷೇತ್ರವಾಗಿ, ಶೈಕ್ಷಣಿಕಶಿಸ್ತು ಆಗಿ ಇಂದು ಪರಿಣಮಿಸಿದೆ. ಇದು ತುಂಬ ನೀರಸವಾದ, ಸಾರ್ವಜನಿಕ ಆಕರ್ಷಣೆಯಿಂದ ವಿದೂರವಾದ ಕ್ಷೇತ್ರ. ನಾಡಿನ ಪ್ರಮುಖ ಸಾಹಿತ್ಯಿಕ ಸಂಸ್ಥೆಗಳ ಉಪೇಕ್ಷೆಗೆ ಗುರಿಯಾದ, ಆ ಸಂಸ್ಥೆಗಳ ಸೌಲಭ್ಯ, ಪ್ರೋತ್ಸಾಹಗಳಿಂದ ವಂಚಿತವಾದ ಜ್ಞಾನಶಾಖೆಯಿದಾಗಿದೆ. ಇಂಥ ನೀರಸವಾದ ಕ್ಷೇತ್ರದಲ್ಲಿ ಕಾರ್ಯ ಮಾಡಿದವರ, ಮಾಡುವವರ ಸಂಖ್ಯೆಯೂ ತೀರ ವಿರಳ.

ಕನ್ನಡ ಸಂಶೋಧನೆ ಕ್ಷೇತ್ರಕಾರ್ಯ, ಸ್ವತಂತ್ರ ಲೇಖನ, ಗ್ರಂಥ, ಟಿಪ್ಪಣಿ, (ಸಂಪಾದಿತ ಕೃತಿಗಳ) ಪ್ರಸ್ತಾವನೆ, ಸಂಗ್ರಹ - ಸಂಕಲನ, ವಿಶ್ಲೇಷಣೆ, ವಿವೇಚನೆಗಳ ರೂಪದಲ್ಲಿ ಹೊರ ಬಂದಿದೆ. ಇದು ಶಾಸನ, ಹಸ್ತಪ್ರತಿ, ಪ್ರಾಚೀನ ಕೃತಿಗಳ ಪರಿಷ್ಕರಣ, ಜಾನಪದ, ಭಾಷೆ, ಛಂದಸ್ಸು, ವ್ಯಾಕರಣ, ಸಂಸ್ಕೃತಿ, ಚರಿತ್ರೆ ಮೊದಲಾದ ಕ್ಷೇತ್ರಗಳಿಗೆ ಸಂಬಂಧಿಸಿದುದಾಗಿರುತ್ತದೆ. ವಿದೇಶಿಯರಿಂದ ಆರಂಭಗೊಂಡು ಇಂದಿನವರೆಗೆ ನಿರಂತರವಾಗಿ ಮುನ್ನಡೆಯುತ್ತ ಬಂದ ಕನ್ನಡ ಸಂಶೋಧನೆಯಲ್ಲಿ ಪ್ರಮುಖವಾಗಿ ೧. ಆಕರಶೋಧ ೨. ಆಕರಗಳ ರೂಪನಿಷ್ಠಶೋಧ ೩. ಆಕರಗಳ ಗುಣನಿಷ್ಠಶೋಧ ಎಂಬ ಮೂರು ಘಟ್ಟಗಳನ್ನು ಮಾಡಿಕೊಳ್ಳಬಹುದಾಗಿದೆ.* ಈ ಮೂಲಕ ಕನ್ನಡ ಸಂಶೋಧನ ಸಾಹಿತ್ಯ ಬೆಳೆದುಬಂದ ಬಗೆಯನ್ನು ಅರಿತು ಕೊಳ್ಳಬಹುದಾಗಿದೆ. ಈ ಘಟ್ಟಗಳ ಮೂಲಕ ಅಲ್ಲಿ ಕಂಡುಬರುವ ಸಂಶೋಧನೆಯ ಒಲವು (Trends), ನ್ಯೂನತೆ (Deficiency), ಮೌಲಿಕತೆ (Value)ಗಳನ್ನು ಗುರುತಿಸಬಹುದಾಗಿದೆ.

ಪ್ರಾಚೀನ ಕರ್ನಾಟಕದ ಭವ್ಯ ಪರಂಪರೆ ಹಾಗೂ ಸಾಂಸ್ಕೃತಿಕ ಚಾರಿತ್ರಿಕ ಸ್ವರೂಪಗಳು ಬಹಳ ಕಾಲದವರೆಗೆ ಅಜ್ಞಾತವಾಗಿಯೇ ಉಳಿದಿದ್ದವು. ಇಷ್ಟೇ ಅಲ್ಲ, ಮುಂದೆ ಇವುಗಳನ್ನು ತಪ್ಪಾಗಿ ಅರ್ಥೈಸುವ, ವಿಪರಿಸುವ -ವಿವೇಚಿಸುವ ಕಾರ್ಯವೂ ನಡೆಯಿತು. ಇದರಿಂದ ಕರ್ನಾಟಕ, ಕರ್ನಾಟಕತ್ವಗಳ ಬಗೆಗೆ ತಪ್ಪು ಕಲ್ಪನೆ ಮೂಡುವಂತಾಯಿತು. ಇದನ್ನು ಹೋಗಲಾಡಿಸಲು ಪ್ರಾಚೀನ ಕರ್ನಾಟಕದ ಕ್ರಮಬದ್ಧ ವಿಕಾಸವನ್ನು ಸರಿಯಾಗಿ ಜೋಡಿಸುವುದು, ಅರ್ಥ ಮಾಡಿಕೊಳ್ಳುವುದು, ವಿವರಿಸುವುದು, ವಿಶ್ಲೇಷಿಸುವುದು ಅಂದಿನ ವಿದ್ವಾಂಸರಿಗೆ ಅನಿವಾರ್ಯವಾಗಿ ಪರಿಣಮಿಸಿತು. ಹೀಗೆ ಪ್ರಾಚೀನ ಕರ್ನಾಟಕದ ಸಾಂಸ್ಕೃತಿಕ ಪರಂಪರೆ, ಚಾರಿತ್ರಿಕ ಮಹತ್ವಗಳ ವ್ಯವಸ್ಥಿತವಾದ ಅಧ್ಯಯನ, ವಿವೇಚನೆಗಳು ನಡೆಯದಿರುವುದನ್ನು ಅನುಲಕ್ಷಿಸಿ, ವಿದ್ವಾಂಸರು ಕರ್ನಾಟಕಕ್ಕೆ ಸಂಬಂಧಿಸಿದ ಆಕರಗಳ ಶೋಧಕಾರ್ಯ ಕೈಕೊಂಡರು.

ಕರ್ನಾಟಕಕ್ಕೆ ಸಂಬಂಧಿಸಿದ ಆಕರಗಳು ಅಪಾರವಾಗಿದ್ದು, ವೈವಿಧ್ಯಪೂರ್ಣವೆನಿಸಿವೆ. ವಿದೇಶಿ ಹಾಗೂ ದೇಶೀಯ ವಿದ್ವಾಂಸರು ಈ ಆಕರಗಳ ಶೋಧಕಾರ್ಯಕ್ಕೆ ತಮ್ಮನ್ನು ತೊಡಗಿಸಿ ಕೊಂಡುದು., ಕನ್ನಡ ಸಂಶೋಧನೆಯ ಇತಿಹಾಸದಲ್ಲಿ ಅಪೂರ್ವ ಮತ್ತು ಪುಣ್ಯ ಪ್ರಸಂಗ ವೆನಿಸಿದೆ. ಶಾಸನ, ಹಸ್ತಪ್ರತಿ, ಜಾನಪದ, ವಿಗ್ರಹ, ನಾಣ್ಯ, ಕೈಫಿಯತ್ತು, ದಾಖಲೆ ಹಾಗೂ ಎವಿಧ ವಸ್ತುಗಳನ್ನು ವೈಯಕ್ತಿಕವಾಗಿ, ಸಾಂಘಿಕವಾಗಿ ಸಂಗ್ರಹಿಸಲಾಯಿತು. ಈ ಕಾರ್ಯ ಆರಂಭದಲ್ಲಿ ವಿಧಾನಗತಿಯಲ್ಲಿದ್ದರೂ ಕ್ರಮೇಣ ವೇಗವಾಗಿ ಸಾಗುವಂತಾಯಿತು.

---

* ಡಾ. ಎಂ. ಎಂ. ಕಲಬುರ್ಗಿ : ಕನ್ನಡ ಸಂಶೋಧನ ಶಾಸ್ತ್ರ, ಪುಟ ೧೦೨.

ಸಂಶೋಧನೆಯ ಮೂಲದ್ರವ್ಯ, ಆಕರಗಳು. ಈ ಆಕರಗಳನ್ನು ಅವಲಂಬಿಸಿ ಸಂಶೋಧನೆ ಆರಂಭಗೊಳ್ಳುತ್ತದೆ. ಆಕರಗಳಿಲ್ಲದಿದ್ದರೆ ಸಂಶೋಧನಕಾರ್ಯ ನಡೆಯುವುದಿಲ್ಲ. ಆದುದರಿಂದ ಸಂಶೋಧನೆಯಲ್ಲಿ ಆಕರಗಳಿಗೆ ಅಗ್ರಸ್ಥಾನವಿದೆ. ಇಂಥ ಆಕರಗಳ ಬಲದಿಂದ ಸಂಶೋಧಕ `ವಸ್ತುನಿಷ್ಠ ಸತ್ಯ' ವನ್ನು ಪ್ರಕಟಿಸುತ್ತಾನೆ. `ವಸ್ತುನಿಷ್ಠ ಸತ್ಯ' ದ ಪ್ರಕಟನೆಯೇ ಸಂಶೋಧನೆಯ ಪ್ರಮುಖ ಉದ್ದೇಶ. ಈ ಉದ್ದೇಶ ಸಾಧನೆಗಾಗಿ ಸಂಶೋಧನೆ `ಆಕರ' ಗಳನ್ನು ಬಯಸುತ್ತದೆ. ಹೀಗಾಗಿ ವಿದೇಶಿ ಮತ್ತು ದೇಶೀಯ ವಿದ್ವಾಂಸರು ಆರಂಭದಲ್ಲಿ ಆಕರಗಳ ಶೋಧಕಾರ್ಯಕ್ಕೆ ಕೈಹಾಕಿದರು. ಕನ್ನಡ ಸಂಶೋಧನ ಸಾಹಿತ್ಯ ಆರಂಭದಲ್ಲಿ `ಆಕರಗಳ ಶೋಧ' ರೂಪದಲ್ಲಿ ಕಾಣಿಸಿಕೊಂಡಿತು.

ಈ ಆಕರಗಳ ಶೋಧ ಕಾರ್ಯ ಮಾಡಿದವರಲ್ಲಿ ಕರ್ನಲ್ ಮೆಕೆಂಝಿ, ವಾಲ್ಟರ್ ಇಲಿಯಟ್, ಬಿ. ಎಲ್. ರೈಸ್, ಜೆ. ಎಫ್. ಫ್ಲೀಟ್, ಹರ್ಮನ್ ಮೊಗ್ಲಿಂಗ್, ಎಫ್. ಕಿಟೆಲ್ ಮೊದಲಾದವರು ಪ್ರಮುಖರಾಗಿದ್ದಾರೆ. ಈ ವಿದೇಶಿ ವಿದ್ವಾಂಸರು ಕರ್ನಾಟಕಕ್ಕೆ ಸಂಬಂಧಿಸಿದ ವೈವಿಧ್ಯಮಯವಾದ ಆಕರ ಸಾಮಗ್ರಿಯನ್ನು ರಾಶಿರಾಶಿಯಾಗಿ ಸಂಗ್ರಹಿಸಿ, ಆಕರಗಳ ಶೋಧ ಕಾರ್ಯಕ್ಕೆ ಶ್ರೀಕಾರ ಹಾಕಿದರು. ವಿದೇಶಿ ವಿದ್ವಾಂಸರ ಈ ಆಕರ ಶೋಧ ಕಾರ್ಯಕ್ಕೆ ಪುಲಿಗಡ್ಡ ಮಲ್ಲಯ್ಯ, ವೆಂಕಟರಾವ್, ನಾರಾಯಣ ರಾವ್, ವಿಠ್ಠಲರಾವ್, ಬಾಬುರಾವ್, ಆನಂದರಾವ್, ವೆಂಕಟಲಕ್ಷ್ಮಯ್ಯ, ವೆಂಕಟರಾಮಸ್ವಾಮಿ, ಕವೆಲ್ಲಿ ವೆಂಕಟ ಬೋರಯ್ಯ, ಬಾಲಗಂಗಾಧರ ಶಾಸ್ತ್ರಿ , ಹುಬ್ಬಳ್ಳಿಯ ಶಿವಲಿಂಗಯ್ಯ ವಸ್ತ್ರದ ಮೊದಲಾದ ದೇಶೀಯ ವಿದ್ವಾಂಸರು ಅಮೂಲ್ಯವಾದ ನೆರವು ನೀಡಿದರು. ಆಕರಗಳ ಶೋಧ ಕಾರ್ಯದಲ್ಲಿ ಈ ವಿದೇಶಿ ಹಾಗೂ ದೇಶೀಯ ವಿದ್ವಾಂಸರು ಪಟ್ಟ ಪರಿಶ್ರಮ, ಮಾಡಿದ ಪ್ರಯತ್ನ, ತೋರಿದ ಆಸಕ್ತಿ, ವಹಿಸಿದ ಕಾಳಜಿ, ದುಡಿದ ರೀತಿಗಳು ಬೆರಗುಗೊಳಿಸುವಂಥವುಗಳಾಗಿವೆ. ಈ ಉಭಯ ವಿದ್ವಾಂಸರ ಆಕರ ಶೋಧ ಕಾರ್ಯ ಅನನ್ಯ, ಅನುಪಮ, ಅಪಾರ ಹಾಗೂ ವೈವಿಧ್ಯಮಯ ವಾದುದಾಗಿರುತ್ತದೆ. ಈ ವಿದ್ವಾಂಸರ ಆಕರಶೋಧಕಾರ್ಯ ಉತ್ತಮ ಮಾದರಿಯದೆನಿಸಿದ್ದು, ಇಂದಿಗೂ ಅನುಕರಣೀಯ ಯೋಗ್ಯವಾಗಿದೆ.

ಕರ್ನಾಟಕಕ್ಕೆ ಸಂಬಂಧಪಟ್ಟ ಆಕರಗಳ ಸಂಗ್ರಹಕಾರ್ಯ ಆರಂಭಿಸಿದ ಪ್ರಪ್ರಥಮ ವ್ಯಕ್ತಿ ಕರ್ನಲ್ ಮೆಕೆಂಝಿ. ಭಾರತದ ವಿವಿಧ ಪ್ರಾಂತಗಳಲ್ಲಿ ಬೇರೆ ಬೇರೆ ಹುದ್ದೆಗಳನ್ನು ವಹಿಸಿಕೊಂಡು ಬ್ರಿಟಿಷ್‌ರ ಅಧಿಕಾರಿಯಾಗಿ ಕೆಲಸ ಮಾಡಿದ ಈತ ಹದಿನಾಲ್ಕು ಭಾಷೆ, ಹದಿನೇಳು ಲಿಪಿಗಳಲ್ಲಿರುವ ಹಸ್ತಪ್ರತಿ (೧೫೬೮), ಕೈಫಿಯತ್ತು (೨೦೭೦), ಶಾಸನ (೮೦೭೦), ಅರ್ವಾಚೀನ ಗ್ರಂಥ, ನಾಣ್ಯ, ವಿಗ್ರಹ, ಭೂಪಟ, ದಾಖಲೆಗಳನ್ನು ಸಂಗ್ರಹಿಸಿದ. ಹೀಗೆ ಈತನ ಆಕರಗಳ ಸಂಗ್ರಹಸಂಪತ್ತು ವಿಪುಲವಾಗಿದ್ದು, ಬಹುವಿಧವೆನಿಸಿದ್ದಿತು. ಈ ಆಕರಗಳ ಬಹುಭಾಗ ಮೂರುಸಲ ಇಂಗ್ಲಂಡಿಗೆ ಹೋದರೂ ಅಳಿದುಳಿದ ಸಂಗ್ರಹವೇ ಸಾಕಷ್ಟಿದ್ದಿತು. ಅಳಿದುಳಿದ ಸಂಗ್ರಹವನ್ನು ಮದ್ರಾಸ ಗವರ್ನಮೆಂಟ್ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ಸ್ ಲೈಬ್ರರಿಗೆ ವರ್ಗಾಯಿಸಲಾಯಿತು. ಇವುಗಳಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದ ಆಕರ ಸಾಮಗ್ರಿ ಅಧಿಕ ಪ್ರಮಾಣದ್ದೂ, ಅಮೂಲ್ಯವೂ ಆದುದಾಗಿದ್ದಿತು. ಹೀಗೆ ಕರ್ನಲ್ ಮೆಕೆಂಝಿ ಕ್ಷೇತ್ರಕಾರ್ಯದ ಮೂಲಕ ಆಕರ ಸಾಮಗ್ರಿ ಸಂಗ್ರಹದಂಥ ಪುಣ್ಯಕಾರ್ಯವನ್ನು ಪೂರೈಸಿದ ಪುಣ್ಯ ಚೇತನವೆನಿಸಿದ್ದಾನೆ.

ಸರ್ ವಾಲ್ಟರ್ ಇಲಿಯಟ್ ಮುಂಬಯಿ ಕರ್ನಾಟಕ ಪ್ರದೇಶ, ನಿಜಾಂ ಕರ್ನಾಟಕದ ಪಶ್ಚಿಮ ಪ್ರದೇಶ, ಹಳೆಯ ಮೈಸೂರು ಪ್ರಾಂತದ ಉತ್ತರ ಭಾಗಗಳಲ್ಲಿ ಸಂಚರಿಸಿ, ೧೩೦೦ ಶಾಸನಗಳನ್ನು ಸಂಗ್ರಹಿಸಿದ. ಇವುಗಳಲ್ಲಿ ೫೯೫ ಶಾಸನಗಳನ್ನು ಆರಿಸಿಕೊಂಡು ``Karnatak Desh Inscription" ಹೆಸರಿನ ಕೈ ಬರೆಹದ ಪ್ರತಿಗಳನ್ನು ತಯಾರಿಸಿದ. ತನ್ನ ಅಧಿಕಾರಾವಧಿಯಲ್ಲಿ ಮಾಡಿದ ಶಾಸನಗಳ ಸಮಗ್ರ ಅಧ್ಯಯನವನ್ನು ಈತ `ಜರ್ನಲ್ ಆಫ್ ರಾಯಲ್ ಏಸಿಯಾಟಿಕ್ ಸೊಸೈಟಿ ' ಪತ್ರಿಕೆಯ ನಾಲ್ಕನೆಯ ಸಂಪುಟದಲ್ಲಿ ``Hindu Inscriptions " ಹೆಸರಿನ ಲೇಖನದ ಮೂಲಕ ಪ್ರಕಟಿಸಿದ.

ಮೈಸೂರು ಪುರಾತತ್ವ ಇಲಾಖೆಯ ಡೈರೆಕ್ಟರ ಆಗಿದ್ದ ಬಿ. ಎಲ್. ರೈಸ್ ಹತ್ತು ವರ್ಷಗಳ ನಿರಂತರ ಪರಿಶ್ರಮ, ಪ್ರಯತ್ನಗಳಿಂದ `ಮೈಸೂರು ಗೆಜೆಟಿಯರ್.' ಪ್ರಕಟಿಸಿದ. ಇದಲ್ಲದೆ ಹಳೆಯ ಮೈಸೂರು ಪ್ರದೇಶದ ಒಂಬತ್ತು ಜಿಲ್ಲೆಗಳಲ್ಲಿ ದಣಿವಿಲ್ಲದೆ ಸಂಚರಿಸಿ, ೮೮೬೬ ಶಾಸನಗಳನ್ನು ಸಂಗ್ರಹಿಸಿ, `ಎಪಿಗ್ರಾಫಿಯಾ ಕರ್ನಾಟಿಕಾ ' ಹೆಸರಿನಲ್ಲಿ ೧೨ ಸಂಪುಟಗಳನ್ನು ಹೊರತಂದ. ಕನ್ನಡ ಸಂಶೋಧನೆಯಲ್ಲಿ ಇದೊಂದು ಭೀಮಸಾಹಸ, ಭಗೀರಥ ಪ್ರಯತ್ನ. ಇದರೊಂದಿಗೆ ಬಿ. ಎಲ್. ರೈಸ್ `ಬಿಬ್ಲಿಯೊಥಿಕಾ ಕರ್ನಾಟಿಕಾ ' ಹೆಸರಿನ ಮಾಲಿಕೆಯಲ್ಲಿ ಪಂಪಭಾರತ, ಆದಿಪುರಾಣ, ಪಂಪರಾಮಾಯಣ, ಕಾವ್ಯಾವಲೋಕನ, ಕರ್ನಾಟಕ ಭಾಷಾಭೂಷಣ ಕವಿರಾಜಮಾರ್ಗ (ಸಂ. ಕೆ. ಬಿ. ಪಾಠಕ) ಮೊದಲಾದ ಪ್ರಾಚೀನ ಕನ್ನಡ ಗ್ರಂಥಗಳನ್ನೂ ಪ್ರಕಟಿಸಿದ. ಹೀಗೆ ಬಿ. ಎಲ್. ರೈಸ್ ಶಾಸನ, ಹಸ್ತಪ್ರತಿ, ದಾಖಲೆ, ವಿಗ್ರಹ, ನಾಣ್ಯ ಮೊದಲಾದವುಗಳ ಸಂಗ್ರಹ ಕಾರ್ಯವನ್ನೂ ಶಾಸನ, ಸಾಹಿತ್ಯಗಳ ಪ್ರಕಟನೆಯನ್ನೂ ಪೂರೈಸಿದ.

ಜೆ. ಎಫ್. ಫ್ಲೀಟ್ ಅವರು ಉತ್ತರ ಕರ್ನಾಟಕ, ಹೈದರಾಬಾದ ಕರ್ನಾಟಕ ಹಾಗೂ ದಕ್ಷಿಣ ಮಹಾರಾಷ್ಟ್ರ ಪ್ರದೇಶಗಳಲ್ಲಿಯ ಶಾಸನಗಳನ್ನು ಸಂಗ್ರಹಿಸಿ `` ಇಂಡಿಯನ್ ಆಂಟ್ಕ್ವೆರಿ " ಪತ್ರಿಕೆಯಲ್ಲಿ ಪ್ರಕಟಿಸಿದರು. ಇವರು ಶಾಸನ, ಶಿಷ್ಟಪದ ಸಾಹಿತ್ಯ, ಜನಪದ ಸಾಹಿತ್ಯ ಮೊದಲಾದ ವಿಷಯಗಳನ್ನು ಕುರಿತು ೪೫೦ ಕ್ಕೂ ಮಿಕ್ಕಿದ ಲೇಖನಗಳನ್ನು ಬರೆದಿದ್ದಾರೆ. ``Samskrit, Pali and Halakannada Inscriptions", ``Dyanasties of Canarese Districts ", ``Canarese and Marathi Ballads", ``A Selection of Kannada Ballads"- ಇವು ಫ್ಲೀಟರು ಹೊರತಂದ ಉಪಯುಕ್ತ ಕೃತಿಗಳು. ಶಾಸನ, ಚರಿತ್ರೆ, ಜನಪದ ಅಧ್ಯಯನಗಳಿಗೆ ಇವು ಬೆಲೆಯುಳ್ಳ ಆಕರಸಾಮಗ್ರಿಗಳಾಗಿರುತ್ತವೆ.

ಮಂಗಳೂರಿನ ಬಾಸೆಲ್ ಮಿಶನ್ ಸಂಸ್ಥೆಯ ಮೂಲಕ ಬಸವಪುರಾಣ, ಚೆನ್ನ ಬಸವಪುರಾಣ, ಕುಮಾರವ್ಯಾಸ ಭಾರತ, ಜೈಮಿನಿ ಭಾರತ (ಕೆಲವು ಸಂಧಿ), ಕನಕದಾಸರ ಹರಿಭಕ್ತಿಸಾರ, ರಾಜೇಂದ್ರನಾಮೆ, ರಾವಣ ದಿಗ್ವಿಜಯ, ತೊರವೆ ರಾಮಾಯಣ (ಅರಣ್ಯ ಕಾಂಡದ ೬ ಸಂಧಿಗಳು) ಮೊದಲಾದ ಪ್ರಾಚೀನ ಕೃತಿಗಳನ್ನು ಪ್ರಕಟಿಸುವುದರ ಮೂಲಕ ಹರ್ಮನ್ ಮೊಗ್ಲಿಂಗ್ ಅವರೂ ಸಾಹಿತ್ಯದ ನೆಲೆಯಿಂದ ಆಕರ ಸಾಮಗ್ರಿಯನ್ನು ಹೆಚ್ಚಿಸಿ ಕೊಟ್ಟರು. ಇದಲ್ಲದೆ ಇವರು ``ಕನ್ನಡ ಗಾದೆಗಳು ' (೩೫೪೭ ಗಾದೆ), `ಕೋಟಿ ಚೆನ್ನಯ್ಯ '

(ತುಳು) ಕೃತಿಗಳನ್ನು ಪ್ರಕಟಿಸಿ, ಜನಪದ ಸಾಹಿತ್ಯದ ಆಕರಗಳನ್ನೂ ಒದಗಿಸಿಕೊಟ್ಟ ಕೀರ್ತಿಗೆ ಪಾತ್ರರಾಗಿದ್ದಾರೆ.

ಫರ್ಡಿನಾಂಡ್ ಕಿಟೆಲ್ ಅವರು `ಕನ್ನಡ- ಕನ್ನಡ-ಇಂಗ್ಲೀಷ ನಿಘಂಟು ',`A Grammar of Kanarese Language" ದಂಥ ಸ್ವತಂತ್ರ ಗ್ರಂಥಗಳನ್ನೂ ಶಬ್ದಮಣಿದರ್ಪಣ, ಛಂದೋಂಬುಧಿಯಂಥ ಪರಿಷ್ಕರಣ ಗ್ರಂಥಗಳನ್ನೂ ಹೊರತಂದು, ಆಕರ ಸಾಮಗ್ರಿಯ ಸಂಪತ್ತನ್ನು ಹೆಚ್ಚಿಸಿದರು. ಇದಲ್ಲದೆ ಇವರು ಛಂದೋಂಬುಧಿಗೆ ಬರೆದ ``An Essay on Kanarese Literature '' ಪ್ರಪ್ರಥಮ ಕನ್ನಡ ಸಾಹಿತ್ಯ ಚರಿತ್ರೆಯಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಇದು ಉಪಯುಕ್ತ ಆಕರ ಸಾಮಗ್ರಿಯೆನಿಸಿದೆ. ಗೆರೆಟ್, ರಿಗ್ಲರ್, ರೀವ್ ಅವರು ವ್ಯಾಕರಣ, ನಿಘಂಟುಗಳನ್ನು ರಚಿಸಿ ಆಕರಸಾಮಗ್ರಿಯ ಪ್ರಮಾಣವನ್ನು ಅಧಿಕಗೊಳಿಸಿದರು.

ಹೀಗೆ ಕನ್ನಡ ಸಂಶೋಧನೆಯ ಆರಂಭದ ಘಟ್ಟದಲ್ಲಿ ಶಾಸನ, ಶಿಷ್ಟಪದ ಸಾಹಿತ್ಯ, ಜನಪದ ಸಾಹಿತ್ಯಗಳಿಗೆ ಸಂಬಂಧಿಸಿದ ಆಕರ ಸಾಮಗ್ರಿಯ ಸಂಗ್ರಹ ಹಾಗೂ ಪ್ರಕಟನ ಕಾರ್ಯಗಳೇ ಪ್ರಮುಖವಾಗಿ ನಡೆದುದು ಗೊತ್ತಾಗುತ್ತದೆ.

ಈ `ಆಕರ ಶೋಧ' ಮತ್ತು ಪ್ರಕಟನೆ ಕ್ಷೇತ್ರಕಾರ್ಯ, ಲೇಖನ, ಗ್ರಂಥ ಪರಿಷ್ಕರಣ, ಸ್ವತಂತ್ರ ಗ್ರಂಥ ರಚನೆಗಳ ರೂಪದಲ್ಲಿರುತ್ತದೆ. ಮೈಸೂರು ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಮತ್ತು ಮದ್ರಾಸ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ಸ ಲೈಬ್ರರಿಗಳು ಈ ಆಕರ ಸಾಮಗ್ರಿ ಸಂಗ್ರಹದ ಮೂಲಕೇಂದ್ರಗಳಾಗಿರುತ್ತವೆ. ಏಸಿಯಾಟಿಕ್ ರೀಸರ್ಚಸ್, ಇಂಡಿಯನ್ ಆಂಟಿಕ್ವರಿ, ಎಪಿಗ್ರಾಫಿಯಾ ಇಂಡಿಕಾ, ರಾಯಲ್ ಏಸಿಯಾಟಿಕ್ ಸೊಸೈಟಿ ಜರ್ನಲ್‌ಗಳು ಈ ಆಕರ ಸಾಮಗ್ರಿಯನ್ನೂ ಆ ಕುರಿತು ಲೇಖನಗಳನ್ನೂ ಪ್ರಕಟಿಸುವ ಮಹಾಕಾರ್ಯ ಮಾಡಿದವು. ಹೀಗೆ ಕರ್ನಾಟಕಕ್ಕೆ ಸಂಬಂಧಿಸಿದ ಆಕರ ಸಾಮಗ್ರಿಯ ಸಂಗ್ರಹ, ಪ್ರಕಟನ ಕಾರ್ಯ ಇಂಗ್ಲೆಂಡ, ಜರ್ಮನಿ ಮೊದಲಾದ ದೇಶಗಳ ವಿದೇಶಿ ವಿದ್ವಾಂಸರು, ದೇಶೀಯ ಮತ್ತು ವಿದೇಶೀಯ ಸಂಸ್ಥೆಗಳು, ವಿದ್ವತ್ ಪತ್ರಿಕೆಗಳಿಂದ ನೆರವೇರುವಂತಾಯಿತು. ಈ ಆಕರಶೋಧ ಕಾರ್ಯದಿಂದ ಶಾಸನ, ಹಸ್ತಪ್ರತಿ, ದಾಖಲೆ, ಕೈಫಿಯತ್ತು, ಜನಪದ ಹಾಡು, ಐತಿಹ್ಯ, ಪುರಾಣ, ಆಚರಣೆ, ನಂಬಿಕೆ, ನಾಣ್ಯ, ವಿಗ್ರಹ, ಶಿಷ್ಟಪದ ಸಾಹಿತ್ಯ ಮೊದಲಾದವುಗಳನ್ನು ಆಕರ ಸಾಮಗ್ರಿಗಳನ್ನಾಗಿ ಪರಿಭಾವಿಸುವುದು ಇನ್ನಷ್ಟು ಅಧಿಕವಾಗತೊಡಗಿತು. ಈ ಹೀತಿಯಾಗಿ ಕನ್ನಡ ಆಕರ ಸಾಮಗ್ರಿಗಳ ಸ್ವರೂಪ ಮತ್ತು ವ್ಯಾಪ್ತಿ ವಿಸ್ತೃತಗೊಂಡಿತು. ಇದು ಕನ್ನಡ ಸಂಶೋಧನ ಸಾಹಿತ್ಯದ ಪ್ರಥಮ ಘಟ್ಟ.

ಆಂಗ್ಲ ಹಾಗೂ ಜರ್ಮನಿಯ ವಿದ್ವಾಂಸರು ಆಕರ ಶೋಧದೊಂದಿಗೆ ಲೇಖನ ಪ್ರಕಟನೆಗಳ ಮೂಲಕ ಕನ್ನಡ ಸಂಶೋಧನ ಕಾರ್ಯವನ್ನು ಪ್ರಾರಂಭಿಸಿದ್ದರು. ದೇಶೀಯ ವಿದ್ವಾಂಸರು ಈ ಸಂಶೋಧನ ಕಾರ್ಯವನ್ನು ಈಗ ಮುಂದುವರಿಸಿದರು. ಆಕರ ಸಾಮಗ್ರಿಯನ್ನು ಉಪಯೋಗಿಸಿಕೊಂಡು ಲೇಖನ ಮತ್ತು ಗ್ರಂಥರೂಪದಲ್ಲಿ ಸಂಶೋಧನ ಸಾಹಿತ್ಯ ಪ್ರಕಟಿಸಿದರು. ಈಗ ದೇಶೀಯ ವಿದ್ವಾಂಸರಿಂದ ಸಂಶೋಧನ ಕಾರ್ಯ ಚುರುಕುಗೊಂಡು ವ್ಯಾಪಕವಾಗಿ, ವೈವಿಧ್ಯಮಯವಾಗಿ, ವೇಗವಾಗಿ ಹೆಜ್ಜೆ ಹಾಕತೊಡಗಿತು.

ಹಯವದನ ರಾವ್, ಎ. ಎಸ್. ಅಳ್ತೇಕರ್, ಡೆರೆಟ್, ಮೊರೇಸ್ ಮೊದಲಾದವರು ಶಾಸನಾಧಾರಗಳಿಂದ ಕರ್ನಾಟಕದ ರಾಜಕೀಯ ಚರಿತ್ರೆಯನ್ನೂ ಹಸ್ತಪ್ರತಿ, ಪರಿಷ್ಕರಣಗೊಂಡ ಗ್ರಂಥಗಳಿಂದ ಎಂ. ಗೋವಿಂದ ಪೈ, ಎ. ವೆಂಕಟಸುಬ್ಬಯ್ಯ, ಆರ್. ನರಸಿಂಹಾಚಾರ್, ಕೆ. ಜಿ. ಕುಂದಣಗಾರ ಮುಂತಾದವರು ಸಾಹಿತ್ಯ ಚರಿತ್ರೆಯನ್ನೂ ಎ. ಎನ್. ನರಸಿಂಹಯ್ಯ, ಜಿ. ಎಸ್. ಗಾಯಿ ಅವರು ಶಾಸನಗಳ ಮೂಲಕ ಭಾಷಾ ಚರಿತ್ರೆಯನ್ನೂ ಎಸ್. ಸಿ. ನಂದೀಮಠರು ಧಾರ್ಮಿಕ ಚರಿತ್ರೆಯನ್ನೂ ಶಂ. ಬಾ. ಜೋಶಿ ಮುಂತಾದವರು ಸಾಂಸ್ಕೃತಿಕ ಚರಿತ್ರೆಯನ್ನೂ ಎಂ. ಎಚ್. ಕೃಷ್ಣ, ಶಿವರಾಮ ಕಾರಂತರು ಕಲೆಗಳ ಚರಿತ್ರೆಯನ್ನೂ ಎಂ. ಎ. ರಾಮಾನುಜಯ್ಯಂಗಾರ್, ಎಸ್. ಜಿ. ನರಸಿಂಹಾಚಾರ್, ಎ. ಆರ್. ಕೃಷ್ಣಶಾಸ್ತ್ರಿ, ಟಿ. ಎಸ್. ವೆಂಕಣ್ಣಯ್ಯ, ಎ. ಶಾಂತಿರಾಜ ಶಾಸ್ತ್ರಿ, ಶಿ. ಶಿ. ಬಸವನಾಳ, ಉತ್ತಂಗಿ ಚನ್ನಪ್ಪ, ಡಿ. ಎಲ್. ಎನ್, ತೀನಂಶ್ರೀ, ಎಚ್. ದೇವೀರಪ್ಪ, ಎನ್. ಬಸವಾರಾಧ್ಯ ಮೊದಲಾದವರು ಪ್ರಾಚೀನ ಗ್ರಂಥಗಳ ಪರಿಷ್ಕರಣ ಕಾರ್ಯವನ್ನೂ ಫ. ಗು. ಹಳಕಟ್ಟಿ, ಚೆನ್ನಮಲ್ಲಿಕಾರ್ಜುನರು, ಶಿ. ಶಿ. ಬಸವನಾಳರು, ಎಲ್. ಬಸವರಾಜು, ಆರ್. ಸಿ. ಹಿರೇಮಠ, ಸಂ. ಶಿ. ಭೂಸನೂರಮಠರು ವಚನ ಸಾಹಿತ್ಯ ಪರಿಷ್ಕರಣವನ್ನೂ ನೆರವೇರಿಸಿದರು. ಇದರೊಂದಿಗೆ ``South Indian Inscriptions '', `` Karnatak Inscritions'' ಹೆಸರಿನ ಸಂಪುಟಗಳಲ್ಲಿ ಶಾಸನಗಳು ಪ್ರಕಟಗೊಂಡವು. ಹಲಸಂಗಿ ಗೆಳೆಯರ ಮೂಲಕ ಜನಪದ ಸಾಹಿತ್ಯ ಸಂಗ್ರಹಣೆ, ಪ್ರಕಟನೆ, ವಿವೇಚನೆ ಕಾರ್ಯ ನಡೆಯಿತು. ಹೀಗೆ ಲಭ್ಯವಿದ್ದ ಆಕರ ಸಾಮಗ್ರಿಯನ್ನು ಬಳಸಿಕೊಂಡು ನಾಡಿನ ಸಾಹಿತ್ಯ, ಧರ್ಮ, ರಾಜಕೀಯ, ಕಲೆ, ಸಂಸ್ಕೃತಿ, ಭಾಷೆಗಳ ಚರಿತ್ರೆಯ ಕ್ರಮಬದ್ಧ ವಿಕಾಸವನ್ನು ವಿನ್ಯಾಸಗೊಳಿಸುವ, ವಿವೇಚಿಸುವ ಕಾರ್ಯ ಪೂರೈಸಲ್ಪಟ್ಟಿತು. ಹೀಗೆ ಕನ್ನಡ ಸಂಶೋಧನೆಯ ಎರಡನೆಯ ಘಟ್ಟದಲ್ಲಿ ಸಂಶೋಧನ ಲೇಖನ, ಗ್ರಂಥಗಳು ಪ್ರಕಟಗೊಳ್ಳುವುದರೊಂದಿಗೆ ಈ ಘಟ್ಟದಲ್ಲಿ ಕನ್ನಡ ಸಂಶೋಧನೆ ಬಹುಮುಖವಾಗಿ ನೆರವೇರಿದುದು ವ್ಯಕ್ತವಾಗುತ್ತದೆ. ಈ ಸಮಯದ ಕನ್ನಡ ಸಂಶೋಧನೆ ಹೆಚ್ಚಾಗಿ `ಆಕರ ಮೂಲದ ಸಂಶೋಧನೆ ' (Data - Oriented Research) ಆಗಿರುತ್ತದೆ. ಎಂ. ಗೋವಿಂದ ಪೈ, ಎ. ವೆಂಕಟ ಸುಬ್ಬಯ್ಯ, ಮುಳಿಯ ತಿಮ್ಮಪ್ಪಯ್ಯ, ಶಂ. ಬಾ. ಜೋಶಿ ಅವರ ಲೇಖನ, ಕೃತಿಗಳೂ ಆರ್. ನರಸಿಂಹಾಚಾರ್‌ರ ಕವಿಚರಿತೆಯ ಸಂಪುಟಗಳೂ ಫ. ಗು. ಹಳಕಟ್ಟಿ, ಚೆನ್ನಮಲ್ಲಿಕಾರ್ಜುನರ ಲೇಖನ - ಗ್ರಂಥಗಳೂ `ಆಕರ ಮೂಲದ ಸಂಶೋಧನೆ ' ಗೆ ಉತ್ತಮ ಉದಾಹರಣೆಗಳಾಗಿರುತ್ತವೆ.

ಡಿ. ಎಲ್. ನರಸಿಂಹಾಚಾರ್, ಶಿ. ಶಿ. ಬಸವನಾಳ, ಎಸ್. ಸಿ. ನಂದೀಮಠ, ಶಂ. ಬಾ. ಜೋಶಿ, ತೀನಂಶ್ರೀ, ಆರ್.ಸಿ. ಹಿರೇಮಠ, ಎಲ್. ಬಸವರಾಜು ಮೊದಲಾದ ವಿದ್ವಾಂಸರು ತಮ್ಮ ಲೇಖನ -ಗ್ರಂಥಗಳ ಮೂಲಕ ಸಂಶೋಧನೆಗೆ ಹೊಸ ಆಯಾಮ ನೀಡಿದರು. ಆದರೂ ಈ ಕಾಲದ ಸಂಶೋಧನೆ ಕವಿಯ ಕಾಲ, ದೇಶ, ಮತ,ಮನೆತನ ಮತ್ತು ಕೃತಿ ವಿಮರ್ಶೆಗಳಿಗೆ ಮಾತ್ರ ಸೀಮಿತವಾಗಿದ್ದಿತು. ಇವರು `ರೂಪಸಿಷ್ಮ ಸಂಶೋಧನೆ ' ಯನ್ನೂ ಕೆಲವು ಸಲ `ಗುಣಸಿಷ್ಮ ಸಂಶೋಧನೆ 'ಯನ್ನೂ ಕೈಕೊಂಡರು. ಹೀಗೆ ಕನ್ನಡ ಸಂಶೋಧನೆ ಎರಡನೆಯ ಘಟ್ಟದಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ಸಂಬಂಧಿಸಿದ ಘಟನಾಶೋಧ, ಅಂದರೆ ರೂಪಸಿಷ್ಮ ಶೋಧ ಕಾರ್ಯ ಅಧಿಕ ಪ್ರಮಾಣದಲ್ಲಿ ಬೆಳೆದುಬರುವಂತಾಯಿತು.

ಇಲ್ಲಿಯ ಕೆಲವು ವಿದ್ವಾಂಸರ ಸಂಶೋಧನ ಲೇಖನ, ಗ್ರಂಥಗಳು ಆಕರಗಳ ಜಟಿಲತೆ, ವಿಪುಲತೆಗಳಿಂದ, ವಿದ್ವತ್ತಿನ ಭಾರದಿಂದ ಓದುಗರಿಗೆ ಕಗ್ಗಂಟಾಗಿ ಪರಿಣಮಿಸಿದವು. ಕೆಲವರ ಬರಹದಲ್ಲಿ ಬರುವ ಆಲಂಕಾರಿಕ ಭಾಷೆ, ಆಡಂಬರದ ಶೈಲಿ, ಕ್ಲಿಷ್ಟವಾದ ನಿರೂಪಣೆಗಳು ಸಂಶೋಧನೆಯನ್ನು ಮಸುಕುಗೊಳಿಸಿಬಿಟ್ಟಿವೆ. ಇನ್ನೂ ಕೆಲವರ ಪ್ರತಿಪಾದನ ವಿಚಾರ, ನಿರೂಪಣ ವಿಧಾನಗಳು ಸುಲಭವಾಗಿ ಅರ್ಥವಾಗುವುದಿಲ್ಲ. ಅವ್ಯವಸ್ಥಿತವಾದ ಆಲೋಚನೆ, ಶಿಥಿಲ ಶೈಲಿಗಳ ಮೂಲಕ ಸಂಶೋಧನ ಕೃತಿಗಳು ಓದುಗರಿಂದ ದೂರ ಉಳಿಯುವ ಸ್ಥಿತಿಯನ್ನು ಪಡೆದುಕೊಳ್ಳುವಂತಾಯಿತು. ಆದರೆ ಈ ವಿದ್ವಾಂಸರು ವಿವಿಧ ಮೂಲಗಳಿಂದ ಆಕರಗಳನ್ನು ಸಂಗ್ರಹಿಸಿದ ರೀತಿ, ಪಟ್ಟ ಪರಿಶ್ರಮ, ರೂಪಿಸಿದ ಸಂಯೋಜನ ಕ್ರಮ, ಮಾಡಿದ ತರ್ಕ, ಎತ್ತಿದ ಸಮಸ್ಯೆಗಳು ನಿಬ್ಬೆರಗುಗೊಳಿಸುವಂತಿವೆ. ಮುಂದಿನ ಸಂಶೋಧನೆಗೆ ಇವು ಪ್ರೇರಣೆಯನ್ನೂ ದಿಕ್ಸೂಚಿಯನ್ನೂ ಒದಗಿಸುವಂಥವುಗಳಾಗಿರುತ್ತವೆ. ಈ ಘಟ್ಟದ ವಿದ್ವಾಂಸರ ದಣಿವರಿಯದ ದುಡಿಮೆ, ಪ್ರಾಮಾಣಿಕ ಪ್ರಯತ್ನ, ಸಾಗರ ಸದೃಶ ಸಾಹಸ, ಆಳವಾದ ಅಧ್ಯಯನ, ಸಂಶೋಧನ ಪ್ರಯೋಗ ದೃಷ್ಟಿ, ಉತ್ತುಂಗ ವಿದ್ವತ್ತು, ಸಾತ್ವಿಕ ಧೈರ್ಯಗಳು ನೆನೆಯುವಂಥವುಗಳಾಗಿವೆ.

ಕನ್ನಡ ಸಂಶೋಧನೆಯ ಮೂರನೆಯ ಘಟ್ಟದಲ್ಲಿ ಆಕರ ಶೋಧ, ಆಕರಗಳ ರೂಪನಿಷ್ಠ ಶೋಧಗಳೊಂದಿಗೆ `ಆಕರಗಳ ಗುಣನಿಷ್ಠ ಶೋಧ ' ವಿಶೇಷವಾಗಿ ಬೆಳೆದು ಬರುವಂತಾಯಿತು. ಈಗ ರಾಜಕೀಯ ಚರಿತ್ರೆಗೆ ಮಾತ್ರ ಮೀಸಲಾಗಿದ್ದ ಶಾಸನಗಳನ್ನು ಸಾಂಸ್ಕೃತಿಕ ಚರಿತ್ರೆಯ ರಚನೆಗಾಗಿಯೂ ಆಕರ ಸಾಮಗ್ರಿಗಳನ್ನಾಗಿ ಬಳಸಿಕೊಳ್ಳುವ ಉಪಕ್ರಮ ಆರಂಭಗೊಂಡಿತು. ಈಗ ಇತಿಹಾಸದ ಅಧ್ಯಾಪಕರಿಗೆ ಮಾತ್ರ ಸೀಮಿತಗೊಂಡಿದ್ದ ಶಾಸನಗಳ ಅಧ್ಯಯನ, ಕನ್ನಡ ಅಧ್ಯಾಪಕರ ತೀವ್ರ ಹಾಗೂ ಸೂಕ್ಷ್ಮ ಚಿಂತನೆಗಳಿಂದ ಹೊಸ ಹೊಸ ಆಯಾಮಗಳನ್ನು ಪಡೆದುಕೊಳ್ಳುವಂತಾಯಿತು. ಆ ಮೂಲಕ ಸಾಂಸ್ಕೃತಿಕ ಚರಿತ್ರೆಯ ಹಲವಾರು ಹೊಸ ಬಾಗಿಲುಗಳು ತೆರೆದುಕೊಂಡವು. ಈ ನಿಟ್ಟಿನಲ್ಲಿ ಡಾ. ಎಂ. ಚಿದಾನಂದ ಮೂರ್ತಿ ಅವರ ``ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ '' ಪ್ರಥಮ ಹಾಗೂ ಮೌಲಿಕ ಪ್ರಯತ್ನವೆನಿಸಿದೆ. ಆಮೇಲೆ ಕನ್ನಡ ಅಧ್ಯಾಪಕರು ಶಾಸನಗಳ ನೆಲೆಯಿಂದ ನಾಡಿನ ಸಂಸ್ಕೃತಿಯ ವಿವಿಧ ಮುಖಗಳ ಅಧ್ಯಯನವನ್ನು ವ್ಯಾಪಕವಾಗಿ, ವ್ಯವಸ್ಥಿತವಾಗಿ ಕೈಕೊಂಡು ಸಾಂಸ್ಕೃತಿಕ ಚರಿತ್ರೆಗೆ ಅಪೂರ್ವ ಕೊಡುಗೆ ನೀಡಿದರು. ನಾಡಿನ ಸಾಂಸ್ಕೃತಿಕ ಚರಿತ್ರೆಯ ಅಧ್ಯಯನಕ್ಕೆ ಮಾದರಿಯೆನಿಸಿದರು. ಶಾಸನಗಳಲ್ಲಿ ಕರ್ನಾಟಕದ ವರ್ತಕರು, ತರ್ದವಾಡಿ ನಾಡು, ಕರ್ನಾಟಕದಲ್ಲಿ ಸತಿ ಪದ್ಧತಿ, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಆರನೆಯ ವಿಕ್ರಮಾದಿತ್ಯನ ಶಾಸನಗಳು - ಒಂದು ಅಧ್ಯಯನ, ನಾಗರಖಂಡ -ಎಪ್ಪತ್ತು, ಕರ್ನಾಟಕದ ವೀರಗಲ್ಲುಗಳು, ವಿಜಯನಗರ ಕಾಲದ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಶಾಸನಗಳು ಮತ್ತು ಸಂಸ್ಕೃತಿ, ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಮತ್ತು ಸಂಪಾದನೆ ಮೊದಲಾದವು ಕರ್ನಾಟಕ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ಮಹತ್ವದ ಸಂಶೋಧನ ಗ್ರಂಥಗಳಾಗಿರುತ್ತವೆ.

ಇದೇ ಸಮಯದಲ್ಲಿ ಕವಿ ಕೃತಿಗಳ ಸಾಮಾಜಿಕ - ಸಾಂಸ್ಕೃತಿಕ ಅಧ್ಯಯನವೂ ಆಕಾರ ಪಡೆಯಿತು. ವಿದ್ವಾಂಸರ ಶ್ರದ್ಧೆಯ ಅಧ್ಯಯನದಿಂದ ಕವಿ-ಕೃತಿಗಳ ಸಾಂಸ್ಕೃತಿಕ ಅಧ್ಯಯನದ

ಮೌಲಿಕ ಗ್ರಂಥಗಳು ಹೊರಬಂದವು. ಕವಿ - ಕೃತಿ ಮತ್ತು ಶಾಸನಗಳ ಸಾಂಸ್ಕೃತಿಕ ಅಧ್ಯಯನ ಈ ಘಟ್ಟದ ಪ್ರಮುಖ ಒಲವು ಎನಿಸಿಕೊಂಡಿತು. ಇದರಿಂದ ಕನ್ನಡ ಸಾಹಿತ್ಯದ ಅಧ್ಯಯನದಲ್ಲಿ ಹೊಸತಿರುವು, ನೂತನ ಅಧ್ಯಾಯ ಆರಂಭಗೊಂಡಿತು. ವಚನ ಸಾಹಿತ್ಯ - ಒಂದು ಸಾಂಸ್ಕೃತಿಕ ಅಧ್ಯಯನ, ನಯಸೇನ ಮತ್ತು ಅವನ ಕೃತಿಗಳು, ಪಂಪಭಾರತ ಒಂದು ಸಾಂಸ್ಕೃತಿಕ ಅಧ್ಯಯನ, ಶ್ರೀಕೃಷ್ಣ ಪಾರಿಜಾತ - ಒಂದು ಅಧ್ಯಯನ, ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ, ಭರತೇಶ ವೈಭವ - ಸಾಂಸ್ಕೃತಿಕ ಅಧ್ಯಯನ, ಕೊಡೇಕಲ್ಲ ಬಸವಣ್ಣ - ಒಂದು ಅಧ್ಯಯನ, ಮುದನೂರ ದಾಸಿಮಯ್ಯ - ಒಂದು ಅಧ್ಯಯನ, -ಕುಮಾರ ವಾಲ್ಮೀಕಿ - ಒಂದು ಅಧ್ಯಯನ, ನಾಗಚಂದ್ರ - ಒಂದು ಅಧ್ಯಯನ, ಬ್ರಹ್ಮಶಿವ - ಒಂದು ಅಧ್ಯಯನ, ಪುರಂದರ ದಾಸರ ಮತ್ತು ಅನ್ನಮಾಚಾರ್ಯರ ಕೀರ್ತನೆಗಳ ಸಾಂಸ್ಕೃತಿಕ ಅಧ್ಯಯನ, ಮಲೆಯ ಮಾದೇಶ್ವರ- ಒಂದು ಅಧ್ಯಯನ, ಚನ್ನಬಸವ ಪುರಾಣ - ಒಂದು ಅಧ್ಯಯನ, ತುರಂಗ ಭಾರತ- ಒಂದು ಅಧ್ಯಯನ, ಬ್ರಹ್ಮಶಿವ : ಒಂದು ಅಧ್ಯಯನ, ರಾಘವಾಂಕ ಒಂದು ಅಧ್ಯಯನ ಮುಂತಾದವು ಕವಿ- ಕೃತಿಗಳ ಸಾಮಾಜಿಕ -ಸಾಂಸ್ಕೃತಿಕ ಅಧ್ಯಯನದ ಉಪಯುಕ್ತ ಸಂಶೋಧನ ಕೃತಿಗಳಾಗಿರುತ್ತವೆ.

ಕವಿ ಹಾಗೂ ಅವನ ಕೃತಿಗಳನ್ನು ಸಂಸ್ಕೃತ, ಪ್ರಕೃತ ಮುಂತಾದ ಭಾಷೆಗಳಲ್ಲಿರುವ ಮೂಲಕವಿ- ಕೃತಿಗಳೊಂದಿಗೆ ತೂಗಿ ನೋಡಿ, ಬೆಲೆ ಕಟ್ಟುವ ತೌಲನಿಕ ಸಂಶೋಧನ ಕಾರ್ಯವೂ ಕವಿಸಾಹಿತ್ಯ, ಶಾಸನಸಾಹಿತ್ಯ,ಜನಪದ ಸಾಹಿತ್ಯಗಳ ತೌಲನಿಕ ಅಧ್ಯಯನವೂ ಪ್ರಾರಂಭ ಗೊಂಡಿತು. ಕನ್ನಡ ನೇಮಿಪುರಾಣಗಳ ತೌಲನಿಕ ಅಧ್ಯಯನ, ಕನ್ನಡದಲ್ಲಿ ನಂಬಿಯಣ್ಣ ಸಾಹಿತ್ಯಃ ಒಂದು ಅಧ್ಯಯನ, ಮಹಾದೇವಿಯಕ್ಕ ಮತ್ತು ಕಾರಿಕಾಲಮ್ಮ - ತೌಲನಿಕ ಅಧ್ಯಯನ, ವೃತ್ತವಿಲಾಸನ ಧರ್ಮಪರೀಕ್ಷೆಃ ತೌಲನಿಕ ಅಧ್ಯಯನ, ಶಬ್ದಮಣಿದರ್ಪಣ - ಲೀಲಾತಿಲಕಂ -ತೌಲನಿಕ ಅಧ್ಯಯನ, ಮಹಾಭಾರತ ಸಮೀಕ್ಷೆ (ವ್ಯಾಸ -ಪಂಪ - ನಾರಣಪ್ಪರ ಕೃತಿಗಳ ತೌಲನಿಕ ಅಧ್ಯಯನ), A comparative study of Tiruvalluvar, Veman and Sarvajna, Tolkappiyam and Sabdamanidarpan: A comparative study. ಕರ್ನಾಟಕ ಕಾದಂಬರಿ - ಒಂದು ವಿಮರ್ಶಾತ್ಮಕ ಮತ್ತು ತೌಲನಿಕ ಅಧ್ಯಯನ, ನನ್ನೂಲ್ ಮತ್ತು ಶಬ್ದಮಣಿ ದರ್ಪಣ ಒಂದು -ತೌಲನಿಕ ಅಧ್ಯಯನ, ಕರ್ಣಾಟಕ ಶಬ್ದಾನುಶಾಸನ ಶಬ್ದಮಣಿದರ್ಪಣ : ಒಂದು ತೌಲನಿಕ ಅಧ್ಯಯನ,ಕನ್ನಡದಲ್ಲಿ ರಾಮಾಯಣ ಮಹಾಕಾವ್ಯಗಳು - ಶ್ರೀರಾಮಾಯಣದರ್ಶನಂ ಮತ್ತು ಕಂಬರಾಮಾಯಣ, ಕನ್ನಡ ಜೀವಂಧರ ಚರಿತ್ರೆಗಳ ತೌಲನಿಕ ಅಧ್ಯಯನ, ಕನ್ನಡ ಆದಿತೀರ್ಥಂಕರ ಚರಿತ್ರೆಗಳು, ಹರಿಶ್ಚಂದ್ರನ ಕಥೆ -ಭಾರತೀಯ ಸಾಹಿತ್ಯ ಪರಂಪರೆಯಲ್ಲಿ, ಚೌಂಡರಸ -ತೌಲನಿಕ, ವಿಮರ್ಶಾತ್ಮಕ ಅಧ್ಯಯನ, ಸೂಪಿಪಥ ಮತ್ತು ಶರಣಪಥ - ಒಂದು ತೌಲನಿಕ ಅಧ್ಯಯನ, ನಂಬಿಯಣ್ಣ : ಒಂದು ಅಧ್ಯಯನ, ಬಸವೇಶ್ವರ ಮತ್ತು ಪುರಂದರ ದಾಸರು : ಒಂದು ಅಧ್ಯಯನ, ಪಂಪ - ನನ್ನಯ : ತೌಲನಿಕ ಅಧ್ಯಯನ,ಅಂಡಾಳ -ಮಹಾದೇವಿ -ಮೀರಾ, ಕನ್ನಡದಲ್ಲಿ ನಳ ಚರಿತ್ರೆಗಳು ಮೊದಲಾದವು ಈ ದಿಶೆಯಲ್ಲಿ ಕೈಕೊಂಡ ತೌಲನಿಕ ಅಧ್ಯಯನದ ಪ್ರಯತ್ನಗಳಾಗಿರುತ್ತವೆ.

ಒಂದು ಅರಸುಮನೆತನ ಮತ್ತು ಅರಸುಮನೆತನದ ಒಬ್ಬ ಅರಸನ ಕಾಲಾವಧಿಯಲ್ಲಿ ರಚಿತವಾದ ಸಾಹಿತ್ಯದ ಬಗ್ಗೆಯೂ ಸಂಶೋಧಕರು ಗಮನಹರಿಸಿದರು.

ಕೆಳದಿ ಅರಸರ ಕಾಲದ ಕನ್ನಡ ಸಾಹಿತ್ಯ, ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ, ಸಿರಸಂಗಿ ಸಂಸ್ಥಾನ - ಒಂದು ಅಧ್ಯಯನ, ಹೊಯ್ಸಳರ ಕಾಲದ ಕನ್ನಡ ಸಾಹಿತ್ಯ ಮುಂತಾದವು ಈ ಮಾದರಿಯಲ್ಲಿ ರಚಿತವಾದ ಸಂಶೋಧನ ಗ್ರಂಥಗಳಾಗಿರುತ್ತವೆ. ಸಾಂಸ್ಕೃತಿಕ ಹಾಗೂ ಐತಿಹಾಸಿಕ ಕೇಂದ್ರವೊಂದನ್ನು ವಸ್ತುವಾಗಿರಿಸಿಕೊಂಡು ಅಧ್ಯಸಿಸುವ, ಪ್ರಾಚೀನ ರಾಜಕೀಯ ವಿಭಾಗಗಳನ್ನು ಕುರಿತು ವಿವೇಚಿಸುವ ಪ್ರವೃತ್ತಿಗೂ ಸ್ಥಾನ ಲಭಿಸಿತು. ಉದಾ : ಶ್ರವಣಬೆಳ್ಗೊಳ - ರಾಜಕೀಯ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಮಹತ್ವ, ಪುಲಿಗೆರೆ - ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವ, ತರ್ದವಾಡಿ ನಾಡು - ಒಂದು ಅಧ್ಯಯನ, ನಾಗರಖಂಡ - ಎಪ್ಪತ್ತು ಪುಲಿಗೆರೆ ಮುನ್ನೂರು ಇತ್ಯಾದಿ.

ಕನ್ನಡದ ಶಿಷ್ಟಪದ - ಜನಪದ ಸಾಹಿತ್ಯಗಳ ಸಾಮಗ್ರಿಯನ್ನು ಸಮಾಜೋ ಧಾರ್ಮಿಕ, ಸಾಂಸ್ಕೃತಿಕ ದೃಷ್ಟಿಕೋನಗಳಿಂದ ವಿಶ್ಲೇಷಿಸುವುದೂ (ಸೂರ್ಯ ಗ್ರಹಣ ಸಮಾಜೋ - ಧಾರ್ಮಿಕ ಅಧ್ಯಯನ, ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ ಜಾನಪದ : ಸಾಮಾಜಿಕ ಕಥನ ಗೀತೆಗಳಲ್ಲಿ ದುಃಖಾಂತ ನಿರೂಪಣೆ, ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ, ಹೈದರಾಬಾದ ಕರ್ನಾಟಕದ ಜನಪದ ಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ, ಕೈಫಿಯತ್ತು, ಪ್ರಾದೇಶಿಕ ಅರಸುಮನೆತನಗಳು, ಪ್ರಾದೇಶಿಕ ಜನಪದ ಸಾಹಿತ್ಯ ಮೊದಲಾದ ಹೊಸಕ್ಷೇತ್ರಗಳನ್ನು ಕುರಿತು ವಿವೇಚಿಸಿರುವುದೂ (ಮೆಕೆಂಜಿ ಕೈಫಿಯತ್ತುಗಳು, ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತುಗಳು, ತುಳುನಾಡಿನ ಅರಸುಮನೆತನಗಳು, ತುಳು ಜಾನಪದ) ಕಂಡುಬರುತ್ತದೆ. ಸಂಶೋಧನೆಯ ಈ ಬಹುಮುಖ ಒಲವುಗಳೊಂದಿಗೆ ಕವಿಕೃತಿಗಳ ಪಾತ್ರ ಚಿತ್ರಣ, ಸಾಹಿತ್ಯ ಪ್ರಕಾರಗಳ ಅಧ್ಯಯನವೂ (ಕನ್ನಡ ಸಾಹಿತ್ಯದಲ್ಲಿ ಕರ್ಣ, ಚಿತ್ರಾಂಗದೆ - ಒಂದು ಅಧ್ಯಯನ, ಏಕಲವ್ಯ - ಒಂದು ಅಧ್ಯಯನ, ಕನ್ನಡ ಮಹಾಕಾವ್ಯಗಳಲ್ಲಿ ಸೀತೆಯ ಪಾತ್ರ, ಪ್ರಾಚೀನ ಕನ್ನಡ ಕೃತಿಗಳಲ್ಲಿ ದ್ರೌಪದಿ ಪಾತ್ರಚಿತ್ರಣ, ಕನ್ನಡ ಸಾಂಗತ್ಯ ಸಾಹಿತ್ಯ) ಕಾಲಿಟ್ಟಿತು. ಕನ್ನಡ ಹಸ್ತಪ್ರತಿಗಳು - ಒಂದು ಅಧ್ಯಯನದಂಥ ವಿಶಿಷ್ಟ ಸಂಶೋಧನ ಕೃತಿಯೂ ರಚಿತವಾಯಿತು.

ಇದರೊಂದಿಗೆ ಜನಪದ ಸಾಹಿತ್ಯದ ವಿವಿಧ ಪ್ರಕಾರ, ಜಾನಾಂಗಿಕ, ಸಾಂಸ್ಕೃತಿಕ ಅಧ್ಯಯನ, ಆಚರಣೆ, ನಂಬಿಕೆ, ಸಂಪ್ರದಾಯ, ಜನಪದ ರಂಗಭೂಮಿ, ವೃತ್ತಿರಂಗಭೂಮಿ, ಜನಪದ ಚಿತ್ರಕಲೆ ಮೊದಲಾದ ವಿಷಯಗಳ ಸಂಶೋಧನೆಗೂ ಸೂಕ್ತ ಅವಕಾಶ ದೊರಕಿತು. ಉತ್ತರ ಕರ್ನಾಟಕದ ಬಯಲಾಟಗಳು, ಉತ್ತರ ಕರ್ನಾಟಕದ ಜನಪದ ಕಲೆ ಮತ್ತು ಕ್ರಿಯೆಗಳು, ಜನಪದ ಒಗಟುಗಳು, ಕರ್ನಾಟಕದ ಗೊಂಬೆಲಿಗರು ಹಾಗೂ ಅವರ ಸಾಹಿತ್ಯ, ಹಾಲಕ್ಕಿ ಜನಪದ ಜೀವನ ಮತ್ತು ಸಾಹಿತ್ಯ, ಕರ್ನಾಟಕದ ಲಂಬಾಣಿಗಳು - ಒಂದು ಸಾಂಸ್ಕೃತಿಕ ಅಧ್ಯಯನ, ಉತ್ತರ ಕರ್ನಾಟಕದ ಜನಪದ ಆಟಗಳು, ಕರ್ನಾಟಕದ ಜನಪದ ಚಿತ್ರಕಲೆ, ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು, ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ, ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿ, ಕಾಡುಗೊಲ್ಲರ ಸಂಪ್ರದಾಯಗಳು

ತ್ತು ಸಂಪಿಗೆಗಳು, ದಕ್ಷಿಣ ಕರ್ನಾಟಕದ ಜನಪದ ಪುರಾಣಗಳು, ಮಲೆನಾಡಿನ ಒಕ್ಕಲಿಗರು ತ್ತು ಅವರ ಜಾನಪದ, ಕನ್ನಡ ಲಾವಣಿಗಳು, ಗೊಂಡರು - ಒಂದು ಸಾಂಸ್ಕೃತಿಕ ಅಧ್ಯಯನ, ಕ್ರಿದುರ್ಗ ಜಿಲ್ಲೆಯ ಕೃಷಿ ಜಾನಪದ, ಜೈನ ಜಾನಪದ, ಕರ್ನಾಟಕದ ಜನಪದ ಪಾದ್ಯಗಳು, ಹಗೊಲ್ಲರು, ಗ್ರಾಮದೇವತೆಗಳು - ಒಂದು ಜಾನಪದ ಅಧ್ಯಯನ, ಹಾಲಕ್ಕಿ ಸಮಾಜ ಒಂದು ಅಧ್ಯಯನ, ಬೇಡ ನಾಯಕರು - ಒಂದು ಸಾಂಸ್ಕೃತಿಕ ಅಧ್ಯಯನ, ಹೈದರಾಬಾದ ರ್ನಾಟಕದ ಜನಪದ ಸಾಹಿತ್ಯ - ಒಂದು ಸಾಂಸ್ಕೃತಿಕ ಅಧ್ಯಯನ, ಉತ್ತರ ಕರ್ನಾಟಕದ ಯಾಣ ಜನಪದ ಸಾಹಿತ್ಯ - ಒಂದು ಅಧ್ಯಯನ, ಭೂತರಾಧನೆ - ಒಂದು ಅಧ್ಯಯನ, ಕ್ಷಿಣ ಕನ್ನಡ ಜಿಲ್ಲೆಯ ಛೌರರು ಮುಂತಾದವು ಜನಪದ ಸಂಶೋಧನೆಯು ಕ್ಷೇತ್ರದಲ್ಲಿ ಸರಬಂದ ಸಂಶೋಧನ ಮಹಾಪ್ರಬಂಧ ಗ್ರಂಥಗಳಾಗಿರುತ್ತವೆ. ಇದರಿಂದ ಜನಪದವನ್ನು ಂಡ ಹೊಸ ನೆಲೆಗಳಿಂದ ಅಭ್ಯಸಿಸಿ, ಜನಪದ ಸಾಹಿತ್ಯ ಸಂಶೋಧನೆಗೆ ಶಾಸ್ತ್ರೀಯ ಅಡಿಪಾಯ ರುವ ದೃಷ್ಟಿಕೋನ ಪ್ರಬಲಗೊಳ್ಳುವಂತಾಯಿತು.

ಾಡಿನ ಸಾಂಸ್ಕೃತಿಕ ಚರಿತ್ರೆಯ ಅಧ್ಯಯನದಲ್ಲಿ ಮಹತ್ವದ ಘಟಕಗಳೆನಿಸಿದ ಕ್ಷೇತ್ರಗಳು. ಸ್ಥಳನಾಮಗಳ ಕಡೆಗೆ ಸಂಶೋಧಕರು ವಿಶೇಷ ಗಮನ ಹರಿಸಿದರು. ತುಳುನಾಡಿನ ಳನಾಮಗಳು, ಸ್ಥಳನಾಮ ಅಧ್ಯಯನ, ಬೀದರ ಜಿಲ್ಲೆಯ ಸ್ಥಳನಾಮಗಳು, ಕೆಲವು ಶನಾಮಗಳು, ಶಾಸನಗಳಲ್ಲಿ ವ್ಯಕ್ತಿನಾಮಗಳು, ಶಾಸನಗಳಲ್ಲಿ ಸ್ಥಳನಾಮಗಳು - ಇವು ಕ್ಷೇತ್ರದಲ್ಲಿ ಕೈಗೊಂಡ ಮಹತ್ವದ ಅಧ್ಯಯನಗಳಾಗಿರುತ್ತವೆ. ಆದರೆ ಈ ಕ್ಷೇತ್ರದಲ್ಲಿ ನ್ನು ಆಗಬೇಕಾದ ಕೆಲಸ ಅಪಾರವಿದೆಯೆಂಬುದನ್ನು ಮರೆಯಬಾರದು. ಕನ್ನಡ ಭಾಷೆಯ ರಿತ್ರಿಕ ಮತ್ತು ತೌಲನಿಕ ಸಂಶೋಧನ ಕಾರ್ಯವೂ ಉಪಭಾಷೆಗಳ ಅಧ್ಯಯನ ಕಾರ್ಯವೂ ಸಮಯದಲ್ಲಿ ಆರಂಭವಾಯಿತು. ಬಿ. ಎಂ. ಕಲಬುರ್ಗಿ, ಎಸ್. ಶಿವಣ್ಣ, ಪಿ. ಬಿ. ರಿರಾಜು, ಜಿ. ಎ. ಶಿವಲಿಂಗಯ್ಯ, ಎಸ್. ವಿದ್ಯಾಶಂಕರ, ಬಿ. ಆರ್. ಹಿರೇಮಠ, ಪಿ. ಬಿ. ಜಪುರ ಮೊದಲಾದವರಿಂದ 'ಶಿಕರಶೋಧ' ಕಾರ್ಯ ವ್ಯಾಪಕವಾಗಿ ನಡೆದುಕೊಂಡು ಂದಿತು. ಇದಲ್ಲದೆ ಸಾಹಿತ್ಯಿಕ ಪಟ್ಟಿಗಳನ್ನು ಅಯಾ ಕಾಲದ ಪ್ರೌಢಶಾಲೆಯ ಹೈಸ್ಕೂಲಿಯಲ್ಲಿ ಭ್ಯಸಿಸಿದುದಲ್ಲದೆ (ಕನ್ನಡ ಸಹೋದಯ ಮತ್ತು ಬಿ. ಎಂ. ಶ್ರೀ : ಕರ್ನಾಟಕದ ಿಕರಣ) ಸಾಹಿತ್ಯ ಮತ್ತು ಸಂಸ್ಕೃತಿಗಳಿಗಿರುವ ಸಂಬಂಧದ ಅಧ್ಯಯನ (ಭಾರತೀಯತೆ ಮತ್ತು ಕನ್ನಡ ಲೇಖಕ) ಸಾಹಿತ್ಯ ಪರಿಕಲ್ಪನೆಗಳ ಸವಾಲೆಸೆಯಿಸಿ (ಶಾಂತಿನಾಥ ದೇಸಾಯಿ ರುವರ ಅಸ್ತಿತ್ವವಾದಿ ಕಾದಂಬರಿಗಳು) ನಡೆಸಲಾಗಿದೆ.

ಕನ್ನಡ ಕಾವ್ಯ, ಶಾಸ್ತ್ರ, ಛಂದಸ್ಸು, ವ್ಯಾಕರಣ, ಭಾಷೆಗಳಿಗೆ ಸಂಬಂಧಿಸಿದ ಅಂತರ್ ಶಿಸ್ತೀಯ ಅಧ್ಯಯನ ಹಾಗೂ ಒಂದು ವಿಷಯವನ್ನು ವಿವಿಧ ಮೂಲದ ಆಕರ ಸಾಮಗ್ರಿಗಳಿಂದ ಸಮಗ್ರವಾಗಿ ಅಭ್ಯಸಿಸುವ ಬಹುಶಿಸ್ತೀಯ ಅಧ್ಯಯನಗಳು ಕನ್ನಡ ಸಂಶೋಧನೆಯು ಇತ್ತೀಚಿನ ವಿಶಿಷ್ಟ ಧೋರಣೆಗಳಾಗಿರುತ್ತವೆ. ಈ ಬಗೆಯ ರೀತಿಯ ಅಧ್ಯಯನಗಳಿಂದ ಕನ್ನಡ ಸಂಶೋಧನೆ ವಿಷಯದ ಅಯಾಮಗಳನ್ನು ಪಡೆದುಕೊಂಡಂತಾಗಿದೆ. ಆರಿಸಿಕೊಂಡ ವಿಷಯಕ್ಕೆ ಸಂಬಂಧಿಸಿದ ಸರ್ವಮುಖದ ಆಕರಗಳನ್ನು ಬಳಸಿಕೊಂಡು ಮಾಡುವ ಈ ಬಹುಶಿಸ್ತೀಯ ಸಂಶೋಧನೆ 'ಸಮಗ್ರ ಸಂಶೋಧನೆ' ಎನಿಸಿಕೊಳ್ಳುತ್ತದೆ. ಮಧ್ಯಕಾಲೀನ ಕರ್ನಾಟಕ ಮತ್ತು ಸ್ಕೃತಿಯ ಪರಿಕಲ್ಪನೆ, ಸಂಸ್ಕೃತಿಯ ಸಮಾಜೀಯ - ಧಾರ್ಮಿಕ ಅಧ್ಯಯನ,

ಕರ್ನಾಟಕದಲ್ಲಿ ಸತಿ ಪದ್ಧತಿ, ಏಳುಕೊಳ್ಳುದ ಎಲ್ಲಮ್ಮ ಮೊದಲಾದವು ಈ ಮಾದರಿಯ
ಸಂಶೋಧನೆಯ ಮೌಲಿಕ ಕೃತಿಗಳಾಗಿರುತ್ತವೆ. ಈ ರೀತಿಯ ಸಂಶೋಧನೆ ವಿಧಾನದಿಂ
ಕನ್ನಡ ಸಂಶೋಧನೆಗೆ ಸಮಗ್ರತೆ ಸಂಪ್ರಾಪ್ತವಾಗುತ್ತಲಿದೆ. ಇಂಥ ಸಮಗ್ರ ಸಂಶೋಧನೆ
ಗಳು ಮಾತ್ರ ಸಂಶೋಧನ ಕ್ಷೇತ್ರವನ್ನು , ಸಂಶೋಧಕರನ್ನು ಬೆಳೆಸುತ್ತವೆ. ಬೆಳಕಾಗಿಸುತ್ತವೆ
ಶಂ. ಬಾ. ಜೋಶಿ, ಎಂ. ಚಿದಾನಂದಮೂರ್ತಿ, ಎಂ.ಎಂ. ಕಲಬುರ್ಗಿ ಮೊದಲಾದ
ಸಂಶೋಧಕರು ಹೊಸ ವ್ಯಾಖ್ಯಾನದ, ಹೊಸವಿಧಾನದ ತಮ್ಮ ಲೇಖನ -ಗ್ರಂಥಗಳ ಮೂಲಕ
ಈ ಮಾದರಿಯ ಸಂಶೋಧನೆಗಳನ್ನು ಉದ್ದೀಪನಗೊಳಿಸಿದ್ದಾರೆ. ಇದಲ್ಲದೆ ಜನಪದ
ಭಾಷಾವಿಜ್ಞಾನ, ಇತಿಹಾಸ, ಸಮಾಜಶಾಸ್ತ್ರ, ಪುರಾತತ್ವಶಾಸ್ತ್ರ, ಮನೋವಿಜ್ಞಾನದ ನೆಲ
ಗಳಿಂದಲೂ ಸಾಕಷ್ಟು ಸಂಖ್ಯೆಯ ವಿದ್ವಾಂಸರು ಕೈಕೊಂಡ ಬಹುಶಿಸ್ತೀಯ ಅಧ್ಯಯನದಿಂ
ಕನ್ನಡ ಸಂಶೋಧನೆ ವ್ಯಾಪಕತೆಯನ್ನು ಗಳಿಸಿಕೊಂಡಿದೆ. ಕನ್ನಡ ಸಂಶೋಧನ ಕ್ಷೇತ್ರದ ವಿವಿ
ಆಯಾಮಗಳಲ್ಲಿ ಕಾರ್ಯ ಮಾಡಿದ, ಮಾಡುತ್ತಲಿರುವ ಯುವ ಸಂಶೋಧಕರು ತಮ
ಅಮೂಲ್ಯ ಲೇಖನ - ಗ್ರಂಥಗಳಿಂದ ಕನ್ನಡ ಸಂಶೋಧನ ಕ್ಷೇತ್ರವನ್ನು ಬಹುರೂಪಿಯಾಗಿ
ದ್ದಾರೆ. ಹೀಗೆ ಕನ್ನಡ ಸಂಶೋಧನ ಸಾಹಿತ್ಯ ಹಲವು ಹದ, ಹಲವು ವಿಧಗಳಲ್ಲಿ ಹೊರಬರಲ
ಸಾಧ್ಯವಾಯಿತು. ಅಷ್ಟೇ ಅಲ್ಲ, ವಿವಿಧ ಒಲವುಗಳನ್ನು ಮೈಗೂಡಿಸಿಕೊಂಡು ಮುನ್ನ
ದುದರಿಂದ ಸಂಶೋಧನೆ ವ್ಯಾಪಕವಾಗಿ, ವೈವಿಧ್ಯಮಯವಾಗಿ ಬೆಳೆಯಲು ಅನುಕೂ
ವಾಯಿತು. ಇದರಿಂದ ಕನ್ನಡ ಸಂಶೋಧನ ಸಾಹಿತ್ಯದ ವಿಸ್ತಾರ, ವೈಶಿಷ್ಟ್ಯಗಳು ಪ್ರಕ
ಗೊಳ್ಳುವಂತಾಯಿತು.

ಶಿವಾನುಭವ, ಸದ್ವರ್ಮಪೀಪಿಕೆ, ಶರಣ ಸಾಹಿತ್ಯ, ಕರ್ನಾಟಕ ಭಾರತಿ, ವ್ಯಾಸ
ಕರ್ನಾಟಕ, ಸಾಧನೆ, ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಬಸವಪಥ, ಲೋಚನ, ಅಂಕ
ಸಂಶೋಧನ ವ್ಯಾಸಂಗ ಮೊದಲಾದ ವಿದ್ವತ್ ಪತ್ರಿಕೆಗಳೂ ಕರ್ನಾಟಕ, ಬೆಂಗಳೂರ
ಮೈಸೂರು, ಗುಲಬರ್ಗಾ, ಮಂಗಳೂರು, ಕುವೆಂಪು, ಕನ್ನಡ ವಿಶ್ವವಿದ್ಯಾಲಯಗಳೂ ಕನ್ನ
ಸಾಹಿತ್ಯ ಪರಿಷತ್ತು, ಕನ್ನಡ ವಿದ್ಯಾವರ್ಧಕ ಸಂಘ, ಬಸವಸಮಿತಿ, ಬಿ. ಎಂ. ಶ್ರೀ. ಪ್ರತಿಷ್ಠಾ
ಮೈಸೂರಿನ ಕುವೆಂಪು ಟ್ರಸ್ಟ್, ಉಡುಪಿಯ ಗೋವಿಂದ ಪೈ ಸ್ಮಾರಕ ಸಂಶೋಧನ ಕೇಂ
ಕರ್ನಾಟಕ ಜಾನಪದ ಟ್ರಸ್ಟ್, ಉಡುಪಿಯ ಪ್ರಾದೇಶಿಕ ರಂಗಕಲೆಗಳ ಸಂಶೋಧನ ಕೇಂ
ಮೊದಲಾದ ಸಂಸ್ಥೆಗಳೂ ಸಂಭಾವನ - ಸಂಸ್ಮರಣ ಗ್ರಂಥಗಳೂ ವಿವಿಧ ಸಮ್ಮೇಳ
ವಿಚಾರ ಸಂಕಿರಣ, ಶಿಬಿರ, ಕಮ್ಮಟಗಳೂ ಕನ್ನಡ ಸಂಶೋಧನ ಸಾಹಿತ್ಯವನ್ನು ಸಮೃದ್ಧವ
ಬೆಳೆಸುವಲ್ಲಿ ಉತ್ತೇಜಕ ಪಾತ್ರ ವಹಿಸಿರುತ್ತವೆ. ಇವುಗಳ ಕ್ರಿಯಾತ್ಮಕ ಪ್ರೋತ್ಸಹದಿಂದ ಕನ್ನ
ಸಂಶೋಧನ ಸಾಹಿತ್ಯ ಸತ್ವಯುತವಾಗಿಯೂ ಬಹುಮುಖವಾಗಿಯೂ ಬೆಳೆಯ
ಸಾಧ್ಯವಾಗಿದೆ. ಹೀಗೆ ಕನ್ನಡ ಸಂಶೋಧನ ಸಾಹಿತ್ಯ ವ್ಯಕ್ತಿ, ಸಂಸ್ಥೆ, ಪತ್ರಿಕೆ, ವೇದಿಕೆ
ಮೂಲಕ ಅಧಿಕ ಪ್ರಮಾಣದಲ್ಲಿ ಪ್ರಕಟವಾಗಿರುವುದು ವಿದಿತವಾಗುತ್ತದೆ.

ಸಂಶೋಧನೆಯ ವಸ್ತು, ಭಾಷೆ, ಶೈಲಿ, ಪ್ರತಿಪಾದನೆಗಳಿಂದ ಓದುಗರಿಗೆ ಬಹಳ
ಗಂಟುಗಳಾಗಿ ಪರಿಣಮಿಸಿದ್ದ ಹಳೆಯ ಸಂಶೋಧಕರ ಮಾದರಿಯ ಸಂಶೋಧನ ಪ
ಈಗ ಕಡಿಮೆಯಾಗುತ್ತ ಬಂದಿತು. ಬರಹದ ವಸ್ತು, ರೀತಿಗಳಲ್ಲಿ ಓದುಗರಿಗೆ ಅರ್ಥವಾಗು

ಸಂಶೋಧನ ಲೇಖನ, ಗ್ರಂಥಗಳು ರಚಿತಗೊಂಡವು. ಇದರಿಂದ ಸಂಶೋಧಕ - ಸಂಶೋಧನೆ, - ಓದುಗರ ನಡುವಿನ ಅಂತರ ಮಾಯವಾಗತೊಡಗಿತು. ಸಂಶೋಧನೆಯ ಬಗೆಗೆ ವಿದ್ವಾಂಸರಲ್ಲಿ ಆಸಕ್ತಿ, ಕುತೂಹಲ, ಕಳಕಳಿ ಉಂಟಾಗತೊಡಗಿದವು. ಓದುಗರಿಂದ ಪ್ರೋತ್ಸಾಹದಾಯಕ ಪ್ರತಿಕ್ರಿಯೆಗಳು ಬರಲಾರಂಭಿಸಿ, ಸಂಶೋಧನ ಸಾಹಿತ್ಯ ಹುಲುಸಾಗಿ ಬೆಳೆಯುವಂತಾಯಿತು. ಹೀಗಿದ್ದರೂ ಹಿರಿಯ ತಲೆಮಾರಿನ ಕೆಲವು ಜನ ಸಂಶೋಧಕರು ಹಳೆಯ ಜಾಡಿನಲ್ಲಿಯೇ ತಮ್ಮ ಸಂಶೋಧನೆ ಮುಂದುವರಿಸಿರುವುದು ತಿಳಿದುಬರುತ್ತದೆ.

ಸಂಶೋಧನೆಯು ಸಾಮಗ್ರಿ ಸಂಕಲನ, ಸಂಕಲನವಾದ ಸಾಮಗ್ರಿಯ ವಿಶ್ಲೇಷಣೆ - ವ್ಯಾಖ್ಯಾನಗಳಲ್ಲಿ ಕೆಲವು ಸಂಶೋಧಕರು ವ್ಯವಸ್ಥೆ, ವ್ಯವಧಾನಾದಿಗಳನ್ನು ಹೊಂದದಿರುವುದು ಗೋಚರಿಸುತ್ತದೆ. ತಾವು ಸಂಶೋಧನೆಗಾಗಿ ಆರಿಸಿಕೊಂಡ ವಸ್ತುವಿನ ಬಗೆಗೆ ಕೆಲವರಿಗೆ ಉಚಿತ ಜ್ಞಾನವಿಲ್ಲದಿರುವುದೂ ಗೊತ್ತಾಗುತ್ತದೆ. ತಾನು ಮಾಡುವ ಸಂಶೋಧನೆಯ ವಿಷಯದಲ್ಲಿ ಇಲ್ಲಿಯವರೆಗೆ ನಡೆದ ಸಂಶೋಧನೆ ಎಷ್ಟು ? ಯಾವ ರೀತಿಯದು ? ವಿದ್ವಾಂಸರು ಅಲ್ಲಿ ಯಾವ ಸಮಸ್ಯೆಗಳನ್ನು ಎತ್ತಿದ್ದಾರೆ ? ಅವುಗಳಲ್ಲಿ ಯಾವವು ಇನ್ನೂ ಚರ್ಚಾಸ್ಪದವೆನಿಸಿವೆ ? ಮುಂತಾದ ಅಂಶಗಳ ಸ್ಪಷ್ಟ ಪರಿಜ್ಞಾನವಿಲ್ಲದೆ ತಮಗೆ ತಿಳಿದ ಸಂಗತಿಗಳೆಲ್ಲವೂ ಹೊಸವೆಂದು ಭಾವಿಸಿಕೊಂಡು ಕೇವಲ ಪುಟಗಳನ್ನು ತುಂಬಿಸಿ, (ಸಂಶೋಧನೆ ಅಲ್ಲದಿದ್ದರೂ) ಅದು ಸಂಶೋಧನೆಯೆಂದು ಕೆಲವು ಜನ ಸಂಶೋಧಕರು ತೃಪ್ತಿಪಟ್ಟುಕೊಂಡಿರುವುದು ವ್ಯಕ್ತವಾಗುತ್ತದೆ. ಇಂಥ ಸಂಶೋಧನ ಸಾಹಿತ್ಯ, ಸಂಶೋಧಕರು ಇದ್ದರೂ ಅಷ್ಟೇ ಇರದಿದ್ದರೂ ಅಷ್ಟೇ. ಇದರಿಂದ ಕನ್ನಡ ಸಂಶೋಧನ ಸಾಹಿತ್ಯ ಸತ್ವಶಾಲಿಯಾಗುವುದಿಲ್ಲ.

ಶ್ರದ್ಧೆಯ ಕೊರತೆಯಿಂದಾಗಿ ಒರವಣಿಗೆಯನ್ನು ಲಘುವಾಗಿ ಪರಿಭಾವಿಸಿದ ಪ್ರವೃತ್ತಿ ಅಲ್ಲಲ್ಲಿ ಪ್ರವೇಶ ಪಡೆದಿರುತ್ತದೆ. ಅಧ್ಯಯನ ಹಾಗೂ ಪರಿಶ್ರಮಗಳಲ್ಲಿ ಆಗಾಗ ಅಭಾವವೂ ಅನಾಸ್ಥೆಯೂ ಕಾಣಿಸಿಕೊಂಡಿದೆ. ಹೀಗಾಗಿ ಸಂಶೋಧನ ಲೇಖನ, ಗ್ರಂಥಗಳ ಒಡಲಲ್ಲಿ ಸಂಶೋಧಕರು ಅವಸರದ ನಿರ್ಣಯಗಳನ್ನು ಬಿತ್ತುತ್ತ ನಡೆದಿರುವುದು ಗೊತ್ತಾಗುತ್ತದೆ. ಇದಲ್ಲದೆ ಸಂಶೋಧಕರಿಗೆ ವಿರೋಧವಾದ ಭಾವಾವೇಶ, ಭಾವೋದ್ರೇಕಗಳು ಕನ್ನಡ ಸಂಶೋಧನ ಸಾಹಿತ್ಯದಲ್ಲಿ ಆಗಾಗ ಕಾಣಿಸಿಕೊಂಡಿವೆ. ಇದಲ್ಲದೆ ಕೆಲವು ಜನ ಸಂಶೋಧಕರು ತಮ್ಮ ಸಂಶೋಧನ ಲೇಖನ-ಗ್ರಂಥಗಳಲ್ಲಿ ವೈಯಕ್ತಿಕ ದೋಷಾರೋಪಣೆಗೆ ತೊಡಗಿರುವುದು ಅತ್ಯಂತ ವ್ಯಸನದ ಸಂಗತಿಯೆನಿಸಿದೆ. ಇಂಥವರಿಂದ ಸಂಶೋಧನೆಗೆ ಕೆಟ್ಟ ಹೆಸರು ಬರುವ ಬದಲಲ್ಲಿ ಸಂದೇಹವಿಲ್ಲ. ಸಂಶೋಧನೆ ವ್ಯಕ್ತಿನಿಷ್ಠವಾದುದಲ್ಲ. ವಸ್ತುನಿಷ್ಠವಾದುದು. ವಸ್ತುನಿಷ್ಠ ಸತ್ಯವನ್ನು ಪ್ರಕಟಿಸುವುದು ಸಂಶೋಧಕನ ಗುರಿ. ವಸ್ತುನಿಷ್ಠ ಸತ್ಯದ ಆರಾಧಕನಾದ ಸಂಶೋಧಕನು ಸಂಶೋಧನೆಯನ್ನು, ವ್ಯಕ್ತಿನಿಷ್ಠ ಪಾತಳಿಯಿಂದ ಸೋಡಿ, ತಪ್ಪಾಗಿ ಅರ್ಥೈಸುವ ಕಾರ್ಯವನ್ನು ಕೈಬಿಡುವಂತಾಗಬೇಕು.

ಕನ್ನಡ ಸಂಶೋಧನ ಸಾಹಿತ್ಯದಲ್ಲಿ ಸಂಶೋಧಕರ ವಿಶಾಲವಾದ ಆಳವಾದ ವ್ಯಾಸಂಗ, ಉಚಿತವಾದ ವಿಷಯ ಪರಿಜ್ಞಾನ, ಸಂಶೋಧನ ತತ್ವಗಳ ತಿಳುವಳಿಕೆ, ಹೊಸದನ್ನು ಹುಡುಕುವ ಆಕಾಂಕ್ಷೆಗಳು ಎದ್ದುಕಾಣುತ್ತವೆ. ಇದರೊಂದಿಗೆ ಸಂಶೋಧನ ಲೇಖನ-ಹೇಳಬೇಕೆನ್ನುವ ಆಕಾಂಕ್ಷೆಗಳು ಎದ್ದುಕಾಣುತ್ತವೆ.

ಗ್ರಂಥಗಳಲ್ಲಿ ಅಪಾರವಾದ ಶ್ರದ್ಧೆ, ಪರಿಶ್ರಮ ಹಾಗೂ ತಲಸ್ಪರ್ಶಿಯಾದ ಆಕರಗಳ ಪರಿಶೋಧನೆ ಇರುವುದು ವಿದಿತವಾಗುತ್ತದೆ. ಕೆಲವು ಜನ ಸಂಶೋಧಕರು ತಮ್ಮ ಸಂಶೋಧನ ಲೇಖನ - ಗ್ರಂಥಗಳನ್ನು ಪ್ರಕಟಿಸುವಲ್ಲಿ, ವಸ್ತುನಿಷ್ಠ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಲ್ಲಿ, ತೋರಿದ ಧೈರ್ಯ ಮೆಚ್ಚುವಂಥದಾಗಿರುತ್ತದೆ. ಇಂಥ ಪ್ರಾಮಾಣಿಕ ಧೈರ್ಯ, ವಸ್ತುನಿಷ್ಠತೆಗಳು ಮಾತ್ರ ಸಂಶೋಧನೆಯನ್ನು ಬದುಕಿಸುತ್ತವೆ, ಬೆಳೆಸುತ್ತವೆ.

ಸಂಶೋಧನೆಯು ತತ್ವಗಳನ್ನು ಸಮರ್ಪಕವಾಗಿ - ಸಮರ್ಥವಾಗಿ ಗ್ರಹಿಸದೆ, ಸಂಶೋಧನೆಯ ಗುಣಮಟ್ಟವನ್ನು ಕಾಯ್ದುಕೊಳ್ಳದೆ, ತೀರ ಕಳಪೆಯಾದ ಕೆಲವು ಕನ್ನಡ ಸಂಶೋಧನ ಲೇಖನ - ಗ್ರಂಥ - ಮಹಾಪ್ರಬಂಧಗಳು ಹೊರಬಂದಿರುವುದು, ಹೊರ ಬರುತ್ತಲಿರುವುದು ಕನ್ನಡ ಸಂಶೋಧನ ಕ್ಷೇತ್ರದ ಆರೋಗ್ಯಕರ ಹಾಗೂ ಉಪಾಯಕರ ಬೆಳವಣಿಗೆಯಾಗಿದೆ. ಈ ರೀತಿಯ ಸಂಶೋಧನ ಸಾಹಿತ್ಯ ಸೃಷ್ಟಿಯಾಗುವುದನ್ನು ತಡೆಗಟ್ಟುವಿದ್ದರೆ ಕನ್ನಡ ಸಂಶೋಧನ ಸಾಹಿತ್ಯ ತನ್ನ ಬಲವಾದ ಭವಿಷ್ಯವನ್ನು ಕಳೆದುಕೊಳ್ಳುವಂತಾಗುತ್ತದೆ. ಯುವ ಸಂಶೋಧಕರು ಅವಸರ ಪ್ರವೃತ್ತಿ, ಬೃಹದ್ವೃತ್ತಿ - ವ್ಯವಸ್ಥೆ, ಆಕೆ - ಆಮಿಷಗಳಿಗೆ ಅಮಾಯಕವಾಗಿ ಬಲಿಯಾಗದೆ ತಮ್ಮ ಪಾರದರ್ಶಕ ಮನಸ್ಸಿನಿಂದ ಸಂಶೋಧನ ಕ್ಷೇತ್ರದ ಪಾವಿತ್ರ್ಯ, ಘನತೆಗಳನ್ನು ಜವಾಬ್ದಾರಿಯಿಂದ ಎತ್ತಿ ಹಿಡಿಯುವುದು ಇಂದು ತೀರ ಅವಶ್ಯವಿದೆ. ಯುವ ಸಂಶೋಧಕರು ತಮ್ಮ ನಿರಂತರ ಪರಿಶ್ರಮ, ಸತತಾಧ್ಯಯನ, ಶ್ರದ್ಧೆ - ನಿಷ್ಠೆ, ಪ್ರಾಮಾಣಿಕತೆ, ಗಟ್ಟಿಯಾದ ಬರವಣಿಗೆಗಳಿಂದ ಸಂಶೋಧನೆಯ ಮೂಲಭೂತ ತತ್ವ - ವಿಧಾನಗಳನ್ನು ಸ್ವಸಾಮರ್ಥ್ಯದಿಂದ ಅರ್ಥಪೂರ್ಣವಾಗಿ, ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತಾಗಬೇಕು. ಆಂದಾಗ ಮಾತ್ರ ಕನ್ನಡ ಸಂಶೋಧನ ಸಾಹಿತ್ಯ ಸತ್ವಯುತವಾಗಿ ಬೆಳೆಯಲು ಸಾಧ್ಯವಾಗುತ್ತದೆ.

ಒಟ್ಟಿನಲ್ಲಿ ಕನ್ನಡ ಸಂಶೋಧನ ಸಾಹಿತ್ಯ ಆಕರಗಳ ಶೋಧ, ಆಕರಗಳ ರೂಪನಿಷ್ಠ ಶೋಧ, ಆಕರಗಳ ಗುಣನಿಷ್ಠ ಶೋಧಗಳ ರೂಪದಲ್ಲಿ ಹೊರಬಂದಿರುವುದು ಮೇಲಿನ ವಿವೇಚನೆಯಿಂದ ಗೊತ್ತಾಗುತ್ತದೆ. ಹಲವು ಗುಂಪುಗಳು ಅಲ್ಲಲ್ಲಿ ಗೋಚರಿಸಿದರೂ ಕನ್ನಡ ಸಂಶೋಧನ ಸಾಹಿತ್ಯ ಹಲವಾರು ಹೊಸ ಒಲವು ಕಾರಣವಾಗಿ ಹತ್ತುಮುಖದಲ್ಲಿ ವ್ಯಾಪಿಸಿತು. ಸತ್ಯ, ಗುಣಮಟ್ಟಗಳಲ್ಲಿ ತನ್ನದೇ ಆದ ಎತ್ತರವನ್ನು ಕಾಯ್ದುಕೊಂಡು ಬಂದಿತು. ಕನ್ನಡ ಸಂಶೋಧನೆಯ ಸ್ವರೂಪ, ಪ್ರಕಾರ, ವಿಧಾನಗಳನ್ನು ಕುರಿತು ಸಂಶೋಧನೆ (ಎ. ಚಿದಾನಂದಮೂರ್ತಿ), ಕನ್ನಡ ಸಂಶೋಧನ ಶಾಸ್ತ್ರ (ಎಂ. ಎಂ. ಕಲಬುರ್ಗಿ), ಸಂಶೋಧನೆಯ ವಿಧಾನ (ಪಿ. ಕುಲಕರ್ಣಿ, ಪರಿಕ್ಷಿತ್ ಭರಣ್ಯ), ಸಂಶೋಧನ ಶಾಸ್ತ್ರ (ಹೊಸ್ಕೆರೆ ಶಿವಸ್ವಾಮಿ) ಸಂಶೋಧನೆಯ ಸ್ವರೂಪ (ಬಿ. ಎ. ಶಿರೂರ) ಮೊದಲಾದ ಕೃತಿಗಳು ರಚಿತವಾಗಿರುತ್ತವೆ. ಇದರಿಂದ ಕನ್ನಡ ಸಂಶೋಧನ ಸಾಹಿತ್ಯ ಹೊಂದಿದ ಪ್ರಬುದ್ಧತೆ, ಬೆಳವಣಿಗೆಗಳನ್ನು ತಿಳಿದುಕೊಳ್ಳಬಹುದಾಗಿದೆ.

ಕನ್ನಡ ಸಂಶೋಧನ ಕ್ಷೇತ್ರದಲ್ಲಿ ಇಲ್ಲಿಯವರೆಗೆ ವಿವಿಧ ನಿಟ್ಟಿನಿಂದ ಸಾಕಷ್ಟು ಕೆಲಸ ನಡೆದಿದ್ದರೂ ಅದು ಅಲ್ಪ ಪ್ರಮಾಣದ್ದೆಂದೇ ಹೇಳಬೇಕು. ಸಂಶೋಧನೆ ನಡೆಯಬೇಕಾದ ಕ್ಷೇತ್ರಗಳು, ಮಾಡಬೇಕಾದ ಕಾರ್ಯಗಳು ಬೆಟ್ಟದಷ್ಟು ಎತ್ತರವಾಗಿಯೂ ಸಾಗರದಷ್ಟು ವಿಶಾ

ವಾಗಿಯೂ ಆಳವಾಗಿಯೂ ಇರುತ್ತವೆ. ಕರ್ನಾಟಕಕ್ಕೆ ಸಂಬಂಧಿಸಿದ ಸಮಗ್ರ ಆಕರಗಳ ಶೋಧ ಹಾಗೂ ಸಂಗ್ರಹ ಮೊಟ್ಟಮೊದಲು ನೆರವೇರಬೇಕಾಗಿದೆ. ಇದರಂತೆ ತೀರ ಉಪೇಕ್ಷಿತ ವಿಷಯಗಳ ಅಧ್ಯಯನವನ್ನೂ ಕೈಗೆತ್ತಿಕೊಳ್ಳಬೇಕಾಗಿದೆ. ಸಂಶೋಧನೆಯ ವಿಧಾನದಲ್ಲಿಯೂ ಹೊಸ ದೃಷ್ಟಿಕೋನಗಳನ್ನು ರೂಢಿಸಿಕೊಳ್ಳವುದು ಅಗತ್ಯವಿದೆ. ಕನ್ನಡ ಸಂಶೋಧನೆ ಜನಪರವಾಗುವಂತೆ ಬೆಳೆಸಬೇಕಾಗಿದೆ. ಯಾಕೆಂದರೆ ಸಂಶೋಧನೆಯ ಫಲಿತಾಂಶಗಳು ಸಂಬಂಧಿಸಿದ ಜನರಿಗೆ, ಪ್ರದೇಶಗಳಿಗೆ ತಲುಪದೇ ಹೋದರೆ ಅಂಥ ಸಂಶೋಧನೆ ಅರ್ಥವನ್ನು ಕಳೆದುಕೊಂಡು ಜನರಿಂದ ದೂರವಾಗಿ ಉಳಿದುಬಿಡುತ್ತದೆ. ಇದರಿಂದ ಸಂಶೋಧನೆಯ ನಿಜವಾದ ಉದ್ದೇಶ ಈಡೇರದೆ ಹೋಗುತ್ತದೆ. ಆದುದರಿಂದ ವಿವಿಧ ಮಾಧ್ಯಮಗಳ ಮೂಲಕ ಸಂಶೋಧನೆಯ ಫಲಿತಾಂಶಗಳನ್ನು ಜನತೆಗೆ ತಲುಪಿಸುವುದು ತಮ್ಮ ಪರಮ ಹಾಗೂ ಆದ್ಯ ಕರ್ತವ್ಯವೆಂಬುದನ್ನು ಸಂಶೋಧಕರು ಪ್ರಾಂಜಲ ಮನಸ್ಸಿನಿಂದ ಪರಿಭಾವಿಸಬೇಕಾಗಿದೆ, ಪರಿಗ್ರಹಿಸಬೇಕಾಗಿದೆ. ಹೀಗಾದಾಗ ಮಾತ್ರ ಕನ್ನಡ ಸಂಶೋಧನೆ, ಸಂಶೋಧಕ ಬೆಳೆಯುವಂತಾಗುತ್ತದೆ. ಇನ್ನೂ ಅಸ್ಪೃಶ್ಯವಾಗಿ ಉಳಿದಿರುವ, ಉಪೇಕ್ಷೆಗೆ ಗುರಿಯಾಗಿರುವ ಅನೇಕ ಹೊಸ ಕ್ಷೇತ್ರಗಳತ್ತ ಸಂಶೋಧಕರು ಗಮನಹರಿಸುವುದು ಇಂದು ತೀರ ಅವಶ್ಯವಿದೆ. ಈ ಕಾರ್ಯವನ್ನು ಪೂರೈಸಿದಾಗ ಮಾತ್ರ ಕನ್ನಡ ಸಂಶೋಧನ ಸಾಹಿತ್ಯ ಪರಿಪೂರ್ಣತೆಯನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. *

---

* ಈ ಲೇಖನದಲ್ಲಿ ಎಲ್ಲ ಸಂಶೋಧನ ಲೇಖನ, ಗ್ರಂಥಗಳ ಹೆಸರನ್ನು ಹೇಳಿರುವುದಿಲ್ಲ. ಇದು ಸಾಧ್ಯವೂ ಇಲ್ಲ. ಸಾಂದರ್ಭಿಕವಾಗಿ ಮಾತ್ರ ಕೆಲವು ಸಂಶೋಧಕರ ಹಾಗೂ ಸಂಶೋಧನ ಲೇಖನ, ಗ್ರಂಥಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಮಕ್ಕಳ ಸಾಹಿತ್ಯ
(ಒಂದು ಚಾರಿತ್ರಿಕ ವಿವೇಚನೆ)

- ಜಯವಂತ ಕಾಡದೇವರ

ಮಕ್ಕಳಸಾಹಿತ್ಯರಚನೆ ತೀರ ಅವಶ್ಯಕವಾದ ಒಂದು ಪ್ರಕ್ರಿಯೆಯಾಗಿದೆ. ತಾಯಿ ಗರ್ಭದಲ್ಲಿರುವಾಗಲೇ ಮಗುವಿಗೆ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಸಂಸ್ಕಾರ ಒದಗುತ್ತದೆ ಎಂಬ ನಂಬಿಕೆ ವೈಜ್ಞಾನಿಕ ಸತ್ಯವಾಗಿ ತೋರುತ್ತಿದೆ. ಒಂದು ಅರ್ಥದಲ್ಲಿ ಮಗುವಿನ ಮನಸ್ಸು ಮಹಾಕಾವ್ಯದ ಹಾಗೆ. ಅಲ್ಲಿ ಅದ್ಭುತ ರಮ್ಯ ಕಲ್ಪನೆಗಳು ಲೀಲಾಜಾಲವಾಗಿ ಹರಿದಾಡುತ್ತವೆ. ಅವು ಮಕ್ಕಳ ಕುತೂಹಲವನ್ನು ಜಾಗ್ರತಗೊಳಿಸುತ್ತವೆ.

ಈ ಕುತೂಹಲವೇ ಬುದ್ಧಿವಿಕಾಸಕ್ಕೆ ಮೂಲವಾಗಿದೆ. ಮಗು ಇಷ್ಟಗಲ ಕಣ್ಣು ತೆರೆದುಕೊಂಡು ಪ್ರಶ್ನಾರ್ಥಕವಾಗಿ ಸುತ್ತೆಲ್ಲ ನೋಡುತ್ತದೆ. ಆದರೆ ಆ ಮುದ್ದು ಕಣ್ಣುಗಳ ಹಸಿವು ಹಿಂಗುವುದಿಲ್ಲ. ಮಗು ಏತಕ್ಕಾಗಿಯೋ ಕೈ ಚಾಚುತ್ತದೆ. ಅದನ್ನು ಪಡೆಯಲು ಅಂಬೆಗಾಲಿಕ್ಕುತ್ತದೆ. ತಡಕಾಡುತ್ತಲೇ ಬೆಳೆಯುತ್ತದೆ, ಅತ್ತ - ಇತ್ತ ಹುಡುಕುತ್ತದೆ, ಬೇಡುತ್ತದೆ. ಈಗ, ನೀಡಲು ನಮ್ಮ ಬಳಿ ಏನಿದೆ ?

ಇಂಥ ಪ್ರಶ್ನೆಯಿಂದ ಗಲಿಬಿಲಿಗೊಂಡು ನಾವು ಮಕ್ಕಳ ಸಾಹಿತ್ಯ ರಚನೆಗೆ ತೊಡಗುತ್ತೇವೆ. ಇಂಥ ಸಂದರ್ಭದಲ್ಲಿ ಖಲೀಲ್ ಗಿಬ್ರಾನ್ ನಮ್ಮನ್ನು ಎಚ್ಚರಿಸುತ್ತಾನೆ : " ನಿಮ್ಮ ಮಕ್ಕಳು ನಿಮ್ಮ ಮಕ್ಕಳಲ್ಲ ; ಜೀವನ ಸ್ವಪ್ರೇಮದ ಪುತ್ರ - ಪುತ್ರಿಯರು ಅವರು. ಅವರು ನಿಮ್ಮ ಜೊತೆಗೆ ಇರುವುದಾದರೂ ಅವರು ನಿಮಗೆ ಸೇರಿದವರಲ್ಲ. ನಿಮ್ಮ ಪ್ರೀತಿಯನ್ನು ಅವರಿಗೆ ನೀಡಬಹುದು. ಆದರೆ, ನಿಮ್ಮ ಆಲೋಚನೆಗಳನ್ನೆಲ್ಲ, ಅವರಂತಿರಲು ನೀವು ಪ್ರಯತ್ನಿಸಬಹುದು. ಆದರೆ ಅವರನ್ನು ನಿಮ್ಮಂತೆ ಮಾಡದಿರಿ, ಜೀವನ ಹಿಮ್ಮುಖವಾಗಿ ಹರಿಯದಿರಲಿ ".

ತಂದೆ, ತಾಯಿ, ಶಿಕ್ಷಕ, ಸಮಾಜ ಹಾಗೂ ಮಕ್ಕಳ ಸಾಹಿತಿಗಳು ಈ ಎಚ್ಚರವನ್ನು ಕಾಪಾಡಿಕೊಳ್ಳಬೇಕಾಗಿದೆ. ಇಲ್ಲದಿದ್ದರೆ ಮಕ್ಕಳ ಮನೋವಿಕಾಸಕ್ಕೆ ನಾವು ನಡೆಸುವ ಪ್ರಯತ್ನಗಳಿಂದ ಅವರಿಗೆ ಕಿರಿಕಿರಿಯಾದೀತು ! ಮಕ್ಕಳ ಕನಸುಗಳನ್ನು ಹಾಗೂ ಅದ್ಭುತರಮ್ಯ ಕಲ್ಪನೆಗಳನ್ನು ಸ್ಫಿರೀಕರಿಸಲು ಅನುಕೂಲವಾಗುವಂಥ ಪರಿಸರವನ್ನು ನಿರ್ಮಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಮಕ್ಕಳ ಸಾಹಿತ್ಯ ರಚನೆಗೆ ಈ ಹಿನ್ನೆಲೆಯೇ ಮುಖ್ಯ ಕಾರಣವೆನಿಸಿದೆ.

ಮಕ್ಕಳ ಸಾಹಿತ್ಯ ಎಷ್ಟು ಪ್ರಾಚೀನ ಎಂಬುದನ್ನು ಖಚಿತವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಏಕೆಂದರೆ ನಮ್ಮ ಪ್ರಾಚೀನ ಕವಿಗಳು ಸಾಮಾನ್ಯವಾಗಿ, ಎಲ್ಲ ವಯೋಮಾನದವರಿಗೆ ರುಚಿಸುವಂಥ ಕೃತಿಗಳನ್ನು ರಚಿಸಿದ್ದಾರೆ. ಗುಣಾಢ್ಯನ `ಬೃಹತ್ಕಥೆ', ವಸುಭಾಗ ಭಟ್ಟನ `ಪಂಚತಂತ್ರ,' ಕ್ಷೇಮೇಂದ್ರನ `ಬ್ರಹತ್ಕಥಾ ಮಂಜರಿ', ಸೋಮದೇವ ಭಟ್ಟನ `ಕಥಾಸರಿತ್ಸಾಗರ', ಹರಿಷೇಣನ' ಬೃಹತ್ಕಥಾಕೋಶ' ಇತ್ಯಾದಿ ಕೃತಿಗಳ ರಚನೆಯ ಮೂಲ ಉದ್ದೇಶ ನೀತಿ ಬೋಧನೆ ಹಾಗೂ ಮನರಂಜನೆ. ಇಲ್ಲಿಯ ಕಥೆಗಳು ಚಾರಣ ಕವಿಗಳ ಕಥನ ಕವನಗಳಾಗಿ, ಅಜ್ಜ ಅಜ್ಜಿಯರ ಕಥೆಗಳಾಗಿ ಶತಮಾನಗಳನ್ನು ದಾಟುತ್ತ ಬಂದಿವೆ.

ಏನಿದ್ದರೂ ವಿಷ್ಣುಶರ್ಮ ರಚಿಸಿದ `ಪಂಚತಂತ್ರ ಮಕ್ಕಳ ಸಾಹಿತ್ಯದ ಮೂಲ ಗ್ರಂಥ' ವೆಂದು ಒಪ್ಪಿಕೊಳ್ಳಲಾಗಿದೆ. ಕ್ರಿ. ಶ. ಒಂದನೆಯ ಶತಮಾನದಷ್ಟು ಪ್ರಾಚೀನವಾದ ಈ ಸಂಸ್ಕೃತ ಕೃತಿ ಜಗತ್ತಿನ ಎಲ್ಲ ಭಾಷೆಗಳಲ್ಲಿ ರಚಿತವಾದ ಮಕ್ಕಳ ಸಾಹಿತ್ಯಕ್ಕೆ ಮೂಲ ಪ್ರೇರಣೆಯಾಗಿದೆ. ಬೈಬಲ್ ಬಿಟ್ಟರೆ ಜಗತ್ತಿನ ಎಲ್ಲ ಪ್ರಬುದ್ಧ ಭಾಷೆಗಳಿಗೆ ಅನುವಾದ ಗೊಳಿಸಲ್ಪಟ್ಟ ಕೃತಿ ಇದೊಂದೇ ! ಪಂಚತಂತ್ರ ಒಂದು ರಮ್ಯ ಕೃತಿ. ಇಲ್ಲಿ ಪ್ರಾಣಿ ಪಕ್ಷಿಗಳನ್ನು ಪಾತ್ರಗಳನ್ನಾಗಿ ಬಳಸಿಕೊಳ್ಳಲಾಗಿದೆ. ಮಕ್ಕಳಲ್ಲಿ ರಾಜಧರ್ಮ, ಲೋಕಧರ್ಮ, ಸಮಾಜ ಧರ್ಮ ಮುಂತಾದ ನೀತಿಸಂಹಿತೆಗಳನ್ನು ಸಂಸ್ಕಾರಗೊಳಿಸುವುದೇ ಇಲ್ಲಿಯ ಕಥೆಗಳ ಉದ್ದೇಶವಾಗಿದೆ. ಹಿತೋಪದೇಶದ ಕಥೆಗಳೂ ಇದೇ ಮಾದರಿಯವು. ಈ `ಪಂಚತಂತ್ರ' ದ ಕಥೆಗಳನ್ನು ಕನ್ನಡಕ್ಕೆ ನೀಡಿದವನು ದುರ್ಗಸಿಂಹ. ಈತನ ಕಾಲ ಕ್ರಿ. ಶ. ೧೨ನೇ ಶತಮಾನದ ಆದಿಭಾಗ. ಈತನೇ ಕನ್ನಡ ಮಕ್ಕಳ ಸಾಹಿತ್ಯದ ಮೂಲಪುರುಷ ಎನ್ನಬಹುದು. ಮನುಷ್ಯರ ನಡೆ -ನುಡಿಗಳನ್ನು ಅನುಕರಿಸುವ ಪ್ರಾಣಿ -ಪಕ್ಷಿಗಳ ಕಥೆಗಳನ್ನು ಹೇಳುವ ಮೂಲಕ ಜೀವನದ ಮೌಲ್ಯಗಳನ್ನು ಬಿಂಬಿಸಲು ಇಲ್ಲಿ ಸಾಧ್ಯವಾಗಿದೆ. ಹೆಚ್ಚು ಕಡಿಮೆ ಸಮಕಾಲೀನವಾಗಿ ರಚಿತವಾದ ಈಸೋಪನ ನೀತಿಕಥೆಗಳಿಗೂ ಪಂಚತಂತ್ರವೇ ಮೂಲ ಪ್ರೇರಣೆಯಾಗಿದೆ ಎಂಬುದನ್ನಿಲ್ಲಿ ಸ್ಮರಿಸಬಹುದಾಗಿದೆ.

ಇದಕ್ಕೆಲ್ಲ ಹೊರತಾಗಿ ಮಕ್ಕಳ ಸಾಹಿತ್ಯದ ಮೂಲ ಬೇರು ಅದರ ಜಾನಪದದಲ್ಲಿದೆ ಎಂದು ಹೇಳಬಹುದು. ತಾಯಿಯ ಜೋಗುಳದ ಹಾಡುಗಳು, ಪ್ರಾಸಬದ್ಧ ಆಟದ ಪದಗಳು ಅಜ್ಜ - ಅಜ್ಜಿಯರ ಕಥೆಗಳು ಕೋಲಾಟದ ಪದಗಳು, ಒಗಟುಗಳು, ಗಾದೆಗಳು ಮಕ್ಕಳ ಸಾಹಿತ್ಯದ ಮೌಖಿಕ ಹಾಗೂ ಮೌಲಿಕ ಸಾಮಗ್ರಿಗಳಾಗಿವೆ.

ಕ್ರಿ. ಶ. ೬೬೮ರಲ್ಲಿ ಚೀನಿಯರು ಮುದ್ರಣಯಂತ್ರವನ್ನು ಸಂಶೋಧಿಸಿ, ಮುದ್ರಣ ಕಲೆಯನ್ನು ಅಭಿವೃದ್ಧಿಪಡಿಸಿದರು. ಮೊಟ್ಟಮೊದಲ ಬಾರಿಗೆ ಕಾಗದವನ್ನು ಉತ್ಪಾದಿಸಿದ ಶ್ರೇಯಸ್ಸು ಕೂಡ ಚೀನಿಯರದೇ ! ಜ್ಞಾನಪ್ರಸಾರದ ಈ ಅತ್ಯಮೂಲ್ಯ ಮಾಧ್ಯಮ ಕೈಗೆಟುಕಿದ ಮೇಲೆ ಪ್ರಾಚೀನ ಸಾಹಿತ್ಯ ವಿನಾಶದ ಭಯದಿಂದ ಪಾರಾಯಿತು. ಬುದ್ಧನ ಪೂರ್ವಜನ್ಮದ ವೃತ್ತಾಂತವನ್ನೊಳಗೊಂಡ ಜಾತಕ ಕಥೆಗಳು ಕ್ರಿ. ಶ. ಏಳನೇ ಶತಮಾನದಲ್ಲಿ ಚೀನಿ ಭಾಷೆಗೆ ತರ್ಜುಮೆಗೊಂಡು ನಂತರ ಮುದ್ರಿತವಾದವು. ಇಷ್ಟು ಪ್ರಾಚೀನವಾದ ಮಕ್ಕಳ ಸಾಹಿತ್ಯಚರಿತ್ರೆಗೆ ಒಂದು ನಿಶ್ಚಿತ ನೆಲೆ ಒದಗಿದ್ದು ಹದಿನೆಂಟನೆಯ ಶತಮಾನದಲ್ಲಿ ಯುರೋಪಿನಲ್ಲಿ.

ಕ್ರಿ. ಶ. ೧೭೪೪ರಲ್ಲಿ ಜಾನ್ ನ್ಯೂಬೆರ್ರಿ ಎಂಬಾತ `` ಎಲಿಟಲ್ ಪೆಟ್ಟೀ ಪಾಕೆಟ್ ಬುಕ್ '' ಪ್ರಕಟಿಸಿದ. ಈತನೇ ಪ್ರಕಟಿಸಿದ `` ದಿ ಹಿಸ್ಟರಿ ಆಫ್ ಲಿಟಲ್ ಗುಡಿ ಟೂ ಶೂಸ್'' ತುಂಬ ಪ್ರಸಿದ್ಧಿ ಪಡೆಯಿತು. ಈ ಕಿರುಪುಸ್ತಕ ಮಾಲಿಕೆಗಳು ಚಿತ್ರಸಹಿತವಾಗಿದ್ದೊಂದು ಐತಿಹಾಸಿಕ ವಿಶೇಷ. ಇಲ್ಲಿ ಬರುವ ಗುಡಿ-ಟ ಶೂಸ್, ಟಿವೊತಿ ಟಿಕಲ್ ಪಿಚರ್, ಗೈಲ್ಸ್ ಜಿಂಬರ್ ಬ್ರೆಡ್ ಎಂಬ ಪಾತ್ರಗಳು ಸ್ಮರಣೀಯವಾಗಿವೆ.

ಇದಕ್ಕೂ ಮುನ್ನ ಕ್ರಿ. ಶ. ೧೬೭೧ರಲ್ಲಿ ಟಿ. ಲೈ ಹಾಗೂ ಜೇಮ್ಸ್ ಜೇನವೇ ಮಕ್ಕಳಿಗಾಗಿ ಮನರಂಜನೆ ಹಾಗೂ ನೀತಿ ಶಿಕ್ಷಣವನ್ನು ಗಮನದಲ್ಲಿಟ್ಟುಕೊಂಡು ಕೃತಿಗಳನ್ನು ರಚಿಸಿದರು. ಪಾಪ -ಪುಣ್ಯ, ಒಳಿತು - ಕೆಡಕುಗಳನ್ನು ನಿರೂಪಿಸುವ '' ಎ ಟೋಕನ್ ಫಾರ್ ಚಿಲ್ಡ್ರನ್ `` ದಿ ಎಕ್ಸೆಪ್ಲರಿ ಲೈವ್ಸ್ ಆಂಡ್ ಜಾಯಪುಲ್ ಡೆತ್ಸ್ ಆಫ್ ಸೆವರಲ್ ಯಂಗ್ ಚಿಲ್ಡ್ರನ್ '' ಎಂಬುದು ಜೇನವೇವನ ಪ್ರಸಿದ್ಧ ಕೃತಿ. ಬನಿಯನ್ ಕವಿಯ ` ದಿ ಪಿಲ್‌ಗ್ರಿಮ್ಸ್ ಪ್ರೊಗ್ರೆಸ್' ಅನೇಕ ಮಕ್ಕಳ ಮನ ಸೆಳೆದದ್ದು ಈ ಅವಧಿಯಲ್ಲೇ ! ಕ್ರಿ. ಶ. ೧೭೧೫ರಲ್ಲಿ ಹೊರಬಂದ ಐ ಸಾಕ್ ವಾಟ್‌ನ '' ಡಿವೈನ್ ಆಂಡ್ ಮಾರಲ್ ಸಾಂಗ್ಸ್ ಫಾರ್ ಚಿಲ್ಡ್ರನ್ '' ಎಂಬ ಕೃತಿ ದೇವರ ಹಾಗೂ ಪಾಪ- ಪುಣ್ಯಗಳನ್ನು ಕುರಿತದ್ದೇ. ಆದರೆ ವಾಟ್ ಈ ಕೃತಿಯಲ್ಲಿ ತೋರಿದ ಅಪೂರ್ವ ಕಾವ್ಯಕೌಶಲ ಹಾಗೂ ಶಿಶುಸಂವೇದನೆಗಳು ಮಕ್ಕಳ ಸಾಹಿತಿಗಳಿಗೆ ಮಾರ್ಗದರ್ಶಕವಾಗಿವೆ. ಈ ಮಾತಿಗೆ ಪುಷ್ಟಿಯಾಗಿ ಮುಂದೆ ಲೂಯಿ ಕೆರಾಲ್ ತನ್ನ `` ಆ್ಯಲೀಸ್ ಇನ್ ವಂಡರ್‌ಲ್ಯಾಂಡ ' ಕೃತಿಯಲ್ಲಿ ಇಲ್ಲಿಯ ಎರಡು ಪದ್ಯಾನುಕರಣೆಗಳನ್ನು ತಂದಿದ್ದಾನೆ.

ಕ್ರಿ. ಶ. ೧೮ನೇ ಶತಮಾನದ ಪ್ರಾತಿನಿಧಿಕ ಲೇಖನದಲ್ಲಿ ಅಗ್ರಗಣ್ಯರೆಂದರೆ ಡೇನಿಯಲ್ ದೀಪೊ ಹಾಗೂ ಜೊನಾಥನ್ ಸ್ವಿಫ್ಟ್. ಡೀಪೋನ ` ರಾಬಿನ್ ಸನ್ ಕ್ರುಸೊ ' ಹಾಗೂ ಸ್ವಿಫ್ಟ್‌ನ ' ಗಲಿವರ್‌ನ ಪ್ರವಾಸಗಳು ' ಮಕ್ಕಳ ಕಲ್ಪನಾಶಕ್ತಿಯ ಆಯಾಮಗಳನ್ನು ಇನ್ನಷ್ಟು ವಿಸ್ತರಿಸಿದವು. ನ್ಯೂಬೆರ್ರಿ ಮಾಡಿದ ಮತ್ತೊಂದು ಮಹತ್ವದ ಕೆಲಸವೆಂದರೆ ಮಿಸೆಸ್ ಟ್ರಿಮರ್, `` ಲೇಡಿ ಫೆನ್ '' ಮೇರಿಯಾ ಎಡ್ಗರ್‌ವರ್ತ, ಡೊರೊಥಿ - ಕಿಲ್ನರ್‌ರಂಥ ಖ್ಯಾತ ಲೇಖಕರನ್ನು ಮಕ್ಕಳ ಸಾಹಿತ್ಯ ರಚನೆಯಲ್ಲಿ ತೊಡಗಿಸಿದ್ದು. ಸಾರಾ ಫೀಲ್ಡಿಂಗ್ ವಿರಚಿತ ಮೊದಲ ಮಕ್ಕಳ ಕಾದಂಬರಿ ` ದಿ ಗವ್ಹರ್ನೆಸ್ ' ಪ್ರಕಟವಾದುದು ಈ ಅವಧಿಯಲ್ಲೇ (೧೭೪೫).

ಈ ಶತಮಾನದ ಇನ್ನೊಂದು ಕೊಡುಗೆಯೆಂದರೆ ಮಕ್ಕಳಿಗೆಂದೇ ಮೀಸಲಾದ ನಿಯತಕಾಲಿಕೆಗಳು ಹೊರಬಂದದ್ದು. ` ದಿ ಲಿಲ್ಲಿ ಪುಟಿಯನ್ ಮ್ಯಾಗಝಿನ್ ' `` ದಿ ಮೈನರ್ಸ್ ಪಾಕೆಟ್ ಬುಕ್ ' ಎಂಬೆರಡು ನಿಯತಕಾಲಿಕೆಗಳು ಉಲ್ಲೇಖನೀಯವಾಗಿವೆ.

ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ಜಾನ್ ಹ್ಯಾರಿಸ್ ಎಂಬವ ನ್ಯೂಬೆರ್ರಿಯ ಕೆಲಸ ಮುಂದುವರೆಸಿದ. ಈತ ಮಕ್ಕಳಿಂದಲೇ ವರ್ಣರಂಜಿತ ಚಿತ್ರ ಬರೆಯಿಸಿದ. 'ಇದೇ ಕಾಲಕ್ಕೆ ಚಾರ್ಲ್ಸ ಲ್ಯಾಂಬ್‌ನ ಕಿಂಗ್ ಆಂಡ್ ಕ್ವೀನ್ ಆಫ್ ಹಾರ್ಟ್ಸ್ (೧೮೦೫) ಟೇಲ್ಸ ಫ್ರಾಮ್ ಶೇಕ್ಸ್‌ಪಿಯರ್ (೧೮೦೭) ಕೃತಿಗಳನ್ನು ಅತ್ಯಂತ ಆಕರ್ಷಕವಾಗಿ ಮುದ್ರಿಸಿದವರು ಗಾಡ್ವಿನ್ಸ್. ` ದಿ ಬಟರ್ ಫ್ಲೈಸ್ ಬಾಲ್ ' ಎಂಬ ವರ್ಣಮಯ ಸುಂದರ ಪುಸ್ತಕ ಮಕ್ಕಳ ಮನಸೂರೆಗೊಂಡಿತು.

ಹತ್ತೊಂಬತ್ತನೆಯ ಶತಮಾನದ ಮಧ್ಯ ಹಾಗೂ ಉತ್ತರ ಭಾಗವನ್ನು ಬಾಲಸಾಹಿತ್ಯದ ಸುವರ್ಣ ಯುಗ ಎಂದು ಪರಿಗಣಿಸಲಾಗುತ್ತದೆ. ಈ ಕಾಲದ ಮಹತ್ವದ ಲೇಖಕರು ಹಾಗೂ ಅವರ ಕೃತಿಗಳನ್ನಷ್ಟೇ ಇಲ್ಲಿ ನೀಡಬಹುದಾಗಿದೆ. ಡಿಕನ್ಸ್‌ನ `ಕ್ರಿಸ್‌ಮಸ್ ಕೆರೋಲ'(೧೮೪೩), ಲಿಯರ್‌ನ `ಬುಕ್ ಆಫ್ ನಾನ್‌ಸೆನ್ಸ್' (೧೮೪೬), ರಸ್ಕಿನ್‌ನ `ಕಿಂಗ್ ಆಫ್ ದಿ ಗೋಲ್ಡನ್ ರಿವ್ಹರ್ ' ಥ್ಯಾಕರೆಯ `ದಿ ರೋಸ್ ಆ್ಯಂಡ್ ದಿ ರಿಂಗ್ '(೧೮೫೫), ಫಾನ್ಸಿಸ್ ಬ್ರೌನಿಯ `ಗ್ರಾನೀಸ್ ವಂಡರಫುಲ್ ಚೇರ್', (೧೮೫೭ ), ಕಿಂಗ್ಸ್‌ಯ ` ಹಿರೋಸ್' (೧೮೫೯), ಮತ್ತು ` ವಾಟರ್ ಬೇಬೀಸ್'. ಲೂಯಿ ಕೆರಾಲ್‌ನ ' ಆಲ್ಸೀಸ್ ಇನ್ ವಂಡರ್‌ಲ್ಯಾಂಡ್ ' ಇವು ಉಲ್ಲೇಖನೀಯ. ಇದೇ ಕಾಲಕ್ಕೆ ಅಮೇರಿಕದಲ್ಲೂ ಕೂಡ ಬಾಲಸಾಹಿತ್ಯ ವಿಪುಲವಾಗಿ ಬೆಳೆಯಿತು. ವಾಶಿಂಗ್ಟನ್ ಐರ್ವಿಂಗ್‌ನ ` ರಿಪ್ ವ್ಯಾನ್ ವಿಂಕಲ್' (೧೮೧೯) ಕ್ಲಿಮೆಂಟ್ ಮೂರ್‌ನ `ದಿ ನೈಟ್ ಬಿಫೋರ್ ಕ್ರಿಸ್‌ಮಸ್' (ಕವನ ಸಂಕಲನ) ವಥಾನಿಯಲ್ ಹಾಥಾರ್ನ್‌ನ ` ಪಂಡರ ಬುಕ್' ಮತ್ತು ಟ್ಯಾಂಗಲ್ ವುಡ್ ಟೇಲ್ಸ್ ',ಎಚ್. ಬಿ. ಸ್ಟೋವ್ಸ್‌ನ `ಅಂಕಲ್ ಟಾಮ್ಸ್ ಕ್ಯಾಬಿನ್ (೧೮೫೨), ಎಲ್. ಎಂ. ಆಲ್ಕಾಟನ್‌ನ `ಲಿಟಲ್ ವುಮೆನ್ ' ಮುಂತಾದವು ಜನಪ್ರಿಯ ಕೃತಿಗಳು. ಮಾರ್ಕ್ ಟ್ವೇನ್‌ನ `ದಿ ಅಡ್ವೆಂಚರ್ಸ್ ಆಫ್ ಟಾಮ್ ಸಾಯರ್ ' (೧೮೭೬ ) ಮತ್ತು ` ದಿ ಅಡ್ವೆಂಚರ್ಸ್ ಆಫ್ ರಂಕಲ್‌ಬರ್ರಿಫಿನ್ (೧೮೮೪) ಎಂಬ ಕೃತಿಗಳು ಬಾಲಸಾಹಿತ್ಯದ ಅದ್ಭುತ ಸೃಷ್ಟಿಯಾಗಿವೆ. ಇದೇ ಕಾಲಕ್ಕೆ ಸ್ವಿವೆನ್ಸ್‌ನ `ಟ್ರಷರ್ ಐಲ್ಯಾಂಡ್' ಮತ್ತು `ಬ್ಯಾಕ್ ಆರ್ರೋ', ಜೂಲ್ಸ್‌ವರ್ನೆಯ ವೈಜ್ಞಾನಿಕ ಕಥೆಗಳು ಧಾರವಾಹಿಗಳಾಗಿ ನಿಯತಕಾಲಿಕೆಗಳಲ್ಲಿ ಪ್ರಕಟವಾದವು.

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಬಾಲಸಾಹಿತ್ಯಕ್ಕೆ ಅದ್ಭುತ ಕೊಡುಗೆ ನೀಡಿದವನು ಆರ್ಥರ್ ಮೀ ಎಂಬಾತ. ಈತ ೧೯೦೮ - ೧೯೧೦ರ ಅವಧಿಯಲ್ಲಿ `ದಿ ಚಿಲ್ಡ್ರನ್ ಎನ್‌ಸೈಕ್ಲೋಪಿಡಿಯ ' ಎಂಬ ಎಂಟು ಸಂಪುಟಗಳನ್ನು ಪ್ರಕಟಿಸಿದ. ಜಿ. ಮಾನ್‌ವಿಲ್ಲೆ ಫೆನ್, ಇ. ಇ. ಗ್ರೀನ್, ಬೆಸ್ಸಿ ಮರ್ಚಂಟ್, ಇ. ನೆಸ್‌ಬಿಟ್, ರುಡಿಯಾರ್ಡ್ ಕಿಪ್ಲಿಂಗ್, ಹೆಲನ್ ಬ್ಯಾನರ್‌ಮನ್, ವಾಲ್ಟರ್ ಡಿ ಲಾ ಮಾರ್ಲೆ ಈ ಕಾಲದ ಪ್ರಾತಿನಿಧಿಕ ಲೇಖಕರು. ಮಕ್ಕಳು ಸಾಹಿತ್ಯದ ಮಹರ್ಷಿ ಎನಿಸಿದ ಡೆನ್ಮಾರ್ಕಿನ ಹಾನ್ಸ್ ಕ್ರಿಶ್ಚಿಯನ್ ಅಂಡರ್ ಸನ್‌ನ ಕಥೆಗಳು ಯುರೋಪಿನ ಬಾಲಸಾಹಿತ್ಯದ ಸೊತ್ತಾದವು. ಫ್ರಾನ್ಸಿನ ನಿದ್ರಾಸುಂದರಿ `ಸಿಂಡ್ರೆಲ್ಲಾ ಕಥೆಗಳು' ಜರ್ಮನಿಯ ' ಗ್ರೀಮ್ ಸೋದರರ ಕಥೆಗಳು' ` ಏರ್ಷಿಯನ್ ಭಾಷೆಯ ' ಸಾವಿರದೊಂದು ರಾತ್ರಿ ಕಥೆಗಳು ' ಹಿರಿ - ಕಿರಿಯರೆಲ್ಲರನ್ನೂ ರಂಜಿಸುತ್ತ ಚಿರನೂತನವಾಗಿ ಉಳಿದಿವೆ.

ಹೀಗೆ ಭಾರತದ ನೆಲದಲ್ಲೇ ಜನ್ಮ ತಳೆದ ಬಾಲಸಾಹಿತ್ಯ `ಪಂಚತಂತ್ರ ' ದ ಮೂಲಕ ಜಗತ್ತಿನಾದ್ಯಂತ ಜೀವವಾಹಿನಿಯಂತೆ ಪ್ರವಹಿಸಿ, ಪ್ರೇರಣೆ ನೀಡಿದ್ದೊಂದು ಐತಿಹಾಸಿಕ ವಿಶೇಷವೆನ್ನಿಸಿದೆ. ಎಲ್ಲ ಭಾರತೀಯ ಭಾಷೆಗಳಲ್ಲಿ ರಚಿತವಾದ ಮಕ್ಕಳ ಸಾಹಿತ್ಯಕೂಡ ಸಂಸ್ಕೃತ ಮೂಲದಿಂದಲೇ ಪ್ರೇರಿತವಾಗಿದೆ. ಕನ್ನಡ ಮಕ್ಕಳ ಸಾಹಿತ್ಯದ ಪಿತಾಮಹನೆನಿಸಿದ `ದುರ್ಗಸಿಂಹ' ಕೂಡ ಪಂಚತಂತ್ರದ ಕಥೆಗಳನ್ನೇ ಕನ್ನಡಕ್ಕೆ ನೀಡಿದ್ದಾನೆ. ಅನಂತರ ಕನ್ನಡ ಮಕ್ಕಳ ಸಾಹಿತ್ಯಕ್ಕೊಂದು ನಿಶ್ಚಿತ ನೆಲೆಗಟ್ಟು ಒದಗಿ ಬರಲು ನಾವು ೧೯ನೆಯ ಶತಮಾನದವರೆಗೆ ಕಾಯಬೇಕಾಯಿತು.

ಕನ್ನಡ ಮಕ್ಕಳ ಸಾಹಿತ್ಯ :

ಕ್ರಿ. ಶ. ೧೬೦೦ ರಷ್ಟೊತ್ತಿಗೆ ಕನ್ನಡ ನೆಲದಲ್ಲಿ ಭದ್ರವಾಗಿ ಕಾಲೂರಿದ್ದ ರೋಮನ್ ಕೆಥೋಲಿಕರ ಧಾರ್ಮಿಕ ಚಟುವಟಿಕೆಗಳಿಂದಾಗಿ ಅಳದಲ್ಲೆಲ್ಲೋ ಹುದುಗಿ ಹೋಗಿದ್ದ ಕನ್ನಡ ಭಾಷೆ ಹಾಗೂ ಸಾಹಿತ್ಯದ ಬೀಜಗಳು ಮೊಳಕೆಯೊಡೆಯತೊಡಗಿದ್ದವು. ಬಳ್ಳಾರಿಯಲ್ಲಿ ನೆಲೆಸಿದ್ದ ಪ್ರೊಟೆಸ್ಟಂಟ್ ಮಿಷನರಿ ರೆ. ಜಾನ್ ಹ್ಯಾಂಡ್ಸ್ ಹಾಗೂ ಆ ಬಳಿಕ ಬಂದ ರೀವ್ ಎಂಬವರುಗಳೇ ಕನ್ನಡ - ಇಂಗ್ಲೀಷ್ ಶಬ್ದಕೋಶ, ವ್ಯಾಕರಣ, ಬೈಬಲ್‌ಗಳ ಕನ್ನಡಾನು ವಾದಗಳಿಗೆ ಪ್ರಯತ್ನಿಸಿ ಹೊಸಗನ್ನಡ ಅರುಣೋದಯಕ್ಕೆ ಮೂಲ ಪುರುಷರೆನಿಸಿಕೊಂಡರು.

ಕನ್ನಡದ ಪ್ರಪ್ರಥಮ ಮುದ್ರಿತ ಪುಸ್ತಕವೆಂಬುದಾಗಿ ಡಾ. ಹಾವನೂರ ಗುರುತಿಸಿರುವ ಕಲ್ಕತ್ತಾದ ಶ್ರೀರಾಮಪುರದಲ್ಲಿ ಪ್ರಕಟವಾಗಿದ್ದ `ಕೇರಿ' ಎಂಬವರ `ಗ್ರಾಮರ್ ಆಫ್ ದಿ ಕರ್ನಾಟಕ ಲಾಂಗ್ವೇಜ್ ' ಪ್ರಕಟವಾದದ್ದೇ ೧೮೧೭ರಲ್ಲಿ. ಆ ಬಳಿಕ ೧೮೩೭ರಲ್ಲಿ ವಾಲ್ಟರ್ ಎಲಿಯಟ್ ಪ್ರಕಟಿಸಿದ್ದ `ಸಂಸ್ಕೃತ ಹಿತೋಪದೇಶ ' ವಾಗಲಿ, ೧೮೪೬ರ ಭಗವದ್ಗೀತೆಯ ಅನುವಾದವಾಗಲಿ ೧೮೬೩ರಲ್ಲಿ ವೆಂಕಟರಂಗೋ ಕಟ್ಟಿಯವರು ಅನುವಾದಿಸಿದ್ದ `ಅರೇಬಿಯನ್ ನೈಟ್ಸ್' ಆಗಲಿ, ಇವೆಲ್ಲ ಬಾಲಸಾಹಿತ್ಯದ ಮಿತಿಗೆ ಭಾರವಾದವುಗಳು ".

ಅವತರಣಿಕೆಯಲ್ಲಿರುವ ಮೇಲಿನ ಮಾತುಗಳನ್ನು ಬರೆದವರು ಬೋಳುವಾರ ಮಹಮ್ಮದ ಕುಂಞ್ `ತಟ್ಟು ಚಪ್ಪಾಳೆ ಪುಟ್ಟ ಮಗು ' ಎಂಬ ಮಕ್ಕಳ ಪದ್ಯ ಸಂಕಲನದ ಪ್ರಾಸ್ತಾವಿಕದಲ್ಲಿ ಅವರು ನಡೆಸಿರುವ ಸಂಶೋಧನೆ ಹಾಗೂ ಪರಿಶೀಲನೆ ಮಾನ್ಯವಾದುದೆ ! ಆದರೆ ಅಂದಿನ ಸಾಮಾಜಿಕ ಪರಿಸರವನ್ನು ಲೆಕ್ಕಕ್ಕಿಟ್ಟುಕೊಂಡರೆ ಮಕ್ಕಳ ಸಾಹಿತ್ಯವನ್ನು ಹುಡುಕುವುದೇ ಕಷ್ಟವಾಗುತ್ತದೆ. ಕೇವಲ ಉಚ್ಚವರ್ಣಯರಿಗೆ ಮೀಸಲಾಗಿದ್ದ ಅಂದಿನ ಶಿಕ್ಷಣಕ್ಕೆ `ಪುರೋಹಿತಶಾಹಿ' ಗುಣವಿತ್ತು. ಹೀಗಾಗಿ ಅಂದಿನ ಮಕ್ಕಳು ಸಂಸ್ಕೃತ ಶ್ಲೋಕಗಳನ್ನು ಅಥವಾ ಹಳೆಗನ್ನಡ ಕಾವ್ಯದಿಂದಾಯ್ದ ಪದ್ಯಗಳನ್ನು ಕಂಠಪಾಠಮಾಡಿ `ಜಾಣಮರಿ' ಎನಿಸಿಕೊಳ್ಳುತ್ತಿದ್ದರು. ಶಿಕ್ಷಕನ ಬೆತ್ತದೆದುರು ಇದೆಲ್ಲವು ಸುಲಭಸಾಧ್ಯ ವಾಗುತ್ತಿತ್ತು. (ಇಂದಿನ ಈ ದಿನಗಳಲ್ಲೂ ಕೂಡ, ನನ್ನ ಬ್ರಾಹ್ಮಣ ಗೆಳೆಯನೊಬ್ಬನ ಮನೆಯಲ್ಲಿ ಐದಾರು ವರ್ಷದ ಮಗುವೊಂದು ಕೈಕಟ್ಟಿ ನಿಂತುಕೊಂಡು, ಪಿಳಿಪಿಳಿ ಕಣ್ಣುಬಿಡುತ್ತ ಭಗವದ್ಗೀತೆಯ ಸುಮಾರು ೧೫೦ ಶ್ಲೋಕಗಳನ್ನು ಬಿಟ್ಟುಬಿಡದೆ ಹೇಳುತ್ತದೆ. ಅದನ್ನು ಕೇಳುತ್ತ ನಾನು ಮೂಕವಿಸ್ಮಿತನಾಗಿ ಕುಳಿತಾಗ ಅವರೆಲ್ಲ ಅಭಿಮಾನದಿಂದ ಬೀಗುತ್ತಾರೆ.) ಇಂದು ಪ್ರಸಿದ್ಧಿಯ ತುತ್ತ ತುದಿಗೇರಿರುವ ಕನ್ನಡದ ಹಿರಿಯ ಕವಿಗಳೆಲ್ಲ ಇಂಥ ಶಿಕ್ಷಣ ಪಡೆದ ಅಂದಿನ ಮುದ್ದುಮಕ್ಕಳೇ ಎಂಬುದನ್ನು ಮರೆಯುವಂತಿಲ್ಲ. ಹಾಗೆಂದು ತಿಳಿಯಾದ ಭಾಷೆಯಲ್ಲಿ ಸರಳೀಕೃತಗೊಂಡ ಇಂದಿನ ಶಿಕ್ಷಣ ಹಾಗೂ ಸಾಹಿತ್ಯದ ಬಗ್ಗೆ `ಆಕ್ಷೇಪದ ಧ್ವನಿ ' ಇದೆಯೆಂದು ಭಾವಿಸಕೂಡದು.

ಚಿಂತೆಯ ಮಾತೆಂದರೆ ಇಂದಿನ ಮಕ್ಕಳು ಬರೀ ಪ್ರಯೋಗವಸ್ತುಗಳಾಗುತ್ತಿರುವುದು. ಶಿಕ್ಷಣಕ್ರಮ ಕೂಡ ಕೃತ್ರಿಮವಾದಂತೆ ಭಾಸವಾಗುತ್ತಿದೆ. ಪುಸ್ತಕದ ಚೀಲ ಹೊರೆಯಾಗುತ್ತಿದೆ. ಇದಕ್ಕೆ ಪೂರಕವಾಗಿ ಮಕ್ಕಳ ಸಾಹಿತ್ಯದಲ್ಲಿ `ಸೃಜನಶೀಲ' ಅಂಶವನ್ನು ಅಪೇಕ್ಷಿಸುವುದು ಸರಿಯಾದುದಲ್ಲ ಎಂಬುದು ತೀರ ಇತ್ತೀಚಿನ ಮಕ್ಕಳ ಸಾಹಿತಿಗಳ `ಏಚಿತ ನಂಬಿಕೆ 'ಯಾಗಿರುವಂತೆ ತೋರುತ್ತದೆ.

ಇಷ್ಟು ದೂರ ನಡೆದು ಬಂದರೂ ಒಂದು ನಿಶ್ಚಿತ ನೆಲೆಗಾಗಿ ತಡಕಾಡುತ್ತಿರುವ ಭಾವಿನ ಈ ಸಂದರ್ಭವನ್ನು ಹೀನೆಲೆಯಾಗಿಟ್ಟುಕೊಂಡು ಯೋಚಿಸಿದರೆ, ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ನಮ್ಮ ಹಿರಿಯರು ನಡೆಸಿದ ಪ್ರಯತ್ನಗಳಿಗೆ ತುಂಬ ಮಹತ್ವ ಪ್ರಾಪ್ತವಾಗುತ್ತದೆ.

ಚೆನ್ನಪಟ್ಟಣದ ವಾಸುದೇವಯ್ಯನವರು (೧೮೨೨ - ೧೯೬೬) ಕನ್ನಡ ಮಕ್ಕಳ ಸಾಹಿತ್ಯ ರೂಪಿಸಿದವರಲ್ಲಿ ಮೊದಲಿಗರು. ಅವರು ಪ್ರಕಟಿಸಿದ "ಬಾಲಬೋಧೆ'ಗಳನ್ನು ಮಕ್ಕಳ ಬೆಂಬಿಡದೆ ಕರೆದು ಗೌರವಿಸಿದ್ದಾರೆ. ತಿಳಿಗನ್ನಡದಲ್ಲಿ ಸಾಹಿತ್ಯ ರಚಿಸಿ ಮಕ್ಕಳ ಮನ ಗೆದ್ದವರು ಅವರು. ಅವರ ಬಾಲಬೋಧೆ ಮಕ್ಕಳಿಗೆ ಪಠ್ಯವಾಗಿದ್ದವು. ಅನಂತರ ಪ್ರಕಟವಾದ "ನೀತಿಚಿಂತಾಮಣಿ" ಎಂ. ಎಸ್. ಪುಟ್ಟಣ್ಣನವರ ಪ್ರಸಿದ್ಧ ಕೃತಿ. ಮಕ್ಕಳಿಗೆ ಪಠ್ಯ ಪುಸ್ತಕವಾಗಿತ್ತು. ಪುಟ್ಟ ಪುಟ್ಟ ವಾಕ್ಯಗಳ ಸರಣಿಯಿಂದಾಗಿ ಇಲ್ಲಿಯ ಕಥೆಗಳು ಮಕ್ಕಳ ಮನಗೆದ್ದವು. ಇದರಲ್ಲಿರುವ ಸುಮಾರು ೧೫೦ ಕಥೆಗಳು ಮನರಂಜನೆ ನೀಡುತ್ತಲೇ ಮಕ್ಕಳಿಗೆ ನೀತಿಪಾಠ ಹೇಳುತ್ತವೆ.

"ಗೋಪಿನ ಚರಿತ್ರೆ" ಮತ್ತು "ಚಂದ್ರ" ಎಂಬೆರಡು ಪದ್ಯಗಳ ಖ್ಯಾತಿಯ ಎಸ್. ಜಿ. ನರಸಿಂಹಾಚಾರ್ಯರು ಮಕ್ಕಳ ಸಾಹಿತ್ಯದ ಆದ್ಯ ಕೃಷಿಕರಲ್ಲಿ ಒಬ್ಬರು. ಅವರ "ನೀನಾರಿಗಾದೆಯೊ ಎಲೆ ಮಾನವ" ಎಂಬ ಗೋಪಿನ ಚರಿತ್ರೆಯನ್ನು ಹಾಡಿದ ಕನ್ನಡಿಗರಿಲ್ಲ ಎನ್ನಬೇಕು.

ಅನಂತರ ಬಂದ ಪಂಜೆ ಮಂಗೇಶರಾಯರು ಕನ್ನಡ ಮಕ್ಕಳ ಸಾಹಿತ್ಯದ ಅಚಾರ್ಯ ಪುರುಷರೆನ್ನಿಸಿಕೊಂಡಿದ್ದಾರೆ. ಮಕ್ಕಳ ಭಾಷೆ, ಅಭಿರುಚಿಗಳಿಗೆ ಶಕ್ತಿಯಂತೆ ಸಾಹಿತ್ಯ ಕೃಷಿ ಮಾಡಿದ ಮಂಗೇಶರಾಯರು "ಹಾಡಿನಹಾಡು", "ಅಜ್ಜಿ ಕಥೆಗಳು", "ಕನ್ನಡಕ" (ಕಥನ 'ಕವನ), "ಬೊಂಬರ ಚನ್ನ" ಮುಂತಾದ ಕೃತಿಗಳನ್ನು ಮಕ್ಕಳ ಕೈಯಲ್ಲಿರಿಸಿದರು. ಅವರು ಬರೆದ "ತೆಂಕಣ ಗಾಳಿಯಾಟ" "ಹಾಡಿನಹಾಡು" ಕವಿತೆಗಳು ಮಕ್ಕಳ ಲೋಕದಲ್ಲಿ ಚಿರಸ್ಥಾಯಿಯಾಗಿ ಬಾಳಿಬದುಕುತ್ತವೆ.

ಪಂಜೆಯವರಂತೆ ಅಧ್ಯಾಪಕವೃತ್ತಿಯಲ್ಲಿ ಬಳಗಿ, ಮಕ್ಕಳ ಮನಸ್ಸು ಭಾವನೆಗಳನ್ನು ಅರಿತುಕೊಂಡು ಸಾಹಿತ್ಯ ರಚಿಸಿದ ವ್ಯಕ್ತಿಯೆಂದರೆ ಎಂ. ಎಸ್. ಕಾಮತ್‌ರವರು (೧೮೮೬ - ೧೯೬೦). ಪಂಜೆಯವರು ಕಾವ್ಯಕ್ಷೇತ್ರವನ್ನು ವಿಸ್ತಾರಗೊಳಿಸಿದಂತೆ, ಕಾಮತರು ಮಕ್ಕಳಿಗೆ ಅಮೂಲ್ಯವಾದ ನಾಟಕಗಳನ್ನು ನೀಡಿದರು. "ಮಧ್ಯಮವ್ಯಾಯೋಗ", "ಕೃಷ್ಣಸಂಧಾನ", "ತೆನಾಲಿರಾಮ", "ಕವಿವರ ಭೀಮಸಿಂಹ", "ಪಬ್ರಸುಬ್ಬ" "ಯುದ್ಧಾಂತ್ಯ", "ಉದ್ಧಾರನಂದ", "ಮೈಯರು" ಮುಂತಾದ ನಾಟಕಗಳು ತುಂಬ ಜನಪ್ರಿಯವಾಗಿದ್ದವು. ನಾಟಕಗಳಲ್ಲದೆ ಅವರು ಅನೇಕ ಕಥೆಗಳನ್ನು ಕವಿತೆಗಳನ್ನು ಬರೆದಿದ್ದಾರೆ.

ಈ ಮೂವ್ವ ಮಕ್ಕಳಿಗಾಗಿ ಹಲವಾರು ಪಠ್ಯಪುಸ್ತಕಗಳನ್ನು ರಚಿಸಿದವರು ಬೆಳಂಗಿ ಶಿವರಾಮಯ್ಯನವರು (೧೮೭೭ - ೧೯೫೦) ವಿದ್ಯಾಮಿತ್ರ ಮಹಿಮೆ, ಆರ್ಯನೀತಿ ಕಥೆಗಳು, ಸಂಕ್ಷಿಪ್ತ ವಾಲ್ಮೀಕಿ ರಾಮಾಯಣ, ಸಂಕ್ಷಿಪ್ತ ಮಹಾಭಾರತ, ಹರ್ಷಚಿಂತೆ ಮುಂತಾದ

ಪುಸ್ತಕಗಳು ಇವರಿಂದ ರಚಿತವಾಗಿವೆ. ಮಕ್ಕಳಸಾಹಿತ್ಯ ಕ್ಷೇತ್ರಕ್ಕೆ ಸುಬೋಧ ರಾಮರಾಯರು ನೀಡಿದ ಕೊಡುಗೆಯೆಂದರೆ ` ಸುಬೋಧ ಕುಸುಮಾಂಜಲಿ '(೧೮೯೦ - ೧೯೭೦) ಈ ಗ್ರಂಥ ಮಾಲೆಯಡಿ ಸುಮಾರು ೧೪೦ ಜೀವನಚರಿತ್ರೆಗಳನ್ನು ಅವರು ರಚಿಸಿದ್ದಾರೆ.

ಕನ್ನಡ ಮಕ್ಕಳ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಅಗ್ರಮಾನ್ಯರಲ್ಲಿ `ಹೊಯಿಸಳ'ರೂ ಒಬ್ಬರು (೧೮೯೩ - ೧೯೫೯). ಇವರು ಹುಟ್ಟು ಹೆಸರು ಆರಗಂ ಲಕ್ಷ್ಮಣರಾಯರು. ಕವಿ ರವೀಂದ್ರರ ಶಾಂತಿನೀಕೇತನದಲ್ಲಿ ಇಂಗ್ಲೀಷ ಅಧ್ಯಾಪಕರಾಗಿದ್ದ ಶ್ರೀಯುತರು ಬಹುಮುಖ ಪ್ರತಿಭೆಯುಳ್ಳವರಾಗಿದ್ದರು. ೧೯೨೨ರಲ್ಲಿ ತಾಯ್ನಾಡಿಗೆ ಮರಳಿದ ಮೇಲೆ ಅವರು ಮಕ್ಕಳ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಮೂಲ್ಯವಾಗಿದೆ. ಪುಟ್ಟಪುಟ್ಟ ಸಾಲುಗಳಲ್ಲಿ ಲಯಬದ್ಧವಾಗಿ ಪದ್ಯ ರಚಿಸುತ್ತಿದ್ದ ಹೊಯ್ಸಳರ ಶೈಲಿ ಅಪ್ಯಾಯಮಾನವಾಗಿತ್ತು. ಮಗುವಿನ ಕೂಗು, ಕೋಗಿಲೆ, ಅಂಜೂರ, ಚಂದಮಾಮ, ಕೋಲುಕುದುರೆ, ಮರಿಗಳ ಕೂಗು ಮುಂತಾದ ಕವನ ಸಂಕಲನಗಳನ್ನು, ಪೋರಿ, ವೀರಕುಮಾರ, ಪಟಾಕ್ಷಿ, ಸಕ್ಕರೆಗೊಂಬೆ ಇತ್ಯಾದಿ ಕಥಾ ಸಂಕಲನಗಳನ್ನು ಅವರು ನೀಡಿದ್ದಾರೆ.

`ಅಖಿಲ ಕರ್ನಾಟಕ ಮಕ್ಕಳ ಕೂಟ ' ಎಂಬ ಸಂಸ್ಥೆಯನ್ನು ಕಟ್ಟಿ, `ಸರಸ್ವತಿ ' ಪತ್ರಿಕೆಯನ್ನು ಸ್ಥಾಪಿಸಿದ ಶ್ರೀಮತಿ ಆರ್. ಕಲ್ಯಾಣಮ್ಮ (೧೮೭೪ -೧೯೬೫)` ಮಕ್ಕಳ ಮಾತೋಶ್ರೀ 'ಯಾಗಿ ಬೆಳಗಿದ್ದಾರೆ. ಪ್ರಿಯಂವದೆ, ನಿರ್ಭಾಗ್ಯವನಿತೆ, ನಿರ್ಮಲಾ ಎಂಬ ಕಾದಂಬರಿಗಳನ್ನು, ಇಪ್ಪತ್ತನೆಯ ಶತಮಾನದ ಅಳಿಯ, ಯದುರಾಯ, ವರದಕ್ಷಿಣೆ ಮುಂತಾದ ನಾಟಕಗಳನ್ನು ಅವರು ರಚಿಸಿದ್ದಾರೆ.

ಮಕ್ಕಳಿಗಾಗಿಯೇ `ನಮ್ಮ ಪುಸ್ತಕ' ಎಂಬ ಪತ್ರಿಕೆಯನ್ನು ಪ್ರಕಟಿಸುತ್ತಿದ್ದ ದೇವಡು ನರಸಿಂಹಶಾಸ್ತ್ರಿಗಳು ಮಕ್ಕಳ ಸಾಹಿತ್ಯ ಭಂಡಾರವನ್ನು ಸಿರಿವಂತಗೊಳಿಸಿದವರು. ಬುದ್ಧಿಯ ಕತೆಗಳು ಮೂಲಾಂತರದ ಕಥೆಗಳು ಕಥಾಸರಿತ್ಸಾಗರ, ಮೂಢರ ಕಥೆಗಳು ಕಂದನ ಕಥೆಗಳು ಹೊಸಗನ್ನಡ ಪಂಚತಂತ್ರ ಮುಂತಾದ ಕೃತಿಗಳನ್ನು ರಚಿಸಿದ್ದಾರೆ (೧೮೯೭ - ೧೯೬೨).

``ಮಕ್ಕಳ ಸಾಹಿತ್ಯವೆಂದರೆ ಜಿ. ಪಿ. ರಾಜರತ್ನಂ, ಜಿ. ಪಿ. ರಾಜರತ್ನಂ ಎಂದರೆ ಮಕ್ಕಳ ಸಾಹಿತ್ಯ '' ಎನ್ನುವಷ್ಟು ಹಿರಿಮೆ ಗಳಿಸಿದ ಜಿ. ಪಿ. ರಾಜರತ್ನಂ (೧೯೦೮ - ೧೯೭೯) ಅವರು ಎಲ್ಲ ವಯಸ್ಸಿನ ಮಕ್ಕಳಿಗೂ ಸಾಹಿತ್ಯ ರಚಿಸಿದವರು. ಮಕ್ಕಳ ಸಾಹಿತ್ಯ ಹೇಗಿರಬೇಕ ಎಂಬುದಕ್ಕೆ ಅವರ ಕೃತಿಗಳು ಮಾದರಿಯಾಗಿವೆ. ತುತ್ತೂರಿ, ಕಡಲೆಪುರಿ, ಚುಟುಕ, ಕಲ್ಲು ಸಕ್ಕರೆ, ತುಂಟಗಣಪತಿ, ಮುದ್ದುಕೃಷ್ಣ, ರಸಕವಳ, ಕೆನೆಹಾಲು, ಮೆರವಣಿಗೆ, ಪುಟಾಣಿ ಪಂಚತಂತ್ರ , ಭಾಸನ ಭಾರತ ಮೊದಲಾದ ಕೃತಿಗಳು ಮಕ್ಕಳ ಮನಸೂರೆಗೊಂಡಿವೆ. ಅವರಷ್ಟು ಮಕ್ಕಳ ಪುಸ್ತಕಗಳನ್ನು ರಚಿಸಿದವರು ಮತ್ತೊಬ್ಬರಿರಲಿಕ್ಕಿಲ್ಲ.

ರಾಷ್ಟ್ರಕವಿ ಕುವೆಂಪು ಮಕ್ಕಳ ಸಾಹಿತ್ಯ ರಚನೆಯತ್ತ ಬಹಳ ಆಸಕ್ತಿವಹಿಸಿದವರು ಅವರ `ಬೊಮ್ಮನ ಹಳ್ಳಿಯ ಕಿಂದರಿ ಜೋಗಿ ' ಕೃತಿ ತುಂಬ ಜನಪ್ರಿಯವಾದುದು. ಅದಲ್ಲದೆ ಅವರು ನನ್ನ ಗೋಪಾಲ, ಮೋಡಣ್ಣನ ತಮ್ಮ ಎಂಬ ನಾಟಕಗಳನ್ನೂ, ನನ್ನ ಮನೆ, ಮ ಎಚ್ಚಾನಿ, ಮೇಘಪುರ ಎಂಬ ಮೂರು ಶಿಶುಗೀತೆಗಳ ಸಂಕಲನಗಳನ್ನು ರಚಿಸಿದ್ದಾರೆ.

ಬಾಲಪ್ರಪಂಚ ಎಂಬ ಮೂರು ಸಂಪುಟಗಳ ಮಕ್ಕಳ ಮೊದಲ ವಿಶ್ವಕೋಶವನ್ನು ಸಿದ್ಧಪಡಿಸಿದ ಶಿವರಾಮ ಕಾರಂತರು ಮಕ್ಕಳ ಸಾಹಿತ್ಯಕ್ಕೆ ಹೊಸ ತಿರುವು ನೀಡಿದವರು. ಈ ವಿಶ್ವಕೋಶದಲ್ಲಿ ಶಾಸ್ತ್ರ ವಿಷಯಗಳು ಬರುತ್ತವೆ, ನಡುನಡುವೆ ಕಥೆ, ಕವನ ಮುಂತಾದ ರಂಜಕ ವಿಷಯಗಳು ಸಚಿತ್ರವಾಗಿ ಬರುವುದರಿಂದ ಮಕ್ಕಳು ಆಸಕ್ತಿಯಿಂದ ಓದಲು ಅನುವು ಮಾಡಿಕೊಟ್ಟಿದೆ. ಪ್ರೌಢಶಾಲಾ ಮಕ್ಕಳಿಗಾಗಿ ರಚಿಸಿದ ವಿಜ್ಞಾನ ಪ್ರಪಂಚ, ಅದ್ಭುತ ಜಗತ್ತುಗಳು ಕೂಡ ಕಾರಂತರ ಬೃಹತ್ ಸಾಹಸಗಳಾಗಿವೆ. ಇದಲ್ಲದೆ ಥಂ ಥಂ ಡೋಲು (ಶಿಶುಗೀತೆಗಳು), ಗಜರಾಜ (ಕಥಾ ಸಂಕಲನ) ಇತ್ಯಾದಿಯಾಗಿ ಸುಮಾರು ೨೫ ಕೃತಿಗಳನ್ನು ಮಕ್ಕಳ ಸಾಹಿತ್ಯ ಪ್ರಪಂಚಕ್ಕೆ ನೀಡಿದ್ದಾರೆ.

ಈ ರೀತಿ ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಕೃಷಿ ಮಾಡಿದ ಶ್ರೇಷ್ಠ ಕವಿ ಲೇಖಕರ ಒಂದು ದೊಡ್ಡ ಯಾದಿಯನ್ನು ಅವರ ಪ್ರಮುಖ ಕೃತಿಗಳೊಂದಿಗೆ ಇಲ್ಲಿ ನೀಡಿದರೆ ಅದು ಈ ಲೇಖನದ ವ್ಯಾಪ್ತಿಯನ್ನೇ ಮೀರಬಹುದು.

ಎಲ್. ಗುಂಡಪ್ಪನವರ ಚಿಟಾಕಿ, ರಾಘವರ ಹೂಬಾಡಗಿತ್ತಿ ಮತ್ತು ಹಾವಾಡಿಗ, ಕಾವ್ಯಾನಂದರ ತುಪ್ಪಾರೊಟ್ಟಿ ಗೇ ಗೇ ಗೇ, ಬಿ. ಎ. ಸನದಿಯವರ ಗುಲಾಬಿ ಗೊಂಚಲು, ಗೃಹ ಪಂಚಮಿ, ಜಿಲೇಬಿ ಝುಣ್‌ಝುಣ್, ಪಳಕಳ ಸೀತಾರಾಮ ಭಟ್ಟರ ಕಂದನ ಕೊಳಲು, ಡೊಂಬರ ಡೋಲು, ತಮ್ಮನ ತಂಬೂರಿ, ದಿನಕರ ದೇಸಾಯಿಯವರ ಮಕ್ಕಳ ಗೀತೆಗಳು, ಬಿ. ರಾಮಚಂದ್ರ ಭಟ್ಟರ ಶಿಶುವಿಹಾರ ಮತ್ತು ಪುಟ್ಟನ ಪಿಟೀಲು `ಸಿಸು' ಸಂಗಮೇಶರವರ ನಾವು ನಾಳೆಯ ಕವಿಗಳು, ಶಂ. ಗುಂ. ಬಿರಾದಾರ ಅವರ ಕಾರಂಜಿ, ಚಂದ್ರಗೌಡ ಕುಲಕರ್ಣಿಯವರ ಬೆಳ್ಳಿಹಳ್ಳಿ, ಶರಣಪ್ಪ ಕಂಪ್ಯಾಣಿಯವರ ಅಜ್ಜನ ಹಾಡು, ಜಾಗ್ರತ ಭಾರತ, ಸಂಗಮೇಶ ಬಾಗಲಕೋಟರ ಪತಂಗ ಮತ್ತು ಬಣ್ಣದ ಕಾರು ಮೊದಲಾದ ಕವನ ಸಂಕಲನಗಳು ಮಕ್ಕಳ ಕಾವ್ಯಲೋಕವನ್ನು ಸಿರಿವಂತಗೊಳಿಸಿವೆ.

ಡಿ. ವಿ. ಜಿ. ಯವರ ಇಂದ್ರಜಿಜ್ಞ, ಬೆಕ್ಕೋಜಿ, ಬಿ. ಪಾಂಡುರಂಗರಾಯರ ತುಂಟರ ಗುರು, ಮುದ್ದು ಸಿಂಗಾರಿ, ದಾವೋದರ ಬಾಳಿಗರ ಸೀಸನ ಶೀಷ, ಚಾಡಿ ಮೈನ, ಅಳಿಲ ಸೇವೆ, ಭಾರತೀಸುತರ ಮರಿಯಾನೆ, ಕಿರಾಡಿ ಗಪ್ಪಜಿಗ, ಹುಲಿಗಳ ದಿಬ್ಬಣ, ಸಿಗೋರ, ಎಂ. ಎಸ್. ರಾಮರಾಯರ ಸೋಮಾರಿ ಸಿದ್ದ, ಬಿನ್ನ ಕೊಡುವ ಹಕ್ಕಿ, ಚಿನ್ನ ಕೊಡುವ ಮರ, ಎಂ. ಕೃಷ್ಣಮೂರ್ತಿಯವರ ಗುರುವಾಕ್ಯ, ಜಾಣಕತ್ತೆ, ಮೇಪುಂಡಿ ಮಲ್ಲಾರಿಯವರ ಕೆಂಪು ಮೂತಿ ಹಂಪಣ್ಣ, ಚಿಕ್ಕ ಹುಡುಗಿ ಪುಟ್ಟಿ ತಮ್ಮ, ಬಿ. ಶಂಕರಭಟ್ಟ ಮತ್ತು ಬಿ. ಎಂ. ಶರ್ಮಾ ಅವರು ಸೇರಿ ಪ್ರಕಟಿಸಿದ ಕಥಾ ಸಂಗ್ರಹಗಳು ಹೆಸರಿಸಲೇ ಬೇಕಾದ ಜನಪ್ರಿಯ ಕೃತಿಗಳಾಗಿವೆ.

ಎಂ. ಆರ್. ಶ್ರೀಯವರ ಕುರೀರವ ವಿಜಯ, ಹೊಯ್ಸಳರ ಸಮಾಜ ಸೇವೆ, ನಾಲ್ಕು ನಾಟಕ, ಪಾಂಡುರಂಗರಾಯರ ಗುರುವೇ ದೊಡ್ಡವನು, ದೀಪಾವಳಿ ತಾಯಿಯೇ ದೇವರು, ಮೈಸೂರು ಶಿಶುಸಾಹಿತ್ಯ ಸಂಘದವರು ಪ್ರಕಟಿಸಿರುವ ನಾಟಕಗಳು ಮಕ್ಕಳ ವಿಹಾರದ ಉತ್ತಮ ನಾಟಕಗಳು.

ನಾ. ಕಸ್ತೂರಿಯವರ ಪಾತಾಳದಲ್ಲಿ ಪಾಪಚ್ಚಿ, ಮೂರ್ತಿರಾಯರ ಹವಳದ ದ್ವೀಪ, ಅಡಿಗರ ಭೂಗರ್ಭ ಯಾತ್ರೆ, ಸುವರ್ಣ ಕೀಟ, ಆನಂದರ ಸಿರಿದ್ವೀಪ, ಪುರುಷಾಮೃಗ, ಡಿ. ವಿ. ಶೇಷಗಿರಿರಾಯರ ಐಲುವೀರನ ಸಾಹಸ, ಬಿ.ಎಸ್. ರುಕ್ಮಮ್ಮನವರ ಶಾಲೆಯ ಮಕ್ಕಳು ಉತ್ತಮ ಅನುವಾದ ಕೃತಿಗಳಾದರೆ, ಎಂ. ಎನ್. ಕಾಮತರ ಸೀತಾರಾಮು, ಭಾಗೋಜಿಯವರ ಕನ್ನಡ ಕಥಾವಳಿ, ಕೆ. ಗುಂಡಪ್ಪನವರ ಚಿತ್ತೂರ ಪದ್ಮಿನಿ, ನಾಗೇಶರ ಕಿತ್ತೂರ ಚೆನ್ನಮ್ಮರಾಣಿ, ದೇ. ಜ. ಗೌ. ರ ಮೇಡಂ ಕ್ಯೂರಿ ಮತ್ತು ಕುಮಾರ ರಾಮನನ್ನು ಕುರಿತಾದ ಪುಸ್ತಕಗಳು ಉತ್ತಮ ಮಕ್ಕಳ ಐತಿಹಾಸಿಕ ಚಿತ್ರಗಳು., ಮಕ್ಕಳ ಮನಸ್ಸನ್ನು ಸೆಳೆದ ಉತ್ತಮ ಕೃತಿಗಳಲ್ಲಿ ಎಲ್. ಜಿ. ವಿಮಲರ ತುಂಟರ ತೇರು ಹಾಗೂ ತ. ವಿ. ಚಂದ್ರಶೇಖರ ಅವರ ಚಿನ್ನದ ಗರಿಗಳು ಮುಖ್ಯವಾಗಿವೆ.

ಬಾಲಸಾಹಿತ್ಯವನ್ನು ಸಂಪನ್ನಗೊಳಿಸಿದ ಇನ್ನಷ್ಟು ಹೆಸರುಗಳೆಂದರೆ ಮಕ್ಕಳ ಸಾಹಿತ್ಯ ಕೃತಿಗೆ ಮೂರುಸಾವಿರ ಮಠದವರ ಪ್ರಶಸ್ತಿ ಪಡೆದ ಗುರುರಾಜ ಬೆಣಕಲ್, NCERT ಪ್ರಶಸ್ತಿ ಪಡೆದಿರುವ ರಸಿಕ ಪುತ್ತಿಗೆ, ದಿನಕ್ಕೊಂದು ಕಥೆಯ ಕರ್ತೃ ಡಾ. ಅನುಪಮಾ ನಿರಂಜನ, ಭಾರತ - ಭಾರತಿ ಪುಸ್ತಕ ಸಂಪಾದಕ ಎಲ್. ಎಸ್. ಶೇಷಗಿರಿರಾವ, ಐ. ಬಿ. ಎಚ್. ಪ್ರಕಾಶನದ ಜಿ. ಕೆ. ಅನಂತರಾವ್, ಮನೋಹರ ಗ್ರಂಥಮಾಲೆಯ ಬಾಲಚಂದ್ರ ಫಾಣೇಕರ ಸೋಮಯಾಜಿ, ಬಂಟವಾಳ ಪದ್ಮನಾಭ, ಎಸ್. ಚೆನ್ನಪ್ಪ, ಪಂಡಿತ ಚೆನ್ನಪ್ಪ ಎರೆಸೀಮೆ, ನವೋದಯ ದಿನಪತ್ರಿಕೆಯ ಸಂಪಾದಕ ಹಾಗೂ ಕನ್ನಡ ಚಿನ್ನರ ಪುಸ್ತಕ ಮಾಲೆಯ ಹ. ರಾ. ಕಿದಿಯೂರು, ಗುಲಬರ್ಗಾದ ಎ. ಕೆ. ರಾಮೇಶ್ವರ, ಟಿ. ಎಸ್. ನಾಗರಾಜ ಶೆಟ್ಟಿ (ಸಕ್ಕರೆ ಬೊಂಬೆ, ಹಂಸ ಮತ್ತು ಆಮೆಗಳು). ಇತ್ತೀಚೆಗೆ ಮಕ್ಕಳ ಸಾಹಿತ್ಯದತ್ತ ಒಲವು ಹರಿಸಿ ಅದಕ್ಕೊಂದು ಹೊಸತನ ತುಂಬುತ್ತಿರುವ ನಾ. ಡಿಸೋಜ, ಡಾ. ಲಕ್ಷ್ಮೀನಾರಾಯಣ ಭಟ್ಟ, ಎಚ್. ಎಸ್. ವೆಂಕಟೇಶಮೂರ್ತಿ, ಬೆ. ಗೋ. ರಮೇಶ, ರಾಜಶೇಖರ ಭೂಸನೂರಮಠ, ಎಂ. ಡಿ. ಗೋಗೇರಿ, ಸಿ. ಫ. ಕಟ್ಟೀಮನಿ, ನೀ. ರೇ. ಹಿರೇಮಠ, ಗುರುಪಾದಸ್ವಾಮಿ, ಹಿರೇಮಠ, ಐವತ್ತಕ್ಕೂ ಹೆಚ್ಚು ಮಕ್ಕಳ ಕೃತಿಗಳ ರಚಿಸಿರುವ ಬಿ. ಎಸ್. ಸ್ವಾಮಿ, ಮಕ್ಕಳ ಸಾಹಿತಿಗಳ ಸಮಗ್ರ ಪರಿಚಯ ನೀಡಿರುವ ಎಸ್. ವ್ಹಿ. ಶ್ರೀನಿವಾಸರಾವ್, ಶ್ರೀರವಿ, ಕವಿತಾ ಕೃಷ್ಣ, ಜಯಶ್ರೀ ದಿವಾಕರ್, ದು. ನಿಂ. ಬೆಳಗಲಿ, ಪರಿಮಳ, ಪಿ. ಎಸ್. ಜಯಲಕ್ಷ್ಮೀ, ಎಂ. ಎಸ್. ರಾಮರಾವ್, ಕಪಿಲಾಬಾಯಿ ರಾಮಶೇಷರಾವ್, ಅನಸೂಯಾಬಾಯಿ, ಇಂದಿರಾ ರಾವ, ಉಷಾದೇವಿ, ೯೨ರ ಸಾಲಿಗೆ ಅಕಾಡೆಮಿ ಪ್ರಶಸ್ತಿ ವಿಜೇತೆ ವೈದೇಹಿ, ಅಣ್ಣಾರಾಯ ಸಾಲಿಮನಿ, ಜಯವಂತ ಕಾಡದೇವರ ಪ್ರಮುಖರಾಗಿದ್ದಾರೆ. ಇವರುಗಳ ಜೊತೆಗೆ ನಾವು ಗೌರವದಿಂದ ಸ್ಮರಿಸಬೇಕಾದ ಹಿರಿಯರೆಂದರೆ ಚೆನ್ನವೀರ ಕಣವಿ, ಸಿದ್ದಣ್ಣ ಮಸಳಿ, ದ. ರಾ. ಬೇಂದ್ರೆ, ಮಧುರಚೆನ್ನ, ಡಿ. ಎಸ್. ಕರ್ಕಿ, ಎಸ್. ಡಿ. ಇಂಚಲ, ಕಯ್ಯಾರ ಕಿಂಞಣ್ಣ ರೈ, ಉಳವೀಶ ಹುಲೆಪ್ಪನವರಮಠ ಮೊದಲಾದವರು.

ಪುಟಪುಟಗಳಗಟ್ಟಲೆ ಮಕ್ಕಳಸಾಹಿತ್ಯ ರಚನೆ ಮಾಡಿ ಹೆಸರು ಮಾಡಿರುವ ಪ. ರಾಮಕೃಷ್ಣಶಾಸ್ತ್ರಿ, ಕೃ. ನಾರಾಯಣರಾವ್, ಸಂಪಟೂರು ವಿಶ್ವನಾಥ, ಡಿ. ಎನ್. ಶ್ರೀನಾಥ ಒಂದೆಡೆಯಾದರೆ ತನ್ನ ಒಂದೇ ಒಂದು ಕವನ ಸಂಕಲನ `ನನ್ನ ಕನಸು' ರಚಿಸಿರುವ ಕಿಶೋರ

ವಿದ್ಯಾಸಾಗರ ಕುಕ್ಕುಂದಾ, ತಮ್ಮ ಏಕಮಾತ್ರ ಮಕ್ಕಳ ಕವನ `ಸುಗ್ಗಿಯ ಹಾಡು' ಬರೆದ ಡಿ. ಆರ್. ಬಳೂರಗಿ, `ಗುಡ್ಡಿಗೊಂದು ಕವಿತೆ' ಬರೆದಿರುವ ಸಿದ್ಧರಾಜ ಪೂಜಾರಿ ಮಕ್ಕಳ ಸಾಹಿತ್ಯದಲ್ಲಿ ವೈಶಿಷ್ಟ್ಯಪೂರ್ಣ ಸಾಧನೆಗೈದವರೆನಿಸಿದ್ದಾರೆ.

೧೯೬೦ ದಶಕದಲ್ಲಿ ಬೆಂಗಳೂರು, ಮೈಸೂರು, ಧಾರವಾಡ ಮತ್ತು ಮಂಗಳೂರುಗಳು ಮಕ್ಕಳ ಸಾಹಿತ್ಯ ಕೃಷಿಯ ಹುಲುಸಾದ ಪ್ರದೇಶಗಳೆನಿಸಿದ್ದವು. ಆದರೆ ೧೯೮೦ರ ಈಚೆಗೆ ವಿಜಾಪುರ ಜಿಲ್ಲೆ ಹೆಚ್ಚು ಮಕ್ಕಳ ಸಾಹಿತಿಗಳನ್ನು ಪಡೆದು ನಾಡವರ ಗಮನ ಸೆಳೆಯುತ್ತಿದೆ. ಶಂ. ಗು. ಬಿರಾದಾರ, ಸಿಸು ಸಂಗಮೇಶ, ಸಂಗಮೇಶ ಹೊಸಮನಿ, ಪರುಶುರಾಮ ಚಿತ್ರಗಾರ, ಕಂಬ್ಯಾಣಿ ಶರಣಪ್ಪ ಮೊದಲಾದ ಹಿರಿಯರ ಮಾರ್ಗದರ್ಶನದಲ್ಲಿ ಬಾ. ಈ. ಕಮತೆ, ಸಂಗಮೇಶ ಬಾಗಲಕೋಟ, ಎಂ. ಬಿ. ಲಿಂಗದಳ್ಳಿ, ಚಂದ್ರಗೌಡ ಕುಲಕರ್ಣಿ, ಜಂಬುನಾಥ ಕಂಬ್ಯಾಣಿ, ಫ. ಗು. ಸಿದ್ದಾಪೂರ, ಕಾಡಣ್ಣ ಹೊಸಟ್ಟಿ, ಮಲ್ಲಿಕಾರ್ಜುನ ಹುಲಗಬಾಳಿ, ಜಿ. ಎಸ್. ವಡಗಾಂವಿ, ಬಿ. ಆರ್. ಪೋಲೀಸ ಪಾಟೀಲ, ಹ. ಮ. ಪೂಜಾರ ಅನ್ನದಾನಿ ಹಿರೇಮಠ, ಗುರುಸ್ವಾಮಿ ಗಣಾಚಾರಿ, ಸಂಗಮೇಶ ಗುಜಗೊಂಡ, ವಿಶ್ವಜ ಕಾಡದೇವರ ಮುಂತಾದವರ ಒಂದು ದೊಡ್ಡ ಪಡೆಯೇ ಈ ದಿಶೆಯಲ್ಲಿ ಕಾರ್ಯೋನ್ಮುಖ ರಾದದ್ದೊಂದು ವಿಶೇಷವೆನಿಸುತ್ತದೆ.

ನಾವು ಮಕ್ಕಳ ಸಾಹಿತ್ಯದ ಹಿತೈಷಿಗಳು ಕೃತಜ್ಞತೆಯಿಂದ ನೆನೆಯಲೇಬೇಕಾದ ಸಂಸ್ಥೆ ಧಾರವಾಡದ `ಮಕ್ಕಳ ಮನೆ' ಮತ್ತು ಅದರ ಹಿಂದೆ ಶಕ್ತಿಯಾಗಿರುವ ವ್ಯಕ್ತಿ ಈಶ್ವರ ಕಮ್ಮಾರ. ಈ ಸಂಸ್ಥೆಯ ಆಶ್ರಯದಲ್ಲಿ ಹೊರಡಿಸಲಾಗುತ್ತಿರುವ `ಮಕ್ಕಳ ಮಂದಿರ' ಎಂಬ ಮಾಸಿಕವು ಮಕ್ಕಳ ಸಾಹಿತ್ಯ ಮುನ್ನಡೆಸುವಲ್ಲಿ ದಾಪುಗಾಲನ್ನಿಡುತ್ತಿದೆ.

ಇಂದು ಮಕ್ಕಳ ಸಾಹಿತ್ಯ ಸರೋವರಕ್ಕೆ ಬೇರೆ ಬೇರೆ ಭಾಷೆಯ ಕವನ ಕತೆಗಳ ಅನುವಾದಗಳೇ ಹರಿದು ಬರುತ್ತಿರುವುದು ನಮ್ಮನ್ನು ಆತಂಕಕ್ಕೀಡು ಮಾಡುತ್ತಿದೆ. ಇದು ಬೇಡ ಎಂದೆನ್ನಲಾಗದು. ಆದರೆ ಬರೀ ಇದೇ ಆಗಬಾರದು ಎಂಬ ಕಾಳಜಿ ನಮ್ಮದು. ನಾವು ನಮ್ಮವೇ ಆದ ಸೆಲೆಗಳನ್ನು ಹುಡುಕಬೇಕಾಗಿದೆ. ಭಿನ್ನಪ್ರಾಂತಗಳ ವಿಭಿನ್ನ ದೇಶಗಳ ಮಕ್ಕಳ ಸಾಹಿತ್ಯದ ಓದಿನ ಜೊತೆಗೆ ನಮ್ಮ ಸೃಜನಶೀಲತೆಯ ಕಸಿ ಮಾಡಿ ಒಂದು ಹೊಸ ತಳಿಯ ಹುಟ್ಟಿಗಾಗಿ ನಾವು ಶ್ರಮಿಸಬೇಕಾಗಿದೆ. ಹೀಗೆ ಮಾಡಿ ಒಳ್ಳೆಯ ಕವಿ, ಕತೆಗಾರ, ಕಾದಂಬರಿಕಾರ, ನಾಟಕಕಾರ ಸಂಶೋಧಕರನ್ನು ಕನ್ನಡ ನಾಡು ದೇಶಕ್ಕೆ ಕೊಟ್ಟ ರೀತಿಯಲ್ಲಿಯೇ ಮಕ್ಕಳ ಸಾಹಿತಿಗಳನ್ನು ಕೊಡುವಂತಾಗಲಿ ಎಂಬುದೇ ನಮ್ಮಾಶಯ.

(ನೆರವು : ಸಿದ್ಧರಾಜ ಪೂಜಾರಿ)

●

ಆಕರ ಗ್ರಂಥಗಳು :

೧. ಕನ್ನಡ ವಿಶ್ವಕೋಶ ಸಂಪುಟ ೭ ಮತ್ತು ೧೨
೨. ಮಕ್ಕಳ ಸಾಹಿತ್ಯ ಚಿಂತನ ಮಕ್ಕಳ ಮನೆ ಪ್ರಕಾಶನ - ಧಾರವಾಡ
೩. ಗಿರಿಸಿರಿ ರಾಜ್ಯ ಮಟ್ಟದ ಮೂರನೆಯ ಮಕ್ಕಳ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ
೪. ತಟ್ಟು ಚಪ್ಪಾಳೆ ಪುಟ್ಟ ಮಗ ಬೋಳುವಾರ ಮಹಮ್ಮದ ಕುಂಞ
೫. ಗಂಗೋತ್ರಿ - ಕುವೆಂಪು ಅಭಿನಂದನ ಗ್ರಂಥ

ಪತ್ರಸಾಹಿತ್ಯ

- ಗುರುಪಾದ ಮರಿಗುದ್ದಿ

ಕನ್ನಡ ಸಾಹಿತ್ಯವು ಇಂದಿನ ದಿನಗಳಲ್ಲಿ ಹಲವು ಹತ್ತು ಪ್ರಕಾರಗಳಲ್ಲಿ ಅಭಿವ್ಯಕ್ತಿ ಗೊಳ್ಳುತ್ತಿದೆ. ಕಳೆದ ಶತಮಾನದ ಕೊನೆಯ ಭಾಗದಲ್ಲಿ ಆಧುನಿಕ ಸಾಹಿತ್ಯಕ್ಕೆ ಹೊಸ ಆಯಾಮಗಳು ಒದಗಿಬಂದವು. ಪಾಶ್ಚಿಮಾತ್ಯ ಜನಾಂಗದೊಂದಿಗೆ ಮತ್ತು ಆಡಳಿತದೊಂದಿಗೆ ಸಂಪರ್ಕ ಬಂದುದು, ತನ್ಮೂಲಕ ವಿದ್ಯಾಭ್ಯಾಸ ಕ್ರಮದಲ್ಲಿ ಹೊಸತನ ಕಾಣಿಸಿಕೊಂಡುದು, ಆಲೋಚನೆ ವಿಚಾರಗಳಲ್ಲಿಯೂ ಭಿನ್ನತೆ ಮೂಡಿದುದು, ಹೊರದೇಶಗಳ ಘಟನಾವಳಿಗಳು ಭಾರತೀಯರನ್ನು ಪ್ರಭಾವಿಸಿದುದು, ಸ್ವದೇಶಿ ಪ್ರಜ್ಞೆಯ ಸ್ವಾತಂತ್ರ್ಯ ಹೋರಾಟ ನಡೆದುದು ಕೆಲವು ಗಮನಾರ್ಹ ಸಂಗತಿಗಳು. ಇವುಗಳಿಂದಾಗಿ ಭಾರತೀಯ ಜನತೆಯ ಆಶೋತ್ತರಗಳು ಭಿನ್ನವಾಗಿ ವಿಶಿಷ್ಟವಾಗಿ ತಲೆಯುತ್ತಿದವು. ಸಾಹಿತ್ಯದ ಪರಂಪರಾಗತ ರೂಪ, ಅಭಿವ್ಯಕ್ತಿ, ಮೌಲ್ಯಗಳೆಲ್ಲ ಮರುಪರಿಶೀಲನೆಗೆ ಒಳಗಾದವು. ತತ್ಫಲವಾಗಿ ಭಾರತೀಯ ಇತರ ಭಾಷೆಗಳಂತೆ ಕನ್ನಡದಲ್ಲಿಯೂ ಕಾದಂಬರಿ, ಸಣ್ಣಕತೆ, ವಿಮರ್ಶೆ, ಪ್ರಬಂಧ, ಹರಟೆ ಮುಂತಾದ ಪ್ರಕಾರಗಳು ಧಾರಾಳವಾಗಿ ಬೆಳೆಯತೊಡಗಿದವು.

ಪತ್ರಸಾಹಿತ್ಯ ಭಾರತೀಯರಲ್ಲಿ ಹಿಂದಿನಕಾಲದಿಂದಲೂ ಕಾಣಿಸಿಕೊಂಡು, ಕಾಲಕಾಲಕ್ಕೆ ಬೇರೆ ಬೇರೆ ಉದ್ದೇಶಗಳಿಗೆ ಬಳಕೆಗೊಂಡು ಬಂದ ರೂಪವಾಗಿದೆ. ಆಜ್ಞೆ, ಸಂದೇಶ, ವ್ಯವಹಾರಗಳಿಗೆ ಓಲೆಗಳು ಬಳಕೆಗೊಂಡಿವೆ. ಪ್ರಸಿದ್ಧ ವ್ಯಕ್ತಿಗಳ ನಡುವೆ, ರಾಜರು ಅಧಿಕಾರಿಗಳ ನಡುವೆ ಪತ್ರಗಳ ಬಳಕೆ ಮೊದಲಿನಿಂದಲೂ ಇದೆ. ಕೆಲವು ಸಾಹಿತ್ಯದ ಮೌಲ್ಯವನ್ನೂ ಪಡೆದುಕೊಂಡಿವೆ.

ಆದರೆ ಪತ್ರಗಳು ಸಾಹಿತ್ಯದ ಪ್ರಕಾರವಾಗಿ, ಕಲಾತ್ಮಕ ಅಭಿವ್ಯಕ್ತಿಯಾಗಿ ಕಂಡು ಬರುವುದು ಇತ್ತೀಚೆಗೆ ಮಾತ್ರ. ಆಧುನಿಕ ಸಾಹಿತ್ಯದ ಹಲವು ಪರಿಕಲ್ಪನೆಗಳಲ್ಲಿ ಇದು ಒಂದಾಗಿ ಸೇರಿಕೊಂಡಿದ್ದು, ಅದರ ಸಮೀಕ್ಷೆ ಕುತೂಹಲಪೂರ್ಣವಾಗಿದೆ.

ಕನ್ನಡದ ಪ್ರಸಿದ್ಧ ಚಿಂತಕರು, ಸಾಹಿತಿಗಳು, ಕಲಾವಿದರು, ತತ್ವಜ್ಞಾನಿಗಳು ಆಡಳಿತಗಾರರು ಬರೆದು ಪ್ರಕಟಿಸಿದ, ಸಂಪಾದಿಸಿದ, ಸಂಗ್ರಹಿಸಿದ ಕೃತಿಗಳು ಕನ್ನಡ ಪತ್ರ ಸಾಹಿತ್ಯದ ಮಹತ್ವದ ಭಾಗವಾಗಿ ನಿಲ್ಲುತ್ತದೆ. ಇವುಗಳನ್ನು ಹೊರತು ಪಡಿಸಿದರೆ ಕನ್ನಡ ಭಾಷೆಗೆ ಅನುವಾದಗೊಂಡ, ರೂಪಾಂತರಗೊಂಡ ಕೃತಿಗಳೂ ಅಭ್ಯಾಸಿಗಳು ಗಮನಿಸುವಂತಿವೆ. ಸ್ವತಂತ್ರ ಕೃತಿಗಳು ಮತ್ತು ಅನುವಾದಿತ ಕೃತಿಗಳೆರಡೂ ಸೇರಿಕೊಂಡು ಒಟ್ಟು ಕನ್ನಡ ಪತ್ರ ಸಾಹಿತ್ಯವೆನಿಸುತ್ತದೆ.

ಕನ್ನಡ ಭಾಷೆಯಲ್ಲಿ ಸ್ವತಂತ್ರವಾಗಿ ರೂಪಗೊಂಡು ಪ್ರಕಟವಾದ ಕೃತಿಗಳು ಪರಿಳಿಣಿಕೆಯಷ್ಟು ಮಾತ್ರ. ಇದರಲ್ಲಿಯೂ ಸಾಂಸ್ಕೃತಿಕ ಬದುಕಿನ ಎಲ್ಲಾ ಮುಖ ಮಜಲುಗಳಿಗೆ ಸಂಬಂಧಪಟ್ಟ ಹಿರಿಕಿರಿಯ ಪ್ರಸಿದ್ಧರು ಸೇರದೆ ಇರುವುದು ಒಂದು ಕೊರತೆ ಎನ್ನಬೇಕು. ಹೆಚ್ಚಿನ ಕೃತಿಗಳು ಕನ್ನಡ ಸಾಹಿತಿಗಳಿಗೆ ಸಂಬಂಧಪಡುವುದರಿಂದ ಸಹಜವಾಗಿ ಅವುಗಳ ಸಾಹಿತಿ, ಬರಹಗಾರರ ಬದುಕಿಗೆ, ಅನಿಸಿಕೆ ಅಭಿಮತಗಳಿಗೆ, ಓಲೆಗಳನ್ನು ಸಾಹಿತಿಗಳಾಗಿ ಅವರು ಬರೆದರು ಮತ್ತು ಅವು ಮುಖ್ಯವೆಂದು ಪರಿಗಣಿತವಾಗಿ ಉಳಿದು ಪ್ರಕಟವಾಗಿ ಬಂದವು. ಈ ಎರಡೂ ಕನ್ನಡದ ಪಾಲಿಗೆ ಕನ್ನಡಿಗರ ಪಾಲಿಗೆ ದೊಡ್ಡ ಸಂಗತಿಗಳು. ಸ್ಪಂದನಶೀಲ ಮತ್ತು ಸೃಜನಶೀಲ ಮನಸ್ಸುಗಳು ಕಾಲಕಾಲಕ್ಕೆ ಹೇಗೆ ಕಾರ್ಯಮಾಡಿದವು ಎಂಬುದನ್ನು ಅರಿಯಲು ಪತ್ರಸಾಹಿತ್ಯ ತುಂಬ ಉಪಯುಕ್ತವಾಗಿದೆ.

ಗೋವಿಂದ ಪೈಗಳ ಹೆಸರು ಈ ಕ್ಷೇತ್ರದಲ್ಲಿ ಢಾಳವಾಗಿ ಕಾಣಿಸುತ್ತದೆ. ನವೋದಯ ಕಾಲದ ಕನ್ನಡದ ಬಹುದೊಡ್ಡ ಸಂಶೋಧಕರು, ಕವಿಗಳು ಆಗಿದ್ದ ಗೋವಿಂದ ಪೈಗಳು ಬರೆದ ಓಲೆಗಳೂ ಅವರ ಇತರ ಸಾಹಿತ್ಯ ಕೃತಿಗಳಂತೆ ವಿಶಿಷ್ಟವಾಗಿವೆ. ಅವರ ಓಲೆಗಳು `ದೀವಿಗೆ' ಮತ್ತು `ಮಂಜೇಶ್ವರದ ಗೋವಿಂದ ಪೈ ಅವರ ಕೆಲವು ಓಲೆಗಳು ' ಕೃತಿ ರೂಪದಲ್ಲಿ ಸಂಗ್ರಹಗೊಂಡಿವೆ. ೧೯೬೫ರಲ್ಲಿ ಪ್ರಕಟಗೊಂಡ `ದೀವಿಗೆ' ಗೋವಿಂದ ಪೈಗಳನ್ನು ಕುರಿತಾದ ಸ್ಮಾರಕ ಗ್ರಂಥ. ಈ ಕೃತಿಯ ಜನೇ ವಿಭಾಗದಲ್ಲಿ ಪೈಗಳು ಬರೆದ ೫೦ ಪತ್ರಗಳನ್ನು ಕು. ಶಿ. ಹರಿದಾಸಭಟ್ಟ ಅವರು ಸಂಗ್ರಹಿಸಿಕೊಟ್ಟಿದ್ದಾರೆ. ಇದರಲ್ಲಿ ಪೈಗಳು ಬರೆದ ಅನೇಕ ಬಗೆ ಬಗೆಯ ಪತ್ರ ಮಾದರಿಗಳಿವೆ. ಸಾರ್ವಜನಿಕ ಸಮಾರಂಭಕ್ಕೆ ಕಳಿಸಿದ ಶುಭಸಂದೇಶಗಳು, ಅತಿಥಿಯಾಗಿ ಆಮಂತ್ರಿಸಿದವರಿಗೆ ಉತ್ತರಿಸಿದ ಉತ್ತರಗಳು, ಹಿರಿಕಿರಿಯ ಲೇಖಕರಿಗೆ ನೀಡಿದ ಸಲಹೆ ಸೂಚನೆಗಳು, ಕಳಿಸಿದ ಹರಕೆ, ಮುನ್ನುಡಿಗಳು, ಸಂಶೋಧನೆಗಾಗಿ ಪ್ರಶ್ನಿಸಿ ವಿವರಿಸಿ ವಿಕ್ಷೇಪಿಸಿ ಸಮ್ಮತಿಸಿ ಬರೆದ ಅಭಿಪ್ರಾಯಗಳು, ಕೆಲವು ಪ್ರತಿಕ್ರಿಯೆ ಸ್ಪಷ್ಟೀಕರಣಗಳು ಇದರಲ್ಲಿ ಸೇರಿಕೊಂಡಿವೆ.

ಗೋವಿಂದ ಪೈಗಳು ತಮ್ಮ ಬಿಡುವಿಲ್ಲದ ಓದು, ಬರಹ, ಸಂಶೋಧನೆಗಳ ನಡುವೆಯೂ ಓಲೆಗಳಿಗೆ ಉತ್ತರಿಸುತ್ತಿದ್ದರು. ಅಭಿಪ್ರಾಯ ವಿವರ ಕೇಳಿದವರಿಗೆ ಆಧಾರ ನೀಡಿ ಬರೆಯುತ್ತಿದ್ದರು. ಚಿಕ್ಕಪುಟ್ಟ ಸಂಗತಿಗಳಿಂದ ಹಿಡಿದು ಮುಖ್ಯ ವಿಚಾರದವರೆಗೂ ಕೆಲವು ಪಂಕ್ತಿಗಳಲ್ಲಿ ಉತ್ತರಿಸುವ ಅವರ ಶೈಲಿ ವಿಶಿಷ್ಟವಾದುದು, ಓಲೆ ಪ್ರತಿಯಾಗಿ ಓಲೆ ಬರೆಯುವ ಕ್ರಮ ಅನನ್ಯವಾದುದು. ಓಲೆ ಬರೆಯುವುದನ್ನು ಒಂದು ವ್ರತದಂತೆ ಅವರು ಕೈಕೊಂಡಿದ್ದರು.

ಬೈಲಹೊಂಗಲದ ಕ.ಮ.ಶಿ. ಚಂದ್ರಶೇಖರಯ್ಯ ಎಂಬವರು ಕಳಿಸಿದ ಕವನಸಂಕಲನಕ್ಕೆ ಪ್ರತಿಯಾಗಿ ತಮ್ಮ ಅಭಿಪ್ರಾಯ ಬರೆದು ತಿಳಿಸುತ್ತಾರೆ. `` ಗೋವಿಂದ ಪೈ ಮಾಡುವ ನಮಸ್ಕಾರ. ತಾವು ಪ್ರೀತಿಪೂರ್ವಕವಾಗಿ ಕಳುಹಿಸಿರುವ `ಮಧುರಯಾನ' ಎಂಬ ತಮ್ಮ ಕವಿತೆಗಳ ಪುಸ್ತಕ ಇಲ್ಲಿಗೆ ಮುಟ್ಟಿದೆ, ಧನ್ಯವಾದಗಳು. ಓದಿ ನೋಡಿದೆ. ಕವಿತೆಗಳೆಲ್ಲ ಒಹಳ ಚೆನ್ನಾಗಿವೆ. ಅವುಗಳಲ್ಲಿ ಈ ಕೆಲವು ನನ್ನ ಮನೋದೃಷ್ಟಿಗಂತೂ ಮಿಕ್ಕವಕ್ಕಿಂತ ಚಲೋದೆನಿಸುತ್ತವೆ. (೧) ದೊಡ್ಡವರ ದಾರಿ (೨) ಮರುಕಳಿಸಿದ ನೆನಪು (೩) ಒಂದು ಸಂಜೆ

(೪) ನೆರಳ ಸಂತೆ (೫) ಚಿತ್ರ ಚೆಲುವಿಗೆ....." [೭] ಹೊಸ ಬರಹಗಾರರಿಗೆ ಅವರು ಇದೇ ತೆರನಾಗಿ ಪ್ರೋತ್ಸಾಹ ತುಂಬುತ್ತಿದ್ದರು. ತಮಗೆ ಸರಿ ಕಂಡ ಭಾಗಗಳನ್ನು ಎತ್ತಿ ಹೇಳುತ್ತಿದ್ದರು. ಅದರ ಜೊತೆಗೆ ಕೃತಿಯಲ್ಲಿಯ ಕೊರತೆಗಳನ್ನು, ಬರಹದ ದೋಷಗಳನ್ನು ತೋರಿಸಿ ಪರಿಹಾರ ಸೂಚಿಸುತ್ತಿದ್ದರು. ಎಂಥ ದೊಡ್ಡ ಲೇಖಕರಿದ್ದರೂ, ಸಂಶೋಧಕರಿದ್ದರೂ ಪೈಗಳ ಭಾಷಾ ಶಿಸ್ತಿನ ಚಾಟಿ ಏಟನ್ನು ತಪ್ಪಿಸಿಕೊಳ್ಳುವಂತಿರಲಿಲ್ಲ. ಅವರ ಅನೇಕ ಪತ್ರಗಳು ಇದಕ್ಕೆ ಸಾಕ್ಷಿಯಾಗಿವೆ. ಪದಪ್ರಯೋಗ, ಸಮಾಸೋಕ್ತಿ, ಸಂಜ್ಞೆ, ಬಳಕೆಗಳನ್ನು ಅವರು ನಿಟ್ಟಿಸುತ್ತಿದ್ದರು. !

ಕನ್ನಡದ ಮತ್ತೊಬ್ಬ ಖ್ಯಾತ ಸಾಹಿತಿ ಸಂಶೋಧಕರಾದ ಶ್ರೀ ಜಿ. ಪಿ. ರಾಜರತ್ನಂ ಅವರು ಗೋವಿಂದ ಪೈಗಳ ಓಲೆಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಮೊದಲ ೪೨ ಓಲೆಗಳು ಪೈಗಳು ನೇರವಾಗಿ ರಾಜರತ್ನಂ ಅವರಿಗೆ ಬರೆದವುಗಳು. ಹೆಚ್ಚಿನವು ಆಂಗ್ಲಭಾಷೆಯಲ್ಲಿದ್ದು, ಕೆಲವು ಕನ್ನಡದಲ್ಲಿವೆ. ನಾಟಕಕಾರ ಟಿ. ಪಿ. ಕೈಲಾಸಂ ನಿಧನರಾದಾಗ ಪೈಗಳು ಬರೆಯುವ ರೀತಿ `` He was undoubtedly one of the few Genuine Geniuses of Modern Kannada, on whose literature he has made a lasting impression. His was an original mind, an original way of thinking, and an original way of looking at things. When and where again shall we find a like of him ? " [೩] ಎ. ಆರ್. ಕೃಷ್ಣಶಾಸ್ತ್ರಿಗಳ ಭಾವಚಿತ್ರ ಅನಾವರಣದ ಸಂದರ್ಭ ಬರೆದ ಓಲೆಯಿದು".....ಅವರನ್ನು ಕುರಿತು ನನಗೆ ಹೊಳಕುವ ಮಟ್ಟಿಗೆ ಒಂದೇ ಮಾತಿನಲ್ಲಿ ಹೇಳುವುದಾದರೆ, ಅದೊಂದು ಪೂರ್ಣಕುಂಭ. ತುಂಬಿದ ಕೊಡಕ್ಕೆ ತುಳುಕಾಟವಿಲ್ಲ. ಅವರಲ್ಲಿ ಮಾತಾಟವಿಲ್ಲ, ಅಚ್ಚಕೆಲಸ ತಾನೆ. ಅವರ ಭಾಷಣಗಳೂ ಲೇಖನಗಳೂ ಎಂಬ ಆ ೨ ಸಂಪುಟಗಳು, ಹಾಗೂ ಶ್ರೀಪತಿಯ ಕಥೆಗಳು ಎಂಬ ಕಥೆಗಳು ಬಹಳ ಸೊಗಸಾಗಿವೆ. ಅವುಗಳಲ್ಲಿ ತಿರುಳಿದೆ, ಹುರುಳಿದೆ."[೪] ಸಮಕಾಲೀನ ಬರಹಗಾರರ ಬಗ್ಗೆ ಅವರ ಪ್ರೀತಿ ಅಭಿಮಾನಗಳು ಪತ್ರದಲ್ಲಿ ಚೆನ್ನಾಗಿ ಕಾಣಿಸುತ್ತವೆ. ಇಲ್ಲೆಲ್ಲ ಅವರ ನಿರಸೂಯಾಮತಿ ಕಾರ್ಯಗೈದಿದೆ.

ಪೈಗಳ ಕೆಲವು ಓಲೆಗಳು ಸಾಹಿತ್ಯ ಸಂಸ್ಕೃತಿ ಮತ್ತು ಇತಿಹಾಸದ ಕಾರಣದಿಂದ ಮಹತ್ವ ಪಡೆಯುತ್ತವೆ. ಅವರು ಮುದ್ದಣ, ಪಂಪ, ರನ್ನ, ಸಂಸರನ್ನು ಕುರಿತು ಬರೆದ ಪತ್ರಗಳಿಂದ ಇದನ್ನು ತಿಳಿಯಬಹುದು. ಬಿ. ಶ್ರೀನಿವಾಸ ಅಯ್ಯಂಗಾರ್ಯರಿಗೆ ಜುಲೈ ೪, ೧೯೪೭ರಂದು ಬರೆದ ಓಲೆಯಲ್ಲಿ ನಾಟಕಕಾರ ಸಂಸರ ಬಗ್ಗೆ ಅಪೂರ್ವ ಮಾಹಿತಿಯನ್ನು ನೀಡಿದ್ದಾರೆ. ಅಪಾರ ಬಡತನದಲ್ಲಿ ನೊಂದು ಬೆಂಡಾದ ಸಂಸರು ಮತಾಂತರಕ್ಕೆ ಸಿದ್ಧರಾದುದು, ಇಸ್ಲಾಂ ಧರ್ಮ ಗುರುಗಳೊಬ್ಬರು ಸಾವಿರಾರು ರೂಪಾಯಿಗಳ ಆಮಿಷ ತೋರಿದ್ದು, ಪೈಗಳ ಹಿತವಚನದಿಂದ ಅದು ನಿಂತುದು ಓಲೆಯಲ್ಲಿದೆ. `ಮಹಾಪ್ರಭು' ಎಂಬ ನಾಟಕದ ಹಸ್ತಪ್ರತಿಯನ್ನು ಸಂಸರು ಪೈಗಳಿಗೆ ಕಳಿಸಿ ಒಂದು ನೂರುರೂಪಾಯಿ ಕೊಟ್ಟರೆ ಸಾಕು ಎಂದು ಗೋಗರೆಯುವ ಪ್ರಕಾಶಕರನ್ನು ಹುಡುಕುವ ಕರುಣಾಜನಕ ವೃತ್ತಾಂತವೂ ಇದರಲ್ಲಿದೆ. ಕೊನೆಗೂ ಹಸ್ತ ಪ್ರತಿಯಲ್ಲಿಯ ``ಮಹಾಪ್ರಭು "ವರ್ಷಗಳ ಪ್ರಯತ್ನದ ನಂತರವೂ ಪ್ರಕಟವಾಗದ

ಸಂಸರು ನಿರಾಶರಾಗಿ ಹೋದುದನ್ನು ತಿಳಿಸಿ ಪೈಗಳು ಓಲೆಯ ಅಂತ್ಯದಲ್ಲಿ ಭಾವಪೂರ್ಣವಾಗಿ ಬರೆಯುವುದಿಂತು -

`` So since the name of his drama ಮಹಾಪ್ರಭು, the theme of which was, I presume, based on the history of mysore, is not mentioned in the ಅನುಬಂಧ to your edition of ವಿಗಡ ವಿಕ್ರಮರಾಯ, I am sorry it is lost for ever to Kannada Literature. I am all the more sorry that with all the love which I so madly have for Kannada Literature, especially for modern literature, I was fool enough not to look into, if not to read, the MS. of that drama, which it lay in the Bata Sahitya Mandala for years ! I have no words to forgive myself for this blunder " * ಪೈಗಳ ಹೃದಯದ ಮರುಕ, ಆತಂಕ, ಪಶ್ಚಾತಾಪಗಳನ್ನು ಇಲ್ಲಿ ಕಾಣಬಹುದು. ತಮ್ಮ ಕೈಗೆ ಬಂದಿದ್ದ ನಾಟಕದ ಹಸ್ತಪ್ರತಿ ಕೊನೆಗೆ ಪ್ರಕಟವಾಗದೆ ಕಾಲಗರ್ಭ ಸೇರಿದ ಸಂಗತಿಯನ್ನು ನೋವಿನಿಂದ ನೆನೆವ ಅವರು, ಕನ್ನಡದ ನಾಟಕಕಾರ ಸಂಸರ ದುರಂತ ಬದುಕಿಗೆ ಪರಿತಪಿಸಿದ್ದಾರೆ.

ರಾಜರತ್ನಂ ಅವರಿಗೆ ಪೈಗಳು ಬರೆದ ಓಲೆಗಳಲ್ಲಿ ಹೆಚ್ಚಿನವು `ಗಿಳಿವಿಂಡು' ಕೃತಿಯ ಮರುಮುದ್ರಣಕ್ಕೆ ಸಂಬಂಧಪಡುತ್ತವೆ. ಪ್ರತಿ ಓಲೆಯಲ್ಲಿ ಪೈಗಳು ಮುದ್ರಣದ ಬಗ್ಗೆ ಕೃತಿಯ ವಿನ್ಯಾಸದ ಬಗ್ಗೆ ವಹಿಸುತ್ತಿದ್ದ ಎಚ್ಚರ, ಕಾಳಜಿಗಳು ಇಂದಿನ ಬರಹಗಾರರಿಗೆ ಅತಿ ಎನ್ನಿಸುವಂತಿವೆ. ಅಚ್ಚಿನ ದೋಷಗಳಿಲ್ಲದೆ ಸುಂದರ ವಿನ್ಯಾಸದಲ್ಲಿ ಕೃತಿ ಹೊರಬರಬೇಕೆಂಬ ಅವರ ಅಭಿಲಾಷೆ ಪ್ರಯತ್ನಗಳು ಅನುಕರಣೀಯವಾಗಿವೆ. ಪೈಗಳ ಓಲೆಗಳು ಅವರ ಸಾಹಿತ್ಯ ಕೃತಿಗಳಂತೆ, ಸಂಶೋಧನಾ ಲೇಖನಗಳಂತೆ ಅವರದೇ ವ್ಯಕ್ತಿತ್ವದ ಮುದ್ರೆಪಡೆದಿವೆ. ತೀರ್ಥಕ, ಗೊಮ್ಮಟ, ಗೌತಮ ಪದಬಳಿಕೆ ರೂಪನಿಷ್ಪತ್ತಿಯ ಬಗ್ಗೆ ಬರೆದಲ್ಲಿ ಅವರ ಕುತೂಹಲಾಸಕ್ತಿಗಳು ಗೋಚರಿಸುತ್ತವೆ. ಕವಿಗಳ ಕಾಲ, ದೇಶ ನಿರ್ಣಯಿಸುವಲ್ಲಿ ಆಕರಗಳನ್ನು ಆಧಾರವಾಗಿ ಬಳಸಿ ತಮಗೆ ಗೊತ್ತಿರುವುದನ್ನು ಮಾತ್ರ ತಿಳಿಸುತ್ತಿದ್ದರು. ತಮಗೆ ತಿಳಿಯದ ಸಂಗತಿಗಳನ್ನು ತಿಳಿದಿಲ್ಲ ಎನ್ನುವಲ್ಲಿ ಸಂಕೋಚಪಡುತ್ತಿರಲಿಲ್ಲ. ಪತ್ರಗಳಲ್ಲಿ ಪೈಗಳ ಪ್ರಾಮಾಣಿಕತೆ, ಪಾಂಡಿತ್ಯ, ಜ್ಞಾನಪಿಪಾಸೆ, ವಿಮರ್ಶಾದೃಷ್ಟಿ, ಸ್ನೇಹ ವಿಶ್ವಾಸಗಳು ತುಂಬಿಕೊಂಡಿವೆ. ಕನ್ನಡದಲ್ಲಿ ಪತ್ರಸಾಹಿತ್ಯದ ಪ್ರಕಾರವನ್ನು ಅದರ ಆರಂಭಕಾಲದಲ್ಲಿ ಸಬಲಗೊಳಿಸಿದರು, ಅದರ ದಿಕ್ಕು ದೆಸೆಗಳನ್ನು ರೂಪಿಸಿದರು. ಸಾಹಿತಿಯಾಗಿ ಅನೇಕ ಬಿಡುವಿಲ್ಲದ ಕಾರ್ಯಕ್ರಮಗಳಲ್ಲಿ, ಪ್ರವಾಸದಲ್ಲಿ ತೊಡಗಿದ್ದ ಮತ್ತು ಸಂಶೋಧಕರಾಗಿ ದೀರ್ಘ ಚಿಂತನೆಯಲ್ಲಿ ಇರುತ್ತಿದ್ದ ಅವರು ಓಲೆ ಬರೆಯುವುದನ್ನು ಎಂದಿಗೂ ಬಿಟ್ಟು ಕೊಡಲಿಲ್ಲ. ಹಾಗಾಗಿ ಗೊಲ್ಲಥಾ, ಗಿಳಿವಿಂಡುಗಳಂತೆ ಪೈಗಳ ಓಲೆಗಳೂ ಕನ್ನಡ ಸಾಹಿತ್ಯದ ಅಪೂರ್ವ ಕೃತಿಗಳೇ ಆಗಿವೆ.

ಕನ್ನಡದ ಪತ್ರಸಾಹಿತ್ಯ ಪೈಗಳಿಂದ ಅಂಥ ಕೆಲವು ಪ್ರಮುಖ ಲೇಖಕರಿಂದ ಮೈದುಂಬಿ ಕೊಂಡು ಬೆಳೆಯಿತು. ತರುವಾಯದ ಕೃತಿಗಳಲ್ಲಿ ಸೇಡಿಯಾಪು ಕೃಷ್ಣಭಟ್ಟರ `ಪತ್ರಾವಳಿ'

ಮಾಸ್ತಿಯವರ `ಸಾಹಿತ್ಯ ಲಾಲನೆ' ಹಾಗೂ `ಪತ್ರಗಳು' ಮುಖ್ಯವಾಗಿವೆ. ೧೯೬೭ರಷ್ಟು ಹಿಂದೆಯೆ ಮಾಸ್ತಿಯವರು ತಮ್ಮಯ ಸಾಹಿತ್ಯದ ಓದುಗರು, ಅಭಿಮಾನಿಗಳು, ಸ್ನೇಹಿತರು ಬರೆದ ಓಲೆಗಳಲ್ಲಿ ಕೆಲವನ್ನು ಆಯ್ದುಕೊಂಡು `ಸಾಹಿತ್ಯ ಲಾಲನೆ' ಕೃತಿಯನ್ನು ಹೊರತಂದಿದ್ದಾರೆ. ಮುಂದೆ ೧೯೭೭ರಲ್ಲಿ ಇಂತಹ ಮತ್ತೆ ಕೆಲವು ಓಲೆಗಳನ್ನು `ಪತ್ರಗಳು' ಹೆಸರಿನಲ್ಲಿ ಪ್ರಕಟಿಸಿದ್ದಾರೆ. `ಪತ್ರಗಳು' ೧೬೮ ಓಲೆಗಳ ಸಂಕಲನವಾಗಿದೆ. ಜಯಕರ್ನಾಟಕ ಪತ್ರಿಕೆಗೆ ಲೇಖನ ಕೋರಿ ಆಲೂರು ವೆಂಕಟರಾಯರು ಬರೆದ ಓಲೆಯಿಂದ ಮೊದಲು ಗೊಂಡು, `ಕೆಲವು ಸಣ್ಣ ಕತೆಗಳು' ಪ್ರಕಟಿಸಿದ ಪ್ರಕಾಶಕರಿಗೆ ಕೋಪದಿಂದ ಉತ್ತರಿಸಿದ ಓಲೆಯವರೆಗೂ ವಿಧವಿಧವಾದ ಪತ್ರಗಳು ಇಲ್ಲಿವೆ. ಮಾಸ್ತಿಯವರನ್ನು ಪ್ರೀತಿಸಿದ, ಗೌರವಿಸಿದ, ಕೆಣಕಿದ, ಅಣಕಿಸಿದ, ಚುಚ್ಚಿದ, ನಿಂದಿಸಿದ, ಆರೋಪಿಸಿದ ಹಲವು ಹತ್ತು ಬರಹಗಳೂ ಸೇರಿಕೊಂಡಿವೆ.

`ಶ್ರೀ ರಾಮಕೃಷ್ಣ' ಕೃತಿಯಲ್ಲಿ ರಾಮಕೃಷ್ಣರನ್ನು ಏಕವಚನದಲ್ಲಿ ಸಂಬೋಧಿಸಿದ್ದು ಸರಿಯಲ್ಲವೆಂದೂ, ಅದು ಅಪರಾಧ ಎಂದೂ ಸೂಚಿಸಿ ಸವದತ್ತಿ ತಾಲೂಕಿನ ಮುನವಳ್ಳಿಯ ವಾಚಕರ ೭೨ ನಂಬರಿನ ಓಲೆಯಾಗಲಿ, `ಚಿಕವೀರರಾಜೇಂದ್ರ' ಕಾದಂಬರಿಯ ದೃಶ್ಯವೊಂದನ್ನು ಆಕ್ಷೇಪಿಸಿ ತಮ್ಮ ಧರ್ಮಕ್ಕೆ ಆಗಿರುವ ಅಪಮಾನ ಎಂದು ಭಾವಿಸಿ ಬರೆದ ಕ್ರಿಶ್ಚಿಯನ್ ಮಿತ್ರರ ೧೦೮ನೆಯ ಓಲೆಯಾಗಲಿ, ಕನಕದಾಸ ನಾಟಕದ ಬಗ್ಗೆ ಕುಪಿತರಾಗಿ ಓದುಗರೊಬ್ಬರು ಬರೆದ ೧೩೮ನೆಯ ಓಲೆಯಾಗಲಿ ಲೇಖಕರು ಎದುರಿಸಬೇಕಾದ ಇಕ್ಕಟ್ಟಿನ ಸ್ಥಿತಿಯನ್ನು ತೋರಬಲ್ಲವು. ಇಂತಹ ಪ್ರಸಂಗದಲ್ಲಿ ಮಾಸ್ತಿಯವರು ತಾಳ್ಮೆಯಿಂದ ಶಾಂತವಾಗಿ ಉತ್ತರಿಸುವುದು ಮಾತ್ರ ಗಮನಾರ್ಹವಾಗಿದೆ. `ಚೆನ್ನಬಸವ ನಾಯಕ' ಕಾದಂಬರಿಯ ಕುರಿತು ನಡೆದ ವಾದ-ವಿವಾದಗಳನ್ನು ಓಲೆಗಳು ವಿವರಿಸುವ ಹಾಗೆ ಮಾಸ್ತಿಯವರು ಸಂಕಲಿಸಿದ್ದಾರೆ. ಅಂದು ಲೋಕಸಭೆಯಲ್ಲಿ ಈ ಕುರಿತು ನಡೆದ ಚರ್ಚೆ, ಡಿ. ವಿ. ಜಿ. ಕಾರಂತರು ತೋರಿದ ಬೆಂಬಲ, ಕೇಂದ್ರ ಸಾಹಿತ್ಯ ಅಕಾಡೆಮಿಯ ದ್ವಂದ್ವನೀತಿಗಳು ಅನೇಕರ ಓಲೆಗಳಿಂದ ವಿದಿತವಾಗುತ್ತದೆ.

ಮಾಸ್ತಿಯವರು `ಜೀವನ' ಪತ್ರಿಕೆಯ ಒಂದು ವಿಶೇಷ ಸಂಚಿಕೆ ಹೊರತಂದು ಡಿ. ವಿ. ಜಿಯವರ ಅರವತ್ತು ತುಂಬಿದ ಸಂದರ್ಭ ನೆನೆಯಲು ತೀರ್ಮಾನಿಸಿದ್ದರು. ಇದನ್ನು ಕುರಿತು ಡಿವಿಜಿ ಅಸಮ್ಮತಿ ಸೂಚಿಸುವರು. `` ನನ್ನ ಕೃತಿಗಳಲ್ಲಿ ಅಷ್ಟಿಷ್ಟು ಗುಣವಿರಬಹುದು, ಇಲ್ಲದೆ ಇದ್ದಿದ್ದರೆ ಅವನ್ನು ನಾಲ್ಕು ಮಂದಿ ಒಪ್ಪಿಕೊಳ್ಳಬೇಕಾದ ಕಾರಣವಿಲ್ಲ. ಆದರೆ ಆ ಗುಣಾಂಶ ಹೆಚ್ಚಿನ ಪರೀಕ್ಷೆಯನ್ನು ತಡೆಯುವಷ್ಟರ ಮಟ್ಟಿನದಲ್ಲ ''[೬] ಕಾದಂಬರಿಕಾರರಾದ ಬಸವರಾಜ ಕಟ್ಟೀಮನಿಯವರು ೧೯೫೬ರಲ್ಲಿ ಪತ್ರ ಬರೆದು ``ಲೇಖಕರ ಆರ್ಥಿಕ ಸ್ಥಿತಿಯ ವಿಚಾರ ತಾವು ಬರೆದಿರುವದನ್ನೋದಿ ಎದೆ ತುಂಬಿಬಂದಿತು. ನಮ್ಮ ನಾಡಿನಲ್ಲಿ ಸಾಕ್ಷರತೆ ಬೆಳೆದ ಬಳಿಕ ಜನರ ಆರ್ಥಿಕ ಸ್ಥಿತಿ ಸ್ವಲ್ಪವಾದರೂ ಸುಧಾರಿಸಿದ ಬಳಿಕ ಲೇಖಕರ ಸ್ಥಿತಿಯೂ ಉತ್ತಮಗೊಳ್ಳುವುದೆಂದು ನನಗನ್ನಿಸುತ್ತಿದೆ. ಅಲ್ಲಿಯವರೆಗೂ ನಾವು ಸಮಾಧಾನಪಟ್ಟು ಕೊಂಡು ನಮ್ಮ ಕರ್ತವ್ಯದ ದಾರಿಯಲ್ಲಿ ಸಾಗಬೇಕಾಗಿದೆಯೆಂದು ನನ್ನ ತಿಳಿವಳಿಕೆ''[೭] ಎನಿಸಿಕೆ ವ್ಯಕ್ತಪಡಿಸಿದ್ದಾರೆ. ಜೀವನ ಪತ್ರಿಕೆ ಆರ್ಥಿಕವಾಗಿ ತುಂಬ ತೊಂದರೆಯಲ್ಲಿದ್ದಾಗ ಸಾಹಿತಿ

ಶ್ರೀಕೃಷ್ಣಕುಮಾರ ಕಲ್ಮಾಡಿ ರವರಲ್ಲಿ ಒಲೆ ಬರೆದು "ಇಂದು ರವೀಂದ್ರರ ದಿನ. ಏನಾದರೆಯಂದು ಬಾಪಯಿಕ್ಕ ಕೆಲಸ ಮಾಡಬೇಕೆಂದು ತೋಚಿತು. ಕಾವ್ಯ ಅನೇಕ ಸಲ 'ಜೀವನ' ದ ಅರ್ಥಿಕ ಸ್ಥಿತಿಯ ಬಗೆಗೆ ಬರೆದುದು ನೆನಪಿಗೆ ತೋರಿತು. ಅದೆಷ್ಟೋ ಸಲ ಮನಸ್ಸು ಮಾಡಿದ್ದರೂ ನಾನು ಕಳುಹಿಸಬೇಕು ಎಂದಿದ್ದ ಕಾಣಿಕೆಯನ್ನು ಕಳುಹಿಲೇ ಆಗಿರಲಿಲ್ಲ, ಇಂದು ಕಳುಹುತ್ತಿದ್ದೇವೆ. ದಯವಿಟ್ಟು ಸ್ವೀಕರಿಸಬೇಕಾಗಿ ವಿನ್ನಹ." ಎಂದು ಸಹಾಯ ಬಂದಿದ್ದಾರೆ. ಜೀವನ ಪತ್ರಿಕೆಯಿಂದ ಮಾಸ್ತಿಯವರು ನಿವೃತ್ತರಾಗುವ ವಿಚಾರ ತಿಳಿದು ಪತ್ರಿಕೆಯ ಅಭಿಮಾನಿ ಮಿತ್ರರೊಬ್ಬರು ಹೀಗೆ ಪ್ರತಿಕ್ರಿಯೆ ತೋರಿದ್ದಾರೆ. "ನೀವು ಜೀವನವನ್ನು ಬಿಡುತ್ತಿದ್ದೀರಿ ಎಂಬುದು ನನ್ನ ಜೀವನದ ಜೀವ ಹೋದಂತೆ ಭಾಸವಾಗುತ್ತಿದೆ. ಮುಂದೆ ಇವರ ಹೊಗೆ ಹೊರುವವರು ಸಾಮಾನ್ಯರಲ್ಲ, ಅದಾಗ್ಯೂ ಮಾಸ್ತಿಯವರು ಮಾಸ್ತಿಯವರೇ ! ಜೀವನವು ಜೀವನವೆ ! ಮಾಸ್ತಿಯವರಂತೆ ಇನ್ನೊಬ್ಬರು ಆಗಲಾರರು. ಅಂತೆಯೇ ಅವರ 'ಜೀವನ' ಇನ್ನೊಬ್ಬರ ಜೀವನವಾಗದು" ಹೀಗೆ ತಮಗೆ ಬಂದ ಅನೇಕ ಓಲೆಗಳನ್ನು ಮತ್ತು ತಮಗೆ ಮಹತ್ವ ಎಂದು ತೋರಿದವುಗಳನ್ನು ಮಾಸ್ತಿಯವರು ಈ ಸಂಗ್ರಹದಲ್ಲಿ ನೀಡಿದ್ದಾರೆ. ನೇರವಾಗಿ ಮಾಸ್ತಿಯವರು ಬರೆದ ಐದಾರು ಓಲೆಗಳು ಮಾತ್ರ ಇದರಲ್ಲಿ ಬೆಳಕುಕಂಡಿವೆ.

ಮಾಸ್ತಿಯವರು ಸಂಗ್ರಹಿಸಿರುವ ಈ ಓಲೆಗಳು ಕೆಲವು ಸಲ ತೀರ ಸಾಮಾನ್ಯ ಮತ್ತು ಆ ಕಾಲದ ಸಂದರ್ಭಕ್ಕೆ ಮಾತ್ರ ಅನ್ವಯವಾಗುವ ಭಾವನೆಯನ್ನು ಮೂಡಿಸುತ್ತವೆ. ಮೇಲುನೋಟಕ್ಕೆ ಬಂದಿನ ವ್ಯವಹಾರದ ಓಲೆಗಳು ಎನಿಸುತ್ತವೆ. ಆದರೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರಣಗಳಿಂದ ಅವುಗಳಿಗೆ ಬೆಲೆಯಿದೆ. ಕುವೆಂಪು, ಮುಗಳಿ, ಗೊರೂರು, ಮಂಗೇಶರಾಯರು, ಪೈಗಳು, ಕಾರಂತ, ಅನಕೃ, ಪುತಿನ, ಕಟ್ಟೀಮನಿ, ಕಾಯ್ಕಿಣಿ ಮುಂತಾದ ಸಾಹಿತಿಗಳ ಕೆಲವು ಓಲೆಗಳು ಓದುಗರಿಗೆ ಕಾಣದೊರೆಯುತ್ತವೆ.

ಸಾಹಿತ್ಯ, ಸಂಗೀತ, ಭಾಷಾ ವಾದ್ಯಮ, ಶಿಕ್ಷಣ, ಅಡಳಿತ, ಕಲೆಗಳ ಬಗ್ಗೆ ಮಾಸ್ತಿ ಯವರ ಮನೋಧರ್ಮ ಬೇಕು ಬೇಡಗಳು ಪರೋಕ್ಷವಾಗಿ ತಿಳಿದುಬರುತ್ತವೆ. ಹಲವು ಸಂತೋಷ ಸಡಗರದ ಪ್ರಸಂಗಗಳಲ್ಲಿ ಪ್ರತಿಭಟನೆ ತಳಮಳ ಅವಮಾನದ ಸಂದರ್ಭದಲ್ಲಿ ಅವರು ತೋರಿದ ವರ್ತನೆ, ತುಳಿದ ಮಾರ್ಗ ಸೂಚ್ಯವಾಗಿ ಕಂಡುಬರುತ್ತವೆ. ಮಾಸ್ತಿಯವರ ಪರಿಚಯ ಸ್ನೇಹ ಎಷ್ಟು ವಿಸ್ತರಿಸಿತ್ತು. ದಿನದಿನವೂ ಅವರು ಯಾವ ಒಗೆಯ ಓಲೆಗಳನ್ನು ಪಡೆಯುತ್ತಿದ್ದರು ಎಂಬ ಕುತೂಹಲಕ್ಕೆ ಉತ್ತರವಲ್ಲಿ ದೊರೆಯುತ್ತದೆ. ಓಲೆಗಳ ಮೊದಲು ಅವುಗಳ ಸಂದರ್ಭ. ಹಿನ್ನೆಲೆ ತಿಳಿಸಿರುವುದರಿಂದ ಓದುಗರಿಗೆ ನಿರಾಯಾಸವಾಗಿ ಎಲ್ಲ ತಿಳಿದುಬಿಡುತ್ತದೆ. ಬಹುಶಃ ಕನ್ನಡದ ಯಾವ ದೊಡ್ಡ ಬರಹಗಾರರೂ ತಮಗೆ ಬಂದ ಓಲೆಗಳನ್ನು ಹೀಗೆ ಕಲೆ ಹಾಕಿ ಸಂಪಾದಿಸಿ ಹೊರತಂದ ನಿದರ್ಶನವಿಲ್ಲ. ಮಾಸ್ತಿಯವರ ಈ ಕೃತಿ ಅರ್ಥದಲ್ಲಿ ಮೊದಲಿನದಾಗುತ್ತದೆ.

ಕನ್ನಡ ಪತ್ರಸಾಹಿತ್ಯದ ವಿಶಾಲ ವ್ಯಾಪ್ತಿಗೆ ಸೇರುವ ಅನುವಾದಿತ ಪತ್ರಗಳು ಮೂರೆಂದು ತೆರನಾಗಿ ಗಮನ ಸೆಳೆಯುತ್ತವೆ. ಅರವಿಂದ, ಸ್ವಾಮಿ ವಿವೇಕಾನಂದ, ಗಾಂಧೀಜಿ, ವಿದೇಶಿಯರಾದ ನೆಹರೂ ಮುಂತಾದವರ ಓಲೆಗಳು ಕನ್ನಡ ಭಾಷೆಗೆ ಅನುವಾದಗೊಂಡಿರುವುದು

ಸಂತಸದ ಸಂಗತಿ. ಇವರೆಲ್ಲ ಕೋಟಿ ಕೋಟಿ ಭಾರತೀಯರನ್ನು ಪ್ರಭಾವಿಸಿದವರು, ರಾಷ್ಟ್ರೀಯ ಆಗುಹೋಗುಗಳಲ್ಲಿ ನೇರವಾಗಿ ಭಾಗಿಗಳಾದವರು, ಇತಿಹಾಸದಲ್ಲಿ ಚಿರಕಾಲ ನಿಲ್ಲಬಲ್ಲವರು ಆಗಿರುವುದರಿಂದ ಅವರ ಓಲೆಗಳಿಗೂ ಐತಿಹಾಸಿಕ ಮತ್ತು ರಾಷ್ಟ್ರೀಯ ಮಹತ್ವವಿದೆ. ಇದರೊಂದಿಗೆ ಅವುಗಳಿಗಿರುವ ಧಾರ್ಮಿಕ, ಸಾಮಾಜಿಕ, ಸಾಹಿತ್ಯಕ ಹಿರಿಮೆಯನ್ನು ಅಲ್ಲಗಳೆಯುವಂತಿಲ್ಲ.

ಸಿಂಪಿ ಲಿಂಗಣ್ಣನವರು `ಶ್ರೀ ಅರವಿಂದರ ಪತ್ರಗಳು ' ಎಂಬ ಕೃತಿಯನ್ನು ಹಿಂದಿ ಭಾಷೆಯಿಂದ ಅನುವಾದಿಸಿದ್ದಾರೆ. ಅರವಿಂದರ ಐದು ಓಲೆಗಳು ಮತ್ತು ಎರಡು ಕಥೆಗಳು ಅನುವಾದಗೊಂಡು ಇದರಲ್ಲಿ ಸಂಗ್ರಹಿತವಾಗಿವೆ. ಮೊದಲ ಮೂರು ಪತ್ರಗಳು, ಅರವಿಂದರು ತಮ್ಮ ಪತ್ನಿಯಾದ ಮೃಣಾಲಿನಿದೇವಿಗೆ ಬರೆದವು. ತಮ್ಮ ಅಧ್ಯಾತ್ಮ ಸಾಧನೆಯು ಪತ್ನಿಗೆ ಕೊಡಬಹುದಾದ ಗೊಂದಲ ನಿರಾಶೆಗಳನ್ನು ಗ್ರಹಿಸಿದ ಅರವಿಂದರು, ಓಲೆಗಳಲ್ಲಿ ಸಮಾಧಾನ ಸಾಂತ್ವನ ಹೇಳಿದ್ದಾರೆ. "..... ಬಹುಶಃ ಇತ್ತೀಚೆಗೆ ನೀನು ಯಾವ ಮಾತನ್ನು ಅರಸುತ್ತಿರುವೆ ಯೆಂದರೆ ಯಾರ ಭಾಗ್ಯದೊಡನೆ ನಿನ್ನ ಭಾಗ್ಯವು ಜೋಡಿಸಲ್ಪಟ್ಟಿದೆಯೋ ಅವನು ಬಹುವಿಚಿತ್ರ ಮನುಷ್ಯನಾಗಿದ್ದಾನೆ. ಈ ದೇಶದಲ್ಲಿ ಇಂದಿನ ಜನರ ಮನೋಭಾವವು ಹೇಗಿದೆ, ಅವರ ಜೀವನದ ಉದ್ದೇಶವೇನಿದೆ, ಕರ್ಮಕ್ಷೇತ್ರ ಎಂಥದಿದೆ - ಅದರಂತೆ ನನ್ನದಿಲ್ಲ. ಏನೆಲ್ಲವೂ ಭಿನ್ನವೂ ಅಸಾಧಾರಣವೂ ಆಗಿದೆ. ಅಸಾಧಾರಣ ಮತ, ಅಸಾಧಾರಣ ಪ್ರಯತ್ನ, ಅಸಾಧಾರಣ ಉಚ್ಚ ಆಶೆ ಇವುಗಳಿಗೆ ಸಾಮಾನ್ಯ ಜನರು ಏನೆನ್ನುವರೋ ಅದು ನಿನಗೆ ಬಹುಶಃ ಗೊತ್ತಿದೆ. ಆ ಎಲ್ಲ ಭಾವಗಳಿಗೆ ಅವರು ಹುಚ್ಚುತನವೆನ್ನುತ್ತಾರೆ. .... ಅಂತೆಯೆ ನನ್ನನ್ನು ಹುಚ್ಚನೆಂದು ತಿಳಿಯಬೇಕು. ಹುಚ್ಚನು ತನ್ನ ಹೆಂಡತಿಗೆ ಸುಖ ಕೊಡುವುದಿಲ್ಲ. ದುಃಖವನ್ನೇ ಕೊಡುತ್ತಾನೆ." ಇದೇ ಪತ್ರದಲ್ಲಿ ಅವರು ಮುಂದುವರೆದು, ತಾವು ಪರಮಾತ್ಮನ ಸಾಕ್ಷಾತ್ಕಾರಕ್ಕೆ ಹಂಬಲಿಸುತ್ತಿರುವುದನ್ನು ತಿಳಿಸಿ, ಪತ್ನಿಯೂ ತ್ಯಾಗ ಮಾಡಿ ಸಹಕರಿಸಬೇಕೆಂದು ಕೇಳಿಕೊಳ್ಳುವರು. ಮುಂದಿನ ಓಲೆಗಳಲ್ಲಿ ಯೋಗ ವಿಚಾರ, ಯೋಗ ಪದ್ಧತಿಗಳು, ಅವುಗಳ ಸಾಧನೆಯ ಬಗ್ಗೆ ವಿವರಿಸುವರು. ಇಡೀ ಭಾರತೀಯ ಜನಾಂಗ ಆಧ್ಯಾತ್ಮಿಕ ಉನ್ನತಿ ಪಡೆಯುವ ಮಾರ್ಗಗಳನ್ನು ಚಿಂತಿಸುವ ಅವರು `ದೇವಸಂಘ' ಸ್ಥಾಪಿಸುವ ವಿಚಾರವನ್ನು ಪ್ರಸ್ತಾಪಿಸುವರು. ``ನಾನು ಭೇದ ಪ್ರತಿಷ್ಠವಾದ ಸಮಾಜವನ್ನು ಬೇಡುವುದಿಲ್ಲ. ಆತ್ಮಪ್ರತಿಷ್ಠರ ಆತ್ಮದ ಐಕ್ಯಮೂರ್ತಿಗಳ ಸಂಘವನ್ನು ಬೇಡುತ್ತೇನೆ. ಈ ಐಡಿಯಾ ಇಲ್ಲವೆ ಭಾವವನ್ನು ತೆಗೆದುಕೊಂಡ ದೇವಸಂಘವೆಂದು ಹೆಸರು ಕೊಡಲಾಗಿದೆ. ಯಾರು ದೇವಜೀವನ ಬೇಡುವರೋ ಅವರ ಸಂಘವು ದೇವಸಂಘವಾಗಿದೆ. ಇಂಥ ಸಂಘವನ್ನು ಒಂದು ಸ್ಥಳದಲ್ಲಿ ಸ್ಥಾಪಿತಗೊಳಿ ಹಿಂದಿನಿಂದ ದೇಶದಲ್ಲೆಲ್ಲ ಹಬ್ಬಿಸಲಾಗುವುದು "[೧೧] ಅರವಿಂದರ ಐದೂ ಓಲೆಗಳು ಅವರ ಅಧ್ಯಾತ್ಮ ಸಾಧನೆಯ ದಿಕ್ಕು ದೆಸೆಗಳನ್ನು, ಕನಸು ಆದರ್ಶಗಳ ಹೊಳಪುಗಳನ್ನು ಸ್ಫುಟಗೊಳಿಸುತ್ತವೆ.

ಭಾರತೀಯ ಆಧ್ಯಾತ್ಮರಂಗದ ಮತ್ತೊರ್ವ ಮಹಾಪುರುಷರೆಂದರೆ ಸ್ವಾಮಿ ವಿವೇಕಾನಂದರು. ಅವರ ಓಲೆಗಳು ಕೂಡ ಎರಡು ಸಂಪುಟಗಳಲ್ಲಿ ಸಂಗ್ರಹಗೊಂಡಿವೆ `ಸ್ವಾಮಿ ವಿವೇಕಾನಂದರ ಪತ್ರಮಾಲೆ ' ಭಾಗ - ೧ ಮತ್ತು ಭಾಗ -೨ ಎಂಬ ಈ ಸಂಪುಟಗಳನ್ನು ಮೈಸೂರಿನ ಶ್ರೀ ರಾಮಕೃಷ್ಣಾಶ್ರಮದವರು ಪ್ರಕಟಿಸಿದ್ದಾರೆ. ವಿವೇಕಾನಂದರ

ಕಾಲಕಾಲಕ್ಕೆ ತಮ್ಮ ಸಹಪಾಠಿಗಳಿಗೆ, ಆಶ್ರಮದ ಸ್ನೇಹಿತರಿಗೆ, ವಿದೇಶಿ ಪರಿಚಿತರಿಗೆ, ಭಾರತೀಯ ಗಣ್ಯರಿಗೆ ಬರೆದ ಅನೇಕ ಅಮೂಲ್ಯವಾದ ಓಲೆಗಳು ಇದರಲ್ಲಿವೆ. ವಿವೇಕಾನಂದರ ಆಲೋಚನಾ ಕ್ರಮ. ಕಾರ್ಯಗೌರವ, ಸತತಪ್ರಯತ್ನ, ಛಲವಂತಿಕೆ, ವೈಚಾರಿಕತೆಗಳು ಅಚ್ಚರಿ ಗೊಳಿಸುತ್ತವೆ. ೧೮೯೭ರಲ್ಲಿ ಶ್ರೀಮತಿ ಸರಳ ಘೋಷಾಲರಿಗೆ ಬರೆದ ಪತ್ರದ ತಾರ್ಕಿಕತೆ ಗಮನಿಸಬೇಕು. `` ನಾವು ಬಹಳ ಕಾಲದಿಂದ ಗುಲಾಮರಾಗಿರುವೆವು. ಅದಕ್ಕೋಸ್ಕರವೇ ಭರತಖಂಡದ ಸಾಧಾರಣ ಜನರಿಗೆ ಅವರ ಪಿತ್ರಾರ್ಜಿತವಾದ ಆಂತರಿಕ ಜ್ಞಾನವನ್ನು ತಿಳಿಯಪಡಿಸಲು ಅವಕಾಶವೇ ಸಿಕ್ಕಿಲ್ಲ... ವಿದ್ಯೆ ಮತ್ತು ಸಂಸ್ಕೃತಿ ಎಂದಿನಿಂದ ಕುಲೀನಸ್ಥನಿಂದ ಜನಸಾಮಾನ್ಯನಿಗೆ ಬರಲು ಪೊದಲಾಯಿತೋ ಅಂದಿನಿಂದ ಪಾಶ್ಚಾತ್ಯ ದೇಶದ ಆಧುನಿಕ ಸಂಸ್ಕೃತಿಗೂ, ಇಂಡಿಯ, ಇಜಿಪ್ತ, ರೋಮನ್ ಇತ್ಯಾದಿ ದೇಶಗಳ ಪುರಾತನ ಸಂಸ್ಕೃತಿಗೂ ವ್ಯತ್ಯಾಸವು ಪೊದಲಾಯಿತು. ವಿದ್ಯೆ ಮತ್ತು ಬುದ್ಧಿವಂತಿಕೆಗಳು ಜನಸಾಮಾನ್ಯರಲ್ಲಿ ಎಷ್ಟು ಹೆಚ್ಚು ಹರಡುವುದೋ ಅಷ್ಟೇ ಹೆಚ್ಚಾಗಿ ಆ ಜನಾಂಗವು ಅಭಿವೃದ್ಧಿಯಾಗುವುದೆಂದು ಈಗ ನನಗೆ ತೋರುವುದು. ಭರತಖಂಡದ ಹೀನಸ್ಥಿತಿಗೆ ಮುಖ್ಯಕಾರಣವೇನೆಂದರೆ ದೇಶದ ವಿದ್ಯೆ ಮತ್ತು ಬುದ್ಧಿವಂತಿಕೆ ಎಲ್ಲವನ್ನೂ ಎಲ್ಲೋ ಅಲ್ಪಮಂದಿ ತಮ್ಮ ಕೈಯಲ್ಲಿ ಅಹಂಕಾರ ದಿಂದಲೂ, ರಾಜಾಧಿಕಾರದ ಬಲದಿಂದಲೂ ವಶಪಡಿಸಿಕೊಂಡದ್ದು.'' [೧೨]

ವಿವೇಕಾನಂದರು ಪಾಶ್ಚಾತ್ಯ ದೇಶಗಳಲ್ಲಿ ಹೇಗೆ ಬಿರುಗಾಳಿಯಂತೆ ಸಂಚರಿಸಿದರು, ಮತ್ತು ಅವರ ಪ್ರಭಾವದಿಂದ ಅಪಾರ ಸಂಖ್ಯೆಯ ವಿದೇಶಿಯವರು ನೈತಿಕ, ಧಾರ್ಮಿಕ ಬದುಕನ್ನು ರೂಢಿಸಿಕೊಂಡರು ಎಂಬುದನ್ನು ಇಲ್ಲಿಯ ಓಲೆಗಳಿಂದ ಅರಿಯಬಹುದು. ಶ್ರೀಮತಿ ಮೇರಿ ಹೇಲ್, ಶ್ರೀಮತಿ ಓಲ್‌ಬುಲ್ ಮುಂತಾದ ಸ್ತ್ರೀಯರಿಗೆ ಅವರು ಬರೆದ ಜಾತಿಗಳಲ್ಲಿ ಇರುವ ಆತ್ಮೀಯತೆ, ಸ್ನೇಹಗಳೂ, ದಿಟ್ಟತನವನ್ನೂ ನೋಡಬೇಕು. ದೇಹದ ದಣಿವು, ಆಲಸ್ಯ ಕಾಯಿಲೆಗಳನ್ನು ಗಮನಿಸದೆ ಅವರು ಹಗಲಿರುಳೂ ಸಂಚರಿಸಿದರು, ಮತ್ತು ದುಡಿದರು. ೧೯೦೦ ರಲ್ಲಿ ಸೋದರಿ ನಿವೇದಿತಾಳಿಗೆ ಬರೆಯುತ್ತಾ. `` ನಾನು ಬಹಳ ಶ್ರಮಪಟ್ಟು ಕೆಲಸ ಮಾಡುತ್ತಿದ್ದೇನೆ. ನಾನು ಹೆಚ್ಚು ದಣಿದಷ್ಟೂ ನನಗೆ ಹೆಚ್ಚು ಗುಣವಾದಂತೆ ತೋರುತ್ತದೆ. ಈ ಕಾಯಿಲೆ ನನಗೆ ಬಹಳ ಕಲ್ಯಾಣವನ್ನುಂಟು ಮಾಡಿದೆ ಎಂಬುದು ನಿಶ್ಚಯವೇ ಸರಿ. .. ನಾವು ನಮ್ಮೆಲ್ಲಾ ಶಕ್ತಿಯನ್ನೂ ಒಂದು ವಸ್ತುವಿನ ಮೇಲೆ ಕೇಂದ್ರೀಕರಿಸಿ ಅದರಲ್ಲಿ ಅನುರಕ್ತರಾಗುತ್ತೇವೆ. ಒಂದು ಕ್ಷಣದ ಸೂಚನೆಯಲ್ಲೇ ಯಾವುದರಿಂದಬೇಕಾದರೂ ನಮ್ಮ ಮನಸ್ಸನ್ನು ನಿರ್ಮೋಹಗೊಳಿಸುವ ಶಕ್ತಿ ಹಿಂದಿನದರಷ್ಟೇ ಕಷ್ಟವಾಗಿದ್ದರೂ ಅದರ ಕಡೆ ಲಕ್ಷ್ಯಗೊಡುವುದು ಅಪರೂಪ'' [೧೩]. ಈ ಓಲೆಗಳನ್ನು ಓದುತ್ತಾ ಹೋದರೆ ನಾವು ಸ್ವಾಮೀಜಿ ಅವರ ಅಂತರಂಗದ ಅಳಲು, ತುಮುಲ, ಸಂಘರ್ಷ, ಕರೆಗಳನ್ನು ಚೆನ್ನಾಗಿ ಕೇಳಬಹುದು. ಭಾರತೀಯ ನಿಜವಾದ ಆಧ್ಯಾತ್ಮ, ದರ್ಶನ, ಅನುಭಾವಗಳ ಶೋಧನೆಗಾಗಿ ಅವರು ನಡೆಸಿದ ಹೋರಾಟ ಇಲ್ಲೆಲ್ಲ ಬಿತ್ತರಗೊಂಡಿದೆ. ಬಿಡುವಿಲ್ಲದ ಪ್ರವಾಸ ಮತ್ತು ಕಾರ್ಯಚಟುವಟಿಕೆ, ಸಂಘಟನೆಗಳ ನಡುವೆಯೂ ಇಷ್ಟೆಲ್ಲ ಪತ್ರಗಳನ್ನು ಅವರು ಬರೆದರಲ್ಲ ಎಂಬ ಅಚ್ಚರಿ ಮೂಡುತ್ತದೆ. ಆದರೆ ತಮ್ಮ ಕಾರ್ಯಸಾಧನೆಗಾಗಿ, ಆತ್ಮನಿವೇದನೆಗಾಗಿ ಅವರು ಓಲೆಗಳನ್ನು ಬಳಸಿಕೊಂಡಿರುವುದನ್ನು ಗ್ರಹಿಸಬೇಕು. ಅವುಗಳ ಸೊಗಡು ಮತ್ತು ಮಹತ್ವವನ್ನು ಓದಿಯೇ ಸವಿಯಬೇಕು.

ನೆಹರೂ ಅವರ ಓಲೆಗಳು `ಪತ್ರಗುಚ್ಛ ' ಕೃತಿಯಿಂದಾಗಿ ಕನ್ನಡಕ್ಕೆ ಬಂದಿವೆ. ಜವಾಹರಲಾಲ ನೆಹರೂ ಅವರು ತಮ್ಮ ಆತ್ಮೀಯ ಸ್ನೇಹಿತರಿಗೆ ಮತ್ತು ಬ್ರಿಟಿಷ ಅಧಿಕಾರಿಗಳಿಗೆ, ಇತರರಿಗೆ ಬರೆದ ಓಲೆಗಳು ಮತ್ತು ಬೇರೆ ಅನೇಕ ಪ್ರತಿಷ್ಠಿತ ವ್ಯಕ್ತಿಗಳು ಸಮಕಾಲೀನರು ನೆಹರೂ ಅವರಿಗೆ ಬರೆದ ಒಟ್ಟು ೩೬೮ ಓಲೆಗಳು ಅನುವಾದಗೊಂಡಿವೆ. ಮೋತಿಲಾಲರು ತಮ್ಮ ಮಗ ಜವಾಹರಲಾಲರಿಗೆ ಬರೆದ ಓಲೆಗಳಲ್ಲಿಯ ವಿಷಯ - ವಿಚಾರಗಳಲ್ಲಿ ಹೆಚ್ಚಿನವು ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಪಡುತ್ತವೆ. ೧೯೨೦ರಲ್ಲಿ ತಂದೆಯಿಂದ ಜವಾಹರರು ಪಡೆದ ಓಲೆಯಿದು. ``ಗಾಂಧಿಯವರ ರಾಜಕೀಯ ಅಭಿಪ್ರಾಯಗಳ ರಚನೆಯನ್ನು ಕುರಿತು ಹೇಳುತ್ತೇನೆ : ಅವರನ್ನು ನಾನು ಬಹಳ ಗೌರವಿಸುತ್ತೇನಾದರೂ, ಅವರಿಂದ ಬರುತ್ತವೆಂಬಷ್ಟೇ ಕಾರಣದಿಂದ ಆ ಅಭಿಪ್ರಾಯಗಳನ್ನು ಒಪ್ಪಲು ನಾನು ತಯಾರಿಲ್ಲ. ದೊಡ್ಡ ಸೆಣಸಾಟಕ್ಕೆ ನಾವು ಸಿದ್ಧರಾಗಿರಬೇಕೆಂದು ನಾನಾಗಲೇ ದಾಸ್ ಅವರನ್ನು ಎಚ್ಚರಿಸಿದ್ದೇನೆ... '' [೨೪] ಹೀಗೆ ಮೋತಿಲಾಲರು ತಮ್ಮ ಅನಿಸಿಕೆ, ಅಭಿಮತಗಳನ್ನು ಮಗನಿಗೂ ತಿಳಿಸಿ, ರಾಜಕೀಯ ನಿರ್ಧಾರಗಳಲ್ಲಿ ಸಲಹೆ ಕೇಳುತ್ತಿದ್ದರು. ಅಲಿ ಸೋದರರು, ಸರೋಜಿನಿ ನಾಯಡು, ಮಹಾತ್ಮಾ ಗಾಂಧಿ, ಮಹಾದೇವ ದೇಸಾಯಿ, ರವೀಂದ್ರನಾಥ ಠಾಕೂರ, ಸುಭಾಷ ಚಂದ್ರ ಬೋಸ, ರೋಜರ ಬಾಲಡ್ವಿನ್, ಲೋತಿಯನ್, ಥಾಮ್ಸನ್, ಜಾರ್ಜ ಬರ್ನಾಡ ಷಾ ಮುಂತಾದ ವಿಖ್ಯಾತ ಮಹನೀಯರ ಓಲೆಗಳು ಜವಾಹರರ ಮತ್ತು ಭಾರತೀಯ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ತುಂಬ ಮಹತ್ವ ಪಡೆಯುತ್ತವೆ. ಅವುಗಳ ಸಮಯ, ಸಂದರ್ಭ, ಸಂಬೋಧನೆ, ವಸ್ತು, ಶೈಲಿ ಈ ಎಲ್ಲಾ ದೃಷ್ಟಿಗಳಿಂದಲೂ ಅಧ್ಯಯನಕ್ಕೆ ಅಸ್ಪದವಿದೆ. ಜವಾಹರಲಾಲ ನೆಹರು ಬರೆದ ಓಲೆಗಳಲ್ಲಿ ಖಚಿತತೆ ಭಾವನಾಮಯತೆ, ಪಾಂಡಿತ್ಯ, ಐತಿಹಾಸಿಕ ಪ್ರಜ್ಞೆ, ದೃಢ ಮನೋಭಾವನೆಗಳ ಸಹಜವಾಗಿ ಗೋಚರಿಸುತ್ತವೆ. ಗಾಂಧೀಜಿಯವರಿಗೆ, ಲೋಥಿಯನ್ ಅವರಿಗೂ ಬರೆದ ಓಲೆಗಳು ಇವಕ್ಕೆ ನಿದರ್ಶನಗಳಾಗಿವೆ. ಭಾರತೀಯರ ಬಗೆಗೂ, ಸ್ವಾತಂತ್ರ್ಯ ಹೋರಾಟದ ಬಗೆಗೂ ತಾತ್ವಿಕ ಪ್ರಶ್ನೆಗಳನ್ನೆತ್ತಿದ್ದ ಲಂಡನ್ನಿನ ಲೋಥಿಯನ್‌ರಿಗೆ ೧೬. ೧. ೧೯೩೬ರಂದು ಸುದೀರ್ಘ ಓಲೆ ಬರೆದು ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸುವಲ್ಲಿ ಅವರು ತೋರುವ ಜಾಣ್ಮೆ ಕೌಶಲಗಳು ಅನನ್ಯವಾಗಿವೆ. ಪತ್ರದ ಕೊನೆಗೆ `` ..... ಬುದ್ಧಿವಂತನಿಗಿರುವ ಯಾರೇ ಆಗಲಿ, ಘರ್ಷಣೆಯನ್ನು ಹಿಂಸೆಯನ್ನು ಸರ್ವನಾಶದ ಹಾದಿಯನ್ನು ಮೆಚ್ಚುವುದಿಲ್ಲ. ಇಂಡಿಯದ ರಾಷ್ಟ್ರೀಯ ಚಳುವಳಿ ಈ ಹಾದಿಯನ್ನು ತಪ್ಪಿಸಲು, ಅದೇ ಕಾಲದಲ್ಲಿ ತನ್ನ ಅಸ್ತಿತ್ವದ ಮೂಲಾಧಾರ ಕೈಬಿಟ್ಟು ಹೋಗದಂತೆ ನೋಡಿಕೊಂಡು, ತನ್ನ ಕೈಲಾದುದೆಲ್ಲವನ್ನೂ ಮಾಡಿದೆ. ಆದರೆ ಆ ಹಾದಿಯನ್ನು ಹಿಡಿದಿರುವುದೂ, ಶಾಂತಿಯುತ ಪರಿಹಾರ ಹೆಚ್ಚು ಹೆಚ್ಚು ದುರ್ಲಭವಾಗುವಂತೆ ಮಾಡಿರುವುದೂ ಬ್ರಿಟಿಷ್ ಸರಕಾರವೇ. ಇದೇ ದಿಕ್ಕಿನಲ್ಲಿ ಕದಲದೆ ಸಾಗುವುದರಿಂದ ಮಾತ್ರ ತಾನು ಗೆಲುವುದಾಗಿ ಅದು ತನ್ನ ಮನಸ್ಸಿನಲ್ಲಿ ಮಾಡಿಕೊಂಡಿದ್ದರೆ, ಇತಿಹಾಸದಿಂದ ಕಲಿತ ಪಾಠವನ್ನೂ ಇಂಡಿಯದ ಜನತೆಯ ಇಂದಿನ ಮನೋಧರ್ಮವನ್ನೂ ಅದು ವಿಚಿತ್ರವಾಗಿ ತಪ್ಪಾಗಿ ಗ್ರಹಿಸಿರುವಂತೆ ತೋರುತ್ತದೆ. ಸರ್ವನಾಶವನ್ನು ತಪ್ಪಿಸ ಬೇಕಾಗಿದ್ದರೆ, ತನ್ನ ಹೆಜ್ಜೆ ಗುರುತುಗಳಲ್ಲಿ ತಾನೇ ಹಿಂದಿರುಗುವುದನ್ನು ಬ್ರಿಟಿಷ್ ಸರಕಾರವೇ ಮಾಡಬೇಕಾಗುತ್ತದೆ. '' [೨೫] ನೆಹರುರವರ ಸಂಗ್ರಹದ ಈ ಓಲೆಗಳು ಸ್ವಾತಂತ್ರ್ಯ ಹೋರಾಟದ ಕಾಲದ ಘಟನೆಗಳಿಗೆ ಆಧಾರಗಳಾಗಿದ್ದು, ಓದುತ್ತ ಹೋದಂತೆಲ್ಲ ಮನಃ ಪಟಲದಲ್ಲಿ ಅಂದಿನ

ದಿನಗಳೇ ಬಿಟ್ಟಿಕೊಳ್ಳುತ್ತ ಹೋಗುತ್ತವೆ. ಆ ತೀವ್ರತೆ ಮತ್ತು ಜೀವಂತಿಕೆ ಅನೇಕ ಓಲೆಗಳಲ್ಲಿ ತುಂಬಿಕೊಂಡಿವೆ. ಕನ್ನಡ ಭಾಷಾ ಸಂಸ್ಕೃತಿಗೆ ಹೊಂದುವ ಹಾಗೆ ಅನುವಾದಕರು ಶ್ರಮಿಸಿರುವುದರಿಂದ ಎಲ್ಲಿಯೂ ಬೇರೆಯ ಭಾಷೆಯಲ್ಲಿಯ ರಚನೆಗಳಿವು, ಅನುವಾದಗೊಂಡಿವೆ ಎಂಬ ಭಾವನೆ ಮೂಡುವುದಿಲ್ಲ.

ಮಹಾತ್ಮಾ ಗಾಂಧೀಜಿ ಅವರ ಪತ್ರಗಳು ಕೂಡ ಎರಡು ಸಂಪುಟಗಳಲ್ಲಿ ಅನುವಾದಗೊಂಡು ಗಾಂಧೀ ಸ್ಮಾರಕ ನಿಧಿಯ ಪರವಾಗಿ ಪ್ರಕಟಗೊಂಡಿವೆ. ಗಾಂಧೀಜಿ ಪತ್ರಗಳಲ್ಲಿಯೂ ತಮ್ಮ ಪತ್ರಿಕಾ ಲೇಖನಗಳಂತೆ ತಮ್ಮದೇ ಒರಹದ ಶೈಲಿಯೊಂದನ್ನು ಉಳಿಸಿಕೊಂಡಿದ್ದಾರೆ. ಸರಳತೆ, ಉಚಿತತೆ ಅವುಗಳ ಮುಖ್ಯ ಗುಣ. ಗಾಂಧೀಜಿಯವರು ಮೋತಿಲಾಲ ನೆಹರು, ಜವಾಹರಲಾಲ ನೆಹರು, ಪಟೇಲ, ಬೋಸ, ಅಲಿ, ಜಿನ್ನಾ, ಮೈಸರಾಯರುಗಳ ಜೊತೆಗೆ ನಡೆಸಿದ ಪತ್ರ ವ್ಯವಹಾರ, ಐತಿಹಾಸಿಕ ಮತ್ತಿತರ ಕಾರಣಗಳಿಂದ ಮಹತ್ವವಾಗಿವೆ. ಜೊತೆಗೆ ಟಾಲ್‌ಸ್ಟಾಯ್, ಬರ್ನಾರ್ಡ್ ಷಾ, ಟ್ಯಾಗೋರ ಮುಂತಾದವರ ನಡುವಿನ ಓಲೆಗಳೂ ಸುಪ್ರಸಿದ್ಧವಾಗಿವೆ. ಗಾಂಧೀಜಿಯವರ ಹೋರಾಟ ಮತ್ತು ಪ್ರಯೋಗಗಳನ್ನು ಅವರ ಪತ್ರಗಳೂ ದಾಖಲಿಸುತ್ತವೆ. [೧೬]

ಕನ್ನಡ ಪತ್ರಸಾಹಿತ್ಯ ಕನ್ನಡದ್ದೇ ಆದ ಸ್ವತಂತ್ರ ರಚನೆಗಳನ್ನು, ಬೇರೆ ಭಾಷೆಯ ಉತ್ಕೃತ್ತಮ ಓಲೆಗಳ ಅನುವಾದಗಳನ್ನು ಒಳಗೊಂಡು ವಿಶಿಷ್ಟವಾಗಿ ಬೆಳೆದಿದೆ. ಇದರಲ್ಲಿ ನಿಜವಾಗಿ ಇನ್ನೂ ಅನೇಕ ಬಿಡಿಓಲೆಗಳೂ, ಪ್ರತ್ಯೇಕವಾಗಿಯೊ ಪ್ರಾಸಂಗಿಕವಾಗಿಯೊ ಪ್ರಕಟವಾದ ಓಲೆಗಳೂ ಸೇರಬೇಕು. ಅನೇಕ ಕನ್ನಡ ಸಾಹಿತಿಗಳು, ಕಲಾವಿದರು ತಮ್ಮ ಆತ್ಮಚರಿತ್ರೆಗಳಲ್ಲಿ ಕೆಲವು ಪತ್ರಗಳನ್ನು ಪ್ರಕಟಿಸಿದ್ದಾರೆ. ಕುವೆಂಪು, ಬೀಚಿ ಮುಂತಾದವರ ಆತ್ಮಚರಿತ್ರೆಗಳಲ್ಲಿ ಕೆಲವು ಓಲೆಗಳು ಕಾಣದೊರೆಯುತ್ತವೆ. ಕೆಲವು ಜೀವನ ಚರಿತ್ರೆ, ಅಭಿನಂದನ ಗ್ರಂಥಗಳಲ್ಲಿಯೂ ಇಂತಹ ಓಲೆಗಳಿವೆ. ಸಾಹಿತ್ಯ ಪತ್ರಿಕೆಗಳಲ್ಲಿ ನಡೆಯುವ ಚರ್ಚೆ ವಾದ-ವಿವಾದ ಕಾಲದ ಓಲೆಗಳನ್ನೂ ಪರಿಗಣಿಸಬೇಕು. ಸಾರ್ವಜನಿಕವಾಗಿ ಸಾಹಿತ್ಯ ಕೃತಿಯ, ಪ್ರಶಸ್ತಿಯ, ಲೇಖನದ ಬಗೆಗೆ ನಡೆಯುವ ವಾದ- ವಿವಾದಗಳಲ್ಲಿ ಕಾಣಿಸುವ ಓಲೆಗಳೂ ಮುಖ್ಯವೇ. ಈ ಎಲ್ಲಾ ಓಲೆಗಳೂ ಸೇರಿದರೆ ಕನ್ನಡದ ಓಲೆಗಳ ಸಾಹಿತ್ಯಕ್ಕೆ ಒಂದು ಸ್ವರೂಪ ಸಿದ್ಧವಾಗುತ್ತದೆ.

ಕನ್ನಡದ ಓಲೆಗಳ ಉಪಲಬ್ಧ ಕೃತಿಗಳು ಅನೇಕ ವಿಧವಾದ ವಸ್ತುಗಳಿಂದ, ಬೇರೆ ಬೇರೆ ಕಾರಣಗಳಿಂದ ನಮಗೆ ಮುಖ್ಯವಾಗುತ್ತವೆ. ಕನ್ನಡದ ಸೃಜನಶೀಲ ಪ್ರತಿಭೆಗಳು ಹೇಗೆ ಚಿಂತಿಸಿದವು ಮತ್ತು ಪ್ರತಿಕ್ರಿಯೆ ತೋರಿದವು ಎಂಬ ಕಾರಣಕ್ಕೆ ಅವುಗಳಿಗೆ ಮಹತ್ವವಿದೆ. ಇತಿಹಾಸ, ಸಾಹಿತ್ಯ, ಸಂಸ್ಕೃತಿಗಳ ಅಧ್ಯಯನಕ್ಕೆ ಓಲೆಗಳೂ ಆಕರಗಳಾಗುತ್ತವೆ. ಅವುಗಳ ಓದು, ವಿಶ್ಲೇಷಣೆ ವಿಭಿನ್ನ ನೆಲೆಯಲ್ಲಿ ನಡೆಯಬೇಕಾದುದೂ ಮುಖ್ಯವಾದ ಸಂಗತಿಯೇ.

●

ಅಡಿಟಿಪ್ಪಣಿಗಳು :

೧. ಬಿಡಿಯಾಗಿ ಪ್ರಕಟಗೊಂಡ ಮತ್ತು ಅಲ್ಲಲ್ಲಿ ಉಲ್ಲೇಖಿಗೊಂಡ ಪತ್ರಗಳನ್ನು ಪ್ರಸ್ತುತ ಲೇಖನಕ್ಕಾಗಿ ಬಳಿಸಿಕೊಂಡಿಲ್ಲ. ಕೇವಲ ಕೃತಿರೂಪದಲ್ಲಿ ಲಭ್ಯವಿರುವ ಸಾಮಗ್ರಿಯನ್ನು ಮಾತ್ರ ಗಮನಿಸಲಾಗಿದೆ. ಬಿಡಿ ಪತ್ರಗಳನ್ನು ಕರ್ನಾಟಕ ರಾಜ್ಯ ಪತ್ರಾಗಾರದ ಸಂಗ್ರಹದಲ್ಲಿಯೂ, ಕರ್ನಾಟಕ ಸಾಹಿತ್ಯಅಕಾಡೆಮಿ ಈಚೆಗೆ ಸ್ಥಾಪಿಸಿರುವ ಮಾಹಿತಿ ಕೇಂದ್ರದಲ್ಲಿಯೂ ಕಾಣಬಹುದಾಗಿದೆ.

೨. ದೀವಿಗೆ ಪು. ೨೮೧: (ಸಂ) ಆರ್. ವಾಸುದೇವ ಶೆಣೈ, ಭಾಂಡಾರ್ಕರ್ಸ್ ಕಾಲೇಜು ಕುಂದಾಪುರ.

೩. ಮಂಜೇಶ್ವರದ ಗೋವಿಂದ ಪೈ ಅವರ ಕೆಲವು ಪತ್ರಗಳು,
ಪು ೨೨ ; (ಸಂ) ಜಿ. ಪಿ. ರಾಜರತ್ನಂ, ಕಾವ್ಯಾಲಯ ಪ್ರಕಾಶನ, ಮೈಸೂರು

೪. ಅದೇ ಪು. ೩೩

೫. ಅದೇ ಪು. ೪೮

೬. ಪತ್ರಗಳು - ಪು ೯೩ ; ಮಾಸ್ತಿ ವೆಂಕಟೇಶ ಅಯ್ಯಂಗಾರ್, ಪುರೋಗಾಮಿ ಪ್ರಕಾಶನ, ಬೆಂಗಳೂರು

೭. ಅದೇ ಪು. ೧೦೩

೮. ಅದೇ ಪು. ೧೨೩

೯. ಅದೇ ಪು. ೧೪೪

೧೦. ಶ್ರೀ ಅರವಿಂದರ ಪತ್ರಗಳು ; ಪು ೨ ;(ಅನು) ಸಿಂಪಿ ಲಿಂಗಣ್ಣ
ಶ್ರೀ ಅರವಿಂದ ಗ್ರಂಥಾಲಯ, ಚಡಚಣ

೧೧. ಅದೇ ಪು. ೧೯

೧೨. ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ ಸಂ. ೭ ಪು. ೧೨೨, ಶ್ರೀ ರಾಮಕೃಷ್ಣಾಶ್ರಮ, ಮೈಸೂರು

೧೩. ಅದೇ ಪು. ೩೪೫

೧೪. ಪತ್ರಗುಚ್ಛ ಪು. ೫ ; (ಅನು)ಕೆ. ಎಸ್. ನರಸಿಂಹಸ್ವಾಮಿ, ಎಸ್. ಆರ್. ರಾಮಸ್ವಾಮಿ,
ಕಾವ್ಯಾಲಯ ಪ್ರಕಾಶನ, ಮೈಸೂರು.

೧೫. ಅದೇ ಪು. ೨೦೧.

೧೬. ಅಸಕ್ತರು ಗಾಂಧೀ ಗ್ರಂಥಮಾಲೆ ಸಂ. ೧೨ ಮತ್ತು ಸಂ. ೧೩ರಲ್ಲಿ ಸಂಗ್ರಹಗೊಂಡಿರುವ ಓಲೆಗಳನ್ನು ಗಮನಿಸಬಹುದು.

ಅಭಿನಂದನ ಸಾಹಿತ್ಯ

- ಜಿ. ಎಂ. ಹೆಗಡೆ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಸಾಹಿತ್ಯ ಸೃಷ್ಟಿ ವಿಪುಲವಾಗಿ, ವೈವಿಧ್ಯಮಯವಾಗಿ ಆಗುತ್ತಲಿದ್ದು ಅದರಲ್ಲಿ ಅಭಿನಂದನಗ್ರಂಥ ಸಾಹಿತ್ಯವು ವಿಶಿಷ್ಟ ಬೆಳೆಯಾಗಿ ವಿಕಾಸಹೊಂದಿದೆ.

ಕರ್ನಾಟಕದ ಕಲೆ, ಸಾಹಿತ್ಯ, ಸಮಾಜ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಹತ್ತರವಾದ ಕಾರ್ಯಗಳನ್ನು ಮಾಡಿದ ಮಹನೀಯರ ಸಾಧನೆಗಳು ಅನುಪಮವಾದದ್ದು. ತಮ್ಮ ಬದುಕನ್ನು ನಾಡಿನ ಸಾಂಸ್ಕೃತಿಕ ಉತ್ಕರ್ಷಕ್ಕೆ ಧಾರೆಯೆರೆದ ಇಂಥ ಮಹನೀಯರ ಜೀವನ ಸಾಧನೆಗಳು ಮುಂದಿನ ಪೀಳಿಗೆಗೆ ಸ್ಫೂರ್ತಿದಾಯಕವಾಗಿವೆ. ನಾಡಿನ ಸಾಂಸ್ಕೃತಿಕ ಪ್ರಪಂಚದ ಸಾಧಕ ಚೇತನಗಳನ್ನು ಗುರುತಿಸಿ, ಗೌರವಿಸುವ ವಿಶಿಷ್ಟ ಪರಂಪರೆ ಕನ್ನಡ ಸಂಸ್ಕೃತಿಯ ಆದರ್ಶ ವಾಗಿದೆ. ಹೀಗೆ ಗೌರವಿಸುವ ಚೇತನವನ್ನು ಗ್ರಂಥದ ಮೂಲಕ ಅಭಿನಂದಿಸಲ್ಪಡುವದು ಕನ್ನಡದಲ್ಲಿ ಒಂದು ಪರಂಪರೆಯಾಗಿ ಬೆಳೆದುಬಂದಿದೆ. ಹೀಗೆ ಕವಿ, ಸಾಹಿತಿ, ಸಮಾಜ ಸೇವಕ, ಕಲಾವಿದ, ಧಾರ್ಮಿಕ ಮಹಾಪುರುಷರ ಜೀವನ ಸಾಧನೆಗಳನ್ನು ಅವರ ಜೀವಿತದ ಮಹತ್ವದ ಸಂದರ್ಭಗಳಲ್ಲಿ ಅಭಿನಂದಿಸಿ, ಗೌರವಿಸುವ ಗ್ರಂಥವೇ ಅಭಿನಂದನ ಗ್ರಂಥ ವಾಗಿದೆ. ಅದು ಏಕವ್ಯಕ್ತಿಯ ರಚನೆಯಲ್ಲ. ನಾಡಿನ ವಿದ್ವಾಂಸರು, ಜೊತೆಯ ಲೇಖಕರು, ಮಿತ್ರರು, ಶಿಷ್ಯರು, ಅಭಿಮಾನಿಗಳು ಹೀಗೆ ಹಲವು ಹಿರಿ ಕಿರಿಯ ಲೇಖಕರ ಲೇಖನಗಳಿಂದ ಕೂಡಿರುವ ಈ ಅಭಿನಂದನ ಗ್ರಂಥವು ಸಾಮೂಹಿಕ ಪ್ರಯತ್ನ, ಪ್ರತಿಭೆ ಪಾಂಡಿತ್ಯಗಳ ಫಲವಾಗಿದೆ.

ಭಾರತೀಯ ಸಾಹಿತ್ಯದಲ್ಲೇ ಅತ್ಯಂತ ವಿಶಿಷ್ಟವಾದ ಅಭಿನಂದನ ಗ್ರಂಥಗಳು ಕನ್ನಡದಲ್ಲಿ ಪ್ರಕಟವಾಗಿವೆ. ವೈಶಿಷ್ಟ್ಯಪೂರ್ಣ ವಸ್ತು ಸಾಮಗ್ರಿಗಳಿಂದ ವಿಭಿನ್ನ ವಿಚಾರಧಾರೆಗಳಿಂದ ಕೂಡಿರುವ ವೈವಿಧ್ಯಮಯವಾದ ಅಭಿನಂದನ ಗ್ರಂಥಗಳು ಕನ್ನಡದಲ್ಲಿ ಬಂದಿವೆ. ಇಂಗ್ಲೀಷ್ ಸಾಹಿತ್ಯದ ಪ್ರೇರಣೆ ಪಡೆದುಕೊಳ್ಳದೆ ಅರಳಿರುವ ಅಭಿನಂದನ ಗ್ರಂಥಗಳು ಕನ್ನಡದ ವಿಭಿನ್ನ ಪ್ರತಿಭೆಯನ್ನು ಗ್ರಂಥಲೇಖನಗಳ ಮೂಲಕ ಸಾಕಾರಗೊಳಿಸುತ್ತವೆ.

ಅಭಿನಂದನ ಗ್ರಂಥಗಳ ಸ್ವರೂಪ :

ಅಭಿನಂದನ ಗ್ರಂಥಗಳ ಸ್ವರೂಪ ವಿಸ್ತಾರವಾದದ್ದು. ವಾಸ್ತವಿಕವಾಗಿ ವ್ಯಕ್ತಿಯ ಸಾಧನೆಯ ಪರ್ವಕಾಲದಲ್ಲಿ ಅವನ ಅಭಿಮಾನಿಗಳು, ಮಿತ್ರರು, ಶಿಷ್ಯರು ಅರ್ಪಿಸುವ ಈ

ಅಭಿನಂದನ ಗ್ರಂಥ ವ್ಯಕ್ತಿಯ ಸಾಹಿತ್ಯ ಸಾಧನೆಯನ್ನು, ನಾಡು ನುಡಿಗಳ ಸೇವೆಯನ್ನು, ಕಲಾ
ರಾಧನೆಯನ್ನು ಅದು ಸಮೀಕ್ಷಿಸುತ್ತದೆ. ಸಾಹಿತ್ಯಿಕ, ಸಾಮಾಜಿಕ, ಸಾಂಸ್ಕೃತಿಕ ಆದರ್ಶಗಳನ್ನು
ವಿಶದಪಡಿಸುತ್ತದೆ. ಅಭಿನಂದನಗ್ರಂಥ ಕವಿ ಸಾಹಿತಿಗಳದಾಗಿದ್ದರೆ ಆಯಾ ಕವಿ ಸಾಹಿತಿಗಳ
ಸಾಹಿತ್ಯಿಕ ಸಾಧನೆಗಳ ವ್ಯಕ್ತಿತ್ವದ ಸಮಾಲೋಕನ ಮತ್ತು ಸಾಹಿತ್ಯದ ಮೌಲ್ಯಮಾಪನ
ಅವುಗಳಲ್ಲಿ ಒಂದು ಮಿತಿಯಲ್ಲಿ ಸಮಗ್ರವಾಗಿ ಆಗುತ್ತದೆ. ಕನ್ನಡದ ಜೊತೆಯ ಕವಿ ಲೇಖಕರ
ಆ ಸಾಹಿತಿಯನ್ನು ನೋಡುವ ವಿಭಿನ್ನ ಮುಖವಾದ ದೃಷ್ಟಿಕೋನಗಳೂ ಅಲ್ಲಿ ಪ್ರತಿಬಿಂಬಿತ
ವಾಗುತ್ತವೆ. ಬಹಳ ಮುಖ್ಯವಾದದ್ದೆಂದರೆ ವಿಮರ್ಶೆ, ಮೌಲ್ಯಮಾಪನ ಮಾಡುವಾಗಲೂ
ಅಭಿನಂದಿಸಲ್ಪಡುವ ಸಾಹಿತಿ, ಸಾಹಿತ್ಯದ ಕುರಿತು ಒಂದು ರೀತಿಯ ಸಹೃದಯತೆಯ
ಪ್ರಶಂಸಾಪರವಾದ ಮಾತುಗಳು ಅಲ್ಲಿ ಅಧಿಕವಾಗಿ ಬರುತ್ತವೆ. ಸಮಗ್ರ ಮುಖವಾದ
ಅವಲೋಕನವೂ ನಡೆಯುತ್ತದೆ. ಇದೇ ಮಾತು ಸಾಹಿತ್ಯೇತರ ಕ್ಷೇತ್ರಗಳಲ್ಲಿಯ ಸಾಧಕರ
ಅಭಿನಂದನ ಗ್ರಂಥಗಳಿಗೂ ಅನ್ವಯಿಸುತ್ತದೆ. ಒಟ್ಟಿನಲ್ಲಿ ನಾಡಿನ ಸಾಂಸ್ಕೃತಿಕ ಜೀವನಕ್ಕೆ
ಅಭಿನಂದಿಸಲ್ಪಟ್ಟ ವ್ಯಕ್ತಿಯ ಕೊಡುಗೆಯ ಒಟ್ಟು ನೋಟ ನಮಗೆ ಪ್ರಾಪ್ತವಾಗುತ್ತದೆ
ಅಭಿನಂದನಗ್ರಂಥ ಯಾರಿಗೆ ಅರ್ಪಿತವಾಗುವಂಥದು ಎಂಬ ಪ್ರಶ್ನೆ ಉದ್ಭವಿಸಬಹುದು
ಅಭಿನಂದಿಸಲ್ಪಡುವ ವ್ಯಕ್ತಿ ತೀರ ಸಾಮಾನ್ಯ ಮನುಷ್ಯನಾಗಿರುವದು ಸಾಧ್ಯವಿಲ್ಲ. ಆತನ
ಸಾಹಿತ್ಯಪ್ರಪಂಚದ ಶ್ರೇಷ್ಠ ವ್ಯಕ್ತಿ ಮಾತ್ರವಲ್ಲ, ಕಲೆಯಕ್ಷೇತ್ರದಲ್ಲಿ, ಸಮಾಜ ಸೇವೆಯಲ್ಲಿ
ಧರ್ಮಕಾರ್ಯದಲ್ಲಿ ಹೀಗೆ ರಾಷ್ಟ್ರ ನಿರ್ಮಾಣ ಕೈಂಕರ್ಯದಲ್ಲಿ ಮಹತ್ತರವಾದ ಸಾಧನೆ
ಮಾಡಿರಬೇಕಾದುದು ಮುಖ್ಯ ಸಂಗತಿ. ಅಂಥ ವ್ಯಕ್ತಿಗಳು ಒಂದು ಶಕ್ತಿಯಾಗಿ ಜನಾಂಗಕ್ಕೆ
ಬೆಳಕಾಗಿರುತ್ತಾರೆ, ಕನ್ನಡದಲ್ಲಿ ಸಾಹಿತ್ಯ, ಕಲೆ, ಸಮಾಜ, ಧರ್ಮ ಹೀಗೆ ಬೇರೆ ಬೇರೆ
ಕ್ಷೇತ್ರಗಳಲ್ಲಿಯ ಮಹನೀಯರನ್ನು ಕುರಿತ ಬಹುಬಗೆಯ ಅಭಿನಂದನ ಗ್ರಂಥಗಳು
ಪ್ರಕಟವಾಗಿವೆ.

ಅಭಿನಂದನ ಗ್ರಂಥಗಳ ಗಾತ್ರವೂ ಅಷ್ಟೇ ಮುಖ್ಯವಾದದ್ದು. ಅವು ಗಾತ್ರದಲ್ಲಿ
ಪುಟ್ಟ ಪುಸ್ತಕಗಳಾಗಿರುವದು ಸಾಧ್ಯವಿಲ್ಲ. ಹತ್ತಾರು ಲೇಖಕರ ವಿದ್ವತ್ಪೂರ್ಣ ಬರವಣಿಗೆ
ಯಿಂದ ಕೂಡಿರುವ ಅಭಿನಂದನ ಗ್ರಂಥಗಳು ವಸ್ತು, ಸ್ವರೂಪ, ಗಾತ್ರದಲ್ಲಿ ಹಿರಿದಾದದ್ದಾಗಿ
ರುತ್ತವೆ. ಅವು ವಿಭಿನ್ನ ವಿಷಯಗಳಿಗೆ ಸಂಬಂಧಿಸಿದ ಸಂದರ್ಭಗ್ರಂಥಗಳಾಗಿಯೂ ಇರುತ್ತವೆ
ಲೇಖನಗಳ ಗುಣಮಟ್ಟ ಶ್ರೇಷ್ಠವೇ ಆಗಿರುತ್ತದೆಂದು ಹೇಳಲಾಗದಿದ್ದರೂ ಬಹುಮಟ್ಟಿಗೆ
ಅಭಿನಂದನ ಗ್ರಂಥಗಳು ಜ್ಞಾನದ ಹೊಸದಿಗಂತವನ್ನು ಪರಿಚಯಿಸುವಲ್ಲಿ ನಿರತವಾಗಿರು
ವೆಂದು ಹೇಳಬಹುದು. ಅಭಿನಂದನಗ್ರಂಥಗಳಲ್ಲಿ ವ್ಯಕ್ತಿಪೂಜೆಯೇ ಪ್ರಧಾನ ವಾಗಿರುತ್ತದೆಂದು
ಕೆಲವರು ಭಾವಿಸುತ್ತಾರೆ. ಅದರಲ್ಲಿ ಅಭಿನಂದಿಸಲ್ಪಟ್ಟ ವ್ಯಕ್ತಿಯ ಆರಾಧನೆ ನಡೆಯುತ್ತದೆ
ಎಂದು ಹೇಳುವವರೂ ಇದ್ದಾರೆ. ಆದರೆ ಅಭಿನಂದನ ಗ್ರಂಥಗಳು ಸಾಹಿತ್ಯ, ಕಲೆ
ಸಂಸ್ಕೃತಿಯ ವಿವಿಧ ಮಗ್ಗಲುಗಳನ್ನು ನಮಗೆ ಪರಿಚಯಿಸುವಲ್ಲಿ ವಿಶೇಷ ಸಹಾಯ
ಮಾಡುತ್ತಲಿವೆ.

ಅಭಿನಂದನ ಗ್ರಂಥಗಳಿಗೆ `ಗೌರವ ಗ್ರಂಥ ',`ಸಂಭಾವನಾ ಗ್ರಂಥ ' ಗಳೆಂ
ಹೆಸರಿನಿಂದಲೂ ಕರೆಯಲಾಗುತ್ತದೆ. ವ್ಯಕ್ತಿಯ ಜೀವನ ಸಾಧನೆಯನ್ನು ಆತನು ಬದುಕಿದ್ದಾ

ಗ್ರಂಥದ ಮೂಲಕ ಗೌರವಿಸುವ ಗ್ರಂಥವೆ ಅಭಿನಂದನ ಗ್ರಂಥವಾಗಿದೆ. ನಾಡಿನ ಸಾಂಸ್ಕೃತಿಕ ಪ್ರಪಂಚದಲ್ಲಿ ಮಹತ್ತರವಾದ ಸಾಧನೆ ಮಾಡಿ ಜನತೆಯ ಮನಸ್ಸಿನಲ್ಲಿ ಶಾಶ್ವತಸ್ಥಾನ ಪಡೆದಿದ್ದು, ಅಂಥವರ ಚಿರಸ್ಮರಣೆಗಾಗಿ ಗ್ರಂಥಗಳನ್ನು ಹೊರತಂದು ಗೌರವಿಸುವ ಗ್ರಂಥಗಳೂ ಪ್ರಕಟವಾಗುತ್ತವೆ. ಹೀಗೆ ಅಗಲಿದ ವ್ಯಕ್ತಿಗಳ ಸಾಧನೆಯ ಗ್ರಂಥಗಳನ್ನು `ಸಂಸ್ಮರಣ ಗ್ರಂಥ', `ಸ್ಮಾರಕ ಗ್ರಂಥ',`ಸ್ಮೃತಿ ಸಂಪುಟ',`ನೆನಪಿನ ಗ್ರಂಥ' ಎಂದು ಕರೆಯಲಾಗುತ್ತದೆ. ಕನ್ನಡದಲ್ಲಿ ಇಂಥ ಗ್ರಂಥಗಳೂ ಸಾಕಷ್ಟು ಪ್ರಮಾಣದಲ್ಲಿ ಪ್ರಕಟವಾಗಿವೆ.

ಕನ್ನಡ ನಾಡು ಸಾಂಸ್ಕೃತಿಕ ಆಡುಂಬೊಲ ಸಾಹಿತ್ಯ, ಸಂಸ್ಕೃತಿಯ ವೈಶಿಷ್ಟ್ಯಪೂರ್ಣ ಸಭೆ ಸಮ್ಮೇಳನ, ವಿಚಾರಸಂಕಿರಣ, ಬೆಳ್ಳಿಹಬ್ಬ, ಸುವರ್ಣ ಮಹೋತ್ಸವ, ವಜ್ರಮಹೋತ್ಸವ ಅಮೃತಮಹೋತ್ಸವ ಶತಮಾನೋತ್ಸವ ಹೀಗೆ ಬೇರೆ ಬೇರೆ ಸಾಂಸ್ಕೃತಿಕ ಉತ್ಸವಗಳು ನಿರಂತರವಾಗಿ ನಡೆಯುತ್ತವೆ. ಅಂಥ ಸಮ್ಮೇಳನ, ಉತ್ಸವದ ಸವಿಸ್ಮರಣೆಗಾಗಿ ಸ್ಮರಣ ಸಂಚಿಕೆ, ಸಂಪುಟಗಳನ್ನು ಹೊರತರುವ ಸಂಪ್ರದಾಯ ಬೆಳೆದುಬಂದಿದೆ. ಇಂಥ ಸ್ಮರಣಸಂಪುಟಗಳಲ್ಲಿ ಪ್ರಚಲಿತ ವಿಷಯ, ವಸ್ತು, ಸ್ಥಳ, ವ್ಯಕ್ತಿಗಳಿಗೆ ಸಂಬಂಧಿಸಿದ, ವಿದ್ವಾಂಸರ ಉಪಯುಕ್ತ ಲೇಖನಗಳನ್ನು ಚಿತ್ರ, ಜಾಹೀರಾತುಗಳನ್ನು ಪ್ರಕಟಿಸಿ ಸಮಾರಂಭದ ನೆನಪನ್ನು ಚಿರವಾಗಿಸುವ ಉದ್ದೇಶವಿರುತ್ತದೆ. ಕನ್ನಡದಲ್ಲಿ ಪ್ರತಿವರ್ಷ ಪ್ರಕಟವಾಗುವ ಸ್ಮರಣ ಸಂಪುಟಗಳಿಗೆ ಲೆಕ್ಕವಿಲ್ಲ. ಅಸಂಖ್ಯಾತವಾಗಿ ಪ್ರಕಟವಾಗುವ ಇಂಥ ಸಂಪುಟಗಳು ಸಾಮಯಿಕ ಮಹತ್ವವನ್ನು ಪಡೆದುಕೊಳ್ಳುತ್ತವೆ.

ಅಭಿನಂದನ ಗ್ರಂಥಗಳ ಸ್ವರೂಪ, ಸಿದ್ಧತೆ ಇತ್ಯಾದಿ ವಿಚಾರಗಳಿಗೆ ಸಂಬಂಧಿಸಿದಂತೆ ವಿದ್ವಾಂಸರಲ್ಲಿ ವಿಭಿನ್ನ ಅಭಿಪ್ರಾಯ, ಚರ್ಚೆಯೂ ನಡೆದಿದೆ. ಅದರ ಬಗೆಗೂ ಇಲ್ಲಿ ಗಮನಿಸಬೇಕಾದುದು ಅವಶ್ಯಕ. ಅಭಿನಂದನ ಗ್ರಂಥಗಳನ್ನು, ಕಾವ್ಯ, ನಾಟಕ, ಸಣ್ಣಕಥೆ, ಕಾದಂಬರಿ, ವಿಮರ್ಶೆ, ಪ್ರಬಂಧ ಮೊದಲಾದ ಸೃಜನಾತ್ಮಕ ಸಾಹಿತ್ಯ ಪ್ರಕಾರಗಳ ಜೊತೆಗೆ ಸಮೀಕರಣ ಮಾಡಲಾಗದೆಂದೂ ಅದು ಸಾಹಿತ್ಯ ಪ್ರಕಾರಗಳಲ್ಲಿ ಬರುವದಿಲ್ಲವೆಂದೂ ಹೇಳಲಾಗುತ್ತದೆ. ಜೀವನ ಚರಿತೆ, ಆತ್ಮಚರಿತೆ, ವಿಮರ್ಶೆ, ಸಂಶೋಧನೆ, ವಿಚಾರ ಪ್ರಬಂಧ ಕಾವ್ಯ ಹೀಗೆ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳು ಸೇರಿ ಒಂದು ಸಂಪುಟವಾಗುವದರಿಂದ ಅಭಿನಂದನ ಗ್ರಂಥವನ್ನು ಗ್ರಂಥ ಸಮುದಾಯ ಎಂದು ಕರೆಯಬೇಕೆಂದೂ ಅಭಿಪ್ರಾಯ ಪಡಲಾಗಿದೆ. ಇದು ಅಭಿನಂದನ ಗ್ರಂಥದ ವಸ್ತುವಿನ ವಿಸ್ತಾರವನ್ನು ಸೂಚಿಸುತ್ತದೆ.

ಅಭಿನಂದನ ಗ್ರಂಥಗಳಲ್ಲಿ ಅಭಿನಂದಿಸಲ್ಪಡುವ ವ್ಯಕ್ತಿಯ ವ್ಯಕ್ತಿತ್ವ, ಸಾಧನೆ, ಸಾಹಿತ್ಯ ಸಮೀಕ್ಷೆಯ ಲೇಖನಗಳು ಮಾತ್ರವಿರಬೇಕೆಂದೂ ಅಂಥ ಅಭಿನಂದನ ಗ್ರಂಥವೇ ಶ್ರೇಷ್ಠವಾದದ್ದು ಎಂದೂ ಒಂದು ಅಭಿಪ್ರಾಯವಿದೆ. ಉದಾಹರಣೆಗೆ `ಸಹ್ಯಾದ್ರಿ,' `ಚಂದನ,' `ಶ್ರೀನಿವಾಸ,' ಇತ್ಯಾದಿ ಅಭಿನಂದನ ಗ್ರಂಥಗಳಲ್ಲಿ ಅಭಿನಂದಿಸಲ್ಪಡುವ ವ್ಯಕ್ತಿಯ ಜೀವನ ಸಾಧನೆಯ ಜೊತೆಗೆ ಅತನ ಆಸಕ್ತಿಯ ಕ್ಷೇತ್ರಗಳಲ್ಲಿ ವಿದ್ವಾಂಸರ ಪ್ರೌಢ ವಿಚಾರಧಾರೆಯ ಪ್ರಬಂಧಗಳನ್ನು ಅಳವಡಿಸುವದು ಅತನಿಗೆ ತೋರಿಸುವ ನಿಜವಾದ ಗೌರವ ಎಂಬ ಅಭಿಪ್ರಾಯವೂ ಜನಜನಿತವಾಗಿದೆ. ಉದಾಹರಣೆಗೆ `ಸಂಶೋಧನ'` ಮಾನ' `ಅಧ್ಯಯನ' ಮೊದಲಾದ ಅಭಿನಂದನ ಗ್ರಂಥಗಳನ್ನು ನೋಡಬಹುದು. ಅಭಿನಂದಿಸಲ್ಪಡುವ ವ್ಯಕ್ತಿಯ

ಬದುಕು, ಸಾಹಿತ್ಯ ಸಾಧನೆಯ ನಿಜವಾದ ಪರಿಚಯವಾಗಬೇಕಾದರೆ ಆತನ ಮೌಲಿಕ ಬರಹಗಳಿಂದ ಮಾತ್ರ ಸಾಧ್ಯ. ಆದ್ದರಿಂದ ಅಭಿನಂದನ ಗ್ರಂಥಗಳಲ್ಲಿ ಅಭಿನಂದಿಸಲ್ಪಡುವ ವ್ಯಕ್ತಿಯ ಮೌಲಿಕ ಲೇಖನಗಳನ್ನು, ಆತನ ಜೀವನ ಸಾಧನೆಗಳ ಜೊತೆಗೆ ಅಳವಡಿಸಬೇಕೆಂಬುದು ಇನ್ನೊಂದು ವಿಚಾರವಾಗಿದೆ. ಅಂಥ ಅಭಿನಂದನ ಗ್ರಂಥಗಳೂ ಕನ್ನಡದಲ್ಲಿ ಬಂದಿವೆ. ಉದಾಹರಣೆಗೆ `ಭಾಷೋಪಾಸಕ'.

ಅಭಿನಂದನ ಗ್ರಂಥ ಒಂದು ಪರಾಮರ್ಶನ ಗ್ರಂಥದಂತೆ ಸಹೃದಯರಿಗೆ, ಸಂಶೋಧ ಕರಿಗೆ ಉಪಯುಕ್ತವಾಗುತ್ತದೆ. ನೂರಾರು ಲೇಖಕರು, ಅಭಿಮಾನಿಗಳ ವಿಚಾರಧಾರೆಯನ್ನು ಪ್ರಸ್ತುತ ಪಡಿಸುವ ಅಭಿನಂದನ ಗ್ರಂಥ ವಿಶಿಷ್ಟ ಸಾಹಿತ್ಯವಾಗಿದೆ. ವ್ಯಕ್ತಿಯು ನಡೆಸಿದ ಹೋರಾಟ, ಸಾಧನೆ ಸಿದ್ಧಿಯ ಜೊತೆಗೆ ಆತನ ಆಸಕ್ತಿಯ ಕ್ಷೇತ್ರಗಳ ಸಂಶೋಧನೆಯ ಮುಂದುವರಿಕೆಯೂ ಆಗಿ ಅಭಿನಂದನ ಗ್ರಂಥ ಆದರಿಣೀಯವಾಗುತ್ತದೆ.

ಕನ್ನಡದಲ್ಲಿ ಅಭಿನಂದನ ಗ್ರಂಥ ಪರಂಪರೆ ನವೋದಯ ಸಾಹಿತ್ಯದ ಆಚಾರ್ಯ ಪುರುಷರಾದ ಬಿ. ಎಂ. ಶ್ರೀಕಂಠಯ್ಯನವರಿಗೆ ಅರ್ಪಿತವಾದ `ಸಂಭಾವನೆ' (೧೯೪೧) ಯಿಂದ ಆರಂಭವಾಯಿತು. ಮಾಸ್ತಿ ವೆಂಕಟೇಶ ಅಯ್ಯಂಗಾರ ಅವರ ಸಂಪಾದಕತ್ವದಲ್ಲಿ ಪ್ರಕಟವಾದ `ಸಂಭಾವನೆ' ಮುಂದಿನ ಅಭಿನಂದನ ಗ್ರಂಥಗಳಿಗೆ ಪ್ರೇರಕವೂ ಮಾರ್ಗದರ್ಶಿಯೂ ಆಯಿತು. ಅದರಲ್ಲಿ `ಶ್ರೀ' ಯವರ ಜೀವನ ಸಾಧನೆಯ ಲೇಖನಗಳ ಜೊತೆಗೆ ಕನ್ನಡ ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದ ವಿದ್ವಾಂಸರ ಹಲವು ಲೇಖನಗಳು ಪ್ರಕಟವಾಗಿವೆ. ಬಹಳ ಮುಖ್ಯವಾದದ್ದು ಎಂದರೆ ಮುಂದಿನ ಎಲ್ಲ ಅಭಿನಂದನ ಗ್ರಂಥಗಳು ವಿಭಿನ್ನ ಧೋರಣೆ ಉದ್ದೇಶಗಳಿಂದ ಬೆಳವಣಿಗೆ ಹೊಂದಿದವು. ಸಾಹಿತಿಯ ಸಮಗ್ರ ಸಾಹಿತ್ಯ ಹಾಗೂ ವ್ಯಕ್ತಿತ್ವವನ್ನು ವಿಮರ್ಶಾತ್ಮಕ ವಾಗಿ ಪರಿಶೀಲಿಸಿ ಅವುಗಳಿಗೆ ಸಂಬಂಧಿಸಿದ ಬೃಹತ್ ಲೇಖನಗಳ ಗ್ರಂಥಗಳು ಬಂದಿವೆ.

ಶಿವರಾಮಕಾರಂತರಿಗೆ ಅರ್ಪಿತವಾದ `ಕಾರಂತ ಪ್ರಪಂಚ' ಮಾಸ್ತಿಯವರಿಗೆ ಅರ್ಪಿತವಾದ `ಶ್ರೀನಿವಾಸ', ಅ. ನ. ಕೃ. ಅವರಿಗೆ ಅರ್ಪಿತವಾದ `ರಸಚೇತನ' ಕುವೆಂಪು ಅವರಿಗೆ ಅರ್ಪಿತವಾದ `ಗಂಗೋತ್ರಿ' `ಸಹ್ಯಾದ್ರಿ', ಮೊದಲಾದವು ಈ ಬಗೆಯವು. ಅಭಿನಂದನ ಗ್ರಂಥಗಳಲ್ಲಿ ಕವಿಕೃತಿಗಳ ಸಮೀಕ್ಷಾತ್ಮಕ ದೃಷ್ಟಿಕೋನಗಳು ಪ್ರಧಾನವಾಗಿ ಬಂದು ಸಹೃದಯ ವಿಮರ್ಶೆ ಅಭಿವೃದ್ಧಿ ಹೊಂದಿತು. ನವೋದಯ ಸಾಹಿತ್ಯದ ವಿಮರ್ಶೆಗೆ ನೆಲೆಯೂ ಒಂದು ನಿಟ್ಟಿನಲ್ಲಿ ಇವುಗಳಿಂದ ಪ್ರಾಪ್ತವಾಯಿತೆನ್ನಬಹುದು.

ಅಭಿನಂದನ ಗ್ರಂಥದ ಕೇಂದ್ರವ್ಯಕ್ತಿ ಸಾಹಿತ್ಯದ ಯಾವ ಪ್ರಕಾರದಲ್ಲಿ ಸಾಧನೆ ಮಾಡಿದ್ದಾರೊ ಆ ಕ್ಷೇತ್ರಕ್ಕೆ ಸಂಬಂಧಿಸಿದ ತಾತ್ವಿಕ ವಿಚಾರ ಧಾರೆಯನ್ನು ವಿವೇಚಿಸುವ ಲೇಖನಗಳನ್ನೊಳಗೊಂಡ ಅಭಿನಂದನ ಗ್ರಂಥಗಳೂ ಪ್ರಕಟವಾಗಿವೆ. ಸ. ಸ. ಮಾಳವಾಡರಿಗೆ ಅರ್ಪಿತವಾದ `ವ್ಯಾಸಂಗ' ವಿಮರ್ಶೆಯ ತತ್ವ ವಿವೇಚನೆಯನ್ನು ಫ. ಗು. ಹಳಕಟ್ಟಿಯವರ ಸ್ಮಾರಕ ಗ್ರಂಥ `ಮಣಿಹ' ಹಸ್ತಪ್ರತಿ, ಲಿಪಿಶಾಸ್ತ್ರಕ್ಕೆ ಸಂಬಂಧಿಸಿದಂತೆಯೂ, ವಿ. ಎಂ. ಇನಾಮದಾರರಿಗೆ ಅರ್ಪಿತವಾದ `ಕಾದಂಬರಿಲೋಕ' ಪ್ರಪಂಚದ ಕಾದಂಬರಿ ಸಾಹಿತ್ಯದ ಕುರಿತಾದ ಮೌಲಿಕ ಲೇಖನಗಳನ್ನೊಳಗೊಂಡಿರುವದೂ, ರಾ. ಯ. ಧಾರವಾಡಕರ ಅವರಿಗೆ

ಅರ್ಪಿತವಾದ ` ಪ್ರಬಂಧ ಪ್ರಪಂಚ ' ಪ್ರಬಂಧ ಸಾಹಿತ್ಯದ ಸ್ವರೂಪ ಪ್ರಕಾರ ವೈವಿಧ್ಯವನ್ನು ವಿವೇಚಿಸುವ ಗ್ರಂಥವಾಗಿರುವಂಥದು ಇದಕ್ಕೆ ನಿದರ್ಶನಗಳಾಗಿವೆ. ಇದರಿಂದ ಸಾಹಿತ್ಯ ಹಾಗೂ ವಿವಿಧ ಶಾಸ್ತ್ರಗಳಿಗೆ ಸಂಬಂಧಿಸಿದಂತೆ ತತ್ವಮೀಮಾಂಸೆಯು ಕನ್ನಡದಲ್ಲಿ ಬೆಳೆಯಲು ಸಾಧ್ಯವಾಗಿದೆ. ಜ್ಞಾನಕ್ಷೇತ್ರದ ವಿಸ್ತಾರಕ್ಕೆ ಅಭಿನಂದನ ಗ್ರಂಥಗಳ ಕೊಡುಗೆ ಅಗಾಧವಾದ ದ್ದಾಗಿದೆ. ವಿದ್ವಾಂಸರಾದ ಲೇಖಕರು ತಮ್ಮ ವಿದ್ವತ್ಪೂರ್ಣ ವಿಚಾರಧಾರೆಯ ಲೇಖನ ಗಳನ್ನು ಅಭಿನಂದನ ಗ್ರಂಥಗಳಲ್ಲಿ ಪ್ರಕಟಿಸುವದರಿಂದ ಅದು ಒಂದು ರೀತಿಯಲ್ಲಿ ಸಂದರ್ಭ ಗ್ರಂಥ (Referance Book) ವಾಗಿಯೂ ರೂಪಿತವಾಗಿರುವದು ಸಾಧ್ಯವಾಗಿದೆ. ಇದರಿಂದ ಸಂಶೋಧಕರಿಗೆ ಉಪಯುಕ್ತ ಸಾಮಗ್ರಿಯನ್ನು, ವಿಚಾರಧಾರೆಯನ್ನು ಒದಗಿಸು ವಂತಾಗಿದೆ.

ಸಾಹಿತಿ, ಕಲಾವಿದರನ್ನು ಕುರಿತ ಗೌರವಗ್ರಂಥಗಳು ಸ್ವಜನಸಾಹಿತ್ಯಕ್ಕೂ ಕಾಣಿಕೆ ಸಲ್ಲಿಸಿವೆ. ಕನ್ನಡದ ಪ್ರಸಿದ್ಧ ಕವಿಗಳ ಕವಿತೆಗಳು ಸುನೀತಗಳ ಮೂಲಕ ಅಭಿನಂದಿಸಲ್ಪಡುವ ವ್ಯಕ್ತಿಯ ವ್ಯಕ್ತಿತ್ವವನ್ನು ಸುನೀತ, ಕವಿತೆಯಲ್ಲಿ ಸೆರೆಹಿಡಿದು ಕಲಾಕೃತಿಯನ್ನಾಗಿಸುವ ಪರಂಪರೆ ಬೆಳೆದಿದೆ. ಇದರಿಂದ ಬೇರೆ ಬೇರೆ ಸಾಹಿತಿ ಕಲಾವಿದರ ಕುರಿತಾದ ಸುನೀತ, ಕವಿತೆಗಳು ಕನ್ನಡ ವ್ಯಕ್ತಿಗೀತ ಪರಂಪರೆಗೆ ವಿಶಿಷ್ಟ ಕೊಡುಗೆ ನೀಡಿವೆ. ಬೇಂದ್ರೆ, ಶಿವರುದ್ರಪ್ಪ, ಚೆನ್ನವೀರ ಕಣವಿ ಮೊದಲಾದ ಕವಿಗಳು ಬರೆದ ಸುನೀತ, ಕವಿತೆಗಳು ಕಾವ್ಯ ಪ್ರಪಂಚದಲ್ಲಿ ವಿಶಿಷ್ಟತೆಯನ್ನು ಗಳಿಸಿವೆ. ಹಾಗೆಯೆ ಸಾಹಿತಿ, ಕಲಾವಿದರ ಆತ್ಮಚರಿತ್ರೆಯ, ಜೀವನಚರಿತ್ರೆಯ ಭಾಗಗಳು ಆಯಾ ಸಾಹಿತ್ಯ ಪ್ರಕಾರಗಳಲ್ಲಿ ಲೇಖಕ ಕಲಾವಿದರ ಆತ್ಮಜಿಜ್ಞಾಸೆಯನ್ನೂ, ಬದುಕಿನ ಅನನ್ಯತೆಯನ್ನೂ ಅರಿಯಲು ನೆಲೆ ಕಲ್ಪಿಸಿವೆ. ಚಿದಾನಂದಮೂರ್ತಿ ಅವರ ಆತ್ಮಕಥನ (ಸಂಶೋಧನ) ಶಂಬಾ ಜೀವನ ಚರಿತ್ರೆ (ಅಧ್ಯಯನ) ಬೇಂದ್ರೆ ಜೀವನ ಚರಿತ್ರೆ (ಇಳಿದು ಬಾ ತಾಯಿ) ಮೊದಲಾದವು ಇದಕ್ಕೆ ನಿದರ್ಶನಗಳಾಗಿವೆ.

ಅರ್ಧಶತಮಾನದಷ್ಟು ಸುದೀರ್ಘವಾದ ಕಾಲದಲ್ಲಿ ಮುನ್ನೂರಕ್ಕೂ ಹೆಚ್ಚು ಅಭಿನಂದನ ಗ್ರಂಥಗಳು ಹೊಸಗನ್ನಡ ಸಾಹಿತ್ಯದ ವಿಶಿಷ್ಟ ಬೆಳೆಯಾಗಿ ಕಂಗೊಳಿಸುತ್ತವೆ. ಕನ್ನಡದಲ್ಲಿ ಬಂದ ಅಭಿನಂದನ ಗ್ರಂಥಗಳ ಬಗೆಗೆ ಇದೇ ಲೇಖಕರು ಬರೆದ ಕರ್ನಾಟಕ ಭಾರತಿ ೨೬ - ೧ ರಲ್ಲಿಯ ಲೇಖನ ನೋಡಿರಿ. ಭಾರತೀಯ ಭಾಷೆಗಳಲ್ಲಿ ಕನ್ನಡದಲ್ಲಿ ಬಂದಷ್ಟು ಮೌಲಿಕವಾದ ಬಹುಸಂಖ್ಯೆಯ ಅಭಿನಂದನ ಗ್ರಂಥಗಳಿಲ್ಲ ಎಂಬ ಒಂದು ಅಭಿಪ್ರಾಯವಿದೆ. ಕನ್ನಡ ನಾಡು ನುಡಿಯ ಸಂಪನ್ನ ಚೇತನಗಳನ್ನು ಗ್ರಂಥದ ಮೂಲಕ ಗೌರವಿಸಿ ಅವರ ಸರ್ವತೋಮುಖ ಸಾಧನೆಗಳನ್ನು ದಾಖಲಿಸಿ ಮುಂದಿನ ಪೀಳಿಗೆಗೆ ಆದರ್ಶವನ್ನು ಒದಗಿಸುವ ಕಾರ್ಯ ಇವುಗಳ ಮೂಲಕ ನಿರಂತವಾಗಿ ಸಾಗುತ್ತ ಬಂದುದನ್ನು ನಾವು ಕಾಣುತ್ತೇವೆ.

ಎಲ್ಲಕ್ಕಿಂತ ಮುಖ್ಯವಾದದ್ದೆಂದರೆ ಹೊಸಗನ್ನಡ ಸಾಹಿತ್ಯ ಪ್ರಪಂಚದ ಹಿರಿಯ ಕವಿ ಲೇಖಕರಿಗೆ ಅರ್ಪಿತವಾದ ಅಭಿನಂದನ ಗ್ರಂಥಗಳಲ್ಲಿ ಅವರ ಸಮಗ್ರ ಸಾಹಿತ್ಯ ಸಮೀಕ್ಷೆ ಮಾಡಿದಂತಾಗಿದೆ. ವಿವಿಧ ಮುಖವಾದ ದೃಷ್ಟಿಕೋನಗಳಿಂದ ವಿಮರ್ಶಾತ್ಮಕ ಪರಿಶೀಲನೆ ಯನ್ನೂ ನಡೆಸಿದಂತಾಗಿದೆ. ಇದು ಹೊಸಗನ್ನಡ ವಿಮರ್ಶೆಯ ಬೆಳವಣಿಗೆಗೆ ಆರೋಗ್ಯಕರವಾದ ವಾತಾವರಣವನ್ನು ಸೃಷ್ಟಿಸಿದಂತಾಗುತ್ತದೆ. ಅನೇಕ ಕವಿ ಕೃತಿಗಳ ವಿಮರ್ಶೆ ಆಗದೆ

ಹೋಗದಂತಾದಾಗ ಯಾವುದೇ ಮಿತಿಯಿದ್ದ ಪಕ್ಷದಲ್ಲೂ ಸಾಹಿತ್ಯ ವಿಮರ್ಶೆ ಅಭಿನಂದನ ಗ್ರಂಥಗಳ ಲೇಖನಗಳಲ್ಲಿ ಸಾಧ್ಯವಾಗುತ್ತದೆ ಎಂಬುದಕ್ಕೆ ಕನ್ನಡದ ಅಭಿನಂದನ ಗ್ರಂಥಗಳೇ ಸಾಕ್ಷಿ.

ಕನ್ನಡ ಅಭಿನಂದನ ಗ್ರಂಥಗಳನ್ನು ಕಂಡಾಗ ಅದರಲ್ಲಿ ಕವಿ ಕೃತಿಗಳ ಅಧ್ಯಯನ ನೇರವಾಗಿ ಆಗುವಂಥದ್ದು ಒಂದು ವಿಧವಾದರೆ (ಗಂಗೋತ್ರಿ ಶ್ರೀನಿವಾಸ, ಚೆಂಬೆಳಕು ಇತ್ಯಾದಿ) ಇನ್ನೊಂದು ರೀತಿಯಲ್ಲಿ ಹಿರಿಯ ಸಾಹಿತ್ಯ ಚೇತನದ ಸಂಸ್ಮರಣೆಯ ಸಂದರ್ಭದಲ್ಲಿ ಆ ಚೇತನದ ಆಸಕ್ತಿಯ ಕ್ಷೇತ್ರಗಳಲ್ಲಿ ಮೌಲಿಕ ಸಂಶೋಧನ ಲೇಖನಗಳು ಪ್ರಕಟವಾಗಿರುವದು, ಕನ್ನಡ ಸಂಶೋಧನ ಪರಂಪರೆಯ ಬೆಳವಣಿಗೆಗೂ ಸಹಾಯಕವಾಗಿದೆ. ಈ ಅಭಿನಂದನ ಗ್ರಂಥಗಳಲ್ಲಿಯ ವಿಮರ್ಶೆ ಮುಖ್ಯವಾಗಿ ಸಹೃದಯನಿಷ್ಠವಾದದ್ದು, ಕವಿಕೃತಿಗಳಿಗೆ ನ್ಯಾಯವನ್ನು ಒದಗಿಸುವ ಧೋರಣೆಯಿಂದ ಕೂಡಿರುವಂಥದು. ಯುವ ಸಂಶೋಧಕರಿಗೆ ಸಂಶೋಧನ ಲೇಖನ ಬರೆಯುವಲ್ಲಿ ಉತ್ತೇಜನ ನೀಡುವಂಥದು. ಹಿರಿಯರ ಮೌಲಿಕ ವಿಚಾರಗಳ ಸ್ಪಂದನವಾಗಿರುವಂಥದ್ದು. ಕೆಲವು ಅಭಿನಂದನ ಗ್ರಂಥಗಳಲ್ಲಿ ಪ್ರಾಯೋಗಿಕ ವಿಮರ್ಶೆಯ ನೆಲೆಯೂ ಇರುವದನ್ನೂ ನಾವು ಕಾಣುತ್ತೇವೆ. `ಸ್ನೇಹ ಕಾರ್ತೀಕ '. `ಚೆಂಬೆಳಕು,' `ಇಳಿದು ಬಾ ತಾಯಿ,' - ಇಂಥ ಅಭಿನಂದನ ಗ್ರಂಥಗಳಲ್ಲಿಯ ಕವಿತೆಗಳ ವಿಶ್ಲೇಷಣೆ ಈ ಬಗೆಯ ಪ್ರಾಯೋಗಿಕ ವಿಮರ್ಶೆಯ ಲೇಖನಗಳಿಗೆ ನಿದರ್ಶನವನ್ನೊದಗಿಸುತ್ತವೆ.

ಕನ್ನಡದಲ್ಲಿ ಬಂದ ಅಭಿನಂದನ ಗ್ರಂಥಗಳು ಕನ್ನಡ ನಾಡಿನ ಚೇತನಗಳನ್ನು ಮಾತ್ರ ಗ್ರಂಥದ ಮೂಲಕ ಗೌರವಿಸಲ್ಪಟ್ಟಿರದೆ ಅವು ಭಾರತೀಯ ಮತ್ತು ವಿಶ್ವದ ಚೇತನಗಳನ್ನು ವ್ಯಾಪಿಸಿರುವದು, ಕನ್ನಡ ಸಂಸ್ಕೃತಿಯ ಇನ್ನೊಂದು ಆದರ್ಶವನ್ನು ಪ್ರಕಟಿಸುತ್ತದೆ. ಕಾಳಿದಾಸ, ಷೇಕ್ಸಪಿಯರ್, ರವೀಂದ್ರ, ಗಾರ್ಕಿ, ಲೆನಿನ್ ಮೊದಲಾದವರ ಬಗೆಗೆ ಬಂದ ಗ್ರಂಥಗಳು ಇದಕ್ಕೆ ಸಾಕ್ಷಿಯಾಗಿವೆ. ಇದರಿಂದ, ಭಾರತೀಯತೆಯನ್ನೂ, ವಿಶ್ವಪ್ರಜ್ಞೆಯನ್ನೂ ನಾವು ಅಭಿನಂದನ ಗ್ರಂಥಗಳಲ್ಲಿ ಕಾಣುತ್ತೇವೆ. ಎಲ್ಲ ಸಾಹಿತ್ಯ ಪ್ರಕಾರಗಳಂತೆ ಅಭಿನಂದನ ಗ್ರಂಥಗಳಲ್ಲೂ ತೀರಾ ಸಾಮಾನ್ಯವಾದ ಕೃತಿಗಳೂ, ತುಂಬ ಮೌಲಿಕವಾದ ಗ್ರಂಥಗಳೂ ಇವೆ. ಕೆಲವು ಅಭಿನಂದನ ಗ್ರಂಥಗಳು ಪರಾಮರ್ಶನ ಗ್ರಂಥಗಳಾಗಿ ಸಾಹಿತ್ಯಪ್ರಪಂಚದಲ್ಲಿ ಮಾನ್ಯವಾಗಿವೆ. ಅಧ್ಯಯನಾಸಕ್ತರಿಗೆ, ಸಂಶೋಧಕರಿಗೆ ಮಾರ್ಗದರ್ಶಿಯಾಗಿವೆ. ಗುಣ ಗಾತ್ರಗಳಲ್ಲಿ ಶ್ರೇಷ್ಠವಾದ ಮಹಾಸಂಪುಟಗಳು ಕನ್ನಡದ ಹೊಸ ಸಾಹಿತ್ಯದಲ್ಲಿ ವಿಶಿಷ್ಟವಾಗಿವೆ. (ಗಂಗೋತ್ರಿ, ಸಂಶೋಧನ, ಮಾನ, ಸಹ್ಯಾದ್ರಿ, ಹರಿತಿಸಿರಿ, ರಾಷ್ಟ್ರ ಧರ್ಮದೃಷ್ಟಾರ ಹರ್ಡೇಕರ ಮಂಜಪ್ಪ ಇತ್ಯಾದಿ) ಬಹಳ ಸ್ವಾರಸ್ಯವಾದ ಸಂಗತಿಯೆಂದರೆ ಕನ್ನಡದ ಹಲವಾರು ಕವಿ ಲೇಖಕರಿಗೆ ಒಂದಕ್ಕಿಂತ ಹೆಚ್ಚು ಗೌರವ ಗ್ರಂಥ ಅರ್ಪಿತವಾಗಿರುವದು ಕನ್ನಡದ ಅಭಿನಂದನ ಗ್ರಂಥಗಳ ವೈಶಿಷ್ಟವಾಗಿದೆ. ಕುವೆಂಪು, ಬೇಂದ್ರೆ, ಕಾರಂತ, ಮಾಸ್ತಿ, ಗೋಕಾಕ, ಮುಗಳಿ, ಸಿದ್ಧಯ್ಯ ಪುರಾಣಿಕ, ದೇಜಗೌ, ಹಾ.ಮಾ.ನಾಯಕ, ಮೂಜಗಂ ಮೊದಲಾದ ಸಾಹಿತಿಗಳ ಗೌರವ ಗ್ರಂಥಗಳು ಇದಕ್ಕೆ ನಿದರ್ಶನಗಳಾಗಿವೆ. ಇದು ಆಯಾ ಸಾಹಿತಿಗಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ವಿಮರ್ಶನ ವಿಚಾರಗಳ ಮಂಡನೆಗೆ, ಚಿಂತನ ಮಂಥನಕ್ಕೆ, ಹೊಸ ಆಲೋಚನೆ ಗಳಿಗೆ ಮಾರ್ಗ ಕಲ್ಪಿಸಿದಂತಾಗಿದೆ ಎಂದೂ ಹೇಳಬಹುದು. ಕನ್ನಡದ

ಎಲ್ಲ ಅಭಿನಂದನ ಗ್ರಂಥಗಳೂ ಶ್ರೇಷ್ಠವಾದದ್ದು ಎಂದು ಹೇಳಲು ಸಾಧ್ಯವಾಗದು. ಅವುಗಳಲ್ಲಿ ಗುಣದೋಷ ಗಳಿರುವದನ್ನು ನಾವು ಕಾಣುತ್ತೇವೆ. ಕನ್ನಡದ ಅಭಿನಂದನ ಗ್ರಂಥಗಳಲ್ಲಿ ಸಾಹಿತಿಗಳ ಸಮಗ್ರ ಸಾಹಿತ್ಯ ಸಮೀಕ್ಷೆ, ಶ್ರೇಷ್ಠ ಸಂಶೋಧನ ವಿಚಾರಗಳು, ವಸ್ತುನಿಷ್ಠ ದೃಷ್ಟಿಕೋನದ ಗುಣಗಳು ಕಂಡು ಬರುವ ಹಾಗೆ ವ್ಯಕ್ತಿಯ ಅತಿಪ್ರಶಂಸೆ, ಮೌಲಿಕ ಲೇಖನ, ಸತ್ಯನಿಷ್ಠ ವಿಚಾರಗಳ ಕೊರತೆ, ಇತ್ಯಾದಿ ದೋಷಗಳನ್ನೂ ಹೇಳಬಹುದು.

ಹದಿನೈದು ಸಾವಿರಕ್ಕೂ ಹೆಚ್ಚು ವಿಮರ್ಶೆ ಸಂಶೋಧನೆಯ ಲೇಖನಗಳನ್ನೊಳಗೊಂಡ ಕನ್ನಡದ ಅಭಿನಂದನ ಗ್ರಂಥಗಳು ಕನ್ನಡ ಸಾಹಿತ್ಯ ಲೋಕದ ಸಾಮೂಹಿಕ ಪ್ರತಿಭೆಯ ಫಲವಾಗಿವೆ. ಅವುಗಳಲ್ಲಿ ಪ್ರಕಟವಾದ ನಾಡಿನ ವಿದ್ವಾಂಸರ ಮೌಲಿಕ ಲೇಖನಗಳು ಹೊಸಗನ್ನಡದ ಗದ್ಯ, ವಿಮರ್ಶೆ, ವಿಚಾರ, ಸಂಶೋಧನೆ, ಸಾಹಿತ್ಯಚರಿತ್ರೆ, ಪಾಂಡಿತ್ಯ ಪ್ರಪಂಚದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ವಿಚಾರಧಾರೆಯನ್ನು ಬೆಳೆಸುವದಕ್ಕೆ ಅವು ಬಹುಮುಖ್ಯ ಕೊಡುಗೆ ಕೊಟ್ಟಿವೆ. ಕನ್ನಡ ಮನಸ್ಸಿನ ಸೃಜನಶೀಲತೆಯನ್ನು, ಸಂಸ್ಕೃತಿಯ ಪ್ರೀತಿಯನ್ನು, ಆದರ್ಶಗಳನ್ನು ಪ್ರತಿಬಿಂಬಿಸುವ ಅಭಿನಂದನ ಗ್ರಂಥಗಳು ಹೊಸಗನ್ನಡದ ಉತ್ಕರ್ಷಕ್ಕೆ ಕಾರಣವಾಗಿವೆ. ಕನ್ನಡದ ಎಲ್ಲ ಪ್ರತಿಭಾವಂತ ಚೇತನಗಳಿಗೆ ಅಭಿನಂದನ ಗ್ರಂಥ, ನೆನಪಿನ ಗ್ರಂಥ ಅರ್ಪಿತವಾಗಿದೆ ಎಂದು ಹೇಳಲಾಗದಿದ್ದರೂ, ಕನ್ನಡ ಸಾಹಿತ್ಯಸಂಸ್ಕೃತಿಯ ಸಂವರ್ಧನೆಯಲ್ಲಿ ಮಹತ್ತರ ಸೇವೆ ಸಲ್ಲಿಸಿದ ಚೇತನಗಳಿಗೆ ಇಂಥ ಗ್ರಂಥಗೌರವ ಅರ್ಪಿತವಾದದ್ದು ಕನ್ನಡದ ಭಾಗ್ಯವೆನ್ನಬೇಕು. ಈ ಗ್ರಂಥಾಭಿನಂದನ ಪರಂಪರೆ ನಿರಂತರವಾಗಿ ಮುಂದುವರಿದಿದೆ.

ಹೊಸಗನ್ನಡ ಸಾಹಿತ್ಯ ಪ್ರಪಂಚದ ಹಿರಿಯರನ್ನು ಅಭಿನಂದಿಸಲ್ಪಡುವ ಅಭಿನಂದನ ಗ್ರಂಥ ಪರಂಪರೆ ಬೆಳೆದು ಬಂದ ಹಾಗೆ ನಮ್ಮ ಹಳೆಗನ್ನಡ ಸಾಹಿತ್ಯದ ಪ್ರಮುಖ ಕವಿಗಳ ಕುರಿತು ಪ್ರಶಸ್ತಿ ಗ್ರಂಥಗಳನ್ನು ಹೊರತಂದು ಆಯಾ ಕವಿಗಳ ಕಾವ್ಯಗಳ ರಸವಿಮರ್ಶೆ ಹಾಗೂ ಸಾಹಿತ್ಯದ ಮೌಲ್ಯಮಾಪನ, ವಿಮರ್ಶೆಯ ಲೇಖನಗಳನ್ನು ಪ್ರಶಸ್ತಿ ಗ್ರಂಥಗಳಲ್ಲಿ ಪ್ರಕಟಿಸುವ ಪರಂಪರೆ ಕನ್ನಡದಲ್ಲಿ ಬಹುಹಿಂದಿನಿಂದಲೂ ಬೆಳೆದುಬಂದಿದೆ. ರನ್ನ ಕವಿ ಪ್ರಶಸ್ತಿ ಕುಮಾರವ್ಯಾಸ ಪ್ರಶಸ್ತಿ, ಮುದ್ದಣ ಪ್ರಶಸ್ತಿ, ದೇವರದಾಸಿಮಾಯ್ಯ ಪ್ರಶಸ್ತಿ ಗ್ರಂಥಗಳಲ್ಲದೆ ಪಂಪ, ಲಕ್ಷ್ಮೀಶ, ನಿಜಗುಣ ಶಿವಯೋಗಿ, ಸರ್ವಜ್ಞ, ಬಸವಣ್ಣನವರ ಅಷ್ಟ ಶತಮಾನೋತ್ಸವ, ಪುರಂದರದಾಸ ಚತುರ್ಥ ಶತಮಾನೋತ್ಸವ, ಕನಕದಾಸ ಚತುರ್ಥ ಶತಮಾನೋತ್ಸವ, ಕನಕದಾಸ ೫೦೦ನೆಯ ಜಯಂತಿ, ಕನಕ ಸಾಹಿತ್ಯ ದರ್ಶನ, ಷಡಕ್ಷರದೇವ ಹೀಗೆ ಬೇರೆ ಬೇರೆ ಹಳೆಯ ಸಾಹಿತ್ಯದ ಕವಿಗಳ ಜೀವನ ಹಾಗೂ ಕೃತಿಗಳ ಸಮೀಕ್ಷೆಗಳನ್ನೊಳಗೊಂಡ ಗ್ರಂಥಗಳು ಸಾಮಯಿಕವಾಗಿ ಪ್ರಕಟವಾಗಿದ್ದು ಅದರಲ್ಲಿ ಕನ್ನಡನಾಡಿನ ವಿದ್ವಾಂಸರು ತಮ್ಮ ಮೌಲಿಕ ಲೇಖನಗಳ ಮೂಲಕ ಕವಿಗೆ ಗೌರವ ಅರ್ಪಿಸಿರುವದು ಕಂಡುಬರುತ್ತದೆ.

ಕನ್ನಡದಲ್ಲಿ ಪ್ರಕಟವಾದ ಸ್ಮರಣ ಸಂಚಿಕೆಗಳು ಅಸಂಖ್ಯಾತ. ವಿವಿಧ ಸಾಹಿತ್ಯ ಸಮ್ಮೇಳನ, ಸಾಮಾಜಿಕ, ಸಾಂಸ್ಕೃತಿಕ ಉತ್ಸವ, ಕಲಾ ಉತ್ಸವಗಳ ಸಮಾರಂಭಗಳಲ್ಲಿ ಸಾವಿರಾರು ಸ್ಮರಣ ಸಂಚಿಕೆಗಳು ಪ್ರಕಟವಾಗಿವೆ. ಇವು ಸಮ್ಮೇಳನದ ಸ್ಮರಣಸಂಚಿಕೆಗಳು

ಮಾತ್ರವಾಗಿರದೆ ಆಯಾ ಪ್ರದೇಶದ ಸಾಹಿತ್ಯ, ಇತಿಹಾಸ, ಕಲೆ ಸಂಸ್ಕೃತಿಗೆ ಸಂಬಂಧಿಸಿದ ಅಮೂಲ್ಯ ಲೇಖನಗಳಿಂದ ಸಾಹಿತ್ಯಿಕವಾಗಿಯೂ ಮಹತ್ವ ಗಳಿಸುತ್ತವೆ. ಈ ಹಿನ್ನೆಲೆಯಲ್ಲಿ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆಗಳು ದೊಡ್ಡ ಲೇಖನ ಸಂಪುಟಗಳಾಗಿ, ಆಯಾ ಪ್ರದೇಶದ ಸಾಹಿತ್ಯ, ಕಲೆ, ಸಂಸ್ಕೃತಿಯ ಅವಲೋಕನಗಳಾಗಿ ಆದರಣೀಯವಾಗುತ್ತವೆ. ಹಾಗೆ ನೋಡಿದರೆ ಸ್ಮರಣ ಸಂಚಿಕೆಗಳನ್ನು ಪ್ರತ್ಯೇಕವಾಗಿ ಸಂಕಲಿಸಿ ಅವುಗಳಲ್ಲಿಯ ಸಾಹಿತ್ಯ ಸಾಮಗ್ರಿಯನ್ನು ಪ್ರತ್ಯೇಕವಾಗಿ ಅವಲೋಕಿಸಬೇಕಾಗುತ್ತದೆ.

ಒಟ್ಟಿನಲ್ಲಿ ಕನ್ನಡದಲ್ಲಿ ಬಂದ ಅಭಿನಂದನ ಗ್ರಂಥಗಳು ವಿಶಿಷ್ಟ ರೂಪ, ಸ್ವರೂಪದಿಂದ ವೈವಿಧ್ಯಮಯವಾಗಿ, ವರ್ಣಮಯ ವ್ಯಕ್ತಿ ಪ್ರತಿಭೆಗಳನ್ನು ಸಾಧನೆ ಸಿದ್ಧಿಗಳನ್ನು ಅನಾವರಣ ಗೊಳಿಸುವಲ್ಲಿ ಯಶಸ್ವಿಯಾಗಿವೆ.

●

ಬಂಡಾಯ ಸಾಹಿತ್ಯ - ಒಂದು ಅವಲೋಕನ

- *ಬಸವರಾಜ ಸಬರದ*

ಕನ್ನಡದಲ್ಲಿ ಬಂಡಾಯ ಸಾಹಿತ್ಯ ಸೃಷ್ಟಿಯಾಗಿ ಒಂದೂವರೆ ದಶಕವಾಗಿ, ಬಂಡಾಯ ಸಾಹಿತ್ಯಕ್ಕೆ ಕನ್ನಡದಲ್ಲೇ ಒಂದು ವಿಶಿಷ್ಟ ಪರಂಪರೆಯಿದೆ. ಈ ಒಂದೂವರೆ ದಶಕದಲ್ಲಿ ಅಧಿಕೃತವಾಗಿ ದಾಖಲಾದ ಬಂಡಾಯ ಸಾಹಿತ್ಯದ ಸಾಧ್ಯತೆಗಳನ್ನು ಗುರುತಿಸುವುದರ ಜತೆಗೆ ಅದರ ಮಿತಿಗಳನ್ನು ಇಂದು ಅರ್ಥೈಸಿಕೊಳ್ಳಬೇಕಾಗಿದೆ.

ಯಾವುದೇ ಹೊಸ ಚಳುವಳಿ ಹುಟ್ಟಿದಾಗ ಅದನ್ನು ಗುಮಾನಿಯಿಂದ ನೋಡುವುದು ಸಹಜ. ಎಲ್ಲಾ ಗುಮಾನಿಗಳಿಗೂ ಉತ್ತರ ನೀಡಿದ ಬಂಡಾಯ ಸಾಹಿತ್ಯ ಚಳುವಳಿ ಈ ದಶಕದಲ್ಲಿ ತನ್ನ ನಿಚ್ಚಳ ಬೆಳವಣಿಗೆಯ ಮೂಲಕ ಜನಪರ ಸಂಸ್ಕೃತಿಯನ್ನು ಹುಟ್ಟು ಹಾಕಿರುವುದು ಈಗ ಚರಿತ್ರೆಯ ಭಾಗವಾಗಿದೆ. ಬಂಡಾಯ ಸಂಘಟನೆ ಸೌಹಾರ್ದವನ್ನು ಸ್ವಾಗತಿಸುತ್ತಲೇ ಸಿದ್ಧಾಂತದ ಕಡೆ ಹೆಚ್ಚು ಗಮನ ಕೊಡುತ್ತ, ಇತರ ಸಾಹಿತ್ಯ ಸಂಘಟನೆಗಳೊಂದಿಗೆ `ಮಾನಸಿಕ ದೂರ' ವನ್ನು ನಿರ್ಮಿಸಿಕೊಂಡಿರುವದು ಹೆಚ್ಚು ಆರೋಗ್ಯಕರವೆನಿಸುತ್ತದೆ.

ಬಂಡಾಯ ಆಶಯವನ್ನು ಒಂದು ಮನೋಧರ್ಮವನ್ನಾಗಿ ಬೆಳೆಸಿದ ಕರ್ನಾಟಕ ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆ ಈ ಒಂದು ದಶಕದಲ್ಲಿ ಪ್ರಮುಖವಾಗಿ ಎರಡು ರೀತಿಯ ಕಾರ್ಯಗಳನ್ನು ಮಾಡುತ್ತ ಬಂದಿದೆ. ಇದು (Movement Literature) ಚಳುವಳಿಯ ಸಾಹಿತ್ಯವಾದ್ದರಿಂದ ಇದರ ಎರಡು ಪ್ರಮುಖ ಕ್ರಿಯೆಗಳಾದ ಹೋರಾಟ ಮತ್ತು ವಿಶ್ಲೇಷಣೆಗಳನ್ನು ನಾವು ಜತೆ ಜತೆಯಾಗಿಯೇ ನೋಡಬೇಕಾಗುತ್ತದೆ. ಆದ್ದರಿಂದ ಉಳಿದ ಸಾಹಿತ್ಯ ಘಟ್ಟಗಳನ್ನು ವಿಮರ್ಶಿಸುವಂತೆ ಬಂಡಾಯ ಸಾಹಿತ್ಯವನ್ನು ವಿಮರ್ಶಿಸುವಂತಿಲ್ಲ. ಚಳುವಳಿಯ ಹಿನ್ನಲೆಯಲ್ಲಿ ಇದರ ಸಾಹಿತ್ಯದ ಅನಿವಾರ್ಯತೆಯನ್ನು ಮನಗಾಣಬೇಕಾಗಿದೆ.

ದಲಿತಚಳುವಳಿ, ಮಹಿಳಾ ವಿಮೋಚನಾ ಚಳುವಳಿ, ರೈತ ಕಾರ್ಮಿಕ ಚಳುವಳಿ ಹಾಗೂ ಭಾಷಾ ಚಳುವಳಿಗಳಿಗೆ ಬಂಡಾಯ ಚಳುವಳಿ ಹೇಗೆ ಬೀಜರೂಪದಲ್ಲಿ ಕಾರ್ಯ ಮಾಡಿದೆಯೆಂಬುದು ಈಗಾಗಲೇ ಸ್ಪಷ್ಟವಾಗಿದೆ. ಕರ್ನಾಟಕದಲ್ಲಿ ಅನೇಕ ಜನಪರ ಚಳುವಳಿಗಳು ಬೆಳೆದು ನಿಲ್ಲಲು ನೆಲೆ ದೊರಕಿದೆ. ಆಶಯ ಮತ್ತು ವಾಸ್ತವಗಳ ನಡುವೆ ನಿಂತ ಗೋಡೆಗಳನ್ನು ಕೆಡವುತ್ತ ಜನಪರ ಸಂಸ್ಕೃತಿಯನ್ನು ಇಂದಿನ ಸಾಮಾಜಿಕ ಸಂದರ್ಭದಲ್ಲಿ ದಟ್ಟವಾಗಿ ಮೂಡಿಸಿದ ಈ ಚಳುವಳಿಯ ಸಾಧನೆಗಳಲ್ಲಿ ಇದರ ಸಾಹಿತ್ಯವು ಒಂದು ಭಾಗವಾಗಿದೆ. ಕುದುರಿಮೂತಿ, ಬೆಂಡಿಗೇರಿ, ಚಂದ್ರಗುತ್ತಿ, ತುತ್ತೂರು ಪ್ರಕರಣಗಳನ್ನು ಬಯಲಿಗೆಳೆದು ಚಳುವಳಿಯಾಗಿ

ಸಮರ್ಥ ಕೆಲಸ ಮಾಡಿದ ಬಂಡಾಯ ಸಂಘಟನೆ ಅನೇಕ ಮಹತ್ವದ ಕೃತಿಗಳನ್ನು ಕೊಡುವುದರ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ದಿಕ್ಕುಗಳನ್ನು ತೋರಿಸಿದೆ.

ಇದುವರೆಗೆ ಕನ್ನಡ ಸಾಹಿತ್ಯಕ್ಕೆ ಅಪರಿಚಿತವಾಗಿದ್ದ ಅನೇಕ ಮುಖಗಳನ್ನು ಬಂಡಾಯ ಸಾಹಿತ್ಯ ದಾಖಲಿಸಿದೆ. ಹೊಸಗನ್ನಡ ಸಾಹಿತ್ಯದ ಸಂದರ್ಭದಲ್ಲಿ ಮೊಟ್ಟ ಮೊದಲ ಬಾರಿಗೆ ದಲಿತ ಸಂಸ್ಕೃತಿಯ ಸಂವೇದನೆಗಳು, ಮುಸ್ಲಿಂ ಸಂಸ್ಕೃತಿಯ ಸಂವೇದನೆಗಳು, ಶೋಷಿತ ಮಹಿಳೆಯರ ಸಂವೇದನೆಗಳು ಹಾಗೂ ಗ್ರಾಮೀಣ ಸಂವೇದನೆಗಳು ಬಂಡಾಯ ಸಾಹಿತ್ಯದ ಮುಖವಾಣಿಯಂತೆ ಪ್ರಕಟವಾಗಿವೆ. ಶತಮಾನಗಳಿಂದ ಶೋಷಣೆಗೊಳಗಾದ ದಲಿತರ-ಮುಸ್ಲಿಮರ ಮಹಿಳೆಯರ ನೋವಿನ ಧ್ವನಿಯಾಗಿ ಬಂಡಾಯ ಸಾಹಿತ್ಯ ಪ್ರತಿಭಟಿಸಿದೆ. ಪ್ರಾರಂಭದಲ್ಲಿ ಅತ್ಯಂತ ಸಪ್ಪಳದಿಂದ ಕೂಡಿದ ಈ ಪ್ರತಿಭಟನೆ, ಇತ್ತೀಚಿನ ದಿನಗಳಲ್ಲಿ ಸೂಕ್ಷ್ಮವಾಗುತ್ತಿರುವುದನ್ನು ನೋಡಿದರೆ, ಈ ಚಳುವಳಿಯ ಸೈದ್ಧಾಂತಿಕ ಬೆಳವಣಿಗೆಯ ಅರಿವು ಆಗುತ್ತವೆ. ನೋವುಂಡ ಜನ ಅತ್ಯಂತ ಅಧಿಕ ಸಂಖ್ಯೆಯಲ್ಲಿ ಅಧಿಕೃತವಾಗಿ ಮಾತನಾಡಿದ್ದು, ಸಂಘಟನೆಗೊಂಡು ಹೋರಾಡಿದ್ದು, ಸಿದ್ಧಾಂತದ ನೆಲೆಯಲ್ಲಿ ಪ್ರತಿಭಟಿಸಿದ್ದು, ಕನ್ನಡದಲ್ಲಿ ವಚನ ಚಳುವಳಿಯೊಂದನ್ನು ಬಿಟ್ಟರೆ, ಬಂಡಾಯದ ಸಂದರ್ಭದಲ್ಲಿ ಮಾತ್ರವೆಂದು ಹೇಳಬಹುದಾಗಿದೆ.

ಅನೇಕ ಜನಪರ ಸಂಸ್ಕೃತಿಗಳನ್ನು ಮೈಗೂಡಿಸಿಕೊಂಡು ಬೆಳೆದ ಬಂಡಾಯ ಸಾಹಿತ್ಯ ಪ್ರಮುಖವಾಗಿ ಮಾನವೀಯತೆಯನ್ನು, ಸಮಾನತೆಯನ್ನು ಪ್ರಕಟಿಸಿದೆ. ವಿವಿಧ ಜನಾಂಗಗಳಿಂದ, ಬೇರೆ ಬೇರೆ ನೆಲೆಗಳಿಂದ ಬೆಳೆದುಬಂದ ಬಂಡಾಯ ಸಾಹಿತಿಗಳು ತಮ್ಮ ಮಿತಿಗಳನ್ನು ಮೊದಲು ಸ್ಪಷ್ಟಪಡಿಸಿಕೊಳ್ಳುತ್ತ, ತಾವು ಬೆಳೆದು ಬಂದ ಜನಾಂಗದ ಸಂಸ್ಕೃತಿಯ ಜನವಿರೋಧಿ ನಿಲುವನ್ನು ಹೊರಗೆಡುವುತ್ತ ಒಟ್ಟಾರೆಯಾಗಿ ಜನಪರಸಂಸ್ಕೃತಿ ಬೆಳೆದು ನಿಲ್ಲಲು ಕಾರಣರಾಗಿದ್ದಾರೆ. ಬಂಡಾಯ ಚಳುವಳಿ ಹುಟ್ಟುವುದಕ್ಕಿಂತ ಮೊದಲು ದಲಿತರ ಬದುಕಿನ ಬಗೆಗೆ ಅನೇಕರು ಬರೆದಿದ್ದಾರೆ. ಕುವೆಂಪು, ಕಾರಂತರವರು ದಲಿತರ ಬಗೆಗೆ ಬರೆಯುವುದಕ್ಕೂ ಮಹಾದೇವ, ಮನಜ, ಮಾಲಗತ್ತಿ ದಲಿತರ ಬಗೆಗೆ ಬರೆಯುವುದಕ್ಕೂ ಬಹಳ ಅಂತರವಿದೆ. ದಲಿತರ ಬದುಕನ್ನು ಕೇವಲ ವಿಜೃಂಭಿಸದೆ, ಅಥವಾ ಕೇವಲ ಸಮೀಕರಿಸದೆ, ದಲಿತರ ನೋವು ಶೋಷಣೆಯ ಜತೆಗೆ ಅವರ ಸ್ವಾರ್ಥ, ಸಣ್ಣತನ - ಮೌಢ್ಯತೆಯಂತಹ ವಿಷಯಗಳನ್ನು ಎತ್ತಿ ಹೇಳುವ ನೈತಿಕ ಅಧಿಕಾರ ಈ ದಲಿತ ಜನಾಂಗದಿಂದ ಬಂದ ಲೇಖಕರಿಗಿದೆ. ಮಹಾದೇವ ಅವರ ಒಡಲಾಳ, ಮನಜ ರವರ- ಮಾಗಿ, ಮಾಲಗತ್ತಿಯವರ - ಕಾರ್ಯದಂತಹ ಕೃತಿಗಳು ಈ ಮಾತಿಗೆ ಸ್ಪಷ್ಟ ಉದಾಹರಣೆಗಳಾಗಿವೆ. ಇದೇ ರೀತಿ ಮುಸ್ಲಿಂ ಜನಾಂಗದ ಮೌಢ್ಯತೆ ದರ್ಪ ದೌರ್ಜನ್ಯಗಳನ್ನು ಆ ಜನಾಂಗದಿಂದ ಬಂದ ಬೋಳುವಾರು, ಕಟ್ಟಾಡಿ, ಸಾರಾ ಅಬೂಬಕರ್, ಬಾನು ಮುಸ್ತಾಕ್ ಮುಂತಾದ ಲೇಖಕರು ತಮ್ಮ ಕಥೆ ಕಾದಂಬರಿಗಳಲ್ಲಿ ಪ್ರತಿಭಟಿಸಿದ್ದಾರೆ. ಇದೇ ರೀತಿ ಕುದರೆಮೋತಿ ಪ್ರಕರಣವನ್ನು ವಿರೋಧಿಸುತ್ತ ತಮ್ಮ ಕೃತಿಗಳಲ್ಲಿ ಬಸವಣ್ಣನ ಮಾನವೀಯತೆಯನ್ನು ಪ್ರಕಟಿಸುತ್ತ ಬಂದಿರುವ ಚಂಪಾ, ಬೆಟ್ಟದೂರ, ಸಬರದ, ನೀರಮಾನ್ವಿ ಮುಂತಾದ ಲೇಖಕರು ಮೇಲು ವರ್ಗದವರ ಅಹಂಭಾವವನ್ನು ಪುಡಿ ಮಾಡಿದ್ದಾರೆ. ಜಿ. ಎಚ್. ರಾಘವೇಂದ್ರ, ಸತೀಶ ಕುಲಕರ್ಣಿ, ರವಿ ಬೆಳಗೆರೆಯಂತಹ

ಲೇಖಕರು ವೈದಿಕ ಸಂಸ್ಕೃತಿಯ ಸೋಗಲಾಡಿತನಗಳನ್ನೆಲ್ಲ ಬಯಲಿಗೆಳೆದಿದ್ದಾರೆ. ತಾನು ಬೆಳೆದು ಬಂದ ಜನಾಂಗ -ಜಾತಿ - ಪರಿಸರದ ಜನವಿರೋಧಿ ನಿಲುವುಗಳನ್ನು ವಿರೋಧಿಸುತ್ತ ಜನಪರ ಸಂಸ್ಕೃತಿಯನ್ನು ಹುಟ್ಟುಹಾಕುವ ಉದ್ದೇಶ ಎಲ್ಲ ಬಂಡಾಯ ಲೇಖಕರಲ್ಲಿ ಕಾಣುತ್ತದೆ. ಈ ವಿಚಾರವನ್ನು ಅವರ ಕೃತಿಗಳ ಮೂಲಕ ಅನ್ವಯಿಸಿಯೇ ಹೇಳಬಹುದು. ಇದು ಬಂಡಾಯ ಸಾಹಿತ್ಯ ಚಳುವಳಿಯ ದೊಡ್ಡ ಸಾಧನೆ, ವಚನಕಾರರಲ್ಲಿದ್ದ ಆತ್ಮವಿಮರ್ಶೆ ಮತ್ತು ವಸ್ತು ವೈವಿಧ್ಯತೆಯನ್ನು ಬಂಡಾಯದ ಲೇಖಕರಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಮೊಟ್ಟ ಮೊದಲ ಬಾರಿಗೆ ಇಷ್ಟೊಂದು ಸಂಖ್ಯೆಯಲ್ಲಿ ಮಹಿಳೆಯರು ಸಾಹಿತ್ಯ ಕ್ಷೇತ್ರ ಪ್ರವೇಶಿಸಿದ್ದು ಬಂಡಾಯ ಚಳುವಳಿಯ ಸಂದರ್ಭದಲ್ಲೆಂದು ಸ್ಪಷ್ಟವಾಗಿ ಹೇಳಬಹುದು. ಹೀಗೆ ಅಸಂಖ್ಯಾತ ಮಹಿಳೆಯರು ಲೇಖನಿ ಹಿಡಿದ ಸಂದರ್ಭದಲ್ಲಿ ಇಲ್ಲಿನ ಅಸಮಾನತೆ ಶೋಷಣೆಯನ್ನು ಕಂಡು ಪುರುಷಪ್ರಧಾನ ಸಂಸ್ಕೃತಿಯನ್ನು ಟೀಕಿಸುವುದು ಸಹಜ. ಆದರೆ ಬಂಡಾಯ ಸಂಘಟನೆ ಇವರನ್ನು ಕೇವಲ ಸ್ತ್ರೀವಾದಿಗಳನ್ನಾಗಿ ಮಾಡಿದೆ ಮನುಷ್ಯರ ಮೂಲಭೂತ ಸಮಸ್ಯೆಗಳತ್ತ ಕರೆದೊಯ್ದಿದೆ. ಬಂಡಾಯದ ಆಶಯವನ್ನು ತಿಳಿಯದ ಕೆಲವು ಮಹಿಳೆಯರು ತಮ್ಮ ಕೃತಿಗಳಲ್ಲಿ ಸದಾ ಪುರುಷರನ್ನು ದ್ವೇಷಿಸುವುದರಲ್ಲೇ ತಮ್ಮ ಸಮಯವನ್ನು ಕಳೆಯುತ್ತಿರುತ್ತಾರೆ. ಕೇವಲ ಪುರುಷ ದ್ವೇಷದಿಂದ ಇಲ್ಲಿ ಸಮಾನತೆ ತರಲು ಸಾಧ್ಯವಿಲ್ಲ ವೆಂಬುದನ್ನು ಮನಗಂಡ ಸಂಘಟನೆ ಈ ಪುರುಷ ಮಹಿಳೆಯೆಂಬ ವಾದಕ್ಕಿಂತ ಮುಖ್ಯವಾದ ಹಸಿವು -ಬಡತನ- ಅಸಮಾನತೆಗಳನ್ನು ತೋರಿಸುತ್ತ ಮೂಲಭೂತ ಸಮಸ್ಯೆಗಳತ್ತ ಕರೆದೊಯ್ದಿದೆ.

ಇದೇ ರೀತಿ, ಕೇವಲ ಉಚ್ಚಜಾತಿಯವರನ್ನು ಟೀಕಿಸುವುದೇ ಸಾಧನೆಯೆಂದು ತಿಳಿದವರ ಮಾತನ್ನೂ ಸಂಘಟನೆ ಅಲ್ಲಗಳೆದಿದೆ. ಬಂಡಾಯ ಚಳುವಳಿ ಯಾವುದೇ ಒಂದು ಜಾತಿಯ, ಒಂದು ಧರ್ಮದ, ಒಂದು ಲಿಂಗದ ವಿರೋಧಿಯಲ್ಲ. ಅಸಮಾನತೆಯನ್ನು ಹುಟ್ಟು ಹಾಕಿದ, ಜಾತಿವ್ಯವಸ್ಥೆಯನ್ನು ನಿರ್ಮಿಸಿದ, ಮೌಢ್ಯತೆಯನ್ನು ಬೆಳೆಸಿದ, ಅಧಿಕಾರಶಾಹಿಯನ್ನು ಜೀವಂತ ವಾಗಿಟ್ಟ ಈ ವ್ಯವಸ್ಥೆಯ ಜನವಿರೋಧಿ ನಿಲುವನ್ನು ಬಂಡಾಯ ಚಳುವಳಿ ವಿರೋಧಿಸುತ್ತಲೇ ಹೊಸ ವ್ಯವಸ್ಥೆಯ ಹುಟ್ಟಿಗೆ ಹಾತೊರೆಯುತ್ತದೆ. ಅಂತೆಯೇ ಬುದ್ಧ - ಬಸವ - ಅಂಬೇಡಕರ್ ರಂತವರನ್ನು ಗೌರವದಿಂದ ಕಾಣುವ ಈ ಚಳುವಳಿ, ಲೋಹಿಯಾ, ಮಾರ್ಕ್ಸ್‌ರಂತವರ ಸಿದ್ಧಾಂತಗಳಲ್ಲಿ, ನಂಬಿಕೆಯಿಟ್ಟ ಈ ಚಳುವಳಿ ಎಂದಿಗೂ ಹಿಂಸೆಯನ್ನು, ದ್ವೇಷವನ್ನು, ಸೇಡನ್ನು ಪ್ರತಿಪಾದಿಸುವದಿಲ್ಲ.

ಎಲ್ಲ ಮನುಷ್ಯರನ್ನು ಗಾಢವಾಗಿ ಪ್ರೀತಿಸುವ ಈ ಚಳುವಳಿ ಮಾನವೀಯತೆಗೆ ಅತ್ಯಂತ ಮಹತ್ವದ ಸ್ಥಾನವನ್ನು ನೀಡಿದೆ. ಬರಗೂರ, ನಾಗವಾರ, ಕುಂವೀ, ಬೆಸಗರಹಳ್ಳಿ, ಬೋಳುವಾರು, ಸಾರಾ, ಬಾನು, ಮಹದೇವ, ಮನಜ, ಮುಳ್ಳೂರ ನಾಗರಾಜ, ಮಾಲಗತ್ತಿ, ಲಲಿತಾ ನಾಯಕ, ವಾಲೀಕಾರ, ನೀರಮಾನ್ವಿ ಈ ಮೊದಲಾದ ಲೇಖಕರ ಕಥೆ ಕಾದಂಬರಿಗಳಲ್ಲಿ ನಾವು ಮುಖ್ಯವಾಗಿ ಕಾಣುವದು ತುಡಿಯುತ್ತಿರುವ ಮಾನವೀಯತೆಯನ್ನು , `ಒಡಲಾಳದ' ತಾಯವ್ವ, `ಮಾಗಿ 'ಯ- ಮಾಗವ್ವ, `ಕಾರ್ಯ ' ದ- ಬಂಗಾರವ್ವ ಮಾನವೀಯತೆಯನ್ನು ಬೆಳೆಸುವ ಜೀವನ ಪ್ರೀತಿಯನ್ನು ಹುಟ್ಟುಹಾಕುವ ಜೀವಂತ ಪಾತ್ರಗಳಾಗಿವೆ.

ವಸ್ತುವಿನ ದೃಷ್ಟಿಯಿಂದಂತೂ ಬಂಡಾಯ ಸಾಹಿತಿಗಳು ಬಹಳ ನಿಖರವಾಗಿ, ಸ್ಪಷ್ಟವಾಗಿ ಬರೆಯಬಲ್ಲಂತವರು. ಆಶಯ ಮತ್ತು ವಾಸ್ತವಗಳ ನಡುವಿರುವ ಬಿಕ್ಕಟ್ಟನ್ನು ಎದುರಿಸಿದ `ಮರಣ ಮಂಡಲ ಮಧ್ಯದೊಳಗೆ'` ಒಡಲಾಳ'`, ಬೆಂಕಿ'`ಮಾಗಿ'`ಕಪ್ಪು,' `ಜಿಹಾದ್',` ಸಹನಾ,'`ಹುಲಿಗೆಮ್ಮ' ಮೊದಲಾದ ಕಾದಂಬರಿಗಳು ಬಂಡಾಯದ ಪ್ರಮುಖ ಕೊಡುಗೆಗಳು. `ಕುಸುಮಬಾಲೆ ' ಸಾಹಿತ್ಯದ ಆಕೃತಿಗೆ ಸಂಬಂಧಿಸಿದಂತೆ ಒಂದು ಹೊಸ ಪ್ರಯತ್ನ.

ನಾಟಕ ಸಾಹಿತ್ಯದಲ್ಲಿ, ಕಥೆ - ಕಾದಂಬರಿಗಳಲ್ಲಿ ನಡೆದಷ್ಟು ಕೃಷಿ ನಡೆದಿಲ್ಲ. ಲಿಂಗದೇವರು ಹಳೆಮನೆಯವರ ಚಿಕ್ಕದೇವ ಭೂಪ- ಹೈದರ್, ಸಿದ್ಧಲಿಂಗಯ್ಯರವರ ಏಕಲವ್ಯ - ಪಂಚಮ, ಎಚ್. ಎಸ್. ಶಿವಪ್ರಕಾಶರವರ ಮಹಾಚೈತ್ರ -ಟಿಪ್ಪೂ ; ಚಂಪಾ ಅವರ ಬೀದಿನಾಟಕಗಳು, ವಾಲೀಕಾರರ ಜೋಗತಿ - ಸೋಮ್ಯಾಯ ಭೀಮ್ಯಾಯ ಡಪ್ಪಿನಾಟ, ಸಬರದರ ನರಬಲಿ -ಬೆಳ್ಳಕ್ಕಿ ಸಾಲು, ಜಿ. ಎಚ್. ರಾಘವೇಂದ್ರರ `ಬಂಗಾರದ ಕೊಡ ' ಈ ಮುಂತಾದವುಗಳನ್ನು ಬಂಡಾಯದ ಪ್ರಮುಖ ನಾಟಕಗಳೆಂದೆನ್ನಬಹುದು.

ಕಾವ್ಯದಲ್ಲಿ ಬಂಡಾಯದ ಕೊಡುಗೆ ಗಮನಾರ್ಹವಾದುದಾಗಿದೆ. ಇವರ ಕಾವ್ಯ ಬೀದಿಗೆ ಬರುವದರ ಮೂಲಕ ಜನಮನದಲ್ಲಿ ತೀವ್ರ ಪರಿಣಾಮವನ್ನುಂಟುಮಾಡಿದೆ. ಭಾಷಾ ಚಳುವಳಿ, ರೈತಚಳುವಳಿ, ದಲಿತ ಚಳುವಳಿ, ಮಹಿಳಾ ಚಳುವಳಿಗಳಲ್ಲಿ ಬಂಡಾಯ ಕಾವ್ಯ ನಿಜಕ್ಕೂ ಖಡ್ಗವಾಗಿ ಝಳಪಿಸಿದೆ. ಶೋಷಿತರ ನೊಂದವರ ದನಿಯಾಗಿ ಮೊಳಗಿದೆ. ಚಂಪಾ, ಸಿದ್ಧಲಿಂಗಯ್ಯ, ಬರಗೂರು, ದರ್ಗಾ, ವಾಲೀಕಾರ, ಬೆಟ್ಟದೂರ, ನಾಗವಾರ, ಸಬರದ, ಶಿವಪ್ರಕಾಶ, ಲಲಿತಾ ನಾಯಕ, ಸುಕನ್ಯಾ ಮಾರುತಿ ಈ ಮುಂತಾದ ಕವಿಗಳು ಕನ್ನಡ ಕಾವ್ಯಕ್ಕೆ ಬಂಡಾಯದ ಮೂಲಕ ಹೊಸ ತಿರುವು ಕೊಟ್ಟಿದ್ದಾರೆ. ಸಂಘಟನೆಯೊಳಗಿರದಿದ್ದರೂ ಬಂಡಾಯದ ಆಶಯವನ್ನೇ ಪ್ರಕಟಿಸುವ ಚಿ. ಸರ್ವಮಂಗಳ ಎಚ್. ಎಸ್. ಮುಕ್ತಾಯಕ್ಕ, ಶಶಿಕಲಾ ವೀರಯ್ಯಸ್ವಾಮಿ, ಎಂ. ಆರ್. ಕಮಲ ಗಮನಾರ್ಹ ಕವಿಯತ್ರಿಯರಾಗಿ ಬೆಳೆದು ನಿಂತಿದ್ದಾರೆ. ಅಡಿಗ, ಜಿ. ಎಸ್. ಎಸ್. ಎಕ್ಕುಂಡಿಯವರಂತಹ ಹಿರಿಯ ಕವಿಗಳ ಮೇಲೂ ಬಂಡಾಯದ ಪ್ರಭಾವವಾಗಿದೆ.`` ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕುತಿ '' ಎಂದು ಹಾಡುವದರ ಬದಲು ಅಡಿಗರು ``ಗುರುವಿನ ಸಮಾನನಾಗುವ ತನಕ ದೊರೆಯದಣ್ಣ ಶಾಂತಿ '' ಎಂದು ಹಾಡಿದ್ದಾರೆ.

ಕಾವ್ಯದಲ್ಲಿ ಜಾನಪದ ಸತ್ವವನ್ನು ಬೇಂದ್ರೆ, ಕಂಬಾರರು ಬಳಸಿಕೊಂಡದ್ದಕ್ಕೂ ; ಇಂದು ಅದನ್ನೇ ಸಿದ್ಧಲಿಂಗಯ್ಯ, ವಾಲೀಕಾರರಂತಹ ಬಂಡಾಯ ಕವಿಗಳು ಬಳಸಿಕೊಳ್ಳುವದಕ್ಕೂ ತುಂಬಾ ಅಂತರವಿದೆ. ಜಾನಪದ ಭಾಷೆಯ ಅಂತಃಸತ್ವವನ್ನು ಬೇಂದ್ರೆಯವರು ನೈಜತೆಗಾಗಿ ದುಡಿಸಿಕೊಂಡರೆ, ಕಂಬಾರರು ವಿಜೃಂಭಣೆಗಾಗಿ ಬಳಸಿಕೊಂಡಿದ್ದಾರೆ. ಸಿದ್ಧಲಿಂಗಯ್ಯ, ವಾಲೀಕಾರರಲ್ಲಿ ಅದು ಜನಪದದ ಜೀವಾಳವಾಗಿ ಸಮಾನತೆಯ ಪರಿಕರವಾಗಿ ಬಳಕೆಯಾಗಿದೆ. ಬಂಡಾಯದ ಇನ್ನೂ ಅನೇಕ ಕವಿಗಳು ಜನಪದ ಭಾಷೆ ಹಾಗೂ ಅದರ ಪ್ರತಿಮೆ ಸಂಕೇತಗಳ ಮೂಲಕ ಸಮಕಾಲೀನ ಸವಾಲುಗಳನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ತ್ರಿಪದಿ, ಚೌಪದಿ, ಲಾವಣಿ, ಗೀಗೀಪದ, ಡೊಳ್ಳಿನಹಾಡು, ಬುಲಾಯಿಹಾಡು, ಭಜನಿಪದ, ಚೌಡಿಕಿಪದ

ಈ ಮುಂತಾದ ಜನಪದ ಕಾವ್ಯದ ಆಕೃತಿಗಳನ್ನು ಅತ್ಯಂತ ಸಮರ್ಥವಾಗಿ ಬಳಸಿಕೊಂಡ ಬಂಡಾಯದ ಕವಿಗಳು ಆ ಮೂಲಕ ಹೊಸ ಆಲೋಚನೆಗಳನ್ನು, ಜಲ್ವಂತ ಸಮಸ್ಯೆಗಳನ್ನು ಪ್ರಕಟಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕಾವ್ಯದಲ್ಲಿ ಗೇಯತೆಯನ್ನು ಸಾಧಿಸಿ ತುಂಬಾ ಪರಿಣಾಮವನ್ನುಂಟು ಮಾಡಿದ್ದಾರೆ. ``ಕಪ್ಪು ಕಾಡಿನ ಹಾಡು '' ``ಧಿಕ್ಕಾರದ ಹಾಡುಗಳು '' ``ದನಿ ಎತ್ತಿ ಹಾಡೇನ '' ಈ ಮುಂತಾದ ಹಾಡಿನ ಸಂಕಲನಗಳು ನವೋದಯದ ಲಯವನ್ನು, ಜಾನಪದದ ಗೇಯತೆಯನ್ನು ಉಳಿಸಿಕೊಂಡು ಜ್ವಲಂತ ಸಮಸ್ಯೆಗಳನ್ನು ಸ್ಫೋಟಿಸುತ್ತವೆ.

ಬಂಡಾಯಕಾವ್ಯ ತನ್ನ ಎರಡನೇ ಹಂತದಲ್ಲಿ ಇನ್ನೂ ಆಶಾದಾಯಕವಾದ ಬೆಳವಣಿಗೆಯನ್ನು ಪ್ರಕಟಿಸಿದೆ. ಶಂಕರ ಕಟಗಿ, ನಜೀರ ಚಂದಾವರ, ಸತ್ಯಾನಂದ ಪಾತ್ರೋಟ, ಆರ್. ಜಿ. ಹಳ್ಳಿ, ನಾಗರಾಜ, ಗಂಗಾರಾಂ ಚಂಡಾಳ ಈ ಮುಂತಾದ ಯುವ ಕವಿಗಳು ಇಂದು ಕೃತಿಯ ವಸ್ತುವಿನ ಜತೆಗೆ ಆಕೃತಿಯ ಬಗೆಗೆ ಹೆಚ್ಚು ಕಾಳಜಿವಹಿಸುತ್ತಿರುವದು, ಪ್ರತಿಭಟನೆಯ ಸೂಕ್ಷ್ಮತೆಯನ್ನು ಕಾವ್ಯದಲ್ಲಿ ದಾಖಲಿಸುತ್ತಿರುವದು ಗಮನಾರ್ಹ ಸಂಗತಿಯೆನಿಸುತ್ತದೆ.

ನಿಮ್ಮಲ್ಲಿ ಮಹಾಕವಿಯೇ ಇಲ್ಲವಲ್ಲ ? ಎಂಬುದು ಬಂಡಾಯದ ಎದುರಿಗಿರುವ ದೊಡ್ಡ ಪ್ರಶ್ನೆ. ಮಹಾಕವಿ ಪರಂಪರೆಯನ್ನು ಅಳಿಸಿ ಹಾಕಿರುವುದೇ ಬಂಡಾಯದ ದೊಡ್ಡ ಸಾಧನೆಯೆಂಬುದು ನಮ್ಮ ಸ್ಪಷ್ಟ ಉತ್ತರ. ಈ ಒಂದು ದಶಕವನ್ನು ಅವಲೋಕಿಸಿದಾಗ ಅನೇಕ ಮಹತ್ವದ ಬಂಡಾಯ ಕವಿಗಳು ಹೊಸ ಚರಿತ್ರೆ ನಿರ್ಮಿಸುತ್ತಿರುವದು ಎದ್ದು ಕಾಣುವ ಅಂಶವಾಗಿದೆ. ನಾಯಕ ಸಂಸ್ಕೃತಿಯನ್ನು ತಿರಸ್ಕರಿಸಿ ಕಾವ್ಯವನ್ನು ಜನಸಮುದಾಯದ ನಡುವೆ ಬೆಳೆಸಿದ್ದು ನಿಜಕ್ಕೂ ದೊಡ್ಡ ಸಾಧನೆಯೇ ಆಗಿದೆ. ವಚನಕಾರರ ಪರಂಪರೆಯಲ್ಲಿ ಯಾವೊಬ್ಬ ಮಹಾ ವಚನಕಾರನೆಂಬುವ ಬಿರುದುಳ್ಳವರಿಲ್ಲ. ಪ್ರತಿಯೊಬ್ಬ ವಚನಕಾರನೂ ಅಷ್ಟೇ ಮುಖ್ಯವಾಗುತ್ತಾನೆ. ಅದರಂತೆ ಬಂಡಾಯ ಕವಿಗಳಲ್ಲಿ ಪ್ರತಿಯೊಬ್ಬರ ಸಂವೇದನೆಯೂ ಅಷ್ಟೇ ಮುಖ್ಯವಾಗುತ್ತದೆ. ಚಳುವಳಿಯ ಸಾಹಿತ್ಯವನ್ನು ನೋಡುವ ಸರಿಯಾದ ದೃಷ್ಟಿ ಲಭಿಸಿದರೆ ಇಂತಹ ಪ್ರಶ್ನೆಗಳೇ ಏಳಲಾರವು.

``ಸಾಹಿತ್ಯ ವಿಮರ್ಶೆ '' ಯಲ್ಲಿ ಬಂಡಾಯದ ಬೆಳವಣಿಗೆ ಆಶಾದಾಯಕವಾಗಿದೆ. ಡಿ. ಆರ್. ನಾಗರಾಜ, ಆಕ್ಕಿ ಮಣಿಪಾಲ, ಬರಗೂರು ರಾಮಚಂದ್ರಪ್ಪ, ಬಿ. ಕೃಷ್ಣಮೂರ್ತಿ, ಕಾಳೇಗೌಡ ನಾಗವಾರ ಈ ಮೊದಲಾದವರಿಂದ ಪ್ರಾರಂಭವಾದ ಬಂಡಾಯದ ವಿಮರ್ಶೆ ಈಗ ಬಂಡಾಯದ ಎರಡನೇ ದಶಕದಲ್ಲಿ ಹೊಸ ಆಯಾಮಗಳನ್ನು ಪಡೆದುಕೊಂಡಿದೆ. ನವೋದಯ, ನವ್ಯಕಾವ್ಯವನ್ನು ವಿಮರ್ಶಿಸಿದ ಹಿಂದಿನ ವಿಮರ್ಶಕರು ಅದೇ ಪಾಶ್ಚಾತ್ಯ ಮಾನದಂಡಗಳಿಂದ ಬಂಡಾಯ ಸಾಹಿತ್ಯವನ್ನು ವಿಮರ್ಶಿಸುತ್ತಾ ಬಂಡಾಯಕ್ಕೆ ನ್ಯಾಯ ಒದಗಿಸದೇ ಹೋದಾಗ ಪುರುಷೋತ್ತಮ ಬಿಳಿಮಲೆ, ರಹಿಮತ್ ತರಿಕೆರೆ, ಮನಜ, ಸಬರದ, ಶಿವರಾಮ ಕಾಡನಕುಪ್ಪೆ, ವಿಜಯಾದಬ್ಬೆ ಈ ಮುಂತಾದ ವಿಮರ್ಶಕರು ಇಂದು ಬಂಡಾಯ ಸಾಹಿತ್ಯದ ನಿಜವಾದ ಮೌಲ್ಯಮಾಪನದಲ್ಲಿ ತೊಡಗಿದ್ದಾರೆ.

೧೯೭೯ರಲ್ಲಿ ಬಂಡಾಯ ಸಾಹಿತ್ಯ ಚಳುವಳಿ ಪ್ರಾರಂಭವಾದಾಗ ಅಲ್ಲಿ ಬಹಳಷ್ಟು ಸಪ್ಪಳ ಕೂಗು ಕೇಳಿಸುತ್ತಿತ್ತು. ಇಂದು ಆ ಪ್ರತಿಭಟನೆ ಸೂಕ್ಷ್ಮವಾಗತೊಡಗಿದೆ. ಸಿಟ್ಟು -ಸಪ್ಪಳಗಳ

ಮೂಲಕ ಪ್ರಾರಂಭದಲ್ಲಿ ತನ್ನನ್ನು ಗುರುತಿಸಿಕೊಂಡಿವೆ. ಈ ಚಳುವಳಿ ಇಂದು ಬದುಕಿನ ಒಳನೋಟಗಳತ್ತ ಗಮನ ಹರಿಸಿ, ಮೂಲಭೂತ ಸಮಸ್ಯೆಗಳತ್ತ ಮುಖಮಾಡಿದೆ. ಕಲೆಯನ್ನು ಅಲ್ಲಗಳೆಯದೆ, ಕಲೆಗಾಗಿ ಕಲೆಯನ್ನು ಸೃಷ್ಟಿಸಿದೆ, ಬದುಕಿನ ಅನಿವಾರ್ಯತೆಯಲ್ಲಿ ಹುಟ್ಟುವ ಅಕ್ಷರಗಳಿಗೆ ಕಲೆಯ ರೂಪಕೊಡುತ್ತಲೇ ವ್ಯವಸ್ಥೆಯನ್ನು ಸ್ಪಷ್ಟವಾಗಿ ಗುರುತಿಸಿರುವ ಬಂಡಾಯದ ಲೇಖಕರು ಈ ಒಂದು ದಶಕದಲ್ಲಿಯೇ ಬಹುಮುಖ್ಯವಾದುದನ್ನು ಸಾಧಿಸಿದ್ದಾರೆ. ಬಂಡಾಯ ಸಾಹಿತ್ಯದಲ್ಲಿ ಸಿಟ್ಟಿನ ಅಂಶ ಹೆಚ್ಚಾಗಿ ಕಂಡರೂ ಅದು ಸೇಡಿನ ಮಟ್ಟಕ್ಕೆ ಬೆಳೆಯುವುದಿಲ್ಲವೆಂಬುದು ಬಹಳ ಮುಖ್ಯವಾದ ಸಂಗತಿಯಾಗುತ್ತದೆ. ಅದೇ ರೀತಿ ಇಲ್ಲಿಯ ಆಕ್ರೋಶ ಎಷ್ಟೇ ಆವೇಶಕ್ಕೊಳಗಾದರೂ ಅದು ದ್ವೇಷವಾಗಿ ಪರಿಣಮಿಸುವುದಿಲ್ಲ ವೆಂಬುದು ಅಷ್ಟೇ ಮುಖ್ಯವಾಗುತ್ತದೆ. ಶತಮಾನಗಳಿಂದ ಶೋಷಣೆಗೊಳಗಾದ ಜನತೆಯ ಪ್ರತಿನಿಧಿಯಾದ ಇಲ್ಲಿಯ ಲೇಖಕನಿಗೆ ಸಿಟ್ಟು ಮತ್ತು ಆಕ್ರೋಶ ಇರುವುದು ಸಹಜ. ಆದರೆ ಈತ ಸಾಹಿತಿಯೂ ಆಗಿರುವುದರಿಂದ ಮಾನವೀಯತೆಯ ಹರಿಕಾರನಾಗುತ್ತಾನೆ, ಕೂಡಿ ಬದುಕುವ ವಿಚಾರಕ್ಕೆ ಪ್ರಾಮುಖ್ಯತೆ ಕೊಡುತ್ತಾನೆ. ಇಲ್ಲಿಯ ಸಿಟ್ಟು ಆಕ್ರೋಶಗಳು ವ್ಯವಸ್ಥೆಯ ಅಸಮಾನತೆಯನ್ನು ಸ್ಪಷ್ಟಪಡಿಸುತ್ತಲೇ, ಪ್ರತಿಭಟನೆಯ ಹೆಜ್ಜೆಗಳಾಗಿ ಕಾಣಿಸುತ್ತವೆಯೇ ಹೊರತು ಹಾಗೆ ಶೋಷಣೆ ಮಾಡಿದವರನ್ನು ಸರ್ವನಾಶ ಮಾಡುವ ಪ್ರತೀಕಾರ ಮನೋಭಾವ ವನ್ನು ತಾಳುವುದಿಲ್ಲ. ಇಂತಹ ಒಂದು ಎಚ್ಚರ ಮತ್ತು ಜವಾಬ್ದಾರಿ ಬಂಡಾಯ ಸಾಹಿತ್ಯದಿಂದ ಮಾತ್ರ ಸಾಧ್ಯವಾಗಿದೆ.

ಈ ಒಂದು ದಶಕದಲ್ಲಿಯೇ ಈ ಚಳುವಳಿಯನ್ನು ಇದರ ಸಾಹಿತ್ಯವನ್ನು ಒರೆಗೆ ಹಚ್ಚಿ ನೋಡುವುದು ಅಷ್ಟೊಂದು ಸೂಕ್ತವಾಗಲಾರದು. ಇದು ಬೆಳೆಯುತ್ತಿರುವ ಚಳುವಳಿಯಾದ್ದ ರಿಂದ, ಇನ್ನೂ ಅನೇಕ ಮಹತ್ವದ ಕೃತಿಗಳು ಈ ಚಳುವಳಿಯ ಮೂಲಕ ಬರುತ್ತಲಿರುವುದ ರಿಂದ ಈಗಲೇ ಇದರ ಸಾಧ್ಯತೆ ಮತ್ತು ಮಿತಿಗಳನ್ನು ಕುರಿತು ಹೀಗೆ ಎಂದು ನಿರ್ದಿಷ್ಟವಾಗಿ ಹೇಳಲಿಕ್ಕಾಗುವುದಿಲ್ಲ.

ಬಂಡಾಯ ಸಾಹಿತ್ಯ ತನ್ನದೇ ಸಾಹಿತ್ಯರೂಪಗಳನ್ನು ಸಿದ್ಧಪಡಿಸಿಕೊಳ್ಳುತ್ತಿರುವುದನ್ನು ಈ ಒಂದು ದಶಕದಲ್ಲಿ ಬಂದ ಕೃತಿಗಳ ಮೂಲಕ ಗಮನಿಸಬಹುದು. ನವೋದಯದವರು `ಭಾವಗೀತೆ ', ನವ್ಯದವರು `ಮುಕ್ತಛಂದಸ್ಸು ' ಕೊಟ್ಟಂತೆ ಬಂಡಾಯ ಸಾಹಿತಿಗಳು ಜನಪದ ಮಟ್ಟುಗಳನ್ನು ಬಳಸಿಕೊಂಡು ಹೊಸರೀತಿಯ ``ಹಾಡು''ಗಳನ್ನು ಕೊಟ್ಟಿದ್ದಾರೆ. ಸಿದ್ಧಲಿಂಗಯ್ಯ, ವಾಲೀಕಾರ, ಸಬರದ, ಕಟಗಿ, ಅಮರಚಿಂತ ಈ ಮೊದಲಾದ ಕವಿಗಳ ಹಾಡುಗಳೇ ಇದಕ್ಕೆ ಸಾಕ್ಷಿಯಾಗಿವೆ. ಕಾದಂಬರಿ ರೂಪದಲ್ಲಿ ಒಂದು ಹೊಸ ಸಾಧ್ಯತೆ ಇಲ್ಲಿ ಕಾಣಿಸುತ್ತದೆ. ದೇವನೂರ ಮಹಾದೇವರ `ಒಡಲಾಳ'' ಕುಸುಮಬಾಲೆ', ಮಾಲಗತ್ತಿಯವರ `ಕಾರ್ಯ',ಕುಂ. ವೀರಭದ್ರಪ್ಪನವರ `ಬೇಲಿ ಮತ್ತು ಹೊಲ 'ಬರಗೂರು ರಾಮಚಂದ್ರಪ್ಪ ನವರ `ಭರತನಗರಿ ' ಈ ಮುಂತಾದ ಕಾದಂಬರಿಗಳನ್ನು ಉಲ್ಲೇಖಿಸಬಹುದು.

ಸಣ್ಣಕತೆಗಿಂತ ದೊಡ್ಡದಾದ, ಸಾಮಾನ್ಯವಾದ ಕಾದಂಬರಿಗಿಂತ ಸಣ್ಣದಾದ ಈ ಸಾಹಿತ್ಯರೂಪ ಕೇವಲ ಆಕಾರದಿಂದ ಮಾತ್ರ ಭಿನ್ನವಾಗಿರದೆ, ಅಭಿವ್ಯಕ್ತಿಯ ಧಾಟಿಯಲ್ಲಿಯೇ ವಿನೂತನ ಲಕ್ಷಣಗಳನ್ನೊಳಗೊಂಡಿದೆ. ಕಥಾವಸ್ತುವೇ ತನಗೆ ಅನುರೂಪವಾದ ಆಕಾರವನ್ನು

ಹುಡುಕಿಕೊಳ್ಳುವಂತೆ, ಬಂಡಾಯ ಸಾಹಿತ್ಯ ಚಳುವಳಿಯ ಬೆಳವಣಿಗೆಯಲ್ಲಿ ಇಂತಹ ಅನೇಕ ಹೊಸ ಸಾಧ್ಯತೆಗಳು ಕಾಣಿಸಿಕೊಂಡಿರುವುದನ್ನು ಗಮನಿಸಬಹುದಾಗಿದೆ. ಇಂತಹ ವಿಷಯಗಳಿಗೆ ಸಂಬಂಧಿಸಿದಂತೆ ಚರ್ಚೆ ನಡೆಯಬೇಕಾಗಿದೆ.

ದಲಿತ ಸಂವೇದನೆಗಳಲ್ಲಿ ಸಿಟ್ಟು -ಆಕ್ರೋಶ ಕಂಡುಬಂದರೂ, ಅದು ಪ್ರತ್ಯೇಕ ವಾಗುವದಕ್ಕೆ ಅವಕಾಶಕೊಡದೆ ಸಮೂಹ ಹೋರಾಟದ ತೆಕ್ಕೆಯಲ್ಲಿ ಅದನ್ನು ತೆಗೆದುಕೊಳ್ಳುವ, ಮಹಿಳಾ ಸಂವೇದನೆಗಳಲ್ಲಿ ಪುರುಷರ ವಿರುದ್ಧವೇ ನೇರ ಪ್ರತಿಭಟನೆಯಿದ್ದರೂ ಕೂಡ ಅದನ್ನು ಕೇವಲ ಸ್ತ್ರೀವಾದಿಯನ್ನಾಗಿ ಬೆಳೆಸದೆ, ಮೂಲಭೂತ ಹೋರಾಟದತ್ತ ಆ ಧಾರೆಯನ್ನು ಕರೆದೊಯ್ಯುವ ಪ್ರಯತ್ನವನ್ನು ಬಂಡಾಯ ಚಳುವಳಿ ಮಾಡುತ್ತಲೇ ಬಂದಿದೆ. ಇದೇ ರೀತಿ ಮುಸ್ಲಿಂ ಸಂವೇದನೆಗಳ, ಗ್ರಾಮೀಣ ಸಂವೇದನೆಗಳ ಸೂಕ್ಷ್ಮ ಸಮಸ್ಯೆಗಳನ್ನು ಅರ್ಥೈಸಿ ಕೊಳ್ಳುತ್ತಲೇ ಈ ಎರಡೂ ಧಾರೆಗಳನ್ನು ಒಟ್ಟು ಚಳುವಳಿಯೊಳಗೆ ಕೂಡಿಸಿಕೊಂಡು ಮುನ್ನಡೆಯುತ್ತಿರುವುದು ಈ ಚಳುವಳಿಯ ವೈಶಿಷ್ಟ್ಯತೆಯಾಗಿದೆ. ಸ್ವವಿಮರ್ಶೆಯನ್ನು ಮೊದಲೇ ಕಲಿತುಕೊಂಡಿರುವ ಇಲ್ಲಿಯ ಲೇಖಕರು ಈಗಿರುವ ಕೆಲವು ಮಿತಿಗಳನ್ನು ಮೀರಿ ಬೆಳೆಯಬಲ್ಲರೆಂಬುದನ್ನು ಈಗಾಗಲೇ ತಮ್ಮ ಹೋರಾಟ ಮತ್ತು ಕೃತಿಗಳ ಮೂಲಕ ತೋರಿಸಿಕೊಟ್ಟಿದ್ದಾರೆ. ಈ ಎಲ್ಲ ಅನಿವಾರ್ಯತೆ ಹಾಗೂ ವಾಸ್ತವಗಳ ಹಿನ್ನೆಲೆಯಲ್ಲಿ ಈ ಚಳುವಳಿಯನ್ನು ಹಾಗೂ ಇದರಿಂದ ಹುಟ್ಟಿದ ಸಾಹಿತ್ಯವನ್ನು ಅಭ್ಯಸಿಸಬೇಕಾಗಿದೆ.

●

ರೂಪ ಜಿಜ್ಞಾಸೆ : ಕೆಲವು ಟಿಪ್ಪಣಿಗಳು

- ಎಚ್. ಎ. ನಾಗೇಶ

೧. ಈ ಟಿಪ್ಪಣಿಗಳನ್ನು ರೂಪ ಜಿಜ್ಞಾಸೆಯಿಂದ ಪ್ರಾರಂಭಿಸೋಣ. " ರೂಪ"ವೆಂದರೆ ಆಕೃತಿ, ಶರೀರ, ಅಂಗಾಂಗಗಳ ವಿನ್ಯಾಸ, ರಚನೆ, ವಸ್ತು ಪ್ರಕಟಗೊಳ್ಳುವ ರೀತಿ, ಪರಿ, ಪ್ರಕಾರ, ಶೈಲಿ ಹೀಗೆಲ್ಲ ಅರ್ಥವುಂಟು. ರೂಪ ಮುಖ್ಯವಾಗಿ ಆಕೃತಿಗೆ ಸಂಬಂಧಿಸಿದ್ದು, ಆಶಯಕ್ಕಲ್ಲ. ಶರೀರಕ್ಕೆ ಸಂಬಂಧಿಸಿದ್ದು, ಆತ್ಮಕ್ಕಲ್ಲ. ಅದು ಶೈಲಿ, ಒಳಗಣ ಸತ್ವವಲ್ಲ. ಆದರೆ ಹೀಗೆ ಹೇಳುವಾಗ ಒಳಗಿನದಕ್ಕೂ ಹೊರಗಿನದಕ್ಕೂ ಯಾವ ಸಂಬಂಧವೂ ಇಲ್ಲ ಅಥವಾ ಇರಬಾರದು ಎಂದು ತರ್ಕ ಹೂಡಬಾರದು. ಆದರೆ ಅರ್ಥಮಾಡಿಕೊಳ್ಳುವಲ್ಲಿ ಗೊಂದಲ ಉಂಟಾಗಬಾರದು ಎಂದು ಗ್ರಹಿಸಿ ಅದನ್ನು ಹೊರಗೆ ಕಾಣಿಸಿಕೊಳ್ಳುವ, ಅಭಿವ್ಯಕ್ತವಾಗುವ, ಪ್ರಕಟವಾಗುವ ಪರಿಯೆಂದು ಸರಳವಾಗಿ ವ್ಯಾಖ್ಯಾನಿಸಬಹುದು.

`ಹುಲಿಯ ರೂಪದ ಹಸು ' ಎಂದು ಯಾವುದನ್ನಾದರೂ ಅಥವಾ ಯಾರನ್ನಾದರೂ ವರ್ಣಿಸುತ್ತೇವೆ. ಇಲ್ಲಿ ಕಾಣುವ ದ್ವಂದ್ವ ಸ್ಪಷ್ಟ. ಒಂದು ಹೊರಗೆ ಕಾಣುವ ಗುಣ, ಸ್ವರೂಪ. ಇನ್ನೊಂದು ನಿಜವಾಗಿ ಒಳಗೆ ಇರುವ ಸತ್ವ. `ಹುಲಿಯ ರೂಪದ ಹಸು 'ಎಂದರೆ ಹೊರಗೆ ಹುಲಿ ಯಂತೆ ಕಂಡರೂ ಒಳಗೆ ಮೃದುತ್ವ, ಸಾಧುತನ ಇರುವುದನ್ನು ಒತ್ತಿಹೇಳುತ್ತದೆ. `ಆ ದೇವತೆ ಗಿಳಿಯ ರೂಪದಲ್ಲಿ ಕಾಣಿಸಿಕೊಂಡಳು ' ಎಂದರೆ ಹೊರಗೆ ಕಾಣುವ ಶರೀರ, ಆಕೃತಿ, ಅಂಗರಚನೆ ಗಿಳಿಯಂತಿದೆ. ಆದರೆ ಆ ಗಿಳಿ ನಿಜವಾಗಿ ಒಬ್ಬಳು ದೇವತೆ ಎಂಬರ್ಥ.

ನಾವು ಮೇಲೆ ಹೇಳಿದ ಉದಾಹರಣೆ, ಕೊಟ್ಟ ವಿವರಣೆ ತೀರ ಬಾಹ್ಯದಲ್ಲಿ ಸಮರ್ಪಕ ಎನ್ನಿಸಬಹುದು. ಆದರೆ ಇನ್ನೊಂದು ಹೆಜ್ಜೆ ಒಳಕ್ಕೆ ಇಳಿದರೆ ಈ ವಿವರಣೆ ಅಷ್ಟು ಸಮರ್ಪಕವೆನ್ನಿಸುವುದಿಲ್ಲ. ಉದಾಹರಣೆಗೆ, ಶಿಲ್ಪಿಯೊಬ್ಬ ಕಲ್ಲಿನಲ್ಲಿ ಒಂದು ಉಗ್ರ ಅಥವಾ ಸೌಮ್ಯ ಅಥವಾ ಮಂದಹಾಸಯುಕ್ತ ದೇವತೆಯ ವಿಗ್ರಹವನ್ನು ಕಟೆಯುತ್ತಾನೆ. ವಿಗ್ರಹವಾದ ಕಲ್ಲು ಈಗ ಕಲ್ಲಾಗಿ ಉಳಿದಿರುವುದಿಲ್ಲ. ಅದಕ್ಕೊಂದು ಹೆಚ್ಚಿನ ಆಯಾಮ ಪ್ರಾಪ್ತವಾಗುತ್ತದೆ. ಹೀಗೆ ರೂಪ ಎಂಬುದಕ್ಕೆ ಬಾಹ್ಯ ಶರೀರ, ಆಕೃತಿ, ಅಂಗರಚನೆಗಿಂತ ಹೆಚ್ಚಿನ ಅರ್ಥ ಬರುತ್ತದೆ. ರೂಪದ ಕಲ್ಪನೆಯಲ್ಲಿ ಬಾಹ್ಯ ಮತ್ತು ಆಂತರ್ಯಗಳೆರಡೂ ಮಿಳಿತವಾಗಿ ಬಿಡುತ್ತವೆ. ಸಾಹಿತ್ಯ, ಕಲೆಗಳಲ್ಲಿ ಆಗುವುದು ಹೀಗೆಯೇ.

೨. ಇನ್ನು `ಸಾಹಿತ್ಯ ರೂಪ ' ಎಂದರೇನು ? ಅದು ಒಂದು ಸಾಹಿತ್ಯ ಕೃತಿ ಪ್ರಕಟಗೊಳ್ಳುವ ಬಾಹ್ಯರಚನೆ. ಕೃತಿ ನೂರಾರು ಪುಟಗಳಷ್ಟು ದೀರ್ಘವಾಗಿದೆಯೆ ? ಅದು ಕಾಲ್ಪನಿಕ ನಿರೂಪಣೆಯೆ? ಕಥೆಯೊಂದನ್ನು ಹೇಳುತ್ತದೆಯೆ ? ಒಂದಿಷ್ಟು ಸಂಕೀರ್ಣವಾದ

ಕಥಾ ಸಂವಿಧಾನ ಹೊಂದಿದೆಯೆ? ಹಾಗಿದ್ದರೆ ಅದನ್ನು ಕಾದಂಬರಿ ಎನ್ನೋಣ - ಏಕೆಂದರೆ ಕಾದಂಬರಿಯು ಕಾಣಿಸಿಕೊಳ್ಳುವ ರೂಪ ಅದು. ಹತ್ತು, ಇಪ್ಪತ್ತು, ಐವತ್ತು ಸಾಲುಗಳಲ್ಲಿರುವ ಪದ್ಯವೆ ? ಕವಿಯ ಭಾವವೊಂದನ್ನು, ಆ ಕ್ಷಣದ ಭಾವನೆಯೊಂದನ್ನು, ನೆನಪೊಂದನ್ನು, ಸುಖ ದುಃಖದ ಮಿಂಚೊಂದನ್ನು ಕೊಡುತ್ತದೆಯೆ? ಕವಿಯ ಭಾವಗಳು, ನೆನಪುಗಳು ಬಹುಮಟ್ಟಿಗೆ ವೈಯಕ್ತಿಕ ವಾಗಿದೆಯೆ ? ಆ ಗೀತೆ ತಕ್ಕಮಟ್ಟಿಗಾದರೂ ಹಾಡಲು ಬರುವಂತಿದೆಯೆ ? ಹಾಗಿದ್ದರೆ ಅಂಥ ಕಾವ್ಯರೂಪಕ್ಕೆ ಭಾವಗೀತೆಯೆಂದು ಹೆಸರು.

ಹೀಗೆ ಎಲ್ಲ ಸಾಹಿತ್ಯ ಕೃತಿಗಳೂ ಅನಿವಾರ್ಯವಾಗಿ ಒಂದಿಲ್ಲೊಂದು ರೂಪ ಪಡೆದು ಪ್ರಕಟಗೊಳ್ಳುತ್ತವೆ. ಕಾದಂಬರಿಯ ರೂಪದಲ್ಲಿ, ಸಣ್ಣಕಥೆಯ ರೂಪದಲ್ಲಿ, ಮಹಾಕಾವ್ಯದ ರೂಪದಲ್ಲಿ, ನಾಟಕದ ರೂಪದಲ್ಲಿ, ಪ್ರಬಂಧ ಅಥವಾ ಮತ್ತೊಂದು ಇನ್ನೊಂದು ರೂಪದಲ್ಲಿ ಕಾಣಿಸಿಕೊಳ್ಳುತ್ತವೆ. ಕವಿಯ ಹೃದಯದಿಂದ, ಕಾದಂಬರಿಕಾರನ ಅನುಭವದ ಮೂಸೆಯಿಂದ, ಕಥೆಗಾರನ ಕಮ್ಮಟದಿಂದ ಸಾಹಿತ್ಯಕೃತಿಯು ಹೊರಬರುವಾಗ ಒಂದಲ್ಲ ಒಂದು ಮೂರ್ತರೂಪ, ಶರೀರ, ಆಕಾರ, ಆಕೃತಿ ಪಡೆದುಕೊಳ್ಳುತ್ತದೆ. ಇದೇ ಸಾಹಿತ್ಯರೂಪ.

ರೂಪದ ಕಲ್ಪನೆ ಪಾಶ್ಚಾತ್ಯ ವಿಮರ್ಶೆಯಲ್ಲಿ ಸುಮಾರು ನಾಲ್ಕು ಶತಮಾನಗಳಷ್ಟು ಹಳೆಯದು. ಆ ವಿಮರ್ಶಕರು ರೂಪ ಎಂದರೆ ಕೃತಿಗೆ ತೊಡಿಸಿದ ಉಡುಪೆಂದೂ, ವಸ್ತುವಿಗೆ ಹೊರತಾದದ್ದು ಎಂದೂ, ಸುಲಭವಾಗಿ ಗುರುತಿಸಬಹುದಾದ ಬಾಹ್ಯವೆಂದೂ ಭಾವಿಸಿದ್ದರು. ಅಚ್ಚಿನಿಂದ ಹೊರಬರುವ ಆಕಾರದಂತೆ ಪ್ರತಿಯೊಂದು ಸಾಹಿತ್ಯ ಕೃತಿಗೆ ಒಂದು ಆಕಾರವಿದೆ, ಅದು ಶೈಲೀಕರಣದಿಂದ ನಿಶ್ಚಿತವಾಗಿದೆ, ಪರಂಪರೆಯಿಂದ ಪೂರ್ವನಿರ್ಧರಿತವಾಗಿದೆ ಎಂದು ತಿಳಿದಿದ್ದರು. ಇಂಥ ಸಿದ್ಧರೂಪ ಇರುವುದರಿಂದಲೇ ಕಾವ್ಯವು ಕಾವ್ಯವೆಂದು ಗುರುತಿಸಲ್ಪಡುತ್ತದೆ. ಸುನೀತ, ಪ್ರಗಾಥ, ಸಣ್ಣಕಥೆ, ನಾಟಕ ಇವುಗಳನ್ನು ಅವುಗಳ ರೂಪದಲ್ಲಿಯೇ ಗುರುತಿಸಲು ಸಾಧ್ಯವಾಗುತ್ತದೆ ಎಂದರು. ಆದರೆ ಈಗಿನ ವಿಮರ್ಶಕರು ವಸ್ತುವನ್ನು ವಿನ್ಯಾಸದಿಂದ, ಆಕೃತಿಯನ್ನು ಆಶಯದಿಂದ ಬಿಡಿಸಿ ಹೇಳುವುದು ಸುಲಭವಲ್ಲ ಎನ್ನುತ್ತಾರೆ. `` ಹೇಳುವ ರೀತಿಗೂ " " ಹೇಳಲ್ಪಡುವ ವಸ್ತುವಿಗೂ" ಕೆಲವೊಮ್ಮೆ ಸೂಕ್ಷ್ಮವಾದ, ಕೆಲವೊಮ್ಮೆ ಸ್ಥೂಲವಾದ ಸಂಬಂಧವಿದೆ ಎಂದು ಆಧುನಿಕರು ಹೇಳುತ್ತಾರೆ.

೩. ನಾಟಕ ಒಂದು ಸಾಹಿತ್ಯರೂಪ ಎಂದೆವು. ನಾಟಕದಲ್ಲಿ ತರಾವರಿ ಇದೆಯಲ್ಲ ! ಕಂಪನಿನಾಟಕ, ಪೌರಾಣಿಕನಾಟಕ, ಗೀತನಾಟಕ, ಅಸಂಗತನಾಟಕ, ಬೀದಿನಾಟಕ ಇವೆಲ್ಲ ಏನು? ಇವೆಲ್ಲವೂ ನಾಟಕದ ವರ್ಗಕ್ಕೆ ಸೇರಿದವು. ಅವುಗಳಿಗೊಂದು ಪ್ರತ್ಯೇಕ ಹೆಸರಿಡಬೇಕಾದರೆ, ಅವುಗಳನ್ನು ` ಉಪ ರೂಪಗಳು ' ಎನ್ನಬಹುದು. ಅದೇ ರೀತಿಯಲ್ಲಿ ಪ್ರಬಂಧ ರೂಪದಲ್ಲಿ ಹಾಸ್ಯ ಪ್ರಬಂಧ, ಲಲಿತ ಪ್ರಬಂಧ, ವಿಚಾರ ಪ್ರಬಂಧ ಇಂಥವು ಪ್ರಬಂಧದ ಉಪ - ರೂಪಗಳು ಎನ್ನೋಣ.

೪. ಯಾವುದೇ ಭಾಷೆಯ ಸಾಹಿತ್ಯದಲ್ಲಿ ಹೊಸ ರೂಪಗಳು ಕಾಣಿಸಿಕೊಂಡಾಗ ಓದುಗರು, ಸಾಹಿತ್ಯಾಸಕ್ತರು ಮೊದಮೊದಲು ಮೂಗುಮುರಿಯುವುದು ಸಹಜ. ಕನ್ನಡ ಸಾಹಿತ್ಯದ ಬಗೆಗೂ ಇದೇ ಮಾತನ್ನು ಹೇಳಬಹುದು. ಹೊಸ ಪ್ರಯೋಗಗಳನ್ನು ಹಳಿಯುವುದು, ನಿಧಾನವಾಗಿ ಅವುಗಳಿಗೆ ಮನ್ನಣೆ ದೊರೆಯುವುದು, ನಂತರ ಅವು

ಸ್ಥಾಪಿತಗೊಂಡು ಪರಂಪರೆಯ ಭಾಗವಾಗಿ ಮುಂದುವರೆಯುವುದು, ಮುಂದೊಂದು ಕಾಲದಲ್ಲಿ ಅವು ಅಡಗಿ ಹೋಗುವುದು ಅಥವಾ ಅದೃಶ್ಯವಾಗುವುದು ಸಾಹಿತ್ಯದ ವಿದ್ಯಾರ್ಥಿಗೆ ಪರಿಚಿತವಾದ ದೃಶ್ಯಾವಳಿ. ಕೆಲವೊಮ್ಮೆ ಹೊಸ ಪ್ರಯೋಗಗಳಿಗೆ ಸ್ಥಾಪಿತ ಸಾಹಿತ್ಯ ರೂಪಗಳಾಗುವ ಭಾಗ್ಯ ಒದಗಿ ಬರುವುದೇ ಇಲ್ಲ. ಇಂಗ್ಲಿಷಿನಿಂದ ಬಂದ ಕನ್ನಡದ ಪ್ರಗಾಥ, ಸುನೀತಗಳಿಗೆ ಹಾಗಾಗಿದೆ. ಅವು ನಡುವೆ ಬಂದು, ನಡುವೆಯೇ ಹೋದವು. ಫ್ರೆಂಚ್ ಮೂಲದಿಂದ ಇಂಗ್ಲಿಷ್ ದ್ವಾರಾ ಕನ್ನಡಕ್ಕೆ ಅವತರಿಸಿದ ಪ್ರಬಂಧ ಮಾತ್ರ ಗಟ್ಟಿಯಾಗಿ ನೆಲೆನಿಂತು ಮಣ್ಣಿನ ಮಗನಾಗಿ ಉಳಿದಿದೆ. ಸಣ್ಣಕಥೆ, ಕಾದಂಬರಿ ಇವುಗಳು ಕೂಡ ವಲಸೆಬಂದು ತಳವೂರಿ ಕನ್ನಡಿಗರಾದ ಸಾಹಿತ್ಯರೂಪ ಬಂಧುಗಳು.

ಹೊಸತರಲ್ಲಿ ಮೂಗು ಮುರಿಯುವ ಮಾತು ಬಂದಾಗ ನವ್ಯಕಾವ್ಯ ಪ್ರವೇಶದ ಬಗೆಗೆ ನೆನಪಾಗುತ್ತದೆ. ಅಡಿಗ ಮತ್ತು ಅಡಿಗರಂಥವರ ನವ್ಯಕಾವ್ಯದ ಮಾದರಿಗಳು ಕಾಣಿಸಿಕೊಂಡಾಗ ಸಾಹಿತ್ಯ ವಲಯಗಳಲ್ಲಿ ಖಾಸಗಿಯಾಗಿ ಹಾಗೂ ಮುದ್ರಣದಲ್ಲಿ ನಡೆದ ಗುಸುಗುಸು, ಪ್ರತಿಭಟನೆ, ತಾತ್ಸಾರ ಇವುಗಳನ್ನು ನೆನಪುಮಾಡಿಕೊಂಡರೆ ಹಳೆಯ ಕಾಲದಲ್ಲಿ ಅಸ್ಪೃಶ್ಯರನ್ನು ದೂರ ಇಡುತ್ತಿದ್ದ ಪರಿ ಅಥವಾ ಕುಷ್ಠರೋಗಿಯನ್ನು ಹಳಿಯುತ್ತಿದ್ದ ಪರಿಯನ್ನು ಅರ್ಥಮಾಡಿಕೊಳ್ಳಬಹುದು. ಇದೇ ಮಾತು ಮುಂದಿನ ದಶಕಗಳಲ್ಲಿ ಬಂಡಾಯ ಮತ್ತು ದಲಿತ ಸಾಹಿತ್ಯದ ಬಗೆಗೂ ಅನ್ವಯಿಸುತ್ತದೆ. ಬಂಡಾಯ ಸಾಹಿತ್ಯ ತನ್ನ ಪ್ರವೇಶ-ಕೂತೂಹಲ -ಸ್ವೀಕೃತಿ - ಸ್ಥಾಪನೆ ಆವರ್ತವನ್ನು ಮುಗಿಸುತ್ತಿದೆ. ಆದರೆ ದಲಿತ ಸಾಹಿತ್ಯ ಇದೀಗ ತನ್ನ ಪ್ರವೇಶದ ಹಂತದಲ್ಲಿದೆ.

೫. ಬಂಡಾಯ ಸಾಹಿತ್ಯದ ಪ್ರಸ್ತಾಪ ಮಾಡಿದೆವಷ್ಟೆ ! ಅದೊಂದು ಸಾಹಿತ್ಯ `ರೂಪ ' ವೆನ್ನಬಹುದೆ ? ಬಂಡಾಯ ಎಂಬುದು ಆಶಯಕ್ಕೆ ಸಂಬಂಧಪಟ್ಟಿದೆ. ಆಕಾರಕ್ಕಲ್ಲ ; ಆಕೃತಿಗಲ್ಲ. ಬಂಡಾಯ ಒಂದು ಮನೋಧರ್ಮ; ಒಂದು ನಿಲುವು, ಧೋರಣೆ. ಒಂದು ಸಾಹಿತ್ಯಿಕ - ಸಾಮಾಜಿಕ - ಸಾಂಸ್ಕೃತಿಕ ಚಳವಳಿ.

ನಮ್ಮಲ್ಲಿ ಬಂಡಾಯ ಕಾವ್ಯ, ಬಂಡಾಯ ಕಥೆ, ಬಂಡಾಯ ಕಾದಂಬರಿಗಳಿವೆ. ಅಂದರೆ ಬಂಡಾಯ ಮನೋಧರ್ಮದ ಲೇಖಕರು ಬರೆದ ಕಾವ್ಯ, ಕಥೆ, ಕಾದಂಬರಿಗಳಿವೆ. ಆದರೆ ಅವು ಕಾವ್ಯ,ಕಥೆ, ಕಾದಂಬರಿಗಳ `ರೂಪ'ದಲ್ಲಿವೆ. ಬಂಡಾಯದವರ ಬೀದಿ ನಾಟಕಗಳಿವೆ. ಏಕಾಂಕಗಳಿವೆ. ಆದರೆ ಅವು ನವ್ಯರು, ನವೋದಯದವರು ಬರೆದಂತೆಯೇ ವಿಶಿಷ್ಟ ಸಾಹಿತ್ಯರೂಪಗಳಲ್ಲಿವೆ. ಅವುಗಳ ಬಾಹ್ಯರೂಪ ನಾಟಕದ್ದು.

ಈಗಾಗಲೇ ಸ್ಪಷ್ಟಪಡಿಸಿದಂತೆ ಸಾಹಿತ್ಯ ಕೃತಿಯೊಳಗಿನ ವಸ್ತು ಮತ್ತು ಕೃತಿಯು ಪ್ರಕಟವಾಗುವ ರೂಪ ಇವುಗಳಿಗೆ ಏನೇನೂ ಸಂಬಂಧವಿಲ್ಲ ಎನ್ನಬಾರದು. ಭಾವಗೀತೆಯ ಭಾವಕ್ಕೆ ಹೊಂದಿಕೊಳ್ಳುವ ಹೊರ ರೂಪವು ಮಹಾಕಾವ್ಯದ ಹೂರಣಕ್ಕೆ ಸರಿಹೋಗದು. ಹಾಗೆಯೇ ಬಂಡಾಯ ಕವಿತೆ ಅಥವಾ ಬಂಡಾಯ ಬೀದಿನಾಟಕ ಉಳಿದ ಕವಿತೆಗಳಿಗಿಂತ, ನಾಟಕಗಳಿಗಿಂತ ಒಂದಿಷ್ಟು ಭಿನ್ನವಾಗಿ ಕಾಣಿಸಿಕೊಳ್ಳುವುದು ಸುಳ್ಳಲ್ಲ. ಸಾಲದ್ದಕ್ಕೆ ಕವಿಯ, ನಾಟಕಕಾರನ ಪ್ರಯೋಗಶೀಲತೆಯನ್ನು ಲೆಕ್ಕಕ್ಕೆ ಹಿಡಿದುಕೊಳ್ಳಬೇಕು.

೬. ಕನ್ನಡದಲ್ಲಿ ಹೊಸ ಸಾಹಿತ್ಯರೂಪಗಳ ಸೃಷ್ಟಿಯಲ್ಲಿ ಕಂಡು ಬರುವ ಕೆಲವು ಪ್ರೇರಣೆಗಳನ್ನು ಗುರುತಿಸಬಹುದು. ಕಂದ ವೃತ್ತ, ಅಷ್ಟಕ, ಶತಕಗಳು ಸಂಸ್ಕೃತ ಸಾಹಿತ್ಯದಿಂದ ಪ್ರೇರಣೆ ಪಡೆದವು. ಚಂಪೂ ಬಗ್ಗೆ ಖಚಿತವಾಗಿ ಹೇಳಲು ಸಾಧ್ಯವಿಲ್ಲವೆನ್ನುತ್ತಾರೆ. ಅದು

ಸಂಸ್ಕೃತದಿಂದ ಕನ್ನಡಕ್ಕೆ ಬಂದಿದೆ ಎನ್ನುವ ಅಭಿಪ್ರಾಯವೂ ಇದೆ; ಹಾಗೆಯೇ ಅದು ಕನ್ನಡದ ಮೂಲಸೃಷ್ಟಿ ಎನ್ನುವವರೂ ಇದ್ದಾರೆ. ರಗಳೆ, ಷಟ್ಪದಿ, ತ್ರಿಪದಿ, ಸಾಂಗತ್ಯ, ಗೀತಗಳು ಹೆಚ್ಚಾಗಿ ಕನ್ನಡ ಜನಪದ ಸಾಹಿತ್ಯದಿಂದ ಪ್ರೇರಣೆ ಪಡೆದವು ಎಂದು ಸಾಹಿತ್ಯ ಚರಿತ್ರಕಾರರ ಅಭಿಪ್ರಾಯ. ಹಾಗೆಯೇ ಕಾದಂಬರಿ, ಸಣ್ಣಕಥೆ, ಭಾವಗೀತೆ, ಪ್ರಬಂಧ, ಅಸಂಗತ ನಾಟಕ, ಸಾನೆಟ್, ಪ್ರಗಾಥ ಮುಂತಾದವು ಇಂಗ್ಲಿಷ್ ಸಾಹಿತ್ಯದಿಂದ ಪ್ರೇರಿತವಾದ ರೂಪಗಳು ಅಥವಾ ಉಪರೂಪಗಳು.

೭. ಸಾಹಿತ್ಯದಲ್ಲಿ ಕಾವ್ಯರೂಪಗಳ ಪಾರಮ್ಯ ಹೋಗುತ್ತಿದೆಯೆ? ಗದ್ಯ ಸರ್ವವ್ಯಾಪಿಯಾಗುತ್ತಿದೆಯೇ ? ಸಾಹಿತ್ಯವೆಂದರೆ ಕಾವ್ಯ, ಸಾಹಿತಿಗಳೆಂದರೆ ಕವಿಗಳು ಎಂಬ ನಿರ್ವಚನ ಈಗ ಹೋಗಿದೆ. ಅಷ್ಟಕ, ಶತಕ, ಓವನಿಗೆ, ಒನಕೆವಾಡು, ಚತ್ತಾಣ, ಬೆದಂಡೆ, ಕಂದ ವೃತ್ತ, ರಗಳೆ, ಷಟ್ಪದಿಕಾವ್ಯ, ತ್ರಿಪದಿಕಾವ್ಯ, ಸಾಂಗತ್ಯ, ಕೀರ್ತನೆ, ಚಂಪೂ, ಲಾವಣಿ, ಪ್ರಗಾಥ ಇತ್ಯಾದಿ ಈ ಹಳೆಯ ಬಳಕೆಯ ಮುಖಗಳೆಲ್ಲ ಎಲ್ಲಿ ಹೋದವು ? ಭಾವಗೀತೆಯೊಂದೇ ಇಂದು ಕಣದಲ್ಲಿದೆ. ಇನ್ನೂ ಇನ್ನಿಂಗ್ಸ ಮುಗಿಸಿಲ್ಲ. ತಾನಿನ್ನೂ ಸತ್ತಿಲ್ಲ ಎಂದು ತೋರಿಸುವಂತೆ ಮಹಾಕಾವ್ಯ ಅಪರೂಪಕ್ಕೊಮ್ಮೆ ತನ್ನ ಮುಖ ತೋರಿಸುತ್ತಿದೆ.

ಭಾವಗೀತೆಯೊಂದೇ ಇಂದು ಕಣದಲ್ಲಿದೆ ಎಂದೆವು. ಆದರೆ ನಾವೀಗ ಕಾಣುವ ಕವಿತೆ ಹಿಂದಿನ ಭಾವಗೀತೆಯಲ್ಲ. ಗೇಯಗುಣ, ವ್ಯಕ್ತಿ ಪ್ರಾಧಾನ್ಯತೆ ಇವು ಮಾಯವಾಗಿ ಸಾಮಾಜಿಕ ಕಾಳಜಿಗಳು ಎದ್ದು ಕಾಣುತ್ತಿವೆ. ಅದರಲ್ಲೂ ಸಾರ್ವಜನಿಕ ಮಂಚಗಳಲ್ಲಿ ವಾಚಿಸಿಕೊಳ್ಳುವ ಕವಿತೆಗಳು ಸಾರ್ವಜನಿಕರ `ಮೂಡ್'ಗಳಿಗೆ ಹೊಂದಿಕೊಳ್ಳುವಂತಿರುತ್ತವೆ. ಒಂದು -ಎರಡು-ಮೂರು - ನಾಲ್ಕು ನಿಮಿಷಗಳಲ್ಲಿ ವಾಚಿಸುವಂತಿರುತ್ತವೆ. ಶ್ರೋತೃಗಳ ಗಮನಸೆಳೆಯುವಂಥ ಕೆಲವು ಸಾಲುಗಳು ಅನಿವಾರ್ಯ. ವಾರಪತ್ರಿಕೆ, ಮಾಸಪತ್ರಿಕೆಗಳು ಕವಿತೆಗಾಗಿ ಒಂದಿಷ್ಟು ಜಾಗ ಮೀಸಲಿಟ್ಟು ಕವಿತೆಗಿಷ್ಟು ಜೀವದಾನ ಮಾಡಿವೆ. ಕಾಲಕಾಲಕ್ಕೆ ತಾಲೂಕು, ನಗರ, ಜಿಲ್ಲೆ, ರಾಜ್ಯಮಟ್ಟದ ಸಾಹಿತ್ಯ ಸಮ್ಮೇಳನಗಳು ಕವಿತೆಗಿಷ್ಟು ಜಾಗ ಕೊಟ್ಟಿವೆ. ತಲೆಗೆ ಮೂರು ನಿಮಿಷದ ಲೆಕ್ಕದಲ್ಲಿ ಒಂದು ತಾಸಿನಲ್ಲಿ ಇಪ್ಪತ್ತು ಕವಿಗಳಿಗೆ ಮಂಚಕೊಡಬಹುದು. ಸ್ವಲ್ಪ ಲಘುವಾಗಿ ಹೇಳುವುದಾದರೆ, ಇಂಥ ಸಮ್ಮೇಳನಗಳು ಕೂಡ ಈ ಸಾಹಿತ್ಯ ಪ್ರಕಾರಕ್ಕೆ ಇಂಬು ಕೊಟ್ಟಿವೆ.

೮. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಮೊದಲು ಕಾಣಿಸಿಕೊಂಡ ಸಾಹಿತ್ಯ ಪ್ರಕಾರಗಳನ್ನು ಎಸ್. ಎಸ್. ತಾರಾನಾಥ ಹೀಗೆ ಪಟ್ಟಿಮಾಡಿದ್ದಾರೆ: ಶಾಸನಗದ್ಯ, ಶಾಸ್ತ್ರಗದ್ಯ, ಕಾವ್ಯಗದ್ಯ, ಓವನಿಗೆ, ಒನಕೆವಾಡು, ಅಷ್ಟಕ, ಶತಕ, ಗದ್ಯಕಥೆ, ಚತ್ತಾಣ, ಬೆದಂಡೆ, ಪಗರಣ (ಕ. ಸಾ. ಚರಿತ್ರೆ, ಮೈಸೂರು ವಿ. ವಿ. ೧೯೭೫)

ಮುಂದಿನ ಕಾಲ ಘಟ್ಟದಲ್ಲಿ ಪ್ರಚಲಿತವಿದ್ದ ರೂಪಗಳ ಬಗ್ಗೆ ಟಿ.ವಿ.ವೆಂಕಟಾಚಲ ಶಾಸ್ತ್ರಿ ಗಳು ಮಾಡಿದ ಪಟ್ಟಿಯಲ್ಲಿ ಚಂಪು, ಗದ್ಯಶಾಸನ, ಗದ್ಯಕೃತಿ, ಟೀಕೆ ವ್ಯಾಖ್ಯಾನ, ಕಂದವೃತ್ತ, ಅಷ್ಟಕ, ಶತಕ ಇತ್ಯಾದಿ ಸೇರಿವೆ. (ಕ. ಸಾ. ಚರಿತ್ರೆ, ಮೈ. ವಿ. ವಿ., ೧೯೭೬)

ಆ ಮುಂದೆ ಚಂಪು, ಗದ್ಯ, ವಚನ, ರಗಳೆ, ಷಟ್ಪದಿ, ಕಂದವೃತ್ತ, ಶತಕ, ತ್ರಿಪದಿ, ಪದ ಪ್ರಕಾರಗಳೂ, ತದನಂತರ ಚಂಪು, ಗದ್ಯ, ವಚನ, ರಗಳೆ, ಷಟ್ಪದಿ, ತ್ರಿಪದಿ, ಸಾಂಗತ್ಯ, ಕೀರ್ತನೆ ಕಂದವೃತ್ತ, ಅಷ್ಟಕ, ಶತಕ, ಪದ ಇತ್ಯಾದಿ ರೂಪಗಳೂ ಪ್ರಚಲಿತವಿದ್ದವು ಎಂದು ಅಪರ ಅಭಿಮತ (ಕ. ಸಾ. ಚರಿತ್ರೆ, ಮೈ ವಿ. ವಿ., ೧೯೮೧)

ರಂ. ಶ್ರೀ. ಮುಗಳಿ ಪ್ರಾಚೀನ ಸಾಹಿತ್ಯರೂಪ ಉಪರೂಪಗಳನ್ನು ಹೀಗೆ ಹೆಸರಿಸಿದ್ದಾರೆ : ತ್ರಿಪದಿ, ಕಂದವೃತ್ತ, ಅಷ್ಟಕ, ಓವನಿಗೆ, ಒನಕೆವಾಡು, ಗದ್ಯಕಥೆ, ಚತ್ತಾಣ, ಬೆದಂಡೆ, ಪಗರಣ, ಜಾನಪದ (ತಾರೆಲೆ, ಡುಂಡುಚಿ, ಬೀದಿವರೆ, ಬೀರನ ಕಥೆ), ಚಂಪೂ, ಅಷ್ಟಕ, ಶತಕ, ಕಂದವೃತ್ತ, ವಚನ, ಶಾಸನಗದ್ಯ, ಕಥಾಗದ್ಯ, ಚಂಪೂಗದ್ಯ, ರಗಳೆ, ಷಟ್ಪದಿ, ಸಾಂಗತ್ಯ, ಗೀತ (ಹಾಡು, ಕೀರ್ತನೆಗಳು) ಇತ್ಯಾದಿ.

ಮೊದಲಿಗೆ ಜನವಾಣಿಯಾಗಿ ಮೆರೆದುದು ತ್ರಿಪದಿ ಎಂದು ಕಾಣುತ್ತದೆ. ಆದರೆ ಕವಿವಾಣಿ ಆಕೃತಿಗೊಂಡುದು ಚಂಪೂ, ವಚನ, ಷಟ್ಪದಿ ರೀತಿಯಲ್ಲಿ ಎಂದು ಸಾಹಿತ್ಯ ಚರಿತ್ರೆ ಹೇಳುತ್ತದೆ. ಕೆಲವು ಪ್ರಾಚೀನ ರೂಪಗಳು ಸಂಸ್ಕೃತದಿಂದ ಅನಾಮತ್ತಾಗಿ ಕನ್ನಡಕ್ಕೆ ಬಂದಿದ್ದರೆ, ಕೆಲವು ಸಂಸ್ಕೃತ ಪ್ರಭಾವದಿಂದ ಹುಟ್ಟಿದವು. ಚಂಪೂ ಬಗೆಗೆ ಅದು ಸಂಸ್ಕೃತದ್ದೇ ಅಥವಾ ಕನ್ನಡದ್ದೇ ಎಂಬ ವಾದವಿವಾದ ಇದೆ. ಆದರೆ ವಚನರೂಪವೊಂದೇ ಕನ್ನಡದ ಅನನ್ಯ ಅಭಿವ್ಯಕ್ತಿ ಮಾಧ್ಯಮ ಎಂಬ ಬಗೆಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ.

೯. ಎಪ್ಪತ್ತರ ದಶಕದಲ್ಲಿ ಕನ್ನಡದಲ್ಲಿ ಪ್ರಕಟವಾದ ಎರಡು ವಿಶ್ವಕೋಶಗಳು ಆಧುನಿಕ ಕನ್ನಡ ಸಾಹಿತ್ಯದ ರೂಪಗಳನ್ನು ದಾಖಲಿಸಿವೆ. ೧೯೭೧ರಲ್ಲಿ ಪ್ರಕಟವಾದ `ಕನ್ನಡ ವಿಶ್ವಕೋಶ ' ಈ ರೂಪಗಳನ್ನು ಹೇಳಿದೆ. ಆತ್ಮಕಥೆ, ಕಾದಂಬರಿ, ಗಾಂಧೀ ಸಾಹಿತ್ಯ, ಜೀವನ ಚರಿತ್ರೆ, ನಾಟಕ, ಪ್ರಬಂಧ, ಭಾವಗೀತೆ, ಭಾಷಾಂತರ, ಮಕ್ಕಳ ಸಾಹಿತ್ಯ, ವಿಚಾರ ಸಾಹಿತ್ಯ, ವಿಜ್ಞಾನ ಸಾಹಿತ್ಯ, ವಿಡಂಬನ, ವಿಮರ್ಶನ, ಸಣ್ಣಕಥೆ, ಹಾಸ್ಯ ಸಾಹಿತ್ಯ, ನವ್ಯಕಾವ್ಯ ಇತ್ಯಾದಿ. ಈ ಪಟ್ಟಿಯಲ್ಲಿ ಗಾಂಧೀ ಸಾಹಿತ್ಯ, ಭಾಷಾಂತರ, ಮಕ್ಕಳ ಸಾಹಿತ್ಯ, ನವ್ಯಕಾವ್ಯ ಇವುಗಳನ್ನು ಗಮನಿಸಿ. ಇವುಗಳ ಬಗೆಗೆ ಪ್ರತ್ಯೇಕವಾಗಿ ಟಿಪ್ಪಣಿ ಮಾಡೋಣ.

೧೯೭೯ರಲ್ಲಿ ಪ್ರಕಟವಾದ `ಕನ್ನಡ ವಿಷಯ ವಿಶ್ವಕೋಶ 'ದ ನಮೂದುಗಳು ಹೀಗಿವೆ : ಕಾದಂಬರಿ, ಗಾಂಧೀಸಾಹಿತ್ಯ, ಜೀವನ ಚರಿತ್ರೆ, ನವ್ಯಕಾವ್ಯ, ನಾಟಕ, ಪ್ರಬಂಧ, ಪ್ರವಾಸ ಸಾಹಿತ್ಯ, ಭಾವಗೀತೆ, ಭಾಷಾಂತರ, ಮಕ್ಕಳ ಸಾಹಿತ್ಯ, ವಿಚಾರ ಸಾಹಿತ್ಯ, ವಿಜ್ಞಾನ ಸಾಹಿತ್ಯ, ವಿಡಂಬನ, ವಿಮರ್ಶೆ, ಸಣ್ಣಕಥೆ ಮತ್ತು ಹಾಸ್ಯ ಸಾಹಿತ್ಯ. ೭೧ರ ಕೋಶದಲ್ಲಿದ್ದ ಆತ್ಮಕಥೆ ೭೯ರಲ್ಲಿ ಇಲ್ಲ. ೭೯ರ ಕೋಶದಲ್ಲಿ ಪ್ರವಾಸ ಸಾಹಿತ್ಯದ ಪ್ರವೇಶವಾಗಿದೆ. ಪ್ರವಾಸ ಸಾಹಿತ್ಯ ಕೃತಿಗಳು ಒಂದಕ್ಕಿಂತ ಹೆಚ್ಚು ಪ್ರಕಟವಾದದ್ದು ಇದೇ (೭೦ರ) ದಶಕದಲ್ಲಿ. ಎರಡೂ ಕೋಶಗಳು ನವ್ಯಕಾವ್ಯವನ್ನು ಹೆಸರಿಸಿವೆ. ಬಂಡಾಯ ಸಾಹಿತ್ಯ, ದಲಿತ ಸಾಹಿತ್ಯ ಇವಿನ್ನೂ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ರಂಗ ಪ್ರವೇಶ ಮಾಡಿರಲಿಲ್ಲ. ವಸ್ತುವಿಗೆ, ಆಶಯಕ್ಕೆ ಸಂಬಂಧಿಸಿದಂತೆ ಗಾಂಧೀ ಸಾಹಿತ್ಯ ಅಲ್ಲಿ ನಮೂದಾಗಿದೆ ; ಆದರೆ ಪ್ರಗತಿಶೀಲ ಸಾಹಿತ್ಯವನ್ನು ನಮೂದಿಸಿಲ್ಲ ಎಂಬುದನ್ನು ಗಮನಿಸ ಬಹುದು. ಇದು ಕಾಲಮಾನದ ಅಗತ್ಯವಾಗಿತ್ತೇ ಎಂಬ ಪ್ರಶ್ನೆ ಕೇಳಬಹುದು.

೧೦. ಸಾಹಿತ್ಯರೂಪಗಳು ಕಾಲಕಾಲಕ್ಕೆ ಬದಲಾಗುತ್ತ ಬಂದುದನ್ನು ನಾವು ಸಾಹಿತ್ಯ ಚರಿತ್ರೆಯಿಂದ ತಿಳಿದಿದ್ದೇವೆ. ಯಾವ ಕಾರಣವಿಶೇಷಗಳು ಯಾವ (ವಿಶಿಷ್ಟ) ಸಾಹಿತ್ಯ ರೂಪವನ್ನು ಸೃಷ್ಟಿಸಿದವು ಹಾಗೂ ಸೃಷ್ಟಿಸಬಲ್ಲವು ಎಂಬುದು ಸುಲಭವಾಗಿ ಉತ್ತರಿಸಲಾರದ ಪ್ರಶ್ನೆ. ಆದರೂ ಹೊಸ ಕಾಳಜಿಗಳು, ಹೊಸ ಸಂದರ್ಭ ಸನ್ನಿವೇಶಗಳು, ಹೊಸ ಅವಶ್ಯಕತೆಗಳು,

ವಿಚಾರ ಪ್ರವಾಹಗಳು, ಆಂದೋಲನಗಳು ನಮ್ಮ ಸಾಹಿತ್ಯ ದೃಷ್ಟಿ, ಆಶಯಗಳನ್ನು ಬದಲಿಸುತ್ತವೆ ಎಂಬ ಮಾತು ಸ್ಪಷ್ಟ. ಅದರೊಂದಿಗೆ ಸಾಹಿತ್ಯರೂಪಗಳೂ ಶೈಲಿಗಳೂ ಬದಲಾಗುತ್ತವೆ ಎಂಬ ಮಾತೂ ಸ್ಪಷ್ಟ. ರಾಜಾಶ್ರಯದ ಕಾಲದ ಕಾವ್ಯಶೈಲಿ ಪ್ರಜಾಸತ್ತೆಯ ಕಾಲಮಾನದ ಅಗತ್ಯಗಳಿಗೆ ಒಗ್ಗುವುದಿಲ್ಲ. ವ್ಯಕ್ತಿ ಪ್ರಾಧಾನ್ಯತೆಯ ಕಾಲಮಾನದಲ್ಲಿ ವ್ಯಕ್ತಿಯ ಕೋಪ ತಾಪ, ಆಸೆ - ನಿರಾಶೆ, ಪ್ರೇಮ - ಪ್ರಣಯ, ಮನಃಸ್ಥಿತಿಗಳು ಸಾಹಿತ್ಯದಲ್ಲಿ ಅಭಿವ್ಯಕ್ತಿ ಪಡೆಯುತ್ತವೆ. ಅಂಥ ಸಂದರ್ಭದಲ್ಲಿ ಭಾವಗೀತೆ ಹುಟ್ಟಿತು. ಅದು ಕಾಲಮಾನದ ಅಗತ್ಯದೊಡನೆ ವ್ಯಕ್ತಿತ್ವದ ಅಗತ್ಯಗಳನ್ನು ತುಷ್ಠಿಪಡಿಸಿತು. ಅದೇ ರೀತಿಯಾಗಿ ಲಲಿತ ಪ್ರಬಂಧ ಹುಟ್ಟಿಕೊಂಡಿತು. ಇಂಥ ಸಾಹಿತ್ಯರೂಪವನ್ನು ಹುಟ್ಟುಹಾಕಿದ ಫ್ರೆಂಚ್ ಲೇಖಕ ಮಿಷೆಲ್‌ದ ಮಾಂತೇನ್ ಅದನ್ನು `ಖಾಸಗಿ' ಎಂದು ಕರೆದದ್ದು ತಪ್ಪೇನಲ್ಲ. ತನ್ನ ಪ್ರಬಂಧಗಳ ಪ್ರಥಮ ಸಂಕಲನಕ್ಕೆ ಬರೆದ ಮುನ್ನುಡಿಯಲ್ಲಿ ಆತ `ನಾನು ಚಿತ್ರಿಸುತ್ತಿರುವುದು ನನ್ನನ್ನೇ... ನನ್ನ ಪುಸ್ತಕದ ವಸ್ತು ನಾನೇ ' ಎಂದು ಮೇಲಿಂದ ಮೇಲೆ ಹೇಳಿಕೊಂಡಿದ್ದಾನೆ. ಇದೇನೂ ಆಕಸ್ಮಿಕವಲ್ಲ. ಮುಂದಿನ ಲಲಿತ ಪ್ರಬಂಧಕಾರರೂ ಹೆಚ್ಚುಕಡಿಮೆ ಹೀಗೆಯೇ ಮಾಡಿದ್ದಾರೆ.

ಸಮುದಾಯದ ಜನಪರ ಕಾಳಜಿಗಳು, ಸಾಹಿತಿಯ ಜನಪರ ಮನೋವೃತ್ತಿ, ಸುತ್ತಣ ಸಮುದಾಯದ ಸ್ಪಂದನ ಇವುಗಳು ಬೀದಿನಾಟಕದಂಥ ಸಾಹಿತ್ಯರೂಪದಲ್ಲಿ ಪ್ರಕಟವಾಗುವುದನ್ನು ನಾವು ಕಾಣಬಹುದು. ಇದು ರಾಜಾಶ್ರಯದ ಸಾಹಿತ್ಯ ಸೃಷ್ಟಿಯಲ್ಲ. ಚಂಪೂಕಾವ್ಯದ ರೂಪ ಇಂಥ ಕಾಳಜಿಗಳಿಗೆ ಯುಕ್ತ ಮಾಧ್ಯಮವಾಗಲಾರದು. ಪ್ರಾಚೀನ ಡುಂಡುಚಿಗೆ ಸನಿಹದ ಶೈಲಿ, ಪಗರಣಕ್ಕೆ ಹತ್ತಿರದ ದೃಶ್ಯ - ಶ್ರಾವ್ಯ ರೀತಿ ಇಲ್ಲಿ ಮರುಕಳಿಸುತ್ತದೆ.

೧೧. ಹೊಸ ಸಮೂಹ ಮಾಧ್ಯಮಗಳು ಹೊಸ ಸಾಹಿತ್ಯ ಪ್ರಕಾರಗಳನ್ನು ಸೃಷ್ಟಿಸಬಲ್ಲವು ಎಂಬುದಕ್ಕೆ ಕನ್ನಡದಲ್ಲಿ ಇತ್ತೀಚೆಗೆ ಪ್ರಚಾರಕ್ಕೆ ಬಂದ `ಅಂಕಣ' ಸಾಹಿತ್ಯ ಮತ್ತು `ಚಿಂತನ' ಸಾಹಿತ್ಯ ಎರಡು ಉತ್ತಮ ಉದಾಹರಣೆಗಳು.

ಹುರಳೀ ಭೀಮರಾಯರು, ಕಡಂಗೋಡ್ಲು ಶಂಕರ ಭಟ್ಟರು, ತಿ. ತಾ. ಶರ್ಮ, ಕೆ. ಹೈದರ್, ಶ್ರೀರಂಗ, ಸಿದ್ಧವನಹಳ್ಳಿ ಕೃಷ್ಣಶರ್ಮ, ನಿರಂಜನ, ಪಾ. ವೆಂ. ಆಚಾರ್ಯ, ಎಚ್ಚೆಸ್ಕೆ, ಶೇಷಗಿರಿರಾಯರು, ಹಾ. ಮಾ. ನಾಯಕರು, ಕು. ಶಿ. ಇವರೆಲ್ಲ ಈ ಸಾಹಿತ್ಯ ಪ್ರಕಾರವನ್ನು ಪತ್ರಿಕೆಗಳ ಕಾಲಂ ಅಥವಾ ಅಂಕಣಗಳ ಮೂಲಕ ಪಳಗಿಸಿದರು. ಹಾ. ಮಾ. ನಾಯಕರ `ಸಂಪ್ರತಿ' ಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದದ್ದು ಕೇವಲ ಹಾ. ಮಾ. ನಾಯಕರ ಪ್ರತಿಭೆಯ ವಿಜಯವಾಗಿರದೆ ಅಂಕಣ ಬರಹ ಸಾಹಿತ್ಯ ರೂಪದ ವಿಜಯವೂ ಆಗಿದೆಯೆಂಬುದನ್ನು ಇಂದು ಎಲ್ಲರೂ ಒಪ್ಪಿಕೊಂಡಿದ್ದಾರೆ.

ಬೇರೆ ಭಾಷೆಗಳಂತೆ ಕನ್ನಡದಲ್ಲೂ ಪ್ರಬಂಧ ಸಾಹಿತ್ಯರೂಪ ಬೆಳೆದು ವೈವಿಧ್ಯಮಯವಾಗುವಲ್ಲಿ ಪತ್ರಿಕೆಗಳ ಪಾತ್ರ ಮಹತ್ವದ್ದು. ತಮ್ಮ ಅನುಕೂಲಕರ ಗಾತ್ರದಿಂದಾಗಿ ಪ್ರಬಂಧಗಳು ಪತ್ರಿಕೆಗಳಲ್ಲಿ ಪ್ರವೇಶ ದೊರಕಿಸಿಕೊಂಡಿವೆ. ವಾರದಿಂದ ವಾರಕ್ಕೆ, ತಿಂಗಳಿಂದ ತಿಂಗಳಿಗೆ ಓದುಗರನ್ನು ರಂಜಿಸಲು `ಹಾಸ್ಯ ಪ್ರಬಂಧ ', ಪ್ರಚಲಿತ ಸಾಮಾಜಿಕ ಸಾಹಿತ್ಯಿಕ ಸಾಂಸ್ಕೃತಿಕ ವಿಷಯಗಳ ಮೇಲೆ ಭಾಷ್ಯಮಾಡುವ `ಅಂಕಣ ಬರಹ', ಆಗಾಗ ವ್ಯಕ್ತಿ ಚಿತ್ರಗಳು,

ವೈವಿಧ್ಯಕ್ಕಾಗಿ ವ್ಯಕ್ತಿ ವಿಶೇಷದ ಅಭಿವ್ಯಕ್ತಿಗಾಗಿ ಪತ್ರಗಳು ದಿನಚರಿಗಳು, ಗ್ರಂಥ ಸಮೀಕ್ಷೆಗಳು, ಆಧುನಿಕ ಜಗತ್ತನ್ನು ಆಮೂಲಾಗ್ರವಾಗಿ ಬದಲಿಸಿದ ವಿಜ್ಞಾನ -ತಂತ್ರಜ್ಞಾನ ಕುರಿತ ಲೇಖನಗಳು, ಸಮಾಜ ವಿಜ್ಞಾನ ಪ್ರಬಂಧಗಳು- ಹೀಗೆ ಪ್ರಬಂಧ ಪ್ರಪಂಚ ವೈವಿಧ್ಯಮಯವಾದುದು ಪತ್ರಿಕೆಗಳಿಂದಲೇ.

ಪತ್ರಿಕೆಗಳ ಕಾಲಂಗಳು ಅಂಕಣವನ್ನು ಹುಟ್ಟುಹಾಕಿದಂತೆ ಆಕಾಶವಾಣಿ `ಚಿಂತನ', `ದಾರಿದೀಪ' ಮುಂತಾದ ಹೆಸರುಗಳಿಂದ ಬೆಳಗಿನ ನಸುಕಿನಲ್ಲಿ ಪ್ರಸಾರವಾಗುವ ಮೂರು- ನಾಲ್ಕು ನಿಮಿಷಗಳ ವಿಚಾರ ಲಹರಿಗಳನ್ನು ಜನಪ್ರಿಯಗೊಳಿಸಿದೆ. ಇವು ಬರಹರೂಪದಲ್ಲಿ ಸಂಸ್ಕಾರಗೊಂಡು ಪ್ರಕಟವಾಗಿವೆ. ಹಾ. ಮಾ. ನಾಯಕರ `ಸೂಲಂಗಿ', ದೇಜಗೌ. ಅವರ `ತೆನೆ',`ಕೆನೆ',ಸಿ. ಪಿ. ಕೆ. ಅವರ ಚಿಂತನ ಬಿಂದುಗಳು, ಎನ್ಕೆ ಮತ್ತು ಧಾರವಾಡಕರರ ಬಾನುಲಿ ಬರಹಗಳು, ಡಾ. ಬಸವರಾಜ ಸಾದರ ಸಂಪಾದಿಸಿದ`ನೂರೊಂದು ಚಿಂತನಗಳು ' - ಇವೆಲ್ಲ ಈ ಹೊಸ ಪ್ರಕಾರ ಗಟ್ಟಿಗೊಳ್ಳುತ್ತಿರುವುದನ್ನು ಸೂಚಿಸಿವೆ. ಧಾರವಾಡ ಆಕಾಶವಾಣಿಯಲ್ಲಿ ಬಿತ್ತರಗೊಂಡ ಚಿಂತನಗಳನ್ನು ಧಾರವಾಡ ಆಕಾಶವಾಣಿ ಮತ್ತು ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗಗಳ ಸಹಯೋಗದಿಂದ ಈಗ ಗ್ರಂಥರೂಪದಲ್ಲಿ ಸಂಗ್ರಹಿಸಲಾಗುತ್ತಿದೆ.

ಇತ್ತೀಚೆಗೆ ಚುಟುಕು / ಹನಿಗವನ ಒಂದು ಸಾಹಿತ್ಯ ಪ್ರಕಾರವೆ? ಎಂಬ ಚರ್ಚೆ ನಡೆದಿದೆ. ಉತ್ತರ ಸದ್ಯಕ್ಕಂತೂ ಹೌದು -ಇಲ್ಲಗಳ ನಡುವೆ ನಿಂತಿದೆ. ಒಬ್ಬ ಲೇಖಕರು ಹೇಳುವಂತೆ ಅದು ಇನ್ನಿಷ್ಟು ದೂರದಾರಿ ಕ್ರಮಿಸಿದ ನಂತರ ಈ ಚರ್ಚೆ ಇತ್ಯರ್ಥವಾದೀತು.

೧೨. ಪ್ರತಿಯೊಂದು ಸಾಹಿತ್ಯರೂಪಕ್ಕೂ ತನ್ನದೇ ಆದ ಶಕ್ತಿ ಸಾಮರ್ಥ್ಯಗಳೂ ಇತಿಮಿತಿಗಳೂ ಇವೆ. ಒಂದು ರೂಪ ಸಾಧಿಸಬಹುದಾದುದನ್ನು ಇನ್ನೊಂದು ರೂಪ ಮಾಡಲಾರದು. ಕಣ್ಣಿಗೆ ಹೊಡೆಯುವಂಥ ಒಂದು ಉದಾಹರಣೆ ಕೊಡುವುದಾದರೆ, ಅನ್ನಾ ಕೆರೆನಿನಾ, ವಾರ್ ಆ್ಯಂಡ್ ಪೀಸ್, ಫೊರ್‌ಸೈತ್ ಸಾಗಾದಂಥ ಕಾದಂಬರಿಗಳು ಅಥವಾ ಕನ್ನಡದ ಕಾನೂರು ಸುಬ್ಬಮ್ಮ ಹೆಗ್ಗಡಿತಿ, ಮಲೆಯಲ್ಲಿ ಮದುಮಗಳು, ಮರಳಿ ಮಣ್ಣಿಗೆ, ಗ್ರಾಮಾಯಣದಂಥ ಕಾದಂಬರಿಗಳು ಹೇಳುವುದನ್ನು ಯಾವುದೇ ಯಶಸ್ವಿ ಭಾವಗೀತೆಯೂ ಹೇಳಲು ಸಾಧ್ಯವಿಲ್ಲ. ಭಾವಗೀತೆ ಒಂದು ಕ್ಷಣವನ್ನು, ಒಂದು ಭಾವವನ್ನು, ಸೌಂದರ್ಯದ ಒಂದು ಮುಖವನ್ನು, ಸುಖದ ಮಧುರ ಕ್ಷಣವನ್ನು, ದುಃಖದ ಒಂದು ಭಾವವನ್ನು ಸಮರ್ಥವಾಗಿ ಸೆರೆಹಿಡಿಯಬಲ್ಲುದು. ಆದರೆ ಹೆನ್ರಿ ಜೇಮ್ಸ್ ಹೇಳುವಂತೆ ಕಾದಂಬರಿಯು ಸರ್ವಗ್ರಾಹಿಯಾಗುವಷ್ಟು ವಿಶಾಲವಾದ `ಜೀವನ ರಾಗರಂಗುಗಳನ್ನು ' ಸೆರೆಹಿಡಿಯುವಂಥ ಸಾಮರ್ಥ್ಯ ಹೊಂದಿದೆ.

ಇದೇ ಮಾತನ್ನು ನಾಟಕದ ಬಗೆಗೂ ಹೇಳಬಹುದು. ನಾಟಕ ಕೊಡಬಹುದಾದ ಸುಖ, ತೃಪ್ತಿಗಳನ್ನು ಬೇರೆ ಯಾವ ಸಾಹಿತ್ಯರೂಪವೂ ಕೊಡಲಾರದು ಎಂದು ನಾಟಕ ಭಕ್ತರ ಅಭಿಮತ. ನಾಟಕ ರೂಪದ ವೈಶಿಷ್ಟ್ಯ ಬೇರೆ ಯಾವ ರೂಪಕ್ಕೂ ಬಾರದು. ಕತೆ, ಕಾದಂಬರಿ, ಭಾವಗೀತ ಯಾವುದಕ್ಕೂ ಬಾರದು. ಹೀಗೆ ಪ್ರತಿಯೊಂದು ಸಾಹಿತ್ಯರೂಪದ ಭಕ್ತರಿದ್ದಾರೆ. ಆ ರೂಪದಲ್ಲಿ ಅವರು ಅನನ್ಯವಾದ ಸೌಂದರ್ಯವನ್ನು ಕಾಣುತ್ತಾರೆ. ಒಟ್ಟಿನಲ್ಲಿ ಸಾಹಿತ್ಯಸೌಂದರ್ಯವು ಅನಂತರೂಪಿ.

೧೩. ಪ್ರವಾಸ ಸಾಹಿತ್ಯ ಎಂಬೊಂದು ರೂಪ ಪ್ರಾಯಪ್ರಬುದ್ಧತೆಯ ಲಕ್ಷಣ ತೋರಿಸುತ್ತಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಅದನ್ನು ಮನ್ನಿಸಿ ಆ ಪ್ರಕಾರದ ಕೃತಿಗಳಿಗೆ

ಪ್ರತಿವರ್ಷ ಬಹುಮಾನ ಕೊಡುತ್ತಿದೆ. ಗೊರೂರು ಅವರ `ಅಮೇರಿಕದಲ್ಲಿ ಗೊರೂರು', ಶಿವರಾಮ ಕಾರಂತರ `ಅಬೂವಿಂದ ಬರಾಮಕ್ಕೆ',`ಅಪೂರ್ವ ಪಶ್ಚಿಮ ',ಅ. ನ. ಮೂರ್ತಿರಾಯರ `ಅಪರವಯಸ್ಕನ ಅಮೇರಿಕಾ ಯಾತ್ರೆ', ಪ್ರಭುಶಂಕರ ಅವರ `ಅಮೇರಿಕೆಯಲ್ಲಿ ನಾನು ಮತ್ತು ಶಾಂತಿ ', ಗೋಕಾಕರ `ಸಮುದ್ರದಾಚೆಯಿಂದ ,''ಸಮುದ್ರದೀಚೆಯಿಂದ ',ದಿನಕರ ದೇಸಾಯಿ ಅವರ ` ನಾ ಕಂಡ ಪಡುವಣ' ಧಾರವಾಡಕರರ `ನಾನು ಕಂಡ ಅಮೇರಿಕೆ ' ನವರತ್ನರಾಮ್ ಅವರ `ಪ್ಯಾರಿಸ್ಸಿನಿಂದ ಪ್ರೇಯಸಿಗೆ', ಬಿ. ಜಿ. ಎಲ್. ಸ್ವಾಮಿಯವರ `ಅಮೇರಿಕದಲ್ಲಿ ನಾನು' ಮುಂತಾದ ಕೃತಿಗಳು ಲೇಖಕರಿಗೆ ಹೆಸರನ್ನೂ ಕೆಲವೊಮ್ಮೆ ಬಹುಮಾನವನ್ನೂ ತಂದಿವೆ. ಯಶಸ್ವಿ ಪ್ರವಾಸ ಕಥನಗಳು ಲೋಕಜ್ಞಾನವನ್ನೂ ಮನರಂಜನೆಯನ್ನೂ ಕೊಡಬಲ್ಲವು. ಪಳಗಿದ ಲೇಖಕರು ತಮ್ಮ ಪ್ರವಾಸ ಕಥನವನ್ನು ಕಥೆ ಕಾದಂಬರಿಗಳಂತೆಯೇ ಸರಸವಾಗಿಸಿದ್ದಾರೆ. ಕೆಲವು ಕೃತಿಗಳು ದೇಶಸುತ್ತಿದ, ಕೋಶ ಓದಿದ ಅನುಭವ ಕೊಡುತ್ತವೆ.

ಈ ರೂಪ ಬೆಳೆದುದು ಆಕಸ್ಮಿಕವಲ್ಲ. ಈ ಶತಮಾನದಲ್ಲಿ ಸಾರಿಗೆ ಸಂಪರ್ಕ ವ್ಯವಸ್ಥೆಗಳು ಬೆಳೆದು ಜನರು ಪರಪ್ರಾಂತ್ಯಗಳಿಗೆ, ಪರದೇಶಗಳಿಗೆ ಹೋಗಿಬರುವುದು ಸರ್ವೇಸಾಮಾನ್ಯವಾಗಿದೆ. ಹಿಂದೊಂದು ಕಾಲದಲ್ಲಿ ಇಂಥ ಪ್ರವಾಸ ಎಂದರೆ ಪ್ರಯಾಸದ ಕೆಲಸವಾಗಿತ್ತು. ಗಂಡಾಂತರಕಾರಿಯೂ ಆಗಿತ್ತು. ಕಾಶೀಯಾತ್ರೆಗೆ ಹೋಗುವಾಗ ಶ್ರಾದ್ಧಮಾಡಿಸಿಕೊಂಡು ಹೋಗುತ್ತಿದ್ದರಂತೆ. ಊರು ಬಿಡುವುದೂ ಪ್ರಾಣಬಿಡುವುದೂ ಒಂದೇ ಎನ್ನಿಸುವ ದಿನಗಳವು. ಈಗಾದರೋ ಪ್ರವಾಸ ಒಂದು ಖುಷಿಕೊಡುವ ಸಂಗತಿ. ರೈಲಿನಲ್ಲಿ, ವಿಮಾನದಲ್ಲಿ, ಸುವಿಹಾರಿ ಬಸ್ಸುಗಳಲ್ಲಿ ನಾವು ಹಾಕಿಕೊಂಡ ಕಾರ್ಯಕ್ರಮ ಪಟ್ಟಿಯಂತೆ ಪ್ರಯಾಣ ಬೆಳೆಸಬಹುದು. ಮನೆಯಲ್ಲಿ ಸಿಗುವ ಎಲ್ಲಸೌಕರ್ಯಗಳನ್ನು ಪ್ರಯಾಣದುದ್ದಕ್ಕೂ ಪರದೇಶದಲ್ಲೂ ಪಡೆಯಬಹುದು. ರೈಲಿನಲ್ಲಿ, ವಿಮಾನದಲ್ಲಿ ಕುಳಿತು ವಿರಾಮವಾಗಿ ದಿನಚರಿ ಬರೆಯಬಹುದು. ಕಂಡದ್ದನ್ನು ಕೇಳಿದ್ದನ್ನು ಬರೆದು ತಿಳಿಸಬಹುದು. ಅಮೇರಿಕೆಯಲ್ಲಿರುವ ಮಗನ ಮನೆಯಿಂದ ಅಥವಾ ಹೋಟೆಲೊಂದರಿಂದ ಭಾರತದಲ್ಲಿರುವ ಮಿತ್ರರಿಗೆ, ಪತ್ರಿಕೆಗಳಿಗೆ ಪತ್ರ ಬರೆಯಬಹುದು. ಲೇಖನ ರವಾನಿಸಬಹುದು. ಕ್ಯಾಮರಾ ಅಥವಾ ಕ್ಯಾಸೆಟ್‌ಗಳಲ್ಲಿ ತಮ್ಮ ಅನುಭವಗಳನ್ನು ಸಂಗ್ರಹಿಸಿಕೊಂಡು ಬಂದು ವಿರಾಮವಾಗಿ ಪ್ರವಾಸ ಕಥನ ಬರೆಯಬಹುದು. ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವ ಇಂಥ ಪ್ರವಾಸಗಳು ಪ್ರವಾಸ ಕಥನ ಸಾಹಿತ್ಯರೂಪವನ್ನು ಶ್ರೀಮಂತಗೊಳಿಸುತ್ತಿವೆ.

೧೪. ಭಾಷಾಂತರವನ್ನು ಒಂದು ಸಾಹಿತ್ಯ ``ಪ್ರಕಾರ ''ವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪರಿಗಣಿಸಿದೆ. ಈಗ ಕೇಂದ್ರ ಸಾಹಿತ್ಯ ಅಕಾಡೆಮಿಯೂ ಕೂಡ. ಅದು ನಾವು ತಿಳಿದುಕೊಂಡ ಅರ್ಥದಲ್ಲಿ ಸಾಹಿತ್ಯರೂಪವಲ್ಲ. ಮರಾಠಿ ಅಥವಾ ಹಿಂದಿ ಅಥವಾ ಇಂಗ್ಲಿಷ ಮತ್ತೆ ಯಾವುದೋ ಒಂದು ಭಾಷೆಯ ಕಾದಂಬರಿ ಅಥವಾ ಕಥೆ ಕನ್ನಡಕ್ಕೆ ಭಾಷಾಂತರಗೊಂಡಾಗ ಅದು ಕಾದಂಬರಿ ಅಥವಾ ಕಥೆಯಾಗಿಯೇ ಉಳಿಯುತ್ತದೆ. ಅದು `ರೂಪ' ಬದಲಿಸುವುದಿಲ್ಲ. ಭಾಷೆ ಮಾತ್ರ ಬದಲು. ಭಾಷಾಂತರವಾಗುವಾಗ ಕಥೆಯಾಗದೇ, ಕಾದಂಬರಿಯಾಗದೇ ನಾಟಕರೂಪ ತಾಳಿದರೆ, ಅಲ್ಲಿಗೆ `ರೂಪಾಂತರ'ವಾದಂತಾಯಿತು. `ಸಾಹಿತ್ಯ ರೂಪ' ಶಬ್ದವನ್ನು ಇಲ್ಲಿ ಜಾಗ್ರತೆಯಾಗಿ ಬಳಸಬೇಕು.

ಲೇಖಕರ ವಿಳಾಸಗಳು

೧. **ಕೀರ್ತಿನಾಥ ಕುರ್ತಕೋಟಿ**
ಶ್ರೀನಗರ ರೇಲ್ವೆ ಕ್ರಾಸ್
ಧಾರವಾಡ

೨. **ಡಾ. ಬುದ್ದಣ್ಣ ಹಿಂಗಮಿರೆ**
ನಿವೃತ್ತ ಕನ್ನಡ ಪ್ರಾಧ್ಯಾಪಕರು
ಕನ್ನಡ ಅಧ್ಯಯನಪೀಠ
ಕ. ವಿ. ವಿ. ಧಾರವಾಡ

೩. **ಡಾ. ಚೆನ್ನಕ್ಕ ಪಾವಟೆ**
ಪ್ರವಾಚಕರು
ಕನ್ನಡ ಅಧ್ಯಯನಪೀಠ
ಕ. ವಿ. ವಿ. ಧಾರವಾಡ

೪. **ಡಾ. ಜೆ. ಎಸ್. ಆಮೂರ**
ನವೋದಯ ನಗರ,
ಧಾರವಾಡ

೫. **ಡಾ. ಶ್ರೀಪಾದ ಶೆಟ್ಟಿ**
ಅಧ್ಯಾಪಕರು,
ಗೋಖಲೆ ಸೆಂಟಿನರಿ ಕಾಲೇಜ
ಅಂಕೋಲಾ

೬. **ಪ್ರೀತಿ ಶುಭಚಂದ್ರ**
ಎಲ್. ೬೮, ಅಧ್ಯಾಪಕರ ವಸತಿ ಗೃಹಗಳು,
ಮಾನಸಗಂಗೋತ್ರಿ
ಮೈಸೂರು -೬

೭. **ಡಾ. ಗುರುಪಾದ ಮರಿಗುದ್ದಿ**
ಅಧ್ಯಾಪಕರು
ಕಲಾ ಮತ್ತು ವಿಜ್ಞಾನ ಕಾಲೇಜು,
ಸಂಕೇಶ್ವರ

೮. **ಡಾ. ಮಲ್ಲಿಕಾ ಘಂಟಿ**
ಪ್ರವಾಚಕರು, ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ

೯. **ವೀರೇಂದ್ರ ಸಿಂಪಿ**
ಪ್ರಾಧ್ಯಾಪಕರು, ಇಂಗ್ಲೀಷ ವಿಭಾಗ
ಬಿ. ವ್ಹಿ. ಬಿ. ಕಾಲೇಜು,
ಬೀದರ

೧೦. **ಡಾ. ರಾಮಕೃಷ್ಣ ಮರಾಠೆ**
ಕನ್ನಡ ಅಧ್ಯಾಪಕರು
ಬಿ. ಕೆ. ಕಾಲೇಜು, ಕ್ಲಬ್ ರೋಡ
ಬೆಳಗಾವಿ - ೫೯೦೦೦೧

೧೧. **ಡಾ. ಶಾಲಿನಿ ರಘುನಾಥ**
ಪ್ರವಾಚಕರು
ಕನ್ನಡ ಅಧ್ಯಯನಪೀಠ
ಕ. ವಿ. ವಿ. ಧಾರವಾಡ

೧೨. **ಪ್ರೊ. ಶಿವಾನಂದ ಶೆಟ್ಟರ**
ಅಧ್ಯಾಪಕರು
ಗಾಂಧಿ ಅಧ್ಯಯನ ವಿಭಾಗ
ಕ. ವಿ. ವಿ. ಧಾರವಾಡ

೧೩. ಎನ್ಕೆ
'ಪರಿಮಳ'
ಅತ್ತಿಕೊಳ್ಳ, ಧಾರವಾಡ

೧೪. **ಡಾ. ಬಸವರಾಜ ಮಲಶೆಟ್ಟಿ**
ಪ್ರಾಧ್ಯಾಪಕರು,
ಕನ್ನಡ ವಿಭಾಗ
ವಿಜಯನಗರ ಕಾಲೇಜು,
ಹೊಸಪೇಟೆ

೧೫. **ಡಾ. ಜಿ. ಎಸ್. ಕಾಪಸೆ**
ದುರ್ಗಾಕಾಲನಿ, ಸಪ್ತಾಪೂರ
ಧಾರವಾಡ

೧೬. **ಡಾ. ಬಿ. ವ್ಹಿ. ಶಿರೂರ**
ಪ್ರಾಧ್ಯಾಪಕರು
ಕನ್ನಡ ಅಧ್ಯಯನಪೀಠ
ಕ. ವಿ. ವಿ. ಧಾರವಾಡ

೧೭. **ಪ್ರೊ. ಸದಾನಂದ ಕನವಳ್ಳಿ**
`ಸವಿ' ೧೫,
ಜಲದರ್ಶಿನಿ ಬಡಾವಣೆ
ಧಾರವಾಡ - ೩

೧೮. **ಸುರೇಂದ್ರ ದಾನಿ**
ಪತ್ರಕರ್ತರು
ವಿದ್ಯಾನಗರ, ಹುಬ್ಬಳ್ಳಿ

೧೯. **ಡಾ. ಜಿ. ಎಂ. ಹೆಗಡೆ**
ಕನ್ನಡ ಅಧ್ಯಾಪಕರು
ಕಿಟೆಲ್ ಕಲಾ ಮಹಾವಿದ್ಯಾಲಯ,
ಧಾರವಾಡ

೨೦. **ಡಾ. ಬಿ. ಆರ್. ಹಿರೇಮಠ**
ಪ್ರಾಧ್ಯಾಪಕರು
ಕನ್ನಡ ಅಧ್ಯಯನಪೀಠ
ಕ. ವಿ. ವಿ. ಧಾರವಾಡ

೨೧. **ಜಯವಂತ ಕಾಡದೇವರ**
ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ
ಬನಹಟ್ಟಿ

೨೨. **ಡಾ. ಬಸವರಾಜ ಸಬರದ**
ಪ್ರವಾಚಕರು
ಕನ್ನಡ ಅಧ್ಯಯನಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ

೨೩. **ಪ್ರೊ. ಎಚ್. ವಿ. ನಾಗೇಶ**
ನಿರ್ದೇಶಕರು
ಪ್ರಸಾರಾಂಗ, ಕ. ವಿ. ವಿ.
ಧಾರವಾಡ

ಮು೦ ೫೫೯/೫೦೦ ಪ್ರಿ